ಆಧುನಿಕ ಕನ್ನಡ ಕಾವ್ಯದಲ್ಲಿ ಮಾತೃತ್ವದ ಸ್ವರೂಪ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಪಿಎಚ್. ಡಿ. ಮಹಾಪ್ರಬಂಧ)

ಸಂಶೋಧಕರು
ಸೋ. ಮು. ಭಾಸ್ಕರಾಚಾರ್

ಮಾರ್ಗದರ್ಶಕರು
ಡಾ. ಬಿ. ಎಂ. ಪುಟ್ಟಯ್ಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬
೨೦೦೬

ಆಧುನಿಕ ಕನ್ನಡ ಕಾವ್ಯದಲ್ಲಿ ಮಾತೃತ್ವದ ಸ್ವರೂಪ

{ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಪಿಎಚ್. ಡಿ. ಮಹಾಪ್ರಬಂಧ}

ಸಂಶೋಧಕರು

ಸೋ. ಮು. ಭಾಸ್ಕರಾಚಾರ್

ಮಾರ್ಗದರ್ಶಕರು

ಡಾ. ಬಿ. ಎಂ. ಪುಟ್ಟಯ್ಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೬

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಸೋ. ಮು. ಭಾಸ್ಕರಾಚಾರ್ ಇವರು ನನ್ನ ಮಾರ್ಗದರ್ಶನದಲ್ಲಿ 'ಆಧುನಿಕ ಕನ್ನಡ ಕಾವ್ಯದಲ್ಲಿ ಮಾತೃತ್ವದ ಸ್ವರೂಪ' ಎಂಬ ವಿಷಯ ಕುರಿತು ಪಿಎಚ್.ಡಿ. ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವು ಇಡಿಯಾಗಿ ಅಥವ ಬಿಡಿಯಾಗಿ ಎಲ್ಲಿಯೂ ಈ ಮೊದಲು ಪ್ರಕಟವಾಗಿಲ್ಲವೆಂದು ದೃಢೀಕರಿಸುತ್ತೇನೆ.

೦೬.೦೩.೨೦೦೬	ಡಾ. ಬಿ. ಎಂ. ಪುಟ್ಟಯ್ಯ
ವಿದ್ಯಾರಣ್ಯ	ಮಾರ್ಗದರ್ಶಕರು

ಸಂಶೋಧಕರ ಪ್ರಮಾಣ ಪತ್ರ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ಡಾ. ಟಿ ಎಂ ಪುಟ್ಟಯ್ಯ ಇವರ ಮಾರ್ಗದರ್ಶನದಲ್ಲಿ 'ಆಧುನಿಕ ಕನ್ನಡ ಕಾವ್ಯದಲ್ಲಿ ಮಾತೃತ್ವದ ಸ್ವರೂಪ' ಎಂಬ ವಿಷಯ ಕುರಿತು ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಪ್ರಸ್ತುತ ಈ ಮಹಾಪ್ರಬಂಧವನ್ನು ಅಥವಾ ಈ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೆ ಪದವಿಗಾಗಲಿ, ಅಥವಾ ಇತರೆ ಯಾವುದೆ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

೦೬.೦೩.೨೦೦೬ — ಸೋ. ಮು. ಭಾಸ್ಕರಾಚಾರ್

ವಿದ್ಯಾರಣ್ಯ — ಸಂಶೋಧಕರು

ಆದವರ ನೆನೆದೇನ . . . .

ಹಳ್ಳಿಗಾಡಿನಿಂದ ಬಂದು ತುಮಕೂರು ಜಿಲ್ಲಾ ಕೇಂದ್ರದಲ್ಲಿ ಅಧ್ಯಯನ ಹಾಗೂ ಅಧ್ಯಾಪನದಲ್ಲಿ ತೊಡಗಿಸಿಕೊಂಡದ್ದು ನನ್ನ ಬದುಕಿನ ಮರುಹುಟ್ಟು. ದಾರಿದ್ರ್ಯದಲ್ಲಿ ಬಂದ ದುರಾದೃಷ್ಟವೆಂಬಂತೆ ಬಾಲ್ಯದಲ್ಲೆ ತಾಯಿತಂದೆಗಳಿಬ್ಬರನ್ನು ಕಳೆದುಕೊಂಡು, ಕಷ್ಟಕೋಟಲೆಗಳ ಶ್ರೀಮಂತಿಕೆಯನ್ನು ಬೆನ್ನಲ್ಲಿ ಹೊತ್ತು, ಪರಾವಲಂಬಿಯಾಗಿ ಕಲ್ಲುಮುಳ್ಳಿನ ಹಾದಿ ಸವೆಸಿದ ನನ್ನಂಥವನಿಗೆ ಕಾಲೇಜು ಶಿಕ್ಷಣ ಒಂದು ಕನಸಾಗಿ ಕಾಡಿತ್ತು. ಸಿದ್ಧಗಂಗಾ ಕ್ಷೇತ್ರದ ಹಿರಿಯ ಶ್ರೀಗಳ ಕೃಪಾಶ್ರಯದೊಂದಿಗೆ, ಅಂತಃಕರಣ ಉಳ್ಳ ಅನೇಕ ಮಹನೀಯರ ಆಶ್ರಯ ಪಡೆದು ಓದಿನ ಗೀಳು ಅಂಟಿಸಿಕೊಂಡು ಸಮಾಜದ ಶಿಶುವಾಗಿ ಕಾಲೇಜು ಶಿಕ್ಷಣ ಮುಗಿಸಿ, ಕನ್ನಡ ಸ್ನಾತಕೋತ್ತರ ಪದವೀಧರನಾಗಿ ತುಮಕೂರು ನಗರದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದೆನಿಸಿದ ವಿದ್ಯಾವಾಹಿನಿ ಪ.ಪೂ. ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕನಾಗಿ ಜೀವನ ರೂಪಿಸಿಕೊಂಡಿದ್ದು ನನ್ನ ಸೌಭಾಗ್ಯ. ವ್ಯಾಸಂಗಾವಧಿಯಿಂದಲೂ ರೂಢಿಸಿಕೊಂಡು ಬಂದ ಸಾಹಿತ್ಯ ರಚನೆಯ ಚಟ ಹಾಗೂ ಅನೇಕ ಸಂಘಟನೆಗಳ ಸಂಪರ್ಕದೊಂದಿಗೆ ಬದುಕನ್ನು ಗಂಭೀರವಾಗಿ ಅಪ್ಪಿಕೊಳ್ಳಲು ಸಾಧ್ಯವಾಯಿತು.

ಕಲ್ಪನೆಗೆ ಮೀರಿದ ಉದ್ಯೋಗ ಸಿಕ್ಕಿತಲ್ಲಾ ಎಂಬ ಗುಂಗಿನಲ್ಲಿ ಮೈಮರೆತು ಕಾಲ ನೂಕುತ್ತಿದ್ದ ನನಗೆ ಪಿಎಚ್.ಡಿ. ಅಧ್ಯಯನದ ಕಲ್ಪನೆಯೇ ಇರಲಿಲ್ಲ. ನನ್ನ ಸೃಜನಶೀಲ ಸಾಹಿತ್ಯ ರಚನೆಯನ್ನು ಗಮನಿಸಿದ ಮಿತ್ರರೊಬ್ಬರು ಸಂಶೋಧನೆ ನಿಮ್ಮಿಂದ ಸಾಧ್ಯವಾಗದ ಕಾರ್ಯವೇನಲ್ಲ. ನಿಮಗೆ ಆಸಕ್ತಿಯೂ ಇದೆ. ಆ ಶಕ್ತಿಯೂ ಇದೆ. ತಡವಾಗಿದ್ದರೂ ಚಿಂತೆ ಇಲ್ಲ, ಅಧ್ಯಯನಕ್ಕೆ ಮುಂದಾಗಬೇಕೆಂಬ ಒತ್ತಾಸೆಗೆ ತಳ್ಳಿದಾಗ ಅನಿರೀಕ್ಷಿತವಾಗಿ ಈ ಸಾಹಸಕ್ಕೆ ಕೈಹಾಕಿದೆ.

ನನ್ನ ಈ ಪ್ರೇರಿತ ಉತ್ಸಾಹಕ್ಕೆ ಅವಕಾಶ ಮಾಡಿಕೊಟ್ಟ ಹಂಪಿಯ ಕನ್ನಡ ವಿಶ್ವ ವಿದ್ಯಾಲಯದ ನಿಕಟಪೂರ್ವ ಕುಲಪತಿಗಳಾದ ಮಾನ್ಯ ಡಾ. ಹೆಚ್.ಜೆ. ಲಕ್ಕಪ್ಪಗೌಡರಿಗೂ ಹಾಗೂ ಈಗಿನ ಕುಲಪತಿಗಳಾದ ಮಾನ್ಯ ಡಾ. ಬಿ. ಎ. ವಿವೇಕ ರೈ ರವರಿಗೂ ನನ್ನ ಹೃದಯಪೂರ್ವಕ ಕೃತಜ್ಞತೆಗಳು.

ನನ್ನ ಜಿಲ್ಲೆಯ ಲೇಖಕ ದ್ವಯರೂ, ಸಹೃದಯರೂ ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಮಾನ್ಯ ಡಾ. ಕರೀಗೌಡ ಬೀಚನಹಳ್ಳಿ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಮಾನ್ಯ ಡಾ. ಟಿ. ಆರ್. ಚಂದ್ರಶೇಖರ್ ಅವರಿಗೂ,

ಕುಶಲಮತಿಗಳೂ, ಸ್ನೇಹಶೀಲರೂ ನನ್ನ ಪಿಎಚ್. ಡಿ. ಅಧ್ಯಯನಕ್ಕೆ ಮಾರ್ಗದರ್ಶನ ನೀಡಿ ಎಲ್ಲ ರೀತಿಯ ಸಲಹೆ ಸಹಕಾರಗಳೊಂದಿಗೆ ನೆರವಾದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಅಧ್ಯಾಪಕರಾದ ಡಾ. ಬಿ. ಎಂ. ಪುಟ್ಟಯ್ಯ ಅವರಿಗೂ,

ಪ್ರಬಂಧ ರಚನೆಯ ಸಂದರ್ಭದಲ್ಲಿ ನನ್ನೊಡನೆ ಪ್ರೀತಿ ಸ್ನೇಹದಿಂದ ಚರ್ಚಿಸಿ ಹಲವಾರು ಸಲಹೆ ಸೂಚನೆಗಳೊಂದಿಗೆ ಪ್ರೋತ್ಸಾಹಿಸಿ ಬೆನ್ನು ತಟ್ಟಿದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ವೆಂಕಟೇಶ ಇಂದ್ವಾಡಿ ಹಾಗೂ ವಿಭಾಗದ ಆತ್ಮೀಯ ಮನಸ್ಸುಗಳಾದ ಡಾ. ರಹಮತ್ ತರಿಕೆರೆ, ಡಾ. ಅಮರೇಶ ನುಗಡೋಣಿ, ಮಹಿಳಾ ಅಧ್ಯಯನ ವಿಭಾಗದ ಡಾ. ಶಿವಾನಂದ ವಿರಕ್ತಮಠ, ಸಹಾಯಕ

ಕುಲಸಚಿವರಾದ ಪ್ರೇಮ್‌ಕುಮಾರ್, ಕನ್ನಡ ಸಾಹಿತ್ಯ ವಿಭಾಗದ ಸಿಬ್ಬಂದಿ ವರ್ಗದವರಾದ ಶ್ರೀ ಕೆ. ಶಿವಪ್ಪ ಅವರಿಗೂ.

ನನ್ನ ವೃತ್ತಿ ಜೀವನಕ್ಕೆ, ಸಾಹಿತ್ಯ ಕೃಷಿಗೆ ಹೇಗೋ ಹಾಗೆ ನನ್ನ ಅಧ್ಯಯನಕ್ಕೆ ಪ್ರೋತ್ಸಾಹಿಸಿ ಸರ್ವ ರೀತಿಯ ನೆರವಿತ್ತು ಪೋಷಿಸುತ್ತಿರುವ ಶಿಕ್ಷಣ ಪ್ರೇಮಿ ಹಾಗೂ ನಮ್ಮ ವಿದ್ಯಾವಾಹಿನಿ ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ. ಬಿ. ಜಯಣ್ಣ, ಸಹೃದಯ ಸಂಪನ್ನ, ಸುಸಂಸ್ಕೃತ ಮನಸ್ಸಿನ ಪ್ರಾಚಾರ್ಯ ಎಸ್. ಕುಮಾರಸ್ವಾಮಿ ಹಾಗೂ ಕೌಟುಂಬಿಕ ಭಾವನೆಯಿಂದ ನನ್ನೆಲ್ಲ ಸಾಹಿತ್ಯ ಚಟುವಟಿಕೆಗಳಿಗೆ ಪ್ರೋತ್ಸಾಹದ ನುಡಿಗಳಿಂದ ಪ್ರೇರಕ ಶಕ್ತಿಯಾಗಿರುವ ಕಾಲೇಜಿನ ಹಿರಿಯ ಅಧ್ಯಾಪಕರಾದ ಸಿ. ಶಿವಣ್ಣ, ಶಿವಾನಂದ್. ಬಿ. ಎಚ್. ಪ್ರಾಣೇಶ್‌ರೆಡ್ಡಿ, ಎಸ್. ಸಿ. ನಾಗರಾಜು, ಟಿ. ಆರ್. ಮಹೇಶ್ವರಪ್ಪ, ಟಿ. ರಾಜಣ್ಣ, ಜಿ. ಎನ್. ಶಿವಕುಮಾರ್, ರೇವಣಸಿದ್ಧಪ್ಪ, ಸಿ. ಜಯಣ್ಣ, ಎನ್. ಗಂಗಾಧರ್, ಎಂ. ಎನ್. ಜ್ಞಾನೇಶ್ವರ್, ಬಿ. ಅನಂತಕುಮಾರ್ ಮತ್ತು ಇತರ ಎಲ್ಲ ಉಪನ್ಯಾಸಕ ಮಿತ್ರರಿಗೆ, ನೌಕರ ವರ್ಗದವರಿಗೂ.

ಸಾಹಿತ್ಯ ವಲಯದ ವಿರಳ ಗೆಳೆಯ, ಲೇಖಕ ಹಾಗೂ ತುಮಕೂರು ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ಅಧ್ಯಾಪಕರಾಗಿದ್ದು, ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಜಪ್ಪ ದಳವಾಯಿ ಅವರಿಗೂ.

ನನ್ನ ದಾರಿದೀಪಕರು, ಗುರುಗಳೂ ಆದ ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಭಾರತಿಯ ಪ್ರಾಧ್ಯಾಪಕರಾದ ಡಾ. ಶ್ರೀಕಂಠ ಕೂಡಿಗೆ, ಡಾ. ತೀ. ನಂ. ಶಂಕರನಾರಾಯಣ, ಹಿರಿಯ ಲೇಖಕರೂ ಗುರುಗಳೂ ಆದ ಪ್ರೊ. ಎಚ್. ಜಿ. ಸಣ್ಣಗುಡ್ಡಯ್ಯ, ವಿಚಾರ ಪ್ರಚೋದಕರು ಮರುಚಿಂತನೆ ಖ್ಯಾತಿಯ ಪ್ರೊ. ಕೆ. ಜಿ. ನಾಗರಾಜಪ್ಪ, ವಿಮರ್ಶಕರು, ವಿಚಾರವಾದಿಗಳು, ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರೂ ಆದ ಡಾ. ಎಲ್. ಹನುಮಂತಯ್ಯ ಅವರಿಗೂ.

ನನ್ನ ಏಳ್ಗೆಗೆ ಸದಾ ಕಾತರಿಸುವ, ಪೋಷಕರೂ ಸೋದರದ್ವಯರೂ ಆದ ಎಚ್. ಬಿ. ಶಿವಣ್ಣ, ಎಚ್. ಬಿ. ಪರಮೇಶ್ವರಯ್ಯ. ನನ್ನ ನೆರಳಿನಂತೆ ಒಡಗೂಡಿರುವ ಕೃಷಿ ಇಲಾಖೆಯ ಆಡಳಿತ ಸಹಾಯಕರು ಡಿ. ಜುಂಜಯ್ಯ, ಪ್ರಾಚಾರ್ಯ ಬಿ. ಹನುಮಂತ ರಾಯುಡು, ಮೈಸೂರಿನ ಪ್ರೊ. ಎಚ್. ಆರ್. ಸತ್ಯನಾರಾಯಣ, ಸಾರಿಗೆ ಇಲಾಖೆಯ ಚೆನ್ನಿಗರಾಯಪ್ಪ ಅವರಿಗೂ.

ನನ್ನ ಸಾಹಿತ್ಯ ಕೃಷಿಯನ್ನು ಸದಾ ಮೆಚ್ಚುತ್ತಾ ಬೆನ್ನು ತಟ್ಟಿ ಪ್ರೋತ್ಸಾಹಿಸುವ, ತುಮಕೂರು ಜಿಲ್ಲಾ ಕ.ಸಾ.ಪ. ಅಧ್ಯಕ್ಷರಾಗಿದ್ದಾಗ ನನ್ನನ್ನು ಜಿಲ್ಲಾ ಕ.ಸಾ.ಪ. ಕಾರ್ಯದರ್ಶಿಯಾಗಿ ಹಾಗೂ ಪ್ರಸ್ತುತ ಕಲ್ಪತರು ಸಾಂಸ್ಕೃತಿಕ ವೇದಿಕೆ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಲು ಅನುವು ಮಾಡಿ ಕೊಟ್ಟಿರುವ ಶಿಕ್ಷಣ ತಜ್ಞ ಪ್ರೊ. ಸಿ. ಎಚ್. ಮರಿದೇವರು, ತುಮಕೂರು ಜಿಲ್ಲಾ ಕ.ಸಾ.ಪ. ಅಧ್ಯಕ್ಷರೂ, ಮಿತ್ರರೂ ಆದ ನಿಟ್ಟೂರು ರಾಂಪುರ ಸದಾನಂದ್, ಪ್ರಸ್ತುತ ಜಿಲ್ಲಾ ಕ.ಸಾ.ಪ.ದಲ್ಲಿ ನನ್ನೊಂದಿಗೆ ಕಾರ್ಯದರ್ಶಿಯಾಗಿ ಸಹಕರಿಸುತ್ತಿರುವ ಪ್ರೊ. ಎಸ್. ಬಿ. ಶಶಿಧರಯ್ಯ ಹಾಗೂ ಖಜಾಂಚಿ ಪ್ರೊ. ಡಿ. ಚಂದ್ರಪ್ಪ ಅವರಿಗೂ.

ನನ್ನ ಅಧ್ಯಯನದ ಬರವಣಿಗೆಯನ್ನು ಚಿಕಿತ್ಸಕ ದೃಷ್ಟಿಯಿಂದ ಗಮನಿಸಿ, ಅವಶ್ಯವೆನಿಸಿದ ಪರಾಮರ್ಶನ ಕೃತಿಗಳನ್ನು ನೀಡಿ, ಊಟೋಪಚಾರದ ಆತಿಥ್ಯ ನೀಡಿ, ಕೈ ಹಿಡಿದು ಬರೆಸಿದ ಲೇಖಕ ಮಿತ್ರ ಪ್ರೊ. ಮ. ಲ. ನ. ಮೂರ್ತಿ. ಅಧ್ಯಯನದ ಬರವಣಿಗೆಯನ್ನು ವೀಕ್ಷಿಸಿ ತಪ್ಪುಗಳನ್ನು ತಿದ್ದಿದ ಡಾ. ರವಿಕುಮಾರ್, ಡಾ. ನಾಗಭೂಷಣ್. ಕೃತಿಗಳನ್ನು ನೀಡಿ ಪ್ರೋತ್ಸಾಹಿಸಿದ ಉಡುಪಿ, ಎಂ. ಜಿ. ಎಂ. ಕಾಲೇಜಿನ ಪ್ರಾಧ್ಯಾಪಕ ಡಾ. ಡಿ. ಆರ್. ಪಾಂಡುರಂಗ, ಕುವೆಂಪು ವಿಶ್ವವಿದ್ಯಾಲಯದ ಡಾ. ಕೆ. ಕೇಶವ ಶರ್ಮ, ಪ್ರೊ. ಎ. ಕೆ. ಹಂಪಣ್ಣ, ಪ್ರೊ. ಶಿವರಾಮಯ್ಯ, ಪ್ರಾಚಾರ್ಯ ಮಿತ್ರ ಎನ್. ನಾಗಪ್ಪ, ಪ್ರಜಾವಾಣಿಯ ಉಪಸಂಪಾದಕರಾದ ಪ್ರೇಂಕುಮಾರ್ ಹರಿಯಬ್ಬೆ, ಸಹೋದ್ಯೋಗಿ ಮಿತ್ರರಾದ ಮಹೇಶ್ಚಂದ್ರ, ಜೆ. ಎಲ್. ರಾಜಶೇಖರ್, ಮೋಹನ್ ಕುಮಾರ್, ಎನ್. ಚಂದ್ರಪ್ಪ, ಕವಿಮಿತ್ರ ಗಣಪತಿ ಹೆಗಡೆ ಅವರಿಗೂ.

ನನಗೆ ಅಗತ್ಯವೆನಿಸಿದ ಗ್ರಂಥಗಳನ್ನು ನೀಡಿ ನೆರವಾದ ತುಮಕೂರು ವಿಶ್ವವಿದ್ಯಾಲಯದ ಗ್ರಂಥಪಾಲಕ ಕವಿಮಿತ್ರ ಬಸವರಾಜು, ಸಿದ್ಧಗಂಗಾ ಪ್ರಥಮ ದರ್ಜೆ ಕಾಲೇಜಿನ ಗ್ರಂಥಾಲಯದ ಮುಖ್ಯಸ್ಥರಾದ ಶ್ರೀಮತಿ ಶಾಂತಕುಮಾರಿ ಹಾಗೂ ಸಹಾಯಕರಾದ ಸಿದ್ಧಗಂಗಪ್ಪ, ವಿದ್ಯಾವಾಹಿನಿ ಕಾಲೇಜಿನ ಗ್ರಂಥಾಲಯದ ಎಲ್ಲ ಮಿತ್ರರಿಗೂ.

ಸಂಶೋಧನಾ ಪ್ರಬಂಧ ಸಲ್ಲಿಕೆಯ ಸಮಯದಲ್ಲೇ ಹೊಸ ಮನೆ ಕಟ್ಟಡದಲ್ಲಿ ತೊಡಗಿದ್ದ ಕ್ಲಿಷ್ಟಕರ ಸಂದರ್ಭದಲ್ಲಿ ತಾವೇ ಮುಂದಾಗಿ ಆರ್ಥಿಕ ನೆರವಿತ್ತು, ಅಧ್ಯಯನಕ್ಕೆ ಕೃತಿಗಳನ್ನು ಕಳುಹಿಸಿಕೊಟ್ಟು ಸೌಜನ್ಯ ತೋರಿದ ಗುರುಗಳಾದ ಮುದ್ದಪುರದ ಎಸ್. ಕಲ್ಲಪ್ಪ ಹಾಗೂ ಕಾಲೇಜಿನ ಸಹಪಾಠಿಯಾಗಿದ್ದು ಈಗ ಅಧ್ಯಾಪಕರಾಗಿರುವ ಮಿತ್ರ ಧರಂಪುರದ ಕೃಷ್ಣಪ್ಪ, ಹೊಸಪೇಟೆಗೆ ಬಂದಾಗಲೆಲ್ಲ ಸೋದರ ಭಾವದಿಂದ ಉಪಚರಿಸಿ ಪ್ರೀತಿ ತೋರಿದ ಶ್ರೀಮತಿ ಬಿ. ಎಸ್. ಜಯ ಪುಟ್ಟಯ್ಯ ಅವರಿಗೂ.

ನನ್ನ ಪೋಷಕರಾಗಿ ಮುಕ್ಕಾಗದ ಪ್ರೀತಿಯಿಂದ ಬೆಳೆಸಿದ ಅಕ್ಕ ಶ್ರೀಮತಿ ಭದ್ರಕಾಳಮ್ಮ, ಭಾವ ಟಿ. ಜಿ. ವೆಂಕಟಾಚಾರ್, ಅಣ್ಣಂದಿರಾದ ಎಸ್. ಎಂ. ಪುಟ್ಟಲಿಂಗಾಚಾರ್, ರಂಗಕರ್ಮಿ ಎಸ್. ಎಂ. ನಾಗರಾಜಾಚಾರ್, ನನ್ನ ಬಾಳ ಸಂಗಾತಿಯಾಗಿ ನನ್ನ ಹೊಣೆಗಾರಿಕೆಯ ನೊಗಕ್ಕೆ ಹೆಗಲಿತ್ತು ನನ್ನ ಬರವಣಿಗೆಗೆ ಎಲ್ಲ ರೀತಿಯ ನೆರವಿತ್ತಿರುವ ಶ್ರೀಮತಿ ಎನ್. ಎ. ಜಯಮ್ಮ, ಮೌನ ಪ್ರೀತಿಯೊಂದಿಗೆ ನಮ್ಮ ಕೆಲಸ ಕಾರ್ಯಗಳಿಗೆ ಸ್ಪಂದಿಸುತ್ತಿರುವ, ನನ್ನ ಮಕ್ಕಳ ಪ್ರೀತಿಯ ಮಾಮ ಎನ್. ಎ. ಸುರೇಶ್ ಹಾಗೂ ಕುಟುಂಬಕ್ಕೆ, ಸಂಶೋಧನಾ ಪ್ರಬಂಧವನ್ನು ಅಂದವಾಗಿ ಡಿ.ಟಿ.ಪಿ. ಮಾಡಿಕೊಡುವಲ್ಲಿ ಮುತುವರ್ಜಿ ವಹಿಸಿದ ಕಿರಿಯ ಮಗ ಬಿ. ರವಿ ಕಿರಣ್, ತಾಂತ್ರಿಕ ಸಲಹೆ ನೀಡಿದ ಹಿರಿಯ ಮಗ ಬಿ. ತೇಜಸ್ವಿ ಕಿರಣ್, ಇವರೊಂದಿಗೆ ಸಹಾಯಕನಾಗಿ ಶ್ರಮಿಸಿದ, ಹಿರಿಯಣ್ಣನ ಮಗ ಎಸ್. ಪಿ. ಮುರುಳಿಧರಾಚಾರ್ ಅವರಿಗೂ.

ಇವರೆಲ್ಲರಿಗೂ ನನ್ನ ಸ್ಮರಣೀಯವಾದ ತುಂಬು ಹೃದಯದ ಕೃತಜ್ಞತೆಗಳು ಸಲ್ಲುತ್ತವೆ.

ಸೋ.ಮು.ಭಾಸ್ಕರಾಚಾರ್
ಸಂಶೋಧಕ
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ, ಹಂಪಿ.

ಪರಿವಿಡಿ

	ವಿಷಯ	ಪುಟ ಸಂಖ್ಯೆ
೧.	ಅಧ್ಯಾಯ – ೧ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ	೧ – ೭
೨.	ಅಧ್ಯಾಯ – ೨ ಮಾತೃತ್ವದ ಪರಿಕಲ್ಪನೆ – ಒಂದು ಚರ್ಚೆ (ಜೈವಿಕ, ಸಾಮಾಜಿಕ, ಕೌಟುಂಬಿಕ, ಧಾರ್ಮಿಕ, ಪೌರಾಣಿಕ, ಸ್ತ್ರೀವಾದಿ ಹಾಗೂ ಸಾಹಿತ್ಯಕ ನೆಲೆಗಳಲ್ಲಿ)	೮ – ೪೬
೩.	ಅಧ್ಯಾಯ – ೩ ರಾಷ್ಟ್ರ, ನಾಡು, ನುಡಿ ಮತ್ತು ಮಾತೃತ್ವ	೪೭ – ೧೧೨
೪.	ಅಧ್ಯಾಯ – ೪ ಪ್ರಕೃತಿಯಲ್ಲಿ ಮಾತೃತ್ವ	೧೧೩ – ೧೫೬
೫.	ಅಧ್ಯಾಯ – ೫ ಜೈವಿಕ ಹಿನ್ನೆಲೆಯಲ್ಲಿ ಮಾತೃತ್ವ	೧೫೭ – ೨೦೭
೬.	ಅಧ್ಯಾಯ – ೬ ಕವಯತ್ರಿಯರಲ್ಲಿ ಮಾತೃತ್ವ	೨೦೮ – ೨೩೭
೭.	ಅಧ್ಯಾಯ – ೭ ಸಂಕೀರ್ಣ ನೆಲೆಯಲ್ಲಿ ಮಾತೃತ್ವ	೨೩೮ – ೨೮೦
೮.	ಅಧ್ಯಾಯ – ೮ ಸಮಾರೋಪ:	೨೮೧ – ೨೯೭
೯.	ಪರಾಮರ್ಶನ ಸಾಹಿತ್ಯ	೨೯೮ – ೩೧೪

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ.

ಮಾನವರ ಸಮಾಜದಲ್ಲಿ ಮಗುವಿಗೆ ಅವ್ವ ಮೊದಲು. ಈ ಅವ್ವನನ್ನು ಅಮ್ಮ, ತಾಯಿ, ಜನನಿ, ಅಬ್ಬೆ ಮಾತೃ ಇತ್ಯಾದಿ ಪದಗಳಿಂದ ಕರೆಯುವುದಿದೆ. ಶಬ್ದದ ರೂಪಗಳು ಭಿನ್ನ ಭಿನ್ನವಾದರೂ ಮೂಲವಾಗಿ ಅದರೊಳಗೆ ಹುದುಗಿರುವ ಭಾವನಾತ್ಮಕತೆ ಒಂದೇ ಆಗಿರುತ್ತದೆ. ಧಾರಣಶಕ್ತಿ ಮತ್ತು ಸೃಷ್ಟಿಶಕ್ತಿ ಹೆಣ್ಣಿಗೆ ಮಾತ್ರ ವಿಶಿಷ್ಟವಾಗಿ ಲಭ್ಯವಾಗಿರುವ ಪ್ರಕೃತಿಯ ಕೊಡುಗೆ. ಈ ತಾಯ್ತನ ಮಾನವರ ಲೋಕಕ್ಕೆ ಮಾತ್ರ ಸೀಮಿತವಾಗದೆ, ಪಶು, ಪಕ್ಷಿ, ಪ್ರಾಣಿಗಳ ಲೋಕಕ್ಕೂ ಅನ್ವಯಿಸುವಂತದ್ದು. ತಾಯಿಯ ನೆಲೆಯಿಲ್ಲದೆ ಜಗತ್ತನ್ನು ನಾವು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ವ್ಯಕ್ತಿ ನೆಲೆಯಲ್ಲಿ ತಾಯಿಗೆ ಮಹತ್ವ ಪ್ರಾಪ್ತವಾದರೆ; ವಿಶಾಲವಾದ ನೆಲೆಯಲ್ಲಿ ಭೂಮಿಯನ್ನು ತಾಯಿಯಾಗಿ ಗ್ರಹಿಸಿದ್ದೇವೆ.

ಭೂಮಿ ಸಕಲ ಜೀವರಾಶಿಗಳ ಆಧಾರಶಕ್ತಿ. ಜೀವರಾಶಿಯ ಮುಂದುವರಿಕೆಗೆ ನೆರವಾಗುವ ಸಾಧನ. ತಾಯಿ ಮಗುವಿಗೆ ಹಾಲುಣಿಸಿ ಪೋಷಿಸುವಂತೆ ಭೂಮಿಯೂ ಸಕಲ ಜೀವರಾಶಿಗಳಿಗೆ ಆಹಾರವನ್ನಿತ್ತು ಪೋಷಿಸುವ ಶಕ್ತಿಯನ್ನು ಹೊಂದಿದೆ. ಈ ದಿಸೆಯಿಂದಾಗಿಯೆ ಭೂಮಿಯನ್ನು ತಾಯಂತೆ ಕಾಣಲಾಗಿದೆ.

ಹಡೆದ ತಾಯಿ ಮಗುವನ್ನು ಭೌತಿಕವಾಗಿ ಬೆಳೆಸುವುದರೊಂದಿಗೆ ಮಗುವಿನ ಮನೋವಿಕಾಸಕ್ಕೆ ಅನುಕೂಲವಾಗುವಂತೆ ಮಾತನ್ನು ಕಲಿಸುತ್ತಾಳೆ. ಆ ಮಾತು ತಾಯಿಯಿಂದ ಬಂದುದರಿಂದ 'ಮಾತೃ ಭಾಷೆ' *(Mother tongue)* ಎಂದೇ ಗುರುತಿಸುತ್ತೇವೆ. ಇದು ವಿಶ್ವ ನಿಯಮ. ಹೀಗಾಗಿ ಈಕೆಯ ವ್ಯಾಪ್ತಿ ಒಂದು ಪ್ರದೇಶಕ್ಕೆ ಸೀಮಿತಗೊಳ್ಳದೆ ವಿಶ್ವವ್ಯಾಪ್ತಿಯನ್ನು ಪಡೆದುಕೊಳ್ಳುತ್ತದೆ. ಮಾತೃತ್ವದ ಪ್ರಾಮುಖ್ಯತೆಯನ್ನು ಗಂಡು ಹೆಣ್ಣಿನ ಸಂಬಂಧ, ಸಾಂಸಾರಿಕ ಚೌಕಟ್ಟಿನಲ್ಲೇ ಹಿಂದಿನಿಂದಲೂ ಗುರುತಿಸಿಕೊಂಡು ಬಂದಿದ್ದೇವೆ. ಹೆಣ್ಣು ಗಂಡುಗಳ ಮಿಲನದ ಮೂಲಕವೇ ಮಾತೃಸ್ಥಾನ ಪ್ರಾಪ್ತವಾಗುತ್ತದೆಂದು ಪಾಲಿಸಿಕೊಂಡು ಬಂದಿದ್ದೇವೆ. ಆದರೆ ವೈಜ್ಞಾನಿಕ ಪ್ರಗತಿಯು ಮಾತೃತ್ವ ಪ್ರಾಪ್ತಿಗೆ ಪರ್ಯಾಯ ಮಾರ್ಗಗಳನ್ನು ಹುಡುಕಿ ಕೊಟ್ಟಿದೆ. ಪ್ರಣಾಳಿಕಾ ಶಿಶು ಮತ್ತು ಕೃತಕ ಗರ್ಭಧಾರಣೆಯಲ್ಲಿ ಹೆಣ್ಣು ಗಂಡಿನ ಮಿಲನದ ಪ್ರಶ್ನೆ ಮುಖ್ಯವಾಗದಿದ್ದರೂ ಅದರ ಗುರಿ ಹಾಗೂ ಆಶಯ ಪ್ರತಿ ಹೆಣ್ಣಿನಲ್ಲಿ ಸೂಕ್ತವಾಗಿ ಅಡಗಿರುವ ಮಾತೃತ್ವದ ಕಲ್ಪನೆಯೇ ಆಗಿದೆ.

ಮಗುವಿಗೆ ಜನ್ಮ ನೀಡುವುದು ಹೆಣ್ಣಿನ ಜೈವಿಕ ಕ್ರಿಯೆ. ಇದು ಗಂಡು ಹೆಣ್ಣಿನ ಸಾಮಾಜಿಕ ಸಂಬಂಧದ ಪ್ರತಿಫಲವೂ ಹೌದು. ಗಂಡು ಹೆಣ್ಣಿನ ಸಮ್ಮಿಲನವು ಮಗುವಿನ ಜನನಕ್ಕೆ ಕಾರಣವಾದರೂ ಮಗುವಿನ ಪೋಷಣೆಯಲ್ಲಿ ಹೆಣ್ಣಿನ ಜವಾಬ್ದಾರಿಯೇ ಪ್ರಧಾನವಾಗಿರುತ್ತದೆ. ಗರ್ಭದಲ್ಲಿ ರೂಪು ತಾಳುವ ಮಗು ಹೊರಜಗತ್ತಿಗೆ ಕಾಲಿಟ್ಟು ಇಲ್ಲಿನ ಪರಿಸರವನ್ನು ಪರಿಚಯಿಸಿಕೊಂಡು ಅದರೊಟ್ಟಿಗೆ ಬೆರೆತು ಬಾಳುವವರೆಗೂ ತಾಯಿಯ ಆರೈಕೆ ಇದ್ದೇ ಇರುತ್ತದೆ. ಆಕೆ ವಾತ್ಸಲ್ಯದ ಮೂರ್ತಿಯಾಗಿ, ಹಾರೈಕೆಯ

ಕನಸುಗಾತಿಯಾಗಿ, ತಾಯ್ತನದ ಪರಿಪೂರ್ಣತೆಗೆ ತನ್ನನ್ನು ಅರ್ಪಿಸಿಕೊಳ್ಳುತ್ತಾಳೆ. ಕರುಳುಬಳ್ಳಿಯ ಸಂಬಂಧದ ಕುರುಹಾಗಿ ಮಗುವಿನ ಆಗಮನದಿಂದ ಆಕೆ ಪುಳಕಗೊಳ್ಳುತ್ತಾಳೆ. ಆ ಮಗುವಿನ ಲಾಲನೆ ಪಾಲನೆಗಳಲ್ಲಿ ತೊಡಗಿ ತಾನೊಂದು ಹೊಸ ಅನುಭವದೊಂದಿಗೆ ಹೊಸ ಹೊಣೆಗಾರಿಕೆಯನ್ನು ಪಡೆಯುತ್ತಾಳೆ. ಇಲ್ಲಿ ಗಂಡನ ಜವಾಬ್ದಾರಿಗಿಂತ ಈಕೆಯ ತ್ಯಾಗವೇ ಪ್ರಾಮುಖ್ಯತೆ ಪಡೆದಿರುತ್ತದೆ.

ಸೃಷ್ಟಿಯ ರಹಸ್ಯದಲ್ಲಿ ತಾಯ್ತನವೂ ಒಂದು. ಎಲ್ಲ ಜೀವ ರಾಶಿಗಳಿಗೂ ಜನ್ಮ ನೀಡುವಲ್ಲಿ ತಾಯ್ತನದ ಹಿರಿಮೆ ಎದ್ದು ಕಾಣುತ್ತದೆ. ಹೆಣ್ತನದ ಸಾರ್ಥಕತೆಯೂ ತಾಯ್ತನದಲ್ಲೇ ಇದೆ. ಎಲ್ಲ ದೇಶ, ಕಾಲಗಳಲ್ಲೂ ತಾಯಿಯನ್ನು ಪ್ರೇಮದ ಜಗತ್ತಲ್ಲೇ ಕಂಡಿದ್ದೇವೆ. ಹೆಣ್ಣು ಗಂಡನ ಅಂತರಂಗದ ನೆರಳಾಗಿ ಆತನ ಕಷ್ಟ ಸುಖಗಳ ಸಹಭಾಗಿನಿಯಾಗಿ, ಸಂಸಾರ ರಥದ ಗಾಲಿಗಳಲ್ಲಿ ತಾನೂ ಒಂದಾಗಿ, ಅನ್ಯೋನ್ಯವಾಗಿ ಬೆರೆತು ಬಾಳು ಸಾಗಿಸುವ ಸಹಧರ್ಮಿಣಿಯಾಗಿದ್ದಾಳೆ. ಗಂಡಿನ ದುಡಿಮೆ ಬಾಹ್ಯವಾಗಿದ್ದರೆ, ಹೆಣ್ಣಿನ ದುಡಿಮೆ ಆಂತರಿಕವಾದದ್ದು. ಭಿನ್ನ ಜನರೊಂದಿಗೆ, ಭಿನ್ನ ಪರಿಸರದಲ್ಲಿ ವ್ಯವಹರಿಸುವ ಗಂಡ ಗಳಿಕೆಯ ಸಾಧನವಾದರೆ; ಪರಂಪರೆಯ ಪ್ರಜ್ಞೆಯೊಂದಿಗೆ, ಮನೆತನದ ಯಶಸ್ಸಿಗೆ, ಸಾಂಸ್ಕೃತಿಕ ವಾತಾವರಣದ ಗಂಧಗಾಳಿಯಲ್ಲಿ ಗಂಡನೊಡನೆ ದಾಂಪತ್ಯದ ಶೃತಿಮೇಳವಾಗಿ ಬೆರೆತು ಇಡೀ ಕುಟುಂಬದ ಏಳಿಗೆಗೆ ಕಾರಣಳಾಗುವವಳು ಹೆಂಡತಿ. ಆಕೆ ಭ್ರೂಣಾವಸ್ಥೆಯಿಂದ ರೂಪುತಾಳಿದ ತನ್ನ ಗರ್ಭವನ್ನು ಹೆಜ್ಜೆ ಹೆಜ್ಜೆಗೂ ಜತನವಾಗಿ ಕಾಪಾಡಿಕೊಂಡು, ಕನಸುಗಟ್ಟಿ, ಕಾಲ ಎಣಿಸಿ, ಒಂಬತ್ತು ತಿಂಗಳ ಕಾಲ ಬೆಟ್ಟದಂತಹ ಭಾರಹೊತ್ತು, ಹಡೆದು, ಹಾಲುಣಿಸಿ, ತುತ್ತಿಟ್ಟು, ಮುತ್ತಿಟ್ಟು, ಸಾಕಿ ಸಲಹುವಲ್ಲಿ ತನ್ನನ್ನೇ ತಾನು ಅರ್ಪಿಸಿಕೊಳ್ಳುತ್ತಾಳೆ. ಮಗುವು ತನ್ನ ಗರ್ಭದಲ್ಲಿರುವಾಗಲೇ ಸಂಸ್ಕಾರಗೊಳಿಸುವುದಕ್ಕೆ ಅಂತಃಶಕ್ತಿಯ ಧಾರೆ ಹರಿಸುವ ಕರುಣಾಮಯಿಯಾಗಿದ್ದಾಳೆ.

ಸೃಷ್ಟಿ ಚೈತನ್ಯದ ಮೂರ್ತರೂಪವೇ ತಾಯಿ. ವಾಸ್ತವ ಜೀವನದ ಅನುಭವಗಳು ಒಡಲೊಳಗೆ ರೂಪುತಾಳುವ ಭಾವಬಳ್ಳಿಗೆ ತಾಯಿಯೇ ಮೂಲ ನೆಲೆ ಹಾಗು ಸೆಲೆ. ಹಾಗಾಗಿ ತಾಯಿಯನ್ನು ಇಡೀ ಜಗತ್ತು ಗೌರವದಿಂದ ನೋಡಿದೆ. ಹೆಣ್ಣನ್ನು ಭೋಗದ ವಸ್ತುವಾಗಿ ನೋಡಿರುವ ಪುರುಷ ಪ್ರಧಾನ ಸಮಾಜವೂ ಕೂಡ ತಾಯಿಯನ್ನು ದೇವರಂತೆ ಗ್ರಹಿಸಿರುವುದನ್ನು ಕಾಣುತ್ತೇವೆ. ಇದನ್ನು ಕನ್ನಡಕವಿಗಳೂ ಕೂಡ ತಮ್ಮ ಕಾವ್ಯಗಳಲ್ಲಿ ಸಂದರ್ಭಾನುಸಾರ ಚಿತ್ರಿಸಿರುವುದನ್ನು ಕಾಣುತ್ತೇವೆ.

ಪ್ರಾಚೀನದಷ್ಟೇ ವೈವಿಧ್ಯತೆ ಹೊಂದಿರುವ ಕನ್ನಡ ಸಾಹಿತ್ಯದಲ್ಲಿ ಮಾನವ ಸಂಬಂಧಗಳಿಗೆ ಕೊರತೆ ಇಲ್ಲ. ಪ್ರೀತಿ, ಪ್ರೇಮ, ವಾತ್ಸಲ್ಯ, ತ್ಯಾಗ, ಸಹನೆ, ಅಭಿಮಾನಗಳು ಮಾನವತೆಯ ಲಕ್ಷಣಗಳು. ಇವುಗಳ ಸಮೃದ್ಧತೆಯಲ್ಲಿ ತಾಯಿಯ ಪಾತ್ರವೂ ಮೇಳೈಸಿಕೊಂಡಿದೆ. ಸಂಘರ್ಷಮಯವಾದ ಬದುಕಿನಲ್ಲಿ ತಾಯಿ ಸೋಲರಿಯದ ಶಕ್ತಿಯಾಗಿ ನಿಂತಿದ್ದಾಳೆ. ತನ್ನ ಕನಸಿನ ಕೂಸು ನಾಡಿನ ಸಂಪತ್ತಾಗಿ, ಲೋಕೋತ್ತರ ಕೀರ್ತಿಗೆ ಪಾತ್ರವಾಗಬೇಕೆಂಬ ಹಂಬಲದೊಂದಿಗೆ ತನ್ನನ್ನು ತಾನೇ ಅರ್ಪಿಸಿಕೊಂಡಿದ್ದಾಳೆ. ತನ್ನ ಮಗುವಿನ ಯಶಸ್ಸಿಗೆ ಶ್ರಮಿಸಿದ್ದಾಳೆ. ಪ್ರತಿರೋಧಗಳನ್ನು ಮೆಟ್ಟಿನಿಂತಿದ್ದಾಳೆ. ಸಂಕಷ್ಟಗಳನ್ನು ಸಹಿಸಿದ್ದಾಳೆ. ಸವಾಲುಗಳನ್ನು ಎದುರಿಸಿದ್ದಾಳೆ. ಇಂತಹ ಪ್ರಸಂಗಗಳು

ಬಡ ಕುಟುಂಬದಿಂದ ಹಿಡಿದು ಚಕ್ರವರ್ತಿಯ ಕುಟುಂಬದವರೆಗೂ ವ್ಯಾಪಿಸಿರುವುದು ಕಂಡು ಬರುತ್ತದೆ.

ಈಕೆ ತನ್ನ ಗಂಡ ಹಾಗೂ ಮಕ್ಕಳ ಯಶಸ್ಸಿಗೆ ಶ್ರಮಿಸುತ್ತಲೇ ತಾನು ಹಿಡಿದ ಧ್ಯೇಯಾದರ್ಶಗಳು ಮುಕ್ಕಾಗದಂತೆ ನೋಡಿಕೊಂಡು ಗುರಿ ಮುಟ್ಟುವವರೆಗೂ ಮುನ್ನುಗ್ಗಿ ನಡೆವ ಧೈರ್ಯವನ್ನು, ಹೋರಾಟದ ಕೆಚ್ಚನ್ನು ನಾವು ಅನೇಕ ಸಂದರ್ಭಗಳಲ್ಲಿ ಕಾಣಬಹುದು. ಸಾಮಾಜಿಕವಾದ ಇಂತಹ ಮಹತ್ವದ ಸಂಗತಿಯನ್ನು ಕಾವ್ಯದ ಮೂಲಕ ಅಧ್ಯಯನ ಮಾಡುವುದು ಮುಖ್ಯ ಉದ್ದೇಶವಾಗಿದೆ.

ಕನ್ನಡಕಾವ್ಯವು ಹೆಣ್ಣನ್ನು ತಾಯಿಯಾಗಿ, ಕೂಸಾಗಿ, ಮಗುವಾಗಿ, ಕಂದನಾಗಿ ಕಂಡಿದೆ ಮತ್ತು ಚಿತ್ರಿಸಿದೆ. 'ಆಡಿ ಬಾ ನನ ಕಂದ ಅಂಗಾಲ ತೊಳೆದೇನು . .' ಎಂಬ ಜನಪದ ತ್ರಿಪದಿಯಿಂದ ಮೊದಲುಗೊಂಡು, 'ನನ್ನವ್ವ ಫಲವತ್ತಾದ ಕಪ್ಪು ನೆಲ . .' ಎಂಬ ಕವಿತೆಯವರೆಗೆ ವಿಶಾಲವಾಗಿ ಹರಡಿದೆ. ಈ ವಿಶಾಲವಾದ ವ್ಯಾಪ್ತಿಯಲ್ಲಿ ಕನ್ನಡಕಾವ್ಯವು ತಾಯಿಯನ್ನು ಅಥವಾ ಮಾತೃವನ್ನು ಕಂಡಿರುವ ಬಗೆಯ ಅಧ್ಯಯನ ಮಾಡುವುದು ಇಲ್ಲಿಯ ಉದ್ದೇಶ.

ಅಧ್ಯಯನದ ಶೀರ್ಷಿಕೆ

ಎಲ್ಲ ದೇಶ, ಕಾಲ, ಧರ್ಮಗಳಲ್ಲೂ ತಾಯಿಯ ಪಾತ್ರ ಮಹತ್ವದ್ದಾಗಿದೆ. ಎಲ್ಲಾ ಸಮಾಜದಲ್ಲೂ ತಾಯಿಗೆ ಉನ್ನತ ಸ್ಥಾನವಿದೆ. ಅದನ್ನು ಕನ್ನಡಕವಿಗಳಲ್ಲೂ ಕೂಡ ಕಾಣಬಹುದು. ಪ್ರಾಚೀನ ಕವಿಗಳಿಂದ ಹಿಡಿದು ಅಧುನಿಕ ಕವಿಗಳ ಬರಹಗಳಲ್ಲಿ ತಾಯಿಯ ಚಿತ್ರವನ್ನು ಕಾಣಬಹುದು. ಕ್ವಚಿತ್ತಾಗಿ ಬರುವ ತಾಯಿಯ ಪ್ರಸಂಗವನ್ನು ಚಿತ್ರಿಸುವಲ್ಲಿ ಕವಿಗಳು ಹೇಗೆ ಭಾವಪೂರ್ಣವಾಗಿ ಗ್ರಹಿಸಿದ್ದಾರೆ ಎಂಬುದನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ತಾಯಿಯ ಸ್ವರೂಪವನ್ನು ಎಲ್ಲೆಲ್ಲಿ, ಹೇಗೆ ದರ್ಶಿಸಿದ್ದಾರೆ ಎಂಬುದರ ಪರಿಕಲ್ಪನೆ ಅಧ್ಯಯನದ ಉದ್ದೇಶವಾಗಿದೆ. ಹಾಗಾಗಿ ವಿಸ್ತಾರವಾಗಿರುವ ಕನ್ನಡಕಾವ್ಯ ಕ್ಷೇತ್ರವನ್ನು ಅಧ್ಯಯನದ ದೃಷ್ಟಿಯಿಂದ ನಿರ್ದಿಷ್ಟಪಡಿಸಿಕೊಂಡು 'ಆಧುನಿಕ ಕನ್ನಡ ಕಾವ್ಯದಲ್ಲಿ ಮಾತೃತ್ವದ ಸ್ವರೂಪ' ಎಂಬ ಶೀರ್ಷಿಕೆಯನ್ನು ಇಟ್ಟುಕೊಳ್ಳಲಾಗಿದೆ.

ಅಧ್ಯಯನದ ಮಹತ್ವ

ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತಿ ಸಾಧನವಾಗಿರುವ ಕೌಟುಂಬಿಕ ಬದುಕಿನಲ್ಲಿ ತಾಯಿಯ ಉಲ್ಲೇಖ ಉಂಟು. ಆದರೆ ಆಕೆಯ ಬಹುಮುಖ ವ್ಯಕ್ತಿತ್ವದ ಚಿತ್ರಣ ಚದುರಿ ನಿಂತಿದೆ. ಹೀಗೆ ಚದುರಿ ಹೋಗಿರುವ ಸಂಗತಿಯನ್ನು 'ಆಧುನಿಕ ಕನ್ನಡ ಕಾವ್ಯದಲ್ಲಿ ಮಾತೃತ್ವದ ಸ್ವರೂಪ' ಎಂಬ ಅಧ್ಯಯನದಲ್ಲಿ ಕ್ರೋಢೀಕರಿಸಿ ಕನ್ನಡಕವಿಗಳು ಕಂಡ ತಾಯಿಯ ಪಾತ್ರವನ್ನು ಶೋಧಿಸುವ ಕೆಲಸವನ್ನು ಇಲ್ಲಿ ಮಾಡಲಾಗುವುದು. ಧಾರ್ಮಿಕ, ಸಾಮಾಜಿಕ, ಕೌಟುಂಬಿಕ, ಜಾನಪದ ಹಿನ್ನೆಲೆಯಲ್ಲಿ ತಾಯಿ ಹೇಗೆ ತನ್ನ ಮಹತ್ವದ ಪಾತ್ರ ವಹಿಸಿದ್ದಾಳೆ ಎಂಬುದನ್ನು ಹಾಗೂ ಕನ್ನಡ ಕವಿಗಳು ಈ ಎಲ್ಲ ಆಯಾಮಗಳನ್ನು ಹೇಗೆ ಕಂಡಿದ್ದಾರೆ ಎಂಬುದನ್ನು ಅರಿಯುವ ಪ್ರಯತ್ನ ಇದಾಗಿದೆ. ಯಾವ ಯಾವ ನೆಲೆಗಳಲ್ಲಿ

ಮಾತೃತ್ವವನ್ನು ಗ್ರಹಿಸಿದ್ದಾರೆ ಎಂಬುದನ್ನು ತಿಳಿಯುವುದು ಈ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ಎಲ್ಲೆಗಳು

'ಆಧುನಿಕ ಕನ್ನಡ ಕಾವ್ಯದಲ್ಲಿ ಮಾತೃತ್ವದ ಸ್ವರೂಪ' ಎಂಬ ಅಧ್ಯಯನವನ್ನು ಪ್ರಧಾನವಾಗಿ ಆಧುನಿಕ ಕನ್ನಡ ಕಾವ್ಯಕ್ಕೆ ಕೇಂದ್ರೀಕರಿಸಲಾಗಿದೆ. ಚರ್ಚೆಯ ಸಂದರ್ಭಗಳಲ್ಲಿ ಆನುಷಂಗಿಕವಾಗಿ ಆಧುನಿಕಪೂರ್ವ ಮತ್ತು ಜನಪದ ಸಾಹಿತ್ಯವನ್ನು ಚರ್ಚಿಸಲಾಗಿದೆ. ಕಾಲಘಟ್ಟಗಳಲ್ಲಿ ಆಧುನಿಕ ಕನ್ನಡ ಕಾವ್ಯಕ್ಷೇತ್ರದಲ್ಲಿ ಕಂಡ ಬದಲಾವಣೆಗಳ ಸಂದರ್ಭದಲ್ಲಿ ತಾಯಿಯ ಚಿತ್ರ ಕವಿಗಳ ಬರವಣಿಗೆಗೆ ಹೇಗೆ ದಕ್ಕಿದೆ ಹಾಗೂ ರೂಪುತಾಳಿದೆ ಎಂಬುದನ್ನು ಪ್ರಮುಖವಾಗಿ ಗಮನಿಸಲಾಗಿದೆ. ಅವರ ಭಾಷೆ, ಶೈಲಿ, ದೃಷ್ಟಿ, ಧೋರಣೆಗಳನ್ನು ವಿಶೇಷವಾಗಿ ಚರ್ಚಿಸಲಾಗಿದೆ.

ಅಧ್ಯಯನದ ಸ್ವರೂಪ

ಅಧ್ಯಯನದ ಅನುಕೂಲಕ್ಕಾಗಿ 'ಆಧುನಿಕ ಕನ್ನಡ ಕಾವ್ಯದಲ್ಲಿ ಮಾತೃತ್ವದ ಸ್ವರೂಪ'ವನ್ನು ಎಂಟು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಪ್ರತಿಯೊಂದು ಅಧ್ಯಾಯದಲ್ಲೂ ಕವಿಗಳು ಕಂಡ ತಾಯಿಯ ಪಾತ್ರವನ್ನು ಸ್ಥೂಲವಾಗಿ ನೋಡುವ ಆಶಯವೇ ಇಲ್ಲಿನ ಪ್ರಯತ್ನವಾಗಿದೆ. ಅಂತಿಮವಾಗಿ ಸಮಾರೋಪ ವಿಭಾಗ ಸೇರ್ಪಡೆಯಾಗಿದೆ. ಹಾಗಾಗಿ ಆಯಾ ಅಧ್ಯಾಯಗಳಲ್ಲಿ ಪ್ರಸ್ತುತ ಉಪಲಬ್ಧವಿರುವ ಕೃತಿಗಳಿಂದ ಅಧ್ಯಯನ ಮಾಡುವ ಉದ್ದೇಶವಾಗಿದೆ.

೧. ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ.
೨. 'ಮಾತೃತ್ವ'ದ ಪರಿಕಲ್ಪನೆ – ಒಂದು ಚರ್ಚೆ (ಜೈವಿಕ, ಸಾಮಾಜಿಕ, ಕೌಟುಂಬಿಕ, ಧಾರ್ಮಿಕ, ಪೌರಾಣಿಕ, ಸ್ತ್ರೀವಾದಿ, ಸಾಹಿತ್ಯಕ ನೆಲೆ).
೩. ರಾಷ್ಟ್ರ, ನಾಡು, ನುಡಿ ಮತ್ತು ಮಾತೃತ್ವ
೪. ಪ್ರಕೃತಿಯಲ್ಲಿ ಮಾತೃತ್ವ
೫. ಜೈವಿಕ ಹಿನ್ನೆಲೆಯಲ್ಲಿ ಮಾತೃತ್ವ .
೬. ಕವಯತ್ರಿಯರು ಕಂಡ ಮಾತೃತ್ವ
೭. ಸಂಕೀರ್ಣ ನೆಲೆಯಲ್ಲಿ ಮಾತೃತ್ವ
೮. ಸಮಾರೋಪ.

ಅಧ್ಯಯನದ ವಿಧಿ ವಿಧಾನಗಳು

ಒಂದು ಸಮಾಜ ಅಥವಾ ಭಾಷೆಯ ಸಾಹಿತ್ಯ ಆ ಸಮಾಜದ ಕೈಗನ್ನಡಿ ಇದ್ದಂತೆ. ಹಾಗಾಗಿ ಸೃಜನಶೀಲ ಸಾಹಿತ್ಯ ಕೃತಿಗಳನ್ನು ಅಭ್ಯಾಸ ಮಾಡಿ ಆಯಾ ಕವಿಗಳು ಹೇಗೆ ತಾಯಿಯನ್ನು ಕಂಡಿದ್ದಾರೆ ಎಂಬುದನ್ನು ಕುರಿತು ಚರ್ಚಿಸಲಾಗುವುದು. ಶಿಷ್ಟ ಮತ್ತು ಜನಪದ ಸಾಹಿತ್ಯದಲ್ಲಿ ಈವರೆಗೂ ನಡೆದಿರುವ ಚರ್ಚೆ, ವಿಶ್ಲೇಷಣೆ,

ವಿಮರ್ಶೆಗಳನ್ನು ಒಳಗೊಂಡಂತೆ ಸಮಗ್ರ ವಿಷಯದ ವಿಶ್ಲೇಷಣೆಯನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಪ್ರಬಂಧದ ಉದ್ದೇಶ ಮತ್ತು ವ್ಯಾಪ್ತಿ

ನಾನಾ ಪ್ರೇರಣೆ ಹಾಗೂ ಪ್ರಭಾವಗಳ ಹಿನ್ನೆಲೆಯಲ್ಲಿ ರೂಪು ತಾಳಿರುವ ಕನ್ನಡ ಸಾಹಿತ್ಯ ವೈವಿಧ್ಯವೂ, ಸಮೃದ್ಧವೂ, ವಿಚಾರಾರ್ಹವೂ ಆದದ್ದು. ಇದು ಶಾಸನಗಳಿಂದ ಹಿಡಿದು ಆಧುನಿಕ ಸಾಹಿತ್ಯದವರೆಗೆ ವಿಸ್ತಾರವಾಗಿ ಮೈದಾಳಿದೆ. ಅನೇಕ ಪಂಥಗಳು, ಧರ್ಮಗಳು ಕನ್ನಡ ಸಾಹಿತ್ಯವನ್ನು ಅನೇಕ ಪ್ರಕಾರವಾಗಿ ಶ್ರೀಮಂತಗೊಳಿಸಿವೆ.

ರಾಜ ಮಹಾರಾಜರ ಆಶ್ರಯದಿಂದ, ಮತಮಾನ್ಯಗಳ ಪೋಷಣೆಯಿಂದ ಬೆಳೆದು ಬಂದ ಶಿಷ್ಟ ಸಾಹಿತ್ಯ, ಶ್ರೀಸಾಮಾನ್ಯನ ಬದುಕಿನೊಂದಿಗೆ ಮೂಡಿ ಬಂದ ಜನಪದ ಸಾಹಿತ್ಯ ಪರಸ್ಪರ ಮೇಳೈಸಿಕೊಂಡಿವೆ. ಶಿಷ್ಟ ಸಾಹಿತ್ಯದ ತಾಯಿಬೇರಾಗಿ ನಿಂತಿರುವ ಜನಪದ ಸಾಹಿತ್ಯ ಬದುಕಿನ ಹಲವು ಹನ್ನೊಂದು ಸಂಗತಿಗಳಿಗೆ ಸಮರ್ಥನೀಯವಾಗಿ ಸ್ಪಂದಿಸಿದೆ. ಇಂತಹ ಸಾಹಿತ್ಯ ಪರಂಪರೆಯೊಂದಿಗೆ ಸಂಸ್ಕೃತ ಹಾಗೂ ಇತರ ಭಾರತೀಯ ಭಾಷಾ ಸಾಹಿತ್ಯದ ಕಸುವಿನೊಂದಿಗೆ; ಆಂಗ್ಲಭಾಷೆಯ ಪ್ರಭಾವದೊಂದಿಗೆ ಶಿಷ್ಟ ಸಾಹಿತ್ಯ ಸಮೃದ್ಧವಾಗಿ ರೂಪುತಾಳಿದೆ. ಕಾಲಘಟ್ಟದಲ್ಲಿ ತನ್ನ ವೈವಿಧ್ಯತೆ ತೋರಿದೆ. ಪಂಪನಿಂದ ಹಿಡಿದು ಪ್ರಸ್ತುತ ಕಾಲದವರೆಗೆ ಹರಿದು ಬಂದಿರುವ ಈ ಕನ್ನಡ ಸಾಹಿತ್ಯದಲ್ಲಿ ಶಾಸ್ತ್ರ ಪುರಾಣಗಳ ವೈವಿಧ್ಯವಿದೆ, ಮತಧರ್ಮಗಳ ಹಿರಿಮೆ ಇದೆ. ಇದರೊಂದಿಗೆ ಪ್ರತಿಭಟನೆಯ ಧ್ವನಿಯಿದೆ, ಮಾನವೀಯ ಸಂಬಂಧಗಳ ಸಂಘರ್ಷವಿದೆ, ಜೀವನ ದರ್ಶನವಿದೆ. ಇಂತಹ ದರ್ಶನಗಳಲ್ಲಿ ಮಾತೃತ್ವದ ಕಲ್ಪನೆಯು ಮಿಳಿತಗೊಂಡಿರುವುದನ್ನು ಕಾಣಬಹುದು. ಎಲ್ಲ ಕಾಲದಲ್ಲೂ ಈ ಪರಿಭಾವನೆ ಇದೆ. ಭಾಷೆ, ನದಿ, ನದ, ನಾಡನ್ನು ಕವಿಗಳು ತಾಯಿಯಾಗಿ ಕಂಡಿದ್ದಾರೆ. ಜನ್ಮವಿತ್ತ ತಾಯಿಯನ್ನು ಗೌರವದಿಂದ ಕಾಣುವಂತೆ ಆಶ್ರಯವಿತ್ತ ದೇಶವನ್ನು ಕೂಡ ತಾಯಿಯಂತೆ ದರ್ಶಿಸಿದ್ದಾರೆ. ಹೀಗೆ ಕಂಡಿರುವ ಮಾತೃತ್ವದ ಕಲ್ಪನೆಯಲ್ಲಿ ವೈವಿಧ್ಯತೆ ಇದೆ, ಕವಿಗಳ ಸ್ವೋಪಜ್ಞತೆ ಇದೆ.

ಎಲ್ಲ ಕವಿಗಳು ತಾಯಿಯನ್ನು ಕಾಣುವುದರಲ್ಲಿ, ಆಕೆಯನ್ನು ಕುರಿತು ವರ್ಣಿಸುವುದರಲ್ಲಿ ಉತ್ಸಾಹವಿದೆ, ಗೌರವವಿದೆ, ಅಭಿಮಾನವಿದೆ. ಜೊತೆಗೆ ಆಕೆಯ ಋಣದ ಬಗ್ಗೆ ಕೃತಜ್ಞತೆಯಿದೆ. ಇಂತಹ ತಾಯಿತನದ ದರ್ಶನ ಕಾಲಘಟ್ಟಗಳಲ್ಲಿ ಕವಿಗಳ ಚಿಂತನೆಗೆ ಸಿಕ್ಕಿ ವಿಸ್ತಾರವಾದ ಅರ್ಥಗಳಲ್ಲಿ ಮೂಡಿಬಂದಿದೆ ಎಂಬುದರ ಅಧ್ಯಯನವೇ ಈ ಬರವಣಿಗೆಯ ಆಶಯ. ಕವಿಗಳು ತಮ್ಮ ಪ್ರತಿಭಾನ್ವಿತ ಬರವಣಿಗೆಯಲ್ಲಿ ತಾಯಿಯನ್ನು ಎಷ್ಟೊಂದು ಮುಖಗಳಲ್ಲಿ ದರ್ಶಿಸಲು ಯತ್ನಿಸಿದ್ದಾರೆ ಎಂಬುದರ ಅಧ್ಯಯನವೇ ಈ ಪ್ರಬಂಧದ ಮುಖ್ಯ ಉದ್ದೇಶ.

ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯಾ ನಂತರದ ಎರಡು ಘಟ್ಟಗಳಲ್ಲೂ ಆಧುನಿಕ ಕನ್ನಡ ಕಾವ್ಯ ಕ್ಷೇತ್ರ ಅನೇಕ ಮಜಲುಗಳನ್ನು ಕಂಡಿದೆ. ಇಲ್ಲಿ ಅನೇಕ ಸಾಹಿತ್ಯಕ ಪಂಥಗಳು ಹೆಜ್ಜೆ ಗುರುತುಗಳನ್ನು ಮೂಡಿಸಿವೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ

– ಬಂಡಾಯದಂತ ಪಂಥಗಳು ಆಯಾಯ ಕಾಲಘಟ್ಟಗಳಲ್ಲಿ ವಿಜೃಂಭಿಸಿರುವುದನ್ನು ಕಾಣುತ್ತೇವೆ. ಕೆಲವು ಕವಿಗಳು ತಮ್ಮನ್ನು ಒಂದೊಂದು ಪಂಥಕ್ಕೆ ಮಿತಿಗೊಳಿಸಿಕೊಂಡಂತೆ ಬರೆದರೆ; ಮತ್ತೆ ಕೆಲವು ಕವಿಗಳು ಎಲ್ಲ ಪಂಥಗಳಿಗೂ ಅನ್ವಯಗೊಂಡು ಬರೆದದ್ದನ್ನು ಕಾಣುತ್ತೇವೆ. ಕವಿಗಳು ಯಾವ ಪಂಥಕ್ಕೆ ಸೇರಿದ್ದರೂ ಅವರೆಲ್ಲರಲ್ಲೂ ಮಾನವ ಪ್ರೇಮ, ಸಾಮಾಜಿಕ ತುಡಿತ ಹಾಗೂ ದೇಶಾಭಿಮಾನದ ಭಾವನೆಗಳಿಗೆ ಮಾತ್ರ ಕೊರತೆಯಿಲ್ಲ. ಸೂರ್ಯೋದಯ ಚಂದ್ರೋದಯ ಎಲ್ಲ ಕವಿಗಳಿಗೆ ವಸ್ತುವಾದರೂ, ಎಲ್ಲರ ಸೂರ್ಯೋದಯ ಚಂದ್ರೋದಯ ಭಿನ್ನ ಹಾಗೂ ವೈವಿಧ್ಯವಾಗಿರುತ್ತದೆ. ಹಾಗೆಯೇ ಎಲ್ಲ ಕವಿಗಳಿಗೂ ದೇಶ, ಭಾಷೆ, ನದಿ, ತಾಯಿಯ ಬಗ್ಗೆ ಅಭಿಮಾನ ಹಾಗೂ ಗೌರವವಿದ್ದರೂ ಅವರೆಲ್ಲರ ಬರಹದಲ್ಲಿ ಮೂಡಿಬರುವ ತಾಯಿ ಭಿನ್ನ ಹಾಗೂ ವೈವಿಧ್ಯದಿಂದ ಕೂಡಿರುತ್ತದೆ. ಅದನ್ನೆ ಕವಿಗಳ ವೈಯಕ್ತಿಕ ಪ್ರತಿಭೆ, ಕವಿಗಳ ಸ್ವೋಪಜ್ಞತೆ ಎನ್ನಬಹುದು. ಅಂತಹ ವೈವಿಧ್ಯತೆಯ ಚಿಂತನೆಗಳಿಗೆ ಎಲ್ಲಾ ಕಾಲಘಟ್ಟಗಳಲ್ಲೂ, ಎಲ್ಲಾ ಪಂಥದವರು ತಾಯಿತನದ ಕಲ್ಪನೆಗೆ ಸ್ಪಂದಿಸಿದ್ದಾರೆ. ಅಂತಹ ಸ್ಪಂದನದಿಂದ ಅರಳಿರುವ ತಾಯಿತನದ ಸ್ವರೂಪದ ವೈವಿಧ್ಯ ದರ್ಶನವೇ ಈ ಬರವಣಿಗೆಯ ಪ್ರಾಪ್ತಿ.

ಅಧ್ಯಯನದ ಇತಿ – ಮಿತಿ

ಕನ್ನಡದಲ್ಲಿ ಈವರೆವಿಗೂ ಬಂದಿರುವ ಎಲ್ಲ ಕವಿಗಳ ತಾಯಿತನದ ಸ್ವರೂಪವನ್ನು ಒಂದೇ ಪ್ರಬಂಧದಲ್ಲಿ ದರ್ಶಿಸುವುದು ಅಸಾಧ್ಯದ ಮಾತು. ಪ್ರಾತಿನಿಧಿಕವೆನಿಸುವ ಕೆಲವು ಕವಿಗಳ ಕೃತಿಗಳಲ್ಲಿ ಕಾಣುವ ಕವಿತೆಗಳಲ್ಲಿ ತಾಯಿತನದ ಹಿರಿಮೆಯನ್ನು, ಅವರ ಭಾಷಾ ವೈಶಿಷ್ಟ್ಯತೆಯನ್ನು, ತಾಯಿಯ ವಿವಿಧ ಮುಖಗಳನ್ನು ದರ್ಶಿಸಲು ಪ್ರಯತ್ನಿಸಲಾಗಿದೆ. ಪ್ರತಿವರ್ಷವೂ ನೂರಾರು ಕವಿಗಳ ಅನೇಕ ಕೃತಿಗಳು ಕನ್ನಡ ಕಾವ್ಯಕ್ಷೇತ್ರಕ್ಕೆ ಸೇರ್ಪಡೆಯಾಗುತ್ತಿರುವಾಗ ಆಧುನಿಕ ಕನ್ನಡ ಕಾವ್ಯವನ್ನು ಸಮಗ್ರವಾಗಿ ದರ್ಶಿಸಲು ಸಾಧ್ಯವಿಲ್ಲ. ಅಲ್ಲದೆ ಎಲ್ಲರ ಕೃತಿಗಳೂ ಒಂದೆಡೆ ದೊರೆಯುವುದಾಗಲೀ, ಎಲ್ಲವನ್ನು ಅಭ್ಯಾಸ ಮಾಡುವುದಾಗಲೀ, ತುಲನಾತ್ಮಕವಾಗಿ ವಿಶ್ಲೇಷಣೆ ಮಾಡುವುದಾಗಲೀ ಊಹಿಸಲಸಾಧ್ಯವಾದದ್ದು. ಆದರೂ ಅದರ ಒಟ್ಟಂದದ ಸ್ವರೂಪವನ್ನು, ಆಯಾ ಕಾಲದಲ್ಲಿ ರೂಪುಗೊಂಡದ್ದನ್ನು, ಓದುಗರ ಹಾಗೂ ವಿಮರ್ಶಕರ ಗಮನ ಸೆಳೆದಿರುವ ಕೆಲವು ಕವಿಗಳ ಕೃತಿಗಳನ್ನು ಆಯ್ದು ಅವುಗಳ ಹೊಳಹುಗಳನ್ನು ನೋಡುವುದು ಸಾಧುವೆಂದು ಭಾವಿಸಿ ಇದರ ವ್ಯಾಪ್ತಿಯನ್ನು ಸೀಮಿತಗೊಳಿಸಿದೆ.

ಕಾವ್ಯ ಕೃಷಿಯನ್ನು ಗಂಭೀರವಾಗಿ ಪರಿಗಣಿಸಿ, ಕಾವ್ಯಾಸಕ್ತರ ಮತ್ತು ಅಧ್ಯನಕಾರರ ಗಮನ ಸೆಳೆದಿರುವ ಪ್ರಾತಿನಿಧಿಕ ಕವಿಗಳನ್ನು ಇಲ್ಲಿನ ಅಧ್ಯಯನಕ್ಕೆ ಪರಿಗಣಿಸಲಾಗಿದೆ. ಅದರಲ್ಲೂ ಪ್ರಮುಖವಾಗಿ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಎದುರಾದ ಸವಾಲು, ಸಮಸ್ಯೆಗಳಿಗೆ ಪಕ್ಕಾಗಿ ಬರೆದವರನ್ನು, ಅನೇಕ ಪಂಥಗಳು ಹಾಗೂ ತತ್ವ ಸಿದ್ಧಾಂತಗಳಿಗೆ ಸ್ಪಂದಿಸಿದವರನ್ನು, ಪ್ರಾಂತೀಯ ಹಿನ್ನೆಲೆಯಲ್ಲಿ ವೈವಿಧ್ಯತೆ ತೋರಿರುವವರನ್ನು, ಹಿರಿಯ ತಲೆಮಾರಿನ ಪ್ರಮುಖರನ್ನು, ದಲಿತ – ಬಂಡಾಯದ ಪ್ರಮುಖರನ್ನು, ಸಮಕಾಲೀನ ಸಂಗತಿಗಳಿಗೆ ತೆರೆದುಕೊಂಡಿರುವ ಅಲ್ಪಸಂಖ್ಯಾತರು ಹಾಗೂ ಕವಯತ್ರಿಯರನ್ನು ಅಧ್ಯಯನದ ವ್ಯಾಪ್ತಿಗೆ ತರಲಾಗಿದೆ. ಒಟ್ಟಾರೆ ಪ್ರಾಂತ್ಯ

ಪಂಥ, ಧರ್ಮ, ಜಾತಿ, ವರ್ಗ, ಲಿಂಗದ ಹಿನ್ನೆಲೆಯಲ್ಲಿ; ವೈಚಾರಿಕತೆಗೆ ಪಕ್ಕಾದವರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಮುಖ್ಯವಾಗಿ ಬಿ.ಎಂ.ಶ್ರೀ, ಬೇಂದ್ರೆ, ಕುವೆಂಪು, ಮಧುರ ಚೆನ್ನ, ವಿ.ಸೀ, ಪುತಿನ, ನರಸಿಂಹ ಸ್ವಾಮಿ, ದಿನಕರ ದೇಸಾಯಿ, ಗುಂಡ್ಮಿ ಚಂದ್ರಶೇಖರ ಐತಾಳ, ಚಂದ್ರಶೇಖರ ಕಂಬಾರ, ಕೆ.ಎಸ್. ನಿಸಾರ್ ಅಹಮದ್, ಚನ್ನವೀರ ಕಣವಿ, ಜಿ.ಎಸ್. ಶಿವರುದ್ರಪ್ಪ, ಎಂ. ಗೋಪಾಲಕೃಷ್ಣ ಅಡಿಗ, ಪಿ.ಲಂಕೇಶ್, ಎಚ್.ಎಸ್. ಶಿವಪ್ರಕಾಶ್, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಕೆ.ಬಿ. ಸಿದ್ದಯ್ಯ, ಎಸ್.ಜಿ. ಸಿದ್ಧರಾಮಯ್ಯ, ಸಾ.ಶಿ. ಮರುಳಯ್ಯ, ವಿ. ಚಿಕ್ಕವೀರಯ್ಯ, ಡಾ. ಸಿದ್ಧಲಿಂಗಯ್ಯ, ಎಲ್. ಹನುಮಂತಯ್ಯ, ಹೊಸ್ಕೆರೆ ಎಸ್. ಶಿವಸ್ವಾಮಿ, ಗಿರಡ್ಡಿ ಗೋವಿಂದರಾಜ, ಎ. ಕೆ. ಹಂಪಣ್ಣ, ಎಚ್. ಜಿ. ಸಣ್ಣಗುಡ್ಡಯ್ಯ, ಎನ್.ನಾಗಪ್ಪ, ಅರವಿಂದ ಮಾಲಗತ್ತಿ, ಸತ್ಯಾನಂದ ಪಾತ್ರೋಟ, ಹೊಸೂರು ಮುನಿಶಾಮಪ್ಪ, ಮಳ್ಳೂರ ನಾಗರಾಜ್, ಸ. ಉಷಾ, ವಿನಯಾ ನಾಯಕ್, ವೈದೇಹಿ, ಪ್ರತಿಭಾ ನಂದಕುಮಾರ್, ಮಲ್ಲಿಕಾ ಘಂಟಿ, ಕಮಲಾ ಹೆಮ್ಮಿಗೆ, ಸುಕನ್ಯಾ ಮಾರುತಿ, ಶಶಿಕಲಾ ವಸ್ತ್ರದ, ಡಿ. ವಿಜಯ, ಲಲಿತಾ ಸಿದ್ದಬಸವಯ್ಯ ಮುಂತಾದವರ ಕವಿತೆಗಳನ್ನು ಪ್ರಾತಿನಿಧಿಕವಾಗಿ ಆಯ್ದುಕೊಳ್ಳಲಾಗಿದೆ. ಕರ್ನಾಟಕದ ಭೌಗೋಳಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸಾಮಾಜಿಕ ಹಿನ್ನೆಲೆಯಲ್ಲಿ ಕಾವ್ಯವನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ – ೨

ಮಾತೃತ್ವದ ಪರಿಕಲ್ಪನೆ – ಒಂದು ಚರ್ಚೆ

(ಜೈವಿಕ, ಸಾಮಾಜಿಕ, ಕೌಟುಂಬಿಕ, ಧಾರ್ಮಿಕ, ಪೌರಾಣಿಕ, ಸ್ತ್ರೀವಾದಿ ಹಾಗೂ ಸಾಹಿತ್ಯಕ ನೆಲೆಗಳಲ್ಲಿ)

ಭಾರತೀಯ ಪರಂಪರೆಯಲ್ಲಿ ಸ್ತ್ರೀ

ಭಾರತೀಯ ಪರಂಪರೆಯಲ್ಲಿ ಹೆಣ್ಣನ್ನು ಪ್ರಕೃತಿಯೆಂದೂ, ಗಂಡನ್ನು ಪುರುಷನೆಂದೂ ಕರೆಯಲಾಗಿದೆ. ಸಂತಾನಾಭಿವೃದ್ಧಿ ಎಂಬುದು ಕುಟುಂಬ ವಿಕಾಸಕ್ಕೆ ಮುಖ್ಯವಾದುದು ಎಂಬುದನ್ನು ಪರಂಪರಾಗತವಾಗಿ ನಿರ್ಧರಿಸಿಕೊಂಡು ಬಂದಿರುವುದರಿಂದ, ಸಂತಾನಾಭಿವೃದ್ಧಿಗೆ, ಅದರ ಮುಂದುವರಿಕೆಗೆ ಹಾಗೂ ನಿರ್ವಹಣೆಗೆ ಹೆಣ್ಣು ಅನಿವಾರ್ಯಳಾಗುತ್ತಾಳೆ. ಆಕೆಯ ಜವಾಬ್ದಾರಿಗಿಂತಲೂ, ನಿರ್ವಹಿಸುವ ಪಾತ್ರ ಮುಖ್ಯವಾಗಿ ಆಕೆಗೆ ವಿಶಿಷ್ಟ ಸ್ಥಾನಮಾನ ತಂದುಕೊಟ್ಟಿದೆ. ಆಕೆ ಸಂತಾನಾಭಿವೃದ್ಧಿಯಲ್ಲಿ ತಾಯಿಯಾಗಿ ನಿರ್ವಹಿಸುವ ಪಾತ್ರ ಪ್ರಮುಖವಾದುದು.

ಹೆಣ್ಣು ಹಾಗೂ ಮಾತೆ : ಹೆಣ್ಣಿನ ವಿಕಾಸಶೀಲ ಬದುಕಿನಲ್ಲಿ ಲಭ್ಯವಾಗುವ ಒಂದು ಸ್ಥಿತಿಯೇ ತಾಯಿತನ. ಜೈವಿಕ ಕ್ರಿಯೆಯಲ್ಲಿ ಹೆಣ್ಣಿಗೆ ಪ್ರಾಧಾನ್ಯತೆ ದೊರಕುವ ಹಂತ. ಸಾಮಾಜಿಕ ಬದುಕಿನಲ್ಲಿ ಸ್ತ್ರೀಯನ್ನಾಗಿ ನೋಡುವ ಬಗೆಗೂ, ತಾಯಿಯನ್ನಾಗಿ ನೋಡುವ ಬಗೆಗೂ ತುಂಬಾ ವ್ಯತ್ಯಾಸವಿದೆ. ಮಾತ್ರವಲ್ಲ, ಅಲ್ಲಿ ಪುರುಷನ ಅನುಕೂಲ ಸಿದ್ಧಾಂತವಿದೆ. ಸ್ವಾರ್ಥತೆಯ ಅಂಶವಿದೆ. ಸಾಮಾಜಿಕವಾಗಿ ಸ್ತ್ರೀಯು ಶೋಷಣೆಯ ಸಂಕೇತವಾಗಿದ್ದಾಳೆ. ಪುರುಷನ ದಬ್ಬಾಳಿಕೆಗೆ ಒಳಗಾಗಿ ಪರಾಧೀನತೆಯಲ್ಲೆ ಉಳಿಯುವಂತಹದು. ಅದರಲ್ಲೂ ಪುರುಷ ಪ್ರಧಾನ ಸಮಾಜದಲ್ಲಂತೂ ಸ್ತ್ರೀಗೂ ಶೂದ್ರರಿಗೂ ಯಾವ ವ್ಯತ್ಯಾಸವಿಲ್ಲದಂತೆ ನಮ್ಮ ಪೂರ್ವಿಕರು ನಡೆಸಿಕೊಂಡು ಬಂದಿದ್ದಾರೆ. ಈಗಲೂ ಬಹುತೇಕ ಅದೇ ಸ್ಥಿತಿ ಇದೆ. ತನ್ನ ಆಸೆ –ಆಕಾಂಕ್ಷೆಗಳನ್ನು, ಗೊತ್ತು–ಗುರಿಗಳನ್ನು, ಪ್ರೀತಿ–ಪ್ರೇಮವನ್ನು ಕೈಬಿಟ್ಟು ಕೇವಲ ಹೊಟ್ಟೆಪಾಡಿಗಾಗಿ, ಕೈಹಿಡಿದ ಗಂಡನ ಆಣತಿಯಂತೆ ಅವನ ಕೈಗೊಂಬೆಯಾಗಿ, ಆತನ ಆಶೋತ್ತರಗಳಿಗೆ ತನ್ನನ್ನೇ ತೆತ್ತುಕೊಳ್ಳುವ ಸ್ತ್ರೀ ಅಸಹಾಯಕಳು. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಸಂಪ್ರದಾಯದ ಬಿಗಿ ಸಂಕೋಲೆಗೆ ಬಂಧಿತಳಾಗಿರುವುದನ್ನು ನಮ್ಮ ಹಿಂದಿನ ವ್ಯವಸ್ಥೆಯಲ್ಲಿ ದಟ್ಟವಾಗಿರುವುದನ್ನು ಕಾಣುತ್ತೇವೆ. ಆಧುನಿಕ ಯುಗದಲ್ಲೂ ಕೂಡ ಆಕೆಯನ್ನು ಬಂಧಿಸಿರುವ ಸಂಕೋಲೆ ಕೆಲವು ಮಟ್ಟಿಗೆ ಸಡಿಲವಾಗಿದೆಯೇ ಹೊರತು, ಸಂಪೂರ್ಣ ಕಳಚಿ ಬಿದ್ದಿಲ್ಲವೆಂಬುದನ್ನು ಕಾಣುತ್ತೇವೆ. ಮೌಢ್ಯತೆ, ಕಂದಾಚಾರದ ಸುಳಿಗೆ ಸಿಕ್ಕಿ ನಲುಗಿರುವ ಸ್ತ್ರೀ ಇನ್ನೂ ತನ್ನ ಮೈಕೊಡವಿಕೊಂಡು ನಿಂತು, ತನ್ನ ಸ್ವಂತಿಕೆ ಮೆರೆವ ಶಕ್ತಿಯಾಗಿ ಕಾಣುತ್ತಿಲ್ಲ.

ಬಹುತೇಕ ಎಲ್ಲ ಧರ್ಮಗಳು ಪುರುಷರ ಕೈಗೊಂಬೆಗಳಾಗಿದ್ದು, ಆತನ ಇಚ್ಛಾಶಕ್ತಿಗೆ ಅನುಗುಣವಾಗಿ ರೂಪುತಾಳಿವೆ. ಜೈವಿಕ ಹಿನ್ನೆಲೆಯಲ್ಲಿ ತಾಯಿಯಾಗುವ ಮಹಿಳೆಯನ್ನು ಎಲ್ಲಾ ಧರ್ಮಗಳೂ ಒಂದಲ್ಲಾ ಒಂದು ರೀತಿಯಲ್ಲಿ ಶೋಷಣೆಗೈದಿವೆ.

ಆಕೆಯ ಚಟುವಟಿಕೆ ಮೇಲೆ, ಸಾಮಾಜಿಕ, ಧಾರ್ಮಿಕ ಆಚರಣೆಗಳ ಮೇಲೆ ಕಡಿವಾಣ ಹಾಕಿವೆ. ತಾಯಿಯಾಗಿ ಗೌರವಿಸಿದರೂ ಅದಕ್ಕೆ ಒಂದು ಮಿತಿಯನ್ನು ಒಡ್ಡಿವೆ.

"ಶ್ರವಣಬೆಳಗೊಳದಲ್ಲಿರುವ ಶಾಸನದ ಪ್ರಕಾರ ಮಾಚಿಕಬ್ಬೆ ಎನ್ನುವವಳು ತನುವನ್ನು ಜಿನನಿಗೆ, ಧನವನ್ನು ಮುನಿಜನಸೇವೆಗೆ ಸವೆಸಿದಳು. ತಪಸ್ಸನ್ನು ಆಚರಿಸಿದರೂ ಸ್ತ್ರೀಯರಿಗೆ ಮೋಕ್ಷವಿರುತ್ತಿರಲಿಲ್ಲ. ಏಕೆಂದರೆ ಜೈನಧರ್ಮದ ಪ್ರಕಾರ ಮೋಕ್ಷ ಪಡೆಯಲು ಗಂಡಾಗಿ ಹುಟ್ಟಬೇಕು"[೧] ಎಂದು 'ಕನ್ನಡ ಕಾವ್ಯ ಕಂಡ ಹೆಣ್ಣು', ಕೃತಿಯಲ್ಲಿ ಸಿ.ವೀರಣ್ಣನವರು ಉಲ್ಲೇಖಿಸಿರುವುದನ್ನು ಗಮನಿಸಬಹುದು.

ಗಂಡನ ಸೇವೆ ಮಾಡುವುದು ಹೆಣ್ಣಿನ ಧರ್ಮ. ಆತನನ್ನು ಮನೋಲ್ಲಾಸದಲ್ಲಿಟ್ಟು ಆತನ ಏಳ್ಗೆ, ಯಶಸ್ಸಿಗೆ ತನ್ನನ್ನು ಅರ್ಪಿಸಿಕೊಳ್ಳುವುದು ಸತಿಯ ಆದರ್ಶವಾಗಿತ್ತು ಎಂಬುದಕ್ಕೆ ಪಂಪನ ಆದಿಪುರಾಣದಲ್ಲಿ ಉಲ್ಲೇಖವಿದೆ.

ಮನಮಱಿದಂಜಿ ಬೆಚ್ಚಿಬೆಸಕಯ್ ನಿಜವಲ್ಲಭನೇನನೆಂದೊಡಂ
ಕಿನಿಸದಿರೊಂದಿದಗ್ರಮಹಷೀ ಪದದಲ್ಲಿ ಪದಸ್ಥೆಯಾಗು ನಂ
ದನರನಗಣ್ಯ ಪುಣ್ಯಧನರಂ ಪಡೆಯೆಂದಮರ್ದಪ್ಪಿ ಕೊಂಡುತತ್
ತೆನುಜೆಯಗಲ್ಕೆಯೊಳ್ ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ [೨]

ಹೆಣ್ಣು ಎಂತಹ ಪರಿಸ್ಥಿತಿಯಲ್ಲೂ ಗಂಡನಿಗೆ ಎದುರಾಳಿಯಾಗಬಾರದು, ಕುಟುಂಬದ ಎಲ್ಲರೊಂದಿಗೂ ಅನ್ಯೋನ್ಯವಾಗಿ ಬೆರೆತು ಹೊಂದಿಕೊಂಡು ಹೋಗಬೇಕು. ವೀರಜನನಿ ಎಂಬ ಖ್ಯಾತಿಗೆ ಪಾತ್ರಳಾಗಬೇಕೆಂಬುದು ಆ ಕಾಲದ ಆದರ್ಶವಾಗಿತ್ತು.

ಇಷ್ಟೆಲ್ಲ ನಿರ್ಬಂಧ, ನಿಷ್ಠೂರಗಳ ನಡುವೆಯೂ ಹೆಣ್ಣಿಗೆ ಗೌರವದ ಸ್ಥಾನಮಾನ ಲಭ್ಯವಾಗಿರುವುದು ಆಕೆಯ ತಾಯ್ತನದಿಂದ. ಸಂತಾನೋದಯಕ್ಕೆ ಸ್ತ್ರೀ ಪುರುಷರಿಬ್ಬರೂ ಸಮಾನರಾದರೂ ಕೂಡ ಸ್ತ್ರೀಯ ಪಾತ್ರ ಮುಖ್ಯವಾಗಿದೆ. ಜೀವನದ ಸಫಲತೆ ಸಂತಾನ ಪ್ರಾಪ್ತಿಯಿಂದ. ಸಕಲ ಸಂಪತ್ತು, ಪೌರುಷ ಗಂಡನಿದ್ದರೂ ತಾನು ತಾಯಿಯಾಗದಿದ್ದರೆ ತನ್ನ ಬದುಕು ಸಾರ್ಥಕವಾಗಲಾರದು, ಸಾಮಾಜಿಕ ಗೌರವ ಲಭ್ಯವಾಗದು ಎಂಬ ಆತಂಕಕ್ಕೆ ಹೆಣ್ಣನ್ನು ಒಳಗು ಮಾಡಲಾಗಿದೆ. ಬಹುಶಃ ಈ ಬಿಕ್ಕಟ್ಟಿನಿಂದ ಹೊರಬರುವ ಭಾಗವಾಗಿ ಅವಳು ಈ ಬಗ್ಗೆ ದೇವರಲ್ಲೂ ಮೊರೆಯಿಟ್ಟದ್ದನ್ನು ಜನಪದ ಸಾಹಿತ್ಯದಲ್ಲೂ ಕಾಣುತ್ತೇವೆ.

ಕಂದನ್ನ ಕೊಡು ಶಿವನೆ ಭಂಗವ ಪಡಲಾರೆ
ಹಂಗೀನಾಕೂಳು ಉಣಲಾರೆ – ನಾ ಈಗ
ಬಂಜೆಂಬ ಶಬುದ ಹೊರಲಾರೆ ।

ಮಕ್ಕಳಿಲ್ಲದ ನಾರಿ ಇಟ್ಟೇನ ತೊಟ್ಟೇನ
ಬಾಡಿಗೀಎತ್ತು ದುಡಿದ್ಹಾಂಗ – ಬಾಳಿಯೆಲಿ
ಹಾಸುಂಡು ಬೀಸಿ ಒಗೆದ್ಹಾಂಗ । [೩]

ತಾಯ್ತನ ಎಂಬುದು ಪುರುಷಾಧಿಕಾರದ ಇನ್ನೊಂದು ಮುಖ. ಬಂಜೆಯಾದವಳನ್ನು ತ್ಯಜಿಸುವ ಪರಿಪಾಠ ರೂಢಿಸಿಕೊಂಡ ಪುರುಷ ತನ್ನಲ್ಲಿರುವ ದೋಷಕ್ಕೆ ಚಕಾರವೆತ್ತಿರುವುದು ಎಲ್ಲಿಯೂ ಕಾಣದು. ಪುರುಷ ಎರಡು ಹಂತದಲ್ಲಿ ಹೆಣ್ಣನ್ನು ಉಪಯೋಗಿಸುತ್ತಿದ್ದಾನೆ. ಒಂದು ಭೋಗ; ಇನ್ನೊಂದು ಸಂತಾನ. ಹಾಗಾಗಿ ಭೋಗ ನೀಡಿದ ಹೆಣ್ಣು ಸಂತಾನ ನೀಡದಿದ್ದರೆ ಆಕೆಯನ್ನು ನಿರ್ಲಕ್ಷ್ಯದಿಂದ ಕಾಣುವ ಪರಿಸ್ಥಿತಿ ಇದೆ. ತನ್ನ ಉತ್ತರಾಧಿಕಾರತ್ವ ಸಂತಾನದಿಂದ ಅದರಲ್ಲೂ ಗಂಡು ಸಂತಾನದಿಂದ ಮಾತ್ರವೆಂದು ನಂಬಲಾಗಿದೆ.

"ಸಂತಾನಾಪೇಕ್ಷೆ ಬರೀ ಜಾನಪದ ಸಮೂಹಕ್ಕಷ್ಟೇ ಅಲ್ಲ, ಅಭಿಜಾತ ಸಮೂಹದಲ್ಲೂ ಇದು ಉತ್ಕಟವಾದುದಾಗಿದೆ. ಅಭಿಜಾತದ ಮತದಂತೆ ಸಂತಾನ ನಿರ್ಮಿತಿಕಾರ್ಯ ದೇವರಿಗೆ ಬೇಕಾದ ಸಂಗತಿ. ಸಂತಾನ ನಿರ್ಮಿತಿಯ ಕಾರ್ಯದಿಂದ ಜಗತ್ತಿನ ಮುಂದುವರೆತ; ಲೀಲಾಪುರುಷನಾದ ಪರಮಾತ್ಮನಿಗೆ ಅನಂತಕಾಲದವರೆಗೆ ಜಗತ್ತಿನ ಜೀವನವನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ. . . . ಆದುದರಿಂದ ಮಾನವರೆಲ್ಲರೂ ಪುತ್ರವಂತರಾಗಬೇಕೆಂಬುದು ಭಾರತೀಯರ ಆದರ್ಶ ಸಾಧನೆಯೆನಿಸಿದೆ. ಇದರ ಪ್ರಮಾಣ ಪರಿಪುಷ್ಟವಾಗಿ ಭಾರತೀಯ ಪರಂಪರೆಯಲ್ಲಿ ಬರುವ ಅಷ್ಟಾದಶ ವರ್ಣನೆಗಳಲ್ಲಿ 'ಪುತ್ರದೋಹಳ' ಪ್ರಸಂಗಗಳಲ್ಲಿ ನೋಡಬಹುದು. ಪ್ರತಿಯೊಂದು ಕನ್ನಡ ಮಹಾಕಾವ್ಯದಲ್ಲಿಯೂ ಪುತ್ರದೋಹಳ ಪ್ರಸಂಗದ ರಸಪೂರ್ಣ ವರ್ಣನೆ ಇಲ್ಲದೆ ಇಲ್ಲ. ಪುತ್ರ ಸಂತಾನದ ಅತ್ಯಾವಶ್ಯಕತೆಯನ್ನು ಹಲವಾರು ಬಗೆಯಿಂದ ವಿವೇಚನೆ ಮಾಡಿದ್ದಾರೆ. ಯಜ್ಞ ಪ್ರಧಾನ ಕಾಲದಲ್ಲಿ 'ಪುತ್ರಕಾಮೇಷ್ಟಿ' ಎಂಬ ಯಜ್ಞವೂ ಪುತ್ರ ಪ್ರಾಪ್ತ್ಯರ್ಥ ಕರ್ಮವೆಂದು ಪ್ರತಿಷ್ಠೆಗೊಂಡಿವೆ"[೮]. ಹೀಗೆ ಜನಪದ ಹಾಗೂ ಶಿಷ್ಟರೀರ್ವರಲ್ಲೂ ಸಂತಾನಾಪೇಕ್ಷೆ ಬಗ್ಗೆ ಇಲ್ಲದ ಅಭಿಮಾನ ಹಾಗೂ ಉದ್ದೇಶಗಳಿರುವುದರಿಂದ ಹೆಣ್ಣಿಗೆ ಈ ಹಂತದಲ್ಲಿ ವಿಶೇಷ ಗೌರವ ಹಾಗೂ ಮಾನ್ಯತೆ ಲಭಿಸಿದೆ.

ಮಾತೃ - ಮಾತೃತ್ವ : ಭೂಮಿಯ ಮೇಲೆ ಎಂದು ಜೀವಿಗಳ ಉದಯವಾಯಿತೋ ಅಂದಿನಿಂದಲೂ ಮಾತೃ ಪರಿಕಲ್ಪನೆ ಸುಪ್ತವಾಗಿ ಇದ್ದಿತು. ಇದು ಕೇವಲ ಮನುಕುಲಕ್ಕೆ ಸಂಬಂಧಿಸಿದ್ದಲ್ಲ. ಸಕಲ ಜೀವಚರಗಳಿಗೂ ಅನ್ವಯಿಸುವಂತಹದ್ದು. ದೈಹಿಕ ನೆಲೆಯಿಂದ ರೂಪಗೊಂಡಂತದ್ದು. ವಿಶ್ವದ ನಿರಂತರ ಮುಂದುವರಿಕೆಗೆ ಈ ಪರಿಕಲ್ಪನೆ ಒತ್ತಾಸೆಯಾಗಿ ನಿಲ್ಲುತ್ತದೆ. ಇದು ನಿತ್ಯ ಸತ್ಯವಾದದ್ದು. ಈ ಆಧಾರದ ಮೇಲೆಯೇ ಮನುಕುಲದ ಅಸ್ತಿತ್ವ ಉಳಿದು ಬೆಳೆದಿದೆ. ಈ ಮಾತನ್ನು ಪ್ರಾಣಿ ಲೋಕಕ್ಕೆ ಅನ್ವಯಿಸುವುದು ಸ್ವಲ್ಪ ಕಷ್ಟವಾಗುತ್ತದೆ. ಮನುಷ್ಯರು ದೈಹಿಕ ಸಂಬಂಧದ ಆಧಾರದ ಮೇಲೆಯೇ ಕುಟುಂಬದ ಸದಸ್ಯರ ಸಂಬಂಧಗಳನ್ನು ಭಿನ್ನ ಭಿನ್ನವಾದ ನೆಲೆಗಳಲ್ಲಿ ನಿರ್ಣಯಿಸಿದ್ದಾರೆ. ಆದರೆ ಪ್ರಾಣಿ ಲೋಕದಲ್ಲಿ ಇಂತಹ ಕಟ್ಟುಪಾಡುಗಳು ಕಂಡುಬರುವುದಿಲ್ಲ. ಮಾನವ ಸಮಾಜದಲ್ಲಿ ಸಂಬಂಧಗಳು ರೂಢಿ ಸಂಪ್ರದಾಯಗಳಿಂದ ನಿಯಂತ್ರಿಸಲ್ಪಟ್ಟಿವೆ. ನೈತಿಕ ನೆಲೆಯಲ್ಲಿ, ಸಂಬಂಧಗಳ ಒಳಿತು ಕೆಡುಕುಗಳ ನಿರ್ಣಯವಾಗುವುದರಿಂದ ಅವುಗಳನ್ನು ಮೀರಲು ಜನ ಇಚ್ಚಿಸುವುದಿಲ್ಲ. ಮನುಷ್ಯನಲ್ಲಿರುವ ವಿವೇಚನಾಶಕ್ತಿಯು ಇದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುತ್ತದೆ. ಪ್ರಾಣಿ ಸಂಬಂಧಗಳಲ್ಲಿ ಮುಕ್ತ ಲೈಂಗಿಕತೆ ಕಂಡುಬರುವುದರಿಂದ

ಹುಟ್ಟಿನಿಂದಷ್ಟೇ ಮಾತೃ ಕಲ್ಪನೆ ಉಳಿಯುತ್ತದೆ. ಹೀಗಾಗಿ ಅವುಗಳಲ್ಲಿ ಯಾವುದೇ ಕಟ್ಟುಪಾಡುಗಳನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ. ಅದನ್ನೆ ಮೃಗತ್ವ ಎನ್ನುವುದು.

ಮಾತೃತ್ವದ ಆಧಾರದ ಮೇಲೆ ಇಹ ಪರದ ಚಿಂತನೆ ಮೂಡುವುದರಿಂದ ಅಂದರೆ ಸಾಮಾಜಿಕ ಸ್ಥಾನಮಾನಗಳು ಒಂದು ಹೆಣ್ಣು ಪಡೆಯಬಹುದಾದ ಅಥವ ಸಂತಾನವನ್ನು ಆಧರಿಸಿ ನಿರ್ಣಯವಾಗುವುದರಿಂದ ಸಹಜವಾಗಿಯೇ ಎಲ್ಲ ಸ್ತ್ರೀಯರೂ ಮಾತೃತ್ವವನ್ನು ಪಡೆಯಲು ಸದಾ ಹಂಬಲಿಸುತ್ತಾರೆ. ಇದಲ್ಲದೆ ಆ ಮಕ್ಕಳು ಮುಪ್ಪಿನ ದಿನಗಳಲ್ಲಿ ತಮಗೆ ಆಸರೆಯಾದಾರು ಎನ್ನುವ ಬಯಕೆಯೂ ಇದರದಾಗಿರಬಹುದು.

ವೈದ್ಯಕೀಯ ಕ್ಷೇತ್ರದಲ್ಲಿ ವಿದ್ಯುನ್ಮಾನಗಳ ಬಳಕೆಯಿಂದ ತಾಯಿ ಗರ್ಭದಲ್ಲಿರುವ ಭ್ರೂಣದ ಲಿಂಗವನ್ನು ಪತ್ತೆ ಹಚ್ಚಿ ಅದು ಸ್ತ್ರೀ ಭ್ರೂಣವಾಗಿದ್ದರೆ, ಅಲ್ಲಿಯೇ ನಾಶಗೈಯುವ ಪ್ರಯತ್ನಗಳು ಗುಟ್ಟಾಗಿ ಉಳಿದಿಲ್ಲ. ಇದಕ್ಕೆ ಕಾನೂನುಗಳ ಬೆಂಬಲವಿರುವುದಿಲ್ಲ. ವಿವಾಹ, ಆರ್ಥಿಕ ಹೊರೆ, ಸಾಮಾಜಿಕ ಸವಾಲುಗಳ ನಡುವೆ ಭ್ರೂಣಲಿಂಗ ಪತ್ತೆ ನಡೆಯುತ್ತಿದ್ದು, ಅದನ್ನು ಉಳಿಸಿಕೊಳ್ಳುವ ಇಲ್ಲವೆ ಅಳಿಸಿಬಿಡುವ ವಿಧಾನ ಕಂಡುಬರುತ್ತದೆ.

"ಮಕ್ಕಳಿರಲವ್ವ ಮನೆತುಂಬ" ಎಂಬ ಜನಪದರ ಸೊಲ್ಲಿಗೂ, "ಮನೆಗೊಂದು ಮಗು ಮನೆತುಂಬ ನಗು" ಎಂಬ ನಮ್ಮ ಸರ್ಕಾರದ ಘೋಷಣೆಗೂ ತಾಳಿಕೆಯನ್ನು ಹಾಕಿ ನೋಡಿದರೆ ವಾಸ್ತವವೇನೆಂದು ಅರಿವಾಗುತ್ತದೆ.

ಮಾತೃ: ಜೈವಿಕ ಆಯಾಮ: ಮಗುವಿನ ಜನನ ಕರುಳುಬಳ್ಳಿಯ ಸಂಬಂಧದಿಂದ ನಿರ್ಣಯಿತವಾಗುವಂತಹುದು. ಮಗು ಹೆಣ್ಣಿರಲಿ ಗಂಡಿರಲಿ ಅದನ್ನು ಪಾಲಿಸುವ, ಪೋಷಿಸುವ ಹೆಚ್ಚಿನ ಜವಾಬ್ದಾರಿಯನ್ನು ತಾಯಿಯೇ ವಹಿಸುತ್ತಾಳೆ. ಆದ್ದರಿಂದಲೇ ಮಾತೃತ್ವದ ಪದದ ವ್ಯಾಪ್ತಿ ಅತಿ ದೊಡ್ಡದು. 'ಆಡಿ ಬಾ ನನ ಕಂದ ಅಂಗಾಲ ತೊಳೆದೇನು ತೆಂಗಿನ ನೀರ ತಿಳಿನೀರ ತಕ್ಕೊಂಡು ನಿನ್ನ ಬಂಗಾರದ ಮಾರಿ ತೊಳೆದೇನು". ಎನ್ನುವ ಗರತಿಯ ಮಾತೃವಾತ್ಸಲ್ಯಕ್ಕೂ ಇಂದಿನವರ ತಾಯಿಮಗುವಿನ ಸಂಬಂಧದ ಒಳಸೂತ್ರಗಳು ಯಥಾವತ್ತಾಗಿಯೇ ಲಿಂಗ ಪತ್ತೆಯ ನಡುವೆಯೂ ತನ್ನ ಗಟ್ಟಿಯಾದ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ.

ತಾಯ್ತನದ ಒಳಬಯಕೆ ತನ್ನ ಸಂತಾನವು ಯಾವಾಗಲೂ ಯಶಸ್ಸು, ಏಳಿಗೆಯಾಗಬೇಕೆಂಬುದು ಅವಳ ಅಂತರಂಗದ ದನಿಯಾಗಿರುತ್ತದೆ. ತನಗಿರುವ ಎಲ್ಲ ಮಕ್ಕಳನ್ನು ಸಮದರ್ಶಿಯಾಗಿ ನೋಡುತ್ತ, ಸಮತೂಕದ ಪ್ರೀತಿ ವಾತ್ಸಲ್ಯಗಳನ್ನು ಹಂಚಿಕೊಳ್ಳುವ ತಾಯ್ತನಕ್ಕೆ ಯಾವುದು ಸರಿಯಾದೀತು? ಇಂತಹ ತಾಯಿ ವೃದ್ಧಾಪ್ಯವನ್ನು ತಲುಪುವ ವೇಳೆಗೆ ಮಕ್ಕಳು ಬೆಳೆದು ನಿಂತಿರುತ್ತಾರೆ. ಆದರೆ ಆ ಮಕ್ಕಳೆಲ್ಲರೂ ಮಾತೃತ್ವವನ್ನು ಏಕರೀತಿಯ ಮಮಕಾರದಿಂದ ಪುರಸ್ಕರಿಸಿ ಪಾಲಿಸುತ್ತಾರೆ ಎಂದು ಹೇಳಲಾಗದು. ಕೌಟುಂಬಿಕ ನೆಲೆಯಲ್ಲಿ ತಾಯ್ತನದ ಪಾತ್ರ ಅತ್ಯಂತ ಗುರುತರವಾದದ್ದು. ಭಾರತದಲ್ಲಿ ಕೈಗಾರಿಕಾ ಕ್ರಾಂತಿಯ ನಂತರ ತಾಯಿ ಶಬ್ದ ಕೇವಲ ಆರಾಧನೆಯ ಸ್ತರದಲ್ಲಿಯೇ ಉಳಿಯಿತು. ತಾಯಿ ಗರ್ಭಗುಡಿಯ ಮೂರ್ತಿಯಾದಳು.

ತಾಯಿಯ ದೃಷ್ಟಿಕೋನದಿಂದ ಹೇಳುವುದಾದರೆ ಆಕೆ ತಾನು ಕೌಟುಂಬಿಕ ನೆಲೆಯಿಂದ ಇತರೆಡೆಗೆ ಸ್ಥಳಾಂತರಗೊಳ್ಳುವುದನ್ನು ಸಹಿಸಳು. ಆರ್ಥಿಕ ನೆಲೆಯಲ್ಲಿ ಒಂದಿಷ್ಟು ಧನ ಸಹಾಯ ಮಾಡುವುದರಿಂದ ತಮ್ಮ ಕರ್ತವ್ಯ ಪೂರೈಸಿದೆವು ಎಂಬ ಮಕ್ಕಳ ಮನೋಭಾವವೂ ಕೂಡ ಮಾತೃತ್ವವನ್ನು ಅಪಮೌಲ್ಯಗೊಳಿಸುತ್ತಿದೆ. ಇತ್ತೀಚೆಗಂತೂ ಬೆಳೆದ ಮಕ್ಕಳು ತಾಯಿಯ ಪೋಷಣೆಯನ್ನು ಕಾಲಮಿತಿಯಲ್ಲಿ ಹಂಚಿಕೊಳ್ಳುವುದು ಮನುಷ್ಯ ಸಂಬಂಧಗಳ ಶಿಥಿಲತೆಯನ್ನು ತೋರಿಸುತ್ತದೆ. ಒಬ್ಬ ತಾಯಿಗೆ ನಾಲ್ಕು ಜನ ಮಕ್ಕಳಿದ್ದರೆ, ಒಬ್ಬೊಬ್ಬ ಮಗನ ಬಳಿ ಮೂರು ಮೂರು ತಿಂಗಳು ಆಶ್ರಯ ಪಡೆಯಬೇಕಾಗುತ್ತದೆ. ಹೀಗಾಗಿ ಮಾತೃತ್ವದ ಅಖಂಡತ್ವವನ್ನು ಛಿದ್ರಗೊಳಿಸುವ ಪ್ರಯತ್ನಗಳು ಕಂಡುಬರುತ್ತವೆ. ಇದೊಂದು ಅಮಾನವೀಯ ನಡಾವಳಿಕೆ ಎನಿಸಿದರೂ ಆಧುನಿಕ ಬದುಕಿನ ವಿಧಾನವೇ ಆಗಿಬಿಟ್ಟಿದೆ. ಮುಂದೆ ಇದು ಯಾವ ಹಂತ ತಲುಪೀತು ಎಂಬುದನ್ನು ಊಹಿಸಿಕೊಂಡರೆ ಭಯವಾಗುತ್ತದೆ.

ಮಾತೃ: ಸಾಮಾಜಿಕ ಆಯಾಮ:

ಸಾಕು ತಾಯಿ: ಸಾಕು ತಾಯಿ, ಮಲ ತಾಯಿ ಭಾವನಾತ್ಮಕ ತಾಯಿ ಎಂದು ಮಾತೃತ್ವದ ನೆಲೆಗಳನ್ನು ಸ್ಥೂಲವಾಗಿ ಗುರುತಿಸಬಹುದು. ಸಂತಾನವನ್ನು ಪಡೆಯುವ ದೈಹಿಕ ಸಾಮರ್ಥ್ಯದಿಂದ ವಂಚಿತರಾದವರು ಇತರರ ಮಕ್ಕಳನ್ನು ದತ್ತುವಾಗಿ ಪಡೆದು ತಮ್ಮ ಒಡಲಲ್ಲೇ ಹುಟ್ಟಿದ ಮಗುವಿನಂತೆ ವಾತ್ಸಲ್ಯ ತೋರಿ ಬೆಳೆಯಿಸುವುದು, ಶಿಕ್ಷಣ ಕೊಡಿಸುವುದು, ವಿವಾಹ ಮಾಡಿಸುವುದು, ಲೋಕ ರೂಢಿಯಲ್ಲಿ ತಮ್ಮ ಆಸ್ತಿಯನ್ನು ಅಂತಹವರಿಗೆ ವಹಿಸಿ ಕೊಡುವುದು ಕಂಡುಬರುತ್ತದೆ. ಇದನ್ನು ಕಾನೂನು ಕೂಡ ಸಮ್ಮತಿಸುತ್ತದೆ. ಇದಕ್ಕೆ ಪುರಾಣಗಳ ಕಾಲದಿಂದಲೂ ನಿದರ್ಶನವಾಗಬಲ್ಲ ಸಂಬಂಧಗಳು ಕಂಡುಬರುತ್ತವೆ.

ಮಲತಾಯಿ: ಜನ್ಮ ಕೊಟ್ಟ ತಾಯಿಗೆ ಸವತಿಯಾಗಿ ಬರುವ ಹೆಣ್ಣು ಈ ಮಗುವಿಗೆ ಮಲದಾಯಿಯಾಗುತ್ತಾಳೆ. (ಆಕೆ ಎಷ್ಟೇ ಪ್ರೀತಿಯಿಂದ ನೋಡಿಕೊಂಡರೂ ಅವಳನ್ನು ಸಮಾಜ ಪೀತ ದೃಷ್ಟಿಯಿಂದ ನೋಡುತ್ತಾ ಬಂದಿರುವುದು ವಿಷಾದಕರ) ತನ್ನ ಒಡಲಿನಿಂದ ಮೂಡಿ ಬರದಿದ್ದರೂ ತನ್ನ ಗಂಡನ ಸಂಬಂಧದಿಂದ ಜನಿಸಿದ ಮಕ್ಕಳನ್ನು ತನಗೆ ಸಂತಾನವಿದ್ದರೂ ಇಲ್ಲದಿದ್ದರೂ ತನ್ನ ಮಕ್ಕಳೆಂದೇ ಭಾವಿಸಿ ಆ ಮಕ್ಕಳನ್ನು ಪ್ರೀತಿ ವಾತ್ಸಲ್ಯದ ದೃಷ್ಟಿಯಿಂದ ಪೋಷಿಸುವ ಔದಾರ್ಯವನ್ನು ತೋರಿಸುತ್ತಾಳೆ. ಈ ಸಂಬಂಧದ ಬಗ್ಗೆ ಬಹುತೇಕ ಆರೋಪಗಳೇ ಹೆಚ್ಚು ಕೇಳಿಬರುತ್ತವೆ. ಇವು ಪೂರ್ವಾಗ್ರಹದಿಂದ ರೂಪಿತಗೊಂಡಂತಹವು.

ಭಾವನಾತ್ಮಕ ತಾಯಿ: ನೆರೆಹೊರೆಯವರ ಮಕ್ಕಳನ್ನು ಅಥವ ತಮ್ಮ ಸಂಬಂಧಿಕರ ಮಕ್ಕಳನ್ನು ತಮ್ಮ ಮಕ್ಕಳಂತೆಯೇ ಮಮಕಾರದಿಂದ ಭಾವಿಸುವ ಉದಾತ್ತ ಧೋರಣೆಯುಳ್ಳ ತಾಯಂದಿರನ್ನು ನಾವು ಕಾಣುತ್ತೇವೆ. ಈ ಸಂಬಂಧದಲ್ಲಿ ಹೆಚ್ಚಾಗಿ ಜಾತಿ, ಮತ, ಭಾಷೆ, ಪ್ರಾದೇಶಿಕತೆ ಮೀರಿದ ಕರುಳ ತುಡಿತ ಪ್ರಾಧಾನ್ಯತೆ ಪಡೆದಿರುತ್ತದೆ.

ಭಾರತೀಯ ತಾಯಿ: ಭಾರತ ಮಾತೆ ಎಂಬ ಕಲ್ಪನೆ ಅಖಂಡತ್ವದಿಂದ ಕೂಡಿದೆ. ಅದನ್ನು ಛಿದ್ರಗೊಳಿಸಲು ಸಾಧ್ಯವಿಲ್ಲ. ಅಂದರೆ ಒಂದು ಮರದಲ್ಲಿ ಹಲವಾರು ಕೊಂಬೆ ರೆಂಬೆಗಳಿರಬಹುದು ಆದರೆ ಅದರ ಬೇರು ಒಂದೇ ಎಂಬುದನ್ನು ಮರೆಯಬಾರದು. ಆಧುನಿಕ ಪರಿಭಾಷೆಯಲ್ಲಿ ವಿವಿಧತೆಯಲ್ಲಿ ಏಕತೆ ಎಂದು ಕರೆಯುತ್ತಾರೆ. ಪ್ರಾದೇಶಿಕತೆಗಳು, ಭಾಷೆ, ಆಹಾರ ಪದ್ಧತಿ, ಜೀವನ ವಿಧಾನ, ಸಂಸ್ಕೃತಿಯ ನಿಟ್ಟಿನಲ್ಲಿ ಪ್ರತ್ಯೇಕತೆಯನ್ನು ಪಡೆದುಕೊಂಡಿದ್ದರೂ ಮಾನವ ಸಂಬಂಧಗಳ ತಳಹದಿಯ ನಿಟ್ಟಿನಲ್ಲಿ ಗಮನಿಸಿದಾಗ ಒಳಗಿನ ಜೀವದ್ರವ ಒಂದೇ ಆಗಿರುತ್ತದೆ. ಉದಾಹರಣೆಗೆ: 'ಜೈ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ . . . .' ಎಂಬ ಕುವೆಂಪು ಕವಿತೆಯನ್ನು ಗಮನಿಸಬಹುದು.

ಭಾಷೆ, ನೆಲ ಜಲದ ಪರಿಮಿತಿಯಲ್ಲಿ ತಾಯಿತನವನ್ನು ಅನುಭವಿಸಿ ಪ್ರಾದೇಶಿಕತೆ ನಿರ್ಣಿತವಾದರೂ ವಿಶಾಲವಾದ ದೃಷ್ಟಿಯಲ್ಲಿ ಇತರೆ ಪ್ರಾಂತ್ಯಗಳ ಭಾಷೆ, ಬದುಕನ್ನು ಗೌರವಿಸುವ ಸಹಿಷ್ಣತೆಯನ್ನು ಬೆಳೆಸಿಕೊಂಡು ಬಂದಿರುವುದರಿಂದಲೇ ಇಂದಿಗೂ ನಾವು ಭಾರತವನ್ನು ಪಾರತಂತ್ರಕ್ಕೆ ಈಡುಮಾಡದೆ ಅಥವ ತುಂಡರಿಸದೆ ಉಳಿಸಿಕೊಳ್ಳಲು ಸಾಧ್ಯವಾಗಿದೆ.

'ನಾನು ರಾಜ್ಯ ದೃಷ್ಟಿಯಿಂದ ಕರ್ನಾಟಕದವನು; ಭಾಷಾ ದೃಷ್ಟಿಯಿಂದ ಕನ್ನಡಿಗನು; ಆದರೆ ಸಂಸ್ಕೃತಿಯ ದೃಷ್ಟಿಯಿಂದ ಮತ್ತು ರಾಷ್ಟ್ರ ದೃಷ್ಟಿಯಿಂದ ಭಾರತೀಯನು. ನನ್ನ ಕರ್ನಾಟಕತ್ವ ಭಾರತೀಯತ್ವಕ್ಕೆ ಎಂದಿಗೂ ಎದುರು ನಿಲ್ಲುವುದಿಲ್ಲ. ಕರ್ನಾಟಕತ್ವ ಭಾರತೀಯತ್ವಕ್ಕೆ ಎಂದೆಂದಿಗೂ ಅವಿರೋಧಿಯಾಗಿ ಸೇವೆ ಸಲ್ಲಿಸುವುದರಿಂದಲೇ ತನ್ನ ಅಸ್ತಿತ್ವವನ್ನು ರಕ್ಷಿಸಿಕೊಳ್ಳುತ್ತದೆ. ಭಾರತಿ ತಾಯಿ; ಕರ್ನಾಟಕ ಮಗಳು. ಭಾರತಕ್ಕೆ ಧಕ್ಕೆ ಒದಗಿದರೆ ಕರ್ನಾಟಕ ಉಳಿಯುವುದಿಲ್ಲ; ಮಗಳು ಕರ್ನಾಟಕಕ್ಕೆ ಕೇಡಾದರೆ ತಾಯಿ ಭಾರತಮಾತೆ ಸಹಿಸುವುದಿಲ್ಲ. ಪರಸ್ಪರ ಕ್ಷೇಮ ರಕ್ಷಣೆಯಿಂದಲೇ ಸರ್ವರ ಕ್ಷೇಮವೂ ರಕ್ಷಿತವಾಗಿರುತ್ತದೆ.

ಆದ್ದರಿಂದಲೇ ಕರ್ನಾಟಕದ ಕವಿ 'ಜಯಹೇ ಕರ್ನಾಟಕ ಮಾತೆ' ಎಂದು ಹಾಡಿದಾಗ ಆ ಜಯಗಾಥೆಯನ್ನು 'ಜಯಭಾರತ ಜನನಿಯ ತನುಜಾತೆ' ಎಂದೇ ಪ್ರಾರಂಭಿಸುತ್ತಾನೆ. ಮೊದಲು ಭಾರತದ ಜನನಿಗೆ ಜಯಕಾರ. ತನ್ನ ಗಾಥೆಯ ಒಂದೊಂದು ಪದ್ಯದ ಕೊನೆಯ ಚರಣವನ್ನು ಭಾರತದ ಏಕತ್ವ ರಕ್ಷಣೆಯ ಮಂತ್ರವನ್ನಾಗಿ ಘೋಷಿಸಿದ್ದಾನೆ: ರಾಘವ ಮಧುಸೂಧನರವತರಿಸಿದ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ. 'ನಾನಕ ರಾಮಾನಂದ ಕಬೀರರ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ!' ಇಲ್ಲಿ ಕರ್ನಾಟಕ ಮಾತೆಗೆ ತನ್ನದೇ ಆಗಿರುವ ಪ್ರತ್ಯೇಕ ಅಸ್ತಿತ್ವ ಇಲ್ಲ; ಸರ್ವದ ತಾಯಿ ಭಾರತೀಯ ಮಗಳಾಗಿಯೇ ಇರುವುದರಿಂದ ಮಾತ್ರ ಆಕೆ ಅಸ್ತಿತ್ವಕ್ಕೆ ರಕ್ಷೆ ಒದಗುತ್ತದೆ; ಅವರ ಘೋಷಣೆಗೆ ಅಮೃತ ಸಹಾಯ ಲಭಿಸುತ್ತದೆ. ಆದ್ದರಿಂದ ಭಾಷಾನುಗುಣ ರಾಜ್ಯ ರಚನೆಯಿಂದ ಭಾರತ ರಾಷ್ಟ್ರದ ಸಮಗ್ರತೆಗೆ ಭಂಗ ಬರುತ್ತದೆ ಎಂಬುದು ಭ್ರಾಂತಿಯ ಮಾತಾಗುತ್ತದೆ; ರಚಿತವಾಗಿರುವ ಭಾಷಾರಾಜ್ಯಗಳನ್ನು ಮತ್ತೆ ಅಳಿಸಿ, ಭಾವೈಕ್ಯತೆಯನ್ನು ಸಾಧಿಸುತ್ತೇವೆ -

ಎನ್ನುವವರು ರಾಷ್ಟ್ರಕ್ಷೇಮವನ್ನು ಹಾನಿಗೀಡುಮಾಡುವ ದೇಶದ್ರೋಹಿಗಳಾಗುವುದರಲ್ಲಿ ಸಂದೇಹವಿಲ್ಲ.'

ಕರ್ನಾಟಕವನ್ನು 'ಭಾರತ ಜನನಿಯ ತನುಜಾತೆ' ಎಂದು ಹಾಡಿದ ಕವಿಯೇ 'ಭರತ ಭೂಮಿ ನನ್ನ ತಾಯಿ' ಎಂದು ಹಾಡಿದ್ದಾನೆ. 'ಮತದ ಬಿರುಕುಗಳನ್ನು ತೊರೆವೆ; ನುಡಿಗಳೊಡಕುಗಳನು ಮರೆವೆ; ತೊತ್ತ ತೊಡಕುಗಳನ್ನು ಬಿರಿವೆ; ಜೀವನವನೆ ದೇವಿಗೆರೆವೆ ಬಿಡುತೆ ಗುಡಿಯ ಕಟ್ಟಲು'! ಎಂದೂ ಹಾಡುತ್ತಾನೆ. ಕನ್ನಡದ ಕವಿಯಂತೆಯೇ ಇತರ ಎಲ್ಲ ಭಾರತೀಯ ಭಾಷೆಯ ಕವಿಗಳೂ ಹಾಡಿದ್ದಾರೆ. ಎಂಬುದರಲ್ಲಿ ನನಗಿನಿತೂ ಶಂಕೆ ಇಲ್ಲ'[೫] ಎಂಬ ರಾಷ್ಟ್ರಕವಿ ಕುವೆಂಪು ಮಾತು ಇಲ್ಲಿ ಉಲ್ಲೇಖಾರ್ಹವಾದುದು.

ಮರಗಿಡಗಳ ಸಂಕುಲವನ್ನು ಕುರಿತು ಮಾತನಾಡುವಾಗಲೆಲ್ಲ ಬಳಸುವ "ತಾಯಿಬೇರು" ಎನ್ನುವ ಶಬ್ದದಲ್ಲಿಯೇ ಮಾತೃತ್ವದ ಪ್ರಾಧಾನ್ಯತೆ ಕಂಡುಬರುತ್ತದೆ. ಗಿಡವನ್ನು ಭದ್ರವಾಗಿ ನೆಲೆಯೂರುವಂತೆ ಮಾಡಲು, ಮರದ ಪೋಷಣೆಗೆ ತಾಯಿಬೇರು ಆಧಾರವಾಗಿರುತ್ತದೆ. ಈ ಮಾತನ್ನು ಮನುಷ್ಯ ಸಂಬಂಧಗಳಿಗೂ ವಿಸ್ತರಿಸಬಹುದು.

ಮಾತೃ : ಕೌಟುಂಬಿಕ ಆಯಾಮ: ಜೀವಜಗತ್ತು ಲಿಂಗ ಪ್ರಭೇದದಿಂದ ರೂಪುತಾಳಿದೆ. ಹಾಗೆಯೇ ಸೃಷ್ಟಿಯ ಕಿರೀಟವೆನಿಸಿದ ಮಾನವ ಕುಲದಲ್ಲೂ ಕೂಡ ಹೆಣ್ಣು ಗಂಡು ಎಂಬ ಪ್ರಭೇದವನ್ನು ಕಾಣುತ್ತೇವೆ. ಇದು ಜೈವಿಕ ಹಿನ್ನೆಲೆಯಲ್ಲಿ ವಿಂಗಡನೆಗೊಂಡಿದೆ. ಇದರ ಫಲವಾಗಿಯೇ ಲಿಂಗ ವಿಂಗಡನೆ ನಡೆದಿದೆ. ಹೆಣ್ಣನ್ನು ಸ್ತ್ರೀಲಿಂಗವೆಂದೂ, ಗಂಡನ್ನು ಪುಲ್ಲಿಂಗವೆಂದೂ ರೂಢಿಗತವಾಗಿ ಬಳಸುತ್ತಿದ್ದೇವೆ. ಈ ಲಿಂಗವ್ಯತ್ಯಾಸದ ಫಲವಾಗಿಯೇ ಸಾಮಾಜಿಕ ಸಂಸ್ಥೆಯಾದ ಕುಟುಂಬವು ರೂಪುಗೊಂಡಿದೆ. ಈ ಜೈವಿಕ ವ್ಯತ್ಯಾಸವು ಮನುಕುಲದ ವಿಕಾಸದಲ್ಲಿ ಅತ್ಯಂತ ಮಹತ್ತರ ಘಟ್ಟವಾಗಿದೆ. ಗಂಡು ಹೆಣ್ಣು ಎಂಬ ಪ್ರಭೇದದಲ್ಲಿ ದೈಹಿಕ, ಆಕಾರ, ಬಣ್ಣ, ಧ್ವನಿಗಳಿಂದ ಭಿನ್ನತೆ ಪರಸ್ಪರ ಲೈಂಗಿಕ ಆಕರ್ಷಣೆ ಇರುತ್ತದೆ. ಪ್ರಾಣಿಗಳಲ್ಲಿ ಲೈಂಗಿಕತೆಗೆ ಯಾವುದೇ ಕಟ್ಟುಪಾಡುಗಳಾಗಲೀ, ಆದರ್ಶಗಳಾಗಲೀ ಇಲ್ಲ. ಆದರೆ ಮನುಷ್ಯ ವರ್ಗದಲ್ಲಿ ನೈತಿಕ ಪ್ರಜ್ಞೆ ಸಂಬಂಧಗಳ ಪರಿಕಲ್ಪನೆ ಹಾಗೂ ಆದರ್ಶಗಳು ಸದಾ ಜಾಗೃತವಾಗಿರುತ್ತವೆ. ಗಂಡು ಸಹಜವಾಗಿ ದೈಹಿಕವಾಗಿ ಬಲಶಾಲಿಯಾಗಿರುತ್ತಾನೆ, ಆಕ್ರಮಣಕಾರಿ ಗುಣ ಹೊಂದಿರುತ್ತಾನೆ. ಹೆಣ್ಣು ಕೌಶಲ್ಯ, ಸೂಕ್ಷ್ಮತೆಗೆ ನಿದರ್ಶನವಾದರೆ, ಅದೇ ಗಂಡು ರೂಕ್ಷತೆಗೆ, ಸಾಹಸಕ್ಕೆ ನಿದರ್ಶನವಾಗಿರುತ್ತಾನೆ. ಹೆಣ್ಣಿಗೆ ಋತುಮತಿಯಾಗುವ ಕ್ರಿಯೆಯಿಂದ ಆಕೆಯಲ್ಲಿ ನಾಚಿಕೆ ಹಾಗೂ ಅಸಹಾಯಕತೆ ಕಾಡುತ್ತಿರುತ್ತದೆ. ಆದರೂ ಆಕೆ ಸಹನೆ ಮತ್ತು ತಾಳ್ಮೆಯಲ್ಲಿ, ಗಂಡಿಗಿಂತಲೂ ಮಿಗಿಲು. ಹೆಣ್ಣಿಗೆ ಫಲವಂತಿಕೆಯ ಶಕ್ತಿಯು ತಾಯಿಯಿಂದಲೂ, ಗಂಡಿಗೆ ಬೀಜದ ಶಕ್ತಿಯು ತಂದೆಯಿಂದಲೂ ಬರುತ್ತದೆ. ಹೀಗಾಗಿ ಇವರು ಮಾಡುವ ಕೆಲಸಗಳಲ್ಲೂ ಹೆಣ್ಣು ಗಂಡಿಗೆ ವ್ಯತ್ಯಾಸವಿರುತ್ತದೆ. ಹೆಣ್ಣು ಸದಾ ಮನೆಯ ಒಳಗೂ, ಗಂಡು ಮನೆಯ ಹೊರಗೂ ಶ್ರಮವಹಿಸುವುದು ಒಂದು ಸಾಮಾನ್ಯ ಸಂಗತಿ. ಹೆಣ್ಣಿನ ಸಮಸ್ಯೆಗಳೇ ಬೇರೆ, ಗಂಡಿನ ಸಮಸ್ಯೆಗಳೇ ಬೇರೆ. ಆದರೂ ಹೆಣ್ಣಿನ ಸಂಸ್ಕೃತಿಯು ಆಕೆಯ ಸಬಲತೆಯನ್ನು ಮತ್ತು ಒಳ್ಳೆಯತನವನ್ನು ಪ್ರತಿಪಾದಿಸುತ್ತದೆ. ಇದು ಆಕೆ ತಾಯಿಯಾಗಿ ಅನುಭವಿಸುವ ಸ್ಥಿತಿಯ ಹಿನ್ನೆಲೆಯಲ್ಲಿ ಕಾಣುವಂತಹುದು. ಆದರೆ

ಕಾಲಕ್ರಮೇಣ ಈ ರೀತಿಯ ಕೆಲಸ ಕಾರ್ಯಗಳ ನಿರ್ವಹಣೆಯಲ್ಲಿ ಅದಲು ಬದಲಾಗಿರುವುದೂ ಉಂಟು.

ತಾಯ್ತನದ ಹಂಬಲ: ಪ್ರಾಚೀನ ಕನ್ನಡ ಸಾಹಿತ್ಯದ ಉಲ್ಲೇಖಗಳು: ಹೆಣ್ಣು ತಾಯಿಯಾಗಬೇಕೆಂಬ ಹಂಬಲ ತಾಳುವುದು, ಮಗುವಿನ ಬಗ್ಗೆ ಕನಸು ಕಟ್ಟುವುದು, ಅದರ ಭವಿಷ್ಯದ ಬಗ್ಗೆ ಆಸೆ ತಾಳುವುದು, ಅದರ ಏಳ್ಗೆ ಯಶಸ್ಸಿನ ಬಗ್ಗೆ ಕಾಳಜಿ ವಹಿಸುವುದು, ಕುಟುಂಬದ ಕೀರ್ತಿಗೌರವಕ್ಕೆ ರಕ್ಷಕಳಾಗಿ ನಿಲ್ಲುವುದು ತಾಯ್ತನದ ಪ್ರಮುಖ ಗುಣಗಳಲ್ಲಿ ಕೆಲವು ಎನ್ನಬಹುದು. ಇಂತಹ ಗುಣ ವಿಶೇಷಗಳ ಸಂದರ್ಭಗಳು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಿಶೇಷವಾಗಿ ಕಂಡುಬರುತ್ತವೆ.

ತಾಯ್ತನಕ್ಕಾಗಿ ಆಸೆ ಪಟ್ಟು, ಮಗುವನ್ನು ಪಡೆಯುವುದಕ್ಕಾಗಿ ಅನೇಕ ರೀತಿಯ ಆಚರಣೆಗಳು ನಮ್ಮಲ್ಲಿ ರೂಢಿಯಲ್ಲಿದ್ದವು ಎಂಬುದಕ್ಕೆ ಉದಾಹರಣೆಯಾಗಿ ಪಂಪನ 'ಆದಿ ಪುರಾಣ'ದ ಪ್ರಸಂಗವನ್ನು ನೋಡಬಹುದು.

"ವ॥ ಅಂತು ವಜ್ರದಂತನ ವಜ್ರದಂತೆ ಪೊಳೆವ ದಂತಪಜ್ಞಾಗಳ ಕಾತಿಯಾ ಕಾಂತೆಯಂ ಪುದಿದು ಪುದುಂಗೊಳಿಸೆ ವಜ್ರದಂತೆನೆಂಬ ಪೆಸರಂ ನನ್ನೆ ಮಾಡಿ,

ಮಗಳೆ ಮನಸ್ತಮಂ ನಿನಗಿದೀಗಳೆ ಪಿಂಗುಗೆ ಕುಂಕುಮ ದ್ರವಂ
ನಗೆಮೊಗದೊಳ್ ಕನತ್ಕನಕಮೇಖಳೆ ಪೀನನಿತಂಬದೊಳ್ ಲಯಂ
ನೆಗಳ್ದಿರೆ ನೂಪುರಂ ಪದಪಯೋರುಹದೊಳ್ ನೆಲೆಗೊಳ್ಗೆ ಕೂಡುವೈ
ಬಗೆಗೊಳೆ ನಾಳೆ ನಾಡಿದು ಮಹೋತ್ಸವದಿಂ ನಿಜಜೀವಿತೇಶನೊಳ್

ವ॥ ಅದೆಂತೆಂದೊಡೆ ಮದೀಯ ಗುರುಗಳುಂ ತ್ರೈಲೋಕ್ಯಗುರುಗಳುಮಪ್ಪ ಯಶೋಧನ ಗುರುಗಳ ಕೇವಳ ಜ್ಞಾನೋತ್ಪತ್ತಿಯೊಸಗೆಯೊಳವಿಚಳಭಕ್ತಿಯೊಳೆನಗೆ ಪುಟ್ಟಿದವಧಿಜ್ಞಾನದೊಳೆನ್ನ ನನ್ನ ನಿನ್ನ ಕಾಂತನ ಜನ್ಮಾಂತರಂಗಳನನಂತರಿತಮನರಿದೆನಾ ಕಥಾಂತರ ಮನದ್ಯಂತಮನವಧಾರಿಸೆಂದುಮಿಂತೆಂದು ಪೇಳಲ್ತಗುಳ್ದಂ ಅನೀಭವಕ್ಕೈದನೆಯ ಭವದೊಳೀ ಪುಂಡರೀಕಿಣಿಯೊಳ್ ಕೇಶವಮಹೀಶಂಗೆ ಚಂದ್ರಕೀರ್ತಿಯೆಂಬ ಮಗನಾಗಿ ಜಯಕೀರ್ತಿಯೆಂಬ ಕೆಳೆಯನು ಮಾನುಮೊಡವಳೆದು ಗೃಹೀತಾಣುವ್ರತನೇಂ ಗೃಹಸ್ಥಧರ್ಮಕ್ರಮದೊಳ್ ಮದೀಯವಯಸ್ಯಾನುಮಾನುಂ ನೆಗಳ್ದು ಜೀವಿತಾಂತ್ಯದೊಳ್ ಪ್ರೀತಿವರ್ಧನೋಧ್ಯಾನದೊಳ್ ಚಂದ್ರಸೇನಾಚಾರ್ಯರ ಶ್ರೀಪಾದಪದ್ಮಪಾರ್ಶ್ವದೊಳ್ ಸನ್ಯಾಸನಿವಿಧಿಯೊಳ್ ಪರಿತ್ಯಕ್ತಾಹಾರಶರೀರನೆಂ ಸಮಾಧಿವಡೆದು ಮಹೇಂದ್ರಕಲ್ಪದೊಳ್ ಸಪ್ತಸಾಗರೋಪಮ ಪ್ರಮಿತಜೀವಿತನೇಂ ಸಾಮಾನಿಕ ದೇವನಾಗಿ ಪುಟ್ಟಿದೆಂ. ಜಯಕೀರ್ತಿಯುಮಾತ್ಮೀಯ ವಿಭವಸದೃಶ್ಯನಾಗಿ ತತ್ಕಲ್ಪದೊಳ್ ಪುಟ್ಟಿದಂ, ಅಂತಿರ್ವರುಂ ಅಮರಾಂಗನಾಪಾಂಗ ವಿಲೋಕನಸುಖಮನನುಭವಿಸಿ ಬಂದು ಪುಷ್ಕರವರದ್ವೀಪದ ಮೂಡಣ ಮಂದರದ ಪೂರ್ವವಿದೇಹದ ಮಂಗಳಾವತೀವಿಷಯದ ರತ್ನಸಂಚೆಯಪುರಾಧಿಪಂ ಶ್ರೀಧರಂಗಮಾತನ ಮನೋಹರಿ ಮನೋಹರಿಗಂ ಶ್ರೀವರ್ಮನುಂ ವಿಭೀಷಣನುಮೆಂಬ ಪಸರೊಳ್ ಬಲದೇವ ವಾಸುದೇವರಾಗಿ ಬಳೆಯೆ ಮದೀಯ ಜನಕನೆಮ್ಮಿರ್ವರುಮನಧಿರಾಜಯುವರಾಜ ಪದವಿಯೊಳ್ ನಿರಿಸಿ,

ಅಳಿವಂ ಮೆರೆದೆರಡರಿಯದ
ತರಿಸಲವಮರ್ದಿರೆ ಸುಧರ್ಮಮುನಿಪದಪದ್ಮ
ಕ್ಕೆರಗಿ ಜಿನರೂಪಮೆಂಬೊಂ
ದರಿ ವಿಡಿದಘಬಲಮನಲೆದು ಶಿಲೆಯೊಳ್ ಪೊಯ್ದಂ.

ವ॥ ಎಮ್ಮತಾಯ್ ಮನೋಹರಿಯುಂ ಎಮ್ಮೊಳಪ್ಪ ಮೋಹಂಕಾರಣಮಾಗಿ ತಪಮಂ ಕೈಗೊಳ್ಳದೆ ಸಕಳ ಶ್ರಾವಕ ವ್ರತಂಗಳನೆ ಕೈಕೊಂಡು, ಪಲವುಂ ತೆರದನೋಂಪಿಗಳಂನೋಂತು ಜೀವಿತಾಂತದೊಳ್ ಈಶಾನಕಲ್ಪದೊಳ್ ಶ್ರೀಪ್ರಭವಿಮಾನದೊಳ್ ಲಲಿತಾಂಗದೇವನಾದಳ್. ಅನ್ನೆಗಮಿತ್ತನಿಧಾನಮಂ ತೋರಿ ಕಣ್ಣಂ ಕಳೆವಳಂತೆ".[೬]

ಇದೇ ರೀತಿ ನೇಮಿನಾಥ ಪುರಾಣ (೧ - ೧೨೯), ಲೀಲಾವತಿ ಪ್ರಬಂಧ (೭ - ೩೬, ೩೭), ಗಿರಿಜಾ ಕಲ್ಯಾಣ (೩ - ೭, ೮) ಚಾವುಂಡರಾಯ ಪುರಾಣ, ಹರಿವಂಶಾಭ್ಯುದಯ, ಕರ್ನಾಟಕ ಕಾದಂಬರಿ ಇತ್ಯಾದಿ ಕೃತಿಗಳಲ್ಲಿ ಕಂಡುಬರುತ್ತದೆ.

ಗರ್ಭಿಣಿ ಬಯಕೆ, ಗರ್ಭಿಣಿಯರ ಚಿತ್ರಣ, ಬಾಣಂತಿಯರ ಬಯಕೆ ಹಾಗೂ ಅವರ ಜೀವನ ಶೈಲಿಯನ್ನು ನಮ್ಮ ಪ್ರಾಚೀನ ಕೃತಿಗಳು ಒಳಗೊಂಡಿವೆ. ತಾಯಿ - ಮಗನ ಸಂಬಂಧದ ಕುರಿತಂತೆ ಪ್ರಾಚೀನ ಕನ್ನಡ ಕವಿಗಳು ವಿಸ್ತೃತವಾಗಿ ವರ್ಣಿಸಿದ್ದಾರೆ. ಪ್ರಾಚೀನ ಕನ್ನಡ ಕಾವ್ಯಗಳು ನಾಯಕ ಕೇಂದ್ರಿತ ಕೃತಿಗಳಾಗಿರುವುದರಿಂದ ನಾಯಕನ ತಾಯಿಗೆ ಅವನ ಹೆಂಡತಿಯ ಅನಂತರದ ಸ್ಥಾನವೂ ದೊರೆತಿದೆ. 'ವಡ್ಡಾರಾಧನೆ'ಯ 'ಸುಕುಮಾರಸ್ವಾಮಿಯ ಕತೆ'ಯಲ್ಲಿ ಸುಕುಮಾರ ಸ್ವಾಮಿಯು, ಎಂದು ಋಷಿಗಳ ರೂಪವನ್ನು ಕಾಣುವನೋ ಅಂದೇ ತಪಸ್ಸಿಗೆ ತೆರಳುವನು, ಎಂದು ಜೋಯಿಸರು ಹೇಳಲು ಅವನ ತಾಯಿ ಯಶೋಭದ್ರೆ ಋಷಿಯನ್ನು ಕಾಣದಂತೆ ಕಾಪಿನವರನ್ನು ಬಾಗಿಲು ಬಳಿಯಲ್ಲಿ ನಿಲ್ಲಿಸುತ್ತಾಳೆ. (ವಡ್ಡಾರಾಧನೆ - ಸುಕುಮಾರಸ್ವಾಮಿ ಕತೆ, ಪುಟ: ೫೭). ಪಂಪನ ಆದಿಪುರಾಣದಲ್ಲಿ ಲಲಿತಾಂಗನ ಭವವನ್ನು ವಿವರಿಸುವಾಗ ಈ ರೀತಿ ಬರುತ್ತದೆ: 'ಎಮ್ಮ ತಾಯ್ ಮನೋಹರಿಯು ಎಮ್ಮೊಳಪ್ಪ ಮೋಹಂ ಕಾರಣವಾಗಿ ತಪಂ ಕೈಗೊಳ್ಳದೆ - ಸರಳ ಶ್ರಾವಕ ವ್ರತಂಗಳನೆ ಕೈಗೊಂಡು' (೩ - ೫೦ವರೆಗೆ) ಹಾಗೆಯೇ ಜನನೀ ಸಂಬಂಧ ಮೋಹವು ಜನ್ಮಾಂತರಗಳಲ್ಲಿಯು ಬರುತ್ತದೆ ಎಂದು ಈ ಕೃತಿಯಲ್ಲಿ ಹೇಳಲಾಗಿದೆ. (೩ - ೫೧ವ)

ಪಂಪನ 'ವಿಕ್ರಮಾರ್ಜುನ ವಿಜಯ'ದಲ್ಲಿ ಸತ್ಯವತಿ ಮತ್ತು ಪರಾಶರರ ಕೂಡುವಿಕೆಯಿಂದ ಉಂಟಾದ ಮಗುವನ್ನು ತಂದೆಯು ಕರೆದುಕೊಂಡು ಹೋಗುತ್ತಾನೆ.

"ಮನದೊಳ್ ಸೋಲ್ತು ಮುನೀಂದ್ರನಾಕೆಯೊಡಲೀ ದುರ್ಗಂಧಮೋಪಂತೆ ಯೋ
ಜನ ಗಂಧಿತ್ವಮನಿತ್ತು ಕಾಂಡ ಪಟದಂತಿರ್ಪನ್ನೆಗಂ ಮಾಡಿಯಂ।
ಜನಲಂಪಳ್ಕರನೀಯೆ ಕೂಡುವೆಡೆಯೊಳ್ ಜ್ಞಾನಸ್ವರೂಪಂ ಮಹಾ
ಮುನಿಪಂ ಪುಟ್ಟಿದನಂತು ದಿವ್ಯ ಮುನಿಗಳ್ಗೇಗೆಯ್ದೊಡಂ ತೀರದೇ॥

ವ॥ ಅಂತು ನೀಲಾಂಬುದ ಶ್ಯಾಮನುಂ ಕನಕಪಿಂಗಳ ಜಟಾಬಂಧಕಳಾಪನುಂದಂಡ (ಕಪಾಳ) ಹಸ್ತನುಂಕೃಷ್ಣಮೃಗ (ತ್ವಕ್ಷ) ರಿಧಾನನುಮಾಗೆ ವ್ಯಾಸಭಟ್ಟಾರಕಂ ಪುಟ್ಟುವುದು ಮಾತನನೊಡಗೊಂಡು ಸತ್ಯವತಿಗೆ ಪುನಃ ಕನ್ಯಾಭಾವಮಂ ದಯೆಗೆಯ್ದು ಪರಾಶರಂಪೋದ ನಿತ್ತಲ್"[೭].

ಕರ್ನಾಟಕ ಕಾದಂಬರಿಯಲ್ಲಿ ತಾಯಿಯಾದ ವಿಲಾಸವತಿಗೆ ಮಗನಾದ ಚಂದ್ರಪೀಡನನ್ನು ಕಂಡಾಗ, ಆಕೆಗೆ ಪ್ರೀತಿಯಿಂದ ಮೊಲೆಯಾಲು ಬರುತ್ತದೆ :

"ವಿಸಸನದೊಳ್ ವಿರೋಧಿ ನೃಪರಂ ತರಿದೊಟ್ಟಲುಮರ್ಥಿಗರ್ಥಮಂ
ಕಸವಿನ ಲೆಕ್ಕಮೆಂದು ಕುಡಲುಂ ವಿಪುಳಾಯತಿಯಂ ದಿಗಂತದೊಳ್
ಪಸರಿಸಲು ಕರಂ ನೆರೆವ ಮಕ್ಕಳನೀಯದೆ ನೋಡೆ ನಾಡೆ ನೋ
ಯಿಸಿದಮದಿಕ್ಕು ಪುಷ್ಪದವೊಲೆನ್ನಯ ನಿಷ್ಫಲ ಪುಷ್ಪದರ್ಶನಂ

ವ॥ ಅಂತಿರ್ದಳಂ ಗೆಂಟಿನೊಳ್ ಕಂಡು ವಿನಯರತ್ನಾಕರಂ ಸಾಷ್ಟಾಂಗ ಪ್ರಣತನಾಗೆ.

ಅರಸಿ ನಲವರಕೆಯಿಂದಂ
ಪರಸುತ್ತಿಂದೆನ್ನ ತಂದೆಬಂದನೆನುತ್ತಂ
ತೊರೆದೆನಸುಂ ಮೊಲೆವಾಲುಗು
ತರೆ ತನಯನನಳ್ಕರಿಂದವಪ್ಪಿದಳಾಗಳ್".[೮]

ಮಗನನ್ನು ಆಕೆಯು ಹರಸುತ್ತಾಳೆ (೩ – ೪೧) ಈ ಸನ್ನಿವೇಶವನ್ನು ಬಾಣನು, 'ವಿದ್ಯಾಭ್ಯಾಸವನ್ನು ಪೂರೈಸಿಬಂದ ಚಂದ್ರಪೀಡನನ್ನು ವಿಲಾಸವತಿ ಅಪ್ಪಿಕೊಂಡು, ಬಲತ್ಕಾರದಿಂದ ತೊಡೆಯಮೇಲೆ ಕುಳ್ಳರಿಸಿಕೊಂಡಳೆಂದು ವರ್ಣಿಸುತ್ತಾನೆ (ಸಿ.ಪಿ.ಕೆ, ೧೯೭೬, ಪುಟ:೨೦೧) ಮಗುವಿನ ರಕ್ಷಣೆಗಾಗಿ ತಾಯಿಯು ಸಹಗಮನ ಮಾಡುವುದಿಲ್ಲ ಎನ್ನುವ ಚಿತ್ರಣವು 'ಅಜಿತ ತೀರ್ಥಂಕರ ಪುರಾಣ ತಿಲಕಂ' ದಲ್ಲಿ ಬರುತ್ತದೆ (೧ – ೪೭).

'ಧರ್ಮಾಮೃತ'ದಲ್ಲಿ ಗಂಡುಮಕ್ಕಳ ಮೇಲೆಯೇ ತಾಯಿಗೆ ಮಮತೆ ಹೆಚ್ಚೆಂಬುದು ಕಂಡುಬರುತ್ತದೆ (೯ – ೩). ನಾಗಚಂದ್ರನ 'ಮಲ್ಲಿನಾಥ ಪುರಾಣ'ದಲ್ಲಿ ತಾಯ್ತನವು ಅಗ್ರಮಹಿಷಿ ಪದವನ್ನು ಒದಗಿಸುತ್ತದೆ. ತಾಯ್ತನವಿಲ್ಲದಿದ್ದರೆ ಸವತಿಯರ ಕೇಡುಮಾತಿಗೆ ಗುರಿಯಾಗಬೇಕು ಎಂದು ಚಿಂತಿಸುವ ಹೆಣ್ಣಿನ ಚಿತ್ರಣವಿದೆ (೩ – ೮೬ ವ); ಹೆತ್ತ ಮಗುವಿಗೆ ಮೊಲೆಯೂಡಿಸುವುದು ತನ್ನ ತಾಯ್ತನದ ಭಾಗ್ಯವೆಂದು ಭಾವಿಸಿಕೊಳ್ಳುವ ಹೆಣ್ಣಿನ ಚಿತ್ರಣವು 'ಜಗನ್ನಾಥ ವಿಜಯ'ದಲ್ಲಿ ಬರುತ್ತದೆ (೫ – ೮೪), ಜನ್ನನ 'ಯಶೋಧರ ಚರಿತೆ'ಯಲ್ಲಿ ಗಂಡೊಬ್ಬನ ಜೀವನದಲ್ಲಿ ಹೆಂಡತಿ ಮತ್ತು ತಾಯಿ ಗಾಢವಾದ ಪ್ರಭಾವವನ್ನು ಬೀರುತ್ತಾರೆ ಎನ್ನುವ ಚಿತ್ರಣವು ಕಂಡುಬರುತ್ತದೆ. ತನ್ನ ಹೆಂಡತಿಯ ಅನೀತಿಯುತ ವ್ಯವಹಾರ ಕಂಡ ರಾಜನು 'ತಾಯ ಪೊರೆಗೆ' ಹೋಗುತ್ತಾನೆ (೨ – ೭೦). ಪ್ರಾಯಕ್ಕೆ ಬಂದ ಮಗನಾದರೂ ತಾಯಿಯು ಮಗನನ್ನು ಅಪ್ಪುತ್ತಾಳೆ. ತಾಯಿಯಲ್ಲಿ ಮಗನು ತನ್ನ ಕೆಟ್ಟ ಕನಸುಗಳಿಗೆ ಪರಿಹಾರ ಕೇಳುತ್ತಾನೆ (ಅದೇ, ಪುಟ: ೩

– ೮). ಕೆಟ್ಟ ಕನಸು ಕಂಡರೆ ಚಂಡಿಕಾದೇವಿಯ ಪೂಜೆಯೇ ಪರಿಹಾರ ಎಂದು ತಾಯಿ ಸೂಚಿಸುತ್ತಾಳೆ (೩ – ೧೭). ಮಗನ ಉನ್ನತಿ ಅಥವ ಅವನತಿಗೆ ತಾಯಿಯೇ ಕಾರಣಳಾಗುತ್ತಾಳೆ (೩ – ೨೧) ಎಂಬ ಕಲ್ಪನೆಗಳು ಕಂಡು ಬರುತ್ತವೆ. ಈ ಸಂದರ್ಭಗಳು ಆ ಕಾಲದ ತಾತ್ವಿಕತೆಯನ್ನು ಬಿಂಬಿಸುತ್ತವೆ. ತಾಯಿಯಾಗುವುದು ಹೆಣ್ಣಿನ ಜೀವನದ ಪವಿತ್ರ ಘಟ್ಟವೂ ಹೌದು, ಗಂಡಿನ ಅಭಿಲಾಷೆಯೂ ಹೌದು. ಮನೆತನದ ಹಿರಿಮೆಗೆ ವಂಶಾಭಿವೃದ್ಧಿಗೆ ಸಂತಾನಾಪೇಕ್ಷೆ ಪ್ರಮುಖವಾಗಿತ್ತು. ಅದನ್ನು ಧಾಮಿಕ ಚೌಕಟ್ಟಿನಲ್ಲೂ ಗ್ರಹಿಸುವ ಪರಿ ಕಂಡುಬರುತ್ತದೆ.

ಎಲ್ಲ ಮಕ್ಕಳು ತಾಯಿಯಿಂದ ಆಕರ್ಷಿತವಾಗುತ್ತಾರೆ. ಏಕೆಂದರೆ ತಾಯಿಯು ಮಗುವಿನ ಬೆಳವಣಿಗೆಯ ಮೊದಲ ರಕ್ಷಕಿಯಾಗಿರುತ್ತಾಳೆ. ಇಂತಹ ಸಂದರ್ಭದಲ್ಲಿ ತಾಯ್ತನವು ಕೂಡ ಭಾವನಾತ್ಮಕ ಸಂಗತಿಗಳಿಂದ ಪ್ರೇರಿತವಾಗುವುದು ಸಹಜವಾದದ್ದು. ಹೀಗಾಗಿ ತಾಯಿ – ಮಗುವಿನ ಸಂಬಂಧವು ನಿರ್ದಿಷ್ಟ ಗುರಿ ಉಳ್ಳದ್ದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಜನ್ನನ 'ಯಶೋಧರ ಚರಿತೆ'ಯಲ್ಲಿ ಚಿತ್ರಿವಾಗಿರುವ ವಿಷಯವನ್ನು ಗಮನಿಸಬಹುದು.

ದೇವಿಯರ ಪರಕೆಯಿಂದೆನ
ಗಾವುದರೊಳ್ ಕೊರತೆಯಿಲ್ಲ ಪೋದಿರುಳೊಳ್ ಪೊಂ
ದಾವರೆಗೊಳದಂಚೆ ಕಳ
ಲ್ದಾವರೆಗೊಳದೊಳಗೆ ನಲಿವ ಕನಸಂ ಕಂಡೆಂ

ಆ ನೃಪತಿ ಬಳಿಕ ತಾಯಂ
ತಾನುಂ ಚಂಡಿಕೆಯ ಪೂಜೆಗೆಂದೆಳ್ತಂದಂ
ನಾನಾ ವಿಧದರ್ಚನೆಯಿಂ
ಮನೋಮಿಯ ಮುಂದೆ ಬಂದ ಭೌಮಾಷ್ಟಮಿಯೊಳ್

ಇಲ್ಲಿ ಹೆಣ್ಣಿನ ಎರಡು ಮುಖ ಸ್ಪಷ್ಟವಾಗಿ ಪ್ರತಿಫಲಿತವಾಗಿದೆ. ಒಂದು, ಹೆಂಡತಿಯಾಗಿ ಅದು ಹೆಣ್ಣಿನ ನೈತಿಕ ಅವನತಿಯನ್ನು ಸೂಚಿಸಿದರೆ; ಇನ್ನೊಂದು ತಾಯಿಯಾಗಿ ಗಾಢತೆಯ ಸಂಬಂಧವನ್ನು ಸೂಚಿಸುತ್ತದೆ. ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲಿ ಗಂಡನು ಸತಿ, ಸುತರನ್ನು ಬೇರ್ಪಡಿಸಲು ಇಷ್ಟಪಡುವುದಿಲ್ಲ. ಮಗನು ಮನೆಗೆ ಬರುವ ವೇಳೆಗೆ ಬರದಿದ್ದರೆ ತಾಯಿ ಪಡುವ ಆತಂಕ ಹೇಳಲಸದಳವಾದುದ್ದು:

ತನಯನೆಂದುಂ ಬಪ್ಪಹೊತ್ತಿಂಗೆ ಬಾರದಿರೆ
ಮನನೊಂದಿದೇಕೆ ತಳುವಿದನೆನ್ನಕಂದನೆಂ
ದೆನುತ ಸುಯ್ಯುತ್ತ ಮರುಗುತ್ತ ಬಸುರಂ ಹೊಸೆದು ಕೊಸೆವೆರಮುರಿಕೊಳುತ
ತನುವ ಮರೆದಡಿಗಡಿಗೆ ಹೊರಗನಾಲಿಸಿ ಮತ್ತೆ
ಮನೆಯೊಡತಿಗಂಜಿ ಕೆಲಸವನು ಮಾಡುತ್ತಿಪ್ಪ
ವನಿತೆಗಾದಾಪತ್ತನಾಲಿಸದೆ ಕೆಟ್ಟು ದಟ್ಟಿಸುವರದನೇನೆಂಬೆನು[೨೦]

ಮಗನು ಸತ್ತರೆ ಹಡೆದೊಡಲು ಹುಡಿಯಾಯ್ತು ಎಂದು ಭಾವಿಸುತ್ತಾಳೆ. ತನ್ನ ಕಷ್ಟವನ್ನು ಮಗುವಿನ ಎದುರು ಮರೆಯುತ್ತಾಳೆ (೧೨ – ೩೮). ತನ್ನ ಗಂಡನಿಗೆ ಕೀರ್ತಿ

ತರುವ ಮಗನು ಬೇಕೆಂದು ತಾಯಿಯು ಅರಸುತ್ತಾಳೆ (ಸೋಮನಾಥ ಚರಿತೆ – ೧ – ೭೮).

ಷಡಕ್ಷರ ದೇವನ 'ರಾಜಶೇಖರ ವಿಳಾಸ'ದ ತಿರುಕುಳವಿನಾಚಿ ಪ್ರಸಂಗದಲ್ಲಿ ಇದೇ ರೀತಿಯ ಮಾತೃವಾತ್ಸಲ್ಯದ ತೀವ್ರತೆ ಕಂಡುಬರುತ್ತದೆ:

ಕರಿಗಳ ಕಾಲ್ಗೊಳಗಾದನೊ
ವರೂಥಚಕ್ರಕ್ಕೆ ಸಿಲ್ಕಿದನೊ ಹಯಚಂಚ
ತ್ಖುರಹತಿಯಿಂದಿಳಿದನೊ ಶಂ
ಕರನಕಟಕಟೆಂದು ಬಗೆದು ಬಾಯ್ಬಿಡುತಿರ್ದಳ್.

ಚಂ॥ ಎಳೆಗಿಳಿಯಂ ಕೊರಲ್ಮುರಿದು ಮೋದಿದರಾರ್ ಮರಿಯಂಚೆಯಂ ಭಯಂ
ಗೊಳಿಸುತೆರಂಕೆಯಂ ಪರಿದು ಪೊಯ್ದವರಾರ್ ಮೃಗಶಾಬಮಂ ಕರಂ
ಮುಳಿದು ಶಿರೋಧಿಯಂ ಕೆಡೆಯಲೆಚ್ಚವರಾರ್ ಬಿಸನಾಳಕಾಂಡ ಕೋ
ಮಳತರಕಂಠಮಂ ಕಡಿದುರುಳ್ಚಿದರಾರ್ ಸುಕುಮಾರ ಶೇಖರಾ.

ಹಾ ಮಗನೆ ಹಾ ಮನೋಜ್ಞನೆ
ಹಾ ಮುದ್ದುಗ ಹಾ ಮದೇಭಗತಿ ಮಂಜುಳ ಹಾ
ಹಾ ಮಧುರವಾಣಿ ಹಾ ಮ
ತ್ಪ್ರೇಮಾಸ್ಪದ ಹಾ ಮದೀಯ ವಂಶಲಲಾಮಾ.[೧೧]

ಈ ಮೇಲಿನ ಚಿತ್ರಣಗಳ ಮೂಲಕ ಕನ್ನಡ ಪ್ರಾಚೀನ ಸಾಹಿತ್ಯದಲ್ಲಿ ಬಂದಿರುವ 'ತಾಯ್ತನ'ದ ಪರಿಕಲ್ಪನೆಯನ್ನು ವಿವೇಚಿಸಬಹುದಾಗಿದೆ. ತಾಯಿ ತನ್ನ ಕರುಳಕುಡಿಯ ಬಗ್ಗೆ ತಾಳುವ ಕಾಳಜಿ ಅಪಾರ. ತನ್ನ ಒಡಲಕುಡಿ ತನ್ನ ಅಂತಃಕರಣದ ಅಂಗಳದಲ್ಲಿ ಬೆಳೆಯಬೇಕು. ಅದಕ್ಕೇನಾದರೂ ಪ್ರತಿಕೂಲ ಪರಿಸ್ಥಿತಿ ಎದುರಾದಾಗ ಅದು ತನಗಾದ ಪ್ರತಿಕೂಲ ಪರಿಸ್ಥಿತಿ ಎಂದು ಭಾವಿಸಿ ಸಂಕಟ ಪಡುವುದು ತಂದೆಗಿಂತ ತಾಯಿಯಲ್ಲಿ ಹೆಚ್ಚು ಕಂಡುಬರುತ್ತದೆ. ಭ್ರೂಣಾವಸ್ಥೆಯಿಂದಲೂ ಅದರೊಂದಿಗೆ ತಾನು ಏರ್ಪಡಿಸಿಕೊಳ್ಳುವ ತಾಧ್ಯಾತ್ಮ ಭಾವನೆ ಇದಾಗಿದೆ.

ಸಾಮಾನ್ಯವಾಗಿ ತಾಯ್ತನ ಎನ್ನುವುದು ಎರಡು ಹಂತಗಳಲ್ಲಿ ಕೆಲಸ ಮಾಡುತ್ತದೆ: ೧. ವೈಯಕ್ತಿಕ ಹಂತ, ೨. ಸಾಂಸ್ಕೃತಿಕ ಹಂತ.

೧. ವೈಯಕ್ತಿಕ ಹಂತ: ಈ ಹಂತದಲ್ಲಿ ಮಗುವನ್ನು ಹಡೆಯುವುದು, ಅದರ ಲಾಲನೆ ಪಾಲನೆಯಲ್ಲಿ ತೊಡಗುವುದು, ಅದರ ಗುಣನಡತೆ ಬೆಳೆಸುವುದು ಸಾಮಾನ್ಯವಾಗಿರುತ್ತದೆ. ಈ ಹಂತದಲ್ಲಿ ತಾಯಿಗೆ ಮಗುವಿನ ಮೇಲೆ ಅಕ್ಕರೆ ಮಮತೆಗಳು ಬೆಳೆಯುತ್ತವೆ. ತಾಯಿಯ ಮೂಲಕವೇ ಮಗು ನಡೆನುಡಿಗಳನ್ನು ಕಲಿಯುತ್ತದೆ. ಸಾಮಾಜಿಕ ವ್ಯವಹಾರವನ್ನೂ ಕೂಡ ತಾಯಿಯ ಮೂಲಕವೇ ಮಗುವು ಸ್ವೀಕರಿಸುತ್ತದೆ. ಮಗುವಿನ ವ್ಯಕ್ತಿತ್ವದ ನಿರ್ಮಾಣದಲ್ಲಿ ತಾಯಿಯ ಪಾತ್ರ ಈ ಕಾರಣದಿಂದ ಮಹತ್ತರದ್ದಾಗಿದೆ.

೨. ಸಾಂಸ್ಕೃತಿಕ ಹಂತ: ಇದು ಸಂಘಟನಾತ್ಮಕ ನೆಲೆಯಾದ ಸಮಷ್ಟಿ ಹಂತದಲ್ಲಿ ಕುಟುಂಬದ ವ್ಯವಸ್ಥೆಯನ್ನು ತಾಯಿಯು ನೋಡಿಕೊಳ್ಳುವ ಹಂತ. ಇಲ್ಲಿ ತಾಯಿಯು ಕುಟುಂಬದ ಸ್ವರೂಪಕ್ಕೆ ಅನುಗುಣವಾಗಿ ತನ್ನ ನಡತೆಗಳನ್ನು ಅಳವಡಿಸಿಕೊಳ್ಳುತ್ತಾಳೆ. ತನ್ನ ಗಂಡನಿಗೆ ಹೆಂಡತಿಯಾಗಿ, ಮೈದುನರಿಗೆ ಅತ್ತಿಗೆಯಾಗಿ, ಅತ್ತೆಗೆ ಸೊಸೆಯಾಗಿ, ಮಕ್ಕಳಿಗೆ ತಾಯಿಯಾಗಿ ಮತ್ತು ಕುಟುಂಬದ ಒಬ್ಬ ಸದಸ್ಯೆಯಾಗಿ ತನ್ನನ್ನು ರೂಪಿಸಿಕೊಳ್ಳುತ್ತಾಳೆ. ಹಾಗೆ ನೋಡುವುದಿದ್ದರೆ ಇದು ತಾಯ್ತನದ ಸಂಕೀರ್ಣವಾದ ಸ್ಥಿತಿಯೂ ಕೂಡ ಆಗಿರುತ್ತದೆ. ಮತ್ತು ಸಾಮಾಜಿಕ ಅವಸ್ಥಾಂತರಗಳು ಬದಲಾದಂತೆ ಕುಟುಂಬದ ರೂಪವೂ ಬದಲಾಗುತ್ತದೆ. ಇದಕ್ಕನುಗುಣವಾಗಿ ತಾಯಿಯ ಮನೋಧರ್ಮವೂ ಬದಲಾಗಬೇಕಾಗುತ್ತದೆ. ಈ ಹಿನ್ನೆಲೆಯಿಂದ ಚರ್ಚಿಸುವುದಾದರೆ, ಮಗುವಿಗೆ ತಾಯಿಯಾಗಿ ಅವಳು ಕಾರ್ಯನಿರ್ವಹಿಸುವಂತೆ; ಕುಟುಂಬದ ಸದಸ್ಯಳಾಗಿ ಅವಳು ನಿರ್ವಹಿಸುವ ಕಾರ್ಯಗಳೂ ಕೂಡ ತಾಯ್ತನದ ಸೊಗಡಿನಿಂದ ಕೂಡಿರುತ್ತವೆ.

ತಾಯಿ ಆರಾಧನೆ: ಅಂದಿನಿಂದ ಇಂದಿನವರೆಗೆ: ಎಲ್ಲ ಕಾಲಘಟ್ಟಗಳಲ್ಲೂ ತಾಯಿಯನ್ನು ಸ್ಮರಿಸುವ ಮನೋಧರ್ಮದ ಕವಿಗಳು ಕಂಡು ಬರುತ್ತಾರೆ. ಇದಕ್ಕೆ ತಾತ್ವಿಕ ಕಾರಣಗಳನ್ನು ಹುಡುಕಬಹುದು. ಜಗತ್ತಿನ ಎಲ್ಲ ಭಾಷೆ, ಧರ್ಮದಲ್ಲೂ ಕೂಡ ತಾಯಿ ಬಗ್ಗೆ ಒಂದು ಸ್ಪಷ್ಟತೆ ಇದೆ. ಆಕೆಯ ಬಗ್ಗೆ ಗೌರವ ಕೃತಜ್ಞತೆ ಇದೆ. ಆಕೆ ತನ್ನ ಒಡಲಲ್ಲಿ ಒಂಬತ್ತು ತಿಂಗಳು ಹೊತ್ತು, ಹೆತ್ತು, ಹಾಲುಣಿಸಿ, ಪೋಷಿಸುವ ಕ್ರಿಯೆಯಲ್ಲಿ ಯಾವ ಬದಲಾವಣೆಯೂ ಇಲ್ಲ. ಇದು ಮಗು ಮತ್ತು ತಾಯಿಯ ಸಂಬಂಧ ಕರುಳುಬಳ್ಳಿ ಸಂಬಂಧವಾಗಿರುವಂತಹದು. ಆ ರೀತಿ ಒಂದು ಮಗುವಿನ ಲಾಲನೆಪಾಲನೆಯಲ್ಲಿ ತಾಯಿಯಾದವಳು ತೋರಿಸುವ ಪ್ರೀತಿ, ಕಾಳಜಿಗೆ ಪರ್ಯಾಯವಾದದ್ದು ಬೇರೊಂದಿಲ್ಲ. ಒಡಲ ಸಂಬಂಧದಿಂದ ಪ್ರಾರಂಭವಾದ ತಾಯಿ ಮಗುವಿನ ಸಂಬಂಧ ಕಾಲಾನುಕ್ರಮದಲ್ಲಿ ಗಟ್ಟಿಯಾಗುತ್ತಾ ಹೋಗುತ್ತದೆ. ಅವಿನಾಭಾವ ಸಂಬಂಧದೊಂದಿಗೆ ಬೆಳೆಯುತ್ತದೆ. ಮಗುವಿಗೆ ಮೊದಲು ತಾಯಿಯಾಗಿ ನಂತರ ಮೊದಲ ಗುರುವಾಗಿ ನಿಲ್ಲುವ ಮಹಿಳೆ ತನ್ನ ಪರಿಸರವನ್ನು, ಮಾನವೀಯ ಸಂಬಂಧಗಳನ್ನು, ಸಾಂಸ್ಕೃತಿಕ ಹಿರಿಮೆಯನ್ನು ಹಂತಹಂತವಾಗಿ ಮಗುವಿಗೆ ಮನವರಿಕೆ ಮಾಡಿಕೊಡುತ್ತಾಳೆ. ಆ ಮಗುವಿನ ಭವಿಷ್ಯದ ಬಗ್ಗೆ ಕನಸು ಕಟ್ಟುತ್ತಾಳೆ. ಆ ಮಗುವಿನ ಯಶಸ್ಸಿಗೆ ತನ್ನನ್ನೇ ತಾನು ತೆತ್ತುಕೊಳ್ಳುತ್ತಾಳೆ. ಜಾತಿ, ಮತ, ಧರ್ಮ, ಭಾಷೆ, ಪ್ರಾಂತ್ಯಗಳ ಸೀಮೋಲ್ಲಂಘನದೊಂದಿಗೆ ತಾಯಿ ಮಗುವಿನ ಸಂಬಂಧ ಗೊಮ್ಮಟ ಸದೃಶವಾಗಿ ಬೆಳೆದು ನಿಲ್ಲುತ್ತದೆ. ಇಂಥ ಅಕ್ಕರೆಯ ಹಾಲುಂಡು, ದರ್ಶನದ ನೀತಿ ಕಲಿತು, ಭವಿಷ್ಯದ ಕತೆ ಕೇಳಿದ ಮಗುವಿಗೆ ತಾಯಿಯ ಬಗ್ಗೆ ಬಿಡಿಸಿಕೊಳ್ಳಲಾರದ ಸಂಬಂಧವೇರ್ಪಟ್ಟು ದೃಢವಾಗುವುದು ಲೋಕ ವ್ಯವಹಾರವಾಗಿದೆ. ಹಾಗಾಗಿ ಜಗತ್ತಿನ ಯಾವುದೇ ವ್ಯಕ್ತಿಗೂ ತನ್ನ ತಾಯಿಯ ಬಗ್ಗೆ ಪ್ರೀತಿ, ಗೌರವ ಇದ್ದೇ ಇರುತ್ತದೆ. ತಾಯಿಯನ್ನು ಕುರಿತ ಸಾಹಿತ್ಯಕ್ಕೆ ಕೊರತೆಯೇ ಇಲ್ಲದಂತೆ ಬೆಳೆದಿರುವುದು ಈ ಕಾರಣದಿಂದಾಗಿ. ಕಥೆ, ಕಾದಂಬರಿ, ಕಾವ್ಯ, ನಾಟಕ, ಕವಿತೆಗಳಲ್ಲಿ ತಾಯಿ ಮಗುವಿನ ಸಂಬಂಧದ ಚಿತ್ರಗಳಿಗೆ ಕೊರತೆಯೇ ಇಲ್ಲ. ಇದಕ್ಕೆ ನಿದರ್ಶನವಾಗಿ ನಮ್ಮ ಪ್ರಾಚೀನ ಸಾಹಿತ್ಯದಿಂದ ಹಿಡಿದು ಪಾಶ್ಚಾತ್ಯ ಸಾಹಿತ್ಯದವರೆಗೂ ನೋಡಬಹುದು. ಪಾಶ್ಚಾತ್ಯ ಕಾದಂಬರಿಕಾರ ಮಾಕ್ಸಿಮ್ ಗಾರ್ಕಿಯ 'ತಾಯಿ' ಕಾದಂಬರಿ (ಮದರ್), ಬರ್ಟೋಲ್ಟ್ ಬ್ರೆಕ್ಟನ 'ತಾಯಿ' ನಾಟಕದವರೆಗೂ ದೃಷ್ಟಿ ಹರಿಸಬಹುದು.

ಮಾತೃ: ಧಾರ್ಮಿಕ ಆಯಾಮ: ಮಕ್ಕಳಲ್ಲಿ ಒಳಗಿನ ವಿವೇಕವನ್ನು, ವಿಚಾರಶಕ್ತಿಯನ್ನು, ಸಂಘರ್ಷ ಮನೋಭಾವವನ್ನು, ಜೀವನಮೌಲ್ಯವನ್ನು ಬಿತ್ತಿ ಬೆಳೆಯುವಲ್ಲಿ ತಾಯಿ ಮಹತ್ವದ ಪಾತ್ರವಹಿಸುವುದರಿಂದ ಜಗತ್ತಿನ ಕವಿ, ಕಲಾವಿದರಾದಿಯಾಗಿ ಎಲ್ಲರೂ ತಾಯಿಯ ಬಗ್ಗೆ ಮುಕ್ಕಾಗದ ಪ್ರೀತಿ ಗೌರವನ್ನು ತಾಳಲು ಸಾಧ್ಯವಾಗಿದೆ. ಆಕೆಯ ಬಗ್ಗೆ ತಮ್ಮ ಅಭಿಮಾನದ ಕುದುರೆ ಓಡಿಸುವಾಗ ಎಲ್ಲಿಯೂ ವಿವೇಕ ಮೀರಿದ್ದನ್ನು ಕಾಣಲಾರೆವು. ವಾಸ್ತವಿಕತೆಯ ವಿಶ್ಲೇಷಣೆಯೊಂದಿಗೆ ಆಕೆಯ ಸ್ಥಿತಿಗತಿಯ ವಿವರ ನೀಡುತ್ತಾರೆ. ಆಕೆ ತಾಳಿರುವ ಪ್ರೀತಿ, ವಾತ್ಸಲ್ಯದ ಗಂಟು ಬಿಚ್ಚುತ್ತಾರೆ. ಅವಳ ಕನಸುಗಳನ್ನು ಅನಾವರಣಗೊಳಿಸುತ್ತಾರೆ. ಗೌರವಾಭಿಮಾನದ ಭೋರ್ಗರೆತದಲ್ಲಿ ಆಕೆಯನ್ನು ವಿಜೃಂಭಿಸುತ್ತಾರೆ. ಹಾಗಾಗಿ ತಾಯಿಯನ್ನು ಕುರಿತ ಧೋರಣೆಯಲ್ಲಿ ಎಲ್ಲ ಕವಿಗಳು ಏಕರೂಪದ ಭಾವನೆ ತಾಳಿರುವುದರಲ್ಲಿ ಸಾಮ್ಯತೆ ಇದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಭೋಗಕ್ಕಾಗಿ, ಸಂತಾನಾಭಿವೃದ್ಧಿಗಾಗಿ ಬಳಕೆಯಾದವಳು. ಪುರುಷನ ಸ್ವಾರ್ಥಕ್ಕೆ ಹುಟ್ಟಿದ ಧರ್ಮವೂ ಕೂಡ ಹೆಣ್ಣಿನ ಮೇಲೆ ಇದೇ ನಿರ್ಬಂಧವನ್ನು ಹೇರಿತು. ಒಂದು ಕಡೆ ಆಕೆಯನ್ನು ತನ್ನ ಎಲ್ಲ ಚಟುವಟಿಕೆಗಳಿಗೆ ಅಡಿಯಾಳನ್ನಾಗಿ ಮಾಡಿಕೊಂಡ. ಮತ್ತೊಂದು ಕಡೆ ಇದನ್ನು ಮುಚ್ಚಿಹಾಕಿಕೊಳ್ಳಲು ಆಕೆಗೆ ಗೌರವದ ಸ್ಥಾನ ನೀಡಿ ಸಾಂತ್ವನಗೊಳಿಸಿದ ಹುನ್ನಾರ ಕಂಡುಬರುತ್ತದೆ. ಸಂತಾನವೀಯದ ಹೆಂಡತಿಯನ್ನು ಕೈಬಿಟ್ಟು, ಅನ್ಯ ಸ್ತ್ರೀಯನ್ನು ಕೈಹಿಡಿಯುವ ಪರಿಪಾಠವನ್ನು ತಾನೇ ರೂಪಿಸಿಕೊಂಡ. ಸಂತಾನಶಕ್ತಿಯಿಲ್ಲದ ಮಹಿಳೆಯನ್ನು 'ಬಂಜೆ' ಎಂಬ ಹೆಸರಿನಲ್ಲಿ ಅವಹೇಳನ ಮಾಡಲಾಗುತ್ತದೆ. ಆದರೆ ಇದೇ ಶಕ್ತಿಹೀನತೆ ಇರುವ ಗಂಡಸಿಗೆ ಮಾತ್ರ ಈ ರೀತಿಯಲ್ಲಿ ಹೆಂಗಸಿಗೆ ಇರುವಂತಹ ಅವಹೇಳನಕಾರಿ ಬಿಕ್ಕಟ್ಟು ಬಹುತೇಕ ಇರುವುದಿಲ್ಲ. ಶೀಲದ ವಿಷಯದಲ್ಲಿಯೂ ಇದೇ ದೃಷ್ಟಿಕೋನವನ್ನು ಕಾಣಬಹುದು. ಗಂಡಸು ಹೆಂಗಸಿನ ಶೀಲದ ಬಗ್ಗೆ ಹೇರಿರುವ ನಿರ್ಬಂಧಗಳು ಅಪಾರ ಮತ್ತು ಕಠಿಣವಾಗಿವೆ. ಆದರೆ ಈ ಸಮಾಜದಲ್ಲಿ ಹೆಂಗಸು ಗಂಡಸಿನ ಮೇಲೆ ಶೀಲದ ವಿಷಯದಲ್ಲಿ ನಿರ್ಬಂಧಗಳನ್ನು ಹೇರಿರುವ ಆಯಾಮ ಕಡಿಮೆ.

ಮಕ್ಕಳನ್ನು ಪಡೆಯದ ಹೆಣ್ಣಿನ ಬಾಳು ನಿರರ್ಥಕವೆಂಬ ನಂಬಿಕೆ ಇದ್ದುದರಿಂದಲೇ ಸ್ತ್ರೀಯರು ಮಕ್ಕಳಿಗಾಗಿ ಅಷ್ಟೊಂದು ಹಂಬಲಿಸುತ್ತಿದ್ದರು. 'ಕೈಗನ್ನಡಿಯವೊಲೆಲ್ಲರ ಕೈಗೊಪ್ಪುವ ಮಗನನೆತ್ತಿ ಪುಳಕಾಂಕುರಮಂ ಮೈಗಗ್ಗಳಿಸಿದ ಕಾಂತೆಯ ಕೈಗಮದೇಂ ಭೇದಮುಂಟೆ ಸೀರೆಯಕೈಗಂ" 'ಗರ್ಭಂಬೆಳೆಯದ ಬಾಳಕಿಯ ಬಸಿರನರ್ಥಕಮಲ್ತೇ' ಮಗುವನ್ನು ಎತ್ತಿಕೊಳ್ಳದ ಕೈ ಮತ್ತು ಮಗುವನ್ನು ಹೆರದ ಗರ್ಭ ವ್ಯರ್ಥ ಎಂದು ಹೇಳುತ್ತಿದ್ದರು. 'ಮಕ್ಕಳಿಲ್ಲದವಳ ಬದುಕದೇಂ ಬಾಳದುದೇಂ' ಎಂಬ ಭಾವನೆ ಬಲವಾಗಿ ಬೇರೂರಿದ್ದರಿಂದಲೇ 'ಬಂಜೆ'ಯಾದ ಹೆಂಡತಿಯನ್ನು ತ್ಯಜಿಸುವ ಪರಿಪಾಠವಿತ್ತು. ಅದನ್ನು ತಪ್ಪಿಸಿಕೊಳ್ಳಲು ಮಗುವನ್ನು ಹಡೆಯಲೇ ಬೇಕಿತ್ತು.

ತಾನು ಅನುಭವಿಸುವ ಹೆಣ್ಣು ತನಗೆ ಮಾತ್ರ ಮೀಸಲಿರಬೇಕು. ಆಕೆ ಅನ್ಯರ ಸ್ವತ್ತಾಗಬಾರದು. ತನಗೆ ಆಕೆಯಿಂದ ಪೂರ್ಣ ತೃಪ್ತಿ ಸಿಗದಿದ್ದರೆ ತಾನು ಬೇರೆ ಹೆಣ್ಣಿನ ಸಂಬಂಧ ಹೊಂದಬಹುದು. ಆದರೆ ಅದೇ ಹೆಣ್ಣಿಗೆ ತನ್ನಿಂದ ಪೂರ್ಣ ತೃಪ್ತಿ ಸಿಗದಿದ್ದರೆ ಆಕೆ ಮಾತ್ರ ತನ್ನಿಚ್ಚೆಯಂತೆ ನಡೆಯುವ ಸ್ವಾತಂತ್ರ್ಯವಿಲ್ಲ. ಬದುಕಿದ್ದಾಗಲೂ

ಆತನಿಗಾಗಿಯೇ ಬದುಕಬೇಕು, ಸತ್ತರೂ ಆತನಿಗಾಗಿಯೇ ಸಾಯಬೇಕೆಂಬ ಕ್ರೂರ ಪರಿಸ್ಥಿತಿಯನ್ನು ಹೆಣ್ಣಿಗೆ ವಿಧಿಸಿರುವುದು ಇಂದಿನ ವಿಕಟ ವಾಸ್ತವವಾಗಿದೆ.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಮಹಿಳೆ: ಪ್ರಾಚೀನ ಕಾವ್ಯಗಳಲ್ಲಿ ಭೂಮಿ, ಸಂಪತ್ತು ಮತ್ತು ವಿಜಯಗಳನ್ನು ಹೆಣ್ಣಿಗೆ ಹೋಲಿಸಿರುವುದು ಕಂಡುಬರುತ್ತದೆ. ಈ ಮೂರೂ ಅನ್ಯರಿಂದ ಕಿತ್ತುಕೊಂಡ ವಸ್ತುಗಳು. ಇವುಗಳನ್ನು ತನ್ನ ಹಿಡಿತದಲ್ಲಿಯೇ ಇಟ್ಟುಕೊಳ್ಳಬೇಕೆಂಬ ಹಂಬಲ ಗಂಡಿನದು. ಸಿರಿಯನ್ನು ಹೆಣ್ಣಿಗೆ ಹೋಲಿಸಿ, ಅವಳು ಚಂಚಲೆ ಎಂದು ಜರೆದಿರುವ ಪ್ರಸಂಗ ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಕಂಡು ಬರುತ್ತದೆ. ದುರ್ಯೋಧನ ಕಾಲು ಮುರಿದುಕೊಂಡು ರಣರಂಗದಲ್ಲಿ ಬಿದ್ದಿರುವಾಗ ಅವನನ್ನು ತೊರೆದು ಹೋಗಲು ಸಿದ್ಧಳಾಗಿರುವ ಜಯಲಕ್ಷ್ಮಿಯ ಮಾತುಗಳು ಹೀಗಿವೆ:

ಪೆಸರೊಳ್ ಲಕ್ಷ್ಮಿಯೆನಿನ್ನೆಗಂ ನೆಲಸಿ ತಾಂ ದುರ್ಯೋಧನೋರಸ್ಸ್ಥಳಾ
ವಸಥಂ ದ್ರೋಣನದೀಜ ಕರ್ಣ ಭುಜವೀರ್ಯಾವೇಷ್ಟಿತಂ ಮಾಡೆ ಸಂ
ತಸದಿರ್ದೆಂ ಬಿಸುಟಾ ಧರಾಧಿಪತಿಯಂ ನಾರಾಯಣಾದೇಶಮೊ
ಡ್ಡಿಸೆ ಪಾಂಡು ಪ್ರಿಯ ಪುತ್ರರೊಳ್ ನೆರೆಯಲೆಂದಿಂತೀಗಳಾಂ ಪೋದಪೆಂ [೧೨]

ಲಕ್ಷ್ಮಿ ಚಂಚಲೆ, ಅವಳಿಗೆ ಗುಣ ಮುಖ್ಯವಲ್ಲ. ಅಧಿಕಾರ ಮುಖ್ಯವೆಂಬುದನ್ನು ರನ್ನನ ಸಾಹಸಭೀಮ ವಿಜಯದಲ್ಲಿ ಕಾಣುತ್ತೇವೆ. 'ಚಳಮತಿಯಾದೆನಿಂ ಜಲಧಿ ಸಂಭವೆಯಪ್ಪುದರಿಂದ' ಎಂದು ಹೇಳುವ ರನ್ನ

ಕಲಿಪಂದೆ ಎಂದು ಬಗೆಯದೆ
ಕುಲಜಂ ಕುಲಹೀನನೆಂದು ಬಗೆಯದೆ
. . . .
ನೆಲಸುವೆ ನಿನ್ನಿಂ ನಿಕೃಷ್ಟರೆಂಬುರುಮೊಳರೇ. [೧೩]

ಎಂದು ರಾಜ್ಯ ಲಕ್ಷ್ಮಿಯನ್ನು ದುರ್ಯೋಧನ ನಿಂದಿಸುತ್ತಾನೆ. 'ಇರಿಯಿಸುವೆ ತಂದೆ ಮಕ್ಕಳ ಸೋದರರ್ಕಳ ಗುರುಶಿಷ್ಯರ' ಎಂಬ ನಿಂದನೆಯ ಮಾತುಗಳಲ್ಲಿ ಹೆಣ್ಣು ಚಂಚಲೆ, ಆಕೆ ದುರ್ಬಲರನ್ನು ಮೆಚ್ಚಳು, ಪರಾಕ್ರಮಿಗಳ ಬೆನ್ನು ಹತ್ತುವ ನೀಚೆ ಎಂಬ ಅಭಿಪ್ರಾಯ ಕಂಡು ಬರುತ್ತದೆ.

ಕರ್ನಾಟಕ ಕಾದಂಬರಿಯಲ್ಲಿ, ಆದಿಪುರಾಣದಲ್ಲಿ ಲಕ್ಷ್ಮಿಯನ್ನು ನಿಷ್ಠುರವಾಗಿ ನಿಂದಿಸಿರುವುದು ಕಂಡುಬರುತ್ತದೆ.

ರಾಜಕೀಯ, ಆರ್ಥಿಕ, ಸಾಮಾಜಿಕವಾಗಿ ತಾಯಿ: ಗಂಡನ ತರುವಾಯ ಆಸ್ತಿ, ಸಂಪತ್ತಿನ ಒಡತಿಯಾಗುವ ಹೆಣ್ಣು ಆರಾಧನೆಯ ವಸ್ತುವಾಗುತ್ತಾಳೆ. ಶ್ರೀಮಂತಿಕೆ, ಸಂಪತ್ತು ಎಂಬುದು ತಾಯಿಯ ದಯೆಯಿಂದ ಬಂದದ್ದು. ಈ ಮನೆಗೆ ಆಕೆ ಲಕ್ಷ್ಮಿ ಸ್ವರೂಪ, ಅದೃಷ್ಟದೇವತೆ ಎಂಬಂತೆ ಮಕ್ಕಳು ಭಾವಿಸುತ್ತಾರೆ. ಆಕೆಗೆ ತುಂಬಾ ವಿಧೇಯವಾದ ರೀತಿಯಲ್ಲಿ ಗೌರವ ಸಮರ್ಪಿಸುವುದು, ಪೂಜಿಸುವುದು, ಕೊಂಡಾಡುವುದು ಕಂಡುಬರುತ್ತದೆ.

"ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹೆಣ್ಣನ್ನು ನೋಡಿದ ಕ್ರಮಗಳಲ್ಲಿ ಅನೇಕ ರೀತಿಯ ಸಂಘರ್ಷದ ಸೂಕ್ಷ್ಮ ಎಳೆಗಳಿವೆ. ಹೀಗಾಗಿ 'ರಾಜಕೀಯ' 'ಅಧಿಕಾರ' ಮುಂತಾದ ಪದಗಳ ನಿರ್ವಚನವು ಪ್ರಾಚೀನ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಬೇರೆಯಾಗುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಬಂದಿರುವ ಉಲ್ಲೇಖಗಳನ್ನು ಗಮನಿಸಿದರೆ ಹೆಣ್ಣಿಗೆ ಸಾಮಾಜಿಕ ಅಭಿಮುಖತೆಯು ಸಾಧ್ಯವಾಗಿರುವುದು ಗಂಡಿನ ಗೈರು ಹಾಜರಿಯಲ್ಲಿ ಮತ್ತು ಸ್ವತ್ತಿನ ಸಂರಕ್ಷಣೆಯ ಸಂದರ್ಭದಲ್ಲಿ ರಾಜಕೀಯ ಅಧಿಕಾರ ಮತ್ತು ಅದು ಬಳಸುವ ಪರಿಭಾಷೆಗಳ ಸ್ವರೂಪವು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಒಂದೇ ಬಗೆಯದಲ್ಲ . . ."[೧೪] – ಎಂದು ಹೇಳಬಹುದು. ಆದರೂ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ತಾಯಿಯ ಬಗ್ಗೆ ಇರುವ ನಿಲುವಿನಲ್ಲಿ, ದೃಷ್ಟಿಯಲ್ಲಿ ಭಿನ್ನತೆ ಕಾಣಲು ಸಾಧ್ಯ. ರಾಜಮಹಾರಾಜರ ಕಾಲ ಕಳೆದು ಹೋಗಿ ಪ್ರಜಾಪ್ರಭುತ್ವದ ಕಾಲದಲ್ಲಿ ಅಧಿಕಾರದ ಅನುಭವಿಸುವಿಕೆಯಿಂದ ದೊರೆತ ಸೌಲಭ್ಯ, ಸವಲತ್ತುಗಳ ಮೇಲಾಟದಲ್ಲಿ ಸ್ಥಿತಿವಂತರಾದ ಆಳುವ ಜನರು ತಾಯಿಯನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಕಾಣುವ ರೀತಿ ಸಾಂಪ್ರದಾಯಕವಾಗಿ ಕಂಡುಬರುತ್ತದೆ. ಅವರಿಗೆ ಆಕೆ ಭಾಗ್ಯಕರುಣಿಸಿದ ದೇವತೆಯಾಗಿ ಕಾಣುತ್ತಾಳೆ. ಶಕ್ತಿರೂಪಿಣಿಯಾಗಿ, ಕೃಪಾಕಾರಣಿಯಾಗಿ, ತನ್ನ ಕುಟುಂಬದ ಏಳ್ಗೆಗಾಗಿ, ಕುಟುಂಬದವರ ಸುಖಕ್ಕಾಗಿ ಅವತರಿಸಿದಂತೆ ಕಾಣುತ್ತಾಳೆ.

ಸಾಮಾಜಿಕವಾಗಿ ತುಳಿತಕ್ಕೆ ಒಳಗಾದ, ಆರ್ಥಿಕವಾಗಿ ಹಿಂದುಳಿದಿರುವ, ರಾಜಕೀಯವಾಗಿ ದರ್ಬಲರಾಗಿರುವವರ ತಾಯಿ ಮೇಲಿನವರದಕ್ಕಿಂತಲೂ ಭಿನ್ನ. ಇಲ್ಲಿ ಆಕೆಯನ್ನು ದೇವರೆಂದಾಗಲೀ, ಕಾರಣಿಕ ದೇವತೆಯೆಂದಾಗಲೀ, ಲಕ್ಷ್ಮಿ ಸ್ವರೂಪವೆಂದಾಗಲೀ ಬರೀ ಗೌರವ ಸಂಬೋಧನೆಯ, ಸಾಂಪ್ರದಾಯಕ ವರ್ಣನೆಯ, ವಿಜೃಂಭಿಸಿದ ವಿಶೇಷಣಗಳಿಂದ ವರ್ಣಿಸಿರುವುದು ಎಲ್ಲಿಯೂ ಕಾಣುವುದಿಲ್ಲ. ಆಕೆ ತನ್ನ ಗಂಡ ಮತ್ತು ಮಕ್ಕಳ ಹಿತಕ್ಕಾಗಿ, ಕುಟುಂಬದ ಏಳ್ಗೆಗಾಗಿ, ಮನೆತನದ ಮರ್ಯಾದೆಗಾಗಿ ಪಟ್ಟ ಪಾಡನ್ನು, ಅನುಭವಿಸಿದ ಯಾತನೆಯ ನಿಟ್ಟುಸಿರನ್ನು ಕರುಳಾಳದಿಂದ ಚಿತ್ರಿಸಿರುವುದು ಕಂಡುಬರುತ್ತದೆ.

ಜನಪದ ಕಾವ್ಯ

ಜನಪದ ಸಾಹಿತ್ಯದಲ್ಲಿ ಹೆಣ್ಣಿನ ಬದುಕಿನ ಬವಣೆಗಳನ್ನು ವಿವರಿಸುವ ನೂರಾರು ಪ್ರಸಂಗಗಳಿವೆ. ಇವುಗಳಲ್ಲಿ ಅತ್ತೆ ಮನೆಯ ಬವಣೆಯ ಪಾಲು ಹಿರಿದು. ನಿಷ್ಕಾರಣವಾಗಿ ನರಕ ಹಿಂಸೆ ಅನುಭವಿಸುವ ಅನೇಕ ಹೆಣ್ಣುಗಳ ಕಥೆಗಳು ಮನಮಿಡಿಯುವಂತಿವೆ. ಇವುಗಳಲ್ಲಿ ಉತ್ತರ ದೇವಿಯ ಕಥೆಯೂ ಒಂದು. ಅವಳ ಅತ್ತೆ ಯಾವುದೋ ಕುಂಟು ನೆಪ ತೆಗೆದು 'ಉತ್ತರ ದೇವಿ ಎಂಬ ಸೊಸೆ ಬೇಡ ಕಂದಯ್ಯಾ ಬಿಟ್ಟುಬಿಡವಳ ಬಸವೀಯ' ಎಂದು ಮಗನಿಗೆ ಉಪದೇಶಿಸುತ್ತಾಳೆ. ಮಗನಿಗೆ ಹೆಂಡತಿಯಲ್ಲಿ ಯಾವ ತಪ್ಪೂ ಕಾಣುವುದಿಲ್ಲ ಆದರೆ ತಾಯಿಯನ್ನು ಬಿಟ್ಟುಕೊಡುವಂತಿಲ್ಲ. ಅದಕ್ಕೆ ನೊಂದು ನೆಪ ಹೇಳಿದರೂ ತಾಯಿ ಜಗ್ಗಲಿಲ್ಲ. ತಾಯಿಯ ಹಟವೇ ಗೆಲ್ಲುತ್ತದೆ. ಮನೆ ಬಿಟ್ಟು ಹೋಗುವಾಗ ಉತ್ತರದೇವಿ ದುಃಖದಿಂದ ತಾನು ನೀರು ಹಾಕಿ ಬೆಳೆಸಿದ ಗಿಡಗಳನ್ನು

'ನೀವು ಉರುದಾರಹೋಗಿ' ಎಂದು, ತಾನು ಸಾಕಿದ ಪ್ರಾಣಿಗಳನ್ನು 'ನೀವು ಅಡವಿಗಾರ ಹೋಗಿ' ಎಂದು ಶಪಿಸುವುದು ಅವಳ ಅಸಹಾಯಕತೆಯ ಪ್ರತಿಭಟನೆಯಾಗಿದೆ.

ಉತ್ತರದೇವಿ ತನ್ನ ಕಂದನೊಂದಿಗೆ ತವರಿಗೆ ಬಂದಾಗ, ಅವಳ ತಾಯಿಯನ್ನು ಬಿಟ್ಟು ಇನೊಂದು ಮದುವೆಯಾಗಿದ್ದ ತಂದೆ, ದೊಡ್ಡಪ್ಪ, ಸೋದರರು ಯಾರೂ ಆಶ್ರಯ ನೀಡುವುದಿಲ್ಲ. "ಹತ್ತೂರ ತಿರುಗಿದರೂ ನೆತ್ತೀಗೆ ಎಣ್ಣೆಯಿಲ್ಲಾ ಒಬ್ಬಾರುಕದವತೆಗಿನಿಲ್ಲಾ"[೧೫] ಎಂದು ದುಃಖಿಸುತ್ತ ಅವಳ ತಾಯಿಯ ಮನೆಬಾಗಿಲಿಗೆ ಬಂದು: 'ಅಮ್ಮಾ ಕದ ತೆಗಿಯೇ ನನ್ನಮ್ಮಾ ಕದ ತೆಗಿಯೇ' ಎಂದಾಗ ಅಮ್ಮ ಕದ ತೆಗೆದು ಮಗಳನ್ನು ತಬ್ಬಿ ಮುದ್ದಾಡುತ್ತಾ ಆಕೆಯ ದುಃಖದೊಂದಿಗೆ ತನ್ನ ದುಃಖ ತೋಡಿಕೊಳ್ಳುತ್ತಾಳೆ ಹಾಗೂ ಮಗಳ ಕಷ್ಟಕ್ಕೆ ನೊಂದು, ನೀನು ಉತ್ತರೆ ಮಳೆಯಾಗಿ ಹೋಗವ್ವ ಎಂದು ಹೇಳುತ್ತಾಳೆ.

ಶಿಷ್ಟ ಪರಂಪರೆಯು ಪುರುಷ ಪ್ರಧಾನ ವ್ಯವಸ್ಥೆಗೆ ಒತ್ತು ಕೊಟ್ಟರೆ; ಮೌಖಿಕ ಪರಂಪರೆಯು ಸ್ತ್ರೀಗೆ ಒತ್ತು ಕೊಟ್ಟಿದೆ. ಶಿಷ್ಟ ಪರಂಪರೆಯಲ್ಲಿ ಶೂರ, ವೀರ, ಪರಾಕ್ರಮಿಗಳಿಗೆ ಆದ್ಯತೆ ನೀಡಿದ್ದರೆ; ಮೌಖಿಕದಲ್ಲಿ ಅದಕ್ಕೆ ತದ್ವಿರುದ್ಧವಾಗಿ ಕುಂಟ, ಕಿವುಡ, ಮೂಗ, ವಿಕಲಾಂಗರಿಗೆ ಪರಾಕ್ರಮದ ಯಶಸ್ಸಿನ ಪಟ್ಟ ಕೊಟ್ಟಿದೆ. ಶಿಷ್ಟ ಸಂಪ್ರದಾಯದಲ್ಲಿ ಪುರುಷ ಅಥವಾ ಗಂಡನಿಗೆ ಆದ್ಯತೆ ಇದ್ದಂತೆ ಮೌಖಿಕದಲ್ಲಿ ಮಹಿಳೆ ಅಥವಾ ತಾಯಿಗೆ ಆದ್ಯತೆ ನೀಡಿದ್ದಾರೆ. ಇಲ್ಲಿ ತಾಯಿಯ ಪ್ರಾಮುಖ್ಯತೆ ಎದ್ದು ಕಾಣುತ್ತದೆ. ಶಿಷ್ಟದಲ್ಲಿ ಪಿತೃಪ್ರಧಾನ ಚಿತ್ರವಿದ್ದರೆ; ಮೌಖಿಕದಲ್ಲಿ ಮಾತೃ ಪ್ರಧಾನ ಚಿತ್ರವಿದೆ. ಮೌಖಿಕದಲ್ಲಿನ ತಾಯಿ ತನ್ನ ಕಷ್ಟ ಕೋಟಲೆಯ ನಡುವೆಯೂ ಕೂಡ ಮುಕ್ಕಾಗದ ಪ್ರೀತಿ, ವಾತ್ಸಲ್ಯ ತೋರಿಸುವ ಮಮತೆಯ ಮೂರ್ತಿಯಾಗಿದ್ದಾಳೆ. ತನ್ನ ಕುಟುಂಬದ ಉಳಿವಿಗಾಗಿ, ವಂಶದ ಏಳ್ಗೆಗಾಗಿ, ಮಕ್ಕಳ ಉನ್ನತಿಗಾಗಿ ತನ್ನನ್ನೇ ತಾನು ಅರ್ಪಿಸಿಕೊಳ್ಳುವ ಉದಾತ್ತ ಮಾತೆಯಾಗಿ, ಸಹನೆಯ ಮೂರ್ತಿಯಾಗಿ ಕಂಡುಬರುತ್ತಾಳೆ.

ತಂದೀಯ ನೆನೆದರೆ ತಂಗಳ ಬಿಸಿಯಾಯ್ತು
ಗಂಗಾ ದೇವಿ ನನ್ನ ಹಡೆದವ್ವ । ನೆನೆದರೆ
ಮಾಸೀದ ತಲೆಯು ಮಡಿಯಾಯ್ತು.[೧೬]

ತಾಯಿಯ ನೆನಪು ಮಾಸಿದ ಮಂಡೆ ಮಡಿಮಾಡುತ್ತದೆ ಎಂದು ತಾಯಿಯನ್ನು ಗಂಗಾದೇವಿಗೆ ಸಮೀಕರಿಸಿರುವುದು ಇಲ್ಲಿನ ವಿಶೇಷ. ಗಂಗಾದೇವಿ ಭಾರತೀಯರಿಗೆ ಆಧ್ಯಾತ್ಮಿಕವಾಗಿ ಹಾಗೂ ಲೌಕಿಕವಾಗಿ ಮುಖ್ಯಳು. ಆಧ್ಯಾತ್ಮಿಕವಾಗಿ ಪಾವನೆ ಹೇಗೋ ಹಾಗೆ ಲೌಕಿಕವಾಗಿ ಅನುದಿನವೂ ನಮ್ಮ ಬದುಕನ್ನು ರೂಪಿಸುವ ಜೀವಧಾರೆ. ಅಂತಹ ಗಂಗೆಗೆ ತಾಯಿಯನ್ನು ಸಮೀಕರಿಸಿ ಶ್ರೇಷ್ಠತೆಯ ಸ್ಥಾನ ನೀಡಿದ್ದಾರೆ.

ಜನಪದ ಸಾಹಿತ್ಯದಲ್ಲಿ ತಾಯಿಯ ಹಿರಿಮೆ: ತಾಯಿ ಮಗಳ ಸಂಬಂಧ ಜನಪದ ಸಾಹಿತ್ಯದಲ್ಲಿ ವಿಶೇಷ ಮಹತ್ವ ಪಡೆದಿದೆ. ತೌರು ಮನೆಯ ಸಂಬಂಧದ ಹಿರಿಮೆಯನ್ನು, ತಾಯಿಯ ವಾತ್ಸಲ್ಯದ ಭಾವವನ್ನು ಹಾಗೂ ಬದುಕಿನ ಏರಿಳಿತಗಳಲ್ಲಿ ಆಕೆಯ ಪ್ರೋತ್ಸಾಹವನ್ನು ಮನಮುಟ್ಟುವಂತೆ ಚಿತ್ರಿಸಿರುವುದು ಕಂಡು ಬರುತ್ತದೆ. ಇಡೀ ಜನಪದರಲ್ಲಿ ತಂದೆಗಿಂತ ತಾಯಿ ಮಹತ್ವದ ಸ್ಥಾನ ಪಡೆದಿದ್ದಾಳೆ. ಗಂಡನ ಮನೆಗೆ ಕೊಟ್ಟ ಮಗಳ ಬದುಕಿನ ಬಗ್ಗೆ ತಾಯಿ ಕಾಣುವ ಕನಸು ಹಾಗೂ ಕಲ್ಪನೆ

ಮನದಾಳದಿಂದ ಮೂಡಿ ಬಂದಿದೆ. ಗಂಡು ಮಕ್ಕಳಿಗಿಂತಲೂ ಕೂಡ ಹೆಣ್ಣು ಮಕ್ಕಳ ಮೇಲೆ ತಾಯಿಗೆ ಮುಕ್ಕಾಗದ ಪ್ರೀತಿ, ವಾತ್ಸಲ್ಯ ಅದನ್ನು ಮಗಳ ಬಾಯಿಂದ ಬರುವ ತಾಯಿಯ ಸ್ಮರಣೆಯಿಂದ ಕಾಣಬಹುದು.

ಬ್ಯಾಸಾಗಿ ದಿವಸಕ ಬೇವಿನ ಮರತಂಪ
ಭೀಮರತಿ ಎಂಬ ಹೊಳಿ ತಂಪ । ಹಡೆದವ್ವ
ನೀ ತಂಪ ನನ್ನ ತವರೀಗಿ ॥

ತಾಯಿಲ್ದ ತವರೀಗೆ ಹೋಗದಿರು ನನ ಮನವೆ
ನೀರಿಲ್ದ ಕೆರಿಗಿ ಕರ ಬಂದು । ತಿರುಗಾಗ
ಆಗ ನೋಡದರ ದುಃಖಗಳ ॥

ಈ ಎರಡು ತ್ರಿಪದಿಗಳಲ್ಲಿ ತಾಯಿಯನ್ನ ಅನನ್ಯ ಭಾವನೆಯಿಂದ ಬೇವಿನ ಮರ, ಭೀಮರತಿ ಹೊಳಿಗೆ ಹೋಲಿಸಿದ್ದಾರೆ. ತಾಯಿಯ ಆಸರೆ ತಪ್ಪಿದ ಮಗಳಿಗೆ ತವರು ನೀರಿಲ್ಲದ ಕೆರೆಗೆ ಕರು ಬಂದು ದುಃಖ ಪಟ್ಟಂತಾಗುತ್ತದೆ ಎಂಬ ಗ್ರಾಮೀಣ ಪರಿಸರದ ಹಿನ್ನೆಲೆಯಲ್ಲಿ ತಾಯಿಯ ಮಹತ್ವವನ್ನು ಕಾಣಬಹುದು.

ತಾಯ ಕಾಣದ ಜೀವ ತಾವೂರಿ ಬಾವೂರಿ
ಭಾಳ ಬಿಸಲಾನ ಅವರೀಯ । ಹೂವಿನ್ಹಾಂಗ
ಬಾಡತೀನಿ ತಾಯಿ ಕರೆದೊಯ್ಯ ॥

ತಾಯಿ ಮಕ್ಕಳ ದನಿಯು ತಾಳ ಬಾರಿಸಿದಾಂಗ
ಜೋಡ ಕಿನ್ನೂರಿ ನುಡಿದಾಂಗ । ಹಲಸಂಗಿ
ಹೊತ್ತೇರಿತಾಸೆ ಬಡೆದಾಂಗ ॥ ೧೭

ತೌರಿನ ಸೆಳೆತ ತಾಯಿಯ ಸೆಳೆತವಾಗಿದೆ. ಗಂಡನ ಮನೆಯಲ್ಲಿ ಯಾವುದಕ್ಕೂ ಕೊರತೆ ಇಲ್ಲದಿದ್ದರೂ ಅಲ್ಲಿ ತಾಯಿಯ ಪ್ರೀತಿಯ ಕೊರತೆ ಸದಾ ಕಾಡುತ್ತದೆ. ಅದಕ್ಕಾಗಿ ತಾಯಿ ಕಾಣುವ ಹಂಬಲ ಹೊತ್ತ ಮಗಳ ಎದೆಯಾಳದ ಮಾತು ಈ ರೀತಿ ವ್ಯಕ್ತವಾಗಿದೆ.

ಪುರುಷ ಸಮಾಜದಲ್ಲಿ ಗಂಡಿನ ಇಚ್ಛೆಯಂತೆ ಬಾಳಬೇಕಾದ ಹೆಣ್ಣಿಗೆ ಕಷ್ಟ ಬಂದಾಗ ಆಶ್ರಯ ಬಯಸುವುದು ತಾಯಿಯಿಂದ ಮಾತ್ರ ಎಂಬ ಅಂಶ ಜನಪದ ಸಾಹಿತ್ಯದಲ್ಲಿ ಸಮೃದ್ಧವಾಗಿ ಕಾಣ ಬರುತ್ತದೆ. ತಾಯಿಯ ಕರುಳು ಸದಾ ತನ್ನ ಮಗಳಿಗಾಗಿ, ಮಗನಿಗಾಗಿ, ತನ್ನ ಕುಟುಂಬಕ್ಕಾಗಿ ತುಡಿಯುತ್ತಿರುತ್ತದೆ.

ಹೆಣ್ಣು ಸಂಸಾರದ ಕಣ್ಣಾಗಿ, ಆ ಮನೆತನದ ವಾರಸುದಾರನ ಸೃಷ್ಟಿಗೆ ಕಾರಣಳಾಗುತ್ತಾಳೆ. ಆ ಮನೆಯ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಪ್ರತಿನಿಧಿಯಾಗುತ್ತಾಳೆ. ಭ್ರೂಣಾವಸ್ಥೆಯಿಂದ ಹಿಡಿದು ಹೊರ ಜಗತ್ತಿನ ಪರಿಚಯ ಮಾಡಿಕೊಡುವವರೆಗೂ ಅವಳೇ ರಕ್ಷಕಳು ಅವಳೇ ಮಾರ್ಗದರ್ಶಕಳು. 'ಮನೆಯೇ ಮೊದಲ ಪಾಠಶಾಲೆ ಜನನಿ ತಾಯೆ ಮೊದಲ ಗುರುವು. ಜನನಿಯಿಂದ ಪಾಠಕಲಿತ

ಜನರು ಧನ್ಯರು' – ಎಂಬುದು ಈ ಮಾತಿಗೆ ನಿದರ್ಶನವಾಗಿದೆ. ಹಡೆದ ತಾಯಿ, ಮಗುವನ್ನು ಮಡಿಲೊಳಗೆ ಇಟ್ಟುಕೊಂಡು ಹರಸುವ ಪರಿಯೂ ಇದೇ ಆಗಿದೆ.

ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು ನನಕಂದ
ಜ್ಯೋತಿಯೇ ಆಗು ಜಗಕ್ಕೆಲ್ಲಾ

ಜನಪದ ಸಾಹಿತ್ಯವು ಸ್ತ್ರೀಪರವಾಗಿದೆ ಎಂಬುದು ಈಗಾಗಲೆ ನಂಬಲಾಗಿರುವ ಒಂದು ಹೇಳಿಕೆ. ವಿಶೇಷವೆಂದರೆ ಮೇಲಿನ ತ್ರಿಪದಿಯು ಅದಕ್ಕೆ ಸ್ವಲ್ಪ ವಿರುದ್ಧವಾಗಿದೆ. ತನ್ನ ಕಂದನನ್ನು (ಮಗು, ಹೆಣ್ಣು ಗಂಡು ಯಾವುದಾದರೂ ಆಗಿರಬಹುದು) ಕುರಿತು ತಾಯಿ ಅದಮ್ಯವಾದ ತನ್ನ ಆಸೆಯನ್ನು ವ್ಯಕ್ತಪಡಿಸುತ್ತಿದ್ದಾಳೆ. ಇದು ಯಾವುದೆ ತಾಯಿಗೆ ಸಾಮಾಜಿಕವಾಗಿ ಸಹಜವಾದುದು. ಆದರೆ ಅದರಲ್ಲಿ ನೀತಿಗೆ ಪ್ರಭುವಾಗು ಎಂಬ ಒಂದು ಆಶಯ ಕೂಡ ವ್ಯಕ್ತವಾಗಿದೆ. ಪ್ರಭು ಎಂಬುದು ಬಹುತೇಕ ಪುರುಷ ವಾಚಕವೇ ಆಗಿದೆ. ಹಾಗಾಗಿ ಇಂತಹ ಸಂದರ್ಭಗಳಲ್ಲಿ ತಾಯಿ ತಾನು ತಾಯಿಯಾಗಿ ಮಾತ್ರ ಮಾತಾಡಿಲ್ಲ; ಆಕೆ ಪುರುಷನ ಆಲೋಚನೆಯ ಭಾಗವಾಗಿ ಆಸೆ ಪಟ್ಟಂತೆ ಕಾಣುತ್ತದೆ. ಈ ಆಯಾಮವು ಜನಪದ ಸಾಹಿತ್ಯದ ಮೇಲಿನ ಜನಪ್ರಿಯ ತೀರ್ಮಾನಗಳನ್ನು ಮರುವಿಮರ್ಶೆ ಮಾಡುವಂತೆ ನಮ್ಮನ್ನು ಒತ್ತಾಯಿಸುತ್ತದೆ. ಮೇಲಿನ ಪದ್ಯದಲ್ಲಿ ಒಂದು ಕಡೆಗೆ ತಾಯಿಯ ಹಂಬಲವಿದೆ ನಿಜ; ಆದರೆ ತನ್ನ ಮಗು ಪುರುಷನಾಗಬೇಕೆಂಬ ಹಂಬಲವೂ ಅದರಲ್ಲಿ ಅಡಕವಾಗಿದೆ.

ತಾಯಿ ದೇವರ ಸಮಾನ. ಆಕೆ ಬೆಳಕಿನ ಜ್ಯೋತಿಯಂತೆ ಬದುಕಿಗೆ ಆಕೆಯೇ ಬೆಳಕು ಹಾಗೂ ಚೈತನ್ಯ. ಭಾರತೀಯರ ಪರಂಪರೆಯಲ್ಲಿ ಜ್ಯೋತಿಗೆ ಅನನ್ಯ ಸ್ಥಾನ ಉಂಟು. ಅದು ನಿರ್ಮಲತೆ, ಪಾವಿತ್ರ್ಯತೆ, ಶ್ರೇಷ್ಠತೆಯ ಸಂಕೇತ. ಕತ್ತಲನ್ನು ದೂಡಿ ಬೆಳಕೀಯುವ ಸಾಧನ. ಅಜ್ಞಾನ ಹೋಗಲಾಡಿಸಿ ಸುಜ್ಞಾನ ಬಿತ್ತುವುದು ಜ್ಯೋತಿ. ಮುಗ್ಧತೆಯ ಮಗುವಿಗೆ ಮಾನವೀಯತೆಯ ದರ್ಶನ ಮಾಡಿಸುವವಳು ತಾಯಿ. ಹಾಗಾಗಿ ತಾಯಿಯನ್ನು ಜ್ಯೋತಿಗೆ ಹೋಲಿಸಿರುವುದು ಅರ್ಥಪೂರ್ಣವಾಗಿದೆ.

ಯಾರು ಇದ್ದರು ನನ್ನ ತಾಯವ್ವನ್ಹೋಲರ
ಸಾವಿರ ಕೊಳ್ಳಿ ಒಲಿಯಾಗ । ಇದ್ದರ
ಜೋತಿ ನಿನ್ಯಾರು ಹೋಲರ ।

ಇದರ ಉದ್ದೇಶ ತಾಯಿಗೆ ಸಮನಾದ ಶಕ್ತಿಯಿಲ್ಲ, ಎಷ್ಟೇ ಬೆಂಕಿಯ ಕೊಳ್ಳಿಯಿದ್ದರೂ ತಾಯಿಯ ಜ್ಯೋತಿಗೆ ಸಮಾನವಾದುದು ಯಾವುದೂ ಇಲ್ಲ ಎಂದು ಹೇಳುವುದಾಗಿದೆ. ಇದು ಜನಪದರಲ್ಲಿ ಕಾಣುವ ತಾಯಿತನದ ಕಲ್ಪನೆಯಾಗಿದೆ.

ಭೂಮಿಯನ್ನು ತಾಯಿಯಾಗಿ ಕಂಡ ಜನಪದರು: ಶಿಷ್ಟ ಕವಿಗಳು ಭೂಮಿಯನ್ನು ತಾಯಿಯಾಗಿ ಕಂಡಿರುವಂತೆ ಜನಪದರೂ ಕೂಡ ಕಂಡಿದ್ದಾರೆ. ಅವರು ಭೂಮಿಯನ್ನು ಶಕ್ತಿದೇವತೆಯ ರೂಪದಲ್ಲಿ 'ಭೂದೇವಿ' ಎಂದು ಗ್ರಹಿಸಿದ್ದಾರೆ. ಭೂಮಿಯನ್ನು

ಮಾತೆಯಾಗಿ ಆರಾಧಿಸಿದ್ದಾರೆ. 'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಮಾತಿನಂತೆ ಜನಪದರ ಮಾತು ಉಂಟು:

ಏಳುತಲೆ ಎದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ: ಭೂತಾಯಿ
ಎದ್ದೊಂದು ಗಳಿಗೆ ನೆನೆವೆನು । [೧೯]

'. . . . . . . ಯಾರ್‍ಯಾರ ನೆನೆಯಲಿ' ಎನ್ನುವಲ್ಲಿ ಅವರಿಗೆ ಸಂದಿಗ್ಧತೆಯಿದೆ. ಅದನ್ನೆಲ್ಲ ತಿರಸ್ಕರಿಸಿ ಎಳ್ಳು ಜೀರಿಗೆ ಬೆಳೆಯುವ, ತಾಯಿಯಂತಿರುವ ಭೂಮಿಯನ್ನು ನೆನೆಯುತ್ತಾರೆ. ತಾಯಿ ಹೊತ್ತು, ಹೆತ್ತು, ಮೊಲೆಯುಣಿಸಿ ಸಾಕಿದಂತೆ, ಭೂಮಿಯೂ ಜೀವನಪರ್ಯಂತ ಅನ್ನ, ನೀರು ಕೊಟ್ಟು ಸಲಹುತ್ತದೆ. ಕಾಣದ ದೇವರಲ್ಲ, ತನಗೆ ಆಶ್ರಯ ನೀಡುವ ಎಲ್ಲವೂ ತಾಯಿ ಸಮಾನ. ಶಿಷ್ಟರು ಕಲ್ಲು, ಮಣ್ಣು, ಕಟ್ಟಿಗೆ, ಲೋಹ, ಇತ್ಯಾದಿಗಳಿಂದ ಮಾಡಿದ ಮೂರ್ತಿಗಳನ್ನು ಪೂಜಿಸಿದರೆ; ಜನಪದರು ನೇರವಾಗಿ ಕಲ್ಲು, ಮಣ್ಣು, ಕಟ್ಟಿಗೆ, ಲೋಹಗಳನ್ನೇ ಪೂಜಿಸುತ್ತಾರೆ. ಏಕೆಂದರೆ ಅವೆಲ್ಲ ಇವರ ಬದುಕಿನ ಭಾಗ; ಅವಿಭಾಜ್ಯ ಅಂಗ. ಈ ಕಾರಣದಿಂದ ಜನಪದರು ಅದನ್ನು ಹಾಡಿ ಹರಸುತ್ತಾರೆ.

ಕಲ್ಲಮ್ಮ ಮಾತಾಯಿ ಮೆಲ್ಲಮ್ಮರಾಗೀಯ
ಜಲ್ಲ ಜಲ್ಲನೆ ಉದುರಮ್ಮ; ನಾ ನಿನಗೆ
ನೆಲ್ಲಕ್ಕಿ ಪಡಿಯ ನಡೆಸೇನು. [೨೦]

ಕಲ್ಲು – ತಾಯಿ ಮೊಲೆಯುಣಿಸಿ ಬೆಳೆಸಿದಂತೆ ಹಿಟ್ಟು ನುಚ್ಚು ಕೊಟ್ಟು ಸಹಕರಿಸುತ್ತದೆ. ಬೆಳೆ ನೀಡುವ ಮಣ್ಣು – ಗಡಿಗೆ ಬಿಂದಿಗೆಯಾಗಿ ಅಡುಗೆಗೆ ಉಪಕರಣೆಗಳಾಗಿ ಸಹಕಾರಿಯಾಗುತ್ತದೆ. ಕಟ್ಟಿಗೆ – ಮೇಟಿಯ ಕಂಬವಾಗಿ, ಎತ್ತಿಗೆ ನೊಗವಾಗಿ, ಉರುವಲಾಗಿ, ಗುಡಿಸಲಿಗೆ ಮೇಡಿಯಾಗಿ, ಬಾಗಿಲಾಗಿ ಬದುಕ ನಡಿಸುತ್ತದೆ. ಅದಕ್ಕಾಗಿಯೇ ಜನಪದಹೆಣ್ಣು ಅದನ್ನು ದೇವರೆನ್ನುತ್ತಾಳೆ. ತಮ್ಮ ಮಕ್ಕಳಿಗೆ ಕಲ್ಲಪ್ಪ – ಕಲ್ಲವ್ವ, ಬನದಪ್ಪ – ಬನದವ್ವ, ಹೊಳೆಪ್ಪ – ಹೊಳೆವ್ವ, ಕಾಡಪ್ಪ – ಕಾಡವ್ವ . . ಇತ್ಯಾದಿ ಹೆಸರಿಟ್ಟಿರುವುದನ್ನು ಕಾಣುತ್ತೇವೆ.

ಇಡೀ ಮನುಕುಲದ ಬಾಳಿನಲ್ಲಿ ಸಮಪಾಲು ಪಡೆದಿರುವ ಹೆಣ್ಣು ಗಂಡಿನ ಇಹ ಮತ್ತು ಪರದ ಸುಖಕ್ಕೆ ಕಾರಣಳಾಗ ಬಲ್ಲಳು ಎಂಬುದನ್ನು ಸರ್ವಜ್ಞ ತನ್ನ ತ್ರಿಪದಿಯಲ್ಲಿ ತಿಳಿಸಿದ್ದಾನೆ. ಹೆಣ್ಣನ್ನು ನಿರಾಕರಿಸದೆ ಕುಟುಂಬದ ಉನ್ನತಿಗೆ, ಶೋಭೆಗೆ, ನೆಮ್ಮದಿಗೆ ಆಕೆಯನ್ನು ಬಳಸಿಕೊಳ್ಳುವುದು ಬುದ್ಧಿವಂತನ ವ್ಯಕ್ತಿತ್ವದಲ್ಲಿದೆ.

ಮಾತೆಯಿಂ ಹಿತರಿಲ್ಲ ಕೋತಿಯಿಂ ಮರುಳಿಲ್ಲ
ಜೋತಿಯಿಂದಧಿಕ ಬೆಳಕಿಲ್ಲ ದೈವದ
ಜಾತನಿಂದಲ್ಲ ಸರ್ವಜ್ಞ ॥ [೨೧]

ಬೆಳಕಿನ ಮೂಲ ರವಿಯಾದರೆ, ಪ್ರೇಮದ ಮೂಲ ಮಾತೆ. ಹಾಗಾಗಿಯೇ 'ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ' ಎಂಬ ಗಾದೆಗೆ ಸಂವಾದಿಯಾಗಿದೆ. ಜಗತ್ತು ಕೆಟ್ಟ ಮಗನನ್ನು ಕಂಡಿರಬಹುದು ಆದರೆ ಕೆಟ್ಟ ತಾಯಿಯನ್ನು ಕಾಣಲು

ಸಾಧ್ಯವಿಲ್ಲ. ಗ್ರಾಮೀಣರಲ್ಲಿ ಚಾಲ್ತಿಯಲ್ಲಿರುವ ಮಾತೊಂದಿದೆ: ದುಡಿದು - ದಣಿದು ಮನೆಗೆ ಬಂದ ಗಂಡಸಿನ ಕಿಸೆಯನ್ನು ಹೆಂಡತಿ ಗಮನಿಸಿದರೆ; ತಾಯಿ ಆತನ ಹೊಟ್ಟೆ ನೋಡುತ್ತಾಳೆ. ಆತ ಹೊಟ್ಟೆ ತುಂಬಿಸಿಕೊಂಡು ದುಡಿದನೋ, ಹಸಿವಿನಿಂದ ನರಳಿದ್ದಾನೋ ಎಂಬ ಆತಂಕ ಹಡೆದ ಒಡಲಿಗೆ ಮಾತ್ರ ಕಾಣುವಂತಹುದು. ಆದ್ದರಿಂದಲೇ ಮಂಗಳಕರವಾದ ಜ್ಯೋತಿಗೆ ತಾಯಿಯನ್ನು ಹೋಲಿಸಿದ್ದಾರೆ. ಅಂತೆ ಸರ್ವಜ್ಞನೂ ಕೂಡ ಮಾತೆಗಿಂತ ಹಿರಿಯರಿಲ್ಲ, ಕೋತಿಗಿಂತ ಮರುಳಿಲ್ಲ, ಜೋತಿಯಿಂದಧಿಕ ಬೆಳಕಿಲ್ಲ ಎಂದು ಹೇಳಿದ್ದಾನೆ.

ಆಧುನಿಕ ಕಾವ್ಯ: ಮಾತೃತ್ವದ ಕಲ್ಪನೆ: ದೊಡ್ಡ ಪರಂಪರೆ ಹೊಂದಿರುವ ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮದೊಂದಿಗೆ ಕರ್ನಾಟಕ ಏಕೀಕರಣಕ್ಕಾಗಿ ನಡೆದ ಹೋರಾಟ ಒಂದು ಐತಿಹಾಸಿಕವಾದ ಪ್ರಮುಖ ಘಟ್ಟ, ಆ ಸಂದರ್ಭದಲ್ಲಿ ಕವಿಗಳು ನಾಡನ್ನು, ನುಡಿಯನ್ನು ಕಂಡ ಬಗೆ ವಿಶಿಷ್ಟವಾದುದಾಗಿದೆ.

"ನವೋದಯ ಕಾವ್ಯದ ಸಹಜ ವಸ್ತುಗಳಾದ ಸಾಂಸ್ಕೃತಿಕ ಕಾಳಜಿ, ಪ್ರಕೃತಿ ಪ್ರೀತಿ, ಪ್ರಣಯ - ಸ್ನೇಹ - ವಾತ್ಸಲ್ಯ, ವ್ಯಕ್ತಿ ಗೌರವ ಸೃಷ್ಟಿ ರಹಸ್ಯ ಶಕ್ತಿಯ ಬಗ್ಗೆ ಮನಸ್ಸಿನಲ್ಲಿ ಮೂಡುವ ಕುತೂಹಲ ಹಾಗೂ ಅದರಿಂದ ಹುಟ್ಟುವ ನವಿರಾದ ದಾರ್ಶನಿಕತೆ, ಅನುಭಾವ ಮುಂತಾದ ಭಾವ ಭಾವನೆಗಳೂ ಕಣವಿ ಮತ್ತು ಅವರ ಪ್ರಮುಖ ಸಮಕಾಲೀನರಲ್ಲಿ, ಆರಂಭದ ಕಾವ್ಯ ಸಂಗ್ರಹಗಳಲ್ಲಿ ಸ್ವಾಭಾವಿಕವಾಗಿಯೇ ಅಭಿವ್ಯಕ್ತಿ ಪಡೆದ ಪ್ರಮುಖ ವಸ್ತುಗಳು".[೨೨]

ಕನ್ನಡ ಕವಿಗಳು ತಮ್ಮ ನೆಲಮೂಲ ಸಂಸ್ಕೃತಿಯನ್ನು ಮರೆಯದೆ, ಹೊರಗಿನಿಂದ ಬಂದ ಹೊಸದನ್ನು ಅರಗಿಸಿಕೊಂಡು ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಕಥೆ, ಕಾವ್ಯ, ಕವಿತೆ, ಕಾದಂಬರಿ, ಪ್ರಬಂಧ, ನಾಟಕವೇ ಮೊದಲಾದ ಎಲ್ಲಾ ಸಾಹಿತ್ಯ ಪ್ರಕಾರಗಳಲ್ಲಿ ವೈವಿಧ್ಯತೆ ಮೆರೆದಿದ್ದಾರೆ. ಅವುಗಳಲ್ಲಿ ತಮ್ಮ ಅನುಭವದ ವಿವಿಧ ದರ್ಶನ ಮಾಡಿಸಿದ್ದಾರೆ. ವ್ಯಾಖ್ಯಾನಕ್ಕೆ, ವಿಮರ್ಶೆಗೆ ದಕ್ಕುವಂತ ರೀತಿಯಲ್ಲಿ ಎಲ್ಲಾ ಕಾಲ ಘಟ್ಟಗಳಲ್ಲೂ ತಮ್ಮ ಸೃಜನಶೀಲ ಬರಹದಿಂದ ಗಮನ ಸೆಳೆದಿದ್ದಾರೆ.

ಭಾವಗೀತೆಗಳು ಕನ್ನಡ ಕಾವ್ಯ ಕ್ಷೇತ್ರದಲ್ಲಿ ಹೊಸ ಕ್ಷಿತಿಜವನ್ನೇ ರೂಪಿಸಿದವು. ಕವಿಯ ತುಡಿತಕ್ಕೆ, ಚಿಂತನೆಗೆ, ಆಲೋಚನಾ ವಿಧಾನಕ್ಕೆ, ಹೋರಾಟದ ಬದುಕಿಗೆ, ಸ್ವಾತಂತ್ರ್ಯದ ಹಂಬಲಕ್ಕೆ, ನಾಡು-ನುಡಿಯ ಹಿರಿಮೆ - ಗರಿಮೆಗಳ ವಿಶ್ಲೇಷಣೆಗೆ, ನೋವು-ನಲಿವಿಗೆ, ಬಡತನ-ಸಿರಿತನಕ್ಕೆ, ಪ್ರೀತಿ-ಪ್ರೇಮಕ್ಕೆ, ತಾತ್ವಿಕ ಭಾವನೆಗಳನ್ನು ಮೂರ್ತರೂಪವಾಗಿಸಲು ಭಾವಗೀತೆ ಸಶಕ್ತ ಪ್ರಕಾರವಾಗಿ ಲಭಿಸಿತು. ಅದನ್ನು ಸಮರ್ಪಕವಾಗಿ, ಸುಂದರವಾಗಿ, ಶಕ್ತಿಪೂರ್ಣವಾಗಿ ದುಡಿಸಿಕೊಂಡ ಕವಿಗಳ ಒಂದು ಪರಂಪರೆಯೇ ರೂಪುತಾಳಿತು. ಹೀಗೆ ಭಾವಗೀತೆಯ ಕಾವ್ಯ ಪ್ರಕಾರದಲ್ಲಿ ಹರಿದ ಹಲವು ಹನ್ನೊಂದು ವಿಚಾರಗಳಲ್ಲಿ ನಮ್ಮ ಕನ್ನಡ ಕವಿಗಳು ದರ್ಶಿಸಿದ ತಾಯ್ತನ ತುಂಬ ಮಹತ್ತರವಾದದ್ದು.

"ನವೋದಯ ಸಾಹಿತ್ಯದಲ್ಲಿ ಮಾನವೀಯತೆಯೇ ಪ್ರಧಾನ. ಬಹಳ ಸಾರಿ ಅಮೂರ್ತವಾದ ಮಾನವೀಯತೆಯನ್ನು ಹೇಳುತ್ತಲೇ ತಕ್ಷಣದ ಜೀವನ ದರ್ಶನಕ್ಕೆ ದೈವಮೂಲವಾದ ವರ್ಣಾಶ್ರಮ ಧರ್ಮಗಳನ್ನು ಒಪ್ಪಿಕೊಂಡದ್ದು ಅವರ ಪ್ರಮುಖ ವಿರೋಧಾಭಾಸ. ಇಷ್ಟೆಲ್ಲಾ ಮಿತಿಗಳಿದ್ದರೂ ನವೋದಯ ಸಾಹಿತ್ಯ ಕನ್ನಡ ಜನಾಂಗದ ಶ್ರೇಷ್ಠ ಅಭಿವ್ಯಕ್ತಿಗಳಲ್ಲಿ ಒಂದು. ನವೋದಯ ಸಾಹಿತ್ಯದ ಪ್ರಾತಿನಿಧಿಕ ಕೃತಿಗಳಲ್ಲಿ ಸಾಮಾನ್ಯ ಮನುಷ್ಯನ ತತ್‌ಕ್ಷಣದ ಸ್ಥಿತಿಯ ಬಗ್ಗೆ ಪ್ರತಿಕ್ರಿಯೆ ಇಲ್ಲ. . . ." ಎನ್ನುವ ಅಭಿಪ್ರಾಯ ನಿಜವೆನಿಸಿದರೂ ಅವರಲ್ಲಿದ್ದ ಸಮೂಹ ಪ್ರಜ್ಞೆಯನ್ನು ಮರೆಯುವಂತಿಲ್ಲ.[೨೩]

ಆಧುನಿಕ ಕನ್ನಡ ಕವಿಗಳು ದರ್ಶಿಸಿದ ತಾಯಿ ಸ್ವರೂಪ ಬಹುಮುಖಿಯಾಗಿದೆ. ಹಡೆದ ತಾಯಿ, ಪೋಷಿಸಿದ ತಾಯಿ, ಭೂಮಿ ತಾಯಿ, ನಿಸರ್ಗ ತಾಯಿ, ನುಡಿ ತಾಯಿ, ಬ್ರಹ್ಮಾಂಡ ರೂಪಿಸಿ ಪೊರೆವ ತಾಯಿ . . . , ಹೀಗೆ ತಾಯಿಯನ್ನು ನಾನಾ ಆಯಾಮಗಳಲ್ಲಿ ಹಾಗು ನಾನಾ ಸಂಬಂಧಗಳಲ್ಲಿ ಕಂಡಿದ್ದಾರೆ. ಅವರು ಕಂಡ ತಾಯಿ ತನ್ನ ತಾಯಿಯೂ ಹೌದು; ಎಲ್ಲರ ತಾಯಿಯೂ ಹೌದು. ಮೂರ್ತರೂಪಳೂ ಹೌದು, ಅಮೂರ್ತರೂಪಳೂ ಹೌದು. ಆ ಎಲ್ಲಾ ತಾಯಿಯರಲ್ಲೂ ಅನನ್ಯತೆಯಿದೆ, ಜೀವನದರ್ಶನವಿದೆ, ವೈವಿಧ್ಯತೆಯಿದೆ, ನಮ್ಮ ಸಂಸ್ಕೃತಿಯ ವಿಸ್ತಾರವಿದೆ. ನಮ್ಮೆಲ್ಲರ ನಂಬಿಕೆ, ನಡಾವಳಿಕೆಗಳು, ನಂಬಿಕೆಯ ರೂಪವಾಗಿ, ಸಾಂಪ್ರದಾಯಿಕ ಸೊಗಡಿನ ನಮ್ಮ ಅಂತಃಶಕ್ತಿಯ ಸ್ವರೂಪವಾಗಿ ಬೆಳಗುತಿದೆ. ಅದೊಂದು ಜೀವದ್ರವ್ಯವಾಗಿದೆ.

" . . . . ಈ ಕಾಲದಲ್ಲಿ ಬರೆಯುವುದಕ್ಕೆ ಆರಂಭ ಮಾಡಿದವರೆಲ್ಲ ಮಧ್ಯಮ ವರ್ಗದ ಇಂಗ್ಲೀಷ್ ವಿದ್ಯಾಭ್ಯಾಸಕ್ಕೆ ಪರಿಚಿತರಾದುದರಿಂದ, ಅವರ ಕನಸುಗಳಿಗೆ ಈ ನೆಲದ ವಾಸ್ತವ ಸರಿಯಾದ ಭೂಮಿಕೆಯಾಗಲಿಲ್ಲ. ಅಥವ ಹೋರಾಟಕ್ಕೆ ಸ್ಫೂರ್ತಿಯನ್ನು ಕೊಡುವಂತಹ ಯಾವುದೇ ಜೀವಂತ ಚಟುವಟಿಕೆಗಳು ಕವಿಯ ಸುತ್ತ ನಡೆಯುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ರಾಜನಿಂದ, ದೇವರಿಂದ ಬಿಡುಗಡೆಯನ್ನು ತಂದುಕೊಟ್ಟ ಬಂಡವಾಳಷಾಹಿಗೆ ಮುಖಾಮುಖಿಯಾಗದೇ ಕವಿ ಪ್ರಕೃತಿಯತ್ತ, ಅಲೌಕಿಕ ಆನಂದವನ್ನು ಕಲ್ಪಿಸಿಕೊಳ್ಳುವತ್ತ ಮುಖ ಮಾಡಿದ. ಪ್ರಕೃತಿಯಲ್ಲಿ ತಾನೂ ಒಂದು ಭಾಗವಾಗಿ ಎಲೆಯಲ್ಲಿ ಎಲೆಯಾಗಿ, ಹೂವಿನಲ್ಲಿ ಹೂವಾಗಿ ಇದ್ದುಬಿಡುವ ಮನಸ್ಸು ಮಾಡಿದ ಕವಿಗೆ ಹಸಿವು, ತೊಂದರೆಗಳು, ಚಿಂತೆ, ಒದ್ದಾಟಗಳು ಒಂದೂ ಇಲ್ಲವಾಯಿತು. ಯಾವ ಸಂಘರ್ಷಗಳೂ ಇಲ್ಲದ ಅಂದವಾದ ಜಗತ್ತನ್ನು ಕವಿ ಕಂಡ. ವಸ್ತು ವಾಸ್ತವ ಪ್ರಪಂಚದ್ದಾಗಿರದೆ, ಕವಿಯ ಮನೋಪ್ರಪಂಚದ್ದಾಯಿತು. ಇಲ್ಲಿನ ಪಾತ್ರಗಳೆಲ್ಲ ಭಾವನಾತ್ಮಕ ಊಹೆಗಳಾದವು. ಪ್ರಣಯವನ್ನು ವೈಭವಿಸಿ, ಆದರ್ಶೀಕರಿಸಲಾಯಿತು . . . ."[೨೪] ಕನ್ನಡ ನವೋದಯ ಸಾಹಿತ್ಯದ ಆರಂಭದ ಕಾಲಘಟ್ಟದಲ್ಲಿ ಇದು ಅನಿವಾರ್ಯವಾಗಿತ್ತು.

ಆಧುನಿಕ ಕನ್ನಡ ಸಾಹಿತ್ಯ ತನ್ನ ಸಾಂಪ್ರದಾಯಕ ಜಾಡು ಬದಲಿಸಿಕೊಂಡು ಬಹುಮುಖಿ ಚಿಂತನೆಗೆ ಒಳಗಾಯಿತು. ಸಾಹಿತ್ಯದಲ್ಲಿ ಅನೇಕ ಪ್ರಕಾರಗಳು ಹುಟ್ಟಿಕೊಂಡವು. ಸಿದ್ಧಾಂತಗಳು ತಲೆಹಾಕಿದವು. ವೈವಿಧ್ಯತೆಗೆ ಆದ್ಯತೆ ಸಿಕ್ಕಿತು. ಸಾಹಿತ್ಯದಂತೆ ಕಾವ್ಯದಲ್ಲೂ ಹಲವು ಪ್ರಕಾರಗಳು ಹುಟ್ಟಿಕೊಂಡವು. ಮಹಾಕಾವ್ಯ ಖಂಡಕಾವ್ಯ, ಕಥನ ಕಾವ್ಯ, ತತ್ವಪದ, ಭಾವಗೀತೆ, ಆಧುನಿಕ ವಚನ, ಹನಿಗವನ, ಹೀಗೆ ಕಾವ್ಯಕ್ಷೇತ್ರ ಕವಲೊಡೆದು ಮೈದುಂಬಿಕೊಂಡಿತು. ಈ ರೀತಿ ಮೈದುಂಬಿಕೊಂಡ ಕಾವ್ಯದಲ್ಲಿ

ಹಲವು ಸಿದ್ಧಾಂತ, ತತ್ವ, ರೂಪ, ವಿಚಾರ, ಚಿಂತನೆಗಳ ವೈವಿಧ್ಯತೆಯಿಂದ ಕಾವ್ಯ ಕ್ಷೇತ್ರ ಸಮೃದ್ಧವಾಗಿ ಬೆಳೆಯಿತು. ಮತಾಭಿಮಾನದಿಂದ ದೇಶಾಭಿಮಾನದ ಕಡೆಗೆ ಹರಿಯಿತು. ಮಾನವೀಯ ಸಂಬಂಧಗಳಿಗೆ ಒತ್ತುಕೊಟ್ಟು ದೇಶಭಾಷೆಗಳ ಅಭಿಮಾನದೊಂದಿಗೆ ಕಾವ್ಯ ಜನಪರವಾಯಿತು. ವೈಚಾರಿಕ ಸಂಘರ್ಷವೂ ಕಂಡು ಬಂದಿತು. ಈ ಹಿನ್ನೆಲೆಯಲ್ಲಿ ಮಾತೃತ್ವದ ಪರಿಕಲ್ಪನೆ ಹಲವು ಮುಖಗಳಲ್ಲಿ ಹರಿದು, ಸಂಪ್ರದಾಯದ ಜಾಡಿನೊಂದಿಗೆ ಭಾವನಾತ್ಮಕವಾಗಿ ತಾಯಿಯನ್ನು ಕಾಣುವ ಪರಿಪಾಠ ರೂಢಿಯಾಯಿತು.

"ನವೋದಯ ಚಳುವಳಿ ಹೆಣ್ಣನ್ನು ಮತ್ತು ಪ್ರಕೃತಿಯನ್ನು ಸ್ತುತಿಸಿ ಆರಾಧಿಸುವುದಕ್ಕೆ ನಿಶ್ಚಿತವಾದ ಸಾಮಾಜಿಕ ಸಂದರ್ಭಗಳು ಕಾರಣವಾಗಿದ್ದವು. ದಾಸ್ಯದಲ್ಲಿ ನರಳುತ್ತಿದ್ದ ನಾಡಿನ ಜನಾಂಗ, ತನ್ನೊಳಗಿನ ಅರ್ಧಭಾಗ ಶತಮಾನಗಳಿಂದಲೂ ನರಳುತ್ತಿದ್ದವರ ಬಗ್ಗೆ ಕಣ್ಣು ತೆರೆಯಬೇಕಾದರೆ ಬ್ರಿಟೀಷರೇ ಕಾರಣವಾದರು. ಸತಿ ಪದ್ಧತಿಯಂಥ ಅಮಾನವೀಯ ಆಚರಣೆಯನ್ನು ನಿಷೇಧಿಸಿ, ಸ್ತ್ರೀಯರಿಗೆ ವಿದ್ಯಾಭ್ಯಾಸದ ಅವಕಾಶವನ್ನು ಕಲ್ಪಿಸಿದ್ದು ಬಹಳ ಮಹತ್ವಪೂರ್ಣವಾದ ಸಂಗತಿಗಳು. ಸುಧಾರಣಾವಾದಿಗಳ, ರಾಷ್ಟ್ರೀಯ ಚಳುವಳಿಗಾರರ ಪ್ರಭಾವದ ಜೊತೆಗೆ ಇಂಗ್ಲೀಷ್ ಕಾವ್ಯದ ರಮ್ಯವಾದಿ ಕವಿಗಳ ಪ್ರಭಾವವೂ ಸೇರಿ ಕನ್ನಡ ನಾಡಿನ ಸಾಹಿತಿಗಳು ಹೊಸ ದಿಗಂತದತ್ತ ನೋಡುವಂತಾಯಿತು. ಇದರಿಂದಾಗಿ ದೇವರ ಸ್ಥಾನದಲ್ಲಿ ಪ್ರಕೃತಿ ಬಂದು ಅದರ ಆರಾಧನೆ ಮೊದಲಾಯಿತು. ಧಾರ್ಮಿಕ ಜಗತ್ತು ಹೆಣ್ಣನ್ನು ಕಟ್ಟಿಹಾಕಿದನ್ನು ನಿರಾಕರಿಸಿ, ಅವಳನ್ನು ಬೇರೊಂದು ದೃಷ್ಟಿಯಿಂದ ನೋಡುವಂತಾಯಿತು. ಹೆಣ್ಣನ್ನು ಕುರಿತ ಆರಾಧನಾ ಭಾವ ಆ ಯುಗದ ವೈಶಿಷ್ಟ್ಯ.

ದೇವರಿಲ್ಲ ನಿನ್ನ ಬಿಟ್ಟು ಧರೆಯೊಳಗೆ ಮತ್ತೆ
ನಿನ್ನ ಬಿಟ್ಟು ಹೊನ್ನು ಇಲ್ಲ ಭುವನದೊಳಗೆ
(ಸುವರ್ಣ ಸಂಪುಟ, ಪುಟ: ೯೩)

ಎಂದು ಹೆಣ್ಣನ್ನೇ ದೇವರನ್ನಾಗಿ, ಹೊನ್ನಾಗಿ ವೈಭವೀಕರಿಸುವ, ಅವಳೇ ಬದುಕಿನ ಚೇತನ ಎನ್ನುವ ನಿಲುವು ಕವಿಗಳಲ್ಲಿ ನಿಚ್ಚಳವಾಗಿ ಕಂಡುಬರುತ್ತದೆ. ಅವಳಿಲ್ಲದೆ ಬದುಕು ನಿಸ್ಸಾರವೆನಿಸುತ್ತದೆ.

ಅವಳು ನಾಕ ಅವಳು ನರಕ
ನಾಕ ಜೊತೆಯೊಳಿದ್ದರೆ
ನರಕ ದೂರ ಹೋದರೆ.
(ಕುವೆಂಪು ಪ್ರೇಮ ಕಾಶ್ಮೀರ, ಪುಟ: ೫೮)

ಎಂದು ತನ್ನ ಪ್ರೀತಿಯ ಹೆಣ್ಣೇ ಸ್ವರ್ಗ ನರಕಗಳೆಂದು ಕವಿ ಘೋಷಿಸುವುದೂ ಕಂಡುಬರುತ್ತದೆ".[೨೫]

ನವೋದಯ: ನವೋದಯವು ಆವರೆವಿಗೂ ಭಾರತೀಯ ಪರಂಪರೆ, ಕಟ್ಟುಪಾಡುಗಳಲ್ಲೆ ಹೊರಳಾಡುತ್ತಿದ್ದ ಕಾವ್ಯಕ್ಕೆ ಹೊಸ ರೂಪ, ಹೊಸಶಕ್ತಿ, ಹಾಗು ನಾನಾ ಆಯಾಮಗಳನ್ನು ನೀಡಿತು. ನವ ಮನ್ವಂತರಕ್ಕೆ ನಾಂದಿಹಾಡಿತು, ಪ್ರಯೋಗ ಶೀಲತೆಗೆ ಕಾರಣವಾಯಿತು.

ಆನಂದಕ್ಕಾಗಿ ಕಾವ್ಯ, ಜೀವನ ದರ್ಶನಕ್ಕಾಗಿ ಕಾವ್ಯ. ನಿಸರ್ಗವನ್ನಾಗಲಿ, ಬದುಕಿನ ವಿವಿಧ ಮುಖಗಳನ್ನಾಗಲಿ, ವ್ಯಕ್ತಿಗತ ವೈಶಿಷ್ಟ್ಯಗಳನ್ನಾಗಲಿ ಕಾಣಲು ಸೌಂದರ್ಯ ಪ್ರಜ್ಞೆಯಿರಬೇಕು. ಅದನ್ನು ಸುಂದರವಾದ ಭಾಷೆಯಲ್ಲಿ, ಭಾವನಾತ್ಮಕ ಪ್ರಜ್ಞೆಯೊಂದಿಗೆ ಅನುಭವಿಸುವುದು ಮನುಷ್ಯನ ವಿಶೇಷಗುಣ ಎಂಬುದಕ್ಕೆ ಆದ್ಯತೆ ನೀಡಿತು. ನವೋದಯವು ಒಂದು ಕಡೆ ಭಾವನಾ ಪ್ರಧಾನವಾಗಿ ಕಂಡರೆ ಮತ್ತೊಂದು ಕಡೆ ಅದು ವೈಚಾರಿಕ ಪ್ರಧಾನವಾಗಿಯೂ ಕ್ರಿಯಾಶೀಲವಾಗಿದೆ.

" . . . . ಕನ್ನಡ ಆಧುನಿಕ ಸಾಹಿತ್ಯದ ಮೊದಲ ಹಂತ ನವೋದಯ ಸಾಹಿತ್ಯ ಅನೇಕ ಅರ್ಥಗಳಲ್ಲಿ ಉಳಿದ ಎಲ್ಲ ಹಂತಗಳಿಗಿಂತ ಇದು ಹೆಚ್ಚು ಪ್ರಬುದ್ಧವಾದುದು. ೧೯ನೇ ಶತಮಾನದ ನಂತರ ಕನ್ನಡ ಜನಾಂಗ ಕಂಡ ಸಮೃದ್ಧ ಅಭಿವ್ಯಕ್ತಿ ಇದು.

ನವೋದಯ ಸಾಹಿತ್ಯ ಬೆಳೆದು ಬಂದದ್ದು ರಾಷ್ಟ್ರೀಯತಾವಾದದ ಜೊತೆಗೆ ಎಂಬುದು ತುಂಬಾ ಮುಖ್ಯ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗಕ್ಕೆ ರಚಿತವಾದ ಕೆಲವು ಗದ್ಯ ಕೃತಿಗಳು, ಕವನಗಳು, ನವೋದಯ ಸಾಹಿತ್ಯದ ಹುಟ್ಟಿನ ಕಹಳೆಯನ್ನು ಮೊಳಗಿಸಿದ್ದವು.ಆದರೆ ಇದು ಸ್ಪಷ್ಟವಾಗಿ ರೂಪುಗೊಂಡಿದ್ದು 'ಇಂಗ್ಲೀಷ್ ಗೀತೆ'ಗಳಿಂದಲೇ. ಇದು ನವೋದಯ ಸಾಹಿತ್ಯಕ್ಕೆ ಭಾಷಾ ಸಾಮರ್ಥ್ಯದ ಪ್ರೇರಣೆ ಎಲ್ಲಿಂದ ಬಂತು ಎಂಬುದನ್ನು ಸೂಚಿಸುತ್ತದೆ. . . "[೨೬]

ಪಶ್ಚಿಮದ ಸಂಪರ್ಕ ಹಾಗೂ ಪ್ರೇರಣೆ – ಪ್ರಭಾವಗಳಿಂದ ಉಂಟಾದ ಭಾರತೀಯ ಪುನರುಜ್ಜೀವನದ ಪರಿಣಾಮವಾಗಿ, ಕನ್ನಡ ಸಾಹಿತ್ಯವೂ ಇತರ ಭಾರತೀಯ ಭಾಷಾ ಸಾಹಿತ್ಯಗಳಂತೆ, ತನ್ನ ದೃಷ್ಟಿ – ಧ್ಯೇಯ – ರೂಪಗಳಲ್ಲಿ ಬದಲಾಯಿತು. ಈ ಬದಲಾವಣೆ ಮುಖ್ಯವಾಗಿ ಪಶ್ಚಿಮದ ಪ್ರೇರಣೆ ಪ್ರಭಾವಗಳಿಗೆ, ನಮ್ಮ ಕನ್ನಡ ಕವಿಗಳು ತಮ್ಮ ಪ್ರಾದೇಶಿಕ ಸಂಸ್ಕೃತಿ ಹಾಗೂ ಪರಂಪರೆಯ ನೆಲೆಯಲ್ಲಿ ತೋರಿದ ಸೃಜನಾತ್ಮಕ ಪ್ರತಿಕ್ರಿಯೆಯ ಒಂದು ಭಾಗವಾಗಿದೆ. "ನವೋದಯದ ಎಲ್ಲಾ ಪ್ರಮುಖ ಲೇಖಕರ ತಾತ್ವಿಕತೆಯ ಹಿಂದೆ ಭಾರತೀಯ – ದೇಶೀಪರಂಪರೆಯ ತಿಳುವಳಿಕೆ ಮತ್ತು ಆಧ್ಯಾತ್ಮಿಕತೆಯ ಜತೆಗೇ ಪಶ್ಚಿಮದ ಉದಾರ ಮಾನವತಾವಾದಿ ಚಿಂತನೆ – ವಿಚಾರಗಳೂ ಹಾಸು ಹೊಕ್ಕಾಗಿರುವುದನ್ನು ಕಾಣಬಹುದು. ಕೆಲವರಲ್ಲಿ ವೈಜ್ಞಾನಿಕ ಮನೋಧರ್ಮ ಮತ್ತು ವಿಚಾರವಾದ ಪ್ರಧಾನವಾಗಿದ್ದರೆ, ಉಳಿದವರಲ್ಲಿ ಧಾರ್ಮಿಕತೆ ಮತ್ತು ಅದಕ್ಕೆ ವಿರೋಧವಲ್ಲದ ಮಾನವತಾವಾದ ಪ್ರಧಾನವಾಗಿರುವುದನ್ನು ನೋಡಬಹುದು. . . ."[೨೭]

ನಾಡು ನುಡಿಗಳ ಬಗ್ಗೆ ನವೋದಯದವರದು ಅದಮ್ಯ ಗೌರವ. ಭಾರತೀಯರಿಗೆ ಮತ್ತು ಕನ್ನಡಿಗರಿಗೆ ಕಳೆದುಹೋಗಿದ್ದ ಆತ್ಮ ಗೌರವವನ್ನು ಮರಳಿ ಸಂಪಾದಿಸಿ ಕೊಡುವ ಸಲುವಾಗಿ ದೇಶಭಕ್ತಿ, ಭಾಷಾ ಪ್ರೇಮಗಳಂತಹ ಭಾವ ನಿರ್ಭರವಾದ ಸಂಗತಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಅಂದಿನ ಕವಿಗಳಿಗೆ ಅನಿವಾರ್ಯವಾಗಿತ್ತು. ರಾಜ ಭಕ್ತಿಯ ಸ್ಥಳದಲ್ಲಿ ದೇಶಭಕ್ತಿಯನ್ನು ಪ್ರತಿಷ್ಠಾಪಿಸುವ ತುರ್ತು ಅವರಿಗಿತ್ತು. "ಈ ಹಿನ್ನೆಲೆಯಲ್ಲಿ ನೋಡಿದಾಗ ನವೋದಯ ಕಾವ್ಯವು ಭಾಷೆ ಮತ್ತು ರಾಷ್ಟ್ರಗಳನ್ನು ಒಂದೇ ನಾಣ್ಯದ ಎರಡು ಮುಖಗಳಾಗಿ ಪರಿಗಣಿಸಿ, ಎರಡರ ನಡುವೆ ಸಮತೋಲನವನ್ನು ಸಾಧಿಸುವ ಕೆಲಸವನ್ನು ಬಹಳ ಸಹಿಷ್ಣುತೆಯಿಂದಲೇ

ನಿರ್ವಹಿಸಿತೆಂದು ಹೇಳಬೇಕು. ಕುವೆಂಪು ಅವರು ಕರ್ನಾಟಕ ಮಾತೆಯನ್ನು 'ಭಾರತ ತನನಿಯ ತನುಜಾತೆ' ಎಂದು ಕರೆಯುವುದರಲ್ಲಿ ಅಥವಾ ಬೇಂದ್ರೆ ಅವರು ಭಾರತ ಮಾತೆಯಿಂದ 'ಕನ್ನಡ ಕಂದವ್ವನ ಲಾಲಿ'ಯನ್ನು ಹಾಡಿಸುವುದರಲ್ಲಿ ಈ ಸಮನ್ವಯದ ಧೋರಣೆಯನ್ನು ಸ್ಪಷ್ಟವಾಗಿ ಗುರುತಿಸಬಹುದು."[೨೮]ಇದು ನವೋದಯದವರ ತಾತ್ವಿಕ ನಿಲುವೂಕೂಡ ಹೌದು.

"ಭಾಷೆಯೂ ಕೂಡ ಭಾವದಂತೆ ಅರ್ಥವನ್ನು ಪಡೆಯುತ್ತದೆ. ತೀರ ಸಾಮಾನ್ಯವೆಂದು ತೋರುವ ಶಬ್ದಗಳೂ ಜೀವಕಳೆಯಿಂದ ತುಂಬಿ ನಾನಾ ಅರ್ಥಗಳನ್ನು ಪಡೆಯುತ್ತವೆ. ಅಲಂಕಾರ, ಛಂದಸ್ಸುಗಳು ತಮ್ಮ ತಾವೇ ರೂಪಗೊಳ್ಳುತ್ತವೆ. ಕಾವ್ಯವು ದೈನಂದಿನ ವ್ಯಾಪಾರದಲ್ಲಿಯೇ ಕಾಣುವ ನಿತ್ಯ ಸತ್ಯದ ಅರಿವನ್ನುಂಟುಮಾಡಿಕೊಡುತ್ತದೆ. ಈ ಸತ್ಯದ ಅರಿವೇ ಆನಂದ. ಅಂತೆ *'truth, beauty and joy for ever'* ಎನ್ನುವ ಮಾತನ್ನು ಕೀಟ್ಸ್ ಎಂಬ ಆಂಗ್ಲ ಕವಿ ಹೇಳಿದ್ದು ಯತಾರ್ಥವಾಗಿದೆ".[೨೯]

ಪ್ರಗತಿಶೀಲ: ನವೋದಯದವರಲ್ಲಿ ರಾಷ್ಟ್ರ ದಾಸ್ಯದಿಂದ ಬಿಡುಗಡೆಗೊಂಡು ಸ್ವತಂತ್ರ ವಾಗಬೇಕೆಂಬ ರಾಜಕೀಯ ಹಾಗೂ ಸಾಮಾಜಿಕ ಹಂಬಲವು ಆಳವಾಗಿ ಬೇರೂರಿತ್ತು. ಆದರೆ ಅವರಿಗೆ ಇಡಿಯಾಗಿ ಕೂಲಿಕಾರರು, ಕೃಷಿಕರು, ವ್ಯವಸ್ಥೆಯ ಕಾಲ್ತುಳಿತಕ್ಕೆ ಸಿಕ್ಕಿ ನಜ್ಜುಗುಜ್ಜಾಗಿದ್ದ ಶ್ರೀಸಾಮಾನ್ಯರ ಕಡೆ ತೀವ್ರವಾಗಿ ಗಮನಹರಿಸಲು ಸಾಧ್ಯವಾಗಲಿಲ್ಲ. ಅಂಥ ಸಂದರ್ಭದಲ್ಲಿ ರಷ್ಯಾದಲ್ಲಿ ನಡೆದ ಸಮಾಜವಾದಿ ಕ್ರಾಂತಿಯ ಕಿಡಿ ಭಾರತೀಯ ಬುದ್ಧಿಜೀವಿಗಳ ಕಡೆ ಚಿಮ್ಮಿತು. ಆ ಕಿಡಿಯ ಪ್ರೇರಣೆ ಹಾಗು ಇಂಡಿಯಾದ ಮತ್ತು ನಾಡಿನ ಆಂತರಿಕ ಬಿಕ್ಕಟ್ಟುಗಳ ಪರಿಣಾಮದಿಂದ ಪ್ರಗತಿಶೀಲವು ರೂಪು ತಾಳಿತು.

"ಪ್ರಗತಿಶೀಲ: ೧೯೪೫ರ ಸುಮಾರಿಗೆ ಹೊಸದೊಂದು ಗಾಳಿ ಬೀಸಲಾರಂಭಿಸಿತು. ಇದು ಅಖಿಲ ಭಾರತದಲ್ಲಿ ಬೀಸಿದ ಗಾಳಿ. ಈ ಗಾಳಿಯಲ್ಲಿ ಉಸಿರಾಡಿ ಇದರಿಂದ ಚೇತನ ಪಡೆದವರು ತಮ್ಮನ್ನು 'ಪ್ರಗತಿಶೀಲರು' ಎಂದು ಕರೆದುಕೊಂಡರು ಇದು ಪ್ರಗತಿಶೀಲ ಚಳುವಳಿ ಆಯಿತು".[೩೦] ಇದು ಎಡಪಂಥೀಯ ಪ್ರೇರಣೆಯಿಂದ ರೂಪುತಾಳಿತು. ಆವರೆವಿಗೂ ಚಾಲ್ತಿಯಲ್ಲಿದ್ದ ಆಲೋಚನೆ, ಶೈಲಿ, ವಿಧಾನದಲ್ಲಿ ಹೊಸತನ ತಂದಿತು. ಸಾಹಿತ್ಯ ಜನಪರವಾಗಬೇಕೆಂಬ ಆಶಯದಿಂದ, ಹಳೆಯದನ್ನ ಪ್ರಶ್ನಿಸುತ್ತ, ಮೌಢ್ಯತೆಯ ವಿರುದ್ಧವಾಗಿ, ಜಾತೀಯತೆಯ ವಿರುದ್ಧವಾಗಿ, ಸಮಾಜವಾದದ ನೆಲೆಗಟ್ಟಿನಮೇಲೆ ನಡೆಯಿತು.

"ನವೋದಯ ಸಾಹಿತ್ಯದ ರಸಪರ ಧೋರಣೆ, ನಿಸರ್ಗದಲ್ಲಿನ ಉತ್ಸಾಹ, ಜೀವನ ವಿಮುಖತೆಯಂತೆ ಕಂಡ ಆಧ್ಯಾತ್ಮಿಕ ಒಲವು ಮುಂತಾದವುಗಳ ವಿರುದ್ಧ ಪ್ರತಿಕ್ರಿಯೆಯಾಗಿ ಬಂದದ್ದು 'ಪ್ರಗತಿಶೀಲ' ಸಾಹಿತ್ಯ. ಜೀವನ ಸೌಲಭ್ಯಗಳ ದೃಷ್ಟಿಯಿಂದ ನವೋದಯದವರಿಗೂ ಪ್ರಗತಿಶೀಲರಿಗೂ ಮುಖ್ಯ ವ್ಯತ್ಯಾಸವಿದೆ. ಮುಖ್ಯ ನವೋದಯ ಲೇಖಕರು ಸಾಕಷ್ಟು ಭದ್ರತೆಯುಳ್ಳ ಜನ. ಆ ದೃಷ್ಟಿಯಿಂದ ಮುಖ್ಯ ಪ್ರಗತಿಶೀಲರ ಬದುಕು ಅನಿಶ್ಚಿತತೆಯಲ್ಲಿ. ಅವರ ಪ್ರತಿಕ್ರಿಯೆಯ ಹಿಂದೆ ಈ ಅಂಶಕೂಡ ಸಾಕಷ್ಟು ಪ್ರಬಲವಾಗಿದೆ".[೩೧] ಆ ಜನರ ದೃಷ್ಟಿಕೋನದ ಹಿನ್ನೆಲೆಯಲ್ಲಿ ಈ ಮಾತು ಗಮನಾರ್ಹವಾದುದು.

". . . . ಪ್ರಗತಿಶೀಲ ಚಳುವಳಿಯು ಭಾರತದ ಎಲ್ಲಕಡೆಗಳಲ್ಲಿ ಆರಂಭವಾದ ಹಾಗೆ ಕರ್ನಾಟಕದಲ್ಲಿಯು ಗದ್ಯಬರವಣಿಗೆಯಲ್ಲಿ ವಿಶೇಷವಾಗಿ ಕಾಣಿಸಿಕೊಂಡಿತು. ಆಗ ಕಾವ್ಯರಚನೆ ಮಾಡುತ್ತಿದ್ದವರಲ್ಲಿ ಪ್ರಮುಖರಾದ ಕುವೆಂಪು, ಬೇಂದ್ರೆ ಮೊದಲಾದವರಲ್ಲದೆ, ನವ್ಯ ಕವಿಗಳಾದ ಗೋಪಾಲಕೃಷ್ಣ ಅಡಿಗರೂ ಈ ಚಳುವಳಿಯ ಸೆಳೆತಕ್ಕೆ ಸಿಕ್ಕಿ ಬಹಳ ಶಕ್ತಿಶಾಲಿ ಕವನಗಳನ್ನು ರಚಿಸಿದರು. ಆದರೆ ಪ್ರಗತಿಶೀಲ ಚಳುವಳಿ ಕನ್ನಡ ಕಾವ್ಯದಲ್ಲಿ ನೆಲೆಯೂರುವುದಕ್ಕೆ ಬೇಕಾದ ತಾತ್ವಿಕ ಹಿನ್ನೆಲೆಯನ್ನು ಒದಗಿಸುವ ಪ್ರಯತ್ನವನ್ನು ಆ ಕಾಲದ ಸಮಕಾಲೀನ ವಿಮರ್ಶೆ ಮಾಡದೇ ಹೋಯಿತು . . . . "[೨] ಎಂಬ ಮಾತೂ ಕೂಡ ಉಂಟು.

"ನವೋದಯ ಸಾಹಿತ್ಯ ಮತ್ತು ಪ್ರಗತಿಶೀಲ ಎರಡು ಬಗೆಯ ಸಾಹಿತ್ಯ ರೀತಿಗಳಲ್ಲಿಯೂ ಅನುಭವಕ್ಕೆ ತರ್ಕಬದ್ಧವಾದ ರೂಪ ಕೊಡುವ ಪ್ರಯತ್ನ ನಡೆಯಿತು. ಕ್ರಿಯೆಗೆ ಆದಿ, ಮಧ್ಯ, ಅಂತ್ಯ ಎಂಬ ಘಟ್ಟಗಳಿರುವ ಸ್ವರೂಪ ಕೊಡಲು ಸಾಧ್ಯವೆಂಬುದು ಈ ಸಾಹಿತ್ಯಗಳಲ್ಲಿ ಸ್ವಯಂಸಿದ್ಧ ಸತ್ಯ ಎನ್ನುವಂತಾಗಿತ್ತು. ಜೀವನದ ಅನಂತತೆಯನ್ನು ಚಿರ ಗಮನವನ್ನು ಗುರುತಿಸಿದರೂ ಸಾಹಿತಿ, ಜೀವನದ ಸಾಮಗ್ರಿಯನ್ನು ತಾನು ಬಳಸಿಕೊಳ್ಳುವಾಗ ಅದಕ್ಕೆ ತರ್ಕಬದ್ಧವಾದ ಆದಿ ಅಂತ್ಯಗಳುಳ್ಳ ರೂಪವನ್ನು ಕೊಡಬೇಕು ಎಂದೇ ಪ್ರಯತ್ನಿಸಿದ."[೩೩] ಈ ಪ್ರಗತಿಶೀಲ ಚಳುವಳಿಯಲ್ಲಿ ಗದ್ಯದ್ದೆ ಯಜಮಾನಿಕೆಯಾಗಿತ್ತು. ಹಾಗಾಗಿಯೆ ಆ ಪಂಥದವರಿಂದ ತಾಯಿಯನ್ನು ಕುರಿತ ಅಥವ ಮಾತೃತ್ವದ ಕಲ್ಪನೆಯುಳ್ಳ ಪದ್ಯ ಬರಹ ನಮಗೆ ಉಲ್ಲೇಖಕ್ಕೆ ದಕ್ಕುವುದು ದುರ್ಲಭವೆಂದೇ ಹೇಳಬೇಕು. "ಬದುಕಿನಲ್ಲಿರುವ ಶೋಷಣೆ, ಅತ್ಯಾಚಾರಗಳೇ ಪ್ರಗತಿಶೀಲರ ಮುಖ್ಯ ಕಾಳಜಿ. ನವೋದಯ ಸಾಹಿತ್ಯದ ಒಂದು ಮೂಲೆಯಲ್ಲಿದ್ದದ್ದನ್ನು ಪ್ರಗತಿಶೀಲರು ಮುಖ್ಯರಂಗಕ್ಕೆ ತಂದರು. ಜ್ವಾಲಾಮುಖಿಯಂತಿದ್ದ ನಾಡಿನ ಪರಿಸ್ಥಿತಿ ಇದಕ್ಕೆ ಮುಖ್ಯಕಾರಣ . . . ".[೩೪] ಕೇವಲ ಸಾಮಾನ್ಯ ವರ್ಗದ, ಕೃಷಿಕರ, ಕಾರ್ಮಿಕರ ಬದುಕಿನ ಏರಿಳಿತದ ವಿವಿಧ ಮುಖಗಳನ್ನು ಚಿತ್ರಸುವುದೇ ಆ ಪಂಥದ ಮುಖ್ಯ ಗುರಿಯಾಗಿದ್ದರಿಂದ ಅವರಲ್ಲಿ ಕಲ್ಪನಾಲೋಕದ, ಸೌಂದರ್ಯ ಪ್ರಜ್ಞೆಯ, ನಿಸರ್ಗದ ವರ್ಣನೆಯ, ದೇಶ ಭಾಷೆಯ ವರ್ಣನಾಬಾಹುಳ್ಯಕ್ಕೆ ಆದ್ಯತೆ ಸಿಗಲಿಲ್ಲ. ಹಾಗಾಗಿ ಅವರು ತಮ್ಮ ತತ್ವ ಸಿದ್ಧಾಂತಗಳನ್ನು, ಪ್ರಗತಿಪರ ಧೋರಣೆಯನ್ನು ಬಿತ್ತಲು ಗದ್ಯವನ್ನೇ ಹೆಚ್ಚು ಆಶ್ರಯಿಸಿದರು. ಹಾಗೆಂದು ಅವರು ಪದ್ಯಪ್ರಕಾರದಲ್ಲಿ ಕೃಷಿ ಮಾಡಲಿಲ್ಲವೆಂದಲ್ಲ ಆದರೆ ಅವರಿಗೆ ಪದ್ಯಕಿಂತಲೂ ಹೆಚ್ಚು ಪ್ರಿಯವಾದದ್ದು ಗದ್ಯವಾಗಿ ಕಂಡಿತು. ಹಾಗಾಗಿ ಅವರು ತಮ್ಮ ಚಿಂತನೆಗಳನ್ನು ಪ್ರತಿಭಟನೆಯನ್ನು ಗದ್ಯದಲ್ಲಿ ಹೆಚ್ಚು ಬಿಂಬಿಸಿರುವುದು ಕಂಡು ಬರುತ್ತದೆ.

"ನವೋದಯ ಸಾಹಿತ್ಯದ ಎಲ್ಲ ಮಾಧ್ಯಮಗಳಿಗೂ ಪ್ರಾಶಸ್ತ್ಯ ಸಿಕ್ಕರೂ ಕಾವ್ಯಕ್ಕೆ ಹೆಚ್ಚಿನ ಆದ್ಯತೆ ಸಿಕ್ಕಿರುವುದನ್ನು ಕಾಣುತ್ತೇವೆ. ಪ್ರಗತಿಶೀಲರು ತಮ್ಮ ಮೂಲಭೂತ ಉದ್ದೇಶಗಳಿಗೆ ಅನುಕೂಲವಾಗುವಂಥ 'ಕಾದಂಬರಿ' ಮಾಧ್ಯಮಕ್ಕೆ ಹೆಚ್ಚಿನ ಮಹತ್ವ ಒತ್ತು ನೀಡಿದರೆನ್ನುವುದು ವಿಶೇಷ. ಆದರೆ ಈ ಪರಂಪರೆಯ ಕೀರ್ತಿ ವಿಶೇಷ ಇರುವುದು ಓದುಗರ ಸಮುದಾಯವನ್ನು ನಿರ್ಮಾಣ ಮಾಡಿದ್ದು, ಇದು ಪ್ರಗತಿಶೀಲರ ಕೊಡುಗೆ ಎಂದು ಅನೇಕರು ವರ್ಣಿಸಿದ್ದಾರೆ".[೩೫] ಒಂದೊಂದು ಪಂಥದಿಂದ ಒಂದೊಂದು

ಕೊಡುಗೆ ಲಭಿಸಿರುವುದಾದರೂ ಇಡೀ ಸಾಹಿತ್ಯ ಪ್ರಕಾರಗಳಿಗೆ ಸಮಪ್ರಮಾಣದಲ್ಲಿ ಸಿಗಬೇಕಾದ ಮಹತ್ವ ದೊರೆತಿಲ್ಲವೆಂಬುದು ಕಂಡುಬರುತ್ತದೆ.

ನವ್ಯ ಕಾವ್ಯ: ನವೋದಯ ಕಾವ್ಯ ಚಳುವಳಿಯ ಆರಂಭ ಮತ್ತು ಉನ್ನತಿಯ ಕಾಲದಲ್ಲಿ ಸ್ವಾತಂತ್ರ್ಯದ ಹೆಬ್ಬಯಕೆ ನಾಡನ್ನು ತುಂಬಿಕೊಂಡಿತ್ತು. ಸ್ವಾತಂತ್ರ್ಯಾ ನಂತರ ಉಳಿದದ್ದು ಬರೀ ಸವಾಲುಗಳು. ನಾಡಿಗೆ ಸ್ವಾತಂತ್ರ್ಯ ಬರುವುದರೊಂದಿಗೆ ಹಾಲಿನ ಹೊಳೆ ಹರಿದು ಎಲ್ಲ ಸಮಸ್ಯೆಗಳೂ ಪರಿಹಾರವಾಗಿ ಸುಖಸಮೃದ್ಧಿ ತಾಂಡವವಾಡಬಹುದೆಂಬ ನಿರೀಕ್ಷೆ ಇತ್ತು. ಈ ವಿಚಾರದಲ್ಲಿ ಭ್ರಮನಿರಸನವಾಗಲು ಹೆಚ್ಚು ಕಾಲ ಬೇಕಾಗಲಿಲ್ಲ. ಅಧಿಕಾರ ಒಬ್ಬರಿಂದ ಇನ್ನೊಬ್ಬರ ಕೈಗೆ ಬಂದುದನ್ನು ಬಿಟ್ಟರೆ, ಸಮಾಜ ಜೀವನದ ಎಲ್ಲ ಸಮಸ್ಯೆಗಳೂ ಹಾಗೆ ಉಳಿದು, ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. ಸ್ವಾತಂತ್ರ್ಯದ ಕೂಗಿಗೆ ತಮ್ಮ ಧ್ವನಿಯನ್ನು ತೆತ್ತಿದ್ದ ಬುದ್ಧಿಜೀವಿಗಳಿಗೆ ಸ್ವಾತಂತ್ರ್ಯ ಸ್ವೇಚ್ಛಾಚಾರಿಗಳ ಆಡೊಂಬಲವಾದುದ್ದನ್ನು ಕಂಡು ವೇದನೆಯಾಯಿತು. ಇದು ತಮಗೂ ಸಮಾಜಕ್ಕೂ ಯಾವುದೇ ಸಂಬಂಧ ಬೇಡವೆನ್ನುವ ನಿರ್ವೇಗಕ್ಕೆ ದಾರಿ ಮಾಡಿತ್ತು. ಈ ಔದಾಸೀನ್ಯವೇ ಒಂದು ಧೋರಣೆಯಾಯಿತಲ್ಲದೆ ಅಂತರ್ಮುಖತೆಯನ್ನು ಬೆಳೆಸಿತು. ರಮ್ಯ ಮನೋಧರ್ಮ ಬೊಗಳೆತನದ, ಕಾಲ್ಪನಿಕ ಕನಸು ಎಂದು ತೀರ್ಮಾನಿಸಿದ ಬರಹಗಾರರು ಮಣ್ಣಿನ ವಾಸನೆಗೆ ಹಂಬಲಿಸಿದ್ದು ಉಂಟು. ಮಣ್ಣಿನ ವಾಸನೆಯ ಆಶಯವೇ ಒಂದು ಹೊಸ ದೃಷ್ಟಿಕೋನವನ್ನು ಮೂಡಿಸಿ, ಸಾಹಿತ್ಯದಲ್ಲಿ ಒಂದು ಹೊಸ ಚಳುವಳಿಯನ್ನು ಹುಟ್ಟುಹಾಕಿತು. ಕನಸುಗಾರಿಕೆಯನ್ನು ಕಿತ್ತೊಗೆಯುವ ಪ್ರಯತ್ನ ನಡೆಯಿತು.

"ನವ್ಯ ಸಾಹಿತ್ಯದ ಶೇಕಡ ತೊಂಬತ್ತು ಮಂದಿ ಕಾಲೇಜು ಉಪಾಧ್ಯಾಯ ವರ್ಗದಿಂದ ಬಂದವರು. ನವ್ಯ ಸಾಹಿತ್ಯದ ಧೋರಣೆಗಳನ್ನು ವಿಶ್ಲೇಷಿಸುವಲ್ಲಿ ಈ ಅಂಶ ತುಂಬ ಮುಖ್ಯವಾದದ್ದು. ಏಕೆಂದರೆ ವ್ಯಕ್ತಿಯ ಜೀವನ ವಿಧಾನ ಅವನ ಆಲೋಚನಾ ಕ್ರಮವನ್ನು ರೂಪಿಸುತ್ತದೆ. ತಮ್ಮ ಜೀವನದ ಭಯಂಕರ ಏಕತಾನತೆಯ ಅರಿವೇ ಇದರ ವ್ಯಗ್ರತೆಯ ಹಿಂದಿನ ಮೂಲ ಧಾತು. ನವ್ಯ ಸಾಹಿತ್ಯದ ಪ್ರಮುಖ ಕಾಳಜಿಗಳಾದ ಪರಕೀಯತೆ, ವಿಕ್ಷಿಪ್ತತೆ, ವ್ಯಗ್ರತೆಯನ್ನು ಜೀವನದ ಒಟ್ಟು ಸಂದರ್ಭದಲ್ಲಿ ಗುರುತಿಸಿಕೊಳ್ಳದೆ ಹೋದದ್ದೆ ಅವರ ಪ್ರಮುಖ ಮಿತಿ".[೩೬] ಈ ಮಿತಿಯೆ ಅವರು ಮೂಲೆಗುಂಪಾಗಲು ಒಂದು ಪ್ರಮುಖ ಅಂಶವಾಯಿತು.

" . . . . ಪ್ರಗತಿಶೀಲ ರಚನೆಯಲ್ಲಿ ವಸ್ತು ಪ್ರಾಧಾನ್ಯತೆ ಇದ್ದದ್ದು, ಇಲ್ಲಿ ಕವಿತ್ವದ ರೂಪಕ್ಕೆ ಪ್ರಾಧಾನ್ಯತೆ ಬರಲು ಪ್ರಾರಂಭವಾಯಿತು. ಹೇಳಿದ್ದನ್ನೇ ಹೇಳುವುದಿಲ್ಲವೆಂದು, ರೂಪದಲ್ಲಿ ಪ್ರಯೋಗಕ್ಕೆ ತೊಡಗಿತು ನವ್ಯಕಾವ್ಯ ಹೀಗಾಗುವುದಕ್ಕೆ ಈ ಹಿಂದೆ ಕವಿಗೆ ಮತ್ತು ಸಮಾಜಕ್ಕಿದ್ದ ಅನ್ಯೋನ್ಯ ಸಂಬಂಧ ಕಡಿದು ಹೋಗಿತ್ತು. ತನ್ನ ತನವನ್ನು ಆ ಸಮಾಜದಿಂದ ಹೊರಕ್ಕೆ ತರಬೇಕೆಂಬ, ಪ್ರತ್ಯೇಕತಾ ಮನೋಭಾವ ಕವಿಯಲ್ಲಿ ಹುಟ್ಟಿದುದರಿಂದ, ಆದ್ದರಿಂದಲೇ ವಾಸ್ತವಂಶಗಳ ನಿರೂಪಣೆ ಸಾಧ್ಯ ಎಂಬ ತರ್ಕ ಅದರ ಹಿಂದೆ ಇತ್ತು. ಈ ತರ್ಕದಿಂದಾಗಿ ಕವಿ ಸಮಾಜದ ನಿರಂತರ ಬೆಳವಣಿಗೆಯಲ್ಲಿ ಅಡಗಿರುವ ಘರ್ಷಣೆಗಳ ಹಿಂದಿನ ಚಲನಶೀಲ ಕ್ರಿಯಾಶಕ್ತಿಗಳನ್ನು ಗುರುತಿಸಿಕೊಳ್ಳಲಾರದೆ

ಹೋಗಿದ್ದಾನೆ. . . . "[೩೭] ವ್ಯಕ್ತಿಗತ ಪ್ರತಿಷ್ಠೆಯಿಂದ ನಲುಗಿದ ಬರಹಗಾರ ಸಮುದಾಯ ಪ್ರಜ್ಞೆಯಿಂದ ದೂರವಾಗುವಂತಾಯಿತು.

"ನವ್ಯ: ಸುಮಾರು ೧೯೫೦ರ ಹೊತ್ತಿಗೆ ಕನ್ನಡ ಸಾಹಿತ್ಯದಲ್ಲಿ ಹೊಸ ಗಾಳಿ ಬೀಸಲಾರಂಭಿಸಿತು. ೧೯೪೭ರಲ್ಲಿ ಸ್ವಾತಂತ್ರ್ಯ ಬಂದದ್ದು ಇದಕ್ಕೆ ಮುಖ್ಯ ಕಾರಣವೆನ್ನಬಹುದು. ಸ್ವಾತಂತ್ರ್ಯ ಬರುವವರೆಗೆ ಜನತೆ ಎರಡು ಭಾಗವಾಗಿತ್ತು: ಸ್ವಾತಂತ್ರ್ಯಕ್ಕಾಗಿ ಹಂಬಲಿಸುವವರು, ಆಳರಸರ ಕೃಪಾಕಟಾಕ್ಷಕ್ಕಾಗಿ ಹಂಬಲಿಸುವವರು. ನಾಯಕರೆಲ್ಲ ತ್ಯಾಗ ಮೂರ್ತಿಗಳಾಗಿ, ದೇವಮಾನವರಾಗಿ ಕಾಣುತ್ತಿದ್ದರು. ದೇಶದ ದಾರಿದ್ರ್ಯ, ಅಜ್ಞಾನ, ಕಷ್ಟಗಳೆಲ್ಲ ಸ್ವಾತಂತ್ರ್ಯ ಬಂದ ನಂತರ ದೌಡಾಯಿಸುತ್ತವೆ ಎಂಬ ವಿಶ್ವಾಸ ಜನರಲ್ಲಿ ದೃಢವಾಗಿತ್ತು.

. . . . ಸ್ವಾತಂತ್ರ್ಯ ಬಂದ ನಂತರ, ಅದೇ ಶಬ್ದಗಳು ಚಲಾವಣೆಯಲ್ಲಿ ಉಳಿದವು. ಆದರೆ ನೂರಾರು – ಸಾವಿರಾರು ಮಂದಿ ತಮ್ಮ ಹಿಂದಿನ ದೇಶ ಸೇವೆಯ ಠೇವಣಿಗೆ ಹಲವು ರೀತಿಯಲ್ಲಿ ಬಡ್ಡಿ ವಸೂಲು ಮಾಡಲು ಧಾವಿಸುತ್ತಿದ್ದ ದೃಶ್ಯವನ್ನು ಮರೆಯುವ ಅವಕಾಶವೇ ಇರಲಿಲ್ಲ. ಇದರಿಂದ ಸ್ವಾತಂತ್ರ್ಯ ಬರುವವರೆಗೆ ಬಳಸುತ್ತಿದ್ದ ಮೌಲ್ಯಸೂಚಕ ಶಬ್ದಗಳು ಈಗ ಪರಿಹಾಸ್ಯದ ಲೇಪವನ್ನು ಪಡೆದವು. ವ್ಯಕ್ತಿತ್ವ – ವೈಯಕ್ತಿಕ ಜೀವನಗಳ ಬಿರುಕುಗಳನ್ನು ಮುಚ್ಚಿಡಲು ಗಾರೆ ಸಿಮೆಂಟುಗಳಾದವು. ಪ್ರಾಮಾಣಿಕವಾಗಿ ಭಾಷೆ ಬಳಸಲು ಬಯಸುವವರು ಹೊಸ ಶಬ್ದಗಳನ್ನು ಹೊಸ ಧಾಟಿಯನ್ನು ಹುಡುಕಬೇಕಾಗಿತ".[೩೮] ಹೀಗೆ ಮೌಲ್ಯಗಳು ಅಪಮೌಲ್ಯಕ್ಕೊಳಗಾದಾಗ ನವ್ಯದವರು ತಮ್ಮೊಳಗಿನ ಭಾವನೆಗೆ ಹೊಸ ಭಾಷೆ, ತಂತ್ರಗಳನ್ನು ರೂಪಿಸಿಕೊಂಡರು.

"ಭೂಮಿತಾಯಿಯನ್ನು ಕುರಿತು ನವೋದಯ ಕವಿಗಳು ಹಲವರು ಬರೆದಿದ್ದಾರೆ. ಭೂಮಿತಾಯಿಯನ್ನು 'ಮೊದಲಗಿತ್ತಿಯಂತೆ ಮೆರೆಯುತಿಹೆ ತಾಯೆ!' ಎಂದು ಬೆರಗಾಗಿ ವರ್ಣಿಸಿದರು ಬೇಂದ್ರೆ. 'ಪಾಂಚಜನ್ಯ' ಸಂಕಲನದಲ್ಲಿ ಕುವೆಂಪು 'ಜಡವಾದಿ' ಎಂಬ ಕವನ ಬರೆದಿದ್ದಾರೆ. ಅದರ ಕೆಲವು ಪಂಕ್ತಿಗಳಿವು:

ತಾಯಂತೆ? ತಾಯಂತೆ!
ಮಂಕರಾ ಭಾವುಕರು,
ಕನಸುಣಿಗಳಾದವರು
ನೀನೆಮಗೆ ತಾಯೆಂದು
ಚೀರುತಿಹರು!
. . . .
ನಿನ್ನ ಮಕ್ಕಳೆ ನಿನಗೆ
ಹಾದಿಯಲಿ ಬುತ್ತಿ!
ನೀನೆ ಬರಿ ಸೆರೆಯಾಳು;
ನಾವ್ ನಿನಗೆ ಬರಿ ಕೂಳು!

ಇಡೀ ನವೋದಯ ಕಾವ್ಯದಲ್ಲಿಯೇ ವಿಲಕ್ಷಣ ದೃಷ್ಟಿ ಇದು. ಭೂಮಿಯನ್ನು ಈ ರೀತಿ ನಿಷ್ಕರುಣಿಯಾಗಿ, ಸೆರೆಯಾಳಾಗಿ ಬೇರಾವ ಕವಿಯೂ ಕಾಣಲಿಲ್ಲ. ಆದರೆ ಬೇಂದ್ರೆಯವರ ಕವನವಾಗಲಿ ಕುವೆಂಪುರವರ ಕವನವಾಗಲಿ ಭೂಮಿಯನ್ನೂ, ಭೂಮಿ

– ಮನುಷ್ಯರ ಸಂಬಂಧವನ್ನೂ ಒಂದೇ ದೃಷ್ಟಿಯಿಂದ ಕಾಣುತ್ತದೆ. ಗೋಪಾಲಕೃಷ್ಣ ಅಡಿಗರ ೧೯೪೧ರಲ್ಲಿ ಬರೆದ 'ಒಳತೋಟಿ'ಯಲ್ಲಿ ಕವನದ ನಾಯಕ – ಅವನ ಪರಿಸರಗಳ ಬಾಂಧವ್ಯವನ್ನು ಚಿತ್ರಿಸುವ ರೀತಿಯೂ ಇದೇ. ಈ ಭಾಗದ ಕೆಲವು ಪದ್ಯಗಳಿವು:

. . . .
ಈ ತೆರನ ಬಹುಭಂಗಿ ಕುಣಿತ ಮಣಿತಗಳಮರ
ರಮಣೀಯ ಶಾಂತ ಮಾತೆಯ ಮಡಿಲಲಿ
ಕೂಸಾಗಿ ಬೆಳೆದೆನಾ ಮಧುರ ಸವಿಲಾಲಿಗಳ
ಸವಿದು ಭೂರಮೆಯ ಹೂದೋಟ್ಟಿಲಿನಲಿ.

ಆದರೆ ಅಡಿಗರ ಭೂಮಿಗೀತ ಕವನದಲ್ಲಿ ಭೂಮಿ – ಮನುಷ್ಯ ಇವರ ಸಂಬಂಧ ಒಂದು ಕಾಲದ ಸಂದರ್ಭದ್ದಲ್ಲ. ಒಂದು 'ಮೂಡ್' – ವಿಶಿಷ್ಟ ಮನಸ್ಥಿತಿ – ನಿಂದ ಕಂಡದ್ದಲ್ಲ. ಕವನದ 'ನಾನು' ಒಬ್ಬ ವಿಶಿಷ್ಟ ವ್ಯಕ್ತಿಯಲ್ಲ ಎಂಬುದಷ್ಟೇ ಮುಖ್ಯವಲ್ಲ, ವಿಶ್ವದ ಮತ್ತು ಅನಂತಕಾಲದ ಹಿನ್ನೆಲೆಯ ಅನುಭವವನ್ನು ನಮಗೆ ಕವನ ಮೂರ್ತವಾಗಿ ತಂದು ಕೊಡುತ್ತದೆ, ಈ ಹಿನ್ನೆಲೆ 'ನಾನು' ಭೂಮಿಗಳ ಸಂಬಂಧದ ಹಿಂದೆ ಸದಾ ಕಾಣುತ್ತಿರುತ್ತದೆ ಎಂಬುದು ಮುಖ್ಯ".[೩೯]

ಹುಟ್ಟು !
ಮಲೆ ಘಟ್ಟ ಸೋಪಾನಕೆಳಪಟ್ಟಿಯಲ್ಲಿ;
ಉರುಳು– ಮೂರೇ ಉರುಳು– ಕಡಲ ಕುದಿತದಎಣ್ಣೆಕೊಪ್ಪರಿಗೆಗೆ
ತೆಂಗುಗರಿಗಳ ಬೀಸಿ ಕೈಚಾಚಿ ಕರೆದಳು ;
. . . .
ಏನು ಉಳಿಯುವುದು ಮತ್ತೆ :
ಒಂದು ವಿದ್ಯುತ್ತಂತಿ–
ತಾರೆ ನಿಹಾರಿಕೆಗಳಾಚೆಯ ಸಮಾಚಾರ;
ಪಾತಾಳದಾಳದಿಂದೆದ್ದು ಬರುವ ವಿಕಾರ;
ಒಂದನೊಂದಕೆ ಕೂಡಿಸಾಡಿಸುವ, ಕುಣಿಸುವ ಚಮತ್ಕಾರ. [೪೦]

'ಭೂಮಿಗೀತ' ನವ್ಯ ಸಂದರ್ಭದ ತಾಯಿಯ ಪ್ರತೀಕವಾಗಿದ್ದಾಳೆ. 'ಹಕ್ಕಿ ಕೊರಳನು ಹಿಚುಕಿ ಲಾಲಿ ಹಾಡಿದಳು', 'ಯಾರು ನಿಂದವರಲ್ಲಿ? ತಾಯೆ?', 'ಗಂಡಸಾದರೆ ನನ್ನ ಬಲಿಕೊಡುವೆಯೇನು?', 'ಹೆಳವನ ಹೆಗಲಮೇಲೆ ಕುರುಡ ಕೂತಿದ್ದಾನೆ; ದಾರಿ ಸಾಗುವುದೆಂತೋ ನೋಡಬೇಕು' – ಇಂತಹ ಸಾಲು ಸಾಲು ಪ್ರತಿಮೆಗಳಿಂದ ಬೆರಗು ಮೂಡಿಸುವ ಭೂಮಿಗೀತ ಪ್ರಕ್ಷುಬ್ಧ ವಾತಾವರಣದಲ್ಲಿ ರಕ್ಷಿಸಬೇಕಾದ ತಾಯಿ ಬಲಿತೆಗೆದುಕೊಳ್ಳುವ 'ಭಾವ ಹತ್ಯೆ'ಯಾಗಿದ್ದಾಳೆ.

ನವೋದಯ ಚಳುವಳಿಯಲ್ಲಿದ್ದು ಕ್ರಮೇಣ ನವ್ಯ ಕಾವ್ಯಕ್ಕೆ ಹೊರಳಿ ಹೊಸ ಚಳುವಳಿ ರೂಪಿಸಿದ ಕವಿಗಳು ಹೆಣ್ಣಿನ ಬಗ್ಗೆ ತಳೆದ ನಿಲುವು ಗಮನಾರ್ಹವಾದದ್ದು.

ನವ್ಯಕಾವ್ಯ ನಿರಾಕರಿಸಿದ ನವೋದಯ ಕಾವ್ಯದ ಅನೇಕ ಗುಣಾತ್ಮಕ ಅಂಶಗಳಲ್ಲಿ ಹೆಣ್ಣಿನ ಬಗ್ಗೆ ಇದ್ದ ಉದಾರ ಭಾವನೆಯೂ ಒಂದು. ಹೆಣ್ಣು ಕಾಮತೃಷೆಯನ್ನು ತೀರಿಸಲು ಹುಟ್ಟಿದವಳೆಂದೇ ಗ್ರಹಿಸಲಾಯಿತು. ಅವಳ ವ್ಯಕ್ತಿತ್ವವಾಗಲೀ, ಬೇರಾವ ಮುಖಗಳಾಗಲೀ ನವ್ಯ ಕವಿಗಳ ದೃಷ್ಟಿಯಲ್ಲಿ ಅನಗತ್ಯವೆನಿಸಿತು. ಶಕ್ತಿ ಕವಿಗಳ ನಾಲ್ಕಾರು ಸಮರ್ಥ ರಚನೆಗಳು ಮಾತ್ರ ಕವನಗಳಾಗಿ ಸಫಲವಾದರೆ ಉಳಿದ ನೂರಾರು ಕವಿತೆಗಳು ಶಬ್ದಗಳ ಕಸರತ್ತು ಮಾತ್ರವಾದವು. ನವ್ಯಕಾವ್ಯದ ಸತ್ವವೆಲ್ಲಾ ಮುಗಿದುಹೋಯಿತೇನೋ ಅನ್ನಿಸುವಷ್ಟು ಜಡತ್ವ ಆವರಿಸಿತು. ಬದುಕಿನ ಸಾಂದ್ರ ಅನುಭವಗಳಿಂದ ದೂರವಾದ ರಚನೆಗಳು ಹೆಣ್ಣಿನ ಬಗ್ಗೆ ವೈವಿಧ್ಯಮಯ ಚಿತ್ರಣವನ್ನೇನು ಕೊಡಲಿಲ್ಲ. ಇದರ ಮಧ್ಯೆ ಎದ್ದು ಕಾಣುವುದು ಹಳೆಯ ಕವಿಗಳಾಗಲೀ, ನವೋದಯ ಕವಿಗಳಾಗಲೀ ಚಿತ್ರಿಸಲಾಗದಿದ್ದ ಸಾಮಾನ್ಯ ತಾಯಿಯೊಬ್ಬಳ ಬದುಕಿನ ವಿವರಗಳನ್ನು ಹೇಳುವ ಲಂಕೇಶರ 'ಅವ್ವ' ಬಹಳ ಮಹತ್ವದ ಕವನ.

ನನ್ನವ್ವ ಫಲವತ್ತಾದ ಕಪ್ಪು ನೆಲ
ಅಲ್ಲಿ ಹಸಿರು ಪತ್ರದ ಹರವು ಬಿಳಿಯ ಹೂ ಹಬ್ಬ
ಸುಟ್ಟಷ್ಟು ಕಸುವು ನೊಂದಷ್ಟು ಹೂಹಣ್ಣು
. . . .
ಸತಿ ಸಾವಿತ್ರಿ ಜಾನಕಿ ಊರ್ಮಿಳೆಯಲ್ಲ
ಮುತ್ತೈದೆಯಾಗಿ ಕುಂಕುಮ ಕೂಡಾ ಇಡಲಿಲ್ಲ
ಬನದ ಕರಡಿಯ ಹಾಗೆ
ಚಿಕ್ಕ ಮಕ್ಕಳ ಹೊತ್ತು
ಗಂಡನ್ನ ಸಾಕಿದಳು ಕಾಸು ಗಂಟಿಕ್ಕಿದಳು
ನೊಂದ ನಾಯಿಯ ಹಾಗೆ ಬೈದು ಗೊಣಗಿ ಗುದ್ದಾಡಿದಳು. [೪೧]

ನನ್ನವ್ವ ಫಲವತ್ತಾದ ಕಪ್ಪುನೆಲ, ಬನದ ಕರಡಿಯಹಾಗೆ ಮುಂತಾದ ಸಾಮಾನ್ಯ ಮಾತುಗಳಿಂದಲೇ ಅಸಮಾನರೀತಿಯಲ್ಲಿ ತಾಯಿಯನ್ನು ಕಂಡ ಕವಿತೆ ಲಂಕೇಶರ 'ಅವ್ವ'. ಹಳ್ಳಿಗಾಡಿನ ಗುಣ ಮೈಗೂಡಿಸಿಕೊಂಡು ಬದುಕನ್ನು ಸವಾಲಾಗಿ ಸ್ವೀಕರಿಸಿದ ಒಬ್ಬ ಸಾಮಾನ್ಯ ತಾಯಿಯ ಜೀವನ ಚಿತ್ರಣವನ್ನು ಅನನ್ಯವಾಗಿ ಕಟ್ಟಿಕೊಡುವ ಒಂದು ಅಪರೂಪದ ಕವಿತೆ. ದೇಶದ ಬಹಳಷ್ಟು ಹಳ್ಳಿಗಳಲ್ಲಿ ಇಂಥ ಅವ್ವಂದಿರಿರುವುದು ಇಂದಿಗೂ ಕಂಡುಬರುವುದರಿಂದಲೇ ಈ ಕವಿತೆ ಪ್ರಾಮುಖ್ಯತೆ ಗಳಿಸಿದೆ.

ನವ್ಯದಲ್ಲಿ ಕೆಲವು ಕವಿಗಳು ತಾಯಿಯ ಹೋರಾಟದ ಬದುಕನ್ನು, ಆಕೆಯಲ್ಲಿದ್ದ ಕೌಟುಂಬಿಕದ ಸೆಳೆತವನ್ನು, ಸ್ವಾಭಿಮಾನದ ಬದುಕನ್ನು ವಾಸ್ತವಿಕ ನೆಲಗಟ್ಟಿನ ಮೇಲೆ ಚಿತ್ರಿಸಿದರು. ಆದರೆ ಅವರಲ್ಲಿ ಪ್ರತಿಮೆ, ರೂಪಕಗಳು ಮೇಳೈಸಿಕೊಂಡು ಭಾಷೆ ಜಟಿಲವಾಯ್ತು.

ದಲಿತ - ಬಂಡಾಯ: ಇಡೀ ಸಮಾಜವನ್ನು ಹಾಗು ಸಾಹಿತ್ಯವನ್ನು ನೋಡುವ ದೃಷ್ಟಿಯನ್ನು, ಅದನ್ನು ಅಭಿವ್ಯಕ್ತಿಸಲು ಮತ್ತು ವ್ಯಾಖ್ಯಾನಿಸಲು ಹೊಸ ಆಯಾಮ ಒದಗಿಸಿ ಕೊಟ್ಟ ಪಂಥ ದಲಿತ ಬಂಡಾಯ. ಅನ್ಯಶಾಸ್ತ್ರ ಮುಖೇನ, ಗುರು ಮುಖೇನ ಗ್ರಹಿಸುವ, ಶಾಸ್ತ್ರೀಯ ನೆಲೆಗಟ್ಟಿನಲ್ಲೆ ಗಿರಿಕಿ ಹೊಡೆಯುವ, ಸಂಪ್ರದಾಯ ಮೂಲಗಳನ್ನೇ ಪ್ರಶ್ನಿಸುವ, ಧಿಕ್ಕರಿಸುವ, ಆಧುನಿಕ ಚಿಂತನೆಗಳಲ್ಲಿ ವೈಚಾರಿಕ ಪ್ರಖರತೆಯನ್ನು ಒಳಗೊಂಡ

ವಿಚಾರ ಧಾರೆಯಿಂದ ಕಾವ್ಯ ಕಟ್ಟುವ ಪ್ರಕ್ರಿಯೆಗೆ ಗಟ್ಟಿ ನೆಲೆ ಒದಗಿಸಿದ್ದು ದಲಿತ ಬಂಡಾಯ. ಅಂದರೆ ನವೋದಯದಲ್ಲಿ ಈ ಸ್ವಂತಿಕೆ ಇಲ್ಲದವರು ಇಲ್ಲವೆಂದಲ್ಲ. ಕುವೆಂಪು ಮೊದಲಾದವರು ಬಂಡಾಯ ಧೋರಣೆ ಹೊಂದಿದ್ದರೂ ಅವರು ಒಂದು ಸಿದ್ಧ ಶೈಲಿಯ ಮಾರ್ಗವನ್ನು ಆಯ್ಕೆಮಾಡಿಕೊಂಡಿದ್ದರು. ಕೆಲವು ಕಡೆ ಆಧ್ಯಾತ್ಮಿಕ ಪ್ರಜ್ಞೆಗೂ ಒಳಗಾಗಿದ್ದರು. ದೇವರ ಅಸ್ತಿತ್ವದ ಬಗ್ಗೆ, ಆಧ್ಯಾತ್ಮಿಕ ಹಿರಿಮೆ ಬಗ್ಗೆ ಸ್ವಲ್ಪವೂ ಸಡಿಲ ಮನೋಭಾವ ಕಾಣುತ್ತಿರಲಿಲ್ಲ.

"ನಿಜವಾದ ಸ್ವೋಪಜ್ಞನಾದ ಕವಿ ಹುಟ್ಟಿದಾಗಲೆಲ್ಲ ಸಾಹಿತ್ಯದಲ್ಲಿ ಒಂದು ಹೊಸ ಪಂಥ ಸೃಷ್ಟಿಯಾಗುತ್ತದೆ. ಅನಂತರ ಆ ಪಂಥದೊಳಕ್ಕೆ ಅನೇಕರು ಬರುತ್ತಾರೆ. ಇಲ್ಲಿ ಸ್ವೋಪಜ್ಞನಾದ ಕವಿ ಬಂದಾಗ ಒಂದು ಪಂಥವನ್ನು ಹುಟ್ಟು ಹಾಕುತ್ತಾನೆ, ಬೆಳೆಸುತ್ತಾನೆ. ಆದರೆ ಇಲ್ಲಿ ಅವನು ಬಹು ಪ್ರತಿಭಾವಂತನಾದ ಹಾಗೂ ಸ್ವೋಪಜ್ಞನಾದ ಕವಿಯಾಗಿರುತ್ತಾನೆಂಬುದು ಬಹಳ ಮುಖ್ಯ".[೨೨] ಒಂದು ಪಂಥ ನಿರ್ಮಾಣಕ್ಕೆ ಸಮಾಜದ ಬಹುಮುಖಗಳ ದರ್ಶನ ಪಡೆದ ಪ್ರತಿಭಾನ್ವಿತ ವ್ಯಕ್ತಿ ಕಾರಣನಾಗುತ್ತಾನೆ

ಎಲ್ಲ ಕವಿಗಳ ಚಿಂತನೆಗಳು ಆಯಾ ಕವಿಯ ಸ್ವಂತ ಚಿಂತನೆಗಳಾದರೂ ಒಂದು ಪರಂಪರೆಗೆ, ಸಾಂಪ್ರದಾಯಿಕ ಬಣಕ್ಕೆ ತಳಕು ಹಾಕಿಕೊಂಡಿರುತ್ತವೆ. ಆದರೆ ದಲಿತ ಬಂಡಾಯಗಳು ಅತ್ಯಂತ ಖಾಸಗಿ ಹಾಗೂ ವೈಯಕ್ತಿಕ ಸತ್ಯಗಳನ್ನು ಅದರ ಜೊತೆಗೆ ಇಡೀ ತಮ್ಮ ಸಮುದಾಯದ ಸತ್ಯಗಳನ್ನು ನಿರ್ಭಿಡೆಯಿಂದ ಹೇಳಹೊರಟಾಗ ಅವರ ಭಾಷೆ, ಶೈಲಿ, ಛಂದ ಎಲ್ಲವೂ ಭಿನ್ನ ಹಾಗೂ ವೈವಿಧ್ಯವಾದವು. ತನ್ನ ಕಾಲದ ಸ್ಥಿತಿ ಗತಿಗಳನ್ನು, ತನ್ನ ಒಡಲಾಳದ ತಲ್ಲಣಗಳನ್ನು, ಬದುಕಿನ ಬೇಗುದಿಯನ್ನು ತನ್ನ ರಕ್ತಗತ ಶೈಲಿಯಲ್ಲಿ ಕಾವ್ಯವಾಗಿಸುವುದನ್ನು ಇಲ್ಲಿ ಕಾಣಬಹುದು.

ಇಪ್ಪತ್ತನೆ ಶತಮಾನದ ಆರಂಭದ ಕಾಲದಲ್ಲಿ ಬರೆಯ ತೊಡಗಿದ ಕನ್ನಡ ಕಾವ್ಯ ರಚನೆಯ ಸಂದರ್ಭದಲ್ಲಿ ಕವಿಯ ಬುದ್ಧಿ ಶಕ್ತಿಯು ಯಾವ ಪ್ರಮಾಣದ ಪಾತ್ರ ವಹಿಸುತ್ತದೆನ್ನುವುದು, ಕಾವ್ಯದ ವಸ್ತು, ರೂಪ, ಗಾತ್ರ ಮತ್ತು ಬಾಹುಳ್ಯಗಳನ್ನು ನಿರ್ಧರಿಸುವ ಪ್ರೇರಕ ಸಂಗತಿಗಳಲ್ಲಿ ಒಂದೆಂದು ತೋರುತ್ತದೆ. ಆತನ ವೈಚಾರಿಕ ಪ್ರಖರತೆ, ಸಂಪ್ರದಾಯದ ನೆರಳು, ಪರಂಪರೆಯ ಪ್ರಜ್ಞೆ ಹಾಗೂ ಆತನ ವಾಸ್ತವಿಕ ಬದುಕು - ಇವುಗಳು ಕವಿಯ ಸ್ವಾನುಭವದಲ್ಲಿ ಮೂಡಿ ಬಂದಾಗ ಆತನ ವಾಸ್ತವಿಕ ಪ್ರಜ್ಞೆ ಕಂಡುಕೊಳ್ಳಬಹುದು. ಅದರಿಂದ ಕವಿತಾ ರಚನೆಗಿಂತಲೂ ಮೊದಲು ಅದರ ಅವಧಿಯಲ್ಲಿ ಮತ್ತು ನಂತರ, ಕವಿಯು ತನ್ನ ಒಳಮನ ಮತ್ತು ನಿಯಂತ್ರಕ ಬುದ್ಧಿಶಕ್ತಿಗಳಿಗೆ ಕೊಡುವ ಆದ್ಯತೆಯೂ ಅವನ ಕಾವ್ಯದ ಸ್ವರೂಪವನ್ನೂ ಗುರುತಿಸಲು ನೆರವಾಗುವ ಅಂಶಗಳಾಗಬಲ್ಲವು.

"ನವ್ಯ ನವೋದಯ ಪಂಥಗಳು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಜನ್ಮ ತಾಳಿದ್ದರೆ, ಬಂಡಾಯ ಸಾಹಿತ್ಯ ಈ ನೆಲದ ಅನಿವಾರ್ಯತೆಯಿಂದ ಪ್ರಕಟಗೊಂಡಿದ್ದು. ಈ ಮೂಲಕವಾಗಿ ಬಂಡಾಯ ಸಾಹಿತ್ಯಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ - ಎಂದು ಈ ಪರಂಪರೆ ಸಾರುತ್ತದೆ. ಹೊಸಗನ್ನಡದ ನವೋದಯ, ಪ್ರಗತಿಶೀಲ ನವ್ಯಘಟ್ಟಗಳಲ್ಲಿ ಕಾಣದ ಅಸಂಖ್ಯಾತ ಮಹಿಳೆಯರು ಸಾಹಿತ್ಯದ ಮೂಲಕ ಮಾತನಾಡಿದ್ದು, ಪ್ರಗತಿ

ಪರವಾಗಿ ಬೆಳೆದು ನಿಂತದ್ದು ಬಂಡಾಯದ ಸಂದರ್ಭದಲ್ಲಿ".[3] ಕನ್ನಡ ಸಾರಸ್ವತ ಲೋಕದಲ್ಲಿ ಕಂಡುಬಂದ ಅಪರೂಪದ ಬೆಳವಣಿಗೆಯಿದು.

ಪರಂಪರೆ ಎಂಬುದು ಕವಿಗೆ ಬಿಡಿಸಿಕೊಳ್ಳಲಾರದ ಸಂಬಂಧ. ಅದು ಕೇವಲ ಕವಿತೆಗೆ ಮಾತ್ರ ಸೀಮಿತವಾದದ್ದಲ್ಲ. ಅವನ ಬದುಕಿನ ಸಮಗ್ರತೆಗೆ ಸಂಬಂಧಿಸಿದ್ದು. ಸಮಗ್ರ ಸಂಸ್ಕೃತಿಯಲ್ಲಿ ಹಲವಾರು ಒಳಸುಳಿಗಳು, ವೈರುಧ್ಯಗಳು ಯಾವಾಗಲೂ ಜೀವಂತವಾಗಿರುತ್ತವೆ. ಪರಂಪರೆ ಎಂಬುದು ಹಲವಾರು ಎಳೆಗಳಿಂದ ಹೆಣೆದ ಹಗ್ಗವಾಗಿ ಕವಿಯ ಬರವಣಿಗೆಯಲ್ಲಿ ವ್ಯಾಪಿಸಿಕೊಂಡಿರುತ್ತದೆ. ಆತನ ಧರ್ಮ, ಕಸುಬು, ಸಾಮಾಜಿಕ ಸ್ಥಾನಮಾನ, ಗಳಿಕೆ ಹಾಗೂ ಸಮಾಜದ ಮೌಲ್ಯಗಳು ಆ ಒಂದೊಂದು ಎಳೆಯನ್ನು ಬಿಂಬಿಸುತ್ತವೆ.

ಕನ್ನಡದ ಕವಿಗಳು ಏಕಕಾಲದಲ್ಲಿ ಕನ್ನಡ, ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಗಳ ಸಂಪರ್ಕ ಹೊಂದಿದರು. ಕನ್ನಡದ ಮೂಲಕ ಕರ್ನಾಟಕದ ದೇಶೀ ಸಂಸ್ಕೃತಿಯನ್ನು, ಸಂಸ್ಕೃತದ ಮೂಲಕ ಭಾರತೀಯ ಸಂಸ್ಕೃತಿಯನ್ನು, ಇಂಗ್ಲಿಷ್ ಮೂಲಕ ಪಾಶ್ಚಾತ್ಯ ಸಂಸ್ಕೃತಿಯನ್ನು ವಿಶಾಲ ತಳಹದಿಯ ಮೇಲೆ ಗ್ರಹಿಸುವ ಕಾರ್ಯ ನಡೆಯಿತು. ಹಾಗಾಗಿ ಏಕಮುಖವಾಗಿದ್ದ ಕಾವ್ಯ ಚಿಂತನೆ ಬಹುಮುಖವಾಗಿ ಹರಿಯುವಂತಾಯ್ತು.

ನವೋದಯ, ಪ್ರಗತಿಶೀಲ, ನವ್ಯ ಪಂಥಗಳು ಭಾಷಾ ಬಳಕೆಯಲ್ಲಿ, ಬರವಣಿಗೆಯ ಶೈಲಿಯಲ್ಲಿ, ಆಲೋಚನಾ ವಿಧಾನದಲ್ಲಿ ನಿಶ್ಚಿತ ಧೋರಣೆ ತಾಳಿದ್ದವು. ಅವರ ದೃಷ್ಟಿ ಬರವಣಿಗೆಗೆ ಮಾತ್ರ ಸೀಮಿತವಾಗಿತ್ತು. ರಾಜಕೀಯ, ಸಾಮಾಜಿಕ, ಆರ್ಥಿಕ ಶೈಕ್ಷಣಿಕವೇ ಮೊದಲಾದ ಸಮಗ್ರ ಬದುಕನ್ನು ಒಳಗೊಂಡ ಪ್ರಜ್ಞೆಯ ಕೊರತೆಯಿಂದ ನರಳುತ್ತಿದ್ದದ್ದು ಕಾಣುತ್ತಿತ್ತು. ಆ ಪಂಥಗಳಲ್ಲಿ ದಲಿತರು, ಅಲ್ಪಸಂಖ್ಯಾತರು, ಶ್ರೀಸಾಮಾನ್ಯರು ತಮ್ಮ ಅನುಭವವನ್ನು ಅಭಿವ್ಯಕ್ತಿಪಡಿಸಲು ಚಾರಿತ್ರಿಕ ಅವಕಾಶ ಒದಗಿರಲಿಲ್ಲ. ಮಹಿಳೆಯರಲ್ಲಿ ಕೇವಲ ಮೇಲ್ವರ್ಗದವರು ಮಾತ್ರ ತೊಡಗಿಕೊಂಡು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಸಾಹಿತ್ಯ ರಚನೆಯಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ದಲಿತ ಬಂಡಾಯವು ಬದುಕಿನ ಸಮಗ್ರ ಬದಲಾವಣೆಯಾಗಬೇಕು, ಅದು ಕೇವಲ ಕೇಳಿ ಪಡೆಯುವುದರಿಂದ ಸಾಧ್ಯವಿಲ್ಲ. ಸಾತ್ವಿಕ ಧೋರಣೆಗೆ ಸ್ಪಂದನ ಸಿಗಲಾರದು. ಏನಿದ್ದರೂ ಹೋರಾಟ, ಪ್ರತಿಭಟನೆಯಿಂದ ಮಾತ್ರ ಸಾಧ್ಯ. ಈ ಹೋರಾಟ ಪ್ರತಿಭಟನೆ ಎಂಬುದು ಕೇವಲ ವ್ಯಕ್ತಿಗತ ಹಿರಿಮೆಗೆ ಒಳಗಾಗದೆ, ಸರ್ವರ ಸಮಾನತೆಗೆ, ವೈಚಾರಿಕ ಚಿಂತನೆಗೆ, ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿರಬೇಕೆಂಬುದಾಗಿತ್ತು.

ಆವರೆವಿಗೂ ಸಾಮಾಜಿಕ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕವಾಗಿ ತರತಮ ಭಾವನೆಗೆ ಸಿಕ್ಕಿ ಅಸ್ತಿತ್ವ ಕಳೆದುಕೊಂಡಿದ್ದ ದಲಿತರು, ಅಲ್ಪಸಂಖ್ಯಾತರು, ಕೂಲಿ ಕಾರ್ಮಿಕರು, ಹಿಂದುಳಿದವರು ತಮ್ಮ ಭಾವನೆಗಳಿಗೆ ಕಾವ್ಯದ ರೂಪ ಕೊಟ್ಟರು. ತರ್ಕಬದ್ಧವಾದ, ತಾತ್ವಿಕವಾದ, ಮಾನವೀಯ ನೆಲೆಗಟ್ಟಿನ ಮೇಲೆ ನಿಂತ; ಪ್ರಗತಿಪರವಾದ, ಜನಪರ ಆಶಯಗಳೊಂದಿಗೆ ಗರಿಗಟ್ಟಿಕೊಂಡ ಪಂಥವೇ ದಲಿತ ಬಂಡಾಯ ಪಂಥವಾಯಿತು.

"ಸಾಮಾನ್ಯ ಮನುಷ್ಯನ ಬದುಕಿನಿಂದ ಬಂದಿರುವ ಇನ್ನೊಂದು ಪ್ರತಿಭಟನೆಯ ಕಾವ್ಯ ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು'. ಶತಶತಮಾನಗಳಿಂದ ಆರ್ಥಿಕ ಸಾಮಾಜಿಕ ದಬ್ಬಾಳಿಕೆಗೆ ಗುರಿಯಾಗಿದ್ದ ಜನಾಂಗದ ಮೊಟ್ಟಮೊದಲ ದನಿ ಇದು. ಅದುಮಿಟ್ಟಿದ್ದ ತನ್ನೆಲ್ಲ ದಟ್ಟ ರೋಷ, ರೊಚ್ಚು, ವಿಷಾದ ಈ ಕಾವ್ಯದ ಸಾಲುಗಳಲ್ಲಿ ವಿದ್ಯುತ್ತಿನಂತೆ ಹರಿಯುತ್ತದೆ. ಇರಿಸು ಮುರಿಸಾಗುವಷ್ಟು ಒರಟುತನ ಈ ಕೃತಿಯ ವೈಶಿಷ್ಟ್ಯ. ಜೀವನ ನಿಷ್ಠವಾದ ಬಂಡಾಯ ಪರವಾದ, ಹೊಸ ಸಾಹಿತ್ಯ ಮಾರ್ಗದ ಪ್ರಮುಖ ಕೃತಿ ಇದು.

ಸಮಷ್ಟಿಯ ಜೀವನ ಕ್ರಮವನ್ನು ಅರ್ಥಪೂರ್ಣವಾಗಿ ಅದರ ಎಲ್ಲ ಬಣ್ಣ, ದುಃಖ ದುಮ್ಮಾನಗಳೊಂದಿಗೆ ಬರೆಯಬಲ್ಲ ಇತರ ಶಕ್ತಿಶಾಲಿಯ ಬರಹಗಾರರು ಶ್ರೀ ಕೃಷ್ಣ ಆಲನಹಳ್ಳಿ, ಡಾ. ಬೆಸಗರಹಳ್ಳಿ ರಾಮಣ್ಣ, ಬರಗೂರು ರಾಮಚಂದ್ರಪ್ಪ. ಈ ಬರಹಗಾರರಲ್ಲಿ ಚಾರಿತ್ರಿಕವಾಗಿ ಅನಿವಾರ್ಯವಾದ ಹೊಸ ಅಭಿವ್ಯಕ್ತಿಗಳು ರೂಪುಗೊಳ್ಳುತ್ತವೆ.

ನವೋದಯ ಸಾಹಿತ್ಯ ಮಾರ್ಗದ ಮುಖ್ಯ ಲೇಖಕರಾದ ಜಿ.ಎಸ್.ಎಸ್, ಕಣವಿಯವರ ಕಾಳಜಿ, ನವೋದಯ ಲೇಖಕರಿಗಿಂತ ಭಿನ್ನವಲ್ಲ. ಸಾಮಾನ್ಯ ಮನುಷ್ಯನ ಬದುಕಿನ ವಾಸ್ತವಗಳಾದ ರಾಜಕೀಯ ಭ್ರಷ್ಟಾಚಾರ, ಭ್ರಮ ನಿರಸನ, ವಿಫಲ ಯೋಜನೆಗಳು, ಹತಾಶೆ ಮುಂತಾದವುಗಳು ಇವರ ಕಾವ್ಯದಲ್ಲಿ ತೀವ್ರ ವಿಡಂಬನೆಗೆ ಗುರಿಯಾಗಿವೆ. ಈ ವಿಡಂಬನೆ ಇವರ ಕಾವ್ಯದಲ್ಲಿ ಅನೇಕ ವೇಳೆ ಪೂರ್ಣ ನೆಲೆಯಾಗಿ ಅಭಿವ್ಯಕ್ತವಾಗುತ್ತದೆ".[೪೪] ಡಿ. ಅರ್. ನಾಗರಾಜ್‌ರವರು ಹೇಳಿರುವ ಈ ಮಾತು ಚಿಂತನಾರ್ಹವಾದುದಾಗಿದೆ. ನವೋದಯದವರ ಕಾಲದಲ್ಲಿ ಕಾಡುತ್ತಿದ್ದ ಸಮಸ್ಯೆಗಳು ಕಾಲಾಂತರದಲ್ಲಿ ಕಾಡುವ ಸಮಸ್ಯೆಗಳಂತಿರಲಿಲ್ಲ ಎಂಬ ಸಂಗತಿಯೂ ಅಷ್ಟೆ ಮುಖ್ಯ ಎಂಬುದನ್ನು ಕಡೆಗಣಿಸುವಂತಿಲ್ಲ.

ದಲಿತ ಬಂಡಾಯದವರು ಭಾಷೆಯ ಮಡಿವಂತಿಕೆ ಮೀರಿದರು, ಸಂಪ್ರದಾಯದ ಜಾಡು ತೊರೆದರು, ಪಾಳೆಗಾರಿಕೆ ಸಂಸ್ಕೃತಿಯನ್ನು ಉಲ್ಲಂಘಿಸಿದರು, ಪುರೋಹಿತಶಾಹಿ ದೌರ್ಜನ್ಯವನ್ನು ಧಿಕ್ಕರಿಸಿದರು. ಮಾನವೀಯ ಶೋಷಣೆಯನ್ನು ನಿರ್ದಾಕ್ಷಿಣ್ಯವಾಗಿ ಪ್ರಶ್ನಿಸಿದರು. ಧರ್ಮ ಶಾಸ್ತ್ರಗಳನ್ನು, ತತ್ವಸಿದ್ಧಾಂತಗಳನ್ನು, ಸಾಂಪ್ರದಾಯಕ ಪ್ರಜ್ಞೆಯನ್ನು ಮರುಚಿಂತನೆಗೊಡ್ಡಿದರು. ಇಲ್ಲಿನ ಬದುಕನ್ನು, ವ್ಯವಸ್ಥೆಯನ್ನು, ಅಸಮಾನತೆಯನ್ನು ವಿಮರ್ಶಿಸಿದರು. ಭಾಷೆ ಬಳಕೆಯಲ್ಲಿ, ಅಭಿವ್ಯಕ್ತಿಯ ವಿಧಾನದಲ್ಲಿ, ಚಿಂತನೆಯ ಧೋರಣೆಯಲ್ಲಿ ಹೊಸತನ ತಂದರು. ಜಡಗಟ್ಟಿದ್ದ ಸಾಹಿತ್ಯ ವಲಯದಲ್ಲಿ ಒಂದು ವೈಚಾರಿಕ ಶಕ್ತಿಸಂಚಾರ ಉಂಟುಮಾಡಿದರು. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಸ್ತ್ರೀಯರು ನಿರೀಕ್ಷೆ ಮೀರಿದ ರೀತಿಯಲ್ಲಿ ದಲಿತ ಬಂಡಾಯ ಪಂಥಕ್ಕೆ ಸ್ಪಂದಿಸಿದರು. ಅದರಲ್ಲಿ ತಮ್ಮ ಕ್ರಾಂತಿಕಾರಕ ಚಿಂತನೆಯನ್ನು, ಪ್ರಗತಿಪರ ಧೋರಣೆಯನ್ನು, ಬಂಡಾಯದ ಪ್ರಜ್ಞೆಯನ್ನು ಅನಾವರಣಗೊಳಿಸಿದರು. ಅದರಲ್ಲಿ ಹೆಣ್ಣಿನ ಅಸ್ತಿತ್ವವನ್ನು, ಚಾರಿತ್ರಿಕ ದೌರ್ಜನ್ಯದೊಂದಿಗೆ ಚರ್ಚಿಸಿದರು. ಶತಶತಮಾನದ ಕತ್ತಲೆ ಕೋಣೆಯಿಂದ ಹೊರ ಬಂದು ಹೊಸ ಗಾಳಿ ಬೆಳಕನ್ನು ಆಹ್ವಾನಿಸಿ ಆಸ್ವಾದಿಸಿದರು. ಇತಿಹಾಸದುದ್ದಕ್ಕೂ ಹೆಣ್ಣು ಅನುಭವಿಸಿದ ಅಪಮಾನ, ನೋವು,

ಯಾತನೆಯ ಎಳೆಗಳನ್ನು ಬಿಡಿಸಿಟ್ಟರು. ಸಮಾಜವಾದದ ಆಶಯದ ಮೇಲೆ ಕಾವ್ಯ ಕಟ್ಟಿದರು.

ದಲಿತ ವರ್ಗದ ಅಲ್ಪ ಸಂಖ್ಯಾತ ವರ್ಗದ ಸ್ತ್ರೀಯರಾದಿಯಾಗಿ ಬಹಳಷ್ಟು ಜನ ತಮ್ಮ ಕವಿತೆಗಳಲ್ಲಿ ಮಹಿಳೆ ಹಾಗೂ ಮಾತೃತ್ವದ ವಾಸ್ತವಿಕ ಚಿತ್ರವನ್ನು ಗಟ್ಟಿ ಭಾಷೆಯಲ್ಲಿ ದಿಟ್ಟತನದಿಂದ ನೀಡಿದರು.

ಹೇಗೆ ಸಹಿಸಿದೆ ತಾಯೇ
ಹೇಗೆ ಸಹಿಸಿದೆ?
ಇರುಳು ಹಗಲು ಎವೆ ಮುಚ್ಚದೆ
ಲಂಕೆಯ ದೆವ್ವಬನದಲ್ಲಿ
ಹೆದರಿ ಗೂಡಾಗಿ ಕುಳಿತು
ಕಾದ ಮೌಲ್ಯಗಳು
ಅಪಶಂಕೆಯ ಬೆಂಕಿಯಲ್ಲಿ
ಸೀದು ಕರುಕಾಗುವುದು
ಹೇಗೆ ನುಂಗಿದೆ? [೪೫]

ಹೀಗೆ ಹೆಣ್ಣಿನ ದುಃಖ – ದುಮ್ಮಾನಗಳು, ಆಸೆ – ನಿರಾಸೆಗಳು, ಕಷ್ಟ – ಕೋಟಲೆಗಳು ಕಾವ್ಯದಲ್ಲಿ ಅಭಿವ್ಯಕ್ತಿಗೊಂಡಿರುವುದು ಬಂಡಾಯ ಪಂಥದಲ್ಲಿ. ಪ್ರತಿಭಟನೆಯನ್ನೇ ಮೂಲ ದ್ರವ್ಯವಾಗಿಟ್ಟುಕೊಂಡು, ಆವೇಶ, ಆಕ್ರೋಶದ ನೆಲೆಯಿಂದ ಚಿಮ್ಮಿದ ಹೆಣ್ಣಿನ ಯಾತನೆಯ ಚಿತ್ರ ಕಣ್ಣಿಗೆ ಕಟ್ಟುವಂತೆ ರೂಪಗೊಂಡಿದ್ದು, ಸಮಾಜದ ಗಮನ ಸೆಳೆದದ್ದು ಈ ಪಂಥದಿಂದಲೇ.

ಗೆಳೆಯಾ
ಬಿಡು, ಊಹೆ ವಿಮಾನದಲಿ ಕುಳಿತು
ಉಪಮೆ ಅಲಂಕಾರದ ಉಪ್ಪು ಖಾರ ಹಚ್ಚಿದ
ನುಡಿ – ಟೈಂಪಾಸು ಬಟಾಣೆಯಂತೆ ಮೆಲ್ಲುತ
ಪ್ರಕೃತಿಯನ್ನು ವರ್ಣಿಸುತ
ಶುದ್ಧ – ಅಶುದ್ಧ ಸಿದ್ಧವಸ್ತುಗಳ 'ಬೂಸಾ' ತಯಾರಿಕೆಯು
ಸಾಕು ತಣ್ಣನೆಯ ತಿಂಗಳ, ತಂಗಳ ಸಾಹಿತ್ಯ ಸಾಕು
ಈಗ ಸೂರ್ಯ ಸೃಷ್ಟಿಬೇಕು [೪೬]

ತಂಗಳ ಸಾಹಿತ್ಯಕ್ಕೆ ತಡೆ ಹಾಕಿ, ತಾಜಾ ಸಾಹಿತ್ಯಕ್ಕೆ ತುಡಿಯುವ ಮಾತುಗಳು ಧ್ವನಿಪೂರ್ಣವಾಗಿವೆ. ಕತ್ತಲನ್ನು ಓಡಿಸಿ, ಬೆಳಕು ಬಿತ್ತಿ ಬೆಳಕು ಬೆಳೆಯಲು ಈಗ ಸೂರ್ಯಸೃಷ್ಟಿ ಬೇಕು. ಈ ಸೂರ್ಯಸೃಷ್ಟಿಯೇ ನೂತನ ಚಿಂತನೆಗೆ ಸಾಕ್ಷಿಯಾಗಿದೆ.

'ನರ್ತಿಸಲೆ ಶಾರದೆ' ಅರವಿಂದ ಮಾಲಗತ್ತಿಯವರ ಕವಿತೆಯಲ್ಲಿ ಸಂಪ್ರದಾಯವನ್ನು ಧಿಕ್ಕರಿಸಿ ಹೊಸ ಪರಂಪರೆಯ ಸೃಷ್ಟಿಗೆ ತೆರೆದುಕೊಳ್ಳುವ ಧೋರಣೆ ಕಂಡು ಬರುತ್ತದೆ.

ನರ್ತಿಸು ನರ್ತಿಸಲೆ ಶಾರದೆ

ನೀನೆನ್ನ ನಾಲಿಗೆಯ ಮೇಲೆ ನರ್ತಿಸು ॥ಪ॥

. . . .

ದೀನದಲಿತರ ಕೂಗಿಗೆ
ಶಬ್ದವಿಲ್ಲದ ಹಾಡಿಗೆ
ನಿಟ್ಟುಸಿರ ಖಡ್ಗವನು

. . . .

ಕಾವ್ಯ ಅನ್ನುವುದು ಆ ಕಾವ್ಯವನ್ನು ಕಟ್ಟಲಿಕ್ಕೆ 'ಅಧೋ ಜಗತ್ತನ್ನ' ಅರ್ಥಯಿಸಲಿಕ್ಕೆ ಹೊರಡಬೇಕೆಂಬ, ಹಳೆಯ ಹಾದಿಬಿಟ್ಟು ಹೊಸ ಹಾದಿ ತುಳಿಯಬೇಕು ಎಂಬ ಕಳಕಳಿ ಈ ಪದ್ಯಗಳಲ್ಲಿ ಅಡಗಿರುವುದು ನಮಗೆ ತಿಳಿಯುತ್ತದೆ.

ಇಂತಹ ಮಡುಗಟ್ಟಿದ ನೋವು ನಿರಾಶೆಗಳನ್ನು ಬದುಕಿನ ಕರಾಳ ಚಿತ್ರವನ್ನು ದೇಶೀಯ ಪ್ರೌಢಿಮೆಯಲ್ಲಿ ಕಟ್ಟಿಕೊಟ್ಟವರು ದಲಿತ ಬಂಡಾಯದವರು.

ಮುಸ್ಲಿಂ ಸಂವೇದನೆ: ಮಾನವನ ಚೈತನ್ಯವನ್ನು, ಉತ್ಸಾಹವನ್ನು ಅವನ ಬದುಕಿನ ವಿಸ್ತಾರವನ್ನು, ಬದುಕಿನ ಪ್ರೀತಿಯನ್ನು ಮಾಡಿಸುವುದು ಸಾಹಿತ್ಯದ ಪ್ರಮುಖ ಆಶಯ. ಮುಸ್ಲಿಂ ಲೇಖಕರ ಬರಹಗಳೂ ಸಹ ಈ ಮಾತಿಗೆ ಹೊರತಲ್ಲ. ಇವರಲ್ಲೂ ಕೆಲವರು ಎಡಪಂಥೀಯ; ಇನ್ನು ಕೆಲವರು ಉದಾರವಾದಿ ನಿಲುವಿನಿಂದ ಮಾನವೀಯತೆಯ ನೆಲೆಯಿಂದ ಬರೆಯತೊಡಗಿದ್ದಾರೆ. ಸಾರಾ ಅಬೂಬಕರ್, ಬಾನುಮುಷ್ತಾಕ್, ಬೊಳುವಾರು ಮೊಹಮದ ಕುಂಞ, ಪಕೀರ್ ಮಹಮದ್ ಕಟ್ಪಾಡಿ, ಅಬ್ದುಲ್ ರಷೀದ್ ಮೊದಲಾದವರು ತಮ್ಮ ಪರಿಸರದ ಸಂಗತಿಗಳನ್ನು ಎಳೆಎಳೆಯಾಗಿ ತಮ್ಮ ಬರವಣಿಗೆಯಲ್ಲಿ ದಾಖಲಿಸಿದ್ದಾರೆ.

"ಇವತ್ತು ಕನ್ನಡ ಕಾವ್ಯ ಸಂಸ್ಕೃತಿಯ ಅನೇಕ ಮುಖದ ಅನುಭವಗಳನ್ನು ಪಡೆದುಕೊಂಡಂತೆ ಮುಸ್ಲಿಂ ಮತ್ತು ದಲಿತರ ಅನುಭವಗಳನ್ನು ಕರಗತವಾಗಿಸಿಕೊಂಡು ಕಲಾತ್ಮಕವಾಗಿ ಮೂಡಿ ಬರುತ್ತಿದೆ. ಅದರಲ್ಲೂ ಕನ್ನಡಕ್ಕೆ ತೀರಾ ಅಪರಿಚಿತವಾಗಿದ್ದ ಮುಸ್ಲಿಂ ಸಂಸ್ಕೃತಿಯ ಹಲವಾರು ಸಂವೇದನೆಗಳು ಇಂದು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕಾಣಿಸಿಕೊಳ್ಳತೊಡಗಿವೆ. ಇದನ್ನೆಲ್ಲ ಗಮನಿಸಿದಾಗ ಬರಗೂರರು ಹೇಳುವಂತೆ 'ಕನ್ನಡ ಕಾವ್ಯ ಅನೇಕ ಹಂತಗಳನ್ನು ಹಾದು ಈಗ ಬಂಡಾಯ ಕಾವ್ಯ ಪ್ರಕ್ರಿಯೆಯಲ್ಲಿ ಪ್ರಕಟಗೊಳ್ಳುತ್ತಿದೆ. ನಮ್ಮ ಕಾಲದ ಪ್ರಮುಖ ಮನೋಧರ್ಮವಾದ 'ಬಂಡಾಯ' - ಪುರಾಣ, ಚರಿತ್ರೆ ಮತ್ತು ಸಮಕಾಲೀನ ಸಂಗತಿಗಳನ್ನು ತನ್ನ ಗ್ರಹಿಕೆಯ ಹೊಸ ಒಳನೋಟಗಳಿಂದ ಪರಿಶೀಲಿಸತೊಡಗಿದಷ್ಟೇ ಅಲ್ಲ, ಅವುಗಳಿಂದ ಹೊಸ ಒಳ ನೋಟಗಳನ್ನು ಪಡೆಯುತ್ತಿದೆ'. ಹೀಗಾಗಿ ಈ ಕಾವ್ಯ ನೊಂದವರ, ದುಡಿಯುವವರ, ಶೋಷಣೆಗೊಳಗಾದವರ ಬದುಕಿನ ಭಾಗವಾಗಿ ಹುಟ್ಟಿಕೊಳ್ಳುತ್ತಿದೆ. ಈ ದೃಷ್ಟಿಯಿಂದ ಕನ್ನಡ ಕಾವ್ಯಕ್ಕೆ ಒಂದು ಹೊಸ ಆಯಾಮವೇ ಬಂದಿದೆ".[೪೭] ಈ ಹಿನ್ನೆಲೆಯಲ್ಲಿ ಕನ್ನಡ ಸಾರಸ್ವತ ಲೋಕ ವಿಸ್ತಾರಗೊಂಡು ವೈವಿಧ್ಯತೆಯ ದಿಕ್ಕಿನಲ್ಲಿ ಮುನ್ನಡೆದಿದೆ.

ಸ್ತ್ರೀ ಸಂವೇದನೆ: ಸ್ತ್ರೀಯರಲ್ಲಿ ಚಿಂತನಾಶಕ್ತಿ, ಪ್ರತಿಭೆ, ಶ್ರುಜನಶೀಲತೆ ಹಾಗೂ ಸೂಕ್ಷ್ಮಪ್ರಜ್ಞೆಗಳಿದ್ದು ಪುರುಷರಿಗೆ ಸಾಟಿಯಾಗಿ ನಿಲ್ಲುವ ಶಕ್ತಿ ಪಡೆದಿದ್ದಾರೆ. ಎಲ್ಲ

ಕ್ಷೇತ್ರಗಳಲ್ಲೂ ತಮ್ಮ ಸ್ವಂತಿಕೆಯ ಛಾಪು ಮೂಡಿಸಿರುವಂತೆ ಸಾಹಿತ್ಯ ಕ್ಷೇತ್ರದಲ್ಲೂ ಮೂಡಿಸಿದ್ದಾರೆ. ಪುರುಷರಿಂದ ಸ್ತ್ರೀ ಸಮುದಾಯಕ್ಕಾಗಿರುವ ವಂಚನೆ, ಮೋಸ, ಅನ್ಯಾಯಗಳ ಬಗ್ಗೆ ಸಿಡಿದೆದ್ದಿದ್ದಾರೆ. ಧರ್ಮ ಶಾಸ್ತ್ರಗಳು ತಮ್ಮ ಬಗ್ಗೆ ತೋರಿರುವ ತಾರತಮ್ಯ ಧೋರಣೆಗೆ ದಟ್ಟ ವಿಷಾಧ ಹಾಗೂ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಕತ್ತಲೆಯ ಕೋಣೆಯನ್ನು ತೆರೆದು ಹೊರಬರುವುದರಲ್ಲಿ ಧೈರ್ಯ ತೋರಿದ್ದಾರೆ. ಬಂಧನದ ಸಂಕೋಲೆಗಳನ್ನು ಕಿತ್ತೆಸೆದು ತಮ್ಮ ಸ್ವಾಭಿಮಾನದ ಬದುಕಿಗೆ ತೆರೆದುಕೊಂಡಿದ್ದಾರೆ. ಧರ್ಮ ಹಾಗೂ ಸಂಸ್ಕೃತಿಯ ಹೆಸರಿನಲ್ಲಿ ವಿಧಿಸಿರುವ ಆದರ್ಶದ ಕಟ್ಟುಗಳನ್ನು ಕಳಚಿ ಹಾಕಿ ಹೊಸ ಚಿಂತನೆಗೆ ಮುಂದಾಗಿದ್ದಾರೆ. ಪೌರಾತ್ಯ ಮತ್ತು ಪಾಶ್ಚಾತ್ಯದ ಪುನರ್ಮೌಲ್ಯೀಕರಣದೊಂದಿಗೆ ಹೊಸ ಮನ್ವಂತರಕ್ಕೆ ನಾಂದಿ ಹಾಡಿದ್ದಾರೆ. ಚರಿತ್ರೆ ಮತ್ತು ಪುರಾಣಗಳ ಮರು ಚಿಂತನೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಹುಟ್ಟಿದ 'ಸ್ತ್ರೀವಾದಿ ಚಳುವಳಿ' ತಮ್ಮ ಬದುಕು ತಮ್ಮದೇ ಆಗಬೇಕೆಂಬ ಸ್ವಾಭಿಮಾನಕ್ಕೆ ಬದ್ಧರಾಗಿ ಕಾವ್ಯ ಕ್ಷೇತ್ರದಲ್ಲಿ ಅಭಿವ್ಯಕ್ತಿ ಪಡಿಸಿರುವುದು ಕಂಡು ಬರುತ್ತದೆ.

"ಸ್ತ್ರೀವಾದಿ ಕಾವ್ಯದ ಬಹು ಮುಖ್ಯವಾದ ಇನ್ನೊಂದು ಮಗ್ಗಲು ಎಂದರೆ ಪುರುಷ ಪ್ರಧಾನ ಚರಿತ್ರೆ ಮತ್ತು ಪುರಾಣಗಳ ಪುನರ್ವ್ಯಾಖ್ಯಾನ ಮತ್ತು ಮರು ನಿರ್ವಚನ. ಚರಿತ್ರೆಯ ನಾಯಕ ಪುರುಷನಾಗಿಬಿಟ್ಟಿದ್ದಾನೆ. ಅಲ್ಲಿ ನಾಯಕಿ ಕೇವಲ ಅನುಷಂಗಿಕ ಕೀಲು ಗೊಂಬೆ, ಒಂದು ನೆರಳು ಮಾತ್ರವಾಗಿದ್ದಾಳೆ. ರಾಮಾಯಣವನ್ನ ಸೀತಾಯಣವನ್ನಾಗಿ ನೋಡಬೇಕು. ಮಹಾಭಾರತದ ನಾಯಕಿ ಕುಂತಿ ದ್ರೌಪದಿಯಾಗಬೇಕು. ಈ ನಿಟ್ಟಿನಿಂದ ಇತಿಹಾಸವನ್ನು ಪುನರ್‌ನಿರೂಪಿಸುವ ಪ್ರಯತ್ನವನ್ನ ಮಹಿಳಾ ಕಾವ್ಯ ಒಂದು ಸವಾಲಿನಂತೆ ಸ್ವೀಕರಿಸಿದೆ. ಕುಂತಿ, ಗಾಂಧಾರಿ, ದ್ರೌಪದಿ, ಸೀತೆ, ಅಹಲ್ಯ, ಅಕ್ಕಮಹಾದೇವಿ, ಮಂಡೋದರಿ ಮೊದಲಾದ ಚಾರಿತ್ರಿಕ ಪಾತ್ರಗಳು ಈ ಹಿಂದೆ ಪತಿವ್ರತಾ ಶಿರೋಮಣಿಗಳು, ತ್ಯಾಗಮಯಿಗಳು ಎಂದೆಲ್ಲಾ ಧಾರ್ಮಿಕ ಪರಿಭಾಷೆಯಲ್ಲಿ ವ್ಯಾಖ್ಯಾನಗೊಳ್ಳುತ್ತಿದ್ದರೆ ಈಗ ಅವು ಸಮಷ್ಟಿ ಸ್ತ್ರೀಕುಲದ ನೋವಿನ ಸಂಕೇತವಾಗಿ, ಆಶಯವಾಗಿ, ಅವರ ದನಿಯಾಗಿ ಮರು ನಿರ್ವಚನಗೊಳ್ಳುತ್ತಿವೆ. ಈ ಹೆಸರುಗಳನ್ನ ಒಂದು ಸಾಂಕೇತಿಕವಾಗಿ ಇಟ್ಟುಕೊಂಡು ಇವತ್ತಿನ ಕವಯತ್ರಿಯರು, ಅವರ ಮೂಲಕ ತಮ್ಮ ಸಂಕಟಗಳನ್ನು ತೋಡಿಕೊಳ್ಳುತ್ತಿದ್ದಾರೆ. ತಮ್ಮ ನೋವುಗಳನ್ನು ಅವರ ನೋವುಗಳೊಂದಿಗೆ ಗುರುತಿಸಿಕೊಂಡು 'ಸಮೀಕರಣ' ಸ್ಥಾಪಿಸಿಕೊಳ್ಳುವ ಮೂಲಕ ತಮ್ಮದೇ ಆದ ಚರಿತ್ರೆಯ ಪರಂಪರೆಯ ಸಂಬಂಧವನ್ನು ಆಧುನಿಕತೆಗೆ ಬೆಸೆಯುವ ಪ್ರಯತ್ನ ಮಾಡುತ್ತಿದ್ದಾರೆ."[೮೮] ವರ್ತಮಾನದ ನೆಲೆಯಲ್ಲಿ ನಿಂತು ಹೆಣ್ಣಿನ ಗತಬದುಕನ್ನು ವೈಚಾರಿಕ ದೃಷ್ಟಿಯಿಂದ ವಿಶ್ಲೇಷಿಸುತ್ತಿದ್ದಾರೆ.

ನಾವು ಕೈದಿಗಳು
ನಾವೇ ನಿರ್ಮಿಸಿದ ಎತ್ತರದ ಗೋಡೆಗಳ ಮಧ್ಯೆ
ತುಂಬಿರುವ ಗಾಡಾಂಧಕಾರದಲಿ
ವ್ಯರ್ಥ ಶತಪತ ತಿರುಗಿ
ಗಗನಕ್ಕೆ ಕೊರೆದ ತೂತಿನಂತಿರುವ
ಎತ್ತರದ ಚಿಕ್ಕ ಕಂಡಿಯಲಿ
ನೇಸರನ ಕಿರಣಗಳು ತೂರಿ ಬರುವಾಗ

ಬೆಳಕ ಹಂಬಲಿಸಿ ಹಾತೊರೆದು
ಕೈ ಚಾಚಿ ಬೆಳಕ ಮೊತ್ತವನೇ
ತಬ್ಬಿ ನಮ್ಮೊಳಗೆ ಹುದುಗಿಸುವ
ಆತುರ [೪೯]

ಹೆಣ್ಣಿನ ಈ ನಿರ್ಬಂಧಿತ ಬದುಕಿಗೆ ಪುರುಷರೆಷ್ಟು ಕಾರಣವೋ, ಸ್ತ್ರೀಯರೂ ಅಷ್ಟೇ ಕಾರಣರಾಗಿದ್ದಾರೆ. ಇದು ಹೆಣ್ಣೊಬ್ಬಳ ಅತಂತ್ರ ಸ್ಥಿತಿಗೆ ತಿಳುವಳಿಕೆ ಇಲ್ಲದೆ ಸಂಪ್ರದಾಯವನ್ನು ತಲೆಮೇಲೊತ್ತು ಮೆರೆಸಿದ ಮುಗ್ಧ ಸ್ತ್ರೀಯರ ಪಾಲೂ ಇದೆ. ತೆರಣಿಯ ಹುಳುವಿನಂತೆ ತನ್ನ ಜಿಡ್ಡುಗಟ್ಟಿದ ಎಂಜಲಿನಿಂದ ಗೂಡು ಕಟ್ಟಿಕೊಂಡು ಒಳಗೆ ಉಸಿರುಕಟ್ಟಿ ಒದ್ದಾಡುವ ಸ್ಥಿತಿ ಹೆಣ್ಣಿನದು. ಇದರ ಅರಿವು ಶಿಕ್ಷಣದಿಂದ ಬರುತ್ತದೆ. ತನ್ನ ಇರುವಿಕೆಯನ್ನು ಶಿಕ್ಷಣ ತೋರಿಸಿಕೊಡುತ್ತದೆ. ಚಿಕ್ಕ ಕಿಂಡಿಯಲಿ ನೇಸರನ ಕಿರಣಗಳು ತೂರಿ ಬರುವಾಗ ಬೆಳಕ ಹಂಬಲಿಸಿ ಹಾತೊರೆದವರಿಗೆ ಇಡೀ ಬೆಳಕನ್ನು ತಬ್ಬಿ ತಮ್ಮೊಳಗೆ ಹುದುಗಿಸುವ ಆತುರ ಸಹಜವಾಗಿ ಲಭ್ಯವಾಗುತ್ತದೆ.

"ಪುರುಷರಂತೆಯೇ ತಾವೂ ಬರೆಯಬೇಕೆಂಬ ಭಾವನೆಯನ್ನು ಬಿಟ್ಟು ಕೊಟ್ಟು ಪುರುಷರಂತೆ ತಾವೂ ಸ್ವತಂತ್ರ್ಯವಾಗಿ ಬರೆಯಲು ಮಹಿಳೆಯರು ಪ್ರಾರಂಭಿಸಿದ ನಂತರ ಅವರ ಕಾವ್ಯಪಕ್ಷಿ ರೆಕ್ಕೆ ಬಿಚ್ಚಿ ಹಾರಲಾರಂಭಿಸಿದೆ. ಈ ಹೊಸ ಆತ್ಮವಿಶ್ವಾಸ ಪಂಜರದಿಂದ ಹೊರಕ್ಕೆ ಬಂದಾಗ ಸಹಜವಾಗಿ ಪುನರಾವೃತ್ತಿ, ಸರಳೀಕರಣ, ಬರಿಯ ರೋಷ ಕಂಡಿತು. ಆದರೆ ಇತ್ತೀಚೆಗೆ ಎಚ್.ಎಲ್. ಪುಷ್ಪಾ, ಸುಕನ್ಯಾ ಮಾರುತಿ, ಚ. ಸರ್ವಮಂಗಳ, ಸ. ಉಷಾ, ಎಂ.ಆರ್. ಕಮಲ ಮೊದಲಾದವರು ಬರೆಯುತ್ತಿರುವ ಹಲವು ಕವನಗಳು ಪ್ರತಿಭಟನೆಯಾಗಿವೆ, ಚಿಂತನೆಯಾಗಿವೆ, ಕಾವ್ಯವಾಗಿವೆ. ಇವರು ರಾಮಾಯಣ, ಭಾರತ, ಅಹಲ್ಯೆಯ ಕಥೆ, ಶಕುಂತಳೆಯ ಕಥೆ ಮೊದಲಾದ ಪೌರಾಣಿಕ ಸಾಮಗ್ರಿಯನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಾರೆ.[೫೦]. ಆಧುನಿಕ ಶಿಕ್ಷಣ, ಉದ್ಯೋಗ ಹಾಗೂ ಬದುಕಿನ ಸಂಕೀರ್ಣತೆ ಹೆಣ್ಣನ್ನು ಚಿಂತೆಗೆ ದೂಡಿದವು. ಪುರುಷರ ಕಪಿಮುಷ್ಟಿಯಿಂದ ಬಿಡುಗಡೆ ಹೊಂದಿ, ತಾನೂ ಸ್ವಾಭಿಮಾನಿಯಾಗಿ ಬದುಕಬೇಕೆಂಬ ಉತ್ಕಟ ಇಚ್ಛೆ ಆಕೆಯದಾಯಿತು. ಸಾಂಪ್ರದಾಯಕ ಚೌಕಟ್ಟಿನಿಂದ ಹೊರ ಬಂದು ವೈಚಾರಿಕ ನೆಲೆಗಟ್ಟಿನಲ್ಲಿ ನಿಂತು ಯೋಚಿಸುವ, ಪ್ರತಿಭಟಿಸುವ ಧೋರಣೆ ಸ್ತ್ರೀವಾದಿ ನೆಲೆಯಲ್ಲಿ ಕಂಡುಬರುತ್ತದೆ.

ಸ್ವಾತಂತ್ರ್ಯ ಪೂರ್ವದಿಂದ ಹಿಡಿದು ಪ್ರಸ್ತುತ ಕಾಲಘಟ್ಟದವರೆಗೂ ಅನೇಕ ಪಂಥಗಳನ್ನು ಕಂಡಿರುವ ಕನ್ನಡ ಕಾವ್ಯಕ್ಷೇತ್ರದಲ್ಲಿ ತಾಯಿಯನ್ನು ವಿಭಿನ್ನ ನೆಲೆ, ಭಿನ್ನ ದೃಷ್ಟಿಗಳಲ್ಲಿ ಕವಿಗಳು ಕಂಡಿರುವುದುಂಟು. ಇವರು ತಮ್ಮ ಚಿಂತನೆಗಳಿಗೆ ಸ್ಥಳೀಯ ಸತ್ವಗಳನ್ನು ದುಡಿಸಿಕೊಂಡಂತೆ ಹೊರಗಿನಿಂದ ಬಂದ ವಿಚಾರಧಾರೆಗೂ ಕೈಚಾಚಿ ತಮ್ಮ ಅನುಭವದ ಪರಿಧಿಯನ್ನು ವಿಸ್ತರಿಸಿ ಕೊಂಡಿದ್ದಾರೆ. ಆರಂಭದ ಕಾಲದಲ್ಲಿ ತಾಯಿಯನ್ನು ತಮ್ಮ ಅಂತರಂಗದ ಆರಾಧನೆಯಂತೆ, ದೈವದ ಪ್ರತಿರೂಪದಂತೆ ಭಾವಪರವಶತೆಯಿಂದ ಚಿತ್ರಿಸಿದರೆ; ನಂತರದ ಕವಿಗಳು ಎಲ್ಲ ಆವರಣಗಳನ್ನು ಮೀರಿ ಹೊರಬಂದು ವಾಸ್ತವಿಕ ಬದುಕಿನಲ್ಲಿ ಆಕೆ ಪಟ್ಟ ಪಾಡು, ಅನುಭವಿಸಿದ ಬದುಕಿನ ಏರಿಳಿತಗಳು, ಆಕೆಯ ಒಡಲಾಳದ ವೇದನೆಯನ್ನು ವಿಶ್ಲೇಷಿಸಿದ್ದಾರೆ.

ಕೊನೆ ಟಿಪ್ಪಣಿಗಳು:

೧. ಕನ್ನಡ ಕಾವ್ಯ ಕಂಡ ಹೆಣ್ಣು, ಡಾ.ಸಿ. ವೀರಣ್ಣ, ಪುಟ: ೮೦.
೨. ಪಂಪನ ಆದಿಪುರಾಣ – ಸಂ, ಎಲ್. ಬಸವರಾಜು, ಅಧ್ಯಾಯ – ೪, ಪುಟ: ೫೬.
೩. ಕನ್ನಡ ಜಾನಪದ ಸಾಹಿತ್ಯ, ಡಾ.ಬೆಟಗೇರಿಕೃಷ್ಣ ಶರ್ಮ, ಪುಟ: ೬೩.
೪. ಮೇಲಿನಂತೆ, ಪುಟ: ೬೫.
೫. ಮನುಜ ಮತ ವಿಶ್ವ ಪಥ, ಕುವೆಂಪು, ಪುಟ: ೩೧.
೬. ಪಂಪನ ಆದಿ ಪುರಾಣ, ಸಂ.ಎಲ್. ಬಸವರಾಜು, ಪುಟ: ೫೮.
೭. ಪಂಪನ ವಿಕ್ರಮಾರ್ಜುನ ವಿಜಯ, ಬೆಳ್ಳಾವೆ ವೆಂಕಟನಾರಾಣಪ್ಪ, ಅಧ್ಯಾಯ : ೧ – ೮೫ವ, ೧ – ೧೧೯ವ.
೮. ಕರ್ನಾಟಕ ಕಾದಂಬರಿ, ಸಂ.ಎಸ್. ಅನಂತರಂಗಾಚಾರ್,ಅಧ್ಯಾಯ: ೨– ೬೩, ೬೪.
೯. ಜನ್ನನ ಯಶೋಧರ ಚರಿತೆ, ಸಂ. ಕಾ. ವೆಂ. ರಾಘವಾಚಾರ್, ಅಧ್ಯಾಯ: ೩– ೭, ೮, ೧೭, ೨೧.
೧೦. ರಾಘವಾಂಕನ ಹರಿಶ್ಚಂದ್ರ ಕಾವ್ಯ, ಸಂ. ವೈ. ನಾಗೇಶ ಶಾಸ್ತ್ರಿ ಹಾಗೂ ಎಂ. ಜಿ. ವೆಂಕಟೇಶಯ್ಯ
೧೧. ಷಡಕ್ಷರದೇವನ ರಾಜಶೇಖರ ವಿಳಾಸಂ, ಗದ್ಯಾನುವಾದ: ಪಂಡಿತ್ ಚನ್ನಪ್ಪ ಎರೇಸೀಮೆ, ಪುಟ: ೭೦೪.
೧೨. ವಿಕ್ರಮಾರ್ಜುನ ವಿಜಯ, ಸಂ.ಬೆಳ್ಳಾವೆವೆಂಕಟನಾರಾಣಪ್ಪ, ೧೩ – ೧೦೦.
೧೩. ಗದಾಯುದ್ಧ, ಸಂ. ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್, ೯ – ೫.
೧೪. ಸ್ತ್ರೀ ಮತ್ತು ರಾಜಕಾರಣ, ಕೇಶವ ಶರ್ಮ, ಪುಟ: ೩೫.
೧೫. ಜನಪದ ಖಂಡ ಕಾವ್ಯಗಳು, ಸಂ.ಜೀಶಂಪ, ಪುಟ: ೩.
೧೬. ಗರತಿಯ ಹಾಡು, ಸಂ.ಹಲಸಂಗಿ ಚೆನ್ನಮಲ್ಲಪ್ಪ ಮತ್ತು ಗೆಳೆಯರು, ಪುಟ: ೫೨.
೧೭. ಕನ್ನಡದ ಬಾವುಟ, ಕ.ಸಾ.ಪ, ಬೆಂಗಳೂರು, ಪುಟ: ೮೧.
೧೮. ಗರತಿಯ ಹಾಡು, ಸಂ. ಹಲಸಂಗಿಚನ್ನಮಲ್ಲಪ್ಪ ಮತ್ತು ಗೆಳೆಯರು, ಪುಟ: ೫೨.
೧೯. ಗರತಿಯ ಹಾಡು, ಸಂ.ಹಲಸಂಗಿ ಚೆನ್ನಮಲ್ಲಪ್ಪ ಮತ್ತು ಗೆಳೆಯರು, ಪುಟ: ೪೯.
೨೦. ಮೇಲಿನಂತೆ, ಪುಟ: ೩೮.
೨೧. ಸರ್ವಜ್ಞನ ವಚನಗಳು, ಸಂ.ಡಾ.ರಾಗೌ, ಪುಟ: ೧೫೦.
೨೨. ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ, ಪುಟ: ೪೦.
೨೩. ಅಮೃತ ಮತ್ತು ಗರುಡ, ಡಿ.ಆರ್. ನಾಗರಾಜ್, ಪುಟ: ೪೬
೨೪. ಕನ್ನಡ ಪ್ರತಿಭಟನೆ ಕಾವ್ಯ, ಸಿ. ವೀರಣ್ಣ, ಪುಟ: ೩೪.
೨೫. ಕನ್ನಡ ಕಾವ್ಯ ಕಂಡ ಹೆಣ್ಣು, ಡಾ.ಸಿ. ವೀರಣ್ಣ, ಪುಟ:
೨೬. ಅಮೃತ ಮತ್ತು ಗರುಡ, ಡಿ.ಆರ್. ನಾಗರಾಜ್, ಪುಟ: ೪೮.
೨೭. ಕುವೆಂಪು ಅವರ ಧಾರ್ಮಿಕ ತಾತ್ವಿಕ ನಿಲುವುಗಳು, ಡಿ. ರಘುನಾಥರಾವ್.ಸಹ್ಯಾದ್ರಿಯ ಸೂರ್ಯ, ಸಂ. ಡಾ. ಚಕ್ಕೆರೆ ಶಿವಶಂಕರ್, ಪುಟ: ೩೫೩.
೨೮. ಶ್ರೀ ಸಾಹಿತ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪುಟ: ೫೫.
೨೯. ಅಂಬಿಕಾತನಯ ದತ್ತರ ಭಾವಗೀತೆಗಳು, ಡಾ.ರುಕ್ಮಿಣಿ ಪರ್ವತಿ, ಪುಟ: ೨೪೦.
೩೦. ಹೊಸಗನ್ನಡ ಸಾಹಿತ್ಯ ಚರಿತ್ರೆ, ಎಲ್.ಎಸ್.ಶೇಷಗಿರಿರಾವ್, ಪುಟ: ೬೧.
೩೧. ಅಮೃತ ಮತ್ತು ಗರುಡ, ಡಿ.ಆರ್.ನಾಗರಾಜ್, ಪುಟ: ೪೭
೩೨. ಕನ್ನಡ ಪ್ರತಿಭಟನೆ ಕಾವ್ಯ, ಡಾ.ಸಿ. ವೀರಣ್ಣ, ಪುಟ: ೩೬
೩೩. ಹೊಸಗನ್ನಡ ಸಾಹಿತ್ಯ ಚರಿತ್ರೆ, ಎಲ್.ಎಸ್.ಶೇಷಗಿರಿ ರಾವ್, ಪುಟ: ೭೩.
೩೪. ಅಮೃತ ಮತ್ತು ಗರುಡ, ಡಿ.ಆರ್. ನಾಗರಾಜ್, ಪುಟ: ೪೭
೩೫. ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ, ಪುಟ: ೨೭

೩೬. ಅಮೃತ ಮತ್ತು ಗರುಡ, ಡಿ.ಆರ್. ನಾಗರಾಜ್, ಪುಟ: ೫೦.

೩೭. ಕನ್ನಡ ಪ್ರತಿಭಟನೆ ಕಾವ್ಯ, ಡಾ.ಸಿ. ವೀರಣ್ಣ, ಪುಟ: ೩೯.

೩೮. ಹೊಸಗನ್ನಡ ಸಾಹಿತ್ಯ ಚರಿತ್ರೆ, ಎಲ್.ಎಸ್.ಶೇಷಗಿರಿ ರಾವ್, ಪುಟ: ೭೩.

೩೯. ಮೇಲಿನಂತೆ, ಪುಟ: ೭೮.

೪೦. ಶತಮಾನದ ಕಾವ್ಯ, ಸಂ.ಗಿರಡ್ಡಿ ಗೋವಿಂದರಾಜ, ಪುಟ: ೧೫೫.

೪೧. ಸುವರ್ಣ ಸಂಪುಟ, ಸಂ. ಪುಟ: ೪೬೦.

೪೨. ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ಪುಟ: ೧೪೮.

೪೩. ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ, ಪುಟ: ೨೮.

೪೪. ಅಮೃತ ಮತ್ತು ಗರುಡ, ಡಿ.ಆರ್. ನಾಗರಾಜ್, ಪುಟ: ೫೩.

೪೫. ಪರಂಪರೆ, ವಿಜಯದಬ್ಬೆ, ಅಗ್ನಿ ಸಾಕ್ಷಿ, ಸಂ.ಪಿ.ಆರ್. ತಿಪ್ಪೆಸ್ವಾಮಿ, ಪುಟ: ೭೦.

೪೬. ಅಧೋ ಜಗತ್ತಿನ ಕಾವ್ಯ, ಜಂಬಣ್ಣ ಅಮರಚಿಂತ, ಪುಟ: ೩೩.

೪೭. ಅಭಿಮುಖ, ಜಿ.ಆರ್. ತಿಪ್ಪೆಸ್ವಾಮಿ, ಪುಟ: ೮೯.

೪೮. ದಲಿತ ಬಂಡಾಯ ಕಾವ್ಯ ಮತ್ತು ವಿಚಾರವಾದಗಳು, ಪ್ರಹ್ಲಾದ ಅಗಸನಕಟ್ಟೆ, ಪುಟ: ೪೨೭.

೪೯. ಕೈದುಗಳು, ರಂಜನ ನಾಯಕ, ಪುಟ: ೪೧.

೫೦. ಹೊಸಗನ್ನಡ ಸಾಹಿತ್ಯ ಚರಿತ್ರೆ, ಎಲ್.ಎಸ್. ಶೇಷಗಿರಿ ರಾವ್, ಪುಟ: ೨೫೪.

ಅಧ್ಯಾಯ – ೩

ರಾಷ್ಟ್ರ, ನಾಡು, ನುಡಿ ಮತ್ತು ಮಾತೃತ್ವ

ರಾಷ್ಟ್ರೀಯ ಚಳುವಳಿಯ ಪ್ರೇರಣೆ:

ಭಾರತದ ಸ್ವಾತಂತ್ರ್ಯ ಚಳುವಳಿ ಸಮಗ್ರ ಭಾರತವನ್ನು ವ್ಯಾಪಿಸಿಕೊಂಡು ಭಾರತೀಯರಲ್ಲಿ ದೇಶಾಭಿಮಾನದ ಕಿಡಿ ಹೊತ್ತಿಸಿದ ಪರ್ವಕಾಲ. ಬ್ರಿಟಿಷರ ಗುಲಾಮಗಿರಿಯಿಂದ ದೇಶವನ್ನು ಬಿಡುಗಡೆಗೊಳಿಸಬೇಕೆಂಬ ಏಕೈಕ ಗುರಿಗೆ ಇಡೀ ರಾಷ್ಟ್ರ ಸ್ಪಂದಿಸಿತು. ಎಲ್ಲ ವರ್ಗದ ಜನರೂ ಒಗ್ಗೂಡಿದರು. ಶ್ರೀಸಾಮಾನ್ಯರಾದಿಯಾಗಿ ಇತರ ನಾಗರಿಕರು ಸಲ್ಲಿಸಿದ ತ್ಯಾಗ ಬಲಿದಾನಗಳ ವೀರಗಾಥೆಯನ್ನು, ಅವರು ನಂಬಿದ್ದ ಆದರ್ಶಗಳನ್ನು, ಹೋರಾಟದ ಮಜಲುಗಳನ್ನು ಕನ್ನಡನಾಡಿನ ಜನಪದರು, ಶಿಷ್ಟಕವಿಗಳು ಜೊತೆ ಜೊತೆಯಲ್ಲೆ ಮೈದುಂಬಿ ರಚಿಸಿ ಹಾಡಿದ್ದು ಕಂಡುಬರುತ್ತದೆ.

"ಪ್ರಸಿದ್ಧ ಪಾಶ್ಚಾತ್ಯ ನಾಟಕಗಾರ ಬರ್ಟೋಲ್ಟ್ ಬ್ರೆಕ್ಟ್‌ನ 'ದಿ ಕಕೇಷಿಯನ್ ಚಾಕ್ ಸರ್ಕಲ್'ನ ನಾಟಕದಲ್ಲಿ ಒಂದು ಪಾತ್ರ ಈ ಮಾತುಗಳನ್ನಾಡುತ್ತದೆ : 'ಒಬ್ಬ ಮನುಷ್ಯ ತನ್ನ ದೇಶವನ್ನು ಏಕೆ ಪ್ರೀತಿಸುತ್ತಾನೆ? ಏಕೆಂದರೆ ಅಲ್ಲಿ ರೊಟ್ಟಿ ಹೆಚ್ಚು ರುಚಿಯಾಗಿರುತ್ತದೆ. ಗಾಳಿ ಇನ್ನೂ ಸುಗಂಧವಾಗಿರುತ್ತದೆ. ದನಿಗಳು ಹೆಚ್ಚು ಶಕ್ತವಾಗಿ ಕೇಳುತ್ತವೆ. ಆಕಾಶ ಬೇರೆಡೆಗಿಂತ ಎತ್ತರವಾಗಿರುತ್ತದೆ. ನೆಲದಮೇಲೆ ನಡೆಯುವುದು ಇನ್ನೂ ಸುಲಭವಾಗಿರುತ್ತದೆ'. ಇವನ ಈ ಮಾತುಗಳು ಸಂಪೂರ್ಣ ತರ್ಕಬದ್ಧವಾಗಿಲ್ಲ, ನಿಜ. ಆದರೆ ಮನೋವೈಜ್ಞಾನಿಕ ನೆಲೆಯಲ್ಲಿ ಇದು ಪೂರ್ಣ ಸತ್ಯ ಈ ಮಾತುಗಳನ್ನು ಆಡುತ್ತಿರುವವನು ಮೂಲತಃ ನಾಟಕಕಾರ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ."[೧] ತಾಯ್ನಾಡನ್ನು, ತಾಯ್ನುಡಿಯನ್ನು, ಅಲ್ಲಿನ ಸಂಸ್ಕೃತಿ, ಕಲೆಗಳನ್ನು ಪ್ರೀತಿಸುವುದು ಮನುಷ್ಯನ ಸಹಜ ಗುಣ. ಹಾಗಾಗಿ ಪರಾಧೀನದ ಬಗ್ಗೆ ಅಸಹ್ಯತಾಳಿ ಸ್ವಾತಂತ್ರ್ಯದ ಕನಸುಕಟ್ಟಿದ್ದು ಭಾರತೀಯರಲ್ಲಿ ನೈಜವಾಗಿ ವ್ಯಕ್ತವಾಗಿದೆ.

"ತಾಯ್ನಾಡಿನ ಮೇಲೆ ಪ್ರೀತಿ ಅಭಿಮಾನಗಳನ್ನುಳ್ಳವರ ಪಾಲಿಗೆ ಅದು ಕೇವಲ ಒಂದು ಭೌತಿಕ, ಭೌಗೋಳಿಕ ಪ್ರದೇಶವಾಗಿ ಉಳಿಯುವುದಿಲ್ಲ; ಚಿನ್ಮಯ ಧಾಮವಾಗಿ, ಸಾಕ್ಷಾತ್ ಸ್ವರ್ಗವೇ ಆಗುತ್ತದೆ. ಅಭಿಮಾನ ಶೀಲರಾದ ಕನ್ನಡಿಗರ ಕಣ್ಣಿಗೆ ಕನ್ನಡ ನಾಡು ಬರಿಯ ಮಣ್ಣಲ್ಲ; ಅದೊಂದು ವಿರಾಟ್ ಜೀವಂತ ಶಕ್ತಿ, ಮಾತೃಸತ್ವ, ಭೂನಂದನ – ಎಲ್ಲರ ಹೆಮ್ಮೆಗೆ ಭಕ್ತಿ ಗೌರವ ಕೃತಜ್ಞತೆಗಳಿಗೆ, ಪೂಜೆ ಸ್ತೋತ್ರಗಳಿಗೆ ಪಾತ್ರವಾಗುವಂಥದು".[೨] ಈ ಮಾತುಗಳು ಕೇವಲ ತೋರಿಕೆಗೆ, ಅಭಿಮಾನಕ್ಕೆ ಆಡಿದ ಮಾತುಗಳಲ್ಲ. ಮಣ್ಣಿನ ಸೆಳೆತಕ್ಕೆ ಒಳಪಟ್ಟವನ ಅಂತರಂಗದಿಂದ ಹುಟ್ಟಿದಂತಹವು.

ಸ್ವಾತಂತ್ರ್ಯ ಚಳುವಳಿಗೆ ಜನರನ್ನು ಪ್ರೇರೇಪಿಸುವ ದೇಶಾಭಿಮಾನದ ಬಗ್ಗೆ ಜನಾಂದೋಲನ ರೂಪಿಸಲು ಏರ್ಪಡಿಸಿದ ಸಭೆ ಸಮಾರಂಭಗಳಲ್ಲಿ ಜನರನ್ನು ಆಕರ್ಷಿಸಲು, ಜನರಿಗೆ ವಿಚಾರ ಮುಟ್ಟಿಸಲು, ದೇಶದ ಪರಂಪರೆ ಹಾಗೂ ಸಂಸ್ಕೃತಿಗೆ ಪಾಶ್ಚಾತ್ಯರಿಂದ ಆಗಿರುವ ಧಕ್ಕೆಯನ್ನು ವಿವರಿಸಲು, ಕಾರ್ಯಕರ್ತರಲ್ಲಿ, ಯುವ

ಜನಾಂಗದಲ್ಲಿ ಸ್ಫೂರ್ತಿ ತುಂಬಲು, ಅವರಲ್ಲಿ ರಾಷ್ಟ್ರಾಭಿಮಾನದ ಕಿಚ್ಚು ಪ್ರಜ್ವಲಿಸುವಂತೆ ಮಾಡಲು ಗೇಯತೆಯಿಂದ ಕೂಡಿದ ಕವಿತೆಗಳನ್ನು ಹಾಡುತ್ತಿದ್ದರು. ವೀರಾವೇಶದಿಂದ ಲಾವಣಿ, ಗೀಗೀ ಪದಗಳನ್ನು ಹಾಡುವುದರಿಂದ ಜನರಲ್ಲಿ ದೇಶಾಭಿಮಾನದ ಸಂಚಲನವಾಗುತ್ತಿತ್ತು. ಈ ಕವಿತೆಗಳಲ್ಲಿ ಕಾವ್ಯಗುಣ ಕಡಿಮೆಯಾದರೂ ಜನಮನ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದವು. ಇಂತಹಸಂದರ್ಭದಲ್ಲಿ ಜನಪ್ರಿಯ ಕವಿಯಾದಂತೆ ಅಜ್ಞಾತವಾಗಿಯೇ ಉಳಿದ ಎಷ್ಟೋ ಕವಿಗಳು ಇರುವುದು ದೊರೆತಿರುವ ಕವಿತೆಗಳಿಂದ ತಿಳಿದುಬರುತ್ತದೆ. ಈ ರಾಷ್ಟ್ರೀಯ ಚಳುವಳಿಯಲ್ಲಿ ಪುರುಷರಂತೆ ಮಹಿಳೆಯರೂ ಪಾಲ್ಗೊಂಡಿದ್ದರು. ಹಾಗೆಯೇ ಕವಯತ್ರಿಯರೂ ಇದ್ದರು. ಸಂಖ್ಯೆಯಲ್ಲಿ ಪುರುಷರು ಹೆಚ್ಚಿದ್ದರೂ ಕೂಡ ಮಹಿಳೆಯರು ಇಲ್ಲದೆ ಇರಲಿಲ್ಲ. ಅವರಲ್ಲಿ ತಿರುಮಲೆ ರಾಜಮ್ಮ, ಮೊಗೇರಿ ಚಂದ್ರಮ್ಮ ಕಂಡುಬರುತ್ತಾರೆ.

ತಿರುಮಲೆ ರಾಜಮ್ಮ 'ಭಾರತಿ' ಎಂಬ ಕಾವ್ಯನಾಮದೊಂದಿಗೆ ಕವಿತೆ ರಚಿಸಿದ್ದಾರೆ. ಈಕೆ ಸ್ವಾತಂತ್ರ್ಯ ಹೋರಾಟಗಾರ, ಪತ್ರಿಕೋದ್ಯಮಿ ತಿರುಮಲೆ ತಾತಾಚಾರ್ಯ ಶರ್ಮರ ಪತ್ನಿ ಎಂಬುದು ಒಂದು ವಿಶೇಷ. ಈಕೆಯೊಂದಿಗೆ ಮಹಿಳಾ ಲೇಖಕಿ ಮೊಗೇರಿ ಚಂದ್ರಮ್ಮ – ಗೋಪಾಲಕೃಷ್ಣ ಅಡಿಗರ ತಂದೆಯ ತಂಗಿ ಕಂಡುಬರುತ್ತಾರೆ.

ರಾಷ್ಟ್ರೀಯ ಚಳುವಳಿ ಹಾಗೂ ಮಾತೃತ್ವ: ರಾಷ್ಟ್ರೀಯ ಚಳುವಳಿಯ ಕಾಲದಲ್ಲಿ ಕನ್ನಡ ಕವಿಗಳು ನಾಡನ್ನು, ದೇಶವನ್ನು, ಭಾಷೆಯನ್ನು ಕುರಿತು ರಚಿಸಿದ ಕವಿತೆಗಳು ಸಾಕಷ್ಟಿವೆ. ಎಲ್ಲ ಕವಿಗಳಲ್ಲೂ ಕಾಣಬರುವ ಸಾಮಾನ್ಯ ಸಂಗತಿ ಎಂದರೆ, ದೇಶದ ಪರಂಪರೆ, ಕಲೆ ಸಾಹಿತ್ಯದ ಶ್ರೀಮಂತಿಕೆ, ಅದರ ಪ್ರಾಕೃತಿಕ ವೈವಿಧ್ಯತೆ, ಇತಿಹಾಸದ ವೈಭವ, ಧಾರ್ಮಿಕ ಶ್ರೇಷ್ಠತೆ ಹಾಗೂ ಅದರ ಪುನರುತ್ಥಾನದ ಆಶಯ ಒಂದು ಮುಖವಾದರೆ; ದೇಶಾಭಿಮಾನದ ನಿರ್ಲಿಪ್ತತೆ, ನಿರಾಸಕ್ತಿ ಹಾಗೂ ಅನೈಕ್ಯತೆಯ ಪರಿಯನ್ನು ಬಿಂಬಿಸುವುದು ಮತ್ತೊಂದು ಮುಖವಾಗಿದೆ. ಜೊತೆಗೆ ಸುಂದರವೂ, ಸಂಪದ್ಭರಿತವೂ, ಸಹಬಾಳ್ವೆಯ ತಾಣವೂ ಆಗಬೇಕೆಂಬ ಒತ್ತಾಸೆ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾಂತೀಯ ಭಾವನೆಗಳೂ, ವೈಶಿಷ್ಟ್ಯಗಳೂ ಬಿಂಬಿತವಾಗಿವೆ. ಈ ಬಗೆಯ ಕಾವ್ಯ ರಚನೆಯಲ್ಲಿ ಪ್ರಸಿದ್ಧ ಕವಿಗಳಾದ ಪಂಜೆ, ಶಾಂತಕವಿ, ಬಿ.ಎಂ.ಶ್ರೀ, ಸಾಲಿರಾಮಚಂದ್ರರಾಯ, ಮುದವೀಡು ಕೃಷ್ಣರಾಯ, ಬೇಂದ್ರೆ, ಕುವೆಂಪು ಮೊದಲಾದ ಅನೇಕ ಮಂದಿ ಕಂಡುಬರುತ್ತಾರೆ.

ಆರಂಭ ಕಾಲದಲ್ಲಿ ಶಾಸ್ತ್ರೀಯ ಸಂಗೀತದ ರಾಗ ತಾಳಗಳ ಸಂಯೋಜನೆ ಯೊಂದಿಗೆ ಗೀತೆಗಳನ್ನು ಸಂಸ್ಕೃತ ಭಾಷೆಯ ಛಂದ ವೃತ್ತಗಳ ಸಂಯೋಜನೆಗಳಲ್ಲಿ ರಚಿಸಿ ಹಾಡುತ್ತಿದ್ದರು ಎಂಬುದನ್ನು 'ನಮ್ಮದೀ ನಮ್ಮದೀ ಭರತ ಭೂಮಿ' ಕವಿತೆಯನ್ನು ರಾಗ – ಕಾಂಬೋಧಿ, ತಾಳ – ಝುಂಪೆಯಲ್ಲಿ ಶಾಂತಕವಿ ರಚಿಸಿರುವುದು ಕಂಡುಬರುತ್ತದೆ.

ನಮ್ಮದೀ ನಮ್ಮದೀ ಭರತ ಭೂಮಿ
ಹೆರವರಂ ನಂಬದಲೆ ಜಗದೀಶ್ವರಂತಾನೆ ।

ಧರಿಸಿ ನಾನಾವತಾರಂಗಳನ್ನು ॥
ಕರೆವ ಸರ್ವಸ್ವಮಂ ಧರೆಯ ಸಂರಕ್ಷಿಸುವ ।
ತೆರವ ಕಲಿಸಿದ ಪೂರ್ಣ ಪಾಠಶಾಲೆ ॥ [3]

ಶಿಷ್ಟ ಶೈಲಿಯಲ್ಲಿ ರೂಪಿತವಾಗಿರುವ ಈ ಕವಿತೆಯಲ್ಲಿ ಬಂದಿರುವ ನಮ್ಮದೂ ನಮ್ಮದು ಅವಧಾರಣೆ ಸ್ವಾರ್ಥಮೂಲದ್ದಲ್ಲ. ಸ್ವಾಭಿಮಾನದ ನೆಲೆಯಿಂದ ಬಂದದ್ದು. ಇದು ಸಹಜವಾಗಿಯೇ ಎಲ್ಲರಲ್ಲೂ ಕಂಡುಬರುತ್ತದೆ. ಆದರೆ ಇದಕ್ಕೆ ಎಲ್ಲಿಯಾದರೂ ಧಕ್ಕೆ ಉಂಟಾಗಿದ್ದರೆ ಅಥವ ಧಕ್ಕೆ ಉಂಟಾಗಬಹುದಾದ ಸಾಧ್ಯತೆಗಳಿದ್ದರೆ ಅದನ್ನು ನನ್ನದು ಎಂಬ ಹಕ್ಕೊತ್ತಾಯದ ಮೂಲಕ ಸ್ಥಿರಪಡಿಸಿಕೊಳ್ಳಲು ವ್ಯಕ್ತಿ ಪ್ರಯತ್ನಿಸುತ್ತಾನೆ. ಪಾರತಂತ್ರದಲ್ಲಿದ್ದ ಭಾರತೀಯನಿಗೆ ಈ ನೆಲದ ಬಗೆಗೆ ಸಹಜವಾಗಿಯೇ ಬೆಳೆದಿದ್ದ ಮಮಕಾರ ಮತ್ತು ಅದರ ಮೇಲೆ ಇತರರ ಹಿಡಿತ – ಇವೆರಡರ ನಡುವೆ ಸಿಲುಕಿ ಕವಿ ತಾಳುವ ಧೋರಣೆಯಾಗಿದೆ. ಮೂಲತಃ ದೇಶ ತನ್ನದಾಗಿದ್ದು ಹಲವಾರು ಕಾರಣಗಳಿಂದಾಗಿ ಇತರರ ಕೈವಶವಾದಾಗ ಅದರ ಬಗ್ಗೆ ಸಹಜವಾಗಿಯೇ ಅವನಲ್ಲುಂಟಾಗುವ ತಳಮಳ ಅದರೊಟ್ಟಿಗೆ ತನ್ನದೇ ಎಂದು ದೃಢೀಕರಿಸಿಕೊಳ್ಳಲು ನಡೆಸುವ ಪ್ರಯತ್ನ ಇಲ್ಲಿದೆ. ಇಲ್ಲಿ ನಮ್ಮದು ಎಂಬ ಶಬ್ದ ಸಮೂಹ ದನಿಯನ್ನು ಅಭಿವ್ಯಕ್ತಿಗೊಳಿಸುತ್ತದೆ.

ನಮ್ಮದು ನಮ್ಮದು ಎಂದ ಅವಧಾರಣೆ ಪರಾಧೀನದಲ್ಲಿರುವುದನ್ನು ಎತ್ತಿ ತೋರಿಸುವಂತೆ ಎಚ್ಚರಿಕೆಯನ್ನುಂಟುಮಾಡುವಂತಿದೆ. ಅಂದರೆ ನಮ್ಮವರಲ್ಲದವರು ಭರತಭೂಮಿಯನ್ನು ಹಿಡಿದಿರುವುದರೊಂದಿಗೆ ನಮ್ಮ ಪರಂಪರೆಗೆ, ಸ್ವಾಭಿಮಾನದ ಬದುಕಿಗೆ ಧಕ್ಕೆ ಉಂಟುಮಾಡಿದೆ ಎಂಬುದು ಕವಿಯ ಅಂತರಾಳದ ವೇದನೆ. ಏಕೆಂದರೆ, ಭಾರತವನ್ನು ಋಷಿ ಮುನಿವರರು ಸ್ವೇಚ್ಛೆಯಿಂದ ನೆಲೆಗೈದು ಪವಿತ್ರವಾಗಿರುವ ಸುಕ್ಷೇತ್ರವೆಂಬುದು ಕವಿಯ ನಂಬಿಕೆಯಾಗಿದೆ.

ಮುದವೀಡು ಕೃಷ್ಣರಾಯರು ಭಾರತಾಂಬೆಯ ಸುಪುತ್ರರನ್ನು ಪ್ರಶ್ನಿಸುವ 'ಮರೆತೆ ಏಕಯ್ಯ' ಕವಿತೆಯಲ್ಲಿ ಮಾತೃ ಭೂಮಿ ಮರೆತು ಪರಾಧೀನಕ್ಕೆ ಒಳಗಾದರೂ ಎಚ್ಚರ ಬೇಡವೇ? ಎಂದು ಭಾರತಾಂಬೆ ಮಕ್ಕಳನ್ನು ಕೇಳುತ್ತಾರೆ.

ಮರೆತೆ ಏತಕಯ್ಯಾ ನಿನ್ನ ಮಾತೃ ಭೂಮಿಯ
ನಿರುತ ನಿನ್ನ ಹೊರೆಯ ಹೊತ್ತು ಪೊರೆವ ತಾಯಿಯ ॥ ಮರೆತೆ ಏಕಯ್ಯ ॥
ಒಂಬತ್ತು ತಿಂಗಳು ತನ್ನೊಳಿಂಬುಗೊಟ್ಟವಳು ತಾಯಿ
ತೊಂಬತ್ತು ವರ್ಷವಾದರು ಪೊರೆವ ಕುಂಭಿನೀ ತಾಯಲ್ಲೋ ॥ ಮರೆತೆ ಏಕಯ್ಯ ॥ [4]

ಪ್ರತಿಯೊಬ್ಬ ವ್ಯಕ್ತಿಗೂ ಜನ್ಮ ಕೊಟ್ಟ ತಾಯಿಯಷ್ಟೇ ಬದುಕು ಬೆಳೆಸುವ ನೆಲದಾಯಿಯೂ ಮುಖ್ಯಳಾಗುತ್ತಾಳೆ. ಆದರೆ ಹೆತ್ತ ತಾಯಿಗಷ್ಟೇ ಪ್ರಾಧಾನ್ಯತೆಯನ್ನು ನೀಡಿ ಪೊರೆವ ತಾಯಿಯ ಬಗ್ಗೆ ನಿರ್ಲಕ್ಷ್ಯ ನಡಾವಳಿಕೆಯನ್ನು ಕಂಡು ಕವಿಮನ ಕೊರಗಿದೆ. ಇದನ್ನು ಸರಿಪಡಿಸಬೇಕು ಎಂಬ ಎದೆಯ ತುಡಿತದಿಂದ ಇಂತಹ ಮಾತುಗಳು ಹೊರಬರಲು ಸಾಧ್ಯವಾಗುತ್ತದೆ. ಭಾರತವು ಪರಕೀಯರ

ಆಡಳಿತಕ್ಕೊಳಪಟ್ಟಿದ್ದಾಗ ಜನಮನದೊಳಗಿನ ವೇದನೆ ಕವಿಸಂವೇದನೆಯಾಗಿ ಈ ರೀತಿ ಹರಿದಿದೆ. 'ಮರೆತೆ ಏಕಯ್ಯ' ಎಂಬುದು ಚಾರಿತ್ರಿಕ ಅನಿವಾರ್ಯತೆಯಾಗಿದೆ.

ಬೆಟಗೇರಿ ಕೃಷ್ಣಶರ್ಮ 'ಮಾತೃ ಭೂಮಿ ಜನನಿ' ಎಂಬ ಕವಿತೆಯಲ್ಲಿ:

ಮಾತೃ ಭೂಮಿ ಜನನಿ ನಿನ್ನ ಚರಣ ಸೇವೆ ಮಾಡುವಾ
ಪರಮ ಹರುಷದಿಂದ ನಿನ್ನ ಸುಖಕೆ ಪ್ರಾಣವೀಯುವಾ
. . . .
ಕೆಟ್ಟ ಕಣ್ಣಿನಿಂದ ನೋಳ್ಪ ದುಷ್ಟ ಜನರಿಗಂಜದೆ
ದಿಟ್ಟ ತನದೊಳೆಲ್ಲರೊಟ್ಟುಗೂಡುತಿಹೆವು ಕಷ್ಟಕೆ [೫]

ಬ್ರಿಟಿಷರು ಭಾರತವನ್ನು ಆಳುತ್ತಿದ್ದ ಸಂದರ್ಭದಲ್ಲಿ ಭಾರತೀಯರೆಲ್ಲರ ಮನೋಭಾವ ದೇಶಾಭಿಮಾನದ ಬಗ್ಗೆ ಏಕರೂಪತೆಯಿಂದ ಕೂಡಿರಲಿಲ್ಲ. ಅಲ್ಲಲ್ಲಿ ಅಪಸ್ವರಗಳೂ, ಒಳ ಹುನ್ನಾರಗಳೂ, ಸ್ವಾರ್ಥಜನ ಲೋಲುಪರಿಂದ ನಡೆಯುತ್ತಿದ್ದವು. ಇದನ್ನೆಲ್ಲ ಮನಗಂಡ ಕವಿ ಇಂತಹ ಜನರಿಗೆ ನೀತಿ, ಎಚ್ಚರ ಮತ್ತು ಕರ್ತವ್ಯ ಪ್ರಜ್ಞೆಯನ್ನು ಮನವರಿಕೆ ಮಾಡಿಕೊಡುತ್ತಾ ಇವುಗಳ ಬಗ್ಗೆ ಎಚ್ಚರದ ದನಿಯಾಗಿ ಇಂತಹ ಮಾತುಗಳನ್ನು ಆಡಿದ್ದಾರೆ.

ಒಗ್ಗಟಿನ ಮೂಲಕ ಸ್ವಾತಂತ್ರ್ಯವನ್ನು ಪಡೆಯಬಹುದೆಂಬುದು ಕವಿಯ ಆಶಯ. ಈ ಆಶಯ ಸತ್ಪೇರಣೆಯಾಗಿ ಕಾರ್ಯ ನಿರ್ವಹಿಸಲು ಜನಮನದ ಚಾಲನ ಶಕ್ತಿಯಾಗಿ ಕೆಲಸ ನಿರ್ವಹಿಸಲೆಂಬುದು ಕವಿಯ ಅಂತರಂಗದ ಮಿಡಿತ.

ನವೋದಯ ತಲೆಮಾರಿನ ಕವಿಗಳ ದೇಶಾಭಿಮಾನ, ಭಾಷಾಭಿಮಾನದ ಕವಿತೆಗಳೆಲ್ಲ ಆರಾಧನೆಯ ರೂಪದಲ್ಲಿ, ಶಕ್ತಿ ಲೀಲೆಯ ವೈಭವೀಕರಣದಲ್ಲಿ, ಒಂದೇ ರೀತಿ ಎರಕ ಹೊಯ್ದು ತೆಗೆದಂತೆ ಗೋಚರಿಸುತ್ತವೆ. ಭಾಷೆಯ ಬಳಕೆಯಲ್ಲಿ, ವರ್ಣನೆಯ ಹಿನ್ನೆಲೆಯಲ್ಲಿ, ಕಲ್ಪನೆಯ ರೂಪದಲ್ಲಿ ಪಾರಂಪರಿಕ ಶ್ರದ್ಧೆ, ನಿಷ್ಠೆಗಳೇ ಮುಪ್ಪುರಿಗೊಂಡಂತೆ ಕಂಡುಬರುತ್ತವೆ. ಬಹುಶಃ ಆ ಕಾಲದ ಬ್ರಿಟಿಷ್ ಗುಲಾಮಗಿರಿಯಿಂದ ರಾಷ್ಟ್ರವನ್ನು ಮುಕ್ತಗೊಳಿಸುವ ಉತ್ಕಟ ಆಸೆ, ಒತ್ತಡಗಳು ಎಲ್ಲರಲ್ಲೂ ಒಂದೇ ಭಾವನೆಯುಂಟಾಗಲು ಕಾರಣವಿರಬೇಕು.

ರಾಷ್ಟ್ರಮಾತೆ ಕಲ್ಪನೆ: ರಾಷ್ಟ್ರೀಯ ಚಳುವಳಿಗೆ ಮುಖ್ಯ ಪ್ರೇರಣೆ ಸ್ವತಂತ್ರ ಭಾರತದ ಕನಸು. ಅದಕ್ಕಾಗಿ ಇಡೀ ದೇಶವನ್ನು ತಾಯಿಯಾಗಿ ಪರಿಗ್ರಹಿಸಿ, ಆ ತಾಯಿಗೆ ಗೌರವಾದರಗಳು ಲಭಿಸಬೇಕೆಂಬುದು ಎಲ್ಲ ಭಾರತೀಯರ ಆಶಯವಾಗಿದ್ದಿತು. ಈ ಆಶಯಕ್ಕೆ ಅನೇಕ ಕಾರಣಗಳಿದ್ದವು. ಅವುಗಳಲ್ಲಿ ೧. ರಾಜಕೀಯ ಇಚ್ಛಾಶಕ್ತಿ, ೨. ದೇಶಾಭಿಮಾನ. ೩. ಕಲೆ ಸಾಹಿತ್ಯ ಸಂಸ್ಕೃತಿಯ ಕಾಳಜಿ. ೪. ಆಧುನಿಕ ಕವಿಗಳು ಹುಟ್ಟಿದೂರು ಬಿಟ್ಟು ಬೇರೆ ಊರಲ್ಲಿ ಸಾಹಿತ್ಯ ರಚನೆ ಮಾಡಿದಾಗ ಕಾಡುವ ಜನ್ಮಧಾತೆ ಮತ್ತು ಜನ್ಮಸ್ಥಳಗಳು. ಈ ಧೋರಣೆಗೆ ಅಪವಾದವಾಗಿ ಶಿಂಪಿ, ಬೇಂದ್ರೆ, ಮಧುರ ಚೆನ್ನರು ಕಂಡುಬರುತ್ತಾರೆ.

೧. ರಾಜಕೀಯ ಇಚ್ಛಾಶಕ್ತಿ: ಬ್ರಿಟಿಷರು ನಮ್ಮಲ್ಲಿ ಪ್ರಭುತ್ವ ಸ್ಥಾಪಿಸಿ, ನಮ್ಮನ್ನು ಗುಲಾಮರನ್ನಾಗಿ ಮಾಡಿಕೊಂಡು ಅಧಿಕಾರ ಸವಿಯುವುದನ್ನು ಕಂಡ ಸ್ಥಳೀಯ ರಾಜಕೀಯ ಪ್ರಜ್ಞಾವಂತರಿಗೆ ತಾವು ಅನ್ಯರಿಗೆ ಆಳಾಗುವುದಕ್ಕಿಂತ, ನಮ್ಮನ್ನು ನಾವೇ ಏಕೆ ಆಳಿಕೊಳ್ಳಬಾರದೆಂಬ ಸ್ವಾಭಿಮಾನದ ಪ್ರಜ್ಞೆ ಜಾಗೃತವಾಯಿತು. ಅದು ಒಗ್ಗಟ್ಟಿನ ರೂಪ ತಾಳಿ ರಾಜಕೀಯ ಪ್ರಜ್ಞೆ ರೂಢಿಸಿಕೊಳ್ಳಲು ಸಾಧ್ಯವಾಯಿತು. ರಾಜ ಮಹಾರಾಜರ, ಪಾಳೇಗಾರರ, ಸುಲ್ತಾನರ ದಬ್ಬಾಳಿಕೆ, ದೌರ್ಜನ್ಯಕ್ಕೆ ಹೇಸಿ ಹೊಸ ವ್ಯವಸ್ಥೆಯಲ್ಲಿ ರಾಷ್ಟ್ರ ನಿರ್ಮಾಣವಾಗಬೇಕೆಂಬ ಆಸೆ ಅಂಕುರಿಸಿತು. ಪರಕೀಯರಿಗಿಂತಲೂ ನಾವೆ ಉತ್ತಮವಾದ ಆಡಳಿತ ನೀಡಲು ಸಾಧ್ಯವೆಂಬ ಪ್ರಜ್ಞೆ ಮೂಡಿತು.

೨. ದೇಶಾಭಿಮಾನ: ಹೆತ್ತ ತಾಯಿಯ, ಹೊತ್ತ ಭೂಮಿಯ ಋಣ ಹೆಚ್ಚೆಂಬ ಭಾವನೆ ನಮ್ಮಲ್ಲಿ ರೂಢಿಗತವಾದ ನಂಬಿಕೆ. ಹಾಗಾಗಿ ನಮ್ಮ ತಾಯಿಗೆ ತೋರುವ ಗೌರವವನ್ನು ನಮ್ಮ ದೇಶಕ್ಕೂ ತೋರಬೇಕೆಂಬುದು ಸಹಜವಾಗಿ ಬರುವ ಸಂಗತಿ. ಈ ಹಿನ್ನೆಲೆಯಲ್ಲಿ ದಾಸ್ಯ ಪ್ರವೃತ್ತಿಯನ್ನು ವಿರೋಧಿಸುತ್ತ, ದೇಶದ ಐತಿಹಾಸಿಕ ಮಹತ್ವ, ಸ್ಥಳ ಪುರಾಣಗಳ ಕಲ್ಪನೆಗಳಿಂದ ಅದರ ಪ್ರಾಚೀನತೆಯನ್ನು ಕೊಂಡಾಡಿ, ಅದನ್ನು ಪರಕೀಯರ ಕಪಿಮುಷ್ಠಿಯಿಂದ ಬಿಡುಗಡೆಗೊಳಿಸುವುದೇ ನಮ್ಮ ಆದ್ಯ ಕರ್ತವ್ಯವೆನ್ನುವ ಧೋರಣೆಯಿಂದ ಕವಿಗಳು ಕಾವ್ಯಕೃಷಿ ಮಾಡಿದರು. ಇದೊಂದು ಸ್ವಾತಂತ್ರ್ಯ ಹೋರಾಟಕ್ಕೆ ಕವಿಗಳು ಕೊಟ್ಟ ಸಾತ್ವಿಕ ಬೆಂಬಲವಾಗಿದೆ.

೩. ಕಲೆ ಸಾಹಿತ್ಯ ಸಂಸ್ಕೃತಿಯ ಕಾಳಜಿ: ಒಂದು ದೇಶದ ಆಂತರಿಕ ಸಂಪತ್ತೆ ಆ ದೇಶದ ಕಲೆ ಸಾಹಿತ್ಯ ಸಂಸ್ಕೃತಿ. ಅದು ಒಂದೊಂದು ಕಾಲ ಘಟ್ಟದಲ್ಲಿ, ಒಂದೊಂದು ಪ್ರಾಂತೀಯ ವೈಶಿಷ್ಟ್ಯತೆಯಿಂದ ಕೂಡಿರುತ್ತದೆ. ನಾಡಿನ ಹಿರಿಮೆಯನ್ನ ಜಗತ್ತಿನ ಗಮನ ಸೆಳೆಯುವಂತೆ ಮಾಡುವುದು ಆ ನಾಡಿನ ಕಲೆ ಸಾಹಿತ್ಯ ಸಂಸ್ಕೃತಿ. ಅವು ಆ ನಾಡಿನ ಜನಾಂಗವನ್ನು, ಅವರ ಬದುಕನ್ನು ರೂಪಿಸುವಲ್ಲಿ ಮಹತ್ತರ ಪಾತ್ರವಹಿಸುತ್ತವೆ. ಪರಂಪರಾಗತವಾಗಿ ಬದುಕಿನೊಂದಿಗೆ ಭಾವನಾತ್ಮಕ ಸಂಬಂಧದೊಂದಿಗೆ ರೂಢಿಗತವಾಗಿರುವ ಕಲೆ ಸಾಹಿತ್ಯ ಸಂಸ್ಕೃತಿಯನ್ನು ಯಾವ ವ್ಯಕ್ತಿಯೂ ನಿರಾಕರಿಸಲಾರ, ಉಪೇಕ್ಷಿಸಲಾರ. ಬದಲಾಗಿ ಅದಕ್ಕೆ ಧಕ್ಕೆ ಬಂದಾಗ, ಕಳಂಕ ತಟ್ಟಿದಾಗ, ನಾಶವಾಗುವ ಅಪಾಯ ಒದಗಿದಾಗ ಸಮಷ್ಟಿ ರೂಪದಲ್ಲಿ ಟೊಂಕ ಕಟ್ಟಿ ಬೀದಿಗಿಳಿದು ಅವುಗಳ ರಕ್ಷಣೆಗೆ ಮುಂದಾಗುತ್ತಾರೆ. ಅವುಗಳ ಮಹತ್ವವನ್ನು ಬಿತ್ತರಿಸಿ ಅವುಗಳನ್ನು ಪುನರ್ ಪ್ರತಿಷ್ಠಾಪಿಸುವಲ್ಲಿ ತೊಡಗುತ್ತಾರೆ. ಆ ಕಾರ್ಯವನ್ನು ಕವಿಗಳು ತಮ್ಮ ಮಾಧ್ಯಮದ ಮೂಲಕ ಮಾಡುತ್ತಾರೆ.

ಸಮಾಜದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಒಳಗೊಂಡಂತ ಸಾಹಿತ್ಯ ಆ ನಾಡಿನ ಸಂಪತ್ತುಗಳಲ್ಲಿ ಒಂದು. ಅದು ನಮ್ಮನ್ನು ನಾವು ದರ್ಶಿಸುವುದಕ್ಕೆ ನೆರವಾಗುತ್ತದೆ. ಇಂತಹ ಸಾಹಿತ್ಯ ಅನ್ಯ ಸಾಹಿತ್ಯದ ಮೇಲಾಟದಲ್ಲಿ ಮಸುಕಾಗುವುದಕ್ಕೆ ಅವಕಾಶ ಕೊಡಬಾರದೆಂಬ ಸ್ವಾಭಿಮಾನ ಎಂತಹವರಲ್ಲೂ ಜಾಗೃತಗೊಳ್ಳುತ್ತದೆ. ಈ ಎಲ್ಲ ಸ್ವಂತಿಕೆಯನ್ನು ಅನುಭವಿಸಲು ರಾಷ್ಟ್ರಾಭಿಮಾನ ವಜ್ರಕವಚದಂತೆ ನೆರವಾಗುತ್ತದೆ.

೪. ಪರಸ್ಥಳದಲ್ಲಿ ಉದ್ಯೋಗಿಗಳಾದ ಕವಿಗಳು: ಹೊಸ ಶಿಕ್ಷಣ, ಉದ್ಯೋಗಾವಕಾಶಗಳಿಗಾಗಿ ಪರಸ್ಥಳಗಳನ್ನು ಆಶ್ರಯಿಸಿದಾಗ ತಾಯಿ ತಂದೆಯರ ನೆನಪು ಜಾಸ್ತಿಯಾಗುತ್ತದೆ. ಜನಪದ ತ್ರಿಪದಿಗಳಲ್ಲಿ ಸ್ತ್ರೀಯರಿಂದ ತವರುಮನೆ ಬಗ್ಗೆ, ಹೆತ್ತತಾಯಿಯ ಬಗ್ಗೆ ಹೆಚ್ಚು ಅಭಿಮಾನ ವ್ಯಕ್ತವಾಗಿರುವಂತೆ ಸುಶಿಕ್ಷಿತರಾದವರು ಉದ್ಯೋಗಕ್ಕಾಗಿ ಹುಟ್ಟಿದ ಸ್ಥಳ, ಹಡೆದ ತಾಯಿ ತಂದೆ ಬಿಟ್ಟು ದೂರ ಹೋದಾಗ ಇದೇ ಭಾವನೆ ವ್ಯಕ್ತವಾಗುತ್ತದೆ. ದೂರವಿದ್ದಷ್ಟು ತಾಯಿ ತಂದೆಯ ಬಗ್ಗೆ ಪ್ರೀತಿ, ಗೌರವ ಇಮ್ಮಡಿಯಾಗುತ್ತದೆ; ತೀವ್ರವಾಗುತ್ತದೆ. ತಾವು ಹುಟ್ಟಿ ಬೆಳೆದ ಜಾಗ ಬಿಟ್ಟು, ಉದ್ಯೋಗಸ್ಥ ಮಕ್ಕಳೊಂದಿಗೆ ವೃದ್ಧ ತಾಯಿ ತಂದೆಗಳು ಬರುವುದಕ್ಕೆ ಒಪ್ಪುವುದಿಲ್ಲ. ಬದಲಾದ ಜೀವನ ವಿಧಾನ, ಅಭಿರುಚಿಯ ಧೋರಣೆಗಳಿಂದ ಅವರಿಗೆ ತಾವು ರೂಪಿಸಿಕೊಂಡ ಸಮೂಹದೊಂದಿಗೆ, ಆಸ್ತಿ ಪಾಸ್ತಿಗಳನ್ನು ಪೋಷಿಸಿಕೊಂಡು ಅಲ್ಲಿಯೇ ಇರಬೇಕೆಂಬ ಸೆಳೆತಕ್ಕೆ ಒಳಗಾಗಿ ಮಕ್ಕಳಿಂದ ದೂರ ಇರುವ ಸ್ಥಿತಿ ಒಂದಾದರೆ; ತಮಗೆ ಅನೇಕ ಮಕ್ಕಳಿದ್ದು ಅವರೆಲ್ಲರಿಗೂ ಉದ್ಯೋಗ ಸಿಕ್ಕುವುದಾಗಲೀ, ಸಿಕ್ಕಿದರೂ ಒಂದೇ ಊರಿನಲ್ಲಿ ಇರುವಂತ ಸ್ಥಿತಿ ಒದಗುವುದಾಗಲೀ ಸಾಧ್ಯವಾಗದ ಮಾತು. ಅಲ್ಲದೆ ತಾವು ಹಿರಿಯರಿಂದ ಉಳಿಸಿಕೊಂಡು ಜತನವಾಗಿ ಕಾಪಾಡಿಕೊಂಡು ಬಂದಿರುವ ಹೊಲ, ಗದ್ದೆ, ತೋಟಗಳ ಬಗ್ಗೆ ಬಿಡಿಸಿಕೊಳ್ಳಲಾರದ ಅವಿನಾಭಾವ ಸಂಬಂಧ ಏರ್ಪಟ್ಟಿರುತ್ತದೆ. ಈ ಎಲ್ಲ ಕಾರಣಗಳಿಂದ ಹುಟ್ಟಿದ ಊರು, ಜನ್ಮ ಕೊಟ್ಟ ತಾಯಿ ತಂದೆಗಳಿಂದ ದೂರವಾಗಿ ಬೆಳೆಯುವ ಉದ್ಯೋಗಸ್ಥ ಮಕ್ಕಳಿಗೆ ತನ್ನ ಊರು, ಪೋಷಕರ ಬಗ್ಗೆ ಕಾಳಜಿ ಹಾಗೂ ಅಭಿಮಾನ ಸಹಜವಾಗಿರುತ್ತದೆ. ಆ ಸಂದರ್ಭದಲ್ಲಿ ಉಂಟಾದ ಉತ್ಕಟ ಭಾವದಿಂದ ತಾಯಿಯನ್ನು ಹಾಗೂ ದೇಶವನ್ನು ಕುರಿತ ಕವಿತೆಗಳು ಗಂಭೀರವಾಗಿ ಮೂಡಿಬರುತ್ತವೆ.

ರಾಷ್ಟ್ರೀಯತೆಯ ಕಲ್ಪನೆ

ಗುಲಾಮಗಿರಿಗೊಳಗಾದ ಜನರಲ್ಲಿ ದೇಶಾಭಿಮಾನ, ಭಾಷಾಭಿಮಾನ ಸಹಜವಾಗಿ ಹುಟ್ಟುತ್ತದೆ. ತನ್ನ ನಾಡು – ನುಡಿಗೆ ಒದಗಿರುವ ದುಃಸ್ಥಿತಿಗೆ ಸಿಡಿದೇಳುವುದು ಮಾನವನ ಸಹಜ ಗುಣ. ಇದು ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ವ್ಯಾಪಕ ಸ್ವರೂಪ ಪಡೆದುಕೊಂಡಿತು. "ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯದಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ಮೂಡಿರುವುದು ಸಾಮಾನ್ಯ ಸಂಗತಿಯಾಗಿದೆ. ವಸಾಹತುಶಾಹಿ ಆಡಳಿತಕ್ಕೊಳಪಟ್ಟ ದೇಶದಲ್ಲಿ ಈ ರೀತಿಯ ಪ್ರಕ್ರಿಯೆ ಮೂಡಿಬಂದಿತ್ತೆನ್ನುವುದು ಮುಖ್ಯ ಸಂಗತಿಯಾಗಿದೆ. ವಸಾಹತುಶಾಹಿ ಸಂಸ್ಕೃತಿಗೆ ಪ್ರತಿಭಟನೆಯಾಗಿ ಸಾಹಿತ್ಯದ ಮೂಲಕ ಒಂದು ಹೊಸ ಪ್ರಕ್ರಿಯೆ ರೂಪುಗೊಂಡಿತು. 'ರಾಷ್ಟ್ರೀಯತೆ' ಎಂದರೆ ರಾಷ್ಟ್ರದ ಬಗೆಗಿನ ಎಚ್ಚರ, ಕಳೆದು ಹೋಗುತ್ತಿರುವ ಸಂಸ್ಕೃತಿ, ಆದರ್ಶಗಳ ಬಗೆಗಿನ ಎಚ್ಚರ, ಮೌಲ್ಯಗಳ ಬಗೆಗಿನ ಎಚ್ಚರವಾಗಿದೆ. ಇದು ಮುಖ್ಯವಾದ ಆಧುನಿಕ ಬೆಳವಣಿಗೆ ಎಂದು ಖ್ಯಾತ ವಿಮರ್ಶಕ ಡಿ.ಆರ್. ನಾಗರಾಜ್ ಹೇಳಿದ್ದಾರೆ. ಕುಸಿಯುತ್ತಿರುವ ಮೌಲ್ಯಗಳ ಬಗೆಗಿನ ಆತಂಕವೇ ರಾಷ್ಟ್ರೀಯತೆಯ ಪ್ರಜ್ಞೆಯಲ್ಲಿ ಅಡಗಿಕೊಂಡಿತ್ತೆನ್ನಬಹುದು. ರಾಷ್ಟ್ರೀಯ ಪ್ರಜ್ಞೆಯ ಮೂಲಕ ನಮ್ಮ ಇತಿಹಾಸವನ್ನು ಸ್ತುತಿಸುವ, ವೈಭವೀಕರಿಸುವ ಕ್ರಿಯೆ ಆರಂಭವಾಯಿತು. ಇತಿಹಾಸದ ನೆನಪುಗಳನ್ನು ವೈಭವೀಕರಿಸುವ ಪ್ರಕ್ರಿಯೆಯೆ ರಾಷ್ಟ್ರೀಯ ಪ್ರಜ್ಞೆಯ ಒಂದು ಮುಖ್ಯ ಗುರಿಯಾಗಿದೆ". ವಸಾಹತು ಸಂಸ್ಕೃತಿ ಸಂಕೀರ್ಣ ನೆಲೆಯಲ್ಲಿ ನಮ್ಮ ಮೇಲೆ ದಾಳಿಯಿಟ್ಟಾಗ ಅದರಿಂದಾದ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿ ಸ್ವಾಭಿಮಾನ

ಸೆಟೆದೆದ್ದಿತು. ಇಡೀ ದೇಶ ತನ್ನ ಜಡತೆಯನ್ನು ಕೊಡವಿ ಎದ್ದು ನಿಂತಂತೆ ಕವಿಗಳೂ ಕೂಡ ಎಚ್ಚೆತ್ತುಕೊಂಡರು. "ನಾಡ ನಾಯಕರು ನಡೆಸಿದ ಆಂದೋಲನ, ವಿವಿಧ ಪ್ರಕಾರದ ರಾಷ್ಟ್ರೀಯ ಕಾರ್ಯಕ್ರಮಗಳು, ಕರನಿರಾಕರಣೆ, ಸತ್ಯಾಗ್ರಹ ಮೊದಲಾದವುಗಳನ್ನು ಈ ಕವಿಗಳು ಕಂಡಿದ್ದರು. ಆ ಕಾಲದ ನಾಡ ನಾಯಕರ ವ್ಯಕ್ತಿತ್ವದ ಉಜ್ವಲತೆಯಿಂದಲೂ ಅವರು ಪ್ರಭಾವಿತರಾಗಿದ್ದರು. ಆದರೆ ಇವುಗಳ ಚಿತ್ರಣಕ್ಕೆ ಕಾವ್ಯ ಸೀಮಿತವಾಗಿದ್ದರೆ ಅದು ಕೇವಲ ಪ್ರಚಾರದ ಕಾವ್ಯವಾಗಿ ಬಿಡಬಹುದಿತ್ತು. ನವೋದಯ ಕವಿಗಳು ರಾಷ್ಟ್ರೀಯ ಆಂದೋಲನದ ಐತಿಹಾಸಿಕ ಸಂದರ್ಭವನ್ನು ತಾತ್ವಿಕ ಹಿನ್ನೆಲೆಯನ್ನು ಅಭಿವ್ಯಕ್ತಿಯಲ್ಲಿ ಹಿಡಿಯಲು ಪ್ರಯತ್ನಿಸಿದರು."[೬] ಸ್ವತಂತ್ರ ಭಾರತದ ಕಲ್ಪನೆ ಕೇವಲ ಹೋರಾಟಗಾರರಲ್ಲಿ ಮಾತ್ರವಲ್ಲದೆ ಎಲ್ಲರಲ್ಲಿಯೂ ಬೇರುಬಿಟ್ಟಿತ್ತು. ಅದು ಕವಿಗಳ ಭಾವಲೋಕದಲ್ಲಿ ತೀವ್ರವಾಗಿ ಬಿರುಗಾಳಿ ಎಬ್ಬಿಸಿತ್ತು. ಅವರು ಅದನ್ನು ತಮ್ಮ ಕವಿತೆಗಳಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಿಪಡಿಸಿದರು.

"ಭಾವಾತಿರೇಕ, ಕನಸುಗಾರಿಕೆ ಮತ್ತು ವಸ್ತುಸ್ಥಿತಿಯನ್ನು ಮರೆತ ಆದರ್ಶಪ್ರಿಯತೆ ಇವು ಆಗಿನ ರಾಷ್ಟ್ರೀಯತೆಯಲ್ಲಿ ಒಡೆದು ಕಾಣುವ ಆಯಾಮಗಳು. ಭಾವಾತಿರೇಕ, ಕನಸುಗಾರಿಕೆ ಮತ್ತು ವಸ್ತುಸ್ಥಿತಿಯನ್ನು ಮರೆತ ಆದರ್ಶಪ್ರಿಯತೆ ಈಗ ನಮಗೆ ಸೌಲಭ್ಯಗಳಾಗಿ ಕಂಡರೆ ಆಗ ಇವೇ ಶಕ್ತಿಗಳಾಗಿದ್ದವು."[೭] ಇಂತಹ ಕನಸು ಕಲ್ಪನೆಗಳಿಂದ ಆರಂಭಗೊಂಡಿದ್ದ ರಾಷ್ಟ್ರೀಯ ಪ್ರಜ್ಞೆಗೆ ಆ ಕಾಲದ ಕವಿಗಳೂ ಕೂಡ ಸ್ಪಂದಿಸಿದ್ದಾರೆ. ಭಾಷೆ, ದೇಶ, ನಾಡು, ನಿಸರ್ಗವನ್ನು ತಾಯಿಯಾಗಿ ದರ್ಶಿಸಿದ್ದಾರೆ.

ಕನ್ನಡ ಆಂಗ್ಲಭಾಷೆಯ ಕಸುವನ್ನು ಮೈಗೂಡಿಸಿಕೊಂಡು ದಷ್ಟಪುಷ್ಟವಾಗಿ ರೂಪು ತಾಳಬೇಕೆಂಬ ಬಯಕೆ ಬಿ.ಎಂ.ಶ್ರೀಯವರದು. ತನ್ನ ಮಾತೃಭಾಷೆಯ ಶ್ರೀಮಂತಿಕೆ ನೋಡಿ ಆನಂದಿಸುವ ಆಶಯ. ಹಾಗಾಗಿ ಕೇವಲ ಕನ್ನಡ ತಾಯಿ ಮಾತ್ರವಲ್ಲ ಇಡೀ ಭಾರತಾಂಬೆಯೇ ಲೋಕದ ಜನರ ಗಮನ ಸೆಳೆಯಬೇಕೆಂದು ಆಶಿಸುತ್ತಾರೆ. ಭಾರತವೂ ಅವರಿಗೆ ತಾಯಿ. ಬ್ರಿಟಿಷರ ದಾಸ್ಯಕ್ಕೆ ಒಳಗಾದ ಭಾರತವು ಬಿಡುಗಡೆ ಹೊಂದಿ ತನ್ನ ಸ್ವಾಭಿಮಾನದ ಶ್ರೀಮಂತಿಕೆಯಿಂದ ತಲೆಎತ್ತಿ ಮೆರೆಯಬೇಕೆಂದು ಭಾವಿಸಿದ್ದಾರೆ.

ಭರತ ಮಾತೆಯೆ, ಭರತ ಮಾತೆಯೆ ಎಂದು ನೀ ತಲೆ ಎತ್ತುವೆ?
ಎಂದು ಲೋಕದ ಜನರ ಹೃದಯದಿ ನಿನ್ನ ಮಹಿಮೆಯ ಬಿತ್ತುವೆ?
ಎಂದು ಮಲಿನತೆ ನೀಗುವೆ – ಮಗು
ಳೆಂದು ನಗು ಮುಖವಾಗುವೆ?

. . . .
ನಿನ್ನ ಧರ್ಮದ ದಿವ್ಯ ಪಥದಲಿ ಬದುಕ ತಿದ್ದದೆ ಹೋದೆನು;
ನಿನ್ನ ಸೇವೆಯ ಮರೆತು ನಮ್ಮೊಳೆ ಹೋರಿ ಸೋತವರಾದೆವು;
ನಿನ್ನ ಹೆರರಿಗೆ ಕೊಟ್ಟೆವು
ನಿನ್ನನು ಸಾಕದೆ ಕೆಟ್ಟೆವು [೮]

ಭಾರತವು ಮೂಲತಃ ತನ್ನದೇ ಆಡಳಿತ ವ್ಯವಸ್ಥೆ ಹೊಂದಿದ್ದು, ತದನಂತರ ಈ ನೆಲಕ್ಕೆ ಬ್ರಿಟಿಷರು ಬಂದು ಸಂಚು ಹೂಡಿ ಆಡಳಿತ ಸೂತ್ರವನ್ನು ಹಿಡಿದದ್ದು ಇತಿಹಾಸದ ಮಾತಾಗಿದೆ. ಆದರೆ ಆ ಸಂದರ್ಭದಲ್ಲಿ ಜನ ಆಡಳಿತಾತ್ಮಕವಾಗಿ ತಮ್ಮನೆಲದಲ್ಲಿಯೇ

ಅನಾಥ ಪ್ರಜ್ಞೆ ಅನುಭವಿಸಬೇಕಾಯಿತು. ಅಂತಹ ಸಂದರ್ಭದಲ್ಲಿ ಹಿಂದಿನ ವೈಭವದ ಸ್ಥಿತಿಗೂ ಇಂದಿನ ದೈನ್ಯ ಸ್ಥಿತಿಗೂ ತಾಳೆ ಹಾಕಿ ಮತ್ತೆ ಪುನಃಶ್ಚೇನವನ್ನು ಪಡೆದುಕೊಂಡು ಸ್ವಾಭಿಮಾನದಿಂದ ತಲೆ ಎತ್ತಬೇಕೆಂಬುದು ಕವಿಯ ಆಶಾಭಾವನೆಯಾಗಿದೆ.

ನಮ್ಮೊಳಗಿನ ಅನೈಕ್ಯತೆಯೇ ಪರರಿಗೆ ಲಾಭದಾಯಕವಾಗಿ ನಮ್ಮನ್ನು ಹೊಡೆದು ಆಳುವುದರ ಮೂಲಕ ತಮ್ಮ ಸ್ವಾರ್ಥ ಸಾಧನೆಯನ್ನು ಮೆರೆದರು. ಶತ್ರುಗಳ ಜೊತೆಗೆ ಕಾದಾಡಿ ಈ ನೆಲವನ್ನು ಉಳಿಸಿಕೊಳ್ಳಬೇಕಾದವರು ತಮ್ಮ ತಮ್ಮಲ್ಲೇ ಹೋರಿ ಇತರರಿಗೆ ತಲೆಬಾಗುವ ಪರಿಸ್ಥಿತಿಯನ್ನು ತಂದೊಡ್ಡಿಕೊಂಡರು. ಹಿಂದೆ ನಡೆದುಕೊಂಡುದುದರ ಬಗ್ಗೆ ಪಶ್ಚಾತ್ತಾಪ, ಅದಕ್ಕೆ ಕಾರಣವಾದ ತಮ್ಮೊಳಗಿನ ಬಿರುಕು, ಅದರಿಂದುಂಟಾದ ಸೋಲಿನ ಫಲವಾಗಿ ಈ ನೆಲವನ್ನು ಕೊಟ್ಟಿದ್ದು, ತಾವು ಕೆಟ್ಟುದುದರ ಬಗ್ಗೆ ಆತ್ಮಾವಲೋಕನವಿದ್ದು ಅದನ್ನು ಸರಿಪಡಿಸಿಕೊಳ್ಳಬೇಕೆಂಬ ಉತ್ಕಟೇಚ್ಛೆ ಇಲ್ಲಿದೆ.

ಭಾರತೀಯರ ಅನೈಕ್ಯತೆಯಿಂದ ಭಾರತಾಂಬೆಯು ದಾಸ್ಯಕ್ಕೆ ಈಡಾಗಲು ಕಾರಣವಾಯಿತು. ಜಗತ್ತಿಗೆ ನೀಡುವಂತ ಧಾರ್ಮಿಕ, ಆಧ್ಯಾತ್ಮಿಕ ಶ್ರೀಮಂತಿಕೆಯಿದ್ದರೂ ಅದನ್ನ ಜತನ ಮಾಡಿಕೊಂಡು ರಾಷ್ಟ್ರಕಟ್ಟುವ ಕೆಲಸ ಮಾಡಲಿಲ್ಲವೆಂಬ ವ್ಯಥೆಗೆ ಕವಿ ಒಳಗಾಗಿದ್ದಾರೆ. ಜೊತೆಗೆ ಕಡಲ ರಾಣಿ ಬ್ರಿಟಾನಿಯಳ ನೆರವು ನಮ್ಮ ಭಾಷೆ, ಭಾವನೆಗಳ ಬೆಳವಣಿಗೆಗೆ ನೆರವಾಯಿತೆಂದು ಅಭಿಮಾನದಿಂದ ಸ್ಮರಿಸುತ್ತಾರೆ. ಇದೊಂದು ನೋವಿನಲ್ಲೂ ಸಂತಸ ಪಡುವ ಸಂಗತಿ.

"ಬೇಂದ್ರೆಯವರಿಂದ ಒಂದು ಕಾವ್ಯ ಪರಂಪರೆ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದ್ದು, ಅವರ ಪ್ರತಿಭೆ ಅನೇಕ ದಿಕ್ಕಿನಲ್ಲಿ ದುಡಿದಿದೆ. ವರ್ಡ್ಸ್‌ವರ್ತ್‌ನ ಹಾಗೆ ರೋಮ್ಯಾಂಟಿಕ್ ಕಾವ್ಯ ಪರಂಪರೆಯನ್ನು ಗಟ್ಟಿಗೊಳಿಸುವಲ್ಲಿ ಬೇಂದ್ರೆಯವರು ಮಾಡಿದ ಸಾಧನೆ ಅತ್ಯಂತ ಅರ್ಥಪೂರ್ಣವಾದದ್ದು. ಭೂಮಿ – ಗಗನ, ಮಾನವ-ದೇವ, ಸಂಸ್ಕೃತಿ – ನಾಗರಿಕತೆ, ಆತ್ಮ – ಆಧ್ಯಾತ್ಮ, ಸಾಫಲ್ಯ – ವೈಫಲ್ಯ– ಹೀಗೆ ಹಲವು ತರದ ದ್ವಂದ್ವ ಹಾಗೂ ಹೋರಾಟದಲ್ಲಿ ಬೇಂದ್ರೆಯವರ ಕಾವ್ಯ ಆವಿಷ್ಕಾರ ಪಡೆದಿರುವುದು ಗಮನಾರ್ಹವಾಗಿದೆ." ಇಂತಹ ಬೇಂದ್ರೆಯವರು ಪ್ರಕೃತಿಯಲ್ಲಿ ಮಾತೆಯ ಆರಾಧನೆ ಮಾಡಿದ್ದಾರೆ. ತನ್ನ ಊರನ್ನು ಮಾತೆಯಾಗಿ, ಕನ್ನಡ ನಾಡನ್ನು ದೇವತೆಯಾಗಿ, ಭಾರತವನ್ನು, ಭೂಮಿಯನ್ನು ವಿಶ್ವಮಾತೆಯಾಗಿ ದರ್ಶಿಸಿದ್ದಾರೆ.

ಜೈ ಭೂಮಾತೆ, ಜೈ ಭಾರತಮಾತೆ
ಆ ಮಾತೇ ಈ ಮಾತೇ
ಸಕಲ ಧೈರ್ಯದಾತೇ ॥ಪ॥

ಭೂಮಂಡಲ ಏಕರಾಷ್ಟ್ರ
ಸರ್ವ ವರ್ಣ ಮಾನವಾ
ಕೃತ ಯುಗದಾ ಪರ್ವದಲ್ಲಿ
ಕಲಿತನೋ ನವೋನವ ।[೧೧]

ಇಲ್ಲಿನ ಮಾತೆ ಶಬ್ದ ತಾಯಿ ಸ್ವರೂಪವನ್ನಲ್ಲದೇ ವಾಕ್ ಸ್ವರೂಪವನ್ನೂ ಸೂಚಿಸುತ್ತದೆ. ಇಲ್ಲಿನ ವರ್ಣ, ವರ್ಣಾಶ್ರಮ ಧರ್ಮ ಮತ್ತು ಅಕ್ಷರವನ್ನು ಏಕಕಾಲದಲ್ಲಿ ಧ್ವನಿಸುತ್ತದೆ. ಶಬ್ದವನ್ನು ಹಿಡಿದು ಹೊಸಹೊಸ ಅರ್ಥವನ್ನು ಹೊಳೆಯಿಸುವ ಚಮತ್ಕಾರ ಬೇಂದ್ರೆಯವರಿಗೆ ದಕ್ಕಿರುವಷ್ಟು ಮತ್ತಾರಿಗೂ ದಕ್ಕದು.

ಈ ಕವಿತೆಯಲ್ಲಿ ಭೂಮಿಯನ್ನೂ ಮತ್ತು ಭಾರತವನ್ನೂ ಮಾತೆಯಾಗಿ ಗ್ರಹಿಸಿರುವ ಬೇಂದ್ರೆಯವರು, ಮನುಕುಲವನ್ನು ಸಮಾನ ದೃಷ್ಟಿಯಲ್ಲಿ ಕಂಡಿದ್ದಾರೆ. ಸಂಕುಚಿತತೆಯ ಎಲ್ಲೆ ಮೀರಿ ಹೊರಬಂದು ವಿಶ್ವಬಂಧುತ್ವದ ವಿಶಾಲ ಪ್ರಜ್ಞೆಯನ್ನು ಕವಿ ವ್ಯಕ್ತಪಡಿಸಿದ್ದಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ಜನರಲ್ಲಿ ದೇಶಾಭಿಮಾನದ ಕಿಡಿ ಹೊತ್ತಿಸಲು ರಚಿಸಿದ ಇವರ ಕವಿತೆ 'ಮೂವತ್ತು ಮೂರುಕೋಟಿ'ಯಲ್ಲಿ ಭಾರತಮಾತೆ ಹಡೆದ ರೀತಿ ಇರುವ ಕೆಚ್ಚಿಲ್ಲದ ಭಾರತೀಯರನ್ನು 'ಸೂಲಗಳು' ಎಂದು ಧ್ವನ್ಯಾರ್ಥದಲ್ಲಿ ಕರೆದು ಎಚ್ಚರಿಸಿದ್ದಾರೆ.

ಮಕ್ಕಳಿವರೇನಮ್ಮಾ? ಮಕ್ಕಳಿವರೇನಮ್ಮಾ?
ಮೂವತ್ತು ಮೂರು ಕೋಟಿ?
. . . .
ಬಯಕೆಗಳು ಬಸಿರುಗಳು ಹಡೆದದ್ದು ಹಿಂಗಿದ್ದು
ಮೂವತ್ತು ಮೂರು ಕೋಟಿ!
ಸೂಲಗಳು ಮೂವತ್ತು ಮೂರು ಕೋಟಿ!! [೧೧]

ಸ್ವಾತಂತ್ರ್ಯ ಪೂರ್ವದಲ್ಲಿ ಭಾರತ ಪರತಂತ್ರದಿಂದ ಬಿಡುಗಡೆ ಹೊಂದಬೇಕು ಎಂಬ ಆಶಯ ಎಲ್ಲರದಾಗಿತ್ತು. ಬ್ರಿಟಿಷರ ಒಡೆದು ಆಳುವ ನೀತಿಯ ಹುನ್ನಾರದಿಂದಾಗಿ ಭಾರತೀಯತೆಗೆ ಭಂಗ ಬಂದಿತ್ತು. ಅದನ್ನು ನಿವಾರಿಸಿಕೊಂಡು ನಮ್ಮೊಳಗೆ ಏಕ ರೀತಿಯ ಮನೋಭಾವ, ದೃಢವಾದ ಸಂಕಲ್ಪ ಮೂಡಿಸುವಂತಹುದ್ದು ಕವಿಯ ಆಶಯವಾಗಿದ್ದರೂ ನಿಸ್ತೇಜರಾಗಿದ್ದ ಜನತೆಯನ್ನು ಚುಚ್ಚಿ ಬಡಿದೆಬ್ಬಿಸುವ ಕಾರ್ಯವನ್ನು ನೇತ್ಯಾತ್ಮಕ ವಿಧಾನದಲ್ಲಿ ಮಾಡುವ ಪ್ರಯತ್ನವಾಗಿದೆ. ನಮ್ಮಲ್ಲಿರುವ ಅಂತಃಶಕ್ತಿಯನ್ನು ಸವಾಲೊಡ್ಡಿ ಕ್ರಿಯಾಭಿಮುಖವಾಗಿ ಮಾಡುವುದನ್ನು ಇಲ್ಲಿ ಕಾಣಬಹುದು. ಎಷ್ಟೇ ಆಗಲಿ ಕವಿ ಜನಮನದ ಪ್ರತಿನಿಧಿಯಲ್ಲವೆ?

ಮತ್ತೊಂದು ಕವಿತೆ 'ಭಾರತ ನವಶಕ್ತಿ'ಯಲ್ಲಿ, ಭಾರತೀಯರಿಗೆ ನವ ಶಕ್ತಿ ನೀಡಿ ಹೋರಾಟದ ಕಲಿಗಳನ್ನಾಗಿಸು ಎಂದು ಪ್ರಾರ್ಥಿಸಿದ್ದಾರೆ.

ಹೃಜ್ಜಾತೇ! ಚಿನ್ಮಾತೇ!
ಹೃನ್ಮಾತೇ, ಚಿಜ್ಜಾತೇ! ಭಾರತ ನವಶಕ್ತಿ
ನಮ್ಮಾತ್ಮವೆ ಪರಮಾತ್ಮವೆ, ಕರುಣಿಸು ತವ ಶಕ್ತಿ! [೧೨]

ನಾವು ಭಾರತೀಯರು ಎಂಬ ಭಾವ ಪ್ರತಿಯೊಬ್ಬ ಕನ್ನಡಿಗನಲ್ಲೂ ಉದ್ಭವಿಸಬೇಕಾಗಿದೆ. ಕನ್ನಡಿಗ ಎಂಬುದು ಜೀವಾತ್ಮವಾದರೆ: ಭಾರತೀಯ ಎಂಬುದು

ಪರಮಾತ್ಮ. ಇವರೆಡು ಒಂದಾದಾಗ ಆನಂದಕ್ಕೆ ಕೊರತೆಯಾಗಲಾರದು. ಈ ಐಕ್ಯದ ಬುದ್ಧಿ ಪ್ರತಿಯೊಬ್ಬರಲ್ಲೂ ಹುಟ್ಟಿ, ಚಿತ್ತದಲ್ಲಿ ಸ್ಥಿರವಾಗಿ ನಿಲ್ಲಬೇಕು. ಬದುಕಿನಲ್ಲಿ ಹಾಸು ಹೊಕ್ಕಾಗಿರಬೇಕು. ಆಗ ಸುಂದರ ಬದುಕು ನಮ್ಮದಾಗುತ್ತದೆ. ವಿರಸ ತೊಲಗಿ, ಸರಸ ಮೂಡಿ ಭಾವೈಕ್ಯತೆ ವೃದ್ಧಿಯಾಗುತ್ತದೆ ಎಂದು ಆಧ್ಯಾತ್ಮಿಕದ ಹಿನ್ನೆಲೆಯಲ್ಲಿ ತಿಳಿಸಿದ್ದಾರೆ.

ಬೇಂದ್ರೆ ತಮ್ಮ 'ಸ್ವಾತಂತ್ರ್ಯ ದೇವಿಗೆ' ಎಂಬ ಕವನದಲ್ಲಿ ರಾಷ್ಟ್ರದ ಜನರಲ್ಲಿ ಕೆಚ್ಚನ್ನು ಮೂಡಿಸುತ್ತ, ಸ್ವಾತಂತ್ರ್ಯದ ಉಳಿವಿಗಾಗಿ, ಭಾರತಾಂಬೆಯ ರಕ್ಷಣೆಗಾಗಿ ಕಂಕಣಬದ್ಧರಾಗಿ ನಿಂತು ಹೋರಾಟಕ್ಕಿಳಿಯಬೇಕು. ಭಾರತಾಂಬೆಯ ಮಾನವನ್ನು ಉಳಿಸಬೇಕು. ಅದಕ್ಕಾಗಿ ರಣಕಲಿಯಾಗಿ ಹೋರಾಡಬೇಕೆಂಬ ಕರೆ ಇದೆ.

ಮೂರು ಮುಸುಕ ಎಳೆದುಕೊಂಡು
ಮಲಗಿದೇಕೆ ಮಾನವಾ?
. . . .
ನುಗ್ಗಿರಣ್ಣ ರಣದ ಕಣಕೆ
ಅಸುರರಿಂದ ಬಿಡಿಸಿರಿ
ತಾಯ ಸೆರೆಯ, ಎಲ್ಲರಿಂದ
ಗೆಲುವಿನ ಗುಡಿ ಹಿಡಿಸಿರಿ
ಭೂಮಿದೇವಿ ನಲಿಯುವಂತೆ
ವಿಜಯ ಗೀತೆ ನುಡಿಸಿರಿ.[೧೩]

ಈ ಕವಿತೆಯಲ್ಲಿ ಮೂರು ಮುಸುಕು ಹೊದ್ದಿರುವುದು ಮೇಲು ನೋಟಕ್ಕೆ ಜಡತೆಯನ್ನು ಸೂಚಿಸುವುದಾದರೂ ಮೂರು ಹೊದಿಕೆಗಳ ಅರ್ಥ ಬಹುಮುಖಿಯ ಚಿಂತನೆಗೆ ಅವಕಾಶ ಮಾಡಿಕೊಡುತ್ತದೆ. ಎಚ್ಚರ, ನಿದ್ರೆ, ಸ್ವಪ್ನ ಸ್ಥಿತಿಯೂ ಹೌದು; ಕಾಯ, ವಾಚ, ಮನಸಾ ಸ್ಥಿತಿಯೂ ಹೌದು; ಧರ್ಮ, ಅರ್ಥ, ಕಾಮ ಸ್ಥಿತಿಯೂ ಹೌದು; ಸತ್ಯ ಅಹಿಂಸೆ, ಶಾಂತಿ ಸ್ಥಿತಿಯೂ ಹೌದು; ಬಾಲ್ಯ, ಯೌವ್ವನ, ಮುಪ್ಪೂ ಹೌದು. ಹೀಗೆ ಬಹು ಪದರಗಳ ನೆಲೆಯಲ್ಲಿ ಅರ್ಥೈಸಿಕೊಳ್ಳಬಹುದಾಗಿದೆ. ಇವುಗಳ ಆವೃತಗೊಂಡಿರುವ ವ್ಯಕ್ತಿ ಇವೆಲ್ಲಕ್ಕಿಂತ ಹೆಚ್ಚೆನ್ನಬಹುದಾದ ಸ್ವಾತಂತ್ರ್ಯವನ್ನು ಸಾಧಿಸಬೇಕಾದಲ್ಲಿ ತಾನು ಎದುರಿಸಬೇಕಾದದ್ದೂ ರಾಕ್ಷಸ ಶಕ್ತಿಯನ್ನು. ಮನುಷ್ಯನ ಶಕ್ತಿ ಧೈತ್ಯ ಶಕ್ತಿಯ ಮುಂದೆ ಕಡಿಮೆ ಎಂದು ತೋರಿದರೂ ಅದನ್ನು ಕಾರ್ಯ ಸಾಧನೆಗೆ ಬಳಸಬೇಕಾದಾಗ ತನ್ನೊಳಗಿನ ಆತ್ಮ ವಿಶ್ವಾಸ ಮತ್ತು ದೃಢ ಸಂಕಲ್ಪ ಬೆಳೆಸಿಕೊಳ್ಳಬೇಕು. ಅದರ ಮುಂದೆ ಯಾವ ಧೈತ್ಯ ಶಕ್ತಿಯೂ ನಿಲ್ಲದು. ಮಾನವನಿಗೆ ಅಸಾಧ್ಯವಾದುದು ಯಾವುದು ತಾನೇ ಇದ್ದೀತು?

ಇಲ್ಲಿಯ 'ಮಾನವ' ಶಬ್ದ ಮೊದಲಿಗೆ ಮನುಷ್ಯ ಎಂಬ ನೆಲೆಯಲ್ಲಿ ಪರಿಭಾವಿಸುವಂತಿದ್ದರೆ; ಎರಡನೆಯದಾಗಿ ಶೀಲ ಸಂಬಂಧಿಯಾಗಿ ಪರಿಭಾವಿಸುವಂತಿದೆ. ಈ ಕವಿತೆಗೆ ಹತ್ತಿರವಾಗಿ ಕಯ್ಯಾರ ಕಿಞ್ಞಣ್ಣ ರೈ ರವರ 'ಬೆಂಕಿ ಬಿದ್ದಿದೆ ಮನೆಗೆ' ಕವಿತೆ ನಿಲ್ಲುತ್ತದೆ.

ಭಾರತಾಂಬೆ ನಮ್ಮನ್ನು ರೂಪಿಸಿದ ದೇವತೆ. ಇಲ್ಲಿ ಹುಟ್ಟಿದವರೆಲ್ಲರೂ ಆಕೆಯ ಮಕ್ಕಳು. ಜಾತಿ, ಧರ್ಮ, ಭಾಷೆ, ಪ್ರಾಂತ್ಯ ಏನೇ ಭಿನ್ನವಾಗಿರಲಿ ನಾವೆಲ್ಲ ಭಾರತೀಯರು ಎಂಬುದನ್ನು ಸಾರುವ ಕವಿತೆ 'ಒಂದೇ ತಾಯಿಯ ಮಕ್ಕಳು'.

ಒಂದೆ ತಾಯಿಯ ಮಕ್ಕಳು
ಒಂದೆ ತವರ್ಮನೆ ಒಕ್ಕಲು.
ಬಣ್ಣ ಬಣ್ಣದ ಜನರು ನಾವಿಂದೊಂದುಗೂಡಲು ಬಂದೆವು
ಮಣ್ಣ ಭೇದವನೆಣಿಸದೇ ಒಂದೆದೆಯ ಬಲವನು ತಂದೆವು
ತಾಯಿನೆಲವೇ ಅನ್ನವೆಂದೇ ನಿನ್ನ ಮೈಯ್ಯನ್ನುಂಡೆವು
ತಾಯಿ ಮೊಲೆವಾಲೆಂತು ತೊರೆವುದೊ ಅಂತು ಸೆಲೆಗಳ ಕಂಡೆವು [೧೪]

ತಮ್ಮ ತಮ್ಮ ನೆಲೆಯಲ್ಲಿಯೇ ಚಿಂತನೆಗಳನ್ನು ನಡೆಸುತ್ತಿದ್ದವರು ಸಮಷ್ಟಿ ಚಿಂತನೆಯಿಂದ ಹೊರಗುಳಿದಿದ್ದರು. ಬ್ರಿಟಿಷರು ಆಡಳಿತಾತ್ಮಕವಾಗಿ ತಮ್ಮ ಹಿಡಿತಕ್ಕೆ ತೆಗೆದುಕೊಂಡಾಗ ತಮ್ಮ ತಮ್ಮ ಹಿತ ಸ್ವಾರ್ಥ ಮೂಲದಿಂದ ಕೂಡಿದೆ ಎಂಬುದರ ಅರಿವಾಗಿ ಬಿಡಿ ಬಿಡಿಯಾಗಿರುವುದು ಇಡಿಯಾದ ರೂಪವನ್ನು ಪಡೆದುಕೊಂಡರೆ ಒಂದೆ ಎಂಬ ಶಕ್ತಿಯ ಅಖಂಡತೆಯನ್ನು ಕಾಣಬಹುದು.

ಈ ಕವಿತೆಯಲ್ಲಿ ನಮ್ಮ ಪರಂಪರೆಯ ಪ್ರಜ್ಞೆಯನ್ನು ಬಿಂಬಿಸಿದ್ದಾರೆ. ಜೊತೆಗೆ ಈ ತಾಯಿಯೇ ಮುಂದಾಗಿ ಮಕ್ಕಳನ್ನು ಸರಿದಾರಿಯಲ್ಲಿ ನಡೆಯುವಂತೆ ಮಾಡಬೇಕೆಂದು ಪ್ರಾರ್ಥಿಸಿದ್ದಾರೆ. ಹಾಗೆಯೇ ಈ ಕವಿತೆಗೆ ಪೂರಕವಾಗಿ ನಿಲ್ಲುವಂತಿರುವ 'ಲೋಕಾಲೋಕೆ' ಕವಿತೆಯಲ್ಲಿ ಪ್ರಬುದ್ಧ ಭಾರತೀಯನಿಂದ ಲೋಕದ ಏಳ್ಗೆಯಾಗುತ್ತದೆ. ಶಾಂತಿ, ಪ್ರೀತಿ, ಸೌಹಾರ್ದತೆ ಮೂಡುತ್ತದೆ ಎಂಬುದು ಕವಿಯ ಆಶಯವಾಗಿದೆ.

ಕತ್ತಲೆಯಿಂದಾ ಜ್ಯೋತಿಯ ಬದಿಗೆ
ಅಶ್ರದ್ಧೆಯಿಂದಾ ಶ್ರದ್ಧಾನದಿಗೆ
ಅನೈಕ್ಯದಿಂದಾ ಐಕ್ಯದ ತುದಿಗೆ
ನಿಲ್ಲಿಸೌ ಶ್ರೀ ಮಾತೇ
ನಿಲಿಸೌ ಶ್ರೀ ಮಾತೇ. [೧೫]

ಕೋರುವಿಕೆ, ಬೇಡುವಿಕೆ, ತೋರುವಿಕೆ, ಹೇಳುವಿಕೆ, ಘೋಷಣೆಗಳು ಅಭಿವ್ಯಕ್ತಿಯ ವಿಧಾನಗಳು. ಈ ಬಗೆಗಳು ಈ ಪದ್ಯಗಳಲ್ಲಿವೆ. ನಿರ್ದಿಷ್ಟವಾಗಿ ಈ ಪದ್ಯದಲ್ಲಿ ಕೋರುವಿಕೆ ಇದೆ. ಇಂತಹ ಕೋರುವಿಕೆ ಅಗತ್ಯದ ಅನಿವಾರ್ಯತೆ ಇದ್ದಾಗ ಬರುತ್ತದೆ. 'ಅವಶ್ಯಕತೆ ಶೋಧನೆಯ ತಾಯಿ'ಯಾಗಿ ಕಾರ್ಯ ನಿರ್ವಹಿಸುತ್ತದೆ.

ಬದುಕಿನ ಏರಿಳಿತದೊಂದಿಗೆ ಬೇಂದ್ರೆ ಸ್ಪಂದಿಸಿದ್ದು ವಿಶೇಷವಾಗಿದೆ. ಬಡತನ ಅವರ ಚಿಂತನೆಗೆ ಪುಷ್ಟಿ ನೀಡಿದೆ. ಜೀವನದ ಸವಾಲುಗಳಿಗೆ ಪ್ರೇರಣೆ ಒದಗಿಸಿದೆ. "ಬೇಂದ್ರೆಯವರ ಕಾವ್ಯ ಸೃಷ್ಟಿ ಅನೇಕ ದೃಷ್ಟಿಯಿಂದ ಮಹತ್ವದ್ದಾಗಿರುವಂತಹದು. ಬೇಂದ್ರೆಯವರ ಕಾವ್ಯ ಒಂದರ್ಥದಲ್ಲಿ ಕನ್ನಡ ಕಾವ್ಯದ ಭಾವಗೀತದ ಸಮೃದ್ಧ ಸ್ಥಿತಿಯನ್ನು ನಿರ್ದೇಶಿಸಿರುತ್ತದೆ. ಭಾವಗೀತದ ಸಾಧ್ಯತೆಗಳನ್ನು ವಿಸ್ತರಿಸುವುದರೊಂದಿಗೆ ಸಾರ್ವಕಾಲಿಕ ಸಮಸ್ಯೆಗಳ ಕುರಿತು ಚಿಂತಿಸುವ ವಿಧಾನವೂ ಬೇಂದ್ರೆ ಕಾವ್ಯದ ವೈಶಿಷ್ಟ್ಯ

ಮನಸ್ಸಿಗೆ ಹೊಳೆದದ್ದನ್ನು, ಅದರ ಥಳಕನ್ನು ಇದ್ದಕ್ಕಿದ್ದಂತೆ ಕಾವ್ಯದಲ್ಲಿ ಹಿಡಿದಿಟ್ಟು ಜಿಜ್ಞಾಸೆಯನ್ನು ಕೆರಳಿಸುವ ಗುಣ ಇಂಥಾ ಕಾವ್ಯದ್ದು. . . .”[೧೬] ಬೇಂದ್ರೆ ಇಂತಹ ಕಾವ್ಯ ಕಟ್ಟುವುದರಲ್ಲಿ ಸಿದ್ಧಹಸ್ತರು ಎಂಬುದಕ್ಕೆ ಅವರ ಕವಿತೆಗಳೇ ನಿದರ್ಶನ.

“. . . . .ಬೇಂದ್ರೆಯವರಿಗೆ ಅನುಭವದ ತೀವ್ರತೆಗೆ ಸಮಾನವಾಗಿ ನಿಶಿತವಾದ ವಿಚಾರಶಕ್ತಿ ಇದೆ. ಇವರು ತಮ್ಮ ಅನುಭವವನ್ನು, ಇತರರ ಅನುಭವವನ್ನು ಎಳೆಎಳೆಯಾಗಿ ಬಿಡಿಸಬಲ್ಲರು, ತೋರಿಸಬಲ್ಲರು. ನಿಶಿತವಾಗಿರುವ ಈ ವಿಚಾರದ ಕ್ಷೇತ್ರವೂ ವಿಸ್ತಾರವಾಗಿದೆ. ಎಷ್ಟು ಅನುಭವಿಗಳೋ ಅಷ್ಟು ವಿಚಾರಿಗಳೂ ಆಗಿರುವುದರಿಂದ ಇವರ ಕೃತಿಗಳಲ್ಲಿ ರಾಗದ ಭಾವದ ಬದಿಗೆ ಬುದ್ಧಿಯ ಭಾಗ ಸಮ ಸಮವಾಗಿ ನಡೆಯುತ್ತದೆ. ಎಲ್ಲಿಯೇ ಆಗಲಿ ಕವಿತತ್ವವನ್ನು ಬಿಟ್ಟು ಮಾತನಾಡಿದನೋ ಎಂದು ಶಂಕೆ ಬರುವುದಿಲ್ಲ.”[೧೭] ಇಂತಹ ಮೋಡಿಯ ಗುಣ ಇವರ ಬರವಣಿಗೆಯಲ್ಲಿ ಬೆರೆತು ಹೋಗಿದೆ. ಇದು ಇವರ ಯಶಸ್ಸಿನ ಅಂಶಗಳಲ್ಲಿ ಒಂದು.

ಆಧುನಿಕ ಕನ್ನಡದ ಮೊಟ್ಟ ಮೊದಲ ಪ್ರಮುಖ ಅಬ್ರಾಹ್ಮಣ ಬರಹಗಾರ ಕುವೆಂಪು. ಸಾಂಸ್ಕೃತಿಕ ಸಾಧನೆಯು ಆರ್ಥಿಕ ಸ್ಥಿತಿಗತಿಗಳ ಮೇಲೆ ಅವಲಂಬಿತವಾಗಿದ್ದ ಕಾಲದಲ್ಲಿ, ಶೂದ್ರನಾಗಿ ಹುಟ್ಟಿ, ಕಾವ್ಯ ಕ್ಷೇತ್ರದಲ್ಲಿ ಯಶಸ್ಸು ಪಡೆದದ್ದನ್ನು ಎಲ್ಲರೂ ಮೆಚ್ಚುವ ಸಂಗತಿಯಾಗಿದೆ. "ಕುವೆಂಪು ಕನ್ನಡ ಸಾಹಿತ್ಯದಲ್ಲಿ ಪ್ರಮುಖ ಎನಿಸಿಕೊಂಡ ಮೊದಲ ಶೂದ್ರ, ಭಾರತೀಯ ಸಂಪ್ರದಾಯ ಆವರಣದಲ್ಲಿ ಶೂದ್ರನಿಗೆ ಅಕ್ಷರ ಜ್ಞಾನದ ಅಧಿಕಾರವೂ ಇರಲಿಲ್ಲ; ಗ್ರಂಥಾಧ್ಯಾಯನ ಅಧಿಕಾರವೂ ಇರಲಿಲ್ಲ. ಅಂಥಾ ಸನ್ನಿವೇಶದಲ್ಲಿ ಶೂದ್ರನಿಗೆ ಬರೆಯುವುದೇ ಪ್ರತಿಭಟನೆ. ಅದೇ ಸಂಪ್ರದಾಯ ಮತ್ತು ಪರಂಪರೆಯ ವಿರುದ್ಧ ಮೊದಲ ಕ್ರಾಂತಿ ಕಹಳೆ"[೧೮] – ಎಂಬ ಪೂರ್ಣಚಂದ್ರ ತೇಜಸ್ವಿಯವರ ಮಾತುಗಳು ಕುವೆಂಪು ಅವರ ವ್ಯಕ್ತಿತ್ವವನ್ನು ಬಿಂಬಿಸುವ ಮಾತುಗಳಾಗಿವೆ.

ನವೋದಯ ಸಂಪ್ರದಾಯದ ಪ್ರಮುಖರಲ್ಲಿ ಒಬ್ಬರಾದ ಕುವೆಂಪು ಪಶ್ಚಿಮದ ರೊಮಾಂಟಿಕ್ ಕವಿಗಳಿಂದ ಸ್ವಲ್ಪಮಟ್ಟಿಗೆ ಪ್ರಭಾವಿತರಾಗಿದ್ದಾರೆ. ಆಂಗ್ಲ ಕವಿ ವರ್ಡ್ಸ್‌ವರ್ತ್‌ನಂತೆ ಪ್ರಕೃತಿಯ ಆರಾಧಕರು. ಇವರ ಕವಿತೆಗಳಲ್ಲಿ ನಿಸರ್ಗ ಅಥವಾ ಪ್ರಕೃತಿಪ್ರೇಮ, ನಾಡು ಮತ್ತು ದೇಶಾಭಿಮಾನ ಬಿಂಬಿಸುವ ಕಡೆಗಳಲ್ಲಿ ಮಾತೃತ್ವದ ಸ್ವರೂಪ ಗೋಚರಿಸುತ್ತದೆ.

ಚೀನಾದೊಂದಿಗೆ ನಡೆದ ಭಾರತ ಸಮರದಲ್ಲಿ ವೀರಾವೇಶದಿಂದ ಹೋರಾಡಿ ಮಡಿದ ಭಾರತದ ಯೋಧನ ಬಗ್ಗೆ ಕವಿ ಅಭಿಮಾನ ತಾಳಿ ತಾಯಿ ಭಾರತಿಯಿಂದ ಹುತಾತ್ಮನಿಗೆ ಆರತಿ ಬೆಳಗಿಸಿ ಧನ್ಯರಾಗಿದ್ದಾರೆ. ಯಾವ ತಾಯಿಗೆ ಆಗಲಿ ಮಗನ ಪರಾಕ್ರಮ ಅಭಿಮಾನದ ಸಂಗತಿ. ಆತ ಹುತಾತ್ಮನಾದಾಗ ದುಃಖದಲ್ಲೂ ಎದೆ ತುಂಬಿ ಬರುವುದು ಸಹಜ.

ಅವನಿಗೆತ್ತು ಆರತಿ
ಓ ದೇವಿ ಭಾರತಿ;
. . . .
ನಿಮಗೆ ಇದೋ ನನ್ನ ಆಜ್ಞೆ;

ಹಿಂದೆ ಸರಿದು ನಡೆಯಿರೊಡನೆ;
ಮೂಲದಳವ ಕೂಡಿಕೊಳ್ಳಿ;
ನನ್ನನ್ನಿಲ್ಲೆ ತ್ಯಜಿಸಿ
ತಾಯ್ಗೆ ಬೇಕು ನಿಮ್ಮ ಸೇವೆ
ಬದುಕಿ ರಿಪುವ ವಧಿಸಿರಿ.[೧೯]

ರಣರಂಗದಿ ಗುಂಡೇಟಿಗೆ ಒಳಗಾಗಿದ್ದ ದೇಶಾಭಿಮಾನಿ ತನ್ನ ಮಿತ್ರರನ್ನು ಹುರಿದುಂಬಿಸುತ್ತಾನೆ. ಅಂತಹವನಿಗೆ ಕವಿ, ಭಾರತಿಯಿಂದ ಆರತಿ ಎತ್ತಿಸಿರುವುದು ಅಭಿಮಾನವೆನಿಸಿದೆ. ಇಂತಹ ದೇಶಾಭಿಮಾನಿಗೆ ಕವಿ ತಲೆಬಾಗಿರುವುದು ಔಚಿತ್ಯಪೂರ್ಣವಾಗಿದೆ. ಜಾತಿ ಮತ ಪಂಥಗಳ ಎಲ್ಲೆ ಕಟ್ಟುಗಳನ್ನು ಮೀರಿ ರಾಷ್ಟ್ರೀಯ ಧರ್ಮವನ್ನಷ್ಟೇ ಉಸಿರಾಗಿಸಿಕೊಂಡು ಶತ್ರುಗಳನ್ನು ಮೆಟ್ಟುವುದರ ಮೂಲಕ ಸ್ವಾಭಿಮಾನ ಮೆರೆಯಬೇಕು. ಅಂತಹ ಸ್ವಾಭಿಮಾನ ಮೆರೆದ ವೀರನಿಗೆ ಆರತಿ ಎತ್ತುವ ಸಲುವಾಗಿಯಾದರೂ ನಾವು ಒಂದಾಗಬೇಕೆಂಬ ತುಡಿತ ಕವಿಯದಾಗಿದೆ.

ಪರಾಧೀನತೆಯ ಬಂಧನದಲ್ಲಿದ್ದ 'ಭರತಮಾತೆಗೆ' ಮಗನಾದವನು ನೊಂದು, ಕವಿಯೂ ಕಲ್ಕಿಯಾಗುವನೆಂದು ಕವಿ ಹೇಳುವಲ್ಲಿ ಸ್ವಾತಂತ್ರ್ಯದ ಹಂಬಲವಿದೆ.

ನಿನ್ನ ಸುಲಿಗೆಯ ಕತೆಯನೋದುತಿರೆಯಿರೆ ಕಣ್ಣು
ಹನಿತುಂಬಿ ಮಂಜಾಗುವುದು; ದೈನ್ಯದೊಲು ನೊಂದು
. . . . ವಿಲಯ ಕಾಲದಲಿ
ದಳ್ಳುರಿ ನಗೆಯುವಂತೆ ಹೊಟ್ಟೆಯ ಸಿಡಿಲ್ ಸಿಟ್ಟು
ಬೆಂಕಿವೆಟ್ಟಾಗುತ್ತೆ ಹಗೆಯ ನುಣ್ಣನೆ ಸುಟ್ಟು
ನೊಣೆಯಲುರಿ ಕಾರುವುದು! ಮನ್ನಿಸಮ್ಮ; ಸಿಲ್ಕಿ
ಮಮತೆಯಲಿ ಒಮ್ಮೊಮ್ಮೆ ಕವಿಯಾಗುವನು ಕಲ್ಕಿ! [೨೦]

ಇಲ್ಲಿಯ ಕಲ್ಕಿ ಪುರಾಣ ಪ್ರಜ್ಞೆಯಿಂದ ಅವತರಿಸಿ ಬಂದವನಲ್ಲ. ಜನಸಾಮಾನ್ಯರ ಮಧ್ಯದಿಂದ ಹೋರಾಟಕ್ಕಾಗಿ ಮೂಡಿ ಬಂದವನು. ಇದು ಯಾವುದೇ ಒಬ್ಬ ವ್ಯಕ್ತಿಯನ್ನು ಸೂಚಿಸದೆ ಸಮಷ್ಟಿಯ ನೆಲೆಯನ್ನೇ ಧ್ವನಿಸುತ್ತದೆ.

ಬ್ರಿಟಿಷರ ಸುಲಿಗೆಯ ವಿರುದ್ಧ ಕವಿಯು ಕಲ್ಕಿ ಆಗುವನು, ಆಗಬೇಕು ಎಂಬ ಆಶಯ ಕೂಡ ಇದೆ. ಬ್ರಿಟಿಷ್ ವಿರೋಧಿ ಹೋರಾಟದ ಚಾರಿತ್ರಿಕ ಅನಿವಾರ್ಯತೆ ಮತ್ತು ಕವಿಗಳೂ ಹೋರಾಟ ಗಾರರಾಗಬೇಕಿದ್ದ ಐತಿಹಾಸಿಕ ಒತ್ತಡ. ಹಾಗೆಯೇ ಇಂದು ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಕೂಡ ಕವಿಗಳು ಕಲ್ಕಿಗಳಾಗಬೇಕಾಗಿರುವ ಮತ್ತೊಂದು ಚಾರಿತ್ರಿಕ ಒತ್ತಡ ನಮ್ಮ ಮುಂದಿದೆ

ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಹೋರಾಟಕ್ಕೆ ಪ್ರೇರಣೆಯಂತೆ, ಶಕ್ತಿಯಂತೆ ಸಿಡಿದ ಕವಿಯ ದೇಶಾಭಿಮಾನದ ನುಡಿಗಿಚ್ಚು, ಬ್ರಿಟಿಷ್ ಸಾಮ್ರಾಜ್ಯ ನುಚ್ಚುನೂರಾಗಿಸಿ, ಭಾರತಾಂಬೆಯ ಬಂಧ ಮುಕ್ತಗೊಳಿಸಿ ಜನ್ಮಧಾತೆಯನ್ನು ರಕ್ಷಿಸಬೇಕೆಂಬ ಕ್ರಾಂತಿಕಾರಿ ಕರೆಯೇ ಈ ಕವಿತೆಯ ಆಶಯ.

ನಡೆ ಮುಂದೆ ನಡೆ ಮುಂದೆ,
ನುಗ್ಗಿ ನಡೆ ಮುಂದೆ.
ಭಾರತಾಂಬೆಯ ಸುತರೆ
ಸೋದರರು ಎಂದು
ಭಾರತಾಂಬೆಯ ಮುಕ್ತಿ
ಮುಕ್ತಿ ನನಗೆಂದು
. . . .
ನುಗ್ಗಿ ಮರಣಕೆ, ವೀರ
ಸಗ್ಗದಾನೆಲೆಗೆ! [೨೧]

ಭಾರತಾಂಬೆಯ ಸುತರೆ ಸೋದರರು ಎಂಬ ಭಾವ ಶಿಥಿಲವಾಗಿದ್ದರಿಂದಲೇ ಭಾರತ ಪರಕೀಯರ ಕೈವಶವಾಗಲು ಕಾರಣವಾಯಿತು. ಇನ್ನಾದರೂ ಅಖಂಡ ಭಾರತದ ಬಗ್ಗೆ ಪ್ರೀತಿ ಗೌರವ ಮೂಡಲು ನಮ್ಮಲ್ಲಿನ ಪ್ರಾಂತೀಯ ವಾದ, ಭಾಷಿಕ ವಾದ, ಜಾತಿಯ ವಾದಗಳು ದೂರಾಗಬೇಕಾಗಿದೆ. ಜೊತೆಗೆ ಹೋರಾಟದ ಕಿಚ್ಚು ರೂಢಿಸಿಕೊಳ್ಳಬೇಕಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಿರುವುದರಿಂದ ಕವಿಯ ಆವೇಶ, ಆಕ್ರೋಶ ಭೋರ್ಗರೆದು ಹರಿದಿದೆ. ಜೊತೆಗೆ ಜಾತಿ, ಮತ ಮುಕ್ತ ಸ್ವಾತಂತ್ರ್ಯ ಭಾರತದ ಕಲ್ಪನೆ ಇಲ್ಲಿನ ಆಶಯವಾಗಿದೆ.

ಭಾರತ ಕೇವಲ ಬ್ರಿಟಿಷರಿಂದ ಬಿಡುಗಡೆಯಾದರೂ, ಅನೇಕ ಸಮಸ್ಯೆ ಸಂಕಷ್ಟಗಳಿಂದ ಬಿಡುಗಡೆ ಕಾಣದ ದೇಶವಾಗಿರುವಾಗ ಭಾರತ ಮಾತೆಯ ಮಾತುಗಳಲ್ಲಿ ಧ್ವನಿಪೂರ್ಣವಾಗಿ ಬಂದಿವೆ. ಪರಕೀಯರು ನಮ್ಮಾಡಳಿತದಿಂದ ಮುಕ್ತಿ ದೊರಕಿದೆ ಎಂದು ಹೇಳುತ್ತಿರುವಾಗ ವ್ಯಂಗ್ಯ, ನೋವಿನೊಂದಿಗೆ ಹೇಳುವ ಭಾರತ ಮಾತೆಯ ನುಡಿ:

ಅಯ್ಯೋ ನಾನೆ ತಿಳಿಯದಂತೆ,
ನನಗೆ ಮುಕ್ತಿ ದೊರಕಿತಂತೆ!
ಎಂಥ ಮುಕ್ತಿಯೋ?– ಅದು
ಎಂಥ ಮುಕ್ತಿಯೋ?. . . .

ನನ್ನನಾಳ್ವನೊಡ್ಡಿದ ಬಲೆ! ಇದು
ಬರಿ ಕುಯುಕ್ತಿಯೋ. [೨೨]

ಆಡಳಿತ ನೀತಿಯಲ್ಲಿ ಕೈಗಳು ಬದಲಾದರೂ, ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆಯನ್ನು ಕಾಣದಾದಾಗ ಕವಿ ಮನ ಕಸಿವಿಸಿಗೊಂಡು ಕನಲಿದೆ. ಇದು ಜನ ನೆಲೆ ಮತ್ತು ಪ್ರಭುತ್ವದ ನೆಲೆಯಲ್ಲಿ ಚರ್ಚೆಗೊಳಗಾಗುವ ವಿಷಯವಾಗಿದೆ.

ಮುಕ್ತಿಯ ಬಗ್ಗೆ ಸಂಶಯವಿದೆ. ಈ ಪದ್ಯವನ್ನು ಭಾರತ ಮಾತೆಯೇ ಹೇಳಿರುವುದಾಗಿದೆ. ಕವಿ ಮಾತೆಯನ್ನು ಕುರಿತು ಹೇಳುತ್ತಿಲ್ಲ. ಮಾತೆಯಿಂದಲೆ ಅಥವಾ ಮಾತೆಯಾಗಿ ಹೇಳುತ್ತಿದ್ದಾರೆ. ಇದರ ಜೊತೆಗೆ ಕಾಣುವುದೇನೆಂದರೆ ತಂದೆಯಾಗಿ ಹೇಳುತ್ತಿಲ್ಲ. ಪ್ರಾಯಶಃ ಮಾತೆಗೇ ಈ ಸಂಶಯ ಮುಖ್ಯವಾಗಿರಬಹುದೆ? ಮಾತೃ ಹೃದಯಕ್ಕೆ ಈ ಪ್ರಶ್ನೆ ಮುಖ್ಯವಾಗಿರಬಹುದೆ? ಎಂಬ ಪ್ರಶ್ನೆಗಳಿಗೆ ಅವಕಾಶವಾಗಿದೆ.

ಮೌಢ್ಯತೆಯ ಮಂಪರಲ್ಲಿ ಬಿದ್ದು, ಕಂದಾಚಾರದ ಕಗ್ಗಾಡಿನಲ್ಲೆ ನಡೆದು ದೇಶ ಮರೆತು ದೇವರುಗಳಿಗೆ ಆದ್ಯತೆ ನೀಡಿದ್ದ ಸಂದರ್ಭದಲ್ಲಿ, ಭಾರತೀಯರಲ್ಲಿ ಮೂಡಿಸಿದ ದೇಶಾಭಿಮಾನದ ಕಿಚ್ಚು 'ಇಂದಿನ ದೇವರು' ಕವಿತೆಯಲ್ಲಿದೆ.

ನೂರು ದೇವರುಗಳ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ!
. . . .
ನಾವೆ ದೇವತೆಗಳ್ಳೆ! ಭಾರತವೆ ಸ್ವರ್ಗವೈ!
ಭಾರತಾಂಬೆಯೆ ನಮಗೆ ದೇವಿಯೆ, ಜನನಿ. [೨೩]

ಮತ ಧರ್ಮಗಳ ಪ್ರತೀಕವಾಗಿರುವ ದೇವರುಗಳು ಮನುಷ್ಯರನ್ನು ಪ್ರತ್ಯೇಕತೆಗೆ ಒಳಗು ಮಾಡುತ್ತವೆ. ಆದರೆ ರಾಷ್ಟ್ರೀಯತೆ ಈ ಧರ್ಮ ದೇವರುಗಳ ಸೋಂಕಿನಿಂದ ಮುಕ್ತವಾಗಿ ಒಗ್ಗೂಡಿಸುವ ಕೆಲಸವನ್ನು ಮಾಡುತ್ತವೆ. ದೇವರೆಂದರೆ ಗುಡಿ ಕಟ್ಟುವ ಗುಂಪುಗಾರಿಕೆ ಮತ್ತು ಹಲವು ಕಲಹಗಳಿಗೆ ಕಾರಣವಾಗಬಹುದು. ಆದರೆ ಭಾರತೀಯತೆ ನಮ್ಮೊಳಗೆ ಇರುವಂತಹ ರಾಷ್ಟ್ರೀಯ ಚಿಂತನೆಯ ಸ್ವರೂಪದ್ದಾಗಿದ್ದು ನಮನ್ನೆಲ್ಲ ಏಕಸೂತ್ರದಲ್ಲಿ ಒಗ್ಗೂಡಿಸುತ್ತದೆ.

ದೇವರುಗಳ ಹೆಸರಿನಲ್ಲಿ ನಡೆಯಬಾರದ್ದೆಲ್ಲ ನಡೆದುಹೋಗಿ, ಹೋಗುತ್ತ ಇರುವುದನ್ನು ಕಂಡ ಕವಿ ಮನ ರೋಸಿದೆ. ಇದಕ್ಕೆ ಪರ್ಯಾಯವಾಗಿ ಭಾರತಾಂಬೆಯನ್ನೇ ದೈವದ ನೆಲೆಗೆ ಕೊಂಡೊಯ್ಯುವುದರ ಮೂಲಕ ಹಳೆಯದನ್ನು ನಿರಾಕರಿಸಿ ಹೊಸದನ್ನು ಸ್ವೀಕರಿಸುವ ಮನೋಭಾವವಿದೆ. ದೇವರು ಪ್ರತ್ಯೇಕತೆಗೆ ನೆರವಾದರೆ; ರಾಷ್ಟ್ರೀಯತೆ, ಒಗ್ಗೂಡಿಸುವ ವರವಾಗುತ್ತದೆ.

"'ಕಲಾಸುಂದರಿ' ಸರಸಿಯಾದರೂ ಮಹಾ ತಪಸ್ವಿನಿ. ಆಕೆಯ ಬಹಿರಂಗದಲ್ಲಿ ತೇಜಸ್ಸಿರುವಂತೆಯೇ ಅಂತರಂಗದಲ್ಲಿ ತಪಸ್ಸಿದೆ; ಆಕೆ ಎಷ್ಟರಮಟ್ಟಿಗೆ ಭೋಗಿನಿಯೋ ಅದಕ್ಕಿಂತಲೂ ಹೆಚ್ಚಾಗಿ ಯೋಗಿನಿ. ಮೇಲೆ ಮೇಲೆ ನೋಡುವ ತೇಲು ನೋಟದ ಮಂದಿಗೆ ಆಕೆಯ ಸೌಂದರ್ಯ ಮಾತ್ರ ಕಾಣುತ್ತದೆ; ಆಕೆಯಲ್ಲಿ ಅಗಾಧ ಪರಿಚಯವಿರುವ ರಸಋಷಿಗಳಿಗೆ ಸೌಂದರ್ಯದ ಜೊತೆಗೆ ಅದಕ್ಕಿಂತಲೂ ಶಾಶ್ವತವಾದ ಮತ್ತು ಅದನ್ನೇ ಶಾಶ್ವತಗೊಳಿಸುವ ಭವ್ಯವಾದ ಓಜಸ್ಸೂ ತೋರುತ್ತದೆ. . . ಆಕೆಯ ಬುದ್ಧಿಭಾವಗಳ ವಿಧ್ಯುದಾಲಿಂಗನದಿಂದ ಆವಿರ್ಭವಿಸಿರುವ ಪ್ರತಿಭಾ ರೂಪಸಿ. . . . . ನಿಜವಾದ ಕವಿ 'ಜನಪ್ರಿಯತೆ' ಎಂಬ ಭೂತಕ್ಕೆ ಬೆದರದೆ, ಅದನ್ನು ತೃಪ್ತಿಪಡಿಸುವ ಚಪಲಕ್ಕೆ ಬೀಳದೆ ತನ್ನ ಉದಾತ್ತ ದರ್ಶನಕ್ಕೆ ಮಾತ್ರ ವಿಧೇಯನಾಗಿ ಕಾವ್ಯ ರಚನೆ ಮಾಡುವುದು ಆತನ ಕರ್ತವ್ಯ ಮತ್ತು ಆತನ ತಾಯ್ನುಡಿ, ತಾಯ್ನಾಡುಗಳ ಶ್ರೇಯಸು"[೨೪] ಎಂದು ಕಲಾಸುಂದರಿ ಕೃತಿಯ ಮುನ್ನುಡಿಯಲ್ಲಿ ಕವಿ ವಿಷದಪಡಿಸಿದ್ದಾರೆ.

ದಿನಕರ ದೇಸಾಯಿ ತಮ್ಮ 'ವೀರ ಒಕ್ಕಲಿಗರು' ಎಂಬ ಕವನದಲ್ಲಿ ಬಾರ್ದೋಲಿ ಸತ್ಯಾಗ್ರಹದ ಸಂದರ್ಭದಲ್ಲಿ ಕಂದಾಯವನ್ನು ಕೊಡದೆ ಬೆಳೆಗಳನ್ನು ಸುಟ್ಟು ಬಡೋದ ಸಂಸ್ಥಾನ ಸೇರಿದ ಒಕ್ಕಲಿಗರೇ ಹಾಡಿದ ಹಾಡು ಎಂಬ ರೀತಿಯಲ್ಲಿ ಕವಿ ರಚಿಸಿದ್ದಾರೆ.

ಬಂಧನದೊಳಗಿನ ಬಾಳುವೆಯಿಂದ
ಬೆಂದು ಹೋಗುವುದೆ ಪರಮಾನಂದ
ಮಾತೃ ಸೇವೆಯೆ ಮಗನಿಗೆ ಚಂದ
ಸ್ವರಾಜ್ಯ ತಾಯಿ ಭಾರತ ಭೂಮಿ [೨೫]

ಬಂಧನಕ್ಕಿಂತ ಬೆಂದು ಹೋಗುವುದರಲ್ಲಿಯೇ ವೀರ ಒಕ್ಕಲಿಗರಿಗೆ ಸುಖವಿದೆ. ಸಂಕಟದಲ್ಲಿಯೇ ಸುಖವುಣ್ಣುವ ಹಂಬಲ ಅವರದು. ಬ್ರಿಟಿಷರ ಗುಂಡಿಗೆ ಗುಂಡಿಗೆಯನೊಡ್ಡುವ ನಿರ್ಧಾರಕ್ಕೆ ಅವರು ಸಿದ್ಧರಾಗಿದ್ದಾರೆ. ಇಲ್ಲಿ ಸ್ವರಾಜ್ಯವನ್ನು ತಾಯಿಯಾಗಿ, ಮಕ್ಕಳೇ ಒಕ್ಕಲಿಗರೆಂದು ಕವಿ ಕಲ್ಪಿಸಿಕೊಂಡಿದ್ದಾರೆ. ಈ ಕವಿತೆಯಲ್ಲಿ ಗುಲಾಮಗಿರಿಗಿಂತಲೂ ಸ್ವಾಭಿಮಾನದ ಸಾವೇ ಶ್ರೇಷ್ಠವೆಂಬ ಕವಿಯ ಚಿಂತನೆ ವಿಶೇಷವಾಗಿ ಗಮನ ಸೆಳೆಯುತ್ತಿದೆ.

ವಿ.ಸೀ. ಶಿಸ್ತು, ಅಚ್ಚುಕಟ್ಟುತನವನ್ನು ಮೈಗೂಡಿಸಿಕೊಂಡು ಕನ್ನಡ ಸಾರಸ್ವತ ಲೋಕದಲ್ಲಿ ತನ್ನದೇ ಆದ ವ್ಯಕ್ತಿತ್ವದಿಂದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. "ವಿ.ಸೀ. ಬರವಣಿಗೆಯಲ್ಲಿ ಲಾಲಿತ್ಯವಿದೆ. ಕಾವೇರಿ ಹರಿದಂತೆ ಭಾವ ಸಂಚಾರವಿದೆ; ಸಾಹಿತ್ಯಶ್ರೀಯ ಪದವೈಭವವಿದೆ; ರಮ್ಯ ಕಾವ್ಯದ ಚೈತನ್ಯಶ್ರೀ ಇದೆ; ನಾದಮಯತೆ ಇದೆ; 'ಸ್ಪಾಂಜಾಪಾರಂ' ಬಹಳ ಬಹಳ ಮೋಹಕವಾಗಿದೆ; ತನಿಯಾದ ಬನಿಯಾದ ನುಡಿಕುಂಚ ಕಲಾವಂತಿಕೆ ಬಿಂಬಿಸುತ್ತದೆ."[೨೬] ಎಂಬ ದೊಡ್ಡರಂಗೇ ಗೌಡರ ವಿಮರ್ಶಾದೃಷ್ಟಿಗೆ ಒಳಗಾಗಿರುವ ವಿ.ಸೀ.ಯವರ 'ಭಾರತ ಜಗದಂಬ' ಕವಿತೆ ದೇಶಭಕ್ತಿ ಬಿಂಬಿಸುವುದಾಗಿದೆ.

ಜಯಜಯ ಭಾರತ ಜಗದಂಬಾ
ನಮಿಪೆವು ಕುವರರು ಹರಸಮ್ಮಾ
ಹರಸುತೆ ರಂಗಕೆ ಕಳುಹಮ್ಮ
ಧರೆಯೇ ನೋಡಲಿ ಅಚ್ಚರಿಯಾ

. . . .

ಧ್ವಜವ ನಡುವರತ್ತ ನೋಡಮ್ಮ
ಧ್ವಿಜರ ಮಂತ್ರದ ಮೇಲೇರಿಸುತೆ
ಧ್ವಜದ ಗೌರವ ಚಿರ ಕಾಯಲಿಕ್ಕೆ
ನಿಜ ದೀಕ್ಷಿತರಾವು ನಿಂದಿಹೆವು. [೨೭]

ಇದು ವೈದಿಕಪರಂಪರೆಯ ಚಿಂತನೆಯಾಗಿದೆ. ಬಹುಮುಖಿ ಚಿಂತನೆಯಾಗಿಲ್ಲದೆ ಏಕಮುಖಿಯಾಗಿದೆ. ಪ್ರಸ್ತುತದೊಂದಿಗೆ ಮುಖಾ ಮುಖಿಯಾಗುವುದಿಲ್ಲ. ಸಾಂಪ್ರದಾಯಿಕ ಚೌಕಟ್ಟಿನಲ್ಲಿ, ಸಂಗೀತ ಧಾಟಿಯಲ್ಲಿ ರಚಿಸಿರುವ ವಿ.ಸೀ.ಯವರ ಈ ಕವಿತೆ ನಾಡಿನ ಇತಿಹಾಸದ ವೈವಿಧ್ಯತೆಯನ್ನು ಅದರ ಹಿರಿಮೆ ಗರಿಮೆಗಳನ್ನು ವರ್ಣಿಸುತ್ತದೆ. ಭವ್ಯ ಪರಂಪರೆಯ ಒಡತಿಯಾಗಿರುವ ಭಾರತಾಂಬೆ ನಮ್ಮನ್ನು ಕಾಪಾಡಿ ಹರಸು ಎಂಬ ಪ್ರಾರ್ಥನೆಯಿದೆ. ಇಂತಹ ಪ್ರಾರ್ಥನೆ ಬಹುತೇಕ ನವೋದಯದವರಲ್ಲಿ ಹೇರಳವಾಗಿ ಕಂಡು ಬರುತ್ತದೆ.

ಮತ್ತೊಂದು ಕವಿತೆ 'ದುಂದುಭಿ'ಯಲ್ಲಿ ಜಡ ನಿದ್ರೆಯಲ್ಲಿ ಮೈ ಮರೆತಿರುವ ನಿನ್ನ ಮಕ್ಕಳನ್ನು ಎಚ್ಚರಿಸು. ಎಲ್ಲರ ಧಮನಿಗಳಲ್ಲಿ ಕರ್ತವ್ಯ ಪ್ರಜ್ಞೆ ಜಾಗೃತವಾಗಿ ದಾಸ್ಯದಿಂದ ನೆಲ ಕಚ್ಚಿದ್ದ ರಾಷ್ಟ್ರದ ಉದ್ಧಾರಕ್ಕೆ ಶ್ರಮಿಸುವ ಶಕ್ತಿ ನೀಡೆಂದು ಕೇಳಿಕೊಳ್ಳುವ ಕವಿತೆಯಾದರೂ ಅದರ ಹಿಂದೆ ಕುಮತಿಗಳ, ಕುತಂತ್ರದವರ ಕಾರಾಸ್ಥಾನದಿಂದ ಕನ್ನಡಿಗರು ಸ್ವಾಭಿಮಾನ ಶೂನ್ಯರಾಗಿ ಮೈ ಮರೆತಿರುವುದನ್ನು ವಿವರಿಸಿದ್ದಾರೆ.

ಮೊಳಗು ಮೊಳಗು ದುಂದುಭಿಯ
ನಿದ್ರೆ ಸಾಕಿನ್ನೇಳಿರೆಂದು ಎಚ್ಚರಿಸು
. . . .
ಈ ನಾಡ ಜಸವಿನ್ನು ದಿನದಿನಕ್ಕೆ ಬೆಳೆವಂತ
ದಿನದಿನಕ್ಕೆ ಹೊಸ ಮೆರಗು ವಿಭವಗಳಲ್ಲಿ
ದಿನದಿನವೂ ಸಾಧನದಿ ಮಿಕ್ಕವರ ಮೇಲಾಗಿ
ಮೊದಲಿಗರು ನಾವಾಗಿ ನಿಲ್ಲುವಂತೆ [೨೮]

'ಹರಸು ತಾಯಿ' ಕವಿತೆಯೂ ಕೂಡ ಭಾರತಾಂಬೆಯನ್ನು ಕುರಿತದ್ದಾಗಿದೆ. 'ದುಂದುಭಿ'ಯಲ್ಲಿ ಇರುವ ಕವಿಯ ಹಂಬಲ ಇಲ್ಲಿಯೂ ಮುಂದುವರೆದಂತೆ ಇದೆ. ದುಂದುಭಿಯಲ್ಲಿ ದೇಶದ ಅವನತಿಗೆ ವ್ಯಥೆಗೊಂಡು ಸುಂದರ ಸಮೃದ್ಧ ರಾಷ್ಟ್ರ ಕಟ್ಟಲು ಮುಂದಾಗುವ ಕರೆ ಇದ್ದರೆ; ಹರಸು ತಾಯಿಯಲ್ಲಿ ಸ್ವಾತಂತ್ರ್ಯ ನಂತರದ ಭಾರತ ಜಗತ್ತಿನ ಇತರ ರಾಷ್ಟ್ರಗಳೊಂದಿಗೆ ತಲೆ ಎತ್ತಿ ಮೆರೆಯುವಂತಾಗಲು ಮಕ್ಕಳನ್ನು ಹರಸು ತಾಯಿ ಎಂದು ಪ್ರಾರ್ಥಿಸಿದ್ದಾರೆ.

ಕಣ್ತುಂಬ ನೋಡಮ್ಮ ಹರಸು ತಾಯಿ
ಭಾರತ ಭಾಗ್ಯೇಶ್ವರಿ ಹರಸು ತಾಯಿ
ಕೋಟಿ ಮುವತ್ತೈದು ಕೊರಲುಗಳ ತಾರಸರ
ಒಗ್ಗೊರಲ ಮೇಳದಲಿ ಮೊಳಗುತಿದೆ ಕೇಳಾ!
ಮೊಳಗುತಿದೆ ಪರ ಮಂತ್ರ ಕೊನೆಗೊಂಡಿತ್ತೆನ್ನುತ್ತೆ
ಸಕಲ ಸಾಧನವಾಯಿತು ಸ್ವಾಧೀನವೆನುತೆ.
. . . .
ಭಾರತ ಚಕ್ರೇಶ್ವರಿ
ಜೈ ಎಂಬ ಜಯಘೋಷ ಕೇಳಾ! [೨೯]

ಸ್ವಾತಂತ್ರ್ಯಾ ನಂತರದ ಸಂದರ್ಭದಲ್ಲಿ ಪಾರತಂತ್ರದಿಂದ ಬಿಡುಗಡೆಗೊಂಡ ಸಂತಸದ ಕ್ಷಣದಲ್ಲಿ ಕವಿಯ ಉದ್ಘೋಷ ಇದಾಗಿದೆ. ಸ್ವಾತಂತ್ರ್ಯವನ್ನು ಅಂದಿನ ಮುವತ್ತೈದು ಕೋಟಿ ಜನ ಬಯಸಿದ್ದು ಮಾತ್ರವಲ್ಲ ಅದಕ್ಕಾಗಿ ಅನೇಕ ಬಗೆಯ ತ್ಯಾಗ ಬಲಿದಾನದ ಹೋರಾಟ ಮಾಡಿದ್ದು ಈಗ ಇತಿಹಾಸ. ಇನ್ನಾದರೂ ಸ್ವಾಭಿಮಾನದ ಬದುಕಿಗೆ ತಾಯಿ ಭಾರತಾಂಬೆಯ ಶ್ರೀ ರಕ್ಷೆ ಬೇಕೆಂಬುದು ಕವಿಯ ದೃಢ ನಂಬಿಕೆ.

"ಇಳಾ ತಾಯಿಯ ಬಗೆಗೆ' – ಎಲ್ಲ ಮನೆಗಳೂ, ಎಲ್ಲ ಎಲ್ಲರ ಕಣ್ಣುಗಳೂ ನಿನ್ನಡಿಯೊಂದನೆ ದಾನಿಮವು. . . . . ರಂಗಿನ ಆರತಿ ಮೇಳದ ಗೀತದಿ ಗಾನದಿ

ನಿನ್ನೆಡೆಗೈದುವುವು' . . . . ಇದು ಕವಿಯ ಪೃಥ್ವಿ ಪ್ರೇಮ, ಅವನಿ ತಾಯಿ ಬಗೆಗಿನ ಶ್ರದ್ಧೆ, ನೆಲದಮ್ಮನ ಬಗೆಗಿನ ಅಪಾರ ಅಕ್ಕರೆ".[೩೦]

"'ಭಾರತ ಜಗದಂಬ,' 'ತಾಯಿದೇವಿ', 'ಹರಸುತಾಯಿ', 'ನಾಡತಾಯಿ', 'ಕನ್ನಡ ನಾಡು', 'ಭಾಗ್ಯ ತಾರೆ' ಮುಂತಾದ ಕವನಗಳಲ್ಲಿ ಕವಿ ದೇಶಮಾತೆಯ ಪೂರ್ವ ವೈಭವವನ್ನು, ಇಂದಿನ ಅವನತಿಯನ್ನು, ಮುಂದಿನ ಸ್ವಾತಂತ್ರ್ಯದ ಶುಭೋದಯವನ್ನು ಪರಿಪರಿಯಾಗಿ, ಬಿಡಿ ಬಿಡಿಯಾಗಿ ಬಣ್ಣಿಸಿದ್ದಾರೆ. ಬಗೆಬಗೆಯ ವಾದನ ಸಾಮಗ್ರಿಗಳೊಡನೆ ಸಾಮೂಹಿಕವಾಗಿ ತಾರಸ್ವರದಲ್ಲಿ ಈ ದೇಶ ಭಕ್ತಿಗೀತೆಗಳನ್ನು ಹಾಡುತ್ತಿದ್ದರೆ ಎಂತಹ ಹಂದೆಯೂ ಕಲಿಯಾಗುತ್ತಾನೆ; ಎಂತಹ ನಾಲಗೆ ಹೆಳವನೂ ಸತತವಾಗಿ ಜಯ ಘೋಷಗಳ ಸುರಿಮಳೆಯನ್ನು ಕರೆಯುತ್ತಾನೆ".[೩೧] ಎಂಬ ಅಭಿಪ್ರಾಯ ಆ ಕಾಲದ ಎಲ್ಲರ ಅಭಿಪ್ರಾಯವಾಗಿತ್ತು.

'ಪ್ರಾರ್ಥನೆ', 'ಹರಸು ತಾಯಿ' ಇವು ದೇಶಾಭಿಮಾನವನ್ನು ಉಕ್ಕಿಸುವ ನಾಡಗೀತೆಗಳು. ಸ್ವಾತಂತ್ರ್ಯ ಪೂರ್ವದ ನಮ್ಮ ನಾಡಿನ ಸ್ಥಿತಿಗತಿಯನ್ನು ಮನಗಂಡು ಬಿಡುಗಡೆಯ ಭರವಸೆಯನ್ನು ಹುಟ್ಟಿಸುವ ಸ್ಫೂರ್ತಿದಾಯಕ ಗೀತೆಗಳು.

ಕಣ್ತುಂಬ ನೋಡೆಮ್ಮ ಹರಸು ತಾಯಿ,
– ಭಾರತ ಭಾಗೇಶ್ವರೀ, ಹರಸು ತಾಯಿ.

ಸಾಗರದ ಆಳಕ್ಕೆ ಅಡಿಯೂರಿ ಮೇಲೆದ್ದೂ
ಧವಳಗಿರಿಗೇರಿರುವ ಪರಿಯ ನೋಡಾ!
ನಿನ್ನ ಕೀರುತಿ ಕಳಸ ಗೌರಿಶಂಕರದೆದುರು
ಮೇರು ಗಿರಿಯಲಿ ನಟ್ಟ ವಿಭವ ನೋಡಾ! [೩೨]

ಸ್ವಾತಂತ್ರ್ಯ ಸಂಗ್ರಾಮಕ್ಕೆ ಕನ್ಯಾಕುಮಾರಿಯಿಂದ ಗೌರೀಶಂಕರದವರೆಗೆ ಈ ನಾಡಿನ ಜನವೆಲ್ಲ ಗಂಡು, ಹೆಣ್ಣು, ಕುಲ, ಮತ ಎನ್ನದೆ ಸಿದ್ಧರಾಗಿ ಧ್ವಜವೆತ್ತಿ ನಡೆದಾಗ ಆ ದಿವ್ಯ ಸ್ಫೂರ್ತಿಯಲ್ಲಿ ಭಾರತ ಭಾಗೇಶ್ವರಿಯ ದರ್ಶನವನ್ನು ಮಾಡಿಸುತ್ತದೆ ಈ ಕವಿತೆ.

ವಿ.ಸೀ.ಯವರ 'ಹೊಸ ವರ್ಷ' ಕವಿತೆ ಭಾರತವು ಬ್ರಿಟೀಷ್ ದಾಸ್ಯದಿಂದ ಮುಕ್ತಗೊಂಡ ಸಂತೋಷದ ಭರದಲ್ಲಿ ಹುಟ್ಟಿದ ಕವಿತೆಯಾಗಿದೆ. ಶ್ರೀಮಂತ ಪರಂಪರೆ, ಇತಿಹಾಸದಿಂದ ಶೋಭಿಸುವ; ವೈವಿಧ್ಯಮಯವೂ, ಸಂಪದ್ಭರಿತವೂ ಆದ ನಿಸರ್ಗದಿಂದ ಮೆರೆವ; ಹತ್ತಾರು ಧರ್ಮಗಳಿಂದ ಕೂಡಿರುವ ಈ ದೇಶವನ್ನು ಪರಕೀಯರಿಂದ ಬಿಡಿಸಿದ್ದು ಮಾತ್ರವಲ್ಲ ಸುಂದರವೂ, ಸಮೃದ್ಧವೂ ಆದ ರಾಷ್ಟ್ರ ಕಟ್ಟಿ ಸ್ವರ್ಗದ ತಾಣವಾಗಿಸಬೇಕೆಂಬ ಕನಸು ಈ ಕವಿತೆಯಲ್ಲಿದೆ.

ಶತಮಾನ ಶತಮಾನ ಕವಿದಿದ್ದ ಕಾರ್ಮೋಡ ಬೆದರಿ
ಕಣ್ಣ ಪರೆ ಹರಿದಂತೆ – ಹಿಡಿದ ಗರ ಬಿಟ್ಟಂತೆ
ಜಡಕೆ ಚೇತನ ಬಂದು ಗುಡಿಗಾಡಿದಂತೆ
ಜನಮನಕೆ ಬಂದಿತ್ತು ಹರುಷಃ ಹೊಸ ಯುಗವ ಹೊತ್ತ ವರುಷ
. . . .

ನೀನಿಂದು ಸ್ವಾಧೀನೆ ಕೋಟಿ ಮುವತ್ತೈದು ಭಾಗ್ಯಗಳ ತಾಯಿ
ನೋಡದೋ ಕರ್ಪೂರ ಪರಿಮಳಿಪ ಕೇಸರಿಯ ಕಸ್ತೂರಿ ಲೇಪ [೩೩]

ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಭಾವಪರವಶರಾದ ಕವಿ ಸಂತೋಷದ ಕ್ಷಣಗಳನ್ನು ಹಿಡಿದಿಡುವ ಪ್ರಯತ್ನ ಇದಾಗಿದೆ. ಇಂದಿನ ಸಾಧನೆ ಹಿಂದಿನ ಸಾವಿರಾರು ವರ್ಷಗಳ ಸಾಹಸದ ಫಲವೆಂಬ ಧ್ವನಿ ಇದೆ. ದೇಶ ಪರದೇಶಿಯರ ಕೈಯಲ್ಲಿದ್ದರೂ ತನ್ನ ತನ ಕಳೆದುಕೊಳ್ಳದೆ ಮೆರೆದದ್ದು ಈ ತಾಯಿಯ ವಿಶೇಷತೆ. ಹಾಗಾಗಿ ಮುಂದೆ ಎಂದಿಗೂ ಅನ್ಯರಿಗೆ ಒಳಪಡದೆ ಕನಸು ಕಳೆದೆಚ್ಚೆತ್ತುಕೊಂಡಿರುವ ಮಾನವಗೆ ಬೆಳಕು ನೀಡುತ್ತ ಕಾಪಾಡುತ್ತಾಳೆ ಈ ತಾಯಿ ಎಂಬ ಆಶಯ ಕವಿಯದು.

ಸಿದ್ಧಯ್ಯ ಪುರಾಣಿಕರು ತಮ್ಮ 'ಧನ್ಯ ಭಾರತ' ಕವಿತೆಯಲ್ಲಿ ಸ್ವಾತಂತ್ರ್ಯಗಳಿಸಿದ, ಭಾರತ ಪ್ರಜಾತಂತ್ರ ಒಪ್ಪಿಕೊಳ್ಳುವುದನ್ನು ಸ್ವಾಗತಿಸಿ ಪ್ರಶಂಸಿಸಿರುವುದು ಕಂಡುಬರುತ್ತದೆ.

ಕೋಟಿ ಹೃದಯ ಮೀಟಿ ಬಂತು ಇಂದು ಒಂದೆ ಶುಭಶೃತಿ -
ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ

. . . .

ದಾಸ್ಯ ಹೋಯ್ತು ಬೆಳಗಲಿನ್ನು ನಾಡ ಜೀವ ದೀಧಿತಿ
ಬೆಳೆಯಲೆಲ್ಲ ವಿದ್ಯೆ ಕಲೆಯು ಶಾಸ್ತ್ರ ಯುಕ್ತಿ ಸಂಸ್ಕೃತಿ
ಚಲ್ಲವರಿಯತಿಲ್ಲೆಯಿರದ ಭಾವ - ಸ್ಫುರಣ ಸಂಸ್ಕೃತಿ
ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ. [೩೪]

ಇಡೀ ರಾಷ್ಟ್ರದ ಸಾಹಿತ್ಯ, ಕಲೆ, ಸಂಸ್ಕೃತಿ, ಧರ್ಮಗಳ ವೈಶಿಷ್ಟ್ಯಪೂರ್ಣ ಪರಂಪರೆಯೊಂದಿಗೆ ಈ ಕವಿತೆಯಲ್ಲಿ ಪ್ರಜಾತಂತ್ರವನ್ನು ಒಪ್ಪಿ ಸ್ವೀಕರಿಸಿರುವ ಧೋರಣೆ ವ್ಯಕ್ತವಾಗಿದೆ. ನವೋದಯದವರ ಆದರ್ಶ ಇಲ್ಲಿದೆ.

'ಸ್ವಾಗತವೂ ಸ್ವಾತಂತ್ರ್ಯ ದಿನವೇ' ಸ್ವಾತಂತ್ರ್ಯ ದಿನೋತ್ಸವದಂದು ಎದೆ ತುಂಬಿಬಂದು ಹಾಡಿರುವ ಕವಿತೆ. ಸ್ವಾತಂತ್ರ್ಯ ನಾಗರಿಕನ ಸ್ವಾಭಿಮಾನ ಜೀವನದ ಸಂಕೇತ. ಅಂತಹ ಸ್ವಾತಂತ್ರ್ಯ ಹೋರಾಟದ ಫಲವಾಗಿ ಲಭ್ಯವಾದಾಗ ಎಂತಹವರಿಗೂ ಅಭಿಮಾನ ಮೂಡಿಬರುತ್ತದೆ. ಈ ಹಿನ್ನೆಲೆಯಲ್ಲಿ ಈ ಕವಿತೆ ರೂಪುತಾಳಿದೆ.

ಸ್ವಾಗತವು ಸ್ವಾತಂತ್ರ್ಯ ದಿನವೆ ನಾಡ ಪುಣ್ಯ ಪ್ರಸೂನವೆ
ಓ ಹುತಾತ್ಮರ ಹೃದಯ ಗಾನವೆ ತಂದೆ ಗಾಂಧಿಯ ದಾನವೆ

. . . .

ತಾಯೆ ನಮ್ಮಯ ತ್ಯಾಗದಲ್ಲಿ ಜೀವಂತವಿರುವ ಅಭಿಮಾನವೆ
ಸ್ವಾಗತವು ಸ್ವಾತಂತ್ರ್ಯ ದಿನವೆ ತಂದೆ ಗಾಂಧಿಯ ದಾನವೆ. [೩೫]

ಸ್ವಾತಂತ್ರ್ಯ ಬಂದದ್ದು ಸ್ವಾಗತಾರ್ಹ ನಿಜ. ಆದರೆ ಸ್ವಾತಂತ್ರ್ಯ ಫಲಾನುಭವಿಗಳು ಯಾರಾಗಿದ್ದಾರೆ ಎಂಬ ಪ್ರಶ್ನೆ ಎದುರಾಗುತ್ತದೆ. ಬುದ್ಧಿ ಬಲ ಉಳ್ಳ, ಧನ ಬಲ ಉಳ್ಳ, ಬಾಹುಬಲ ಉಳ್ಳವರಿಗಷ್ಟೇ ಸ್ವಾತಂತ್ರ್ಯ ಬಂದಂತಾಗಿದೆ. ಉಳಿದವರಿಗೆ ಸ್ವಾತಂತ್ರ್ಯ ಕೇವಲ ಭಾವಪರವಶತೆಯ ಮಾತಾಗಿದೆ. ಬದುಕಿಗೆ ನೆರವಾಗಿಲ್ಲ. ಸಿದ್ದಯ್ಯ ಪುರಾಣಿಕರ ಈ

ಪದ್ಯದ ಮುಂದುವರಿಕೆಯಾಗಿ ಸಿದ್ದಲಿಂಗಯ್ಯನವರ 'ಯಾರಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ . . .' ಕವಿತೆಯನ್ನು ಗಮನಿಸಿದರೆ ಅಂದಿನ ಕವಿಗಳ ಭಾವಾವೇಶತೆಗೂ, ಇಂದಿನವರು ಎದುರಿಸುತ್ತಿರುವ ಸಮಸ್ಯೆ ಸವಾಲುಗಳ ನಡುವಿನ ಅಂತರ ಸ್ಪಷ್ಟವಾಗಿ ತಿಳಿಯುತ್ತದೆ. ಸಿದ್ದಯ್ಯ ಪುರಾಣಿಕರ ಸಾತ್ವಿಕ ರೀತಿಯ ಚಿಂತನೆಗೂ ಸಿದ್ದಲಿಂಗಯ್ಯನವರ ದಲಿತ ಧ್ವನಿಗೂ ಇರುವ ವ್ಯತ್ಯಾಸ ಇಲ್ಲಿ ಎದ್ದು ಕಾಣುತ್ತದೆ. ಆದರೆ ಸ್ವಾತಂತ್ರ್ಯ ಬಂದ ಕಾಲದಲ್ಲಿ, ಭವಿಷ್ಯದಲ್ಲಿ ಭಾರತದ ಸ್ವಾತಂತ್ರ್ಯ ಸ್ವಾರ್ಥಿಗಳ ಕೈವಶವಾಗುವುದೆಂಬ ಕಲ್ಪನೆಯಾದರೂ ಬಂದೀತು ಹೇಗೆ? ಕವಿಯ ಆಶಯಕ್ಕೆ ಧಕ್ಕೆ ಬರುತ್ತದೆಂದು ಯಾರು ನಿರೀಕ್ಷಿಸಲು ಸಾಧ್ಯ? ಇನ್ನು 'ತಂದೆ ಗಾಂಧಿಯ ದಾನವೆ' ಎಂಬ ಮಾತು ಚರ್ಚಾರ್ಹವಾದುದು. ಸ್ವಾತಂತ್ರ್ಯ ಹೋರಾಟ, ಬಲಿದಾನಗಳಿಂದ ಬಂದದ್ದು. ಅದಕ್ಕೆ ಗಾಂಧಿ ಒಬ್ಬರೇ ಕಾರಣರಲ್ಲ. ಹೋರಾಟಗಾರರ ಪ್ರಮುಖರಲ್ಲಿ ಗಾಂಧಿಯೂಕೂಡ ಒಬ್ಬರು. ನಿಜ. ಅವರ ತ್ಯಾಗ ಬಲಿದಾನವನ್ನು ಸ್ಮರಿಸಬೇಕಾದದ್ದು ನಮ್ಮಗಳ ಕರ್ತವ್ಯವೂ ಹೌದು. ಆದರೆ ಅವರಂತೆ ಹೋರಾಟ ಹಾಗೂ ಬಲಿದಾನ ಮಾಡಿದವರು ಅಸಂಖ್ಯಾತರಿದ್ದಾರೆ. ಅವರೆಲ್ಲರ ಪರಿಶ್ರಮದಿಂದ ಭಾರತ ಸ್ವಾತಂತ್ರ್ಯ ಹೊಂದಿತು ಎನ್ನುವುದರಲ್ಲಿ ಹೆಚ್ಚು ಅರ್ಥ ಬರುತ್ತದೆ. ಆದರೆ ಇಲ್ಲಿ ಕವಿ ಮನಸ್ಸು ಗಾಂಧಿ ಒಬ್ಬರಿಗೆ ಮಾತ್ರ ಮಣಿದಿದೆ.

'ರಾಷ್ಟ್ರ ರಾಜೇಶ್ವರಿಗೆ' ಪೌರಾಣಿಕ ಹಿನ್ನೆಲೆಯಲ್ಲಿ ದೇಶವನ್ನು ಶಕ್ತಿಯ ಅಧಿದೇವತೆಯಾಗಿ ಭಾವಿಸಿ ಭಾವನಾತ್ಮಕವಾಗಿ ಚಿತ್ರಿಸಿರುವ ಕವಿತೆ.

ಇಂದಿನೀ ದಸರೆಯೊಳು ಪ್ರಥಮ ಪೂಜೆಯು ನಿನಗೆ
ರಾಷ್ಟ್ರ, ರಾಜೇಶ್ವರಿಯೆ, ಆತ್ಮದೈಸಿರಿಯೆ
ಭಗವತಿಯೆ ಭಾರತಿಯೆ ಭುವನ ವಂದಿತ ಮಾತೆ
ಚಾಮುಂಡಿ ಶ್ರೀದೇವಿ ಗೌರಿ ವಾಗೀಶ್ವರಿಯೆ
. . . .
ಉಳಿದವರು ಅಣು ಬಾಂಬುಗಳ ತಂದು ಪೂಜಿಸಲಿ
ತಮ್ಮ ತಾಯಿಯನೆಮಗೆ ಈ ಪೂಜೆ ಸಾಕು
ಸಂಹಾರವಲ್ಲ, ಶ್ರಮ; ವಿದ್ವೇಷವಲ್ಲ, ದಮ;
ವೈರವಲ್ಲಾ ಹಾರ - ಈ ಬುದ್ಧಿ ಬೇಕು. [೩೬]

ಭಾರತಾಂಬೆ ಎಂದೂ ಕೂಡ ರಕ್ತದೋಕುಳಿಯನ್ನು ಕಾಣದೆ ಸಮೃದ್ಧಿಯ ನಾಡಾಗಲಿ ಎಂಬುದು ಕವಿಯ ಆಶಯ ಶ್ಲಾಘನೀಯವಾದದ್ದು. ಆದರೆ 'ಉಳಿದವರು ಅಣುಬಾಂಬುಗಳ ತಂದು ಪೂಜಿಸಲಿ' ಎಂಬ ಸಾಲು ಅನೇಕ ಆತಂಕಗಳಿಗೆ ಒಳಗು ಮಾಡುತ್ತದೆ. ಇಲ್ಲಿ ಉಳಿದವರು ಎಂದರೆ ಯಾರು? ಎಂಬ ಪ್ರಶ್ನೆ ಕಾಡುತ್ತದೆ. ಅಣುಬಾಂಬು ಪೂಜಾರ್ಹವಲ್ಲ. ಅದು ಜೀವ ಸಂಕುಲಗಳ ನಾಶಗೈವ ಸಾಧನ. ಅದು ನಾಗರಿಕ ಜಗತ್ತಿನಲ್ಲಿ ಎಂದೂ ವಿಜೃಂಭಿಸಬಾರದು. ಯಾರಾದರೂ ಬಳಸಲಿ ಎಂದು ಉದಾಸೀನಗೈದವರನ್ನು ಸ್ಫೋಟಿಸಿ ಆಹುತಿ ತೆಗೆದುಕೊಳ್ಳುವ ಬಾಂಬು. ಮುಟ್ಟಲಾರದೆಂದು ಯಾರೂ ಭಾವಿಸುವಂತಿಲ್ಲ. ಹಾಗಾಗಿ ನಮ್ಮ ತಾಯಿ ಪೂಜೆ ನಿರಾತಂಕವಾಗಿ ನಡೆಯುವಂತಾಗಲು ಇಡೀ ವಿಶ್ವದಲ್ಲಿ ಶಾಂತಿಯ ವಾತಾವರಣ ಇರಬೇಕು ಸೌಹಾರ್ದತೆ, ಶ್ರಮ, ಸಹಬಾಳ್ವೆಯೇ ಬದುಕಿಗೆ ಸಾಧನ. ಆ ಬುದ್ಧಿ ಎಲ್ಲರಲ್ಲೂ ಜಾಗೃತವಾಗಬೇಕು. ಅದು ಕವಿಯ ಆಶಯವಾಗಬೇಕಿತ್ತು ಎನಿಸುತ್ತದೆ.

ಅನುಭಾವ ಪ್ರಧಾನವಾದ ಮನಸ್ಥಿತಿಯಿಂದ ಕವಿ ನಾಡು, ದೇಶವನ್ನು ಸ್ತುತಿಸಿದ್ದಾರೆ. ಅನುಭಾವದ ಜೊತೆಗೆ ಕವಿಯ ಕಲ್ಪನೆ, ಭಾವ ಚಿಂತನೆಗಳೂ ಕೂಡಿ, ಆ ಕಾಲದ ಸಹೃದಯರನ್ನು ಮೆಚ್ಚಿಸಿರುವುದು ಕಂಡುಬರುತ್ತದೆ. ಇದೇ ಅವರ ಹಿರಿಮೆ ಹಾಗೂ ಸಿದ್ಧಿ ಎನ್ನಬಹುದು.

ನಮ್ಮಲ್ಲಿನ ಅನೈಕ್ಯತೆ, ಜಾತಿ, ನೂರಾರು ದೇವರುಗಳಿಂದ ಭಾರತದ ಕೀರ್ತಿಗೆ ಕಳಂಕ ತಟ್ಟಿದೆ. ತಾಯಿಗಂಡರಿಂದ ಅರಾಜಕತೆಗೆ ಒಳಗಾಗಿದೆ, ಸತ್ಯ ಸತ್ತು, ಸ್ವಾರ್ಥದ ಪರಾಕಾಷ್ಠೆ ಮುಗಿಲು ಮುಟ್ಟಿರುವ ರೋಚಕ ಚಿತ್ರವನ್ನು 'ಭಾರತಿ'ಯಲ್ಲಿ ಕವಿ ಚಂದ್ರಶೇಖರ ಕಂಬಾರರು ಕಟ್ಟಿಕೊಟ್ಟಿದ್ದಾರೆ.

ಏನ ಹೇಳಲೆವ್ವ ಭಾರತಿ
ಇಡೀ ಜಗದಾಗೆಲ್ಲ ಹಬ್ಬೇತೆವ್ವ ನಿನ್ನ ಕೀರುತಿ
ಹತ್ತವತಾರಕೆ ಹೆತ್ತವಳಾದಿ.
ಚಿಲ್ಲರೆ ದೇವರು ಛತ್ತೀಸ ಕೋಟಿ
ದೇವರಿಗೊಂದೊಂದು ಜಾತಿಯ ಕಟ್ಟಿ
ಒಬ್ಬರಿಗೊಬ್ಬರು ಎತ್ತೆತ್ತಿ ಇಟ್ಟಿ
ಜನಗಣವೆಲ್ಲಾ
ರಣರಂಗ ಮಾಡಿ
ಧರ್ಮವ ಮಾರಿ
ದೇವರ ಕೊಂಡಿ
. . . . [೩೭]

ಧರ್ಮ ಜಾತಿಗಳಾಗಿ, ಜಾತಿಗಳು ಸ್ವಪ್ರತಿಷ್ಠೆಯ ಕರಾಳ ರೂಪ ತಾಳಿ ಅನೈಕ್ಯತೆಯ ಕೂಪವಾಗಿರುವ ದೇಶದ ಸ್ಥಿತಿಗೆ ಭಾರತಿಯೇ ಕಾರಣವೆಂದು ದೇಶವನ್ನು ತಾಯಿಯಾಗಿ ಕಂಡು, ಆಕೆಯ ಮಕ್ಕಳ ಹೀನಕೃತ್ಯಕ್ಕೆ ತಾಯಿಯನ್ನು ಹೊಣೆಗಾರಳನ್ನಾಗಿ ಮಾಡಿ ವಿಡಂಬಿಸಿದ್ದಾರೆ. ಹರಿವ ನೀರ ಕೆರೆಯ ಮಾಡಿದ್ದು, ಗಾಳಿಯ ನಿಲಿಸಿ ಬಸಿರ ಬಿಗಿದಿಟ್ಟದ್ದು ಇಲ್ಲಿನ ಅವ್ಯವಸ್ಥೆಯನ್ನು ಬಿಂಬಿಸುತ್ತವೆ. ಕಂಬಾರರು ತಮ್ಮ ಈ ಕವಿತೆಯಲ್ಲಿ ವಾಸ್ತವೀಕರಣವಾಗಿ ಚಿಂತಿಸಿದರೆ ಅದೇ ನಿಸಾರ್‌ರು ವೈಭವೀಕರಣವಾಗಿ ಚಿಂತಿಸುತ್ತಾರೆ.

ಕಂಬಾರರ ಎಲ್ಲ ಕವಿತೆಗಳ ಧಾಟಿ ಜನಪದೀಯವಾಗಿದ್ದು ಗ್ರಾಮೀಣ ಸೊಗಡಿನ ಉತ್ತರ ಕರ್ನಾಟಕದ ಆಚರಣೆ, ನಂಬಿಕೆಗಳ ಹಿನ್ನೆಲೆಯಲ್ಲಿ ಕಂಡುಬರುತ್ತವೆ. ಧಾರವಾಡದ ಗಟ್ಟಿ ದನಿಯನ್ನು ಗೇಯತೆಯಲ್ಲಿ ಪೋಣಿಸಿ ಕಾವ್ಯಾತ್ಮಕವಾಗಿಸುವ ಕಲೆಯಲ್ಲಿ ಕಂಬಾರರು ಯಶಸ್ವಿಯಾಗಿದ್ದಾರೆ.

ಈ ಕವಿತೆಗೆ ಪೂರಕವಾಗಿರುವಂತೆ ದಲಿತ ಪರಂಪರೆಯ ಹಿರಿಯ ಕವಿ ಸಿದ್ದಲಿಂಗಯ್ಯ ಕನ್ನಡ ನಾಡನ್ನು ಕನ್ನಡವ್ವನೆಂದು ಕರೆದು, ಅದರ ಐತಿಹಾಸಿಕ ಹಿರಿಮೆಯನ್ನು ವ್ಯಂಗ್ಯವಾಗಿ ವಿಡಂಬಿಸಿರುವ ಕವಿತೆ 'ಕನ್ನಡವ್ವನಿಗೆ'ಯಾಗಿದೆ.

ಬಡವ – ಬಲ್ಲಿದ, ಮೇಲು – ಕೀಳು, ಸೂಳೆ – ಗರತಿಯರ ಬದುಕಿನ ಸಂಘರ್ಷದಲ್ಲಿ ಬೆಳೆದು ಬಂದ ನಾಡಿನಲ್ಲಿ ಹೆಮ್ಮೆ ಪಡುವ ಸಂಗತಿಗಿಂತ ನಾಗರಿಕ ಜಗತ್ತು ತಲೆ ತಗ್ಗಿಸುವ ಘಟನೆಗಳ ಸರಮಾಲೆಯನ್ನೇ ಹೊಂದಿರುವ ಕನ್ನಡವ್ವನ ಪುಣ್ಯದ ಬಗ್ಗೆ ಕವಿ ಕನಿಕರದ ಮಾತುಗಳನಾಡುತ್ತಾರೆ.

ಯಂಗೆ ಹೇಳಲಿ ತಾಯಿ
ನಿನ್ನ ಗೌರ್ಯ?
. . . .
ಸೂಳೆಯರಿಲ್ಲದ ನಾಡೊಂದು ನಾಡೆ?
ಹದವಾದ ಚರ್ಮವ ಹರಾಜಿಗಿಟ್ಟ ಜನವ ಬದುಕಿಸಿದ
ಕರ್ನಾಟಕ ರತ್ನ ಸಿಂಹಾಸನಾಧೀಶ್ವರ [೩೮]

ಭರತಮಾತೆಯ ವೈಭವದ ಮುಖವನ್ನು ಬಿಂಬಿಸುವ ಪದ್ಯಗಳ ಸಂಖ್ಯೆ ಅಸಂಖ್ಯ. ಆದರೆ ಅದರ ಇನ್ನೊಂದು ಮುಖವನ್ನು ಅನಾವರಣಗೊಳಿಸಲು ಬಹಳ ಮಂದಿ ಇಷ್ಟ ಪಡುವುದಿಲ್ಲ. ಆದರೆ ನೋವಿನ ನೆಲೆಯಲ್ಲಿಯೇ ಹುಟ್ಟಿ ಬೆಳೆದ ಕವಿಗೆ ಮಾತ್ರ ಅದರ ದಾರುಣತೆಯ ಅನುಭವವಾಗುತ್ತದೆ. ಅಂತಹ ಅನುಭವವನ್ನು ಕಟ್ಟಿಕೊಡುವ ಪ್ರಯತ್ನ ಇಲ್ಲಿ ಕಂಡುಬರುತ್ತದೆ. ಗುಲಾಬಿಯನ್ನು ವೈಭವೀಕರಿಸಿದವರು ಅದನ್ನು ಬೆಳೆಸಿದವರನ್ನು ಮರೆತರು ಎನ್ನಬಹುದೇ? ಅಥವಾ ಗುಲಾಬಿಯನ್ನು ವೈಭವೀಕರಿಸಿದವರು ಅದರ ಹಿಂದಿದ್ದ ಮುಳ್ಳುಗಳನ್ನು ಮರೆತರು ಎನ್ನಬಹುದೇ?

ಸಮಾಜದ ಮೇಲು ಪದರದವರು ತಳ ಪದರದವರನ್ನು ನಿರಂತರವಾಗಿ ಶೋಷಣೆ ಮಾಡುತ್ತ ಬಂದ ಚಿತ್ರಣವಿದೆ. ನವೋದಯ ಕಾವ್ಯದಲ್ಲಿ ಕೇವಲ ಸೌಂದರ್ಯಾರಾಧನೆ, ಪರಾಕು, ಸುಕುಮಾರ ಶೈಲಿಗೆ ಹೆಚ್ಚು ಒತ್ತು ಬಿದ್ದುದ್ದರಿಂದ ಚಿಂತನಾ ವಿಧಾನ ಸಾಮಾಜಿಕತೆಯ ಕರಾಳ ಮುಖಗಳು ಬಯಲುಗೊಳ್ಳಲು ಸಾಧ್ಯವಾಗಲಿಲ್ಲ. ಮುಂದೆ ಬಂದ ಸಾಹಿತ್ಯಕ ಪಂಥಗಳ ಚಿಂತನಾ ವಿಧಾನ ಬದಲಾದುದರಿಂದ ನೋವಿನ ನೆಲೆಗಳನ್ನು ಗುರುತಿಸುವ ಪ್ರಯತ್ನ ನಡೆಯಿತು. ಇದು ವಿಷಾಧದ ದನಿಯಷ್ಟೇ ಆಗಿರದೆ ವಿವೇಕದಿಂದ ಕೂಡಿರುವುದೂ ಆಗಿದೆ. ಇದು ಸಾಮಾಜಿಕ ನೆಲೆಯ ಚಿಂತನೆಯಿಂದ ಕೂಡಿದೆ.

ನಿಸಾರ್‌ರವರ ಕವನ 'ಕನ್ನಡಾಂಬೆಯ ಹಿರಿಮೆ'ಯಲ್ಲಿ ಕರ್ನಾಟಕದ ಇತಿಹಾಸ, ಆಳಿದ ರಾಜವಂಶಗಳ ಹಿರಿಮೆ, ಪ್ರಕೃತಿಯ ಸೊಗಸು, ಖನಿಜ ಸಂಪತ್ತಿನ ಸಿರಿವಂತಿಕೆಯನ್ನು ಬಣ್ಣಿಸುವ ದೇಶಭಕ್ತಿ ಗೀತೆಯಾಗಿದೆ. ಇದು ಭಾವುಕತೆಯಿಂದ ಕೂಡಿದ್ದರೂ ಕವಿಯ ಮನದಾಳದ ದೇಶ ಪ್ರೇಮವನ್ನು ಕಾಣಬಹುದು.

ಹಿರಿದು ತಾಯೆ, ನಿನ್ನ ಘನತೆ ಹಿರಿದು;
ಮುಗಿಸಲಾಗದು ಅದನು ಮಾತಿನಲಿ ಒರೆದು. [೩೯]

ಮೇಲು ವರ್ಗದವರ ಸಂಪ್ರದಾಯದ ಸೆಳೆತದಲ್ಲಿ ಮಾನವೀಯತೆ ಕೊಚ್ಚಿ ಹೋಗಿರುವ ಇತಿಹಾಸದ ಪುಟಗಳಲ್ಲಿ ದೀನ ದಲಿತರ ದನಿ ಅಡಗಿರುವುದನ್ನು ಹಾಗು

ಚರಿತ್ರೆಯ ವಿಕಟ ಕ್ರೌರ್ಯವನ್ನು ಕವಿ ಮಾರ್ಮಿಕವಾಗಿ ಕನ್ನಡಾಂಬೆಯ ಮೂಲಕ ಚಿತ್ರಿಸಿದ್ದಾರೆ. ಶೋಷಣೆಯ ನೆಲೆಗಟ್ಟಿನ ಮೇಲೆಯೆ ಇಲ್ಲಿನ ಪ್ರತಿಷ್ಠಿತ ಸಮಾಜ ನಿರ್ಮಾಣವಾಗಿರುವುದನ್ನು ತೋರಿಸಿದ್ದಾರೆ.

ತಲೆಮಾರಿನಿಂದ ತಲೆಮಾರಿಗೆ ಸ್ಥಿತ್ಯಂತರಗಳು ತಲೆದೋರುವುದು ಸಹಜ. ಅದನ್ನು ಸಾಹಿತ್ಯದ ಸಂದರ್ಭಗಳಲ್ಲಿ ಗಮನಿಸಿದಾಗ ನವ್ಯ ಧ್ವನಿ ಎಂದು ಗುರುತಿಸಬಹುದಾದ ಎಚ್.ಎಂ. ಚೆನ್ನಯ್ಯನವರ ಕವಿತೆಗಳು ಹಿಂದಿನವರ ಚಿಂತನೆಗಿಂತ ಭಿನ್ನವಾದ ಧ್ವನಿಯಾಗಿದ್ದು ಇದನ್ನು 'ಸೂರ್ಯನಲ್ಲದೆ ಮತ್ತಿಲ್ಲ' ಕವಿತೆಯಲ್ಲಿ ಕಾಣಬಹುದು.

ಅವ್ವಾ ನಮ್ಮವ್ವ ಭಾರತಿ
ಏನೆಂದು ಹೇಳಲಿ ನಿನ್ನ
ಕುಲೋದ್ಧಾರಕರಾದ ನಮ್ಮ ಕೀರುತಿ
. . . .
ಹೋಗಲಿಕ್ಕೇ ಬೇಕು
ರಾಷ್ಟ್ರೀಯ ಸೆಮಿನಾರುಗಳಿಗೆ
ವಿಮಾನದಲ್ಲಿ ಯಾ ಫಸ್ಟ್ ಕ್ಲಾಸಿನಲ್ಲಿ
. . . .
ನಾವು ಸಾಮಾಜಿಕರು:
ಮಾಡುವವರಲ್ಲ ನೋಡುವವರು [೪೦]

ನವೋದಯ ತಲೆಮಾರಿನವರು ದೇಶವನ್ನು ದೇವತೆಗೆ ಹೋಲಿಸಿ ಆಕೆಯನ್ನು ಭಕ್ತಿ ಭಾವದಿಂದ ಆರಾಧಿಸಿರುವುದುಂಟು. ಆಕೆಯಲ್ಲಿ ದೈವೀ ಲೀಲೆಯ ಅಂಶಗಳನ್ನು ಸಮೀಕರಿಸಿ ಶ್ರದ್ಧೆಯಿಂದ ಕೈಮುಗಿದಿರುವುದುಂಟು. ಆದರೆ ಅದೇ ನವ್ಯದವರಿಗೆ ಭಾರತಾಂಬೆ ದೇವತೆಯಾಗಿ ಕಂಡಿಲ್ಲ. ನಮ್ಮನ್ನು ಉದ್ಧಾರ ಮಾಡುವ ಮಹಾ ತಾಯಿಯಾಗಿಲ್ಲ. ದೈವೀ ಶಕ್ತಿಯ ಅಪರಾವತಾರವಾಗಿ ಕಾಡಿಲ್ಲ. ಮಿಗಿಲಾಗಿ ಆಕೆ ಅಂಗಳದಲ್ಲಿ ನಡೆದಿರುವ ಮೋಸ, ವಂಚನೆ, ಕುಟಿಲತೆ, ಜಾತೀಯತೆಗಳೊಂದಿಗೆ ಇಡೀ ರಾಷ್ಟ್ರವನ್ನು ದುರಂತಕ್ಕೆ ತಳ್ಳಿ, ಮೌಲ್ಯಗಳನ್ನು ಧೂಳೀಪಟಗೊಳಿಸಿರುವ ವಂಚಕರ ಆಡೊಂಬಲವಾಗಿದೆ ಎಂಬುದನ್ನು ವ್ಯಂಗ್ಯ ವಿಡಂಬನೆಗಳಿಂದ ನಿಂದಿಸಿರುವುದು ಕಂಡುಬರುತ್ತದೆ. ಇದು ತಲೆಮಾರಿನ ಚಿಂತನೆಯಲ್ಲಿ ಕಂಡುಬರುವ ಭಿನ್ನತೆಯನ್ನು ತೋರಿಸುತ್ತದೆ.

ಹಾಗೆಯೇ ಶ್ರೀಕೃಷ್ಣ ಆಲನಹಳ್ಳಿ ತಮ್ಮದೊಂದು ಕವಿತೆ 'ಭರತ ಮಾತೆಗೆ' ಎಂಬುದರಲ್ಲಿ ಭಾರತಾಂಬೆಯನು ಗೋಮಾತೆಗೆ ಹೋಲಿಸಿರುವುದನ್ನು ಕಾಣಬಹುದು;

ಓ ಭಾರತ ಮಾತೆ
ಮಮ ಜನ್ಮದಾತೆ
ಬಣ್ಣಿಸಿ ಹಾಡಲೇನವ್ವ ನಿನ್ನ ವೈಭೋಗವ?
ಬೆದೆಯರಿತು ಹದಮಾಡಬೇಕಾದ್ದೆ ಇಲ್ಲ
ಬರಿ ಕಚ್ಚೆ – ಸೀರೆ – ಯನೊಟ್ಟುಗೂಡಿಸಿ

ಪಟಪಟ ನಾಕುಸಲ ವದರಿಬಿಟ್ಟರೆ ಸಾಕು ತಕ್ಕೊ
ಮತಮುತನುದುರುವ ನಿನ್ನ ಸಿರಿ ಸಂತಾನವ
ಬಣ್ಣಿಸಿ ಹಾಡಲೇನವ್ವ?
ಹೀಗೆ ಉದುರಿದ ಅಜ್ಜ ಅವನುದುರಿಸಿದ
ಅಪ್ಪ ಅವನುದುರಿಸಿದ ನಾನೂ ಕೂಡಿ
ಛಪ್ಪನ್ನೈವತ್ತಾರು ಕೋಟಿ ಕ್ರಿಮಿಕೀಟಗಳ
ಅಲ್ಲಲ್ಲು
ಅಮೃತ ಪುತ್ರ ರತ್ನಗಳ
ಬಣ್ಣಿಸಿ ಹಾಡಲೇನವ್ವ
ಮಾತೆ – ಮನುಕುಲ ಶ್ರೀ ಮಾತೆ
ಓ ಗೋಮಾತೆ [೪೧]

ಬೇಂದ್ರೆಯವರ 'ಮುವತ್ತಮೂರು ಕೋಟಿ ಮಕ್ಕಳಿವರೇನಮ್ಮ' ಮತ್ತು ಆಲನಹಳ್ಳಿಯವರ ಈ ಕವಿತೆಯನ್ನು ಒಟ್ಟೊಟ್ಟಿಗೆ ಇರಿಸಿ ನೋಡಿದರೆ ಪೀಳಿಗೆಯ ಅಂತರದ ನಡುವಿನ ಆಲೋಚನೆಗಳು ಸ್ಪಷ್ಟವಾಗುತ್ತವೆ. ಬೇಂದ್ರೆಯವರ ಆಲೋಚನೆಯಲ್ಲಿ ವಿಡಂಬನೆ ಇರುವುದಾದರೂ ಆಲನಹಳ್ಳಿಯವರ ಕವಿತೆಯಲ್ಲಿ ಕಂಡುಬರುವ ಪ್ರಖರತೆಯಾಗಲೀ, ಶಬ್ದ ಬಳಕೆಯ ಕಟುತನವಾಗಲೀ ಕಂಡುಬರುವುದಿಲ್ಲ. ಬೇಂದ್ರೆಯವರ ಕವಿತೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಅಗತ್ಯವೆನಿಸಿದ್ದ ತ್ಯಾಗ, ಬಲಿದಾನ ಮುಂತಾದವುಗಳ ನಿಟ್ಟಿನಲ್ಲಿ ಅವರ ಆಲೋಚನೆ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಒಳಗೊಂಡಿರುವಂತಹುದು. ಸ್ವಾತಂತ್ರ್ಯವೇನೋ ಬಂತು ತದನಂತರದಲ್ಲಿ ಈ ದೇಶದಲ್ಲಿ ಏನಾಯಿತು ಎಂಬುದರ ಬಗ್ಗೆ ಆಲನಹಳ್ಳಿಯವರು ವಿಷಾಧ, ವ್ಯಂಗ್ಯ ಮತ್ತು ರೂಕ್ಷ ನುಡಿಗಳಿಂದ ವಿಡಂಬಿಸಿದ್ದಾರೆ. ಮನುಷ್ಯ ಮತ್ತು ಪ್ರಾಣಿಗಳ ಹುಟ್ಟಿನಲ್ಲಿ ಯಾವುದೇ ವ್ಯತ್ಯಾಸ ಕಂಡುಬರದೆ ನಿಸ್ಸತ್ವ ಜನಾಂಗವನ್ನು ಕಂಡು ಕವಿಯ ಮನ ರೋಸಿದೆ.

ಸಾ.ಶಿ. ಮರುಳಯ್ಯ ರಮ್ಯ ಹಾಗೂ ಲಾಲಿತ್ಯಮಯ ಶೈಲಿಗೆ ಹೆಸರಾದ ವಿಶಿಷ್ಟಕವಿ. "ಈ ಕವಿಗೆ ಒಂದು ಸ್ಪಷ್ಟ ಕಾಣ್ಕೆಯಿದೆ. ಪರಂಪರೆಯ ಮೌಲ್ಯಗಳಲ್ಲೂ ಅವರಿಗೆ ಶ್ರದ್ಧೆ ಇದ್ದರೂ ನವೀನ ಮೌಲ್ಯಗಳ ಶೋಧನವೂ ಅವರಿಗೆ ಪ್ರಿಯವಾಗಿದೆ. ನಿಸರ್ಗ ಸೌಂದರ್ಯ, ಸ್ವಾತಂತ್ರ್ಯ, ಪ್ರೇಮ, ರಾಜ್ಯಾಭಿಮಾನ, ರಾಷ್ಟ್ರಾಭಿಮಾನ, ಗಣ್ಯವ್ಯಕ್ತಿಗಳು ಹೀಗೆ ಅನೇಕ ಕಾವ್ಯ ವಸ್ತುಗಳನ್ನು ಕುರಿತು ಅವರು ಬರೆದಿದ್ದಾರೆ" [೪೨] ಎಂಬ ಮಾತಿಗೆ ಅನ್ವಯವಾಗುವ ವ್ಯಕ್ತಿತ್ವ ಇವರದು.

ಇವರ 'ಭಾರತ ಮಾತೆಗೆ ಜೈ' ಕವಿತೆ ದೇಶವನ್ನು ಕುರಿತದ್ದಾದರೂ, ಅದರಲ್ಲಿ ಭಾರತದ ನವ ಯುವಕರಿಗೆ ಚೈತನ್ಯ ತುಂಬುವುದಾಗಿದೆ. ಬ್ರಿಟಿಷರಿಂದ ಬಿಡುಗಡೆ ಗೊಳಿಸಲು ದೇಶ ಸಾಕಷ್ಟು ಬೆಲೆ ತೆತ್ತಿದೆ. ಈಗ ದೇಶ ಬಲಿದಾನ ಬೇಡುವುದಿಲ್ಲ. ದುಡಿಯುವ ಮನಸ್ಸಿನ ಉತ್ಸಾಹಿಗಳನ್ನು ನಿರೀಕ್ಷಿಸಿದೆ ಎಂದು ಕವಿ ನುಡಿದಿದ್ದಾರೆ.

ಭಾರತ ಮಾತೆಗೆ ಜೈ . . .
. . . .
ಏಳು ,ಏಳು ತಾರುಣ್ಯದ ತೇಜವೆ!

ನಮ್ಮಯನಾಳಿದ ಆಶಾಕಿರಣವೆ!
ನಿನ್ನಯ ನಾಡಿಯಲೆಂದೂ ಮಿಡಿಯಲಿ
ಭಾರತ ಮಾತೆಗೆ ಜೈ! . . .[೪೩]

ಯುವಶಕ್ತಿಯ ಪಾಲಿಗೆ ನಾಳೆಗಳು ಉಳಿದಿವೆ. ಅವು ಸಾರ್ಥಕವಾಗಬೇಕಾದರೆ, ದುಡಿಮೆಯೊಂದೇ ಮೂಲ ಮಂತ್ರವಾಗಬೇಕು. ದುಡಿಮೆಯಿಂದ ವ್ಯಕ್ತಿ ಸದೃಢವಾಗೇ ಭಾರತವೂ ಸದೃಢವೆಂಬುದು ಕವಿಯ ಆಶಯ.

ದುಡಿಮೆಯಿಂದ ದೇಶ ಪ್ರಗತಿ ಎನ್ನುವುದನ್ನು ಬಿಂಬಿಸುವ ಕವಿತೆ 'ಭಾರತ ಮಾತೆಗೆ ಜೈ . . ಆದರೆ; ಭಾವನಾತ್ಮಕವಾಗಿ ನಾವೆಲ್ಲ ಭಾರತೀಯರಾಗಬೇಕೆಂಬುದನ್ನು 'ದೇಶವೊಂದೆ ಭಾರತ' ಕವಿತೆ ಸಾರುತ್ತದೆ.

ವೇಷ ಬೇರೆ ಭಾಷೆ ಬೇರೆ ದೇಶವೊಂದೆ ಭಾರತ
ಒಂದೆ ತಾಯ ಮಕ್ಕಳೆಂದು ಘೋಷಿಸೋಣ ಸಂತತ
. . . .

ಯಾವ ದೇಶದಲ್ಲೆ ದುಡಿ
ಯಾವ ಮಣ್ಣಿನಲ್ಲೆ ಮಡಿ
ನಿಂತ ನಿಲುವು ಹಿಡಿದ ಹುಡಿ
ಭರತ ಭೂಮಿಯೆಂದು ತಿಳಿ. . .[೪೪]

ಆದರ್ಶದ ಕಲ್ಪನೆಗೆ ಪಕ್ಕಾಗಿರುವ ಕವಿ, ಭಾರತೀಯರಲ್ಲಿ ಕಾಣುವ ಅನೈಕ್ಯತೆಯನ್ನು ಪರೋಕ್ಷವಾಗಿ ಪ್ರಸ್ತಾಪಿಸಿದ್ದಾರೆ. ಎಲ್ಲರೂ ಒಂದಾಗಿ ದೇಶದ ಸಮಗ್ರತೆಗೆ ಶ್ರಮಿಸಬೇಕು. ಎಲ್ಲೇ ಇರಲಿ ನಾನು ಭಾರತೀಯ ಎಂಬುದನ್ನು ತನ್ನ ವ್ಯಕ್ತಿತ್ವದಿಂದಲೇ ತೋರಿಸಿಕೊಡಬೇಕೆಂಬ ನೀತಿ ಬೋಧನೆ ಈ ಕವಿತೆಯಲ್ಲಿದೆ.

ಇದೇ ಧಾಟಿಯಲ್ಲಿ ಹರಿದಿರುವ ಕವಿತೆ 'ಜಯಹೇ ಭಾರತ ಮಾತೆ'. ಇದು ದೇಶದ ಪ್ರಾಕೃತಿಕ ವೈಶಿಷ್ಟ್ಯವನ್ನು ಬಿಂಬಿಸುವುದರೊಂದಿಗೆ ಅದರ ಗುಣವಿಶೇಷವನ್ನು ವಿಶ್ಲೇಷಿಸುತ್ತದೆ.

ಗಿರಡ್ಡಿ ಗೋವಿಂದರಾಜರವರ ಕವಿತೆ 'ಭಾರತಾಂಬೆ' – ದಾಸ್ಯತನದಿಂದ ಬಿಡುಗಡೆಗೊಳ್ಳುವ ಮುನ್ನ ಆಕೆ ಪರಾಧೀನತೆಯಲ್ಲಿ ಅನುಭವಿಸಿದ ಯಾತನೆಯ ಚಿತ್ರದೊಂದಿಗೆ ಕೂಡಿದೆ. ಆಗ ಆಕೆ ಬಲವಂತದಿಂದ ಹರಕು ಸೀರೆಯನ್ನು ಕೊಡವಿ ಜಾಡಿಸಿಕೊಳ್ಳುತ್ತಾ ಹೊರಬಂದ ಸ್ವಾಭಿಮಾನದ ಹೆಣ್ಣಾಗಿ ಭಾರತಮಾತೆ ಕಾಣುತ್ತಾಳೆ.

ನಾಲ್ಕು ದಿನಗಳ ಹಿಂದೆ
ಅವರಿವರ ಮನೆಯ ತಂಗಳ ರೊಟ್ಟಿಗಾಗಿ
ಜೊಲ್ಲುಗಣ್ಣಾಗಿ. . . .
. . . .
ಒಮ್ಮೆಲೆ
ಹರುಕು ಸೀರೆಯನ್ನು ಕೊಡವಿ ಜಾಡಿಸಿಕೊಳ್ಳುತ್ತ

ಕೊಟ್ಟರೆ ಕೊಡು, ಬಿಟ್ಟರೆ ಬಿಡು
ಎಂದು ಕೈತಿರುವಿ
ಅರೆಹೊಟ್ಟೆಯಲ್ಲೇ ಎದ್ದು ಬಂದ ಧಿಮಾಕನ್ನು ನೋಡಿ
ಬಹಳ
ಬಹಳ
ಖುಷಿಯಾಯಿತು [೬೫]

ಹೀಗೆ ನೈಜತೆ ಹಾಗೂ ಉತ್ಕಟತೆಯ ತೀವ್ರತೆಯಲ್ಲಿ ತಮ್ಮ ಅನುಭವಗಳಿಗೆ ಕವಿತೆಯ ರೂಪಕೊಡುವ ಗಿರಡ್ಡಿಯವರು ಜನಪದ, ಭಾವಗೀತೆ ಹಾಗೂ ನವ್ಯರೀತಿಯಲ್ಲಿ ಕಾವ್ಯಕಟ್ಟುತ್ತಾರೆ. ಹಾಗೆ ಸ್ನೇಹ, ಮಾತೃ ಪ್ರೇಮಗಳನ್ನು ಕಲಾತ್ಮಕವಾಗಿ ಇವರ ಕವಿತೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ನಿಂಗಪ್ಪ ಮುದೇನೂರು ರಚಿಸಿರುವ 'ಅವ್ವ' ಕವಿತೆ ಕೂಡ ಸಿದ್ಧಲಿಂಗಯ್ಯನವರು ಕಂಡ ಭಾರತಾಂಬೆಯಂತೆ ಇದೆ. ಸ್ವಾತಂತ್ರ್ಯ ನಂತರದ ಭಾರತದ ಪಾಡನ್ನು, ಇಲ್ಲಿನ ನಿರ್ಗತಿಕರ, ಬಡವರ ನೋವಿನಾಳದ ಚಿತ್ರದೊಂದಿಗೆ, ಕೆಂಪು ಕೋಟೆಯ ಮೇಲೆ ಬೆಳಕು ತೋರಿದ ತ್ಯಾಗಿಗಳ ಶ್ರಮಕ್ಕೆ ಬೆಲೆ ಕೊಡದೆ ಭೋಗಜೀವನ ನಡೆಸುವ ಮಂದಿಯ ಬದುಕನ್ನು ಚಿತ್ರಿಸಿದ್ದಾರೆ.

ಅವ್ವಾ
ನಿನಗೆ ನಿನ್ನೆಯೇ ಹೇಳಿದ್ದೆ
ಗಾರ್ಕಿ ತೊಡೆಮೇಲೆ ಮಲಗಿಸಿಕೊಂಡಿರುವ ಮಾತು
ನಿನ್ನ ಸ್ವಾತಂತ್ರ್ಯದ ಉಸಿರಲ್ಲೆ ಬದುಕಿರುವ ನನಗೆ
ಕೀರ್ತಿ ಬೆನ್ನತ್ತಿ ಹೋಗುವ ಮೂರ್ಖತನವಾದರೂ -
ಏಕೆಂದು? [೬೬]

ಅಧಿಕಾರ ಕೀರ್ತಿಗಾಗಿ ಹೊರಟ ಮಂದಿ, ಶ್ರೀಸಾಮಾನ್ಯರನ್ನು ಉದ್ಧರಿಸುವುದನ್ನು ಮರೆತ ಚಿತ್ರವನ್ನು ಹೇಳುತ್ತಾ, ತಾಯಿಯಲ್ಲಿ ನಿವೇದಿಸಿಕೊಂಡಂತೆ ಭಾರತಾಂಬೆಯಲ್ಲಿ ನಿವೇದಿಸಿಕೊಂಡಿದ್ದಾರೆ.

'ತಾಯಿ ನೆಲದಲ್ಲಿ' ಕವಿತೆಯೂ ಕೂಡ ಇದೇ ಕಲ್ಪನೆಯಲ್ಲಿ ಕೂಡಿದೆ. ಇಲ್ಲಿ ಹಸಿವಿನಿಂದ ನರಳುವವರು ಒಂದೆಡೆಯಾದರೆ, ಕೊಳ್ಳೆ ಹೊಡೆವ ಜನ ಇನ್ನೊಂದೆಡೆ ಇದ್ದಾರೆ. ಆದರೆ ಕೊಳ್ಳೆ ಹೊಡೆಯುವವರ ಕಾಲಿಗೆ ನೀ ಬೇಲಿಯಾಗು, ಆ ಬೇಲಿಯ ತುಂಬೆಲ್ಲ ಹೂ ಅರಳಲಿ ಎಂಬ ನವ ಮನ್ವಂತರದ ಕನಸು ಕಾಣುವುದಿಲ್ಲಿದೆ.

ನನ್ನ ದೀರ್ಘ ಕನಸುಗಳ ತಾಯಿಯೇ
ನಿನ್ನೆ
ರಾತ್ರಿ
ಕೈಹೊತ್ತು ಮಲಗಿದ್ದ ನನಗೆ
ಬಟ್ಟಲುಗಣ್ಣುಗಳ ತುಂಬಾ ಎಳೆ ನೀರು ತಂದೆ.
ಮಗುವಿನಂತೆ
ನಗುವಿನಂತೆ

ಇನ್ನಾದರೂ ಎದೆ ಬಿಗಿದು ಅವರ ಕಾಲಿಗೆ ನೀ ಬೇಲಿಯಾಗು
ಬೇಲಿಯ ತುಂಬೆಲ್ಲಾ ಹೂ ಅರಳಲಿ
ಅಲ್ಲಿ
ಹೂ ಹಿಡಿದ ಹುಡುಗನೊಬ್ಬ
ನಿತ್ಯ ಮಾನವ ಪದ ಹಾಡುತ್ತಿರುತ್ತಾನೆ. [೪೭]

ಕನಸು ಭ್ರಮೆಗಳಲ್ಲಿ ಮುಳುಗಿರುವ ದೇಶದಲ್ಲಿ ವಾಸ್ತವಕ್ಕೂ, ಆದರ್ಶಕ್ಕೂ ಅಂತರ ನಿರ್ಮಾಣವಾಗುತ್ತದೆ. ಆದರ್ಶ ವಾಸ್ತವವಾದಾಗ ದೇಶ ಸಂಪನ್ನವಾಗುತ್ತದೆ ಎಂಬ ಆಶಯವಿದ್ದರೂ ಕೂಡ ನಮ್ಮಲ್ಲಿ ಬೇರುಬಿಟ್ಟಿರುವ ಆದರ್ಶವಾದರೂ ಮಾನವೀಯ ನೆಲೆಗಟ್ಟಿನಲ್ಲಿದೆಯೇ ಎಂಬ ಪ್ರಶ್ನೆ ಎದುರಾಗುತ್ತದೆ. ಜಾತಿ, ಮತ, ಧರ್ಮಗಳ ಆದರ್ಶದಿಂದ ಮುಕ್ತವಾದ ಮನುಕುಲದ ಹಿರಿಮೆ ಸಾರುವ ಆದರ್ಶ ನೆಲೆಗೊಳ್ಳಬೇಕಾಗಿದೆ. ದಾನವತೆ ನೀಗಿ, ಮಾನವತೆ ನಿರಂತರವಾಗಿದ್ದು, ಹೂ ಹಿಡಿದ ಹುಡುಗ ನಿತ್ಯ ಮಾನವತೆಯ ಪದ ಹಾಡುವಂತ ವಾತಾವರಣ ನಿರ್ಮಾಣವಾಗಲಿ ಎಂದು ತಾಯಿ ಭಾರತಾಂಬೆಯಲ್ಲಿ ಪ್ರಾರ್ಥಿಸಿದ್ದಾರೆ.

ಅಂಥ ಕವಿ ಮುದಿಗೆರೆ ರಮೇಶ್ ಕುಮಾರ್ ಒಳಗಣ್ಣಿನಿಂದ ಕಾವ್ಯಕ್ಷೇತ್ರದಲ್ಲಿ ವಿಹರಿಸುವ ಪ್ರತಿಭಾನ್ವಿತ ಯುವಕವಿ. "ರಮೇಶಕುಮಾರ ಬೆಳೆಯುತ್ತಾ ಸಾಗಿದ್ದಾರೆ, ಹೊಸ ಧ್ವನಿಗಳನ್ನು ದಾಖಲಿಸುತ್ತಿದ್ದಾರೆ. ಹೊಸದಾಗಿ ಬರೆಯುವವರ ಮಧ್ಯೆ ವಿಶಿಷ್ಟ ನೆಲೆಯನ್ನು ಕಂಡುಕೊಳ್ಳುವ ದಿಕ್ಕಿನಲ್ಲಿದ್ದಾರೆ. . . ."[೪೮] ಎಂಬ ಬರಗೂರರ ಮಾತುಗಳಿಗೆ ಪಾತ್ರರಾಗಿರುವ ಉದಯೋನ್ಮುಖ ಕವಿ, ಮುದಿಗೆರೆ ರಮೇಶ್‌ಕುಮಾರ್ ತಮ್ಮ ಎರಡನೇ ಕವನ ಸಂಕಲನ 'ಎದೆಯ ಪುಟಗಳು' ಕೃತಿಯಲ್ಲಿ 'ಭಾವಿ ಪ್ರಜೆಗಳು' ಕವನದಲ್ಲಿ ದೇಶದ ವ್ಯವಸ್ಥೆಯನ್ನು ಕಟ್ಟಿಕೊಟ್ಟು, ಭಾರತವನ್ನು ತಾಯಿ ಎಂದು ಭಾವಿಸಿ, ಮುಂದೆ ಈಕೆಯ ಕೀರ್ತಿ ಬೆಳಗುವ ಮಕ್ಕಳು ಯಾರಾಗಬಲ್ಲರೋ ತಿಳಿಯದೆಂಬ ಅನಿಶ್ಚಿತತೆ ಬಗ್ಗೆ ಗಮನ ಸೆಳೆಯುತ್ತಾರೆ.

ಅದೋ ಭಾರತ ಭಾವಿ ಪ್ರಜೆಗಳು
ಹೊಟ್ಟೆಯ ಬೆನ್ನಿಗೆ ಬಿದ್ದಿಹವು
ಬಿಟ್ಟಿ ಚಟಕೆ ಹುಟ್ಟಿದ ತಪ್ಪಿಗೆ
ರೆಟ್ಟೆ ಮುರಿದುಕೊಂಡು ನಿಂತಿಹವು . . .
. . . . ಭಾರತಮಾತೆಯ ಭಾವಿ ಪ್ರಜೆಗಳು [೪೯]

ಸ್ವಾತಂತ್ರ್ಯ ನಂತರ ಎಲ್ಲ ರಂಗದಲ್ಲೂ ನಿರೀಕ್ಷಿಸಿದ ಪ್ರಗತಿ ಕಂಡುಬರದ ಸಂದರ್ಭದಲ್ಲಿ ಯುವ ಜನಾಂಗ ಹೇಗೆ ಅನಾಥ ಪ್ರಜ್ಞೆಯಿಂದ ನರಳುತ್ತಿದೆ ಎಂಬುದರ ಬಗ್ಗೆ ಕವಿಯ ಪ್ರಜ್ಞೆ ಹರಿದಿದೆ. ಜನ್ಮ ಕೊಡುವ ತಾಯಿ – ತಂದೆಗಳು ಮಕ್ಕಳ ಪೋಷಣೆ ಬಗ್ಗೆ ನಿಷ್ಕಾಳಜಿ ತಾಳಿದಾಗ ಮಕ್ಕಳ ಸ್ಥಿತಿ ಶೋಚನೀಯವಾಗುತ್ತದೆ. ಒಂದು ರಾಷ್ಟ್ರದ ಸಂಪತ್ತಿನಲ್ಲಿ ಯುವ ಜನಾಂಗದ ಸಂಪತ್ತೂ ಒಂದು, ಅದನ್ನು ಹೇಗೆ ಜತನವಾಗಿಸಿಕೊಂಡು ಮುನ್ನಡೆಸಬೇಕೆಂಬ ಜವಾಬ್ದಾರಿ ಆ ಮಕ್ಕಳ ಪೋಷಕರದಾಗಿರುತ್ತದೆ. ಇಂದಿನ ಯುವಕರೇ ಮುಂದಿನ ಪ್ರಜೆಗಳು ಎಂಬ ಅರಿವಿನಿಂದ ಮಕ್ಕಳನ್ನ ಪೋಷಿಸದಿದ್ದಾಗ ಅಂತಹ ಮಕ್ಕಳು ರಾಷ್ಟ್ರದ ಸಂಪತ್ತಾಗುವುದಕ್ಕೆ ಬದಲಾಗಿ

ಅನಿಷ್ಠವಾದಾವು ಎಂಬುದರ ಎಚ್ಚರಿಕೆಯ ಮಾತು ಈ ಪದ್ಯದಲ್ಲಿದೆ. ಜೊತೆಗೆ 'ರಟ್ಟೆ ಮುರಿದುಕೊಂಡು ನಿಂತಿಹವು' ಮಾತು ದುಡಿವ ಕೈಗೆ ಕೆಲಸವಿಲ್ಲದೆ, ದಿಕ್ಕೆಟ್ಟು ನಿಂತ ಮಕ್ಕಳ ಸ್ಥಿತಿಯನ್ನು ತಿಳಿಸುತ್ತದೆ.

ಕರ್ನಾಟಕ ನಾಡು – ನುಡಿ ಹಾಗೂ ಮಾತೃತ್ವ: ಭಾರತ ಮತ್ತು ಭಾರತಾಂಬೆಯನ್ನು ಕುರಿತಂತೆ ಕರ್ನಾಕಟ ಕನ್ನಡಾಂಬೆಯನ್ನು ಕುರಿತು ಕವಿಗಳು ಭಾವನಾತ್ಮಕವಾಗಿ ಕವಿತೆಗಳನ್ನು ರಚಿಸಿದ್ದಾರೆ. ನವೋದಯ ಕಾಲದಿಂದಲೂ ಇದನ್ನು ಕಾಣಬಹುದು. ರಾಷ್ಟ್ರಮಾತೆಯ ಹಿನ್ನೆಲೆಯಲ್ಲಿ ನಾಡದೇವಿಯ ಹಿರಿಮೆಯನ್ನು ಕಂಡಿದ್ದಾರೆ. ಈ ಕವಿತೆಗಳಲ್ಲಿ ಪ್ರಾದೇಶಿಕ ಬೆಡಗು, ಪರಂಪರೆಯ ಸೊಗಸು, ಪಾವಿತ್ರ್ಯತೆಯ ಭಾವನೆ, ಪ್ರಕೃತಿಯ ಹಿರಿಮೆ ಕಾಣುತ್ತದೆ.

"ರಾಷ್ಟ್ರೀಯತೆಯ ಪ್ರಜ್ಞೆ ಕರ್ನಾಟಕದಲ್ಲಿ ವ್ಯಕ್ತವಾದ ರೀತಿಯಲ್ಲಿ ಎರಡು ರೀತಿಗಳಿವೆ. ಒಂದು ವಿಶಾಲ ಭಾರತದ ಕಲ್ಪನೆಯಾದರೆ; ಇನ್ನೊಂದು ಕನ್ನಡ ಭಾಷೆಯನ್ನು ಎತ್ತಿ ಹಿಡಿಯುವ ಪ್ರಕ್ರಿಯೆಯಾಗಿ ಕಾಣಿಸಿದೆ. ಈ ಮೂಲಕ ರಾಷ್ಟ್ರ ಮತ್ತು ದೇಸಿ ಕಲ್ಪನೆಗಳೆರಡೂ ನಮ್ಮ ಕನ್ನಡ ಕವಿಗಳ ಕಲ್ಪನೆಯಾಗಿ ಜೀವಂತವಾಗಿದ್ದಿತೆನ್ನಬೇಕು.

ಹೀಗೆ ಕನ್ನಡ ಕವಿಗಳನ್ನು ರಾಷ್ಟ್ರೀಯ ಪ್ರಜ್ಞೆ ಆವಾಹಿಸಿಕೊಂಡಾಗ ಪ್ರದೇಶದ ಹಿನ್ನೆಲೆಯಲ್ಲಿ ಅದು ಬೇರೆ ಬೇರೆ ರೀತಿಯ ರೂಪಗಳನ್ನು ಪಡೆದುಕೊಳ್ಳಲು ಸಾಧ್ಯವಿದೆ. ಏಕೆಂದರೆ ಆಯಾಯ ಕವಿಯ ಪ್ರದೇಶ, ಸಂಸ್ಕಾರ, ಅಭಿರುಚಿ ಇವುಗಳನ್ನು ಅದು ಹೊಂದಿಕೊಂಡಿರುತ್ತದೆ. ಇನ್ನೊಂದು ಮುಖ್ಯ ಅಂಶವೆಂದರೆ ರಾಷ್ಟ್ರೀಯತೆಯೇ ಪ್ರಧಾನ ಭಾವವಾಗಿರುವ ಸಾಹಿತ್ಯವನ್ನು ತೆಗೆದುಕೊಂಡಾಗ ಅದರ ಸಾಹಿತ್ಯಿಕ ಮೌಲ್ಯವೇನು ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ವಸ್ತು ಒಂದೇ ಇದ್ದರೂ ಅದು ಎಷ್ಟರಮಟ್ಟಿಗೆ ಕವಿಯೊಬ್ಬನ ಅಂತಃಕರಣದಲ್ಲಿ ಕರಗಿ ಹೊಸ ಹುಟ್ಟು ಪಡೆಯುತ್ತದೆ ಮತ್ತು ಅದರ ಮೌಲ್ಯ ಮತ್ತು ಮಹತ್ವ ಎಷ್ಟು ಎಂಬುದು ತಿಳಿಯಬೇಕಾಗುತ್ತದೆ. ಹಾಗಾಗಿಯೇ ಕರ್ನಾಟಕದ ಕವಿಗಳ ಕವಿತೆಗಳ ಭಾವ ಏಕರೂಪದ್ದಲ್ಲ, ಬಹುರೂಪಿಯಾದದ್ದು ಎಂದು ತಿಳಿಯಬೇಕಾಗುತ್ತದೆ."[೫೦]

ಆಗಿನ ಎಲ್ಲಾ ಪ್ರಜ್ಞಾವಂತರ ಚಿಂತನೆ ಏಕಮುಖವಾಗಿ ಹರಿದಿತ್ತು. ದೇಶ, ಭಾಷೆಯ ಮರ್ಯಾದೆ ಉಳಿದು ಬೆಳೆಯಬೇಕು ಎಂಬ ಆದರ್ಶ ಎಲ್ಲರದಾಗಿತ್ತು. ಇದಕ್ಕೆ ನಿದರ್ಶನವಾಗಿ ಮೇಲಿನ ವಿಚಾರವಂತರ ಅಭಿಪ್ರಾಯದಂತೆ ರಾಷ್ಟ್ರಕವಿ ಕುವೆಂಪುರವರ ಅಭಿಪ್ರಾಯವನ್ನು ತಮ್ಮ 'ಮನುಜ ಮತ ವಿಶ್ವಪಥ'ದಲ್ಲಿ ಸ್ಪಷ್ಟಪಡಿಸಿದ್ದಾರೆ.

ಹನುಮಂತ ಗೋವಿಂದಕಟ್ಟಿಯವರು ಭಾಷೆಯೇ ದೇವಿ ಎಂದು, ಅಂತಹ ದೇವಿಯಲ್ಲಿ ಕನ್ನಡ ತಾಯಿಯೂ ಒಬ್ಬಳೆಂದು ಹೇಳಿರುವುದು 'ಕನ್ನಡ' ಕವಿತೆಯಲ್ಲಿ ಕಾಣುತ್ತದೆ.

ತನ್ನದು ಎಂಬುದು ಏನಿಲ್ಲೆ
ಕನ್ನಡ ನುಡಿಯಲಿ ಹುರುಳಿಲ್ಲೆ? ॥ಪ॥

ಮಾನವ ಜಾತಿಯ ಜೀವಾಳ ಭಾಷಾ ದೇವಿಯೊಳಿಲ್ಲೇನು?
ಏನಿದು? ಐಕ್ಯದ ನಿಜ ಬೀಜ, ತಾಯ್ನುಡಿಯೊಲವಿನೊಳಿಲ್ಲೇನು?
ಉನ್ನತ ಸಂಸ್ಕೃತಿಯೊಳ ಬೆಳಸು, ಕನ್ನಡ ತಾಯಿಗೆ ಇಲ್ಲೇನು? [೫೧]

ಈ ಪದ್ಯ ಬರೆದಿರಬಹುದಾದ ಸಂದರ್ಭವನ್ನು ಗಮನಿಸಿದರೆ ದೇಶೀ ಭಾಷೆಗಳ ಮೇಲೆ ಸಂಸ್ಕೃತದ ಪ್ರಭಾವ ಒಂದುಕಡೆಯಾದರೆ; ಈ ನೆಲನಾಳುತ್ತಿದ್ದ ಪರಕೀಯರ ಭಾಷೆಯ ಹಿಡಿತ ಇನ್ನೊಂದುಕಡೆ ದೇಶೀ ಭಾಷೆಗಳ ಸ್ವಂತಿಕೆಯನ್ನು ನಾಶ ಮಾಡಿ ಆ ಭಾಷೆಗಳಿಗೆ ನುಸುಳುವುದರ ಮೂಲಕ ತಮ್ಮ ಮಹತ್ವವನ್ನು ಹೆಚ್ಚಿಸಿಕೊಳ್ಳುತ್ತಿದ್ದವು. ಈ ನೆಲದಲ್ಲಿ ರಾಜಕೀಯವಾಗಿ ಬ್ರಿಟೀಷರ ಆಡಳಿತವನ್ನು ನಿರಾಕರಿಸುವಷ್ಟರ ಮಟ್ಟಿಗೆ, ಕನ್ನಡ ಭಾಷೆಯ ಮೇಲೆ ಇಂಗ್ಲೀಷ್ ಭಾಷೆಯ ಪ್ರಭುತ್ವವನ್ನು ನಿರಾಕರಿಸುವ ಮನೋಭಾವ ಕವಿಯದಾಗಿದೆ. ಈ ನೆಲದ ಭಾಷೆಯ ಅಸ್ತಿತ್ವಕ್ಕಾಗಿ ನಡೆದ ಹೋರಾಟದ ಜಾಗೃತ ದನಿ ಇಲ್ಲಿ ಕೇಳಿ ಬರುತ್ತದೆ.

ಆ ಕಾಲದ ಎಲ್ಲ ಕವಿಗಳ ಧೋರಣೆಯೂ ದೇಶ – ಭಾಷೆಯ ಮರ್ಯಾದೆ ಉಳಿಯಬೇಕು, ಬೆಳೆಯಬೇಕೆಂಬುದೇ ಆಗಿತ್ತು. ಹಾಗಾಗಿ ಬಿ.ಎಂ. ಶ್ರೀಯವರಾದಿಯಾಗಿ ಎಲ್ಲರ ಕವಿತೆಗಳಲ್ಲೂ ಇದನ್ನು ಕಾಣಬಹುದು. ಬಿ.ಎಂ.ಶ್ರೀ. ಆಂಗ್ಲ ಸಾಹಿತ್ಯದ ಸಾರ ಸವಿದು, ಕನ್ನಡಕ್ಕೆ ಅದನ್ನು ಕಸಿಗೊಳಿಸಿ ಹೊಸ ಚಿಂತನೆ ಹಾಗೂ ಬರಹಕ್ಕೆ ದಾರಿಮಾಡಿಕೊಟ್ಟ ಆಚಾರ್ಯ ಪುರುಷ. ನಮ್ಮ ಕನ್ನಡ ಸಂಸ್ಕೃತಿಯ ವೃಕ್ಷಕ್ಕೆ ಕೃಷಿ ಮಾಡಿ ನೀರೆರೆದು ಬೇರು ಬಿಟ್ಟುಕೊಂಡು ಭದ್ರವಾಗಿ ನಿಂತು ಬೆಳೆಕೊಡುವಂತೆ ಶ್ರಮಿಸಿದ ಕೃಷಿಕ. ಕನ್ನಡ ಭಾಷೆ ಅಥವಾ ಸಾಹಿತ್ಯದಲ್ಲಿ ಕಂಡ ಕೊರತೆಯನ್ನು 'ಇಂಗ್ಲೀಷ್ ಗೀತಗಳು' ಮೂಲಕ ನೀಗಿದ ಸಾಹಿತ್ಯಾಭಿಮಾನಿ. ಕನ್ನಡಿಗರಲ್ಲಿ ಕನ್ನಡತನದ ಕೆಚ್ಚು, ಮೆಚ್ಚು ಮೂಡಿಸಲು ಅಹರ್ನಿಷಿ ಹೆಣಗಿದ ಸ್ವಾಭಿಮಾನಿ. ತಮ್ಮ ಬರವಣಿಗೆಯಿಂದ ಭಾಷಣಗಳಿಂದ ನಾಡಿನುದ್ದಕ್ಕೂ ಕನ್ನಡದ ಕಂಪು ಹರಿಸಲು ಶ್ರಮಿಸಿದ ವ್ಯಕ್ತಿ. ". . . . . ನಮ್ಮ ದಿನದಲ್ಲಿ ನಮ್ಮ ಜನಾಂಗ ಎರಡು ಶಕ್ತಿಗಳ ಹೋರಾಟಕ್ಕೊಳಗಾಗಿದೆ. ಒಂದು, ಪಶ್ಚಿಮದಿಂದ ಬಂದ ಇಂಗ್ಲೀಷ್ ವಿದ್ಯೆಯ ಸೆಳೆತ; ಇನ್ನೊಂದು, ಮತ್ತೊಮ್ಮೆ ಚೇತರಿಸಿಕೊಂಡು ಏಳುತ್ತಿರುವ ನಮ್ಮ ಹಿರಿಯರ ಪುಣ್ಯಾರ್ಜನೆಯಾದ ಭಾರತ ವಿದ್ಯೆಯ ಹೆಮ್ಮೆ; ಈ ಹೋರಾಟದಲ್ಲಿ ಹೊರಗಿನದನ್ನು ಹೊರಕ್ಕೆ ತಳ್ಳಿ, ನಮ್ಮದನ್ನೇ ನಾವು ಮುಂದಕ್ಕೆ ಬೆಳೆಸಿಕೊಳ್ಳಬೇಕೆಂಬುವರು ಇದ್ದಾರೆ; ಹೆಚ್ಚುತ್ತಿದ್ದಾರೆ. ಚಿಕ್ಕಂದಿನಿಂದಲೂ ನನಗೆ ಬೇರೊಂದು ದರ್ಶನ ನೋಟ, ಧ್ಯೇಯ. ಅದೇನೆಂದರೆ, ಎರಡನ್ನು ರೂಢಿಸಿಕೊಳ್ಳುವುದು: ಎರಡು ವಿದ್ಯೆಗಳು, ಸಂಸ್ಕಾರಗಳೂ, ಶಕ್ತಿಗಳೂ ಒಂದಾಗಿ ಸಾಮರಸ್ಯಕ್ಕೆ ಬರಬೇಕೆನ್ನುವುದು. ಇಂಗ್ಲೀಷ್ ವಿದ್ಯೆ, ಸಾಹಿತ್ಯ ನನ್ನ ಜೀವನಕ್ಕೆ ರಸವನ್ನು ತುಂಬಿದೆ; ಕಡೆಗೆ ಭಾರತದಲ್ಲಿ, ಕರ್ನಾಟಕದಲ್ಲಿ ಪೂಜ್ಯ ಬುದ್ಧಿಗೆ ಅದೇ ಕಣ್ಣು ತೆರೆದು ಕೊಟ್ಟದ್ದಾಗಿದೆ. ನಾನು ಒಂದು ಕಡೆ ಹೇಳಿಕೊಡಿರುವಂತೆ

. . . .

ಕನ್ನಡ ನುಡಿ ನಮ್ಮ ಹೆಣ್ಣು
ನಮ್ಮ ತೋಟದಿನಿಯ ಹಣ್ಣು
ಪಡುವಲ ಕಡಲ ಹೊನ್ನು ಹೆಣ್ಣು.

ನಮ್ಮ ಮೈಯಲ್ಲಿ ಹುಟ್ಟಿದ ರೋಗ ನಮ್ಮದಾದರೂ ಕಳೆಯತಕ್ಕ ವಿಷ; ಹೊರಗಿನಿಂದ ಕಾಡಿನಿಂದ ತಂದ ಮೂಲಿಕೆ ಹೊರಗಿನದಾದರೂ ರಕ್ತಗತವಾಗಬೇಕಾದ ಅಮೃತ. ಕಿಟಕಿಗಳಿಲ್ಲದೆ ಉಸಿರುಗಟ್ಟಿ ಕೆಟ್ಟದ್ದಾಯಿತು; ಕಿಟಕಿಗಳನ್ನು ವಿಶ್ವದ ಎಲ್ಲಾ ದಿಕ್ಕುಗಳಲ್ಲಿಯೂ ತೆರೆದು ಹೊಸಗಾಳಿ, ಹೊಸಬೆಳಕು ತುಂಬಿ ಹೊಸ ಉಸಿರು ಹೊಮ್ಮಲಿ. ಪೂರ್ವ ಪಶ್ಚಿಮ ಎರಡು ಬೇರುಗಳೂ ಹೆಣೆದುಕೊಂಡು ಒಂದು ತಾಯಿ ಬೇರಾಗಿ ಭಾರತ ಮಹಾವೃಕ್ಷ ಆಕಾಶಕ್ಕೆ ಚಿಮ್ಮಲಿ"[೫೨] ಎಂದು ಹೊಸ ಚಿಂತನೆಗೆ ಪ್ರೇರಣೆ ನೀಡಿದ ವ್ಯಕ್ತಿ ಬಿ.ಎಂ.ಶ್ರೀ.

ಮೊದಲು ತಾಯ ಹಾಲ ಕುಡಿದು
ಲಲ್ಲೆಯಿಂದ ತೊದಲಿ ನುಡಿದು
ಕೆಳೆಯರೊಡನೆ ಬೆಳೆದು ಬಂದ
ಮಾತದಾವುದು?

. . . .

ಹೀಗೆ ನನಗೆ ಹಬ್ಬವಾಗಿ,
ಇನಿಯರಿಬ್ಬರನ್ನು ತೂಗಿ,
ಇವಳ ಸೊಬಗನವಳು ತೊಟ್ಟು
ನೋಡ ಬಯಸಿದೆ;
ಅವಳ ತೊಡಿಗೆ ಇವಳಿಗಿಟ್ಟು
ಹಾಡಬಯಸಿದೆ. [೫೩]

ಈ ಕವಿತೆಯಲ್ಲಿ ಬರುವ 'ನಮ್ಮ' ಎನ್ನುವಂತಹುದು ಸ್ವಾಭಿಮಾನದಿಂದ ಮೂಡಿ ಬಂದ ಶಬ್ದ. ತೋಟಕ್ಕೆ ಹೊಂದಿಕೊಂಡಂತೆ ಹೇಳುವುದಾದರೆ ತೋಟ ಒಂದು ದಿನದಲ್ಲಿ ಕಟ್ಟಿ ಬೆಳೆಸುವಂತಹುದಲ್ಲ. ಈ ಮಾತು ಭಾಷೆಗೂ ಅನ್ವಯಿಸುತ್ತದೆ. ಹಣ್ಣು ಎನ್ನುವ ಮಾತು ಪಕ್ವತೆಯನ್ನು ಸೂಚಿಸುವಂತದ್ದಾಗಿದೆ. ಇಲ್ಲಿ ಆಧುನಿಕರ ದೃಷ್ಟಿಯಲ್ಲಿ ನೋಡುವುದಾದರೆ ಹೆಣ್ಣು, ಹಣ್ಣು, ಕಣ್ಣು ಪ್ರಾಸ ಶಬ್ದಗಳಾಗಿಯೂ ಅರ್ಥ ಮಹತ್ವವನ್ನು ಪಡೆದುಕೊಳ್ಳುತ್ತವೆ. ಒಂದು ಹೆಣ್ಣು ಸಂತಾನದ ನಿರಂತರದ ಮುಂದುವರಿಕೆಗೆ ಕಾರಣವಾಗುವಂತೆಯೇ, ಅದಕ್ಕೆ ಹೊಂದಿಕೊಂಡಂತೆ ಕನ್ನಡ ನುಡಿಯೂ ನಿರಂತರವಾದದ್ದು. ಹಣ್ಣು ಆ ಭಾಷೆಗಿರುವ ಪರಿಪಕ್ವತೆಯನ್ನು ಸೂಚಿಸುತ್ತದೆ. ಕಣ್ಣು ಕೇವಲ ನೋಟವಾಗಿ ಬರದೆ ದರ್ಶನವಾಗಿ ಮೂಡಿದೆ. ನಂತರದ ಸಾಲಿನಲ್ಲಿ ಬರುವ 'ನಲಿಸಿ, ಕಲಿಸಿ, ಮನವೊಲಿಸಿ' ಕಾಂತಾ ಸಂಹಿತೆಯನ್ನು ತಿಳಿಸುತ್ತದೆ. ಹಬ್ಬ ಶಬ್ದ ಮುಂದುವರಿದು ಸಾಂಸ್ಕೃತಿಕ ಆಚರಣೆಯ ಪರಂಪರೆಯನ್ನು ಧ್ವನಿಸುತ್ತದೆ. ಇದೇ ಮಾತು ಭಾಷೆಯ ಪ್ರಾಚೀನ ಪರಂಪರೆಗೆ ಅನ್ವಯಿಸುತ್ತದೆ. ಎರಡು ಭಾಷೆಗಳನ್ನು ತೌಲನಿಕವಾಗಿ ನೋಡುವಲ್ಲಿ ದ್ವೈತದಲ್ಲಿ ಅದ್ವೈತ ಕಾಣುತ್ತದೆ.

ಬಿಎಂಶ್ರೀ ಬಹು ಭಾಷೆಗಳನ್ನು ಬಲ್ಲವರು ಕಲಿತವರು. ಅವರ ಒಲವು ಕನ್ನಡ ನಾಡುನುಡಿಯ ಪರವಾಗಿ ಇದ್ದರೂ ಕನ್ನಡದ ನುಡಿ ಬೆಳೆಯಬೇಕಾದರೆ ಇತರ ಭಾಷೆಯ ಸಾರಸ್ವತ ಸತ್ವವನ್ನು ಹೀರಿ ಬೆಳೆಯಬೇಕು ಎಂಬುದು ಅವರ ಹಂಬಲವಾಗಿತ್ತು. ಇದು ಬಿಎಂಶ್ರೀ ಯವರ ಹೇರಿಕೆಯ ಮಾತಲ್ಲ. ಕನ್ನಡಿಗರಿಗೆ ಕೋರಿಕೆಯ ರೂಪದ್ದಾಗಿದೆ. ಇಂಗ್ಲೀಷ್ ಸಾಹಿತ್ಯದಲ್ಲಿ ವಿಶ್ವ ಸತ್ವವೇ ಅಡಗಿದೆ ಎನ್ನುವವರು ಇದ್ದಾರೆ. ಅಂತಹ ಸತ್ವದ ಪರಿಚಯ ನೆಲನುಡಿಯಲ್ಲಿ ಏಕೆ ಆಗಬಾರದೆಂಬ

ಪ್ರಯತ್ನವಿದೆಯೇ ಹೊರತು ಇಂಗ್ಲೀಷ್ ಪರವಾದುದ್ದಲ್ಲ. ಇದು ಭಾಷಾ ಸೌಹಾರ್ದತೆಯ ಸಂಕೇತವಾಗುತ್ತದೆ. ಇದು ಕೊಳುಕೊಡುಗೆಯ ಧೋರಣೆಯೂ ಹೌದು.

ಹನುಮಂತ ಗೋವಿಂದಕಟ್ಟಿಯವರ 'ಕನ್ನಡ' ಕವಿತೆಯನ್ನು ಬಿಎಂಶ್ರೀ ಯವರ 'ಕಾಣಿಕೆ' ಕವಿತೆಯನ್ನು ಒಟ್ಟೊಟ್ಟಿಗೆ ಗಮನಿಸಿದಾಗ ಕವಿಗಳ ಅಭಿಪ್ರಾಯಗಳಲ್ಲಿ ವೈರುಧ್ಯ ಕಂಡುಬರುತ್ತದೆ.

ಇವರ ಮತ್ತೊಂದು ಕವಿತೆ 'ಕನ್ನಡ ತಾಯಿ ನೋಟ'ದಲ್ಲಿ ಕನ್ನಡ ನಾಡಿನ ಸೀಮೆ, ಸಿರಿಯ ಸೊಬಗು ಹಾಗೂ ಅದರ ಹಿರಿಮೆಯನ್ನು ವಿವರಿಸುತ್ತಾ ಹಂಪೆಗೆ ಬಂದಾಗ ಕನ್ನಡ ತಾಯಿ ನೋಟ ಕರುಳು ಇರಿಯುವಂತಿದೆ ಎಂದು ವಿವರಿಸುತ್ತಾರೆ.

ಹಿರಿಯರಿರ ಕೆಳೆಯರಿರ, ಅಕ್ಕತಂಗಿಯರಾ, ಅಣ್ಣತಮ್ಮಂದಿರಾ
ಒಸಗೆ ನುಡಿ ತಂದಿಹೆನು ನಾನೊಂದ, ತಾಯಿಂದ ಸಿರಿಯ ತಾಯಿಂದ –

. . . .

"ಯಾರವ್ವ ನೀ ತಾಯಿ? ಏತಕಿಂತೊಬ್ಬಳೇ ಕುಳಿತೆ ಕಾಡಿನಲ್ಲಿ?
ಏಕೆ ಮೊಗ ಬಾಡಿಹುದು, ಕಂದಿಹುದು, ನೊಂದಿಹುದು, ಕಾಂತಿಗುಂದಿಹುದು?"

ಕೇಳಣ್ಣ, ನಾನೊಬ್ಬ ಹಳೆಯ ಮುತ್ತೈದೆ – ಹಿರಿದಾಗಿ ಬಾಳಿದವಳೊಮ್ಮೆ: [೫೪]

. . . .

ಕನ್ನಡ ನಾಡು ನುಡಿಯ ಬಗ್ಗೆ ಶ್ರೀಯವರಲ್ಲಿದ್ದ ಪ್ರೀತ್ಯಾದರಗಳು ಅನುಪಮವಾದವು. ಕರ್ನಾಟಕದ ಏಕೀಕರಣ ಅವರ ಕನಸಾಗಿತ್ತು. ಇದರಿಂದ ಕನ್ನಡ ಮತ್ತೆ ತಲೆ ಎತ್ತುತ್ತದೆ ಎನ್ನುವ ಆತ್ಮ ವಿಶ್ವಾಸ ಅವರಲ್ಲಿದ್ದಿತು. ಇದು ಅವರ ಈ ಕನ್ನಡ ತಾಯಿ ನೋಟ ಕವಿತೆಯಲ್ಲಿ ವ್ಯಕ್ತವಾಗುತ್ತದೆ. ಇದು ವಿಜಯನಗರ ಸಾಮ್ರಾಜ್ಯದ ೬೦೦ನೇ ವರ್ಷದ ಉತ್ಸವದ ಸಂದರ್ಭದಲ್ಲಿ ಬರೆದ ಕವಿತೆ. ಇಡೀ ಕನ್ನಡ ನಾಡನ್ನು ಸುತ್ತಿ ಬಂದ ಕವಿಗೆ ತುಂಗಭದ್ರೆಯ ತೀರದಲ್ಲಿ ಒಂದು ಕಲ್ಲು ಹಾಸಿನ ಮೇಲೆ ತನ್ನ ಮಕ್ಕಳಿಗಾಗಿ ಚಿಂತಿಸೀ ಚಿಂತಿಸೀ ದಿಕ್ಕೆಟ್ಟವಳಂತೆ ಕುಳಿತಿದ್ದ ಕನ್ನಡ ತಾಯಿಯನ್ನು ಕವಿ ಕಂಡ ಸಂದರ್ಭದಲ್ಲಿ ಆಕೆ ಕೊರಗಿನ ಕಾರಣಗಳು ಕವಿ ಚಿಂತನೆಯ ರೂಪದಲ್ಲಿ ಹರಿದಿವೆ. ಈ ಚಿಂತನೆಯ ರೂಪ ಕರ್ನಾಟಕದ ಏಕೀಕರಣದ ಒಳಸುಳಿಯಾಗಿದೆ.

ಹಂಪಿಯಲ್ಲಿ ನೊಂದು ಬೆಂದಿರುವ ಕನ್ನಡ ತಾಯಿಯನ್ನು ಆಕೆಯ ಮಗನಂತೆ ಭೇಟಿ ಮಾಡಿ ಅವಳ ದುಃಖದ ಮೂಲ ತಿಳಿಯುತ್ತಾರೆ. ಅಕ್ಕಪಕ್ಕದ ಸೋದರಿಯರಿಗಿರುವ ಸುಖದ ಬಾಳು ನನಗಿಲ್ಲದೆ, ನನ್ನ ಮಕ್ಕಳಿಗಿಲ್ಲದೆ ಇರುವುದನ್ನು 'ಎಲ್ಲರೂ ಬಾಳುವೆಡೆ ನಮಗೆ ಸಾವೆ? ಎಲ್ಲರೂ ನಲಿವ ಕಡೆ ನಮಗೆ ನೋವೆ?' ಎಂಬ ಆಕೆಯ ನೋವಿನ ಪ್ರಶ್ನೆಗೆ, ನಿವಾರಣೆಯ ಮಾತನಿತ್ತು, ಸ್ವಾಭಿಮಾನದ ಬದುಕು ಬಾಳಲು ಆಶೀರ್ವದಿಸಿ ಶಕ್ತಿ ನೀಡೆಂದು ಕೇಳಿಕೊಳ್ಳುತ್ತಾರೆ. ಆ ಕಾಲದಲ್ಲಿ ಇಡೀ ಕನ್ನಡದ ಸ್ಥಿತಿಯೇ ಇದಾಗಿದ್ದು, ಕನ್ನಡಿಗರಲ್ಲಿ ತನ್ನತನದ ಶೂನ್ಯತೆಯ ತುಂಬಿ ಅಭಿಮಾನಿಗಳನ್ನಾಗಿ ಮಾಡುವ ಕಾರ್ಯವನ್ನು ಶ್ರೀಯವರು ಮಾಡಿದರು. ದುಃಖದ ತಾಯಿ ನಗುವಂತೆ,

ಮಂಕಾದ ತಾಯಿ ಅಭಿಮಾನ ತಾಳುವಂತೆ ಭರವಸೆಯಿತ್ತು ಒಗ್ಗಟ್ಟಿನ ಬಾಳ್ಮೆಯ ಭರವಸೆಯೀಯುತ್ತಾರೆ.

ಭಾಷೆ, ಸಂಸ್ಕೃತಿಯ ಬೆಳವಣಿಗೆ ಕೇವಲ ಒಬ್ಬರಿಂದ ಸಾಧ್ಯವಿಲ್ಲ. ಇದು ಸಾಮೂಹಿಕ ಹೊಣೆಗಾರಿಕೆಯಿಂದ ಮಾತ್ರ ಸಾಧ್ಯ ಅದು ತೋರಿಕೆಯ ಮಾತಾಗಬಾರದು. ಅಭಿಮಾನದ ಆಚರಣೆಯಾಗಬೇಕು. ಆಗ ಎಲ್ಲರಲ್ಲೂ ನಾಡಾಭಿಮಾನ ಉಂಟಾಗುತ್ತದೆ.

"ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ,
ಕನ್ನಡ ತಾಯ್ ಗೆಲ್ಗೆ, ಬಾಳ್ಗೆ"[೫೫]

ಒಂದು ಕಾಲಕ್ಕೆ ಸಂಸ್ಕೃತ, ಮತ್ತೊಂದು ಕಾಲಕ್ಕೆ ಇಂಗ್ಲೀಷ್, ನಂತರ ಹಿಂದಿ ಭಾಷೆಗಳ ದಬ್ಬಾಳಿಕೆಗೆ ಸಿಕ್ಕಿ ಕನ್ನಡ ಭಾಷೆ ನಲುಗಿ ಹೋಗಿದ್ದ ಸಂದರ್ಭವನ್ನು ಬಿಎಂಶ್ರೀಯವರು ಕಂಡು, ತಮ್ಮ ಅನೇಕ ಕವಿತೆಗಳಲ್ಲಿ ಕನ್ನಡ ಭಾಷೆಯ ಹಿರಿಮೆಯನ್ನು ಮನವರಿಕೆ ಮಾಡಿಕೊಡುತ್ತಲೆ, ಅಂತಹ ಭಾಷೆಯನ್ನು ನಾವು ಸದಾ ಬಳಸಿ ಬೆಳೆಸಬೇಕೆಂದು ಕರೆಕೊಡುತ್ತಾರೆ. ಇದೇ ರೀತಿಯಲ್ಲಿ ಕನ್ನಡವನ್ನು, ಕರ್ನಾಟಕವನ್ನು ತಾಯಿಯೆಂದು ಭಾವಿಸಿ ಕನ್ನಡಿಗರಲ್ಲಿ ಅಭಿಮಾನ ಮೂಡಿಸುವ ಕಾರ್ಯ ಮಾಡಿದ್ದಾರೆ:

ಏರಿಸಿ, ಹೇರಿಸಿ, ಕನ್ನಡದ ಬಾವುಟ।
. . . .
ತಾನುಳಿಯೆ ನೀನುಳಿದೆ
ತಾಯಳಿಯೆ, ನೀನಳಿವೆ

. . . .
ಬಾಳು ಎಲೆ ಬಾವುಟ; ಏಳ್ ಕನ್ನಡ ತಾಯ್
ಆಳ್ ಕನ್ನಡ ತಾಯ್, ಬಾಳ್ ಕನ್ನಡ ತಾಯಿ
ಕನ್ನಡಿಗರೊಡತಿ ಓ ರಾಜೇಶ್ವರಿ.[೫೬]

ಆಯಾ ನಾಡಿನ ಧ್ವಜ ಆಯಾ ನಾಡಿನ/ದೇಶದ ಅಂತಃಶಕ್ತಿ, ಸ್ವಾಭಿಮಾನದ ಕುರುಹು. ಅಂತಹ ಕನ್ನಡ ಬಾವುಟ ಹಾರಾಡಬೇಕೆಂಬುದು ಕವಿಯ ಹಂಬಲ. ಕವಿಯ ದೇಶಾಭಿಮಾನಕ್ಕೆ ಇದೊಂದು ನಿದರ್ಶನ.

ಭೂಮಿಯನ್ನು ದೇವಿಗೆ ಹೋಲಿಸಿರುವ ಬಿ.ಎಂ.ಶ್ರೀ.ಯವರ ಕವಿತೆ 'ಶುಕ್ರಗೀತೆ'

. . . .
'ಹಸುರ ಸೊಬಗ ತೊಟ್ಟು, ಹಾಡುತ್ತ ಬಾನ್ ಬಯಲೊಳಾಟವಾಡುತ್ತ
ಸೌಂದರ್ಯದಿಂ ತೀವಿ, ಭೂದೇವಿ ಬೆಳಗಿದಳು ಜೀವ ಪರಮಾತ್ಮರಿಂ ತೊಳಗಿ.[೫೭]

ಇದೊಂದು ಸುಂದರ ಕಲ್ಪನೆಯಿಂದ ಕೂಡಿದ ಕವಿತೆ. ಜೀವ ಪರಮಾತ್ಮರಿಂದ ಕೂಡಿರುವ ಈ ಭೂದೇವಿ ಕಂಡು ದೇವತೆಗಳಾದಿಯಾಗಿ ಋಷಿಮುನಿಗಳು ಆನಂದ ತುಂದಿಲರಾಗಿ ಕುಣಿದರು ಎಂಬುದು ಕವಿಯ ಕಲ್ಪನೆ. ಜೀವ ಜಗತ್ತು ಎಲ್ಲರ

ಆನಂದಕ್ಕಾಗಿ ಸೃಷ್ಟಿಯಾಗಿದೆಯೇ ಹೊರತು ಹಿಂಸೆ, ಅಸೂಯೆಗಲ್ಲ ಎಂಬುದನ್ನು ಮಾನವರು ಅರ್ಥಮಾಡಿಕೊಂಡರೆ ಬದುಕು ಎಷ್ಟು ಸಹ್ಯವಾದೀತು ಎಂಬ ವಿವೇಕದ ಆದರ್ಶ ಇಲ್ಲಿದೆ.

ಬಿಎಂಶ್ರೀಯವರಂತೆ ಆ ಕಾಲದ ಹಿರಿಯರಾದ ಗೋವಿಂದ ಪೈಯವರ 'ಕನ್ನಡಿಗ ತಾಯಿ' ಎನ್ನುವ ಕವಿತೆಯಲ್ಲಿ ಕನ್ನಡ ನಾಡು – ನುಡಿಯನ್ನು ಮಾತೆಯಾಗಿ ದರ್ಶಿಸಿರುವುದನ್ನು ಕಾಣಬಹುದು.

ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೇ
ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೇ
ಚಳುಕ್ಯ ರಾಷ್ಟ್ರಕೂಟರೆಲ್ಲಿ
ಹೊಯ್ಸಳ ಕಳಚೂರ್‍ಯರೆಲ್ಲಿ
ವಿಜಯನಗರ ಭೂಪರು
ಆಳ್ದರಿಲ್ಲಿಯಲ್ಲಿದೆಲ್ಲಿ ತಾಯೆ ಮೇಣಲೂಪರು? [೫೮]

ಹಿಂದಿನ ಪರಂಪರೆಯ ವೈಭವದ ನೆನಪುಗಳು ಪ್ರಸ್ತುತ ಪರಿಸ್ಥಿತಿಯೊಡನೆ ತಳಕು ಹಾಕಿಕೊಂಡು ಅದರಲ್ಲುಂಟಾಗಿರುವ ಅರೆಕೊರೆಗಳನ್ನು ಕುರಿತು ಚಿಂತಿಸುತ್ತಲೇ ಮತ್ತೆ ಆ ವೈಭವ ಈ ನಾಡಿನಲ್ಲಿ ನೆಲಸಬೇಕು ಎನ್ನುವ ಕವಿಯ ದನಿ ಜನಮನದ ಪ್ರತಿಧ್ವನಿಯಾಗಿ ಹೊರಹೊಮ್ಮಿದೆ.

ಕನ್ನಡ ನಾಡಿನ ವೈಭವ, ಇತಿಹಾಸ, ಪರಂಪರೆ, ಸಂಸ್ಕೃತಿಯನ್ನು ವಿಶ್ಲೇಷಿಸುವ ಮೂಲಕ 'ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ' ಎಂಬ ಬಿನ್ನಹವಿಲ್ಲಿದೆ.

ಕಯ್ಯಾರ ಕಿಞ್ಞಣ್ಣ ರೈ ರವರ 'ಬೆಂಕಿ ಬಿದ್ದಿದೆ ಮನೆಗೆ' ಕವನ ಕನ್ನಡಕ್ಕೊದಗಿರುವ ಅಪಾಯವನ್ನು ಸೂಕ್ಷ್ಮವಾಗಿ ಹೇಳುವ ಕವನವಾಗಿದೆ.

ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ ॥
ಎಲ್ಲರೂ ಎದ್ದೆದ್ದು ಓಡಿ ಬನ್ನಿ
. . . .
ಓ ಬನ್ನಿ ಬನ್ನಿ!
ಬೆಂಕಿ ಬಿದ್ದಿದೆ ಮನೆಗೆ.
ಜಯತು ಭುವನೇಶ್ವರಿ, ರಾಜರಾಜೇಶ್ವರಿ,
ಸಿರಿಗನ್ನಡಂ ಗೆಲ್ಗೆ ಶಿವೆ ಶಾಂಕರಿ!
ಏಳ್ಗೆ ಕರ್ನಾಟಕಂ! ಬಾಳ್ಗೆ ಕರ್ನಾಟಕಂ
ಆಳ್ಗೆ ಕರ್ನಾಟಕಂ! ಜಗದೀಶ್ವರೀ! [೫೯]

ಈ ಸಾಲುಗಳಲ್ಲಿ ಕನ್ನಡದ ಬಗೆಗಿನ ಕಳಕಳಿಯನ್ನು ಕಾಣಬಹುದಾಗಿದೆ. ಇಲ್ಲಿ ಕವಿ ಅಂತಿಮದಲ್ಲಿ ಕರ್ನಾಟಕ ತಾಯಿ ಭುವನೇಶ್ವರಿಯನ್ನು ರಾಜರಾಜೇಶ್ವರಿಯಾಗಿ ಕಂಡು ಆಕೆಯನ್ನು ಶಂಕರಿ, ಶಿವೆ ಎಂದು ಹೇಳಿದ್ದಾರೆ. ಆದರೆ ಅಂತಹ ತಾಯಿಗೆ ಗಂಡಾಂತರ ಒದಗಿರುವುದು ಎಂಥ ವಿಪರ್ಯಾಸ ಎನಿಸುತ್ತವೆ. ಈ ತಾಯಿ ಜಗದೀಶ್ವರಿ

ಆದರೆ ಕನ್ನಡ ನಾಡನ್ನು ಆಳುವ ಚೈತನ್ಯ ಕಳೆದುಕೊಂಡಿದ್ದಾಳೆ ಎಂಬ ವಿಷಾದದ ಭಾವ ಕೊನೆಗೆ ಉಳಿಯುತ್ತದೆ.

ಪ್ರಾದೇಶಿಕ ಸಂಸ್ಕೃತಿಯ ವೈಭವವನ್ನು ಹೇಳುವ ಮೂಲಕ ರಾಷ್ಟ್ರೀಯ ವಾದ ಬಿತ್ತಿದ ಕವಿಗಳಲ್ಲಿ ಪಂಜೆಯವರು ಒಬ್ಬರು. ಅವರ ಹುತ್ತರಿ ಹಾಡು ಮತ್ತು ಗೋವಿಂದ ಪೈಗಳ 'ತೌಳವ ಮಾತೆ' ಮುಖ್ಯವಾದವು.

'ಹುತ್ತರಿ ಹಾಡು' ಕೊಡಗಿನ ವಿಶಿಷ್ಟತೆಯನ್ನು ಪರಿಚಯಿಸುವ ಕವಿತೆಯಾದರೆ; ಪೈಯವರ 'ತೌಳವ ಮಾತೆ' ತುಳು ನಾಡಿನ ವಿಶೇಷತೆಯನ್ನು ವರ್ಣಿಸುವ ಕವನವಾಗಿದೆ. 'ಜಯ ಜಯ ತೌಳವ ಮಾತೆ' ಎಂದು ಆರಂಭವಾಗುವ ಕವನ ತುಳುನಾಡಿನ ಸಂಸ್ಕೃತಿಯ ಮುಖ್ಯಾಂಶಗಳನ್ನು ನೀಡುತ್ತದೆ. ಪರಶುರಾಮನ ಕೊಡಲಿಯ ಘಾತಕ್ಕೆ ಗುರಿಯಾದ ಕಡಲು ಅತ್ತ ಸರಿದು ಒಡ ಮೂಡಿದ ಈ ಎಡೆ ಭಾರತ ಮಾತೆಯ ತೊಡೆಯ ಒಂದು ಭಾಗವೆಂದು ಕವಿ ಹೇಳುತ್ತಾರೆ. ಈ ನಿಲುವಿನ ಮೂಲಕ ತುಳುನಾಡಿನ ತಾಯಿಯನ್ನು ವರ್ಣಿಸುತ್ತಾರೆ.

ಬೇಂದ್ರೆಯವರು ವಿಶ್ವ ಮಾತೆಯ ದರ್ಶನದ ಬೆಳಕಿನಲ್ಲಿ ಜೀವನವನ್ನು ದರ್ಶಿಸುವ ಆಶಯ ಹೊಂದಿದ್ದಾರೆ.

> ಅರಿವಿನ ಆನಂದ ಪಡೆಯಲು
> ಆ ಆನಂದದಲ್ಲಿ ನಡೆಯಲು – ಈ ಜೀವ
> ನಿರಂತರವಾಗಿ ಉನ್ಮುಖವಾಗಿದೆ; ಸರ್ವತೋಮುಖವಾಗಿದೆ.
> ನಿನ್ನ ಬೆಳಕಿನಲ್ಲಿ ನನ್ನನ್ನು ಬದುಕಿಸು ತಾಯಿ.
> ಓ ಮಹಾಮಾತೆ ಅದಿತಿ – ಶಕ್ತಿ [೬೦]

ಎಂದು ಪ್ರಾರ್ಥಿಸಿದ್ದಾರೆ. ಇಲ್ಲಿನ 'ಬೆಳಕು' ಪ್ರಕೃತಿಯ ಬೆಳಕನ್ನು ಒಳಗೊಂಡಂತೆ ಅರಿವಿನವರೆಗೂ ವಿಸ್ತರಿಸುತ್ತದೆ. ಬಿಎಂಶ್ರೀಯವರ ಅನುವಾದ ಕವಿತೆ 'ಕರುಣಾಳು ಬಾ ಬೆಳಕೆ' ಹಾಗೂ 'ರಕ್ಷಿಸು ಕರ್ನಾಟಕ ದೇವಿ' ಕವಿತೆಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

"ಅತ್ಯಂತ ಅಮೂರ್ತವಾದ ವಿಶ್ವವ್ಯಾಪಿಯಾದ ಮಾತೃ ತತ್ವದಿಂದ ಮೊದಲಾಗಿ ಅತ್ಯಂತ ಮೂರ್ತವಾದ ಜಗನ್ಮಾತೆಯವರೆಗೆ ಕವಿ ತನ್ನ ಸ್ಫೂರ್ತಿಸ್ಥಾನಗಳನ್ನು ಒಂದು ಸಮನ್ವಿತ ದರ್ಶನವಾಗಿ ಕಂಡಿರುವುದು ಮತ್ತು ಅದಕ್ಕೆ ಅನುಗುಣವಾಗಿ ಅವನ ಕೃತಿಗಳಲ್ಲಿ ಅದು ವಿಧವಿಧವಾದ ಆಕಾರ ತಾಳಿರುವುದು ಅವನ ವಿಶ್ವಪ್ರಜ್ಞೆಗೆ ನಿದರ್ಶನವಾಗಿದೆ"[೬೧] ಎಂಬ ರಂಶ್ರೀ ಮುಗಳಿಯವರ ಮಾತು ಸಮರ್ಪಕವಾದುದಾಗಿದೆ.

ಬೇಂದ್ರೆ ಕನ್ನಡ ಭಾಷೆಯನ್ನು ಆರಾಧಿಸಿ, ಅದರ ವೈವಿಧ್ಯತೆಯ ಸಾಧ್ಯತೆಯನ್ನು ತೋರಿಸುತ್ತಲೆ ಕನ್ನಡ ತಾಯಿಯನ್ನು ಸ್ಮರಿಸಿದ್ದಾರೆ. ಹಾಗೆಯೇ ಕನ್ನಡಿಗರನ್ನು ಎಚ್ಚರಿಸಿದ್ದಾರೆ. ಅವರ ಬದುಕು, ಬರಹದಲ್ಲಿ ಕನ್ನಡವೇ ಮನೆ ಮಾಡಿಕೊಂಡಿತ್ತು. ಇದಕ್ಕೆ ಇವರ ಕವಿತೆ 'ಕನಸಿನೊಳಗೊಂದು ಕಣಸು' ಕವಿತೆ ನಿದರ್ಶನವಾಗಿದೆ. ಸಂವಾದ ರೂಪದಲ್ಲಿರುವ ಈ ಕವಿತೆಯಲ್ಲಿ ಹಿಂದಿನ ಕನ್ನಡದ ವೈಭವವನ್ನು, ಅದರ ಹಿರಿಮೆ

ಗರಿಮೆಯನ್ನು ಬಿಂಬಿಸುತ್ತಲೇ, ಇಂದಿನ ದುಸ್ಥಿತಿಯನ್ನು ತಿಳಿಸುತ್ತ ಇನ್ನಾದರೂ ಈ ತಾಯ ಮಕ್ಕಳು ಎಚ್ಚೆತ್ತುಕೊಳ್ಳಬೇಕೆಂಬುದನ್ನು ಹೇಳುತ್ತಾರೆ.

"ಯಾರು ನಿಂದವರಲ್ಲಿ ತಾಯಿ" ಎಂದೆ.
"ಯಾರು ಕೇಳುವರೆನಗೆ ಯಾಕೆ ತಂದೆ?"
. . . .
"ನೀನಾರ ಮನೆಯವಳು ಮುತ್ತೈದೆ ಹೇಳು"
"ನಾನಾರ ಮನೆಯವಳೊ ಬಯಲನ್ನೆ ಕೇಳು"
"ಹಿಂಜರಿವ ಅಂಜಿಕೆಯು ಹಿಡಿದಿಹುದು ಕೈಯ್ಯ"
ಮುಂಜರಿವ ಹುರುಪಿನೊಡ ಮುಂದೆ ಬಾರಯ್ಯ"
"ಚಂಡಿ ಚಾಮುಂಡಿ ಪೇಳ್ ಬೇಕಾದುದೇನು?"
ಗಂಡಸಾದರೆ ನಿನ್ನ ಬಲಿಕೊಡುವೆಯೇನು? [೨]

ಇದು ಸಂವಾದ ರೂಪದ ಕವಿತೆಯಾಗಿದ್ದು, ಕವಿಯ ವ್ಯಕ್ತಿತ್ವ, ಇಮ್ಮೊಗದ ಕಾರ್ಯವನ್ನು ನಿರ್ವಹಿಸಿದೆ. ಕವಿಯ ಮನಸ್ಸಿನಲ್ಲಿ ಉದ್ಭವಿಸಬಹುದಾದ ಪ್ರಶ್ನೆಗಳು ಸಹಜವಾಗಿ ಜನಮನದಲ್ಲಿ ಉದಯಿಸುವ ಪ್ರಶ್ನೆಗಳಾಗಿದ್ದು ಅದಕ್ಕೆ ಬರುವ ಉತ್ತರಗಳು ಕವಿ ಜನತೆಗೆ ನೀಡುವ ಉತ್ತರವಾಗಿವೆ.

ಇದೇ ಬೇಂದ್ರೆಯವರ ಕವನ 'ನೀವಾರಲಾ' ಧ್ವನ್ಯಾರ್ಥದಲ್ಲಿದೆ. ಈ ಕವನದಲ್ಲಿ ನಾಡು–ನುಡಿ–ಜನವನ್ನು ಎಚ್ಚರಿಸುವುದರೊಂದಿಗೆ ಒಂದುಗೂಡಿಸುವ ಕಾಳಜಿ ಇದೆ.

ನೀವಾರಲಾ ನೀವಾರಲಾ ನೀವಾರಲಾ!
ಯಾರೋ ಯಾರೋ. . . . . .
. . . .
ನೀವು ತುಳಿವೀ ತೊಡೆಗಳೋ
ನಿಮ್ಮೆಡೆಗಳೋ!
ನೀವು ಆಡುವ ಬಾಯಿಯೋ
ಅದೆ ತಾಯಿಯೋ!
. . . .
ಬನ್ನಿ ತಾಯಿಯ ಜೀತಕೆ
ಮೆಟ್ಟಿ ನಡೆದುದೆ ಕನ್ನಡ
ಮುಟ್ಟಿ ನುಡಿದುದೆ ಕನ್ನಡ [೩]

ಇಲ್ಲಿ ಬಳಸಿರುವ 'ಜೀತ' ಶಬ್ದ ಇಂದಿನ ಪರಿಸ್ಥಿತಿಯಲ್ಲಿ ಸಾಕಷ್ಟು ವಾದ ವಿವಾದಗಳಿಗೆ ಎಡೆ ಮಾಡಿಕೊಟ್ಟು ಸಾಮಾಜಿಕ ನೆಲೆಯಲ್ಲಿ ಚರ್ಚಿತವಾಗುತ್ತಿದ್ದು, ಬಹುಜನರು ಕೆಲವೇ ಜನರ ಬಯಕೆ, ಬಂಡವಾಳಗಳಿಗಾಗಿ ಬೆವರು ಸುರಿಸುವ ವ್ಯವಸ್ಥಾರೂಪವಾಗಿದ್ದು, ಅಮಾನವೀಯವಾದುದ್ದಾಗಿದೆ. ಆದರೆ ಬೇಂದ್ರೆಯವರು ತಾಯಿ ಮತ್ತು ಜೀತ ಎರಡೂ ಶಬ್ದಗಳನ್ನು ಬಳಸುವುದರ ಮೂಲಕ ಎರಡು ವರ್ಗಗಳ ಪ್ರಾತಿನಿಧ್ಯವನ್ನು ಎತ್ತಿ ಹಿಡಿಯುವ ಹಾಗೆ ಕಂಡುಬರುತ್ತದೆ. ಇಲ್ಲಿ ಮನುಷ್ಯ ಸಂಬಂಧಗಳನ್ನು ಮೀರಿದ ಸಾಮಾಜಿಕ ಸಂದರ್ಭಗಳಿಗೆ ಪ್ರಾಧಾನ್ಯತೆ ನೀಡಿದಂತಾಗಿದೆ. ಇಂತಹ ಕಡೆಗಳಲ್ಲಿ ನಾವು ಕಂಡುಕೊಳ್ಳಬೇಕಾದುದ್ದು ಕರುಳು ಬಳ್ಳಿಯ ಆಪ್ತತೆಗಳನ್ನು.

ತಾಯಿ ತನ್ನ ಮಕ್ಕಳಿಂದ ನಿರೀಕ್ಷಿಸುವುದು ಪ್ರೀತ್ಯಾದರಗಳನ್ನು. ಹಾಗೆಯೇ ಬೆಳೆದ ಮಕ್ಕಳು ತಾಯಿಯಿಂದ ನಿರೀಕ್ಷಿಸುವುದು ಆಕೆಯ ಮಾತೃ ವಾತ್ಸಲ್ಯವನ್ನು. ಹೀಗೆ ಪರಸ್ಪರರು ಹಿತ ಚಿಂತನೆಯನ್ನೇ ಮಾಡುತ್ತಿರುತ್ತಾರೆ. ಇಂತಹ ಭಾವನಾತ್ಮಕ ಸಂಬಂಧದಲ್ಲಿ ವರ್ಗ ಸಂಘರ್ಷಕ್ಕೆ ಎಡೆಮಾಡಿಕೊಡಬೇಕಾದ ಜೀತ ಶಬ್ದ ನುಸುಳಿದ್ದಾದರೂ ಹೇಗೆ?

ಕನ್ನಡವು ಕನ್ನಡಿಗರ ಸರ್ವಾಂಗದಲ್ಲೂ ಸಂಪನ್ನವಾಗಿ ಇರುವುದನ್ನು ವಿವರಿಸುವುದರೊಂದಿಗೆ ಅದು ಜನಸಾಮಾನ್ಯರ ಕನ್ನಡ ಎಂದು ಸಾರಿದ್ದಾರೆ. ಭಾಷೆ ಹಾಗೂ ದೇಶದ ಬಗ್ಗೆ ನಿರಭಿಮಾನಿಗಳಾಗಿರುವ ಕನ್ನಡಿಗರನ್ನು ಕುರಿತು ಹೇಳಿದ ಮಾತುಗಳಾಗಿವೆ.

ಕರ್ನಾಟಕವನ್ನು ಕುರಿತು ರಚಿಸಿದ ಕವಿತೆಗಳಲ್ಲಿ 'ಒಂದೇ ಕರ್ನಾಟಕ' ಮುಖ್ಯವಾದುದು. ಈ ಕವಿತೆ ಬೇಂದ್ರೆಯವರ ಅಖಂಡ ಕರ್ನಾಟಕದ ನಿಲುವನ್ನು ಸಾರುತ್ತದೆ.

ಒಂದೇ ಒಂದೇ ಒಂದೇ ಕರ್ನಾಟಕ ಒಂದೇ ॥ ಪಲ್ಲ ॥
ಇಂದೇ ಮುಂದೇ ಎಂದೇ ಕರ್ನಾಟಕ ಒಂದೇ
ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ
. . . .
ಇಲ್ಲಿಯ ಜನ – ಮನ–ಭಾಷೆಯು ಕನ್ನಡವದು ಒಂದೇ
. . . .
ಕನ್ನಡವೆಂದೂ ಒಪ್ಪದು ಕರ್ನಾಟಕನಿಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ. [೬೪]

ಇಲ್ಲಿನ 'ಒಂದೇ' ಪದ ಅಖಂಡತೆಯನ್ನು ಸೂಚಿಸುತ್ತದೆ. ಇದು ಮುಂದೆಯೂ ಹೀಗೇ ಇರಬೇಕು ಎಂಬುದು ಕವಿಯ ಆಶಯ. ಆಶಯದ ವಿಸ್ತೃತ ರೂಪವಾಗಿ 'ಜಗದೇಳಿಗೆ' ಶಬ್ದ ಭಾವಾವೇಷದಿಂದ ಬಂದಿರಬಹುದಾದರೂ ಇತರ ಭಾಷೆಗಳೊಂದಿಗೆ ಕನ್ನಡದ ಭಾಷೆ ಮತ್ತು ಅಲ್ಲಿಯ ಕನ್ನಡಿಗರ ವಿಶಾಲ ಮನೋಭಾವವನ್ನು ಒಳಗೊಂಡಂತಿದೆ. ವಿಶ್ವದ ವಿವಿಧ ಭಾಷೆಗಳಿಂದ ಸಾರ ಸಂಪತ್ತನ್ನು ಕನ್ನಡ ಭಾಷೆಗೆ ತಂದುಕೊಳ್ಳುವುದರ ಮೂಲಕ ಭಾಷೆಯ ಕಸುವನ್ನು ಹೆಚ್ಚಿಸಿಕೊಳ್ಳಬೇಕು. ಹೀಗೆ ಹೆಚ್ಚಿಸಿ ಕೊಳ್ಳುವುದರೊಂದಿಗೆ ವಿಶ್ವ ಭಾಷೆಗಳ ನಡುವೆ ತಲೆಯೆತ್ತಿ ನಿಲ್ಲುವ ತನ್ನ ತನವನ್ನು ಬೆಳೆಸಿಕೊಳ್ಳಬೇಕೆಂಬ ಕನಸು ಕವಿಯದಾಗಿದೆ. ಆಡುವ ಮಾತನ್ನು ಗಮನಿಸಿದರೆ ಕನ್ನಡ ಎಂದು ಗುರುತಿಸಿದರೂ ಆಯಾ ಪ್ರದೇಶದ ಜನ ತಮ್ಮದೇ ಆದ ಭಾಷಾ ವೈಶಿಷ್ಟ್ಯವನ್ನು ಪ್ರಾದೇಶಿಕವಾಗಿ ರೂಢಿಸಿಕೊಂಡಿರುತ್ತಾರೆ. ಇವೆಲ್ಲವುಗಳ ಒಳಸತ್ವವಾಗಿ ಕನ್ನಡ ನೆಲೆಗೊಳ್ಳಬೇಕು.

ಕಡೆಯ ಸಾಲಿನಲ್ಲಿ ಪುನವ್ಯಕ್ತಿಗೊಳ್ಳುವ 'ಒಂದೇ' ಎಂಬುವ ಶಬ್ದ ಅಖಂಡತೆ ಹೌದು ಎಂಬುದನ್ನು ಧ್ವನಿಸುತ್ತದೆ. ಜೊತೆಗೆ ಅಖಂಡತೆಯನ್ನು ಪಡೆದುಕೊಂಡಿದೆಯೇ ಎಂಬ ಅನುಮಾನವನ್ನು ಬಿಚ್ಚಿಡುತ್ತದೆ.

ಕನ್ನಡಿಗರ ಪ್ರಗತಿ ಕನ್ನಡಿಗರಿಂದಲೇ ಆಗಬೇಕು. ಅವರ ಬಾಳಿನ ಶ್ರೇಷ್ಠತೆ ಕನ್ನಡದಿಂದಲೇ ಹೊರತು ಅನ್ಯಭಾಷೆಗಳಿಂದಲ್ಲ ಎಂಬುದು ಕವಿಯ ನಂಬಿಕೆ. ಅದನ್ನು 'ಕೇಳಿ ನುಡಿ', ಕಂಡು ನಡೆ' ಕವಿತೆಯಲ್ಲಿ ಬಿಂಬಿಸಿದ್ದಾರೆ. ಹಾಗಾಗಿ ಕನ್ನಡಿಗರು ಅಭಿಮಾನಧನರಾಗಿ ಕನ್ನಡದ ಹಿರಿಮೆಯೊಂದಿಗೆ ಬಾಳಿ ಬದುಕುವ ಆದರ್ಶವಂತರಾಗಬೇಕೆಂಬುದು ಕವಿಯ ಆಶಯ.

ಕೇಳಿ ನುಡಿ, ಕಂಡು ನಡೆ
ಓ ಕನ್ನಡ ಕಂದಾ!
ಇದೆ ಬಾಳಿನಾ ಅಂದಾ
ದಾಸರಾಗ ಕಾಲದಲ್ಲಿ
ಶರಣ – ವಚನ – ತಾಲದಲ್ಲಿ
ತೀರ್ಥಂಕರ ಉದಯವು
ಅದೆ ಕನ್ನಡ ಹೃದಯವು.
. . . .
ಇದೆ ಕನ್ನಡ ಧ್ರುವಪದ
ಭಾರತದೀ ಜನಪದ. [೬೫]

ಇದು ಜನ್ಮವಿತ್ತ ತಾಯಿ ತನ್ನ ಮಗುವಿನಲ್ಲಿ ಕಾಣಬೇಕೆಂದು ಆಸೆ ಪಡುವಂತ ನೆಲೆಯಲ್ಲಿ ಕವಿ ನಿಂತು ಹೇಳಿದಂತಿದೆ. ಇಲ್ಲಿ ಏಕ ಕಾಲದಲ್ಲಿ ಭಾರತ ಹಾಗೂ ಕರ್ನಾಟಕದ ಪ್ರಸ್ತಾಪವಿದೆ. ಇದು ಕುವೆಂಪುರವರ 'ಜೈ ಭಾರತ ಜನನಿಯ ತನುಜಾತೆ' ಕವಿತೆಯನ್ನು ನೆನಪಿಸುತ್ತದೆ.

ನಾಡು ನುಡಿ ಬಗ್ಗೆ ಅಭಿಮಾನ ಪೂರ್ವಕವಾಗಿ ಮಾತನಾಡುವ ಕವಿ ಕುವೆಂಪು ಅನ್ಯರು ತನ್ನ ನುಡಿ ಬಗ್ಗೆ ತಾತ್ಸಾರದಿಂದ ಮಾತನಾಡುವುದನ್ನು ಕಂಡಾಗ ತಿರುಗಿ ಬೀಳುತ್ತಾರೆ. ಆ ಸಂದರ್ಭದಲ್ಲಿ ಭಾಷೆ ಅಥವಾ ನಾಡನ್ನು ತಾಯಿಯೆಂದೇ ಭಾವಿಸಿ ಬಿಂಬಿಸಿದ್ದಾರೆ. 'ಕನ್ನಡ ಕಾವ್ಯದಲ್ಲಿ ರಸವುಕ್ಕುತ್ತಿಲ್ಲ. ಬರೆ ಬಂಡೆಗಳಂತೆ ಕನ್ನಡ ಕವಿಗಳು' ಎಂದು ಅನ್ಯಭಾಷೆ ಮತ್ತು ಆ ಕವಿಗಳನ್ನು ಹೊಗಳುವವರ ಬಗ್ಗೆ ಬೇಸರಗೊಂಡ ಕವಿ, ನಿಮ್ಮ ಮಾತುಗಳಲ್ಲಿ ಸುಳ್ಳೇನಿಲ್ಲ, ಸತ್ಯ ಇರಬಹುದು ನಿಜ. ಆದರೆ ಹಿಂದಿನ ಕವಿಗಳನ್ನು ನೋಡಿದರೆ ಮುಂದೊಮ್ಮೆ ಕವಿಚಕ್ರವರ್ತಿಗಳು ಬರುವರೆಂಬ ಆಶಯದೊಂದಿಗೆ ಕವಿ ಹೇಳುತ್ತಾರೆ – 'ಓ ನನ್ನ ಕನ್ನಡವೆ! ಕವಿತೆಯಲ್ಲಿ.

. . . .
ಕನ್ನಡಾಂಬೆಯ ಮಗನು ಕನ್ನಡಿಗ ನಾನು ।
ತಾಯ ನಿಂದೆಯ ಕೇಳಿ ನಡುಗುವುದು ಹೆಮ್ಮೆ
ಪಂಪ ರನ್ನರ ಹೆತ್ತ ನುಡಿಗೆ ಕುಂದೇನು
ಕವಿಚಕ್ರವರ್ತಿಗಳು ಬರುವರಿನ್ನೊಮ್ಮೆ
ಸರಸತಿಯೆ ಕನ್ನಡಿಗನಾಸೆಯಿದು ಸಲ್ಲೆ
ನನ್ನಮ್ಮ ತಾಯೆ, ಸಿರಿಗನ್ನಡಂ ಗೆಲ್ಗೆ ॥ [೬೬]

ಪರಂಪರೆಯ ವೈಭವವನ್ನು ನಮ್ಮ ಮುಂದೆ ಬಿಂಬಿಸಿ, ಅಂದಿನವರ ಕ್ರಿಯಾಶೀಲತೆಯನ್ನು ನಮ್ಮ ಅರಿವಿಗೆ ತಂದುಕೊಡುವುದರ ಮೂಲಕ ಇತಿಹಾಸವನ್ನು

ನೆನಪಿಸಿ ವರ್ತಮಾನದವರು ಮತ್ತೊಂದು ಇತಿಹಾಸ ಸೃಷ್ಟಿ ನಿರ್ಮಾಣದಲ್ಲಿ ತೊಡಗುವಂತೆ ಪ್ರೇರಣೆಯನ್ನು ಒದಗಿಸಿದ್ದಾರೆ.

ಕನ್ನಡ ತಾಯಿ ಬಂಜೆಯಲ್ಲ. ಆಕೆ ಕವಿಚಕ್ರವರ್ತಿಗಳಿಗೆ ಜನ್ಮವಿತ್ತಿರುವುದು ಇತಿಹಾಸದ ಉಲ್ಲೇಖ ಇರುವುದರಿಂದ, ಮುಂದೆಯೂ ಅಂತಹ ಕವಿಗಳು ಆಕೆಯಿಂದ ಹುಟ್ಟುತ್ತಾರೆ ಎಂಬ ನಂಬಿಕೆ ಕವಿಗಿದೆ.

ಇತ್ತೀಚಿನ ದಿನಗಳಲ್ಲಿ ಬಹಳ ವಾದ ವಿವಾದಕ್ಕೆಡೆಮಾಡಿಕೊಟ್ಟು, ವಿಚಾರವಂತರ, ಮತೀಯ ವಾದಿಗಳ ಸಂಘರ್ಷಕ್ಕೆ ಕಾರಣವಾಗಿ ಕೊನೆಗೆ ಸರ್ಕಾರದ ಉದಾರ ನಿಲುವಿನೊಂದಿಗೆ ಸಂಘರ್ಷದ ಮುಕ್ತಾಯ ಕಂಡು, ನಾಡಗೀತೆಯಾಗಿ ಅಸ್ತಿತ್ವ ಗಳಿಸಿಕೊಂಡಿರುವ ಕವಿತೆ 'ಜಯಹೇ ಕರ್ನಾಟಕ ಮಾತೆ!'. ಕುವೆಂಪು ಶತಮಾನೋತ್ಸವ ಸಂದರ್ಭದಲ್ಲಿ ಈ ಕವಿತೆ ಚರ್ಚೆಗೆ ದಾರಿ ಮಾಡಿಕೊಟ್ಟಿತು. ಮಧ್ವರ ಹೆಸರನ್ನು ಕುವೆಂಪು ಪ್ರಜ್ಞಾಪೂರ್ವಕವಾಗಿ ಕೈಬಿಟ್ಟುದ್ದೂ ಈ ಎಲ್ಲಾ ರಾದ್ಧಾಂತಕ್ಕೆ ಕಾರಣವಾಯಿತು. ಕುವೆಂಪು ಈ ಕವಿತೆಯಲ್ಲಿ ಇಡೀ ನಾಡು, ನುಡಿ, ಇತಿಹಾಸ, ನೆಲ, ಜಲ, ವನಗಳ ಹಿರಿಮೆಯನ್ನು ಹೇಳುವುದರೊಂದಿಗೆ; ದಾರ್ಶನಿಕರು, ಕವಿಗಳು, ರಾಜರುಗಳ ಕಾಣಿಕೆಯನ್ನು ಸ್ಮರಿಸಿ, ದೀರ್ಘವಾಗಿದ್ದರೂ ಔಚಿತ್ಯವರಿತು ಅರ್ಥಗರ್ಭಿತವಾಗಿ ಚಿತ್ರಿಸಿದ್ದಾರೆ.

ಕನ್ನಡಾಂಬೆ ಭಾರತಾಂಬೆಯ ಕುವರಿಯಂತೆ ಭಾವಿಸಿದ್ದರೂ ಅವೆರಡೂ ಒಂದಕ್ಕೊಂದು ಅವಿನಾಭಾವ ಸಂಬಂಧದಿಂದಿವೆ. ಕವಿಯ ಪಾಲಿಗೆ ಕರ್ನಾಟಕ ಬರಿಯ ಹೆಸರಲ್ಲ, ಶಬ್ದಕೋಶಗತವಾದ ವಿಷಯವಲ್ಲ. ಅದು ಭಾವಕೋಶಗತವಾದ ಶಕ್ತಿ. ತಾಯ್ನಾಡಿಗೆ, ಅಂತರಂಗ ಬಹಿರಂಗಗಳಿಗೆ ಕವಿ ಕಳಕಳಿಯ ಅಭಿವ್ಯಕ್ತಿ ಕೊಟ್ಟಿದ್ದಾರೆ.

ಜಯ್ ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ!
. . . .
ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರರಿಹ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ . . . .
ಪಂಪಲಕುಮಿಪತಿ ಜನ್ನ.

ಈ ಕವಿತೆ ಕರ್ನಾಟಕದ ಅಖಂಡತೆಯನ್ನು ಒಳಗೊಂಡಿದ್ದರೂ ಕವಿಯ ಭಾವುಕತೆಗೆ ಸಿಕ್ಕಿ ಏಕಮುಖವಾಗಿ ಹರಿದಂತೆ, ಇತಿಹಾಸ ಪುಟಗಳ ಪಟ್ಟಿಯ ಹಾಗೆ ಕಂಡುಬರುವ ಧರ್ಮ ದೀಪಕರು, ಆಳಿದವರ ಪಟ್ಟಿಯನ್ನು ಕೇವಲ ಸ್ತುತಿ ಸಂಸ್ಕೃತಿಯಲ್ಲಿರಿಸಿ ನೋಡುವುದರಿಂದ ಮೆರುಗು ಬಂದಿದೆಯೇ ಹೊರತು ಸಮಕಾಲೀನ ಚಿತ್ರ ಕಂಡುಬರುತ್ತಿಲ್ಲ. ಕವಿಯ ಆಶಯದ ಎಳೆಯಾಗಿ ಬರುವ 'ಸರ್ವ ಜನಾಂಗದ ಶಾಂತಿಯ ತೋಟ' ಸಾಧ್ಯವೇ? ಎನ್ನುವುದನ್ನು ವಾಸ್ತವದ ನೆಲೆಗಟ್ಟಿನಲ್ಲಿ ಚಿಂತಿಸಬೇಕಾದ ಅಗತ್ಯ ಹೆಚ್ಚು ಹೆಚ್ಚು ಕಂಡುಬರುತ್ತದೆ. ವರ್ತಮಾನವನ್ನು ಪರಂಪರೆಯೊಂದಿಗೆ ಬೆಸೆಯುವ ಕ್ರಿಯೆಯಲ್ಲಿನ ಶಬ್ದಗಳು ಪ್ರಸ್ತುತವನ್ನು ಹೆಚ್ಚು ಹೆಚ್ಚು ಜಾಗೃತಗೊಳಿಸುವ ಸಲುವಾಗಿ ಕಾರ್ಯ ನಿರ್ವಹಿಸಲೆಂದು ಕವಿ ಹೇಳಿರುವಂತಿದೆ.

'ನನ್ನ ಮನೆ' ಶಿಶುಗೀತೆಯಲ್ಲಿ 'ಕನ್ನಡ' ಕವಿತೆಯಲ್ಲಿ ಕವಿಯು ಭಾಷೆ ಬಗ್ಗೆ ತೋರಿರುವ ಅಭಿಮಾನ ಮಿಗಿಲಾದದ್ದು. ತ್ರಿಮೂರ್ತಿಗಳಿಗೂ ಮೆಚ್ಚುಗೆಯಾದದ್ದು. ಇಂತಹ ತಾಯಿಯ ಸೇವೆಯಿಂದ ಬದುಕಿನ ಶ್ರೇಷ್ಠತೆ ಇದೆ ಎನ್ನುತ್ತಾರೆ.

ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು!
. . . .
ಬಾಳುವುದೇತಕೆ? ನುಡಿ ಎಲೆ ಜೀವ;
ಸಿರಿಗನ್ನಡದಲಿ ಕವಿತೆಯ ಹಾಡೆ;
ಸಿರಿಗನ್ನಡದೇಳಿಗೆಯನು ನೋಡೆ;
ಕನ್ನಡ ತಾಯಿಯ ಸೇವೆಯ ಮಾಡೆ! [೬೮]

"ಸಾಮಾನ್ಯವಾಗಿ ಅಂತರ್ಮುಖಿಯಾಗಿ, ದೈವೀ ಪ್ರಜ್ಞೆಯ ಆಧ್ಯಾತ್ಮ ಭೂಮಿಕೆಯಲಿ ನಿವಾಸಿಯಾಗಿರುವ ಕವಿಚೇತನವೂ ಒಮ್ಮೊಮ್ಮೆ ಮರ್ತ್ಯ ಪ್ರಜ್ಞೆಯ ರಾಜಕೀಯ ಭೂಮಿಕೆಯತ್ತ ಪ್ರವಾಸಿಯಾಗಿ ವಿಹರಿಸಬೇಕಾಗುತ್ತದೆ. ಏಕೆಂದರೆ ಕವಿಯೂ ಸಮಾಜದ ಕಟ್ಟುಪಾಡುಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವಂತಿಲ್ಲ. ರಾಜಕೀಯದ ಕಾವು ನೋವುಗಳು ಮತ್ತು ಸಿದ್ಧಿ ಸಾಧನೆಗಳು ಅವನ ಮನಸ್ಸಿನ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರದಿರುವುದಿಲ್ಲ. ಪ್ರತಿಕ್ರಿಯೆಯ ಅಥವ ಸಂಸ್ತುತಿಯ ರೂಪದಲ್ಲಿ ಈ ಪ್ರಭಾವ ಮುದ್ರೆ ಅವರ ಕೃತಿಗಳ ಮೂಲಕ ಹೊರ ಬೀಳುತ್ತದೆ".[೬೯] ಕನ್ನಡ ಭಾಷೆಯನ್ನು ತಾಯಿಯಾಗಿ ಕಂಡು ಆನಂದಿಸಿ ಧನ್ಯತೆಗೊಂಡಂತೆ ದೇಶವನ್ನು, ಕರ್ನಾಟಕವನ್ನು ಅದೇ ಭಾವದಲ್ಲಿ ಕಂಡಿದ್ದಾರೆ.

ಭಾರತಾಂಬೆಯ ಮಡಿಲಲ್ಲೇ ಬೆಳೆದಿರುವವಳು ಕನ್ನಡಾಂಬೆ. ಈ ಕನ್ನಡಾಂಬೆ ತನ್ನ ಒಡಲಲ್ಲಿ ಸುವರ್ಣವನ್ನು, ನುಡಿಯಲ್ಲಿ ಶ್ರೀಮಂತಿಕೆಯನ್ನು, ಗುಣದಲ್ಲಿ ಶೌರ್ಯ ಸಾಹಸದ ಹಿರಿಮೆಯನ್ನು ಹೊದಿದ್ದು; ನಿಸರ್ಗ ಚೆಲುವಿನಿಂದ ಖಗಮೃಗಗಳ ಸಂಕುಲದಿಂದ ತುಂಬಿದ ನಾಡು ತನ್ನ ತಾಯ್ನಾಡು ಎಂದು ವಿ. ಸೀ.ಯವರು ವರ್ಣಿಸಿದ್ದಾರೆ.

ಬಾನಿನಗಲಕೆ ನೆಲಸಿ ದೆಸೆದೆಸೆಗೆ ಕಟ್ಟಿ
ನಡೆ ನೋಟಕೆರಚಿರುವ ಕಸ್ತೂರಿ ನಾಡು;
ಅಗೆದಲ್ಲಿ ಹೊನ್ನು, ನುಡಿಯುದಾಂಗುಡಿ ಹಾಡು
ಅಡಿ ತಳದ ಅರಿ ಮೆಟ್ಟು ಗಂಡು ಮೆಟ್ಟು,
ವೀರ ಸಿರಿ ಕಲೆಬೀಡು ನನ್ನ ತಾಯ್ನಾಡು. [೭೦]

ನಾಡಾಭಿಮಾನದ ಕವಿತೆಯಲ್ಲಿ ಪ್ರಾಕೃತಿಕ, ಐತಿಹಾಸಿಕ, ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಎದೆ ತುಂಬಿ ಬಣ್ಣಿಸಿದ್ದಾರೆ. ಇಲ್ಲಿನ ಒಳ್ಳೆಯದನ್ನೇ ಪಟ್ಟಿಮಾಡಿ ಹೇಳಿದಂತಿದೆಯೇ ಹೊರತು, ಇಲ್ಲಿನ ನ್ಯೂನತೆಗಳು, ಸಮಸ್ಯೆಗಳು ಕವಿ ಕಣ್ಣಿಗೆ ಬೀಳದಂತೆ ದೂರವಾಗಿವೆ. ಇವುಗಳು ಕವಿಕಣ್ಣಿಗೆ ಬೀಳುವ ವಾತಾವರಣದಲ್ಲಿ ಕವಿ ಇರಲಾರರು ಎಂಬುದು ತಿಳಿಯುತ್ತದೆ.

ದಿನಕರ ದೇಸಾಯಿ ಬನವಾಸಿ ನಾಡನ್ನು ಮೆಚ್ಚಿ ಹಾಡಿದ ಪಂಪನ ಹೃದಯದೊಲುಮೆ ನಮ್ಮ ನಾಡು ಎಂದು 'ನುಡಿವೆಣ್ಣು' ಕವಿತೆಯಲ್ಲಿ ಬಣ್ಣಿಸಿದ್ದಾರೆ.

ಕನ್ನಡದ ನುಡಿವೆಣ್ಣು ಬದುಕಿರುವವರೆಗೆ
ಆದಿಕವಿ ಪಂಪನ ದಿವ್ಯ ಸಂದೇಶ ಧರೆಗೆ .[೨೧]

ಎಂದು ಪಂಪನ ಕಾವ್ಯದ ಚಿರಂತನತೆಯನ್ನು ಕುರಿತು ಹೇಳುತ್ತಾರೆ. ಕನ್ನಡ ಬದುಕಿರುವವರೆಗೆ ಪಂಪನ ಕಾವ್ಯಗಳು ಜೀವಂತವಾಗಿರುತ್ತವೆ. ಎನ್ನುವ ಕವಿ ಮಾತಿನ ಹಿಂದೆ ಪಂಪನ ಕೃತಿಗಳ ಶ್ರೇಷ್ಠತೆ ಹಾಗೂ ಆ ಕೃತಿಗಳಿಂದ ಕನ್ನಡ ಭಾಷೆ ಪಡೆದ ಕಸುವೂ, ಪ್ರೇರಣೆ ಎಷ್ಟೆಂಬುದನ್ನು ಕಾಣಬಹುದು.

'ಕನ್ನಡ ತಾಯಿ' ಕವನದಲ್ಲಿ ಕರ್ನಾಟಕದ ಭೌಗೋಳಿಕ ಪರಿಸರವನ್ನು, ಸಂಸ್ಕೃತಿಯ ಹಿರಿಮೆಯನ್ನು ವಿಶ್ಲೇಷಿಸುವ ಪರಿ ಸೊಗಸಾಗಿದೆ:

ಮೂರು ಮುನ್ನೀರುಗಳ ನೀಲ ಜಲ ಮಧ್ಯದಲ್ಲಿ
ಮೂರು ಸಾವಿರ ವರ್ಷದಾಚೆ ಜನಿಸಿ
ಕೋಟಿ ಮಕ್ಕಳ ಹೆತ್ತ ಮುದುಕಿಯಾದರು ತಾಯಿ
ತರುಣಿಯೊಲು ನೀನಿರುವೆ ಚಲುವ ಸೂಸಿ [೨೨]

ಕನ್ನಡ ನಾಡನ್ನು ಕುರಿತ ಕವಿಯ ಅಭಿಮಾನ, ಪ್ರೀತಿ ಇಲ್ಲಿ ಅಖಂಡವಾಗಿ ಅಭಿವ್ಯಕ್ತಿಗೊಂಡಿದೆ. ಕನ್ನಡದ ತಾಯಿ ಕೋಟಿಮಕ್ಕಳ ಹೆತ್ತು ಮುದುಕಿಯಾದರೂ ಆಕೆ ನಿತ್ಯ ಯುವತಿ, ಚಿರನೂತನೆ ಎಂಬ ಸತ್ಯವನ್ನು ಕವಿ ಸಾರುತ್ತಾರೆ.

'ಏಕೀಕೃತ ಕರ್ನಾಟಕ' ಎಂಬ ಕವನದಲ್ಲಿ ಕನ್ನಡಾಂಬೆಯ ಮಕ್ಕಳೆಲ್ಲರೂ ಒಂದಾಗಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದ್ದಾರೆ. ಏಕೀಕರಣಕ್ಕಾಗಿ ಒಗ್ಗಟ್ಟಾಗಬೇಕಾದುದ್ದನ್ನು ಗುಡಿಯ ಕಟ್ಟಲು ಕಲ್ಲುಗಳೆಲ್ಲ ಒಟ್ಟಾಗುವ ದೃಷ್ಟಾಂತದ ಮೂಲಕ ಕವಿ ಬಿಂಬಿಸುತ್ತಾರೆ.

ಕರಿಯ ಕಲ್ಲುಗಳು ಕೂಡ ಕೂಡಿದವು
ಗುಡಿಯ ಕಳಸಕ್ಕಾಗಿ
ನರನ ಹೃದಯಗಳು ಒಂದುಗೂಡವೇ
ಮಾತೃ ಭೂಮಿಗಾಗಿ? [೨೩]

ನಿರ್ಜೀವವಾದ ಕಲ್ಲುಗಳು ಗುಡಿ ಕಟ್ಟುವಾಗ ಒಟ್ಟಾಗುತ್ತವೆ, ಒಂದಾಗುತ್ತವೆ. ಹಾಗೆ ಭಾವನಾತ್ಮಕವಾಗಿ ಚದುರಿ ಹೋಗಿರುವ, ಪ್ರಾಂತೀಯ ಒಡಕಿನಿಂದ ತುಂಬಿರುವ ಕನ್ನಡಿಗರೆಲ್ಲರ ಹೃದಯಗಳು ಒಂದಾಗಬೇಕೆಂಬುದು ಕವಿಯ ಆಶಯ.

ಜಿ. ಎಸ್. ಶಿವರುದ್ರಪ್ಪನವರು ಕುವೆಂಪು ಶಿಷ್ಯರಾದರೂ ಅವರಂತೆ ಆಧ್ಯಾತ್ಮಿಕದ ಸೆಳೆತಕ್ಕೆ ಒಳಗಾಗದೆ ಸ್ವತಂತ್ರ ಮನೋಭಾವದಿಂದ ಕವಿತೆ ರಚಿಸಿದರು. "ಕನ್ನಡ

ನವೋದಯ ಕಾವ್ಯದ ಆಧ್ಯಾತ್ಮಿಕ ನೆಲೆಯಿಂದ ಬಿಡಿಸಿಕೊಂಡು, ತನ್ನ ಕಾವ್ಯ ರಚನೆಗೆ ಪ್ರಸಾದ ಗುಣವನ್ನೆ ಪ್ರಧಾನವಾಗಿಸಿಕೊಂಡ ವಿಶಿಷ್ಟ ಕವಿಗಳಲ್ಲಿ ಜಿ.ಎಸ್.ಶಿರುದ್ರಪ್ಪನವರೂ ಒಬ್ಬರು. ಸ್ವತಂತ್ರ ಭಾರತದ ಸಾಮಾಜಿಕ ಸ್ಥಿತಿಗತಿಯಲ್ಲಿ ಇವರ ಕಾವ್ಯ ಕ್ರಿಯೆಯಾಗಿರುವುದು ಗಮನಾರ್ಹ. ವಾಸ್ತವಿಕತೆಗೆ ತನ್ನನ್ನು ಒಡ್ಡಿಕೊಳ್ಳುವ, ಸಾಮಾಜಿಕ ಹೊಸ ಆಯಾಮಗಳನ್ನು ಕಾವ್ಯ ಶರೀರದಲ್ಲಿ 'ಅರ್ಥ' ವಾಗಿಸುವ ಹಿಕಮತ್ತು ಶಿವರುದ್ರಪ್ಪರವರಿಗೆ ಮುಖ್ಯವಾಗುತ್ತದೆ. ಇದು ಇವರ ಕಾವ್ಯ ನಂಬಿಕೆಯೂ ಕೂಡ. ಈ 'ನಂಬಿಕೆ' ಕಾವ್ಯ ಚಿಂತನವೂ ಆಗುತ್ತದೆ. ಇವರ ಕಾವ್ಯ ಕಲ್ಪನೆ, ಪ್ರತಿಮೆಯಾಗಿ, ಉಪಮೆಯಾಗಿ, ಸಂಕೇತವಾಗಿ ಹಾಗೂ ರೂಪಕವಾಗಿ ರೂಪಾಂತರಗೊಂಡು ಕಾವ್ಯ ಶರೀರದಲ್ಲಿ ಹೊಸ ಮಾರ್ಪಾಟು ಆಗುತ್ತದೆ. ಕವಿಯ ಸಾಮಾಜಿಕ ಅರಿವು ತನ್ನ ಆತ್ಮ ವಿಮರ್ಶೆಗೂ, ಖಚಿತ ನಿರ್ಧಾರಕ್ಕೂ ಬುನಾದಿಯನ್ನು ಹಾಕಿಕೊಡುತ್ತದೆ".[೭೪] ಇಂತಹ ಸಾಮಾಜಿಕ ಕಾಳಜಿಯುಳ್ಳ ಜಿ.ಎಸ್.ಎಸ್. ತಮ್ಮದೇ ಆದ ದೃಷ್ಟಿಕೋನದಲ್ಲಿ ನಾಡು ನುಡಿಯಲ್ಲಿ ಮಾತೃತ್ವದ ದರ್ಶನ ಪಡೆದಿದ್ದಾರೆ.

ಇವರ 'ತೇರನೆಳೆವರು ನಾವು' ಕವಿತೆ ನಾಡಾಭಿಮಾನವನ್ನು ಉದ್ದೀಪನಗೊಳಿಸಿ ವೈಚಾರಿಕ ಚಿಂತನೆಗೆ ಹಚ್ಚುವಂತಹುದಾಗಿದೆ. ಕನ್ನಡ ನಾಡದೇವಿಯನ್ನು ಉದ್ಧರಿಸುವುದಾದಲ್ಲಿ ಕರ್ನಾಟಕದಲ್ಲೆ ನೆಲೆಸಿರಬೇಕಿಲ್ಲ. ಎಲ್ಲಿದ್ದರೂ ಕನ್ನಡತನವನ್ನು ಮೈದುಂಬಿಸಿಕೊಂಡು, ಕವಿ ಮನೋರಥಗಳನು ಬಾಳ ಬೀದಿಯ ಮೇಲೆ ಎಳೆಯಬೇಕು. ಅದಕ್ಕಾಗಿ ಕನ್ನಡತನದಿಂದ ಈ ದೇವಿಯನ್ನು ಚಿರಂತನಗೊಳಿಸುವ ಕಾರ್ಯ ಕನ್ನಡಿಗರಿಂದ ಆಗಬೇಕೆಂದು ಕವಿ ಅಪೇಕ್ಷಿಸಿದ್ದಾರೆ.

ತೇರನೆಳೆವರು ನಾವು - ಎಲ್ಲಿದ್ದರೇನು?
ಬೊಂಬಾಯಿ ಮದರಾಸು ಕಲ್ಕತ್ತ ಡೆಲ್ಲಿ
ಎಲ್ಲೆಂದರಲ್ಲಿ,

. . . .

ಓ ಎಳೆಯಿರೋ ಕನ್ನಡದ ತೇರ
ನೀವು ನಿಂತಿರುವಂಥ ನೆಲೆಗಳಿಂದ
ನಾವೆಲ್ಲರೂ ಒಂದು; ತೇರೆಳೆವ ಜನರು
ಆ ಊರೊ ಈ ಊರೊ; ಹಿಂದೆಯೋ ಮುಂದೆಯೋ
ಎಲ್ಲಿಯೋ ಒಂದು ಕಡೆ ಕೈ ಹಾಕಿದವರು. [೭೫]

ನಾವು ನಿಂತ ನೆಲೆಗಳಲ್ಲಿಯೇ ನಮ್ಮ ನಮ್ಮ ಕರ್ಮ ಕ್ಷೇತ್ರಗಳಲ್ಲಿ ನಾಡು ನುಡಿಯ ಏಳಿಗೆಯ ಸಲುವಾಗಿ ಮಾಡಬೇಕಾದ ಕರ್ತವ್ಯವನ್ನು ಮಾಡಬಹುದು ಎಂಬುದು ನಾನೊಬ್ಬ ಕನ್ನಡಕ್ಕಾಗಿ ಏನು ಮಾಡಲಿ ಎಂಬ ಅಳುಕು ಮನೋಭಾವದವರಿಗೆ ಧೈರ್ಯ ತುಂಬುವ ಮಾತುಗಳಾಗಿದೆ. ಏನೂ ಮಾಡಲಾಗದು ಎಂದು ತಳಮಳಗೊಂಡಿರುವ ಮನಸ್ಸುಗಳಿಗೆ ಏನೆಲ್ಲ ಮಾಡಬಹುದು ಎಂಬ ನಿರ್ದೇಶನವೂ ಇದೆ.

ತಾವಿರುವ ನೆಲೆಯಲ್ಲೆ, ತಮ್ಮ ಬದುಕಿನ ನಡುವೆಯೂ ಕನ್ನಡಿಗನಾದಾಗ ಕನ್ನಡದೇವಿಯ ರಥ ಎಳೆದ ಭಾಗ್ಯಕ್ಕೆ ತುತ್ತಾಗಲು ಸಾಧ್ಯ ಅದಕ್ಕೆ ನಾಯಕನಾಗಿ ಹಾರಾಡುವ ಅಗತ್ಯವಿರದು. ಇದು ಎಲ್ಲರಲ್ಲೂ ಬರಬೇಕು.

ಕಣವಿಯವರ ಕವನ 'ಸತ್ಯಾಗ್ರಹ'ದಲ್ಲಿ ಶ್ರೀಮಂತ ಪರಂಪರೆಯನ್ನು ಹೊಂದಿರುವ ಕನ್ನಡ ತಾಯಿಯ ಕೊರಳ ಕೊಯ್ಯುವ ಅಸುರೀ ಗುಣದವರನ್ನು ನಿಯಂತ್ರಿಸಲು ಕವಿ ಬಳಸಿರುವ ಸರ್ವೋದಯ ಮಾರ್ಗವೇ ಸತ್ಯಾಗ್ರಹ. ಸತ್ಯಾಗ್ರಹದ ಮೂಲಕ ಗಾಂಧೀಜಿ ಭಾರತಕ್ಕೆ ಪೀಡೆಯಾಗಿದ್ದ ಪರಕೀಯರನ್ನು ಓಡಿಸಿದರೆ; ತಾಯಿಗಂಡರಾದ ಮಕ್ಕಳಿಂದಲೇ ಕರ್ನಾಟಕವನ್ನು ಬಿಡುಗಡೆ ಗೊಳಿಸುವುದಕ್ಕಾಗಿ ಅದೇ ಸತ್ಯಾಗ್ರಹ ಮಾರ್ಗವನ್ನು ಕವಿ ಹಿಡಿದಿದ್ದಾರೆ.

ತಾಯ್ನಾಡ, ತಾಯ್ನುಡಿಯ ಕೊರಳ ಕೊಯ್ಯುವ ದುರುಳ
ದುಷ್ಟಕೂಟದ ಭ್ರಷ್ಟ ಭಂಡರೆದುರು –
ಸತ್ಯಾಗ್ರಹ – ನಮ್ಮ ಸತ್ಯಾಗ್ರಹ
ಸತ್ಯಾಗ್ರಹ – ನಿತ್ಯ ಸತ್ಯಾಗ್ರಹ.
. . . .
ತಾಯ್ನಾಡ ತಾಯ್ನುಡಿಯ ಕರುಳ ಕೊಯ್ಯುವ ದುರುಳ
ದುಷ್ಟಕೂಟದ ಭ್ರಷ್ಟ ಭಂಡರೆದುರು ॥ [೨೧]

ಕನ್ನಡದ ನೆಲದಲ್ಲಿ ಕನ್ನಡದ ಬಗೆಗಿನ ಅಪಸ್ವರಗಳು ಕೇಳಿ ಬರುತ್ತವೆ. ಸಮುದಾಯ ಏಳಿಗೆಯನ್ನು ನೆಪವಾಗಿಸಿಕೊಂಡು ರಾಜಕೀಯ ತಂತ್ರಗಳಿಗೆ ಬಲಿಯಾಗಿ ಆಡುವ ಮಾತುಗಳು ಎಂದೂ ನಿಜವಾಗಿ ನೊಂದವರ ಎದೆದನಿಗಳಲ್ಲ. ಅವರ ಮುಖವಾಣಿಗಳ ಮಾತುಗಳಾಗಿ ಕಂಡು ಬರುತ್ತವೆ.

ತಾಯ್ನುಡಿಗೆ ಕಂಠಕರಾಗಿರುವ ಎಲ್ಲತರಹದವರನ್ನು ಎದುರಿಸುವ ಆತ್ಮವಿಶ್ವಾಸವನ್ನು ಸತ್ಯಾಗ್ರಹದಲ್ಲಿ ಕವಿ ತೋರಿದ್ದಾರೆ. ಭಾಷೆಗೆ ಸದಾ ಗಂಡಾಂತರವಿರುವುದನ್ನು ಸೂಚಿಸುತ್ತ ಅದರ ರಕ್ಷಣೆಗೆ ಮಕ್ಕಳು ಅರಿತು ನಿಲ್ಲಬೇಕೆಂಬ ತತ್ವವಿಲ್ಲಿದೆ.

'ಅಖಂಡ ಕರ್ನಾಟಕ' ಕವಿತೆಯಲ್ಲಿ ಕನ್ನಡ ತಾಯಿಯೇ ವಿಶ್ವಾತ್ಮಕ ರೂಪವಾಗಿ ಕಂಡಿದ್ದಾಳೆ. ನಿರ್ಲಕ್ಷ್ಯದಿಂದ ತಿರಸ್ಕೃತಳಾಗಿದ್ದ ಕನ್ನಡ ತಾಯಿ ನಾಡಿನ ಏಕೀಕರಣದೊಂದಿಗೆ ತನ್ನ ಹಿಂದಿನ ವೈಭವ ತಾಳಬೇಕು. ಅದು ನವಭಾರತದ ಬಾಗಿಲಿಗೆ ತೋರಣವಾಗುತ್ತದೆ ಎಂಬ ಆಶಯ ಕವಿಯದು.

ಅಖಂಡ ಕರ್ನಾಟಕವೆ! ವಿಶ್ವಾತ್ಮರೂಪಕವೆ
ಎಚ್ಚರಿಸು ನಿದ್ರೆಯಿಂ ಮುದ್ರಿತರ, ಮತ್ತಿತರ
ಆಳಿಕೆಗೆ ಮೈಗೊಟ್ಟು ಸೋತವರ, ಬೀತವರ,
ಇಲ್ಲದಿರೆ ಎಂದೆಂದು ಈ ಪತನ ಈ ನೋವೆ.
. . . . ನವವೇಷ
ಧಾರಿಣಿಯೆ, ನುಡಿ ಶಿಲ್ಪ ಸಂಸ್ಕೃತಿಯ ರೂಪಿಣಿಯೆ
ಕವಿವರ್ಯ ಧರ್ಮಾತ್ಮ ಧೀರಗುವರರ ತಾಯೆ
ಉಕ್ಕುತಿಹುದಿಂದಿದೋ ಒಕ್ಕೊರಲಿನುದ್ಘೋಷ;
ಎಂಬ ಸಿರಿಗನ್ನಡದ ನಾಡಿನೇಕೀಕರಣ –
ಅಂದು ನವ ಭಾರತದ ಬಾಗಿಲಿಗೆ ತೋರಣ. [೨೨]

ಭಾರತದ ಅವಿಭಾಜ್ಯ ಪ್ರಾಂತ್ಯ ಕರ್ನಾಟಕ. ಹಾಗಾಗಿ ಕರ್ನಾಟಕ ಏಳ್ಗೆಯೊಂದಿಗೆ ಭಾರತದ ಭಾಗ್ಯವೂ ತೆರೆದುಕೊಳ್ಳುತ್ತದೆ ಎಂಬ ಒಕ್ಕೂಟ ಬದುಕಿನ ವಿಶಾಲ ಪ್ರಜ್ಞೆಯೊಂದಿಗೆ ಈ ಕವಿತೆ ಕಾಣುತ್ತದೆ.

'ವಿಶ್ವ ಭಾರತಿಗೆ ಕನ್ನಡದಾರತಿ' ಕಣವಿಯವರ ಈ ಕವಿತೆಯಲ್ಲಿ ಇಡೀ ಕರ್ನಾಟಕದ ಪರಂಪರೆ, ಇತಿಹಾಸ, ಕಲೆ, ಸಾಹಿತ್ಯ, ಸಂಸ್ಕೃತಿಯ ಹಿರಿಮೆಯನ್ನು ವರ್ಣಿಸಿ ಆ ಹಿರಿಮೆಯ ಮೂಲಕ ವಿಶ್ವ ಭಾರತಿಗೆ ಆರತಿ ಬೆಳಗುವ ಕಲ್ಪನೆ ಮಧುರ ಮನಸ್ಸಿನಿಂದ ಕಾಣುತ್ತದೆ.

ವಿಶ್ವ ವಿನೂತನ ವಿದ್ಯಾ ಚೇತನ
ಸರ್ವ ಹೃದಯ ಸಂಸ್ಕಾರಿ
ಜಯ ಭಾರತಿ, ಕರುನಾಡ ಸರಸ್ವತಿ
ಗುಡಿ ಗೋಪುರ ಸುರ ಶಿಲ್ಪ ಕಲಾಕೃತಿ
ಕೃಷ್ಣೆ, ತುಂಗೆ, ಕಾವೇರಿ, ಪವಿತ್ರಿತ ಕ್ಷೇತ್ರ ಮನೋಹಾರಿ ॥ವಿಶ್ವವಿನೂತನ॥
. . . .
ಅರಿವೇ ಗುರು ನುಡಿ ಜ್ಯೋತಿರ್ಲಿಂಗ
ದಯವೇ ಧರ್ಮದ ಮೂಲ ತರಂಗ;
ವಿಶ್ವ ಭಾರತಿಗೆ ಕನ್ನಡದಾರತಿ
ಮೊಳಗಲಿ ಮಂಗಳ ಜಯ ಭೇರಿ! ॥ವಿಶ್ವವಿನೂತನ॥ [೭೮]

ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಭಾವಪರವಶವಾಗಿ ಕವಿಗಳು ಮೈದುಂಬಿ ಹಾಡಿದರು ಅಂತಹ ಕವಿತೆಗಳ ಸಾಲಿನಲ್ಲಿ ಇದು ನಿಲ್ಲುತ್ತದೆ. ಕನ್ನಡಿಗನ ದಯೆ, ಧೈರ್ಯ, ತ್ಯಾಗ, ರಸಿಕತೆಯ ಶ್ರೀಮಂತಿಕೆಯನ್ನು ಮೈ ಮರೆತು ಬಣ್ಣಿಸುವ ಭಾವಗೀತೆ ಇದಾಗಿದೆ. ಅನೇಕ ಧರ್ಮಗಳ ನಾಡು, ಜಗತ್ತಿಗೆ ಆಧ್ಯಾತ್ಮಿಕದ ಕೊಡುಗೆ ಕೊಟ್ಟಿರುವ ಕರ್ನಾಟಕದ ಕೀರ್ತಿ ನಿರಂತರ ಮೊಳಗಲಿ ಎಂಬ ಕವಿಯ ಆಶಯ ಸ್ಮರಣೀಯವಾದದ್ದು.

ಕಾವ್ಯಾಸಕ್ತರ ಗಮನದಲ್ಲಿ ಕಂಬಾರರು ವಿಶಿಷ್ಟವಾಗಿ ನಿಲ್ಲುವ ಕವಿ. ಗ್ರಾಮೀಣ ಸೊಗಡನ್ನು, ಜನಪದ ಶೈಲಿಯೊಂದಿಗೆ ಕಟ್ಟಿಕೊಡಬಲ್ಲ ಶಕ್ತ ಕವಿ. ಇಂತಹ ಕವಿ 'ಕನ್ನಡ ತಾಯಿಯ ಸುಪ್ರಭಾತ'ದಲ್ಲಿ ಕನ್ನಡ ತಾಯಿಯನ್ನೇ ಪ್ರತಿಮಾ ರೂಪದಲ್ಲಿ ಕಂಡಿದ್ದಾರೆ.

ಮುಂಗೋಳಿ ಕೂಗ್ಯಾವು ಮೂಡಣ ಬೆಳಗಿ
ತಂಗಾಳಿ ಬೀಸ್ಯಾವು ತವರೀ ಹೂವರಳಿ
ಹೂ ಹೂವಿನೊಳಗೊಂದು ಕೈಲಾಸವರಳ್ಯಾವು
ಕೈಲಾಸ ಕೈ ಮುಗಿದು ಭೂ ಲೋಕಕಿಳಿದಾವು
ಸಾವಿರದಶರಣವ್ವ ಕನ್ನಡದ ತಾಯೇ ॥ ತಾಯೇ ॥

ಮ್ಯಾಲೇಳು ಲೋಕಕ್ಕೆ ಕೀಳೇಳು ಲೋಕಕ್ಕೆ
ಅಧಿಕವಾಗಲಿ ಹಬ್ಬಿ ನಿನ್ನ ಕಾರಣಿಕ
ಹಾಲೊಕ್ಕಲಾಗಲಿ ಹೊನ್ನೊಕ್ಕಲಾಗಲಿ
ತೂಗು ತೊಟ್ಟಿಲ ಬೆಳ್ಳಿ ಬಟ್ಟಲದ ತಾಯೇ

ಸಾವಿರದ ಶರಣವ್ವ ಕನ್ನಡದ ತಾಯೇ ॥ ತಾಯೇ ॥ [೭೯]

ನಿಸರ್ಗದ ರಮಣೀಯತೆಗೆಲ್ಲ ಕೈಲಾಸವೇ ಕೈಮುಗಿದು ಭೂಲೋಕಕ್ಕಿಳಿದಿರುವ ಪ್ರಾಂತ್ಯದ ಅಧಿದೇವತೆ ಕನ್ನಡದ ತಾಯಿ ಎಂಬ ಕಲ್ಪನೆ ಕವಿಯ ಪಾರಂಪರಿಕ ಪ್ರಜ್ಞೆಯಲ್ಲಿ ಕಾಣುತ್ತದೆ. ಎಲ್ಲಾ ಲೋಕಗಳಿಗೂ ಕನ್ನಡ ತಾಯಿಯ ಆದರ್ಶ ಹಬ್ಬುವಂತಾಗಲಿ ಎಂಬ ಮಾತುಗಳಿಂದಲೇ ಕನ್ನಡ ತಾಯಿಯ ಕಾರಣಿಕತನ, ಧಾರಾಳತನದ ಹಿರಿಮೆಯನ್ನು ಕವಿ ಕೊಂಡಾಡಿದ್ದಾರೆ.

"ಕಂಬಾರರ ರೂಪಕ ಪ್ರಧಾನ ಪುರಾಣ ಪ್ರತಿಭೆ ಕನ್ನಡ ಚೇತನದಲ್ಲಿ ಅವಿಸ್ಮರಣೀಯವಾದ ಪ್ರತಿಮಾಲೋಕವನ್ನು ನಿರ್ಮಿಸಿದೆ. ಅವರು ತಮ್ಮ ವಿಶಿಷ್ಟ ಕಾವ್ಯ ಕೃತಿಯನ್ನು ನಿರ್ಮಿಸಿಕೊಂಡ ಪ್ರಕ್ರಿಯೆಗೆ ಆಧುನಿಕ ಕನ್ನಡ ಕಾವ್ಯದಲ್ಲಿ ಚಾರಿತ್ರಿಕ ಮಹತ್ವವಿದೆ. ಕಾವ್ಯದ ಆಶಯ ಮತ್ತು ರೂಪಕಗಳೆರಡೂ ಅಖಂಡತೆಯನ್ನು ಸಾಧಿಸಿ ಕನ್ನಡ ಕಾವ್ಯಕ್ಕೆ ಹೊಸ ಆಯಾಮಗಳನ್ನು ಜೋಡಿಸಿವೆ. ಬೇಂದ್ರೆಯವರ ದಾರಿಯಲ್ಲಿಯೇ ಒಮ್ಮೆ ಬರೆಯುತ್ತಿದ್ದ ಕಂಬಾರರ ಭಾಷೆ, ವಸ್ತು, ಆಸಕ್ತಿ ಎಲ್ಲದರ ದೃಷ್ಟಿಯಿಂದ ಅವರಿಗಿಂತ ಮುಂದೆ ಹೋಗಿದ್ದಾರೆ. ಬೇಂದ್ರೆಯವರ ತರುವಾಯ ಬಂದ ಕವಿಗಳ ಸ್ನೇಹವನ್ನು ಅರಗಿಸಿಕೊಂಡಿದ್ದಾರೆ. ನವೋದಯ, ನವ್ಯ ಹಾಗೂ ನವ್ಯೋತ್ತರ ಸಾಹಿತ್ಯಕ ಮಾರ್ಗಗಳು ಸಂಬಂಧ ಸ್ಥಾಪಿಸಲು ನಿರ್ಲಕ್ಷಿಸಿದ ಅನುಭವ ಲೋಕಗಳ ಪ್ರತಿನಿಧಿಯಾಗಿ ಕಂಬಾರರು ಕನ್ನಡ ಕಾವ್ಯದಲ್ಲಿ ಪ್ರಕಟವಾದರು. ನೆನಪುಗಳ ನಿರ್ನಾಮದ ಚಾರಿತ್ರಿಕ ಘಟ್ಟದಲ್ಲಿ ಶೂದ್ರಾತಿಶೂದ್ರರ ಸಮಷ್ಟಿಯ ನೆನಪುಗಳ ಲೋಕ ಅದರೆಲ್ಲ ಪುರಾಣ, ಕಥೆ, ಆಚರಣೆ, ಮಾನಸಿಕ ವಾಸ್ತವಗಳೊಡನೆ ಅವರ ಕಾವ್ಯ ಸಂಬಂಧವನ್ನು ಸ್ಥಾಪಿಸಿಕೊಂಡಿತು. ಅವರ ಕಾವ್ಯ ಬಹುಮುಖೀ ಕಾವ್ಯ, ಬಹುಸ್ತರಗಳ ಕಾವ್ಯ"[೮೦] ಎಂದು ಕೆ.ವಿ. ಸುಬ್ಬಣ್ಣನವರಿಗೆ ಕಂಡಿರುವ ಕಂಬಾರರದು ಧಾರವಾಡದ ದೇಸಿ ಶೈಲಿಗೆ ಬೇಂದ್ರೆ ತರುವಾಯ ಉತ್ತರ ಕರ್ನಾಟಕದ ದೇಸೀಗುಣವನ್ನು ಯಥಾವತ್ತಾಗಿ ಬಿಂಬಿಸಿದವರಲ್ಲಿ ಕಂಬಾರರು ಮೊದಲಿಗರು. ದೇಸೀ ಗುಣದಿಂದ ಕಾವ್ಯ ನಾಟಕಗಳನ್ನು ರಚಿಸಿರುವ ಕಂಬಾರರು ಜನಪರ ಕಾಳಜಿಯಿಂದ ಗಮನ ಸೆಳೆಯುತ್ತಾರೆ. ಶೋಷಿತ ವರ್ಗದ, ದಾರಿದ್ರ್ಯ ಬದುಕಿನ ಚಿತ್ರಣವನ್ನು ಪರಿಣಾಮಕಾರಿಯಾಗಿ ತಮ್ಮ ಗಟ್ಟಿ ಧ್ವನಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಸಹಜವಾದ ಶೈಲಿ, ನೈಜ ಜೀವನಚಿತ್ರ, ಕಲಾತ್ಮಕ ಭಾಷೆಯಿಂದ ಪುರಾಣ, ಜಾನಪದದ ಹಿನ್ನೆಲೆಯಲ್ಲಿ ಕಾವ್ಯ ಕಟ್ಟುವ ಕಲೆಗಾರಿಕೆ ಇವರದು.

ಕೆ.ಎಸ್. ನಿಸಾರ್ ಅಹಮದ್ ಇವರು ತಮ್ಮ ಭಾವಗೀತೆ 'ನಿತ್ಯೋತ್ಸವ'ದಲ್ಲಿ ನಾಡ ದೇವಿ ಕನ್ನಡಮ್ಮನ ಹಿರಿಮೆ, ಗರಿಮೆಯನ್ನು ಬಿಂಬಿಸಿದ್ದಾರೆ. ನಿಸರ್ಗದಲ್ಲಿ, ಇತಿಹಾಸದಲ್ಲಿ, ವರ್ತಮಾನದಲ್ಲಿ ಕನ್ನಡಮ್ಮನ ನಿತ್ಯ ಉತ್ಸವ ನಡೆಯುತ್ತಿದೆ ಎಂದು ತಾಯಿಯನ್ನು ಕುರಿತು ಹಾಡಿ ಹೊಗಳಿದ್ದಾರೆ.

ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ
ನಿತ್ಯಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ ತಾಯಿ ನಿತ್ಯೋತ್ಸವ.

. . . .

ಹಲವೆನ್ನದ ಹಿರಿಮೆಯೆ, ಕುಲವೆನ್ನದ ಗರಿಮೆಯೆ
ಸದ್ವಿಕಾಸ ಶೀಲ ನುಡಿಯ ಲೋಕಾವೃತ ಸೀಮೆಯೆ
ಈ ವತ್ಸರ ನಿರ್ಮತ್ಸರ ಮನದುದಾರ ಮಹಿಮೆಯೆ
ನಿತ್ಯೋತ್ಸವ ತಾಯೆ ನಿತ್ಯೋತ್ಸವ. [೮೧]

ಕರ್ನಾಟಕ ಹಲವು ಧರ್ಮ, ಜಾತಿ, ಕುಲಗಳಿಂದ ತುಂಬಿದ್ದರೂ ಅವೆಲ್ಲವನ್ನೂ ಮೀರಿದ ವಿಕಾಸಶೀಲ ಗುಣದಿಂದ ಆದರ್ಶವಾಗಿದೆ. ಇಲ್ಲಿರುವ ಕನ್ನಡಮ್ಮನ ಮಗ ನಿರ್ಮತ್ಸರನಾಗಿ ಉದಾರ ಮಹಿಮೆ ಉಳ್ಳವನಾಗಿರುವುದರಿಂದ ತಾಯಿ ಸಂತೃಪ್ತಳಾಗಿದ್ದು, ನಿತ್ಯ ಉತ್ಸವದಲ್ಲಿದ್ದಾಳೆ ಎಂಬ ಉದಾತ್ತ ಕಲ್ಪನೆ ಕವಿಯದಾಗಿದ್ದು, ವಾಸ್ತವಿಕತೆಯನ್ನು ದರ್ಶಿಸುವ ಸಾಹಸಕ್ಕೆ ಯತ್ನಿಸಿಲ್ಲ.

ಇದೇ ಕವಿಯ 'ನಾಡ ದೇವಿಯೆ' ಕವಿತೆಯಲ್ಲಿ ಇದಕ್ಕಿಂತ ಭಿನ್ನ ರೂಪದ ಕಲ್ಪನೆ ಇದೆ. ಒಂದೇ ತಾಯಿಯ ಹಾಲು ಕುಡಿದವರಲ್ಲಿ ಭೇದ ಭಾವವಿದೆ. ಅದು ನಿವಾರಣೆಯಾಗಲಿ ತಾಯಿ ಎಂದು ಕವಿ ನಾಡ ದೇವಿಯಲ್ಲಿ ಪ್ರಾರ್ಥಿಸುತ್ತಾರೆ. ಕುಟುಂಬ ಜನರಲ್ಲೇ ಕಾಣುವ ವಿಭಿನ್ನತೆಯಂತೆ, ನಾಡ ಜನರಲ್ಲೂ ಕಂಡಿದೆ. ಹಗೆತನ ಸಂಶಯಗಳ ಸುಳಿಯಲ್ಲಿ ಸಿಕ್ಕಿ ಛಿದ್ರಗೊಂಡಿರುವುದನ್ನು ವ್ಯಥೆಯಿಂದ ನುಡಿದಿದ್ದಾರೆ.

ನಾಡ ದೇವಿಯೆ ಕಂಡೆ ನಿನ್ನ ಮಡಿಲಲ್ಲಿ ಎಂಥ ದೃಶ್ಯ;
ನೋವು ನಗೆಯ ಸಮ್ಮಿಶ್ರದಲ್ಲಿ ಎದೆಯಾಯಿತದಕೆ ವಶ್ಯ
ಒಂದೆದೆ ಹಾಲಕುಡಿದವರ ನಡುವೆ ಎಷ್ಟೊಂದು ಭೇದ ತಾಯಿ –
ಒಂದೆ ನೆಲದ ರಸ ಹೀರಲೇನು? ಸಿಹಿ ಕಹಿಯ ರುಚಿಯಕಾಯಿ
ನಾಡ ದೇವಿಯೆ . . .

. . . .
ನಿನ್ನೊಲವ ತೈಲ ನನ್ನೆದೆಯೊಳಿರಲಿ – ಬೆಳಗಿರಲಿ ಬಾಳ ಬತ್ತಿ;
ಕೊನೆ ಕಾಣಲಮ್ಮ ಅನುದಿನದಿ ಮಾಗಿ, ನಿನ್ನಡಿಗೆ ಬಾಗಿ ನೆತ್ತಿ
ನಾಡ ದೇವಿಯೆ . . . [೮೨]

ಪ್ರಾಕೃತಿಕ ನೆಲದಿಂದ ಸಾಮಾಜಿಕ ವರ್ಗ ವೈರುಧ್ಯಗಳ ಚಿಂತನೆ ನಡೆದಿದೆ. ಇದೇ ಪರಿಸ್ಥಿತಿಯೂ ಸಮಾಜದಲ್ಲೂ ಕಂಡುಬರುತ್ತಿರುವುದಾದರೂ ಏಕೆ? ಎನ್ನುವ ಚಿಂತನೆ ಕವಿಯದಾಗಿದೆ. ಅಸಮಾನತೆ ಈ ಚಿಂತನೆಗೆ ಕಾರಣ ಅದು ತೊಲಗಿ ಸಮಾನತೆ ಕಾಣಬೇಕೆಂಬುದು ಕವಿಯ ಆಶಯವಾಗಿದೆ. ಇದು ನಿತ್ಯೋತ್ಸವಕ್ಕಿಂತ ಭಿನ್ನವೂ, ವಾಸ್ತವಿಕತೆಗೆ ತುಸು ಹತ್ತಿರವೂ ಆದ ಕವಿತೆ. ಕನ್ನಡಿಗರಲ್ಲಿ ಕಾಣಬರುವ ವೈರುಧ್ಯಗಳ ಚಿತ್ರವಿದೆ. ಜೊತೆಗೆ ಅಂತಹ ಧೋರಣೆಯಿಂದ ಮುಕ್ತರಾದ ಕನ್ನಡಿಗರು ನಾವಾಗಬೇಕೆಂಬ ಕಳಕಳಿಯಿದೆ.

ಕರ್ನಾಟಕದ ಇತಿಹಾಸ ವೈವಿಧ್ಯ ಹಾಗೂ ಸಮೃದ್ಧತೆಯಿಂದಿದೆ. ಭಾಷೆ ಸಾಹಿತ್ಯ ಸಂಸ್ಕೃತಿಗಳಿಂದ ನೆರೆ ರಾಜ್ಯಗಳಿಗೆ ಮಿಗಿಲಾಗಿದ್ದ ಕರ್ನಾಟಕ ಸ್ವಾತಂತ್ರ್ಯ ನಂತರ ನಾಡು ಏಕೀಕರಣಗೊಂಡರೂ ಸೇರಬೇಕಾದ ಪ್ರಾಂತ್ಯಗಳು ಸೇರದೆ, ಇರುವ ಪ್ರಾಂತ್ಯದವರಲ್ಲೂ

ನಾಡು ನುಡಿ ಬಗ್ಗೆ ಇರುವ ತಾತ್ಸಾರ, ಪರಭಾಷೆ ಬಗ್ಗೆ ಇರುವ ಅಭಿಮಾನ ಕಂಡ ಕವಿಯ ಅಂತರಾಳದಲ್ಲಿ ಮೂಡಿದ ಆಶೆ 'ಎಂದು ಮೆರೆಯುವೆ ತಾಯಿ?' – ಕವಿತೆ.

ಮತ್ತೆ ಎಂದು ಮೆರೆಯುವೆಯಮ್ಮ?
ಕನ್ನಡಿಗರ ಪೊರವೆಯಮ್ಮ?

ಕನ್ನಡ ಅಧೀಶ್ವರಿ
ಮುಗಿವುದೆಂದು ನಿನ್ನ ಪಾಡು
ಪುಟಿಯುವುದೆಂದು ಹೊಸತು ಹಾಡು
ಅವಿನಾಶಿ ಅನಶ್ವರಿ.
. . . .[೮೩]

ರಾಜವಂಶಗಳ ಹಿರಿಮೆ, ನೆಲ ಜಲದ ಸಮೃದ್ಧತೆ, ವಿದೇಶಿಯರ ಪ್ರಶಂಸೆ, ನದಿ ವನ ಖನಿಜಗಳ ನಾಡು ಎಂದು ಬಣ್ಣಿಸುತ್ತಲೆ ಒಂದು ಮಾತಿನಲಿ ಹೇಳಲಾರದ ವೈವಿಧ್ಯ ಶ್ರೀಮಂತಿಕೆ ಎಂದು ಕವಿ ಬಣ್ಣಿಸುತ್ತಾರೆ. ಹಿಂದೆ ವೈಭವದಿಂದ ಮೆರೆದು ಇಂದು ತಲೆ ತಗ್ಗಿಸಿಕೊಂಡಿದೆ ಎಂಬುದನ್ನು ಪರೋಕ್ಷವಾಗಿ ಬಿಂಬಿಸಿದ್ದಾರೆ. ಕನ್ನಡಾಂಬೆಗೆ ಒದಗಿರುವ ಈ ದುರ್ಗತಿ ಎಂದು ನೀಗೀತು ಎಂಬ ಆತಂಕವೂ ಇದೆ.

ಸಾ.ಶಿ. ಮರುಳಯ್ಯನವರ ನಾಡನ್ನು ಕುರಿತ ಕವಿತೆ 'ನಮ್ಮ ನಾಡು ಕನ್ನಡ'. ಇದರಲ್ಲಿ ನುಡಿ ಹಾಗೂ ನಾಡಿನ ವೈವಿಧ್ಯತೆಯನ್ನು ಕಲಾತ್ಮಕವಾಗಿ ಚಿತ್ರಿಸಿದ್ದಾರೆ. ನಿಸರ್ಗದ ಸೊಗಸು, ಶಿಲ್ಪ ಸೌಂದರ್ಯದ ಹಿರಿಮೆ, ಸಮೃದ್ಧತೆಯ ಗರಿಮೆಯನ್ನು ಬಿಂಬಿಸಿದ್ದಾರೆ.

ಕನ್ನಡ ಕನ್ನಡ
ನಮ್ಮ ನಾಡು ಕನ್ನಡ
ನಮ್ಮ ನುಡಿಯು ಕನ್ನಡ
ನಮ್ಮ ತಾಯಿ ಕನ್ನಡ
ನಮ್ಮ ದೈವ ಕನ್ನಡ
ನಮ್ಮದೆಂಬುದೆಲ್ಲ ಎಲ್ಲ
ಎಲ್ಲವೂ ಕನ್ನಡ
. . . .
ನುಡಿವ ನುಡಿಯು ಕನ್ನಡ
ಮಿಡಿತ ಬಡಿತ ಕನ್ನಡ .[೮೪]

ಇವರ ಬಹಳಷ್ಟು ಕವಿತೆಗಳು ಸಾಂಪ್ರದಾಯಕ ಜಾಡಿನಲ್ಲೆ ಸಾಗುತ್ತವೆ. ಭಾವ ತೀವ್ರತೆ, ಸೌಂದರ್ಯಾನುಭೂತಿ, ಆರ್ದ್ರವಾದ ಭಾಷೆ, ಕಲಾತ್ಮಕ ಶೈಲಿಯಿಂದ ಕೂಡಿದ್ದ ನವೋದಯದ ಪಂಥವನ್ನು ಬಾಚಿ ತಬ್ಬಿಕೊಂಡಂತೆ ಕಂಡುಬರುತ್ತದೆ.

" . . . . ಇವರ ಪ್ರಕೃತಿ ಗೀತೆಗಳಂತೆ ಮಾನವ ಪ್ರಕೃತಿಯ ಆಂತರಿಕ ವಿಶ್ಲೇಷಣೆ, ಮಾನವ ಸ್ವಭಾವದ ಒಳಿತು ಕೆಡಕುಗಳು, ಶಿವ ಅಶಿವಗಳ ಮಥನ, ಸಂಘರ್ಷಣೆ ಈ ಮೊದಲಾದವುಗಳ ಚಿತ್ರಗಳೂ ಇಲ್ಲಿ ಬರುತ್ತದೆ. ಆದರೆ ಅವು ಎಲ್ಲೂ

ಉಲ್ಬಣಗೊಳ್ಳದೆ ಅವುಗಳ ಆಂತರ್ಯದಲ್ಲಿರುವ ಪ್ರಶಾಂತತೆಯ ಕಡೆಗೆ ಹೆಚ್ಚು ಒಲಿಯುತ್ತವೆ. ಆದ್ದರಿಂದ ಇವುಗಳಲ್ಲಿ ಆರ್ಭಟವಿಲ್ಲ, ಅಂತರ್ ನಿರೀಕ್ಷಣೆ ಇದೆ; ಪ್ರಚಾರದ ಅಬ್ಬರವಿಲ್ಲ, ಪ್ರಶಾಂತ ಪರಿಣತಿಯಿದೆ; ಉದಾತ್ತ ಆಶಯವಿದೆ, ಆದರ್ಶವಿದೆ; ಜೀವನದ ಅನುಭವವಿದೆ; ಪೂರ್ಣದೃಷ್ಟಿ ಇದೆ; ಸೃಷ್ಟಿಶಕ್ತಿ ಇದೆ . . ." [೮೫] ಎಂಬ ಹೆಚ್. ತಿಪ್ಪೇರುದ್ರಸ್ವಾಮಿಯವರ ಮಾತು ಇವರ ಬರಹಕ್ಕೆ ವ್ಯಾಖ್ಯಾನದಂತಿದೆ.

ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ಕವಿತೆ 'ಜಯ ಜಯ ಜಯ ಕನ್ನಡ ರಾಜೇಶ್ವರಿ'ಯಲ್ಲಿ ಕರ್ನಾಟಕದ ಭವ್ಯ ಪರಂಪರೆಯನ್ನು ಬಿಂಬಿಸುವುದಾಗಿದೆ.

ಜಯ ಜಯ ಜಯ ಕನ್ನಡ ರಾಜೇಶ್ವರಿ
ಶರಣು ಬಂದೆ ಪಾದಕೆ ಭುವನೇಶ್ವರಿ

ಪಂಪನ ನುಡಿ ಮಿಂಚಿನ ಮಣಿ ಮಾಲೆಗೆ
ನಾರಣಪ್ಪ ಕಡೆದ ಭಾವ ಜ್ವಾಲೆಗೆ
ಶಿಲೆಯೇ ಅರಳಿ ನಗುವ ಕಲೆಯ ಲೀಲೆಗೆ
ಯಾರು ಸಮವೆ ತಾಯಿ ನಿನ್ನ ಚಲುವಿಗೆ? . . . [೮೬]

ನಾಡಿನ ಪಾರಂಪರಿಕ ಹಿರಿಮೆ ಗರಿಮೆಗಳನ್ನು ನೆನೆದ ಕವಿ ಅಭಿಮಾನಗೊಂಡು ಅಂತಹ ಶ್ರೀಮಂತ ಪರಂಪರೆ ಹೊಂದಿರುವ ಕನ್ನಡಾಂಬೆಗೆ ನಮಿಸುವುದರೊಂದಿಗೆ ತನ್ನ ಧನ್ಯತೆಯನ್ನು ಅರ್ಪಿಸಿದ್ದಾರೆ. ಈ ಕವಿತೆಯಲ್ಲಿ ಗತ ವೈಭವದ ಹಿರಿಮೆಯನ್ನು ಸಾರಿದರೆ ಪ್ರಸ್ತುತ ಕನ್ನಡಾಂಬೆಯ ಸ್ಥಿತಿಯನ್ನು ಮರೆಮಾಚಿರುವುದು ಕಾಣುತ್ತದೆ. ಸಾಂಪ್ರದಾಯಕ ಶೈಲಿಯಲ್ಲಿ ರಚಿತವಾಗಿರುವ ಈ ಕವಿತೆ ನವೋದಯ ಧೋರಣೆಯನ್ನು ನೆನಪಿಗೆ ತರುತ್ತದೆ.

ಇದೇ ರೀತಿಯ ಭಾವದೊಂದಿಗೆ ದೇಶ ಭಕ್ತಿಯನ್ನು ಬಿಂಬಿಸುವ ಕವಿತೆಗಳಾದ 'ಶಕ್ತಿಗಿದೋ ನಮನ' 'ಹಿರಿದು ಯಾವುದೇ ಇರಲಿ', 'ಸಾವಿರ ಬಗೆಯಲ್ಲಿ ಸಾಗುತಿದೆ' ಹಾಗೂ 'ನಾಡದೇವಿ' ಕುರಿತು ಹಾಡಿರುವ ಕವಿತೆಗಳು; 'ನಮೋ ದೇವಿ ನಮೋ ತಾಯಿ', 'ಶರಣಾದೆ ತಾಯಿ', 'ತಾಯೆ ನಿನ್ನ ಮಡಿಲಲ್ಲಿ', 'ಹೆಮ್ಮೆ ನನಗೆ ಅಮ್ಮ', 'ನಮಿಸುವೆನು ತಾಯಿ', 'ಸರೀದೀತೆ ಕಾರಿರುಳು', 'ಈ ನಮ್ಮ ತಾಯ್ನಾಡು' – ಪ್ರಮುಖವಾಗಿವೆ. ಈ ಕವಿತೆಗಳಲ್ಲೆಲ್ಲ ದೇಶ–ನಾಡುಗಳ ವೈಶಿಷ್ಟ್ಯ ಬಿಂಬಿತವಾಗಿದೆ. ಒಂದೇ ಶೈಲಿ, ಭಾವದಲ್ಲಿ ಹರಿದು ಬಂದಿವೆ.

ಗೇಯತೆಯ ಗುಣದೊಂದಿಗೆ ಕವಿತೆ ಕಟ್ಟುವ ದೊಡ್ಡರಂಗೇಗೌಡರು, 'ಮುನ್ನಡೆಯಲಿ ಕನ್ನಡ' ಎನ್ನುವ ಕವಿತೆಯಲ್ಲಿ ನಾಡು ನುಡಿಯಾದ ಕನ್ನಡ ಭಾಷೆ ಪರಭಾಷೆಯ ವ್ಯಾಮೋಹದಿಂದ ಕಡೆಗಣಿಸಲ್ಪಡದೆ, ಅಭಿಮಾನದ ಸೊಡರಾಗಿ ಬೆಳಗಲಿ, ಎಲ್ಲರಿಗೂ ಜ್ಞಾನದ ಬೆಳಕು ನೀಡಲಿ ಎಂದು ಆಶಿಸಿದ್ದಾರೆ.

ಎಂದೆಂದೂ ಝುಗ ಝುಗಿಸಲಿ ಕನ್ನಡದಾ ಹಣತೆ
ತಾಯೊಲ್ಮೆಯ ಸಿರಿ ಸೊಡರಿಗೆ ಅಭಿಮಾನವೇ ಒರತೆ.
. . . .

ನಮ್ಮ ನೆಲದಿ ನಮ್ಮ ಮಾತೆ, ಸದಾ ಕಾಲ ಅಗ್ರಮಾನ್ಯ
ಪರಕೀಯರ ಸಂಸ್ಕೃತಿಯಾ ಅನುಕರಣೆಯೇ ಅಕ್ಷಮ್ಯ
ಪರಭಾಷೆಯ ಬೆಂಬತ್ತಲು ನಮ್ಮತನವೇ ಶೂನ್ಯ;
ನುಂಗುತಿದೆ ನಮ್ಮನ್ನೆಲ್ಲ ನಮ್ಮುದಾರ ಸೌಜನ್ಯ[೮೭]
ಕನ್ನಡಿಗರೇ ಮುನ್ನಡೆಸಿರಿ, ಕನ್ನಡದಾ ಶೌರ್ಯ!

ಅನ್ಯ ಭಾಷಾಪ್ರಭೆಗೆ ಸಿಕ್ಕಿ ಮಂಕಾಗಿರುವ ಕನ್ನಡದ ಸ್ಥಿತಿಯ ಶೋಚನೀಯತೆ ಕಂಡು ಕವಿ ವ್ಯಥೆಗೊಂಡಿದ್ದಾರೆ. ನಮ್ಮತನವನ್ನು ನಾವು ಉಳಿಸಿಕೊಂಡು ತಲೆಎತ್ತಿ ನಿಲ್ಲಬೇಕಾದರೆ ಅಭಿಮಾನವೇ ಒರತೆಯಾಗಬೇಕು. ನಮ್ಮಲ್ಲಿನ ನಿರಭಿಮಾನತೆ ನಮ್ಮನ್ನು ನಾಶಮಾಡುತ್ತದೆ ಎಂಬ ಎಚ್ಚರಿಕೆಯನ್ನು ಕವಿ ಕೊಡುತ್ತಾರೆ.

ಕೃಷಿಕ ಸಂಸ್ಕೃತಿಯಲ್ಲಿದ್ದುಕೊಂಡೆ ಕವಿಯಾಗಿ ಪರಿಚಿತರಾದ ವೀಚಿ ತಮ್ಮ 'ತಾಯಿ ಜೀವ' ಕವಿತೆಯಲ್ಲಿ ಕನ್ನಡ ನುಡಿಯ ಹಿರಿಮೆಯನ್ನು ಬಣ್ಣಿಸುವಾಗ ನಾಡಿನ ವೈಶಿಷ್ಟ್ಯವನ್ನು ನೀಡಿದ್ದಾರೆ.

ಮನ ಮನದಲಿ ಮೂಡಿ ನಿಲ್ಲುವ
ಪಡೆ ನುಡಿಯೇ ಕನ್ನಡ
ಜನ ಜನದಲಿ ನದಿ ನದಗಳ
ಜುಳು ಜುಳವೇ ಕನ್ನಡ,
ಕಾಲನೊಡನೆ ಪಂಥಕಟ್ಟಿ
ಸ್ಪರ್ಧೆಗಿಳಿದ ದೇವಿಯೆ
ತಾಳ ಮೇಳ ಬಿಟ್ಟು ಹಿಡಿದ
ಹಾಡು ಜೀವ ಜಾತೆಯೆ[೮೮]

ಇದೂ ಕೂಡ ಸಾಂಪ್ರದಾಯಕ ನೆಲೆಯಲ್ಲೆ ಸಾಗಿದ ಕವಿತೆ. ಎಲ್ಲ ಕವಿಗಳಂತೆ ಇವರೂ ಕೂಡ ನಾಡನ್ನು, ಭಾಷೆಯನ್ನು ತಾಯಿಯಾಗೆ ದರ್ಶಿಸಿರುವುದು ಕಂಡುಬರುತ್ತದೆ.

ಲಲಿತ ಸಿದ್ಧಬಸವಯ್ಯನವರ 'ಕನ್ನಡದ ಪದವಿರಲಿ ತಾಯೆ . . .' ಕವಿತೆ ನಾಡದೇವತೆ ಕನ್ನಡಮ್ಮನನ್ನು ಕುರಿತದ್ದು. ಹೆಣ್ಣಿನೊಲವಿನ ಭಾವ ಭಾಷೆಯಲ್ಲಿ ಕನ್ನಡಮ್ಮನನ್ನು ಒಳ್ಳೆಯ ಶಬ್ದಗಳ ಬಳಕೆ ದಯಪಾಲಿಸೆಂದು ಪ್ರಾರ್ಥಿಸುವುದಾಗಿದೆ.

ಒಳ್ಳೊಳ್ಳೆ ಶಬುದಗಳ ಬಳ್ಳದಲ್ಲಳೆದು ಕೊಡೆ
ಉಳ್ಳಂಥ ಘನ ಗರತಿ ಕನ್ನಡವ್ವ
. . . .
ಸವಲತ್ತಿಗೋಸುಗವೆ ಮುತ್ತು ಸತ್ತಿಗೆನೊಡ್ಡಿಕೊಳದೆ
ಬಿಳದೆ ರಾಯಸಗಳ ಸುಮ್ಮಾನಕ್ಕೆ
ಒಪ್ಪೊತ್ತಿನುಂಬಳಕೆ ಒಡ್ಡಿ ನಾಲಗೆಯನ್ನೊತ್ತೆಯಿಡದೆ
ಇಡದೆ ನುಡಿಸೇಸೆಯನು ಸನ್ನದುಗಳ ಭುಜಕಟ್ಟಿಗೆ
ಕನ್ನಡದ ಪದವಿರಲಿ ತಾಯೇ. . . .
ನಮ್ಮೂರ ಬೆಟ್ಟ ಹೊಳೆ ನೆಲಮಟ್ಟುಗಳ ಬೆಂಗಾಯಲಿಕ್ಕೆ[೮೯]

ಈ ಕವಿತೆಯಲ್ಲಿ ಕನ್ನಡ ಭಾಷೆಯನ್ನು ಕೆಲವರು ಕೇವಲ ವ್ಯಾಪಾರಿ ಧೋರಣೆಯಿಂದ, ಕೀರ್ತಿಯ ಹಿನ್ನೆಲೆಯಿಂದ, ಲಾಭದ ಹಂಬಲದೊಂದಿಗೆ ಬಳಸುವ ಜನಗಳನ್ನು ಲೇವಡಿ ಮಾಡುತ್ತಾರೆ. ಜೊತೆಗೆ ಕನ್ನಡದ ಊರು, ಬೆಟ್ಟ, ಹೊಳೆ ನೆಲಮಟ್ಟುಗಳ ಬೆಂಗಾಯಲಿಕ್ಕೆ ಎಲ್ಲರಲ್ಲೂ ಅಭಿಮಾನ ಮೂಡಿಸಿ ಕನ್ನಡ ಉಳಿದು ಬೆಳೆಯುವಂತೆ ಕನ್ನಡಮ್ಮ ದಯೆಗೈಯಲಿ ಎಂಬ ಪ್ರಾರ್ಥನೆ ಇದೆ.

ಮ. ಸುರೇಶ್ ಬಾಬುರವರ 'ನಾವು ಭಾರತೀಯರು' ಕವಿತೆಯಲ್ಲಿ ಕನ್ನಡಾಂಬೆಯ ಮಕ್ಕಳಾಗಿ ಭಾರತಾಂಬೆಯ ಒಕ್ಕಲಾಗಿ ಬೆಳೆದ ಬಗೆಯನ್ನು ದೇಶಾಭಿಮಾನದ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ.

ಕನ್ನಡಾಂಬೆ ಮಕ್ಕಳು
ಭಾರತಾಂಬೆ ಒಕ್ಕಲು
ಹೆಮ್ಮೆಯಿಂದ ನುಡಿದೆವು
ನಾವು ಭಾರತೀಯರು.[೯೦]
. . . .

ಪರಕೀಯತೆ ಒಪ್ಪದ ಸ್ವತಂತ್ರ ಭಾರತದ ಸ್ವಾಭಿಮಾನಿಗಳು ನಾವು ಎಂದು ದೇಶಾಭಿಮಾನದಿಂದ ನುಡಿದಿದ್ದಾರೆ.

ಕರ್ನಾಟಕ ಏಕೀಕರಣ ಚಳುವಳಿ ಹಾಗೂ ಮಾತೃತ್ವ: ಪರಾಧೀನತೆಯಿಂದ ಭಾರತವನ್ನು ಮುಕ್ತಗೊಳಿಸಬೇಕೆಂಬ ಭಾರತೀಯರೆಲ್ಲರ ಆಶಯದಂತೆ ನೆರೆರಾಜ್ಯಗಳಲ್ಲಿ ಹರಿದು ಹಂಚಿಹೋಗಿರುವ ಕರ್ನಾಟಕವು ಏಕೀಕರಣವಾಗಬೇಕೆಂಬ ಆಶಯ ಎಲ್ಲ ಕನ್ನಡಿಗರದಾಗಿತ್ತು.

ಕರ್ನಾಟಕದ ಹಿರಿಮೆಗರಿಮೆಗಳನ್ನು, ಭಾಷೆ ಶ್ರೀಮಂತಿಕೆಯನ್ನು, ಅದರ ಪ್ರಾಕೃತಿಕ, ಸಾಂಸ್ಕೃತಿಕ ವೈಶಿಷ್ಟ್ಯವನ್ನು ಬಿಂಬಿಸಿ ರಚಿಸಿದ ಕವಿತೆಗಳಿಗಿಂತ ಭಿನ್ನವೂ ವಿಶಿಷ್ಟವೂ ಆದ ಕವಿತೆಗಳೆಂದರೆ ಕರ್ನಾಟಕ ಏಕೀಕರಣ ಕುರಿತಂತವುಗಳು. ಎಲ್ಲ ವೈಶಿಷ್ಟ್ಯಗಳಿದ್ದರೂ ಕನ್ನಡಿಗರು ಹಲವಾರು ಸಂಸ್ಥಾನಗಳಲ್ಲಿ ಹರಿದು ಹಂಚಿ ಹೋಗಿ, ಭಾವನಾತ್ಮಕವಾಗಿ, ಆಡಳಿತಾತ್ಮಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಕನ್ನಡತನ ಕಳೆದುಕೊಂಡು ಪರಾವಲಂಬಿಯಾಗಿ ಅನಾಥ ಪ್ರಜ್ಞೆಯಲ್ಲಿದ್ದ ಸಂದರ್ಭದಲ್ಲಿ ಮಾತೃ ಭಾಷೆ, ಮಾತೃ ಭೂಮಿಯ ಬಗ್ಗೆ ಮೂಡಿದ ಗೌರವಾಭಿಮಾನಗಳಿಂದ ಕನ್ನಡಿಗರಲ್ಲಿ ಜಾಗೃತಿ ಹಾಗೂ ಏಕೀಕರಣದ ಹೋರಾಟದ ಕೆಚ್ಚು ಮೂಡಿಸುವಲ್ಲಿ ಕವಿಗಳು ಶ್ರಮಿಸಿರುವುದುಂಟು. ಅಂತಹ ಸಂದರ್ಭದಲ್ಲಿ ನಾಡು ನುಡಿಯ ಹಿರಿಮೆಯನ್ನು ಅದರ ಐತಿಹಾಸಿಕ ಮಹತ್ವವನ್ನು ಬಿಂಬಿಸುತ್ತಲೇ ಕಳೆದುಹೋಗಿರುವ ಆ ವೈಭವವನ್ನು ಪುನರ್ ಪ್ರತಿಷ್ಠಾಪಿಸುವ ಕೈಂಕರ್ಯಕ್ಕೆ ಎಲ್ಲರೂ ಸನ್ನದ್ಧರಾಗಬೇಕೆಂಬ ಕರೆಯೊಂದಿಗೆ ರಚಿತವಾದ ಕವಿತೆಗಳಲ್ಲಿ ಮಾತೃತ್ವದ ಸ್ವರೂಪ ವ್ಯಕ್ತವಾಗಿದೆ.

ಶಾಂತ ಕವಿ ತಮ್ಮ ಕವಿತೆ 'ರಕ್ಷಿಸು ಕರ್ನಾಟಕ ದೇವಿ'ಯಲ್ಲಿ ಕರ್ನಾಟಕದ ಅಧಿದೇವತೆ ಕನ್ನಡಾಂಬೆಯನ್ನು ಸ್ಮರಿಸುತ್ತಾ, ಇಂತಹ ಕನ್ನಡಾಂಬೆ ಭವ್ಯ ರಾಜಮನೆತನಗಳನ್ನು, ಧರ್ಮ ಸಂಸ್ಥಾಪಕರನ್ನು ಹೊಂದಿದ್ದಳೆಂದು ಹೇಳಿದ್ದಾರೆ.

ರಕ್ಷಿಸು ಕರ್ನಾಟಕ ದೇವಿ,
ಸಂರಕ್ಷಿಸು ಕರ್ನಾಟಕ ದೇವಿ [೯೧]

ಸಮಾನ್ಯವಾಗಿ ನಮ್ಮನ್ನು ನಾವೇ ರಕ್ಷಿಸಿಕೊಳ್ಳಬೇಕು. ಅಸಹಾಯಕತೆ, ಬಿಕ್ಕಟ್ಟು, ಅಭದ್ರತೆಗೆ ಸಿಲುಕಿದಾಗ ರಕ್ಷಿಸೆಂದು ಬೇಡುವ ದೈನ್ಯಸ್ಥಿತಿ ನಿರ್ಮಾಣವಾಗುತ್ತದೆ. ಇಂತಹ ಹಪಾಹಪಿಸುವ ಸ್ಥಿತಿಯಿಂದ ಪಾರಾಗಲು ಕವಿಗೆ ಕರ್ನಾಟಕವೆ ದೇವಿಯಾಗಿ ಕಂಡಿದೆ. ಕರ್ನಾಟಕವೆಂಬುದು ವ್ಯಕ್ತಿ ಸೂಚಕವಲ್ಲ, ನಾಡಿನ ಸೂಚಕ. ಇಲ್ಲಿ ದೇವಿ ಎಂಬುದು ದೈವಿಕ ನೆಲೆಯದಲ್ಲ, ರಾಜಕೀಯ ಪ್ರಜ್ಞೆಯ ನೆಲೆಯದು. ಏಕೀಕರಣದ ಸೂಚನೆ ಕೂಡ ಕಂಡುಬರುತ್ತದೆ.

ರಕ್ಷಿಸುವ ನೆಲೆಯಲ್ಲಿ ಮಾನಸಿಕವಾಗಿ ಜನ ಒಗ್ಗೂಡಬೇಕು ಎಂಬ ಭಾವವಿದೆ. ಹಾಗೆಯೇ ಈ ರಕ್ಷಣೆ ಭಾಷೆಯ ರಕ್ಷಣೆಯಾಗಷ್ಟೇ ವಿರಮಿಸದೆ ಒಗ್ಗಟ್ಟಾಗಿ ಒಂದು ನುಡಿಯನ್ನಾಡುವ ಜನಾಂಗವನ್ನು ರಕ್ಷಿಸಿಕೊಳ್ಳುವ ಸ್ವರಕ್ಷಣೆಯ ತಂತ್ರವೂ ಯಾಕಾಗಿರಬಾರದು?

ಈ ಮಾತುಗಳು ಕರ್ನಾಟಕದ ಏಕೀಕರಣ ಕಾಲದಲ್ಲಿ ಪ್ರಾರ್ಥಿಸಿದ ಮತ್ತು ಆಶಿಸಿದ ಮಾತುಗಳಾಗಿವೆ.

ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಕವಿತೆಯಲ್ಲಿ ಕೃಷ್ಣೆ ಭೀಮೆಯರ ತಾಯ್ನಾಡು, ಕಾವೇರಿ ಗೋದೆಯರು ಮೈದೊಳೆವ ನಲುನಾಡು ಎಂದು ಕರೆದು ಇಂತಹ ಸುಂದರ ಪರಂಪರೆ ಹೊಂದಿದ ನಾಡು ಅಖಂಡ ರಾಜ್ಯವಾಗಿ ಉದಯಿಸಲಿ ಎಂಬ ಆಸೆ ವ್ಯಕ್ತವಾಗಿದೆ.

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು
. . . .
ಪಾವನೆಯರಾ ಕೃಷ್ಣೆ ಭೀಮೆಯರ ತಾಯ್ನಾಡು
ಕಾವೇರಿ ಗೋದೆಯರು ಮೈದೊಳೆವ ನಲುನಾಡು
ಆವಗಂ ಸ್ಫೂರ್ತಿಸುವ ಕಬ್ಬಿಗರ ನಡೆಮಾಡು
ಕಾವಗದುಗಿನ ವೀರ ನಾರಾಯಣನ ಬೀಡು [೯೨]

ಕಾವ್ಯ ಬರೆಯುವಾತ ತನ್ನ ನಿಂತ ನೆಲದೊಂದಿಗೆ ಭಾವನಾತ್ಮಕ ಸಂಬಂಧವನ್ನು ಬೆಳೆಸಿಕೊಂಡಿರುತ್ತಾನೆ. ಇದು ಮನುಷ್ಯ ಸಹಜವಾದದ್ದು. ಆತನ ಕಲಾಭಿವ್ಯಕ್ತಿಯಲ್ಲಿ ಅದು ಮೈದೋರುತ್ತದೆ. ಆದ್ದರಿಂದ ಗದುಗಿನ ಪ್ರಸ್ತಾಪ ವ್ಯಕ್ತಿ ಸಹಜವಾಗಿ ಬಂದಿದೆ. ಪರ್ಯಾಯವಾಗಿ ಆಲೋಚಿಸುವುದಾದರೆ ಕನ್ನಡದ ಗಂಡುಗವಿ ಕುಮಾರವ್ಯಾಸನ ನೆನಪಿಸುವುದರ ಮೂಲಕ ನಮ್ಮನ್ನು ಎಚ್ಚರಗೊಳಿಸುವ ಪ್ರಯತ್ನವೂ ಆಗಿರಬಹುದು.

ಸಹ್ಯಾದ್ರಿ ಪರ್ವತಕ್ಕು ಅರಬಿ ಸಮುದ್ರಕ್ಕು ಮಧ್ಯದಲ್ಲಿರುವ ದಕ್ಷಿಣೋತ್ತರ ಕನ್ನಡ ಜಿಲ್ಲೆಯನ್ನು ಕನ್ನಡ ನಾಡಿನ ಕೊಂಕಣವೆಂದು ಕರೆಯಲಾಗುತ್ತದೆ. ಅದನ್ನು ಕುರಿತು ದಿನಕರ ದೇಸಾಯಿ ವರ್ಣಿಸಿರುವ ಪರಿ ವಿಶಿಷ್ಟವಾದದ್ದು,

ಸಗ್ಗದಿಂದ ಸೊಗದಿ ದೇವಿ ತಿರೆಗೆ ಬಂದಳೋ?
ಬಂದು ಮುದವ ತಂದು ಕೊಂಕಣದಲ್ಲಿ ನಿಂದಳೋ? ॥ಪಲ್ಲವಿ॥
ಹಾರಿ ಹರಿವ ಝರಿಯ ನೀರು
ತುಂಗೆ ತೆಂಗು ಕೌಂಗು ಗೇರು
ಬಿಸಿಲೊಳೆಸೆವ ಭತ್ತ ಪೈರು
ಬೆಳೆದ ಕಬ್ಬು ಮೂರು ಮಾರು
ನಮ್ಮ ನಾಡು ಸೊಗದ ಸಾರು
ಸುಖದ ಲತೆಯ ತಾಯಿ ಬೇರು.[೯೩]

ಸ್ವರ್ಗದ ದೇವಿ ಭುವಿಗೆ ಬಂದು ಕೊಂಕಣದ ಸೌಂದರ್ಯ ಕಂಡು ಅಲ್ಲಿ ನಿಂದಳೇನೋ ಎಂದು ಕವಿ ಶಂಕಿಸುತ್ತಾರೆ. ಪಂಜೆಯವರ 'ಎಲ್ಲಿ ಭೂರಮೆ ದೇವ ಸನ್ನಿದಿ ಬಯಸಿ ಬಿಮ್ಮನೆ ಬಂದಳೊ' ಎಂಬ ಧಾಟಿಯಲ್ಲಿ ಕವನ ರಚನೆಗೊಂಡಿದೆ. ಕೊಂಕಣದ ನದಿ, ಬೆಳೆ ಹಾಗೂ ಪರಿಸರವನ್ನು ಇಲ್ಲಿ ವರ್ಣಿಸಲಾಗಿದೆ.

ಇದೇ ಕವಿಯ 'ಗೋವೆಯ ವಿಮೋಚನೆ' ಕವಿತೆ ಉಲ್ಲೇಖನಾರ್ಹ.

ಗೋಮಂತಕದ ತಾಯಿ ಹೇಮಂತದಲಿ ತೊಟ್ಟ
ಮುಕ್ತಿ ಪಿತಾಂಬರದ ಶುಭ್ರ ಬಣ್ಣ
ಕೊನೆಯವರೆಗೂ ಕಡಲ ನೆರೆಯಾಗಿ ಉಕ್ಕೇರಿ
ಸ್ವಾತಂತ್ರ್ಯ ಲಹರಿಗಳ ಕುಳಿಸಲಣ್ಣ.[೯೪]

ಗೋವೆಯನ್ನು ತಾಯಿಯಾಗಿ ಕಂಡಿದ್ದಾರೆ. ಮಾತ್ರವಲ್ಲ ಅದು ಕೊನೆಯವರೆಗೂ ಸ್ವಾತಂತ್ರ್ಯ ಲಹರಿಯನ್ನು ಕಡಲ ನೊರೆಯಂತೆ ಕುಣಿಸಲಿ, ಪರಾಧೀನತೆಯ ದುಸ್ಥಿತಿ ಬಾರದಿರಲಿ, ಸ್ವಾತಂತ್ರ್ಯದ ಸ್ವಾಭಿಮಾನ ನಿರಂತರವಾಗಿರಲಿ ಎಂಬ ಆಶಯ ಈ ಕವನದಲ್ಲಿದೆ.

ಸಾಲಿ ರಾಮಚಂದ್ರರಾಯರ 'ಕೊಡಗು' ಕರುನಾಡು ದೇವರಳ್ಕರಿನ ನಾಡು.

. . . . . ಬಂದೆ ನಾನಿಲ್ಲಿಗೆನ್ನಕ್ಕರದ ತಾಯ್ ನೆಲದ
ಚಂದಮಂ ನೋಡುತುಂ ಶ್ರೀನಿವಾಸನ ನಲ್ಮೆ
ಯಿಂದೆ ಸುಖದಿಂದೆ ಸಂಚರಿಸುತುಂ ಬಹುಕಾಲದಿಚ್ಚೆ ಕೈಗೂಡಿತಿಂದು
ಎಂದು ಕಣ್ತುಂಬೆ ಕರುನಾಡ ಚೆಲುವಂ ಕಾಣ್ಬೆ
ನೆಂದು ಮನದೊಳಗನಿಶ ಮಾಗೆ ಚಿಂತಿಸುತಿರ್ದೆ
ನಂದು ತಿಳಿದಿರ್ದರಾರಿಂತು ಸೊಬಗಿನ ಸುಗ್ಗಿಯಿದಿರೊಳಾಂ ನಿಲ್ವೆನೆಂದು[೯೫]

ನಾಡುನುಡಿಯ ಸಂರಕ್ಷಣೆಯನ್ನು ಜನಮೂಲ ಬಲದಿಂದ ನೋಡುವ ಪ್ರಯತ್ನ ಒಂದೆಡೆ ನಡೆದಿರುವಾಗಲೇ, ಮತ್ತೊಂದೆಡೆ ಆಸ್ತಿಕರು ದೈವದ ನೆಲೆಯಿಂದ ನೋಡುವ ಪ್ರಯತ್ನಗಳು ನಡೆದಿವೆ ಎಂಬುದಕ್ಕೆ ಈ ಕವಿತೆ ಉದಾಹರಣೆಯಾಗಿದೆ.

ನಾಡದೇವಿ ಭುವನೇಶ್ವರಿ. ಆಕೆಯೇ ಮತ್ತೊಂದು ಹೆಸರಿನಲ್ಲಿ ಖ್ಯಾತಳಾದವಳು ಚಾಮುಂಡಿ. ಆ ಚಾಮುಂಡಿಯನ್ನೆ ತಾಯಿಯೆಂದು ಶ್ರೀಯವರು ಸ್ಮರಿಸಿದ್ದಾರೆ. ಆಗ್ಗೆ ಮೈಸೂರಿನ ಮಹಾರಾಜರಾಗಿದ್ದ ಕೃಷ್ಣರಾಜ ಒಡೆಯರ್‌ರವರ ಬಗ್ಗೆ ಕವಿ ದೇವಿಯಲ್ಲಿ ಪ್ರಾರ್ಥಿಸುವ ಸಂದರ್ಭ 'ಶ್ರೀ ಕೃಷ್ಣರಾಜ ರಜತ ಮಹೋತ್ಸವ ಪ್ರಾಗಾಥ'ದಲ್ಲಿ ಕಂಡುಬರುತ್ತದೆ.

ಕಾಯಿ, ತಾಯಿ, ಕೃಪೆಯ ತೋರಿ
ನಮ್ಮ ಕೃಷ್ಣನ;
ಬೆಳ್ಳಿಬೆಟ್ಟದೊಡತಿ, ಗೌರಿ,
ಬೆಳ್ಳಿಯೊಸಗೆಗೊಸಗೆ ಬೀರಿ
ಕಾಯಿ ಕೃಷ್ಣನ. [೯೬]
. . . .

ಅಧಿಕಾರಶಾಹಿಯನ್ನು ಓಲೈಸುವ ಮನೋಭಾವವನ್ನು ಇಲ್ಲಿ ಗುರುತಿಸುತ್ತೇವೆ. ಇಂದಿನವರು ಕೆಲ ಸಂಗತಿಗಳಲ್ಲಿ ಅಂದಿನವರ ಮನೋಧರ್ಮವನ್ನು ಒಪ್ಪಲು ಸಾಧ್ಯವಿಲ್ಲ. ಅಂದಿನವರು ರಾಜಾ ಪ್ರತ್ಯಕ್ಷ ದೇವತಾ ಎಂದು ನಂಬಿದ್ದವರು. ಆದ್ದರಿಂದ ಹಾಗೆ ಮಾಡಿರಬಹುದೇ ಎಂಬ ಸಂಶಯ ಓದುಗನಿಗೆ ಎದುರಾಗುತ್ತದೆ.

ಪರಕೀಯರಿಂದ ಬಿಡುಗಡೆಗೊಳ್ಳಬೇಕೆಂಬ ಭಾವನೆ ಇದ್ದರೂ ರಾಜಪ್ರಭುತ್ವದ ನೆರಳಿನಲ್ಲೇ ಇರಬೇಕೆಂಬ ಮೋಹ ಬಿಎಂಶ್ರೀ.ಯವರಲ್ಲಿರುವುದು ಈ ಕವಿತೆಯಿಂದ ತಿಳಿದು ಬರುತ್ತದೆ.

ಭಾಷೆಯನ್ನು ಎಲ್ಲ ಕವಿಗಳೂ ತಾಯಿಯೆಂದು ಭಾವಿಸಿರುವಂತೆ ಶ್ರೀಕಂಠಯ್ಯನವರೂ ಕೂಡ ಭಾವಿಸಿದ್ದಾರೆ. ಈ ಪದ್ಯದಲ್ಲಿ ಕನ್ನಡ ತಾಯಿ, ಭರತ ಮಾತೆ ಹಾಗೂ ಕಡಲ ರಾಣಿಯದೊಬ್ಬಳು ಎಂದು ಕರ್ನಾಟಕ, ಭಾರತ ಹಾಗೂ ಬ್ರಿಟನ್ ದೇಶಗಳನ್ನು ಸ್ತ್ರೀರೂಪದಲ್ಲಿ ಕಂಡಿದ್ದಾರೆ.

. . . .
ಆವ ದೇವಿಯರಿವರು ಮೂವರು? ಕನ್ನಡದ ಸಿರಿಯೊಬ್ಬಳು,
ಅಕ್ಕ ತಂಗಿಯರಂತೆ ತಬ್ಬುತ, ಕಡಲರಾಣಿಯದೊಬ್ಬಳು.
ಶ್ರೀ ಭರತಮಾತೆಯದೊಬ್ಬಳು. [೯೭]

ಕನ್ನಡ ನಾಡದೇವಿ, ಭಾರತದೇವಿಯರನ್ನು ತಾಯಿಯೆಂದು, ದೇವಿಯೆಂದು ಕರೆದಿರುವರಾದರೂ ಇಂಗ್ಲೆಂಡನ್ನು ಕಡಲರಾಣಿ, ಸೋದರಿಯಂತೆ ನಮ್ಮಲ್ಲಿಗೆ ಬಂದಿದ್ದಾಳೆ ಎಂದು ಅದರ ಪ್ರತ್ಯೇಕತೆಯನ್ನು ಮಾರ್ಮಿಕವಾಗಿ ಸೂಚಿಸಿದ್ದಾರೆ.

ಹಡೆದ ತಾಯಿ ಕನ್ನಡಮ್ಮನಾದರೆ, ಆಕೆಗೆ ಸೋದರಿಯರಿದ್ದಾರೆ. ಅವರಲ್ಲಿ ತಮಿಳು ಸೋದರಿ ಮುಖ್ಯಳಾಗಿದ್ದಾಳೆ. ದ್ರಾವಿಡ ಭಾಷೆಗಳಿಗೆ ಹಿರಿಯಳಾದ ತಮಿಳಿನ ಬಗ್ಗೆ ಬಿ.ಎಂ.ಶ್ರೀಗೆ ವಿಶೇಷ ಒಲವಿರುವುದು ಇದರಿಂದ ತಿಳಿದು ಬರುತ್ತದೆ. ಈ ಕವಿತೆಯಲ್ಲಿ ಅನ್ಯಭಾಷಾ ಸಾಮರಸ್ಯವಿರಬೇಕು ಎಂಬ ವಿಶಾಲ ಪ್ರಜ್ಞೆಗೆ ಒತ್ತು ಸಿಕ್ಕಿದೆ. ಅವರ ಕವಿತೆ 'ಹಾರೈಕೆ'ಯಲ್ಲಿ ಈ ಮಾತು ಬರುತ್ತದೆ. ೨೯ನೇ ಕನ್ನಡ ಸಾಹಿತ್ಯ ಸಮ್ಮೇಳನ ಮದ್ರಾಸ್ ನಗರದಲ್ಲಿ ಸೇರಿದ್ದಾಗ ಶ್ರೀಯುತರು ಕಳುಹಿಸಿದ ಹಾರೈಕೆ – ಕವಿತೆ.

'. . . . .
ಕನ್ನಡ ತಾಯ್ ವಾಳ್ಗೆ, ವಾಳ್ಗೆ ಚಂದಮಿಳುಂ,
ಕೂಡಿದೀ ಚೆನ್ನೈಮಾನಾಡು.'[೯೮]

ಚೆನ್ನೈಮಾನಾಡು ಬರಿ ತಮಿಳಿನಿಂದ ತುಂಬಿಲ್ಲ. ಅದರ ಹಿರಿಮೆಗೆ ಕನ್ನಡವೂ ನೆರವಾಗಿದೆ. ಅದರಿಂದಲೇ ಅವೆರಡೂ ಸೋದರ ಭಾಷೆಗಳು. ಸೌಹಾರ್ದತೆಯಿಂದ ಕೊಡು ಕೊಳ್ಳುವಿಕೆಯಿಂದ ಬೆಳೆಯಬೇಕೆಂಬ ಬಯಕೆ ಕವಿಯದಾಗಿದೆ. ಹೀಗೆ ಬಿಎಂಶ್ರೀಯವರು ತಮ್ಮ ಕವಿತೆಗಳಲ್ಲಿ ದೇಶ, ಭಾಷೆ, ಸಂಸ್ಕೃತಿ, ನಿಸರ್ಗಗಳಾದಿಯಾಗಿ ಅನೇಕ ರೂಪಗಳಲ್ಲಿ ತಾಯಿಯನ್ನು ಕಂಡಿದ್ದಾರೆ. ಆ ತಾಯಿ ಸದಾ ತಲೆ ಎತ್ತಿ, ಎದೆ ಎತ್ತಿ, ಅಭಿಮಾನದಿಂದ ತನ್ನ ಸರೀಕರೊಂದಿಗೆ ಬಾಳಬೇಕು. ಅದು ತನ್ನ ಮಕ್ಕಳ ಸ್ವಾಭಿಮಾನದ ಬದುಕಿನಿಂದ ಮಾತ್ರ ಸಾಧ್ಯವೆಂದು ಕನ್ನಡಿಗರಲ್ಲಿ ನವಚೈತನ್ಯ ಮೂಡುವಂತೆ ಜಾಗೃತಗೊಳಿಸಿದ್ದಾರೆ. ನಿರಭಿಮಾನಕ್ಕೆ ಅವಕಾಶವಿಲ್ಲದಂತೆ ಕನ್ನಡ ನುಡಿ ನಾಡು ಇದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಆದರೆ ಕಡಂಗೋಡ್ಲು ಅವರ 'ಮಂಗಲ ಗೀತೆ' ಕೇವಲ ಸ್ತುತಿಯ ಮಟ್ಟದಲ್ಲಿ ನಿಲ್ಲದೆ ಅದನ್ನು ಮೀರುವ ಕವಿತೆಯಾಗಿದೆ.

ತನು ತುಂಬಿ ಮನ ತುಂಬಿ ಚಿತ್ತ ಚೇತನ ತುಂಬಿ
ಕನ್ನಡದ ಜೀವಕಳೆ ಹೊಮ್ಮುತಿದೆ ನೋಡು
ಭಾವ ಕಳೆ – ಪೌರುಷದ ತುಂಬು ಹೊಳೆ ಹರಿಯುತಿರೆ
ಭಿನ್ನತೆಯ ನೋವ ಕಳೆ – ಮಂಗಲದ ಹಾಡು [೯೯]

ಇವರು ಕನ್ನಡ ತಾಯಿಯನ್ನು ಯಾವುದೇ ಭೇದ ಭಾವವಿಲ್ಲದೆ ಹೊಸ ಉತ್ಸಾಹದಿಂದ ಸ್ವಾಗತಿಸಬೇಕೆಂದು ಹೇಳುತ್ತಾರೆ. ಕರ್ನಾಟಕದ ಏಕೀಕರಣದ ಬಗ್ಗೆ ಬರೆದ ಕವಿತೆ ಇದಾಗಿದೆ.

ಮೂಡು ಪಡು ತೆಂಕಬಡಗೊಂದಾಗಿ ಕೂಡುತಿವೆ.
ತಾಯ ಮೈಗಾಯಗಳು ಮಾಯುತಿವೆ ನೋಡು
ನಿನ್ನ ಮೊಗವರಳದೆ? ಮತಿಹಿಗ್ಗಿ ನಲಿಯದೆ?
ಕಲ್ಲ ಕೆತ್ತನೆಯೇನೋ ನಿನ್ನೆದೆಯಗೂಡು? [೧೦೦]

ಕನ್ನಡ ಭಾಷೆಯನ್ನಾಡುವ ಜನರು ವಿವಿಧ ಪ್ರಾಂತ್ಯಗಳಲ್ಲಿ ಚೆದುರಿ ಹೋಗಿರುವುದನ್ನು, ಅವರಲ್ಲಿ ಏಕತೆ ಮೂಡದಿರುವುದನ್ನು ಗಾಯ ಎಂದು ಕವಿ ಇಲ್ಲಿ ಭಾವಿಸಿರಬಹುದು. ಆದ್ದರಿಂದಲೇ ಮನಸ್ಸನ್ನು ಪ್ರಸ್ತಾಪಿಸದೆ ಮೈಯನ್ನು ಅಂದರೆ ಭೌತಿಕ ಸ್ಥಿತಿಯನ್ನು ಪ್ರಸ್ತಾಪಿಸಿರುವುದು ಹರಿದು ಹಂಚಿ ಹೋಗಿರುವ ಸ್ಥಿತಿಯನ್ನು ತಿಳಿಸುತ್ತದೆ. ಇಲ್ಲಿ ತಾವು ಮಾಡಬೇಕಾದ ಕೆಲಸದಲ್ಲಿ ವಿಮುಖರಾಗಿರುವ ಜನತೆಯ ಮನೋಭಾವವನ್ನು ಬಡಿದೆಬ್ಬಿಸುವ ಧ್ವನಿ ಇಲ್ಲಿದೆ. ಕರ್ನಾಟಕಕ್ಕೆ ಒಂದು ಖಚಿತವಾದ ಎಲ್ಲೆಕಟ್ಟು ಇಲ್ಲದಿರುವುದು ನಾಲ್ಕು ದಿಕ್ಕುಗಳು ಸೂಚಿಸುತ್ತವೆ.

ಕನ್ನಡದ ಇತಿಹಾಸದ ಕತೆ ಹೇಳಿ ಕಣ್ಣೀರಿಡುವ ಬದಲು ತೆರೆದ ಭವ್ಯ ಭವಿಷ್ಯದಲ್ಲಿ ಹೊಸಬದುಕನ್ನು ರೂಪಿಸಬೇಕೆಂಬ ಕಾತುರತೆಯನ್ನು ಇಲ್ಲಿ ಕಾಣಬಹುದಾಗಿದೆ. ಇದೇ ಪದ್ಯದಲ್ಲಿ ಮುಂದೆ ಕನ್ನಡದ ಬಗೆಗಿನ ನಿಷ್ಠೆಯೆ ರಾಷ್ಟ್ರ ನಿಷ್ಠೆಯೂ ಹೌದು. ಕನ್ನಡದ ಬಗೆಗಿನ ಕಾಳಜಿ ರಾಷ್ಟ್ರವನ್ನು ಮುನ್ನಡೆಸುವ ಕಾಳಜಿಯೂ ಹೌದು ಎಂಬ ಅಭಿಪ್ರಾಯ ಕವಿಯದು. ಕೊನೆಗೆ:

ಕನ್ನಡದ ಜೀವವೇ ಧನ್ಯತೆಯ ಕೊಂಡಾಡು!
ಈ ನೆಲದಿ ಹುಟ್ಟಿರುವೆ. ಈ ದಿನವ ಕಂಡೆ!
ಭರತ ಮಾತೆಯ ಮುದ್ದುಗುವರಿ ಕನ್ನಡ ತಾಯ
ಕಿಂಕರನ – ಶಂಕರನ ಹಾಡನೆದೆಗೊಂಡೆ. [೧೦೧]

ಎಂದು ಹೇಳುವ ಮೂಲಕ ಕವಿ ತನ್ನನ್ನು ಕನ್ನಡ ತಾಯ ಸೇವಕನೆಂದು ಕರೆದುಕೊಂಡಿದ್ದಾರೆ. ಈ ನೆಲದಲ್ಲಿ ಹುಟ್ಟಿದ್ದಲ್ಲದೆ ಈ ಅಪೂರ್ವ ದಿನವನ್ನು ಕಾಣುವುದು ಭಾಗ್ಯವೆಂದು ಕರೆಯುವ ಕವಿ ಕಳೆದ ಬದುಕನ್ನು ನೆನಪಿಸಿಕೊಂಡು ಪರಿತಪಿಸುವುದಕ್ಕಿಂತ, ಇರುವ ಬದುಕನ್ನು ಕರ್ತವ್ಯದಲ್ಲಿ ಜಾಗೃತರಾಗುವ ಮೂಲಕ ಹಸನುಗೊಳಿಸಬೇಕೆಂದು, ಆ ಮೂಲಕ ಸಿದ್ಧಿಯನ್ನು ಪಡೆದುಕೊಳ್ಳಬೇಕೆಂದು ಹೇಳುತ್ತಾರೆ. ಕವಿಯ ವಿಚಾರಗಳು ಇಲ್ಲಿ ಮಾಗಿರುವುದನ್ನು ಕಾಣಬಹುದಾಗಿದೆ.

ಪಾಂಡೇಶ್ವರ ಗಣಪತಿರಾವ್ ಅವರು ತಮ್ಮ 'ಕನ್ನಡ ಕುಲ' ಎಂಬ ಕವನದಲ್ಲಿ

ಕನ್ನಡ ಕುಲವೊಂದೇ ಕುಲ.
ತಾಯೊಬ್ಬಳೇ ನಮಗೆ;
. . . .
ಜಯ ಕನ್ನಡ ಮಾತೆ;
ಭಾರತ ಸುಪ್ರೀತೆ! [೧೦೨]

ಅನೇಕ ಜಾತಿ ಮತ ಪಂಥಗಳ ಗೊಂದಲದಲ್ಲಿ ಮುಳುಗಿ, ಮಾನವೀಯತೆಗೆ ಅತೀತವಾಗಿರುವ ಕನ್ನಡಿಗರು ಇನ್ನಾದರೂ ನಾಡು ನುಡಿಯ ಹಿನ್ನೆಲೆಯಲ್ಲಿ ಭಾವನಾತ್ಮಕವಾಗಿ ಒದುಗೂಡಬೇಕು. ಒಂದೇ ಕುಲ ಒಬ್ಬಳೇ ತಾಯಿ ಎಂಬ ವಿಶಾಲ ಪ್ರಜ್ಞೆಯ ಭಾವನೆ ಬೆಳೆಸಿಕೊಳ್ಳಬೇಕು. ಇದು ತುರ್ತಾಗಿ ಆಗಬೇಕಾದ ಕಾರ್ಯ. ಹಾಗಾದಾಗ ಕನ್ನಡವೂ ಏಳಿಗೆ ಹೊಂದುತ್ತೆ. ಭರತ ದೇಶವೂ ಭವ್ಯವಾಗುತ್ತೆ ಎಂದು ಕವಿ

ಕರೆಯುತ್ತಿದ್ದಾರೆ. ಕವಿಯ ಮಾತುಗಳನ್ನು ಗಮನಿಸಿದಾಗ ಕನ್ನಡಿಗರಲ್ಲಿ ಒಮ್ಮನಸ್ಸು ಹಾಗೂ ಒಗ್ಗಟ್ಟಿನ ಕೊರತೆ ಇತ್ತೆಂದು ಭಾಸವಾಗುತ್ತದೆ.

ಬೇಂದ್ರೆಯವರ ವಿಶಾಲ ದೃಷ್ಟಿಗೆ, ವಿಶ್ವಪ್ರೇಮಕ್ಕೆ ಹಾಗೂ ನೆಲದ ಗುಣಕ್ಕೆ ಅವರು ಕಂಡುಕೊಂಡ ತಾಯಂದಿರು ಉದಾಹರಣೆಯಾಗಿದ್ದಾರೆ. ಅವರು ಭೂಮಿತಾಯಿ, ಭರತಮಾತೆ, ಕನ್ನಡದ ತಾಯಿ, ಧಾರವಾಡದ ತಾಯಿ, ಹೆತ್ತ ತಾಯಿ ಅಂಬಿಕೆ – ಈ ಐದು ಐದೆಯರ ಪಂಚ ಪ್ರಾಣಗಳಾಗಿ ಈ ಜೀವದೇಹನಿಹನು ಎಂದು ಹೇಳಿಕೊಂಡಿದ್ದಾರೆ.

ಧಾರವಾಡದ ತಾಯೇ! ನನಗಾಧಾರ ನಿನ್ನದಲ್ಲದಿಲ್ಲ
ಭಾರ ನಿನ್ನ ಮೇಲೆ ಇರುಲು ಯಾರಿಗಾರು ಎಂಬರೇನೆ? [೧೦೩]

ಯಾವುದೇ ಕವಿ ತಾನು ಬೆಳೆದ ಮತ್ತು ಅನುಭವವನ್ನು ಗ್ರಹಿಸಿದ ನೆಲವನ್ನು ಮರೆಯಲು ಸಾಧ್ಯವಿಲ್ಲ. ಬೇರೆ ಬೇರೆ ನೆಲದಲ್ಲಿ ವಾಸಿಸುವ ಕವಿಗಳಿಗೆ ಒಂದೇ ರೀತಿಯ ಭಾವಗಳು ಬರಬಹುದಾದರೂ ಅವಕ್ಕೆ ಪ್ರಾದೇಶಿಕತೆಯ ಛಾಪು ಇದ್ದೇ ಇರುತ್ತದೆ. ಈ ಹಿನ್ನೆಲೆಯಲ್ಲಿ ಬೇಂದ್ರೆಯವರ ಈ ಕವಿತೆ ಮತ್ತು ಹುಯಿಲುಗೋಳ ನಾರಾಯಣರಾಯರ ಕವಿತೆಯನ್ನು ಗ್ರಹಿಸಬಹುದು. ಹುಯಿಲುಗೋಳರು ತಮ್ಮ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಕವಿತೆಯಲ್ಲಿ ಗದುಗಿನ ವೀರನಾರಾಯಣನ ಪ್ರಸ್ತಾಪ ಮಾಡಿದಂತೆ ಇಲ್ಲಿ ಬೇಂದ್ರೆಯವರು ಧಾರವಾಡವನ್ನು ಪ್ರಸ್ತಾಪಿಸಿದ್ದಾರೆ.

ಧಾರವಾಡ ಇವರನ್ನು ಕಾಪಾಡಿದ ಮಾತೆಯಾಗಿ ಕಂಡಿದ್ದಾಳೆ. ದುರ್ಗಾಮಾತೆಯ ದರ್ಶನ ಆಕೆಯ ಕಣ್ಣಿನಿಂದ ಭಕ್ತರಿಗಾಗುತ್ತದೆ. ಅದೇ ಅವರನ್ನು ಕಾಪಾಡುವ ಬೆಳಕು.

ನಿನ್ನ ಕಣ್ಣ – ಕಡೆಗೀಲಿನಿಂದ
ನನ್ನ ಹೃದಯ ಕಡಿಯೇ ತಾಯಿ
ಎನ್ನ ಹೃದಯ ಕಡೀ. . . . .[೧೦೪]

ತಾಯಿ ತನ್ನ ಕಡೆಗೋಲಿನಿಂದ ಹೃದಯ ಕಡೆದಾಗ ಬೆಣ್ಣೆ ಬರುತ್ತದೆ. ಅದರ ಸವಿಯನ್ನು ತನಗೆ ತಾಯಿ ಉಣಿಸುತ್ತಾಳೆ ಎಂದು ಭಾವಿಸಿ, ಅವಳಿಂದ ಸಾತ್ವಿಕ ಗುಣದ ಬಲ ಸಿಗುತ್ತದೆ ಎಂದು ತಿಳಿದು ಪ್ರಾರ್ಥಿಸಿದ್ದಾರೆ.

ಎನ್ನ ಹೃದಯ ಕಡೀ. . .
ಬೆಣ್ಣೆ ಮೇಲೆ ತೇಲಿಸಿ ತಂದು
ನನ್ನ ಬಾಯ್ಗೆ ಹಿಡೀ
ನೀನೆ ಬಾಯ್ಗೆ ಹಿಡಿಯೆ ತಾಯಿ.

ಇಲ್ಲಿನ 'ಕಡಿ' ಮಥಿಸು ಎಂಬ ಅರ್ಥವನ್ನು ಹೊಮ್ಮಿಸುತ್ತದೆ. ಈ ವರೆಗೂ ದೇಶಭಾಷೆಯ ಬಗೆಗೆ ಗಂಭೀರವಾದ ಚಿಂತನೆಗೆ ತನ್ನನ್ನು ಒಡ್ಡಿಕೊಳ್ಳದೆ ಹೆಪ್ಪುಗಟ್ಟಿದ್ದ ಭಾವಗಳನ್ನು ಮಥನ ಕ್ರಿಯೆಯ ಮೂಲಕ ಛಿದ್ರಗೊಳಿಸಿ ಅವರಲ್ಲಿರುವ ಸಾರಸತ್ವವನ್ನು

ಬೆಣ್ಣೆಯಾಗಿ ತೇಲಿಸುವುದರ ಮೂಲಕ ಸ್ಥೂಲದಿಂದ ಸೂಕ್ಷ್ಮತೆಯ ಕಡೆಗೆ ತನ್ನ ಚಿಂತನೆಗಳನ್ನು ಸಂಕೀರ್ಣಗೊಳಿಸಿಕೊಳ್ಳುವ ಪ್ರಯತ್ನವಿದೆ.

ಬೇಂದ್ರೆಯವರಿಗೆ ತಾಯಿಯ ಮುಖಗಳಲ್ಲಿ ಒಂದು ಕನ್ನಡ ಮುಖ. ಆಕೆಯೇ ಕನ್ನಡ ತಾಯಿ. ಕರ್ನಾಟಕ ಭಾರತದ ಅವಿಭಾಜ್ಯ ಅಂಗ. ಕರ್ನಾಟಕ ಭರತ ಮಾತೆಯ ಮಗಳು ಎಂಬುದು ಕನ್ನಡ ಕವಿಗಳ ಹೆಮ್ಮೆಯ ವಿಷಯದಂತೆ ಬೇಂದ್ರೆಯವರಿಗೂ ಹೆಮ್ಮೆಯ ವಿಷಯ. ಅದನ್ನು 'ಕನ್ನಡದ ಕಂದವ್ವನ ಲಾಲಿ' ಎಂದು ಕರೆದಿದ್ದಾರೆ.

ಓರ್ವ ತಾಯಿಯು ತನ್ನ ಕೂಸಿರುವ ತೊಟ್ಟಿಲವ ಕೈಯಿಂದ ತೂಗುತಿಹಳೋ
ಪೂರ್ವ ಪಶ್ಚಿಮ ಘಟ್ಟದಲ್ಲಿ ಪಟ್ಟಿರುವಂತ ನಾಡನ್ನೆ ತೂಗುತಿಹಳೋ [೧೦೫]

ಭಾರತ ಮಾತೆ ಹಾಗೂ ಕನ್ನಡ ತಾಯಿ ಇವುಗಳ ಬಗ್ಗೆ ಕವಿ ಧೋರಣೆ ಒಂದೇ ಆದರೂ ಕನ್ನಡ ತಾಯಿಗೆ ಭಾರತಾಂಬೆಯೇ ತಾಯಿ ಎಂಬ ಭಾವವಿದೆ. ಆಕೆ ಆನಂದದ ಕೂಸಾಗಿ ಕನ್ನಡ ಮಾತೆ ಪೋಷಿತಳಾಗಿದ್ದಾಳೆ. ಇಲ್ಲಿ ಭರತಾಂಬೆಯ ಹಿರಿಮೆ ಇದೆ.

ಬೇಂದ್ರೆಯವರಿಗೆ ಕನ್ನಡದ ಬಗ್ಗೆ, ಕನ್ನಡಿಗರ ಬಗ್ಗೆ ಅಪಾರ ಪ್ರೀತಿ. ಭಾರತಾಂಬೆಯ ಮಕ್ಕಳಾದ ಕನ್ನಡಿಗರು ಎಲ್ಲಿದ್ದರೂ ಅವರು ವಿಶ್ವನಾಗರಿಕರು. ಭತ್ತದ ಮೇಲೆ ಇರುವ ಕವಚದಂತೆ, ಬೀಜದ ಮೇಲಿನ ತುಷದಂತೆ ಕನ್ನಡಿಗರನ್ನೇ ಕನ್ನಡ ಕಾಪಾಡುತ್ತದೆ. ಅದು ವಿಶ್ವವಂದ್ಯವಾಗುತ್ತದೆ ಎಂಬುದು ಕವಿಯ ಆಶಯವಾಗಿದೆ.

ಭಾರತೀಯ ಜೋಡಿ, ಕನ್ನಡದ ಮೋಡಿ, ಭೂದೇವಿ ಮಾಡಿ
ಎರಕವನೆ ಹೊಯ್ದಿರೆ
ಉಸದೊಳಗೆ ರಸವು ಹಲ ಬಣ್ಣ ಹೊಸವು, ಬೀಜವನೆ ತುಷವು
ತಾಯಾಗಿ ಕಾಯ್ದಿರೆ! [೧೦೬]

ವಿಶ್ವ ವ್ಯಾಪಕತೆ, ರಾಷ್ಟ್ರೀಯತೆ ಮತ್ತು ಪ್ರಾದೇಶಿಕತೆ – ಈ ಮೂರು ಪ್ರತ್ಯೇಕತೆಗಳು ಏಕತೆಯ ಬಂಧಕ್ಕೆ ಒಳಪಟ್ಟಿದ್ದಾಗಲೇ ಏನನ್ನಾದರೂ ಸಾಧಿಸಲು ಸಾಧ್ಯವಾಗುವಂತಹುದು. ಇವು ಹೊರ ನೋಟಕ್ಕೆ ಬೇರೆ ಬೇರೆಯಂತೆ ಕಂಡರೂ ಸಾವಯವವಾಗಿ ಒಳಸಂಬಂಧಗಳನ್ನು ಪಡೆದುಕೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಮಾತೃತ್ವ ವಿಶ್ವ ವ್ಯಾಪಕ ಕಲ್ಪನೆಯನ್ನು ಪಡೆದುಕೊಂಡಿದೆ.

ಕನ್ನಡಿಗರ ಮನಸ್ಸು ಕನ್ನಡತನದಿಂದ ಗಟ್ಟಿಗೊಳ್ಳಬೇಕು. ದಿನ ದಿನಕ್ಕು ಅದು ತನ್ನತನವನ್ನು ಸಡಿಲಿಸದಂತೆ ಬಲಗೊಳ್ಳಬೇಕು. ಅಭಿಮಾನ ಗರಿಗಟ್ಟಬೇಕು. ಆಗ ಕನ್ನಡತಾಯಿ ಕನ್ನಡಿಗರ ತಾಯಿಯಾದಾಳು ಎಂಬುದನ್ನು 'ಮುಗಿಲ ಮಲ್ಲಿಗೆ'ಯ 'ಯಾರಿಗೆ ಬೇಕಾಗೈತಿ ನಿಮ್ಮ ಕವಿತಾ?' ಎಂಬ ಕವಿತೆಯಲ್ಲಿ ಹೇಳಿದ್ದಾರೆ.

ಒಗಿ ಆ ಕವಿತಾ
ತಾ ಇಲ್ಲಿ, ಕೈತಾ
ಹಾಕು ಕೈಮ್ಯಾಲೆ ಕೈ
ಅನ್ನು ಕರ್ನಾಟಕ ಮಾತಾಕು ಜೈ [೧೦೭]

ಕುವೆಂಪು ತಮ್ಮ 'ಜಡವಾದಿ' ಕವಿತೆಯಲ್ಲಿ ತಾನು ಜಡವಾದಿಯಾಗಿ, ತಾಯಿಯಾದ ಭಾರತ ಮಾತೆಯು ಪರಾಧೀನಳಾಗಿ ನಿಷ್ಕ್ರಿಯಳಾಗಿರುವುದನ್ನು ಛೇಡಿಸುತ್ತಾರೆ. ಕರ್ಣನಿಗೆ ಆ ಕುಂತಿ ತಾಯಂತೊ ಅಂತೆ, ಓ ಭೂಮಿ ನೀನೆಮಗೆ ತಾಯಲ್ತೆ ಅಂತೆ? ಎಂದು ಜರಿಯುತ್ತಾರೆ.

ಉರುಳುರುಳು ಹಗಲಿರುಳು
ಸುಂದರ ವಸುಂಧರ!
ಕಾಲದೇಶಗಳೆಂಬ
ಎರಡು ದಡಗಳ ತುಂಬ
. . . .
ಎಲೆ ಧರಣಿ ನಿಷ್ಕರುಣಿ!
ನೀನಲ್ಲೆ ತರುಣಿ?
. . . .
.ನಿನ್ನ ಕಂಬಿಯ ಮೇಲೆ ನೀನುರುಳು ಧರಣಿ:
ನಿನ್ನ ವಿಟನದೊ ಅಲ್ಲಿ
ಹೊಳೆಯುವನು ತರಣಿ! ೧೦೮

ಇದೊಂದು ವಿಡಂಬನಾತ್ಮಕ ದೀರ್ಘ ಕವನ. ಭೂದೇವಿಯು ಮಕ್ಕಳಾದ ಮಾನವರ ಸಂಕಷ್ಟಗಳನ್ನು ಕಣ್ಣಾರೆ ಕಂಡಾಗಲೂ ನಿವಾರಿಸದೆ ತಾನು ತನ್ನ ವಿಟನಾದ ಸೂರ್ಯನಲ್ಲಿ ಮೈಮರೆಯುವ ಸ್ವಾರ್ಥತೆಯನ್ನು ಕವಿ ಖಂಡಿಸಿದ್ದಾರೆ. 'ಬಲವಿದ್ದವರು ಬಂದು ನೆರೆಯವರ ನೆಲೆ, ಸಿರಿಯ ಕದ್ದು ತುಳಿಯುತ್ತಿರುವಾಗ ಜನರ ಮೊರೆ ಬಾನೆಡೆಗೆ ಮುಟ್ಟುತ್ತಿರಲು ಉರುಳುರುಳು ಹಗಲಿರುಳು ಎಲೆ ಧರಣಿ! ನಿಷ್ಕರುಣಿ!' ಎಂದು ನಿಂದಿಸುತ್ತಾರೆ.

ಎಲ್ಲ ಕವಿಗಳಂತೆ ಕುವೆಂಪು ಕೂಡ ಭಾಷೆಯನ್ನು ದೇವತೆಗೆ ಅಥವಾ ತಾಯಿಗೆ ಹೋಲಿಸಿದ್ದಾರೆ. ಕನ್ನಡದ ಕವಿಯಾದ ಕುವೆಂಪು ಸಂಸ್ಕೃತ ಭೂಯಿಷ್ಠವಾದ ಶೈಲಿ ರೂಢಿಸಿಕೊಂಡವರು. ಹಾಗಾಗಿ ಸಂಸ್ಕೃತವನ್ನು 'ಸಂಸ್ಕೃತ ಮಾತೆ' ಎಂದು ಕರೆದು ಆ ಭಾಷೆಯ ಹಿರಿಮೆಗರಿಮೆಗಳನ್ನು ಬಣ್ಣಿಸಿದ್ದಾರೆ.

ಪೃಥಿವಿಯಾ ಪ್ರಥಮ ಪ್ರಭಾತದಲಿ, ಇತಿಹಾಸ
ದೃಷ್ಟಿಗಸ್ಪಷ್ಟ ಅಜ್ಞಾನ ಪ್ರಾಚೀನದಲಿ,
ಚಿರಧವಲ ಹಿಮಶೈಲ ಪೃಥುಲೋರು ಪ್ರೇಂಖದಲಿ
ನವಜಾತ ಶಿಶುವಾಗಿ ನಲಿದ ಮಂಗಲ ಮಯೀ
ಆರ್ಯ ಮಾತೆಯ ಮೊದಲ ತೊದಲ ನಾಗರಿಕತೆಯ
ಸಾಮಗಾನದ ವಾಣಿಯಿಂದೆ ಮೂಡಿದ ಮೂರ್ತಿ
ನೀನೆಲೌ ಸಂಸ್ಕೃತದ ವಾಗ್ದೇವಿ! ೧೦೯

ಭಾಷೆ ಬೆಳೆಯುವುದು ಜನ ಬಳಕೆಯಿಂದ, ಜನತೆ ಬೆಳೆಯುವುದು ಬಳಸುವ ಭಾಷೆಯಿಂದ. ಅಂತಹ ಭಾಷೆಯನ್ನು ಮಾತೃನೆಲೆಯಲ್ಲಿ ಪರಿಭಾವಿಸುವ ರೀತಿಯನ್ನು ಎಲ್ಲ ಕವಿಗಳಲ್ಲೂ ಗುರುತಿಸಬಹುದಾಗಿದೆ. ಅದೇ ರೀತಿ ಕುವೆಂಪು ಸಂಸ್ಕೃತ ಮಾತೆಯು

ಚಿರಧವಲ ವೈಶಿಷ್ಟ್ಯದ ಪರಿಚಯ ಸಂಸ್ಕೃತಮಯವಾಗಿಯೇ ಮೂಡಿದೆ. ಅದರ ಸಂಗೀತಮಯ ನಾದಲೋಲುಪ್ತತೆಯೇ ಅದರ ನಿರಂತರ ಚಲನೆಗೆ ಕಾರಣ. ಕವಿಕುಲ ಶಿರೋಮಣಿಗಳೆಲ್ಲರೂ ರೂಪುತಾಳಿದ್ದು ಈ ಭಾಷೆಯಿಂದ. ಕಾಳಿದಾಸಾದಿಗಳು, ಭಾಸ, ಭವಭೂತಿಗಳು, ಜ್ಞಾನಿ, ವೈಯಾಕರಣಿ, ರಸಋಷಿ, ವಿಭೂತಿಗಳು ನಿನ್ನ ನಿರ್ಝರಣಿಯಲ್ಲಿ ಕ್ರೀಡಿಸುವ ಕವಿ ಶಿಶುಗಳಾಗಿಹರು ಎಂದು ಸ್ಮರಿಸುತ್ತಾರೆ.

ಕೆ.ಎಸ್. ನರಸಿಂಹ ಸ್ವಾಮಿಯವರ 'ಕರ್ನಾಟಕ ರಾಜ್ಯೋತ್ಸವ' ಕವಿತೆಯಲ್ಲಿ ಚದುರಿಹೋಗಿದ್ದ ಕರ್ನಾಟಕ ಒಂದಾಗಿ ತನ್ನ ಸ್ವರೂಪ ಪಡೆದುಕೊಂಡ ಸಂದರ್ಭದಲ್ಲಿ ಕರ್ನಾಟಕದ ಹಿರಿಮೆಯನ್ನು ಕೊಂಡಾಡಿದ್ದಾರೆ. ಕಳೆಗುಂದಿದ್ದ ಕನ್ನಡಾಂಬೆ ಗೆಲುವಿನಿಂದ ಕಂಗೊಳಿಸುತ್ತಾಳೆ. ಇನ್ನು ಮೇಲೆ ನಾಡಿನ ದಾರಿದ್ರ್ಯ ತೊಲಗಿ ಪ್ರಗತಿಹೊಂದಲು ಶ್ರಮವಹಿಸಿ ದುಡಿಯುವ ಶಕ್ತಿ ಕನ್ನಡಿಗರಿಗೆ ಅನುಗ್ರಹಿಸಲು ಪ್ರಾರ್ಥಿಸಿದ್ದಾರೆ.

ಬಹು ಕಾಲದಿಂದ ಎದೆಯಲ್ಲಿ ಕುದಿದ
ಕನ್ನಡಿಗರಾಸೆ ಫಲಿಸಿ,
ಒಂದಾದ ನಾಡು ಅಣಿಯಾದ ಹೆಸರ
ಮಣಿಪದಕವನ್ನು ಧರಿಸಿ,
. . . .
ನಗುತಿಹಳು ತಾಯಿ, ಕನ್ನಡದ ದೇವಿ,
ಬಾನೆದೆಗೆ ಮುತ್ತು ಕೊಟ್ಟು,
ದುಡಿವವರ ರೆಟ್ಟೆಗುಸಿರನ್ನು ತುಂಬಿ,
ಕಣ್ಣಲ್ಲಿ ದೀಪವಿಟ್ಟು. [೧೧೦]

ದುಡಿವವರು ಶ್ರಮಜೀವಿಗಳು, ಬದುಕುವ ಭರವಸೆಯ ಬೆಳಕನ್ನು ತಾಯಿ ತುಂಬುತ್ತಾಳೆ ಎಂದು ನಂಬಿದ್ದಾರೆ. ಕನ್ನಡಿಗರಲ್ಲಿರುವ ಉದಾಸೀನತೆ, ತರತಮ ಭಾವಗಳೆಲ್ಲ ದೂರವಾಗಿ ದುಡಿದು ತಿನ್ನುವ, ಬಡತನ ಓಡಿಸುವ ಶಕ್ತಿಯನ್ನು ನಾಡದೇವಿಯಾದ ಕನ್ನಡಾಂಬೆ ನೀಡೆಂದು ಕವಿ ಪ್ರಾರ್ಥಿಸಿದ್ದಾರೆ.

ಸಿದ್ದಯ್ಯ ಪುರಾಣಿಕರು ಬರೆಯಲು ತೊಡಗಿದ್ದು ಭಾರತ ಸ್ವಾತಂತ್ರ್ಯ ಹಾಗೂ ಕರ್ನಾಟಕ ಏಕೀಕರಣಕ್ಕಾಗಿ ತೀವ್ರವಾದ ಚಳುವಳಿ ನಡೆಯುತ್ತಿದ್ದ ಕಾಲ. ಈ ಹಿನ್ನೆಲೆಯಲ್ಲಿ ದೇಶಾಭಿಮಾನ, ನಾಡಾಭಿಮಾನಕ್ಕೆ ಕವಿ ಸ್ಪಂದಿಸಿ ಭಾರತಾಂಬೆಯನ್ನು ಹಾಗೂ ಕನ್ನಡಾಂಬೆಯನ್ನು ಅಭಿಮಾನ ತುಂಬಿ ಹಾಡಿದ್ದಾರೆ. 'ಕನ್ನಡದ ದೀಪವಿದು ಕಾಣದಿಹುದು' ಕನ್ನಡಿಗರನ್ನು ಸ್ಪಂದಿಸಿದ್ದು ಕಂಡುಬರುತ್ತದೆ. ಕನ್ನಡದ ಒಂದೊಂದು ವೈಶಿಷ್ಟ್ಯವನ್ನು ಕವಿ ಮರೆಯದೆ ದಾಖಲಿಸಿದ್ದಾರೆ. ಇವರ ಶೈಲಿ ಹಾಗು ಅಭಿವ್ಯಕ್ತಿಗಳಲ್ಲಿ ಒಂದು ಶಿಷ್ಟತೆಯನ್ನು ಕಾಣುತ್ತೇವೆ. "ಇವರ ಕಾವ್ಯದ ಪ್ರಮುಖ ಲಕ್ಷಣವೆಂದರೆ ಓತಪ್ರೋತವಾಗಿ ಸಮೃದ್ಧವಾಗಿ ಸಾಗುವ ಪ್ರಾಸಾದಿಕ ಶೈಲಿ. ವಾಣಿ ಲಲಿತ ಲಯಗಳೊಂದಿಗೆ ಅಭಿವ್ಯಕ್ತಿ ಪಡೆಯುವ ಭಾವುಕತೆ ಕಡೆಗೊಮ್ಮೆ ಬೆನ್ನು ಹತ್ತಿಹೋದರೂ ಭಾಷೆ ನಾದ ಸೌಂದರ್ಯಕ್ಕೆ ಕವಿ ಕುಂದು ತರುವುದಿಲ್ಲ. ವೈಚಾರಿಕತೆ ವಾಸ್ತವ ದೃಷ್ಟಿಕೋನದ ಭಾವುಕತೆಯ ಮಧ್ಯದಲ್ಲಿಯೇ ಕ್ರಮೇಣ ಒಳ ಸೇರುತ್ತಾ ಕವಿಯ ವ್ಯಕ್ತಿನಿಷ್ಠ ಅನುಭವ ಕಾವ್ಯ ಸ್ವರೂಪದ ಸಮಗ್ರತೆಗೆ ಆಕರವಾಗುವ ಪ್ರತಿಭಾವಂತಿಕೆಯ ಅಭಿವ್ಯಕ್ತಿಯಾಗುತ್ತದೆ.

ವಿಷಯಗಳ ಆಯ್ಕೆಯಲ್ಲೂ ಅವರ ವಿಕಾಸಶೀಲ ಮನೋಧರ್ಮದ ಹದವನ್ನು ಕಂಡುಕೊಳ್ಳಬಹುದು. . . . . ." ೧೧೧

ಇವರ ನಾಡನ್ನು ಕುರಿತ 'ತಾಯ ಬರವು' ಕವಿತೆಯಲ್ಲಿ ತಾಯಡಿಯ ಪೂಜೆಗೆ ಕರೆಕೊಟ್ಟಿರುವುದನ್ನು ಕಾಣುತ್ತೇವೆ. ಕನ್ನಡಾಂಬೆಯ ಹಿರಿಮೆಗರಿಮೆಗಳನ್ನು ಬಿಚ್ಚಿಡುತ್ತಾ, ಇಂತಹ ತಾಯಿಯ ಆರಾಧನೆಗೆ ನಿಷ್ಠೆ, ಭಕ್ತಿಯಿಂದ ಒಗ್ಗೂಡಬೇಕೆಂದು ಕರೆ ಕೊಟ್ಟಿದ್ದಾರೆ.

ಸೂರ್ಯ ಚಂದ್ರರೆ ಸಾಕ್ಷಿ ಸಪ್ತ ಸಾಗರ ಸಾಕ್ಷಿ
ಗಿರಿ ಸರೋವರ ಸಾಕ್ಷಿ ವನದೇವಿ ಸಾಕ್ಷಿ
. . . .
ಬನ್ನಿ ತಾಯ್ನಾಡಿಗರೆ ತಾಯಡಿಯ ಪೂಜೆಗೆ
ತನ್ನಿ ತನಿವಗೆ ಎಂಬ ಹೂವು ಕಾಯಿ
. . . .
ಈಗ ಬಂದಿದೆ ಕಾಲ ತಾಯ ಬರಿಸುವ ಕಾಲ
. ಇದನು ಕಳಕೊಳ್ಳದಿರಿ ಕನ್ನಡದ ಆಣೆ.೧೧೨

ಸ್ವಾತಂತ್ರ್ಯ ಸಂಗ್ರಾಮಕ್ಕೆ ಹುರಿದುಂಬಿಸಿದ್ದಾಗಿದೆ. ಪರಕೀಯರ ಕಪಿಮುಷ್ಟಿಗೆ ಸಿಕ್ಕಿ ತನ್ನ ತನ ನೀಗಿಕೊಂಡಿದ್ದ ಬಾರತೀಯರಲ್ಲಿ ಸ್ವಾಭಿಮಾನದ ಕಿಡಿ ಹೊತ್ತಿಸುವ ಕಾರ್ಯವನ್ನು ಸ್ವಾಭಿಮಾನದ ಕವಿಗಳು ಕರೆ ಕೊಟ್ಟಂತೆ ಇವರೂ ಕರೆಕೊಟ್ಟಿದ್ದಾರೆ.

ಹಡೆದ ತಾಯಿ, ಪಡೆದ ತಾಯಿ ಎಂತಹವರಿಗೂ ಗೌರವದ ಸಂಗತಿ. ಪಡೆದ ತಾಯಿ ಪರಾಧೀನತೆಗೆ ಸಿಕ್ಕಿರುವ ಸಂದರ್ಭದಲ್ಲಿ ಆಕೆಯನ್ನು ಉಳಿಸಿ ಪೊರೆವ ಕಾರ್ಯ ಆಕೆಯ ಮಕ್ಕಳದು. ಆದರೆ ಅಂತಹ ಕಾರ್ಯದಿಂದ ವಿಮುಖರಾಗಿದ್ದವರಿಗೆ ಕವಿ ಜಾಗೃತಿಗೊಳಿಸಿದ್ದಾರೆ.

ನಾಡತಾಯ ಬಗ್ಗೆ ಜನರಿಗಿರುವ ನಿರ್ಲಕ್ಷ್ಯ ಭಾವವನ್ನು ತೊಲಗಿಸಿ, ಅಭಿಮಾನ ತಾಳುವಂತೆ ಹುರಿದುಂಬಿಸುವ ಮಾತುಗಳಿಂದ ಈ ಕವಿತೆ ತುಂಬಿದೆ. ಇದೇ ಭಾವತೀವ್ರತೆಯಲ್ಲಿ ಬರೆದಿರುವುದನ್ನು 'ಕನ್ನಡ ಕುಲ', 'ಕನ್ನಡದ ದೀಪ' ಕವಿತೆಗಳಲ್ಲಿ ಕಾಣಬಹುದು.

ಎಲ್. ಹನುಮಂತಯ್ಯನವರ ಕವನ 'ಎಷ್ಟು ದಿನ ಕಾಯೋಣ?' – ಹೆತ್ತ ತಾಯಿಗೆ ಕೇಳುವ ಪ್ರಶ್ನೆಯೂ ಹೌದು, ಹೊತ್ತ ತಾಯಿಗೆ ಕೇಳುವ ಪ್ರಶ್ನೆಯೂ ಹೌದು. ಜಾತಿ ವ್ಯವಸ್ಥೆಯ ಕಾಲ್ತುಳಿತಕ್ಕೆ ಸಿಕ್ಕಿ ನಜ್ಜುಗುಜ್ಜಾಗಿರುವ ದಲಿತರ ಎದೆಯಾಳದ ನೋವು ಉಕ್ಕಿ ಹರಿದು, ಕೊನೆಗೆ ಸ್ವಾಭಿಮಾನದ ಜಾಗೃತಿಯಾಗಿ ಎಲ್ಲರಂತೆ ದಲಿತರೂ ಅಭಿಮಾನದಿಂದ ಬದುಕಬೇಕೆಂಬ ಆಸೆಯಿಂದ ಕೇಳುವ ಕೆಚ್ಚುಗೆಯ ಮಾತು 'ಎಷ್ಟು ದಿನ ಕಾಯೋಣ?' ಕವಿತೆಯಲ್ಲಿದೆ.

ಅಮ್ಮಾ
ಎಷ್ಟು ದಿನ ಹೀಗೆ
ಕಾಯುತ್ತಾ ನಿಲ್ಲೋಣ?

ನೀನು ಕರೆಯುವ ಕನಿಕರ
ತೋರದಿದ್ದರೂ ನಾವೇ
ಮನೆಯ ತಲೆಬಾಗಿಲು ತಳ್ಳಿ
ಅಂಗಳಕೆ ಬಂದಿದ್ದೇವೆ
. . . .
ಆದಕ್ಕೆ ತಲೆಬಾಗಿಲು ತಳ್ಳಿ
ಅಂಗಳದಿ ಬಂದು ನಿಂತಿದ್ದೇವೆ
ಹೇಳು! ಇನ್ನೆಷ್ಟು ದಿನ
ಕಾಯುತ್ತಾ ನಿಲ್ಲೋಣ? [೧೧೩]

ಸಹಜವಾಗಿಯೇ ಸಾಮಾಜಿಕ ಬದಲಾವಣೆಯನ್ನು ನಿರೀಕ್ಷಿಸಿದ್ದವರಿಗೆ ಬಹಳಷ್ಟು ವರ್ಷಗಳು ಕಾದೂಕಾದೂ ಬೇಸರವಾಯಿತು. ಹೀಗಾಗಿ ತಾವೇ ಬದಲಾವಣೆ ತರುವ ನಿಟ್ಟಿನಲ್ಲಿ ಮುಂದಾದರು. ಪರಂಪರೆಯನ್ನು ತಳ್ಳಿ (ತಲೆಬಾಗಿಲು ತಳ್ಳಿ ಎಂಬ ಪದ) ಹೊಸತನ್ನು ಸೃಷ್ಟಿಸಲು ತಾವೇ ಜಾಗೃತರಾಗಿರುವ ಸ್ಥಿತಿಯನ್ನು ತಿಳಿಸುತ್ತದೆ. ಪ್ರತಿಭಟನೆಯ ಧ್ವನಿಯಲ್ಲಿ ತುಳಿತಕ್ಕೊಳಗಾದವರಲ್ಲಿರುವ ಶಕ್ತಿ ಸಾಮರ್ಥ್ಯದ ಕ್ರಿಯಾಶೀಲತೆ ಕಂಡುಬರುತ್ತದೆ.

ದಲಿತರ ಪ್ರತಿಭಟನೆ ಇಲ್ಲಿನ ಸಾಮಾಜಿಕ ವ್ಯವಸ್ಥೆಯೊಂದಿಗೆ ರಾಜಿಗಿಳಿಯದೆ ಸ್ಫೋಟಗೊಳ್ಳುವ ಸ್ಥಿತಿಯನ್ನು ಇಲ್ಲಿ ಕಾಣಬಹುದು. ನಾಡು ಕಟ್ಟಲು, ಮೇಲುವರ್ಗದವರ ಬದುಕು ಕಟ್ಟಲು ದಲಿತರ ಶ್ರಮ ಇದೆ ಎಂಬುದನ್ನು ಮನವರಿಕೆ ಮಾಡಿಕೊಟ್ಟು ಈವರೆಗೂ ಸಾಮಾಜಿಕ ನ್ಯಾಯಕ್ಕಾಗಿ ಕಾದು ನಿರಾಸೆಗೊಂಡು ಹಕ್ಕೊತ್ತಾಯಕ್ಕಾಗಿ ಎದೆತಟ್ಟಿ ನಿಂತಿರುವ ಶೋಷಿತರ ಸ್ಫೋಟಕಶಕ್ತಿ ಇಲ್ಲಿ ಜಾಗೃತ ವಾಗಿರುವುದು ಕಂಡುಬರುತ್ತದೆ.

ಕವಿತಾ ಕೃಷ್ಣರ ಕವಿತೆ 'ಕನ್ನಡ ತಾಯಿಯ ಹಿರಿಮೆ'ಯಲ್ಲಿ ನಾಡಿನ ಭವ್ಯ ಪರಂಪರೆ, ಅದರ ಐತಿಹಾಸಿಕ ಹಿರಿಮೆ, ಗರಿಮೆಗಳನ್ನು ಪ್ರಶಂಸಿಸುತ್ತ ತಾಯಿ ಭುವನೇಶ್ವರಿಯ ಕೀರ್ತಿ ಹೀಗೆ ನಿರಂತರವಾಗಿ ಬೆಳಗಲಿ ಎಂದು ಆಶಿಸಿದ್ದಾರೆ.

ಕನ್ನಡ ತಾಯಿಯ ಹೊನ್ನಿನ ಚರಿತೆಗೆ ಪಂಪನೆ ಮುನ್ನುಡಿ ಬರೆದಿಹನು
ಕನ್ನಡ ದೇವಿಯ ಧವಳ ಕೀರ್ತಿಗೆ ಗೊಮ್ಮಟ ಕನ್ನಡಿ ಹಿಡಿದಿಹನು
ಕನ್ನಡ ನಾಡಿನ ಹೊನ್ನಿನ ತೇರನು
ಶರಣರು ದಾಸರು ಕಟ್ಟಿಹರು
ಗಂಗ ಹೊಯ್ಸಳ ರಾಷ್ಟ್ರಕೂಟರು
ಹರುಷದಿ ಎಳೆಯುತ ನಡೆದಿಹರು . . [೧೧೪]

ಈ ಕವಿತೆ ಲಕ್ಷ್ಮೀನಾರಾಯಣ ಭಟ್ಟರ 'ಜಯ ಜಯ ಜಯ ಕನ್ನಡ ರಾಜೇಶ್ವರಿ' ಕವಿತೆಯನ್ನು ನೆನಪಿಗೆತರುತ್ತದೆ.

ಇವರ ಇದೇ ಭಾವನೆಯನ್ನು ಹೊತ್ತ 'ಕನ್ನಡಾಂಬೆ ನಮ್ಮ ತಾಯಿ', 'ಗೆಲ್ಗೆ ಬಾಳ್ಗೆ ಕನ್ನಡ', 'ಜಯತು ಜಯತು ಭಾರತಿ', 'ದೇವಿ ಭಾರತಿ' ಮುಂತಾದವು ನಾಡುನುಡಿ

ಹಾಗು ದೇಶದ ಹಿರಿಮೆಯನ್ನು ವೈಭವಿಸುವ ಕವಿತೆಗಳಾಗಿವೆ. ಇಲ್ಲೆಲ್ಲ ಪರಂಪರೆಯಲ್ಲಿ ಕಂಡುಬರುವ ವೈಭವದ ಚಿತ್ರವಿರುವಂತೆ ಬದುಕಿನ ವೈವಿಧ್ಯತೆ ಕಂಡುಬರುವುದಿಲ್ಲ. ನವೋದಯ ಶೈಲಿಯ ಗೇಯ ಗೀತೆಗಳಾಗಿ ಗಮನ ಸೆಳೆಯುತ್ತವೆ.

ಮೇಲಿನ ಸಾಂಪ್ರದಾಯಿಕ ಧಾಟಿಯಲ್ಲೆ ತುರುವೇಕೆರೆಯ ಹೋ.ಗ. ಮನೋಹರ್ ರವರ ಕವಿತೆ 'ತೇರನೆಳವ ಬನ್ನಿ'ಯಲ್ಲಿ ಇಡೀ ನಾಡನ್ನು ತಾಯಿಗೆ ಹೋಲಿಸಿ ಆಕೆಯ ಉತ್ಸವ ನಿರಂತರವಾಗಿರುವಂತೆ ಆಕೆಯ ಮಕ್ಕಳಾದ ನಾವು ನೋಡಿಕೊಳ್ಳಬೇಕೆಂದು ಕರೆ ಕೊಡುತ್ತಾರೆ.

ತೇರನೆಳವ ಬನ್ನಿ
ಕನ್ನಡ ತೇರನೆಳವ ಬನ್ನಿ
. . . .
ಆ ತಾಯಚರಣಕೆರಗಿ
ಎಳೆಯೋಣ ಬನ್ನಿ
ಕೈಯನ್ನ ಮುಗಿದು
ಹಿಗ್ಗಿಂದ ಎಳೆದು
ನಮಿಸೋಣ ಎಲ್ಲಾ ಬನ್ನಿ ॥ [೧೧೫]

ಗೇಯತೆಗೆ ಪಕ್ಕಾಗಿ, ಸಾಂಪ್ರದಾಯಕ ಧಾಟಿಯಲ್ಲಿರುವಂತೆ ಕಂಡುಬರುವ ಈ ಕವಿತೆ ಜಿ. ಎಸ್. ಎಸ್. ರವರ 'ತೇರನೆಳೆವರು ನಾವು' ಕವಿತೆಯನ್ನು ನೆನಪಿಗೆ ತರುವಂತಿದೆ.

ನವೋದಯ ಕಾಲದಿಂದ ಇಲ್ಲಿಯವರೆಗೆ ಅಭಿವ್ಯಕ್ತಿ ವಿಧಾನದಲ್ಲಿ ಕಂಡುಬರುವ ಧ್ವನಿ ವೈವಿಧ್ಯಗಳನ್ನು ಈ ಭಾಗದಲ್ಲಿ ಕಾಣಬಹುದು. ಪರಂಪರೆಯ ಕವಿಗಳು ಸಮಷ್ಟಿಯಾಗಿ, ಸೌಂದರ್ಯಾರಾಧಕರಾಗಿ ಕಂಡುಬಂದರೆ; ದಲಿತ ಬಂಡಾಯದವರು ವ್ಯಕ್ತಿ ನೆಲೆಯಿಂದ ನೋವುಂಡ ಜನರ ದನಿಯಾಗಿ ಕಾವ್ಯ ಕಟ್ಟುತ್ತಾರೆ. ಅಕ್ಷರ ಜ್ಞಾನದ ಅರಿವಿನಿಂದ ಜಾಗೃತನಾದ ದಲಿತ ತನ್ನ ಸಮುದಾಯದ ಪ್ರತಿನಿಧಿಯಾಗಿ ಮಾತನಾಡುತ್ತಾನೆ.

ಶಿಷ್ಟರು ಬಚ್ಚಿಟ್ಟಿದ್ದನ್ನು ತುಳಿತಕ್ಕೊಳಗಾದವರು ಬಿಚ್ಚಿಟ್ಟರು. ಶಿಷ್ಟ ಪರಂಪರೆಯಲ್ಲಿ ಕಣ್ಣು ಬಾಯಿಗಳು ಮಾತನಾಡಿದರೆ, ತುಳಿತಕ್ಕೊಳಗಾದವರಲ್ಲಿ ಕರುಳು ಮಾತನಾಡುತ್ತದೆ. ಶೋಷಿತರು ಸಾಮಾಜಿಕ ಅನಿಷ್ಟ ಮುಖಗಳ ವಿರುದ್ಧ ಅಕ್ಷರಗಳನ್ನು ಅಸ್ತ್ರವಾಗಿ ಬಳಸಿದರು. ಶಿಷ್ಟರು ಶಬ್ದ ಬಳಕೆಯಲ್ಲಿ ಬದುಕಿನ ಮಡಿವಂತಿಕೆಯನ್ನು ಮೂಡಿಸಿದರು. ಕುವೆಂಪು, ಕಂಬಾರ, ಆಲನಹಳ್ಳಿ ಕೃಷ್ಣ, ಚೆನ್ನಯ್ಯ ಮುಂತಾದವರು ಇದಕ್ಕೆ ಹೊರತಾಗಿದ್ದಾರೆ. ದಲಿತರಿಗೆ ಅಕ್ಷರದ ಮಡಿವಂತಿಕೆ ಎದುರಾಗಲಿಲ್ಲ. ಎಲ್ಲ ಶಬ್ದಗಳನ್ನು ಬಳಸಿಕೊಂಡರು. ಶಿಷ್ಟರಲ್ಲಿ ನುಡಿ ಮಡಿಮಿತಿಯಲ್ಲಿ ಸಂಚರಿಸಿದರೆ ದಲಿತರಲ್ಲಿ ನುಡಿ ನೋವು ಮಿಡಿದ ಹಾಗೆ ಮೂಡಿಬಂದಿತು.

ದೇಶ ನಿಷ್ಠೆ, ನಾಡುನುಡಿ ನಿಷ್ಠೆ, ರಾಜ ನಿಷ್ಠೆ, ಪ್ರಾಂತೀಯ ನಿಷ್ಠೆ, ದೈವ ನಿಷ್ಠೆಗಳಲ್ಲಿ ಕವಿಗಳು ಮಾತೃತ್ವದ ವಿವಿಧ ಮುಖಗಳನ್ನು ಕಾಣಲು ಯತ್ನಿಸಿದ್ದಾರೆ. ನವೋದಯ ತಲೆಮಾರಿನಿಂದ ಇಂದಿನವರೆಗೂ ನಾಡು-ನುಡಿ ಬಗ್ಗೆ, ದೇಶ-ಭಾಷೆ ಬಗ್ಗೆ ವಿಭಿನ್ನ ನೆಲೆಯಲ್ಲಿ ತಮ್ಮ ಅನುಭವಕ್ಕೆ ಕಾವ್ಯದ ಮೂರ್ತರೂಪ ನೀಡಿರುವುದನ್ನು ಕಾಣುತ್ತೇವೆ. ಬಹಳಷ್ಟು ಜನ ರಾಷ್ಟ್ರೀಯತೆಯ ಅಂಶವಾಗಿ, ದೇಶದ ಅಭಿಮಾನವನ್ನು, ನಾಡಿನ ಹಿರಿಮೆಯನ್ನು ತಮ್ಮ ಅಂತರಾಳದ ಅಭಿಮಾನದಿಂದ ಕಂಡಿದ್ದಾರೆ. ಪಾಶ್ಚಾತ್ಯ ಪೌರಾತ್ಯ ಸಂಸ್ಕೃತಿಗಳು ಮುಖಾಮುಖಿಯಾದದ್ದರ ಪರಿಣಾಮಗಳು ಜನಕ್ಕೆ ಅನುಭವವಾಗುತ್ತಿದ್ದ ಕಾಲದಲ್ಲಿ ಸ್ವಾಭಿಮಾನದ ಬದುಕಿಗೆ ಒತ್ತುಕೊಟ್ಟು ಬರೆದದ್ದು ನವೋದಯದ ಸಂದರ್ಭದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ವಿದೇಶಿ ಸಂಸ್ಕೃತಿಗೆ ಬೇಸತ್ತು ದೇಶೀಯ ಸಂಸ್ಕೃತಿಯನ್ನು ಅಪೇಕ್ಷಿಸುವ ನಿಟ್ಟಿನಲ್ಲಿ ದೇಶೀಯ ಹಾಗೂ ವಿದೇಶೀಯಗಳಲ್ಲಿರುವ ಪರಸ್ಪರ ವಿರೋಧಿತನವನ್ನು ಉಲ್ಲೇಖಿಸುತ್ತ ಸಾಗಿದ್ದಾರೆ. ದೇಶೀಯ ಸೊಗಡಿನ ಹಿರಿಮೆ ಗರಿಮೆಗಳನ್ನು ಮನತುಂಬಿ ಹಾಡಿದ್ದಾರೆ. ನವೋದಯ ಆರಂಭದಲ್ಲಿ ಪರಂಪರೆಯ ವೈವಿಧ್ಯತೆಯೊಂದಿಗೆ ಇತಿಹಾಸದ ಹಿರಿಮೆಯನ್ನು ಬಣ್ಣಿಸಿದ್ದರೆ; ಸ್ವಾತಂತ್ರ್ಯ ನಂತರದಲ್ಲಿ ನಮ್ಮನ್ನಾಳುವ ಧುರೀಣರೇ ಪರಕೀಯರಿಗಿಂತ ದುರುಳರಾದ ಬಗೆಯನ್ನು ನಂತರದ ಕವಿಗಳು ಅತೃಪ್ತಿ ಅಸಮಾಧಾನ ಹಾಗು ಅಸಹನೆಗಳಿಂದ ಬಣ್ಣಿಸಿದ್ದಾರೆ. ಇಲ್ಲಿನ ಜಾತಿ, ಮತ, ಶೋಷಣೆಯ ಕರಾಳ ಕೂಪದ ಸ್ಥಿತಿಗೆ ಸಿಡಿದೆದ್ದಿದ್ದಾರೆ.

ಭಾಷಾ ಬಳಕೆಯಲ್ಲೂ ಕೂಡ ನವೋದಯದವರಲ್ಲಿ, ಸ್ವಾತಂತ್ರ ಸಂಗ್ರಾಮ ಕಾಲದಲ್ಲಿ ಕವಿತೆ ರಚಿಸಿದವರಲ್ಲಿ ಶಿಷ್ಟತೆ ಇದೆ. ಸಾಂಪ್ರದಾಯಕ ಶೈಲಿ ಇದೆ. ಗೇಯತೆಯೊಂದಿಗೆ ಲಯ, ಛಂದಸ್ಸುಗಳು ಕೂಡಿ ಬಂದಿವೆ. ಅದೇ ಸ್ವಾತಂತ್ರ್ಯ ನಂತರದ ಕವಿಗಳಲ್ಲಿ ಮಡಿವಂತಿಕೆಯ ಕೋಟೆ ಕೆಡವಿ, ವಸ್ತುಸ್ಥಿತಿಗೆ ಒತ್ತುಕೊಟ್ಟಿರುವುದನ್ನು ಕಾಣುತ್ತೇವೆ. ದೇಶೀ ಶೈಲಿಗೆ ಅನುಗುಣವಾದ ಗ್ರಾಮೀಣರ ಭಾಷಾ ಪ್ರಯೋಗವಾಗಿರುವುದು ಕಂಡುಬರುತ್ತದೆ. ನಾಡು - ನುಡಿ - ಸಂಸ್ಕೃತಿಯನ್ನು ನೋಡುವ ದೃಷ್ಟಿಯಲ್ಲಿ, ಬಣ್ಣಿಸುವ ರೀತಿಯಲ್ಲಿ ಬದಲಾವಣೆಗೆ ಒಗ್ಗಿಸಿಕೊಂಡಿದ್ದಾರೆ. ಮಡಿವಂತಿಕೆಯ ಪ್ರಜ್ಞೆ ಮೀರಿ ನುಡಿವಂತಿಕೆಗೆ ಗಮನ ಹರಿಸಿರುವುದು ಕಂಡುಬರುತ್ತದೆ.

ಎಲ್ಲರಲ್ಲೂ ಕಾಣುವ ಒಂದು ಸಾಮಾನ್ಯ ಅಂಶವೆಂದರೆ ದೇಶ-ನಾಡು-ನುಡಿಯ ಹಿರಿಮೆ ಗರಿಮೆಗಳ ಬಗ್ಗೆ ಅಭಿಮಾನ. ಯಾವ ಸಂದರ್ಭದಲ್ಲೂ ನಮ್ಮತನಕ್ಕೆ ಧಕ್ಕೆಯಾಗಬಾರದೆಂಬ ಕಳಕಳಿ. ಈ ಹಿನ್ನೆಲೆಯಲ್ಲಿ ತಾಯಿಯಾಗಿ ದೇಶ, ಭಾಷೆ, ನಾಡುಗಳನ್ನು ಕವಿಹೃದಯ ಕಂಡು ಸ್ಪಂದಿಸಿದೆ. 'ತಾಯಿ' ಪರಿಕಲ್ಪನೆ ಕವಲೊಡೆದು ವಿಸ್ತಾರಗೊಂಡಿದೆ. ದೇಶ - ನಾಡು - ನುಡಿಯಲ್ಲಿ ತಾಯಿಯನ್ನು ಕಂಡಿರುವುದು ಮಾತ್ರವಲ್ಲ; ಆ ಬಗ್ಗೆ ಅಭಿಮಾನ ಗೌರವಾದರಗಳು ವೃದ್ಧಿಯಾಗುವಂತೆ ಪ್ರೇರಣೆ ನೀಡಿದ್ದಾರೆ. ನವೋದಯದಲ್ಲಿ 'ತಾಯಿ' ಉದಾರವಾದಿ ನಿಲುವು ಹೊಂದಿ, ಸಾಂಪ್ರದಾಯಕ ನೆಲೆಯಲ್ಲಿ ಹರಿದಿದೆ. ಆಕೆ ದೈವ ಸ್ವರೂಪಿ, ತ್ಯಾಗ ಮೂರ್ತಿಯಾಗಿ ಗುರುತಿಸಿಕೊಂಡಿದ್ದಾಳೆ. ಹಾಗಾಗಿ ಇಲ್ಲಿನ ತಾಯಿ ಎಲ್ಲ ಕವಿಗಳಲ್ಲೂ ಬಡಿದೆಬ್ಬಿಸುವ ಎಚ್ಚರ ಮೂರ್ತಿಯಾಗಿ, ಮಕ್ಕಳಿಗಾಗಿ ಶ್ರಮಿಸುವ ವಾತ್ಸಲ್ಯ ಮೂರ್ತಿಯಾಗಿ ಕಾಣುತ್ತಾಳೆ. ನವ್ಯದ ಹೊತ್ತಿಗೆ ಇದೇ 'ತಾಯಿ' ಹೊಣೆಗಾರಿಕೆ ರಹಿತಳಾದಳು. ಪ್ರಕ್ಷುಬ್ಧ

ವಾತಾವರಣದಲ್ಲಿ ಬದುಕುತ್ತಿರುವ ಮನುಷ್ಯನಿಗೆ ತಾಯಿ ರಕ್ಷಿಸುವ, ಪೋಷಿಸುವ ಮೂರ್ತಿಯಾಗದೆ, ಮತ್ತಷ್ಟು ಸುಲಿಗೆ ಮಾಡುವ, ಜವಾಬ್ದಾರಿಯಿಂದ ನುಣಿಚಿಕೊಳ್ಳುವ ರೀತಿಯಂತೆ ಅನಿಸಿಕೊಂಡಳು. ಅದಕ್ಕೆ ಕಾರಣಗಳು ನವ್ಯದ ಧೋರಣೆಯಲ್ಲೆ ಇವೆ. ಅಡಿಗರ 'ಭೂಮಿಗೀತ' ಇದಕ್ಕೆ ಒಳ್ಳೆಯ ನಿದರ್ಶನ.

ಪ್ರಕೃತಿ ಮಾತೆ, ರಾಷ್ಟ್ರಮಾತೆ, ತಾಯ್ನುಡಿ – ಇವುಗಳನ್ನು ಕವಿಗಳು ತಮ್ಮ ವೈಯಕ್ತಿಕ ನೆಲೆಯಲ್ಲಿ ಕಂಡರೂ ಸಾಂಘಿಕ ರೂಪಗಳಾಗಿ ಅವು ನಮ್ಮ ಸಾಂಸ್ಕೃತಿಕ ರೂಪಕ್ಕೆ ಪೋಷಣೆ ಒದಗಿಸುವುದರಿಂದ ವಿಸ್ತೃತ ರೂಪ ಪಡೆದುಕೊಳ್ಳುವುದರಲ್ಲಿ ಯಶಸ್ವಿಯಾಗುತ್ತವೆ.

ಇದುವರೆಗಿನ ಕವಿತೆಗಳ ಉಲ್ಲೇಖ ಮತ್ತು ಆಯಾ ಭಾಗದಲ್ಲಿ ಮಾಡಲಾಗಿರುವ ವಿಶ್ಲೇಷಣೆಗಳನ್ನು ಗಮನಿಸಿದರೆ, ಕುವೆಂಪು, ಬೇಂದ್ರೆ, ಬಿಎಂಶ್ರೀ, ವಿಸೀ, ಪುತಿನ, ಸಿದ್ದಯ್ಯ ಪುರಾಣಿಕ, ದಿನಕರ ದೇಸಾಯಿ, ಇವರ ಕವಿತೆಗಳಲ್ಲಿ ದೇಶವನ್ನು, ಭಾಷೆಯನ್ನು ಅಥವಾ ನಾಡನ್ನು ಮತ್ತು ನುಡಿಯನ್ನು ಅಭಿಮಾನದಿಂದ ಉದಾರವಾಗಿ ಚಿತ್ರಿಸಿರುವ ವಿಧಾನವು ಕಾಣುತ್ತದೆ. ಅವರಿಗೆ ಆ ಬಗೆಯಲ್ಲಿ ಚಿತ್ರಿಸುವುದು ಚಾರಿತ್ರಿಕವಾಗಿ ಅನಿವಾರ್ಯವೂ ಆಗಿತ್ತು. ಬ್ರಿಟೀಷರನ್ನು ವಿರೋಧಿಸುವುದು, ನಾಡುನುಡಿಯ ಬಗ್ಗೆ ಹಾಗು ಭಾರತ ಮತ್ತು ಕರ್ನಾಟಕದ ಬಗ್ಗೆ ಅಭಿಮಾನವನ್ನು, ಸ್ವಾಭಿಮಾನವನ್ನು ಇದರ ಜೊತೆಗೆ ಹೋರಾಟದ ಕೆಚ್ಚನ್ನು ಮೂಡಿಸಬೇಕಾಗಿತ್ತು. ಹಾಗಾಗಿ ಅವರಿಗೆ ಸಾಮಾನ್ಯ ಜನರ ಕಷ್ಟಕೋಟಲೆಗಳಿಗಿಂತಲೂ ದೇಶ, ನಾಡುನುಡಿಗಳು ಮುಖ್ಯವಾಗಿದ್ದವು. ಆದರೆ ಸ್ವಾತಂತ್ರ್ಯಾ ನಂತರ ಜನಸಾಮಾನ್ಯರ ಸಮಸ್ಯೆಗಳು ಹಾಗೇ ಮುಂದುವರಿದವು. ಆಗ ಬಂದ ಕವಿಗಳು ಭಾರತವನ್ನು ಕರ್ನಾಟಕವನ್ನು ಸಲೀಸಾಗಿ ಸರಳೀಕರಿಸಿ ತಾಯಿ ಎಂದು ಹೊಗಳುವ ವಾಸ್ತವ ಪರಿಸ್ಥಿತಿ ಇರಲಿಲ್ಲ. ಬದಲಿಗೆ ಇಲ್ಲಿನ ವಾಸ್ತವಿಕತೆಯನ್ನು ತಮ್ಮ ಕವಿತೆಗಳ ಮುಖಾಂತರ ಕಾಣಲು ಯತ್ನಿಸಿದರು. ಅವರ ಹಿಂದಿದ್ದ ಸಾಮಾಜಿಕ ವಾಸ್ತವದ ತುಡಿತವು ಅವರ ಧೋರಣೆಯನ್ನು ರೂಪಿಸಿತು. ಹಾಗಾಗಿ ಇವರಲ್ಲಿ ಭಾರತ ಮತ್ತು ಕರ್ನಾಟಕವು ಕೇವಲ ತಾಯಿಯಾಗಿ, ಮಾತೃವಾಗಿ ಮಾತ್ರ ರೂಪು ಪಡೆಯಲಿಲ್ಲ. ಆ ತಾಯಿಯ ಮಡಿಲಿನಲ್ಲಿ ಮತ್ತು ಒಡಲಿನಲ್ಲಿ ಜನಸಾಮಾನ್ಯರು ಅನುಭವಿಸುತ್ತಿದ್ದ ಸಂಕಟಗಳು ಮುಖ್ಯವಾಗಿ ಪ್ರಕಟವಾದವು. ಸಿದ್ದಲಿಂಗಯ್ಯ, ಚಂದ್ರಶೇಖರ ಕಂಬಾರ, ಎಲ್. ಹನುಮಂತಯ್ಯ ಮತ್ತು ನಿಂಗಪ್ಪ ಮುದೇನೂರು ಇವರ ಕವಿತೆಗಳು ಇದಕ್ಕೆ ಉದಾಹರಣೆ.

ಕೊನೆ ಟಿಪ್ಪಣಿಗಳು:

೧. ಕನ್ನಡ ಸಾಹಿತ್ಯ ಮತ್ತು ಕರ್ನಾಟಕತ್ವ, ಕಾ.ವೆಂ.ಶ್ರೀನಿವಾಸ ಮೂರ್ತಿ.ಪುಟ: ೭ ಪ್ರಸ್ತಾವನೆ.
೨. ಕವಿಗಳ ಕಣ್ಣಿನಲ್ಲಿ ಕರ್ನಾಟಕ, ಡಾ.ಸಿ.ಪಿ.ಕೆ., ಅವಲೋಕನ, ಸಂ.ಎಚ್ಜೆಸ್ಕೆ ಪುಟ: ೫.

೩. ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು, ಸಂ.ಸೂರ್ಯನಾಥ ಕಾಮತ್, ಪುಟ: ೧.
೪. ಮೇಲಿನಂತೆ, ಪುಟ: ೨.
೫. ಮೇಲಿನಂತೆ, ಪುಟ: ೩.
೬. ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ, ಕೀರ್ತಿನಾಥ ಕುರ್ತಕೋಟಿ, ಸಂ.ಜಿ.ಎಸ್.ಶಿವರುದ್ರಪ್ಪ, ಪುಟ: ೧೪.
೭. ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು, ಸುಮತೀಂದ್ರ ನಾಡಿಗ, ಸಂ.ಜಿ.ಎಸ್.ಎಸ್., ಪುಟ: ೨೨.
೮. ಶ್ರೀ ಸಾಹಿತ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪುಟ: ೧೨೫.
೯. ಇಳಿದು ಬಾ ತಾಯಿ, ಸಂ.ಬುದ್ಧಣ್ಣ ಹಿಂಗಮಿರೆ, ಸಂಪಾದಕರ ನುಡಿ, ಪುಟ: ೧.
೧೦. ಪರಾಕಿ, ಅಂಬಿಕಾತನಯ ದತ್ತ, ಸಂ.ಡಾ.ವಾಮನ ಬೇಂದ್ರೆ, ಪುಟ: ೨೩.
೧೧. ಗರಿ, ದ.ರಾ.ಬೇಂದ್ರೆ, ಪುಟ: ೪೯.
೧೨. ಶ್ರೀ ಮಾತಾ, ದ.ರಾ.ಬೇಂದ್ರೆ, ಪುಟ: ೧.
೧೩. ಅರಳು ಮರಳು, ದ.ರಾ.ಬೇಂದ್ರೆ, ಪುಟ: ೩೫.
೧೪. ನಮನ, ದ.ರಾ.ಬೇಂದ್ರೆ, ಪುಟ: ೪೫.
೧೫. ಮುಗಿಲ ಮಲ್ಲಿಗೆ, ದ.ರಾ.ಬೇಂದ್ರೆ, ಪುಟ: ೫೦.
೧೬. ಇಳಿದು ಬಾ ತಾಯಿ, ಸಂ.ಬುದ್ಧಣ್ಣ ಹಿಂಗಮಿರೆ, ಮುನ್ನುಡಿ ಪುಟ: ೬
೧೭. ನಾದಲೀಲೆ, ಶ್ರೀನಿವಾಸ, ಇಳಿದು ಬಾ ತಾಯಿ, ಸಂ.ಬುದ್ಧಣ್ಣ ಹಿಂಗಮಿರೆ, ಪುಟ: ೬.
೧೮. ಶ್ರೀ ಕುವೆಂಪು, ಪೂರ್ಣಚಂದ್ರ ತೇಜಸ್ವಿ, ಪುಟ: ೩.
೧೯. ಪ್ರೇತಕ್ಯೂ, ಕುವೆಂಪು, ಪುಟ: ೪೫.
೨೦. ಕೃತ್ತಿಕೆ, ಕುವೆಂಪು, ಪುಟ: ೮೦.
೨೧. ಪಾಂಚಜನ್ಯ, ಕುವೆಂಪು, ಪುಟ: ೧.
೨೨. ಮೇಲಿನಂತೆ, ಪುಟ: ೩೨.
೨೩. ಮೇಲಿನಂತೆ, ಪುಟ: ೩೪.
೨೪. ಕಲಾ ಸುಂದರಿ, ಕುವೆಂಪು, ಪುಟ:
೨೫. ಕವನ ಸಂಗ್ರಹ, ದಿನಕರ ದೇಸಾಯಿ, ಪುಟ: ೪೪.
೨೬. ಸದಬಿರುಚಿಯ ಕವಿ:ವಿ.ಸೀ, ದೊಡ್ಡರಂಗೇಗೌಡ, ಜಿ.ಎಸ್.ಎಸ್. ೭೫ ಗೌರವ, ಸಂ.ಡಾ.ಕೆ.ವಿ.ನಾರಾಯಣ, ಪುಟ: ೪೦೪.
೨೭. ಸ್ನೇಹ ವಿಶ್ವಾಸ, ವಿ.ಸೀ. ಸಮಗ್ರ ಕಾವ್ಯ ಸಂಪುಟ, ವಿ.ಸೀ., ಪುಟ: ೩೪.
೨೮. ಮೇಲಿನಂತೆ, ಪುಟ: ೩೬.
೨೯. ಮೇಲಿನಂತೆ, ಪುಟ: ೧೧೦.
೩೦. ಸದಬಿರುಚಿಯ ಕವಿ: ವಿ.ಸೀ, ದೊಡ್ಡರಂಗೇಗೌಡ, ಜಿ.ಎಸ್.ಎಸ್. ೭೫ ಗೌರವ, ಸಂ.ಡಾ.ಕೆ.ವಿ.ನಾರಾಯಣ, ಪುಟ: ೪೦೭
೩೧. ಸೀಳು ನೋಟ, ಎಸ್.ವಿ.ಪರಮೇಶ್ವರ ಭಟ್ಟ, ಪುಟ: ೧೪೭
೩೨. ಮೇಲಿನಂತೆ, ಪುಟ: ೧೧೦.
೩೩. ಮೇಲಿನಂತೆ, ಪುಟ: ೩೮೫.
೩೪. ಕಾವ್ಯಾನಂದರ ಕವಿತೆಗಳು, ಸಂ.ಡಾ.ಶೈಲಜ ಉಡಚಣ, ಪುಟ: ೧೨೫.
೩೫. ಮೇಲಿನಂತೆ, ಪುಟ: ೧೨೯.
೩೬. ಮೇಲಿನಂತೆ, ಪುಟ: ೧೩೫.
೩೭. ಈವರೆಗಿನ ಹೇಳತೇನೆ ಕೇಳ, ಚಂದ್ರಶೇಖರ ಕಂಬಾರ, ಪುಟ: ೧೦೭
೩೮. ಹೊಲೆಮಾದಿಗರ ಹಾಡು, ಡಾ.ಸಿದ್ಧಲಿಂಗಯ್ಯ, ಪುಟ: ೬೯.
೩೯. ಕೆ.ಎಸ್.ನಿಸಾರ್ ಅಹಮದ್ ರವರ, ಪ್ರಾತಿನಿಧಿಕ ಕವನಗಳು, ಕೆ.ಎಸ್.ನಿಸಾರ್ ಅಹಮದ್, ಪುಟ: ೧೬೭
೪೦. ಸೂರ್ಯನಲ್ಲರೆ ಮತ್ತಿಲ್ಲ, ಎಚ್.ಎಂ.ಚೆನಯ್ಯ, ಜಿಡುಗಡೆ ಬೆಳ್ಳಿ, ಸಂ.ಡಾ.ಹಾ.ಮಾ.ನಾ., ಪುಟ: ೪೧೨.

೪೧. ಭರತ ಮಾತೆಗೆ, ಶ್ರೀಕೃಷ್ಣ ಆಲನಹಳ್ಳಿ, ಜಿಡುಗಡೆ ಬೆಳ್ಳಿ, ಸಂ.ಡಾ.ಹಾ.ಮಾ.ನಾ., ಪುಟ: ೪೧೭.
೪೨. ವಿ.ಕೃ.ಗೋಕಾಕ್, ನನ್ನ ಕವನಗಳು, ಡಾ.ಸಾ.ಶಿ.ಮರುಳಯ್ಯ, ಮುನ್ನುಡಿ ಪುಟ:
೪೩. ಮೇಲಿನಂತೆ, ಪುಟ: ೧೬೭.
೪೪. ಮೇಲಿನಂತೆ, ಪುಟ: ೨೦೮.
೪೫. ಸಮಗ್ರ ಸೃಜನ, ಡಾ.ಗಿರಡ್ಡಿ ಗೋವಿಂದ ರಾಜ, ಪುಟ: ೧೦೪.
೪೬. ತಾಯಿ ನೆಲದಲ್ಲಿ, ನಿಂಗಪ್ಪ ಮುದೇನೂರು, ಪುಟ: ೩.
೪೭. ಮೇಲಿನಂತೆ, ಪುಟ: ೯.
೪೮. ಬರಗೂರು ರಾಮಚಂದ್ರಪ್ಪ, ಎದೆಯ ಪುಟಗಳು, ಮುದುಗೆರೆ ರಮೇಶ್ ಕುಮಾರ್, ಮುನ್ನುಡಿ ಪುಟ:
೪೯. ಮೇಲಿನಂತೆ, ಪುಟ: ೨೧.
೫೦. ದಕ್ಷಿಣ ಕನ್ನಡ ಕಾವ್ಯದ ವಿಭಿನ್ನ ನೆಲೆಗಳು, ಡಾ.ಸಂತೋಷ ಚೊಕ್ಕಾಡಿ, ಪುಟ: ೨೨೦.
೫೧. ಕನ್ನಡದ ಬಾವುಟ, ಕ.ಸಾ.ಪ., ಬೆಂಗಳೂರು, ಪುಟ: ೧೦೨.
೫೨. ಶ್ರೀ ಸಾಹಿತ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪುಟ: ೩೧೩.
೫೩. ಮೇಲಿನಂತೆ, ಪುಟ: ೩೧೪.
೫೪. ಮೇಲಿನಂತೆ, ಪುಟ: ೧೩೮.
೫೫. ಮೇಲಿನಂತೆ, ಪುಟ: ೧೩೬.
೫೬. ಮೇಲಿನಂತೆ, ಪುಟ: ೧೩೭.
೫೭. ಮೇಲಿನಂತೆ, ಪುಟ: ೧೪೫.
೫೮. ಇಂಗಡಲು, ಗೋವಿಂದ ಪೈ ರವರ ಆಯ್ದ ಕವನಗಳು, ಸಂ.ಜಿ.ವರದರಾಜರಾವ್, ಪುಟ: ೩೧.
೫೯. ಪುನರ್ನವ, ಕಯ್ಯಾರ ಕಿಞ್ಞಣ್ಣ ರೈ, ಪುಟ: ೨೯.
೬೦. ಅರಳು ಮರಳು, ದ.ರಾ.ಬೇಂದ್ರೆ, ಪುಟ: ೧೬೫.
೬೧. ಅರಳು ಮರುಳು, ರಂಶ್ರೀ ಮುಗಳಿ, ಪುಟ:
೬೨. ಗರಿ, ದ.ರಾ.ಬೇಂದ್ರೆ, ಪುಟ: ೩೪.
೬೩. ಗಂಗಾವತರಣ, ದ.ರಾ.ಬೇಂದ್ರೆ, ಪುಟ: ೩೭.
೬೪. ವಿನಯ, ದ.ರಾ.ಬೇಂದ್ರೆ, ಪುಟ: ೪೧.
೬೫. ಅರಳು ಮರಳು, ದ.ರಾ.ಬೇಂದ್ರೆ, ಪುಟ: ೪೧೭.
೬೬. ಹೊನ್ನಹೊತ್ತಾರೆ, ಕುವೆಂಪು, ಪುಟ: ೪೯.
೬೭. ಕಲಾ ಸುಂದರಿ, ಕುವೆಂಪು, ಪುಟ: ೧೪೪.
೬೮. ನನ್ನ ಮನೆ, ಕುವೆಂಪು, ಪುಟ: ೧.
೬೯. ಕುವೆಂಪು ಸಾಹಿತ್ಯದಲ್ಲಿ ರಾಜಕೀಯ ವಿಚಾರ ಧಾರೆ, ದೇ.ಜ.ಗೌ., ಸಹ್ಯಾದ್ರಿಯ ಸೂರ್ಯ, ಪುಟ: ૩೦೯.
೭೦. ಸ್ನೇಹ ವಿಶ್ವಾಸ, ಸಮಗ್ರ ಕಾವ್ಯ ಸಂಪುಟ, ವಿ.ಸೀ., ಪುಟ: ೧೭.
೭೧. ದಿನಕರ ದೇಸಾಯಿ, ನದಿ, ನಾಡು, ನುಡಿ, ಬದುಕು, ಬರಹ, ಡಾ.ಶ್ರೀಪಾದ ಶೆಟ್ಟಿ, ಪುಟ:
೭೨. ಕವನ ಸಂಗ್ರಹ, ದಿನಕರ ದೇಸಾಯಿ, ಪುಟ: ೧೧೦.
೭೩. ಹೂ ಗೊಂಚಲು, ದಿನಕರ ದೇಸಾಯಿ, ಪುಟ: ೧೦೫.
೭೪. ಹಳೆ ಬೇರಿನಲ್ಲಿ ಹೊಸ ಚಿಗುರು, ಶಂಕರ ಕಟಗಿ, ಹಣತೆ, ಸಂ.ಡಿ.ಎಸ್.ನಾಗಭೂಷಣ, ಪುಟ: ೨೮೭.
೭೫. ಸಮಗ್ರ ಕಾವ್ಯ, ಜಿ.ಎಸ್.ಶಿವರುದ್ರಪ್ಪ, ಪುಟ: ೧೪೫.
೭೬. ಕಾರ್ತಿಕದ ಮೋಡ, ಚೆನ್ನವೀರ ಕಣವಿ, ಪುಟ: ೪೧೬.
೭೭. ಕಾವ್ಯಾಕ್ಷಿ, ಚೆನ್ನವೀರ ಕಣವಿ, ಪುಟ: ೩೨.
೭೮. ಎರಡು ದಡ, ಚೆನ್ನವೀರ ಕಣವಿ, ಪುಟ: ೫೬.
೭೯. ಈ ವರೆಗಿನ ಹೇಳತೇನ ಕೇಳ, ಚಂದ್ರಶೇಖರ ಕಂಬಾರ, ಪುಟ: ೪೦.
೮೦. ಮೇಲಿನಂತೆ, ಪುಟ: ಬೆನ್ನುಡಿ.

೮೧. ಕೆ.ಎಸ್.ನಿಸಾರ್ ಅಹಮದ್ ರವರ, ಪ್ರಾತಿನಿಧಿಕ ಕವನಗಳು, ಕೆ.ಎಸ್.ನಿಸಾರ್ ಅಹಮದ್, ಪುಟ: ೯೩.
೮೨. ಮೇಲಿನಂತೆ, ಪುಟ: ೯೫.
೮೩. ಮೇಲಿನಂತೆ, ಪುಟ: ೧೬೨.
೮೪. ನನ್ನ ಕವನಗಳು, ಡಾ.ಸಾ.ಶಿ.ಮರುಳಯ್ಯ, ಪುಟ: ೩೧೬
೮೫. ಮೇಲಿನಂತೆ, ಎಚ್.ತಿಪ್ಪೇರುದ್ರಸ್ವಾಮಿ, ಪುಟ: ಮುನ್ನುಡಿ: ೧೦.
೮೬. ನಡೆದಿದೆ ಪೂಜಾರತಿ, ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಪುಟ: ೫೧.
೮೭. ಹೆಜ್ಜೆ ಗುರುತು, ದೊಡ್ಡರಂಗೇಗೌಡರ ಆಯ್ದ ಕವಿತೆಗಳು, ಸಂ.ಡಾ.ನಲ್ಲೂರು ಪ್ರಸಾದ್, ಪುಟ: ೧೧೯.
೮೮. ವೀ.ಚಿ.ಸಮಗ್ರ ಕಾವ್ಯ, ವೀ.ಚಿಕ್ಕವೀರಯ್ಯ, ಪುಟ: ೩೬೫.
೮೯. ಇಹದ ಸ್ವರ, ಲಲಿತಾ ಸಿದ್ಧಬಸವಯ್ಯ, ಪುಟ: ೪೩.
೯೦. ಮಾನಸಚಂದ್ರಿಕೆ, ಮ.ಸುರೇಶ್ ಬಾಬು, ಪುಟ: ೪೬.
೯೧. ಕನ್ನಡದ ಬಾವುಟ, ಕ.ಸಾ.ಪ., ಬೆಂಗಳೂರು, ಪುಟ: ೧೦೫.
೯೨. ಮೇಲಿನಂತೆ, ಪುಟ: ೧೧೦.
೯೩. ಕವನ ಸಂಗ್ರಹ, ದಿನಕರ ದೇಸಾಯಿ, ಪುಟ: ೧೧೭.
೯೪. ದಾಸಾಳ, ದಿನಕರ ದೇಸಾಯಿ, ಪುಟ: ೨೦.
೯೫. ಕನ್ನಡದ ಬಾವುಟ, ಕ.ಸಾ.ಪ., ಬೆಂಗಳೂರು, ಪುಟ: ೧೧೬
೯೬. ಶ್ರೀ ಸಾಹಿತ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪುಟ: ೧೨೮.
೯೭. ಮೇಲಿನಂತೆ, ೧೨೯.
೯೮. ಮೇಲಿನಂತೆ, ೧೫೧.
೯೯. ಪತ್ರಪುಷ್ಪ, ಕಡಂಗೋಡ್ಲು ಶಂಕರ ಭಟ್ಟ, ಪುಟ: ೨೯.
೧೦೦. ಮೇಲಿನಂತೆ, ಪುಟ: ೩೦.
೧೦೧. ಮೇಲಿನಂತೆ, ಪುಟ: ೩೧.
೧೦೨. ಚೆಂಗಲವೆ, ಪಾಂಡೇಶ್ವರ ಗಣಪತಿ ರಾವ್, ಪುಟ: ೪೫.
೧೦೩. ಸಖೀಗೀತ, ದ.ರಾ.ಬೇಂದ್ರೆ, ಪುಟ: ೯೭
೧೦೪. ಮೇಲಿನಂತೆ, ಪುಟ:
೧೦೫. ನಾದಲೀಲೆ, ದ.ರಾ.ಬೇಂದ್ರೆ, ಪುಟ: ೯೨.
೧೦೬. ಸಾಹಿತ್ಯದ ವಿರಾಟ್ ಸ್ವರೂಪ, ದ.ರಾ.ಬೇಂದ್ರೆ, ಪುಟ: ೧೪೯.
೧೦೭. ಮುಗಿಲ ಮಲ್ಲಿಗೆ, ದ.ರಾ.ಬೇಂದ್ರೆ, ಪುಟ: ೩೧.
೧೦೮. ಪಾಂಚಜನ್ಯ, ಕುವೆಂಪು, ಪುಟ: ೨೧.
೧೦೯. ಅನುತ್ತರ, ಕುವೆಂಪು, ಪುಟ: ೭೭.
೧೧೦. ಮಲ್ಲಿಗೆ ಮಾಲೆ, ಕೆ.ಎಸ್.ಎನ್., ಸಮಗ್ರ ಸಂಕಲನ, ಪುಟ: ೪೬೧.
೧೧೧. ಕಾವ್ಯಾನಂದರ ಕವಿತೆಗಳು, ಸಂ.ಡಾ.ಶೈಲಜಾ ಉಡಚಣ, ಮುನ್ನುಡಿ ಪುಟ: ೨೧.
೧೧೨. ಮೇಲಿನಂತೆ, ಪುಟ: ೧೨೧.
೧೧೩. ಅಮ್ಮ, ಡಾ.ಎಲ್.ಹನುಮಂತಯ್ಯ, ಪುಟ: ೧೨.
೧೧೪. ಕಾವ್ಯಾಂಜಲಿ, ಕವಿತಾ ಕೃಷ್ಣ, ಪುಟ: ೧೧.
೧೧೫. ಹೊಸ ಚಿಗುರು, ಸಂ.ಹೊ.ಗ.ಮನೋಹರ್, ಪುಟ: ೭

ಅಧ್ಯಾಯ – ೪

ಪ್ರಕೃತಿಯಲ್ಲಿ ಮಾತೃತ್ವ

ಭೂಮಿ ಭಿನ್ನವಾದ ವಿವರಣೆಗಳಿಗೆ, ದೃಷ್ಟಿಕೋನಗಳಿಗೆ ವಸ್ತುವಾಗಿದೆ. ಇದು ಸಂಪ್ರದಾಯವಾದಿಗಳಿಗೆ ಆರಾಧ್ಯ ದೇವತೆಯಾಗಿ ಕಂಡರೆ, ಪರಿಸರವಾದಿಗಳಿಗೆ ಜೀವಶಕ್ತಿಯಾಗಿ ಕಂಡಿದೆ. ತಾನು ಗರ್ಭೀಕರಿಸಿಕೊಂಡಿರುವ ಪ್ರಕೃತಿಯ ನಾನಾ ಮುಖಗಳು ಕವಿಗಳ ಸೃಷ್ಟಿ ಕ್ರಿಯೆಗೆ ಸಾಧನವಾಗಿವೆ. ಹೊಸಗನ್ನಡ ಕಾವ್ಯದಲ್ಲಿ ಭೂಮಿ ಹಾಗೂ ಪ್ರಕೃತಿಯನ್ನು ಎದುರುಗೊಳ್ಳುತ್ತ ಅದರ ವಿರಾಡ್ರೂಪವನ್ನು ಕವಿಗಳು ಚಿತ್ರಿಸಿದ್ದಾರೆ.

‘ಪ್ರಕೃತಿಯ ಶಿಶುವಾದ ಮಗು ತಾಯಿಯನ್ನು ತಬ್ಬಿ ಅವಳ ಮುಖಾಂತರ ಇಡೀ ಜಗತ್ತನ್ನು ತಿಳಿಯುವಂತೆ; ಅದೇ ಪ್ರಕೃತಿಯನ್ನು, ಜಗತ್ತನ್ನು ಮಾತೆ ಎಂದು ಕವಿ ಆರಾಧಿಸುತ್ತಾನೆ. ವೈವಿಧ್ಯತೆಯಿಂದ ಭವ್ಯವಾಗಿ ಹೊಳೆಯುವ ಪ್ರಕೃತಿಯು ತನ್ನ ದೈಹಿಕ ಅನುಕೂಲವನ್ನು ಪೂರೈಸುವ ಭೌತಿಕವಸ್ತು ಎಂದು ತಿಳಿದವನೇ ಅದನ್ನು ದೈವಿಕಶಕ್ತಿ ಎಂದು ಆರಾಧಿಸಿದ್ದು; ಈ ಗೂಢವನ್ನು ಋಗ್ವೇದದ ಋಷಿಗಳು ‘ವಿಭೂತಿಯೋಗ’ ಎಂದು ಕರೆದಿದ್ದಾರೆ.’[೧] ಎಂಬ ಜಿ. ಕೃಷ್ಣಪ್ಪನವರ ಮಾತುಗಳನ್ನು ಗಮನಿಸಿದಾಗ ನಮ್ಮ ಕವಿಗಳೆಲ್ಲರಿಗೂ ದೇಶ, ಭಾಷೆ, ಭೂಮಿ, ನದಿಗಳಲ್ಲಿ, ತಾಯಿತನದ ಸ್ವರೂಪ ದರ್ಶಿಸುವುದು ಸಹಜ ಕ್ರಿಯೆಯಾಗಿದೆ. ಪ್ರಕೃತಿಯನ್ನು ಕವಿಗಳು ತಮ್ಮ ಧೋರಣೆಗೆ ಅನುಗುಣವಾಗಿ ಬಳಸಿಕೊಂಡಿದ್ದಾರೆ. ಅವರಿಗೆ ನಿಸರ್ಗ ಕೇವಲ ಒಂದು ದೃಶ್ಯವಲ್ಲ. ಅದು ಶುದ್ಧ ಐಂದ್ರಿಕ ಅನುಭವ ನೀಡುವ ಶಕ್ತಿ ರೂಪ. ಮನುಷ್ಯನ ಪ್ರಕೃತಿ, ನಿಸರ್ಗದ ಪ್ರಕೃತಿ ಮುಖಾಮುಖಿಗೊಂಡು ಅನುಭಾವದ ನೆಲೆ ತಲುಪುತ್ತದೆ.

‘ಹೆಣ್ಣಿನ ಗರ್ಭಧಾರಣೆ ಮತ್ತು ಭೂಮಿಯ ಸಸ್ಯ ಧಾರಣೆ ಇವೆರಡಕ್ಕೂ ಸಾಮ್ಯತೆಯನ್ನು ಕಂಡುಕೊಂಡ ಆದಿ ಮಾನವ ಹೆಣ್ಣು ಮತ್ತು ಭೂಮಿ ಇವೆರಡೂ ಪೂಜ್ಯ ವಸ್ತುಗಳೆಂದು ಭಾವಿಸಿದ. ಹಾಗಾಗಿಯೇ ಪ್ರಾಣಿಗಳ ತಾಯಿಯಾಗಿ ಮಾತೃ ದೇವತೆ, ಧಾನ್ಯ ದೇವತೆಯಾಗಿ ಮಾತೃ ದೇವತೆ, ಭೂಮಿ ದೇವತೆಯಾಗಿ ಮಾತೃ ದೇವತೆ, ನಿಸರ್ಗ ದೇವತೆಯಾಗಿ ಮಾತೃ ದೇವತೆಯೆಂದು ಪರಿಭಾವಿಸಿ ಆರಾಧಿಸುವುದುಂಟು’.[೨]

ಈ ಭೂಮಿಯನ್ನು ಹಾಗೂ ಅದರ ವಿವಿಧ ಮುಖಗಳನ್ನು ನವೋದಯದ ಕವಿಗಳು ಹೆಚ್ಚಾಗಿ ದರ್ಶಿಸಿದ್ದಾರೆ. ದಾರ್ಶನಿಕ ಒಲವುಗಳಿಂದ, ತಾತ್ವಿಕ ನೆಲೆಗಳಿಂದ ಭಾವಗೀತೆಗಳಲ್ಲಿ ಲಯ, ನಾದ, ಛಂದಸ್ಸಿನ ಗತ್ತುಗಳೊಂದಿಗೆ ಕಂಡಿದ್ದಾರೆ. ಅದರಲ್ಲೂ ಮುಖ್ಯವಾಗಿ ನವೋದಯದ ಪ್ರಮುಖರಾದ ಬೇಂದ್ರೆ, ಕುವೆಂಪು, ಮಧುರ ಚೆನ್ನರಲ್ಲಿ ಪ್ರಕೃತಿಯ ವರ್ಣರಂಜಿತ ಚಿತ್ರವನ್ನು ಕಾಣಬಹುದು. ಅದರ ಸೌಂದರ್ಯದ ಬಹುಮುಖವನ್ನು ದರ್ಶಿಸಬಹುದು.

'ಮಾನವನ ಸಾಂಸ್ಕೃತಿಕ ಇತಿಹಾಸದಲ್ಲಿ ನಿಸರ್ಗ, ಪ್ರಕೃತಿ ಅದ್ಭುತ ಕಾವ್ಯ ಸೃಷ್ಟಿಗೆ ಪ್ರೇರಣೆಯಾಗಿದೆ. ಚಂದ್ರ, ಸೂರ್ಯ, ಮುಗಿಲು, ಕಡಲು, ಹಕ್ಕಿ, ಬಾನು ಇತ್ಯಾದಿಯಾಗಿ ಅನೇಕ ಪ್ರಾಕೃತಿಕ ಸತ್ವಗಳು ಕವಿ ಕಲಾವಿದರ ಪ್ರತಿಭೆಯನ್ನು ಕೆರಳಿಸಿ, ಚಿರಂತನ ಕಾವ್ಯ ಕಲಾ ರಚನೆಗೆ ದಾರಿಮಾಡಿದೆ.

ಕುವೆಂಪು ಪ್ರಕೃತಿಯ ಆರಾಧಕರಾದರು. ಅವರ ಪ್ರಕೃತಿಯ ಚೆಲುವಿನಾಸ್ವಾದನೆ, ಆರಾಧನೆ, ಪ್ರಕೃತಿಯೊಂದಿಗಿನ ತಾದಾತ್ಮ್ಯತೆಗಳು, ಮೋಹಕ ಸುಶ್ರಾವ್ಯ ಗೀತಾಭಿವ್ಯಕ್ತಿಯಲ್ಲಿ ಸಾರ್ಥಕಗೊಂಡಿತು. ದರ್ಶನ ದೃಷ್ಟಿಯುಳ್ಳ ಕವಿಗೆ, ಪ್ರಕೃತಿಯ ನವ ನವೀನ ಚೆಲುವು ರಮ್ಯತೆಗಳಷ್ಟೇ ಗೋಚರಿಸದೆ, ಅವುಗಳಾಚೆಯ ಬದುಕಿನ ನಿಗೂಢತೆಗಳಷ್ಟೂ ಮೈ ಪಡೆದು ನಿಲ್ಲುತ್ತವೆ. ಬದುಕಿನ ಬಗೆಗಿನ ಗಂಭೀರವಾದ ತಾತ್ವಿಕ ಚಿಂತನೆಗಳ ಋತದ ದರ್ಶನಕ್ಕೂ ಕನ್ನಡಿಯಾಗಿ ಒದಗುತ್ತದೆ. ಪ್ರಕೃತಿಯ ಈ ಬಗೆಯ ಚಿತ್ತಾಕರ್ಷಕ ಮತ್ತು ವಿಚಾರ ಪ್ರಚೋದಕವಾದ ಮಗ್ಗಲುಗಳಿಂದಾಗಿಯೇ, ಸುಂದರ ಭಾವಗೀತೆಗಳಿಂದ ಹಿಡಿದು ಮೇಘದೂತದಂತಹ ಮಹಾ ಕಾವ್ಯ, ಭೂಮಿ ಗೀತ, ದ್ಯಾವ ಪೃಥ್ವಿಯಂತಹ ಖಂಡ ಕಾವ್ಯಗಳ ಹುಟ್ಟಿಗೆ. ದಾರಿಯಾಯಿತು". [೩]

ನಿಸರ್ಗ ಮತ್ತು ಮಾನವನ ಮಧ್ಯೆ ಮಾನವೀಯ ಸಂಬಂಧಗಳನ್ನು ಕಂಡುಕೊಳ್ಳಬಹುದು. ಗಾಢವಾದ ಜೀವನದರ್ಶನವನ್ನು ಪ್ರಕೃತಿಯ ಮೂಲಕ ಪಡೆಯಬಹುದು. ಪ್ರಕೃತಿ ಲೋಕಕ್ಕು ಮಾನವ ಲೋಕಕ್ಕು ಅವಿನಾಭಾವ ಸಂಬಂಧವಿದೆ. ಇದನ್ನು ಹಿಂದಿನಿಂದಲೂ ನಮ್ಮವರು ಗುರುತಿಸಿ ದರ್ಶಿಸಿರುವುದು ಕಂಡುಬರುತ್ತದೆ.

'ಭೂಮಿಯನ್ನು ಸ್ತ್ರೀಯರೊಡನೆ ಹೋಲಿಸುವುದನ್ನು ಸಂಸ್ಕೃತಿಯ ಬೇರೆಬೇರೆ ಹಂತದ ಚಿಂತನೆಯಲ್ಲಿ ಕಾಣಬಹುದು. ರೋಮನ್ ಕಾನೂನಿನ ಪ್ರಕಾರ ತಾಯಿ ಮತ್ತು ಮಣ್ಣು ಸಮಾನರು. ಪ್ರಾಚೀನ ಭಾರತದಲ್ಲಿ ಮದುವೆಯ ಆಚರಣೆಯಲ್ಲಿ ಸ್ತ್ರೀಯನ್ನು ಬೀಜ ಬಿತ್ತುವ ಹೊಲವೆಂದು ಕರೆಯಲಾಗುತಿತ್ತು ಮತ್ತು ಅರ್ಚಕನು ಮದುಮಗನಿಗೆ "ಅವಳ ಮೇಲೆ ನಿನ್ನ ಬೀಜವನ್ನು ಬಿತ್ತು" (ಅಥರ್ವ ವೇದ: ರೋಮನ್ ೧೧, ಡಬ್ಲಿಯು. ಎಫ್. ೨೧೪) ಹಾರೈಸುತ್ತಿದ್ದನು. ಖುರಾನಿನ ಪ್ರಕಾರ "ನಿಮ್ಮ ಹೆಂಗಸರು ನಿಮ್ಮ ಹೊಲ" ತಾಯ ಗರ್ಭ ಒಂದೇ ವಸ್ತುವಿನ ಎರಡು ರೂಪಗಳಾಗಿವೆ. (ದ ಖುರಾನ್; ಸುಸ: ೨) "ಬೆತ್ತಲೆಯಾಗಿ ನಾನು ತಾಯ ಗರ್ಭದಿಂದ ಬಂದೆ. ಬೆತ್ತಲೆಯಾಗಿ ನಾನು ಅದಕ್ಕೆ ಹಿಂತಿರುಗುವೆ" ಎಂದು ಬೈಬಲ್‌ನಲ್ಲಿ ಹೇಳಲಾಗಿದೆ". [೪] ಹೆಣ್ಣನ್ನು ಮತ್ತು ಭೂಮಿಯನ್ನು ಎಲ್ಲ ದೇಶದ ಜನ ಒಂದೇ ಭಾವನೆಯಲ್ಲಿ ಕಂಡಿದ್ದಾರೆ. ಅವೆರಡೂ ಕೂಡ ಫಲವತ್ತತೆಯ ರೂಪಗಳು. ಭೂಮಿಯು ಸಸ್ಯ ಸಮೃದ್ಧಿಗೆ ತನ್ನನ್ನು ತೆರೆದುಕೊಂಡಂತೆ ಹೆಣ್ಣು ಕೂಡ ಸಂತಾನ ವೃದ್ಧಿಗೆ ಕಾರಣಳಾಗಿದ್ದಾಳೆ.

"ಕನ್ನಡದ ನವೋದಯ ಕವಿಗಳಲ್ಲಿ ಕಾಣಿಸುವ ಪ್ರಕೃತಿ ದರ್ಶನಕ್ಕು ಇಂಗ್ಲೀಷಿನ ರೊಮ್ಯಾಂಟಿಕ್ ಕಾವ್ಯಕ್ಕು ವಿಶೇಷವಾದ ಸಂಬಂಧವಿದೆ. ಆದರೆ ಅದರ ತಾತ್ವಿಕ ಹಿನ್ನೆಲೆ ಭಿನ್ನವಾದದ್ದು. ಇಂಗ್ಲೀಷ್‌ನ ರೊಮ್ಯಾಂಟಿಕ್ ಕಾವ್ಯ ಅಲ್ಲಿನ ವೈಜ್ಞಾನಿಕ, ಕೈಗಾರಿಕೀಕರಣದ ವಿರುದ್ಧವಾಗಿ ಬಂದದ್ದು. ಕೈಗಾರಿಕೀಕರಣದಿಂದಾಗಿ ಹುಟ್ಟಿಕೊಂಡ ಯಾಂತ್ರಿಕ ಬದುಕಿಗೆ ನಿರಾಶೆಗೊಂಡು ಆ ಮೌಲ್ಯಗಳ ವಿರುದ್ಧ ಬಂಡಾಯವೆದ್ದು ಕವಿಗಳು ಪ್ರಕೃತಿಗೆ ಮೊರೆ

ಹೋದರು. ಪ್ರಕೃತಿ ಅವರ ಬದುಕಿಗೆ ಹೊಸ ಚೈತನ್ಯವನ್ನು ನೀಡುವ ಸಾಧನವಾಯಿತು. ಆದರೆ ಕನ್ನಡ ನವೋದಯ ಕಾವ್ಯದ ಪ್ರಕೃತಿ ದರ್ಶನದಲ್ಲಿ ವೈಜ್ಞಾನಿಕತೆಯ ಬಗೆಗಾಗಲೀ, ಕೈಗಾರಿಕೀಕರಣದ ಬಗೆಗಾಗಲೀ ಬಂಡಾಯವಿಲ್ಲ. ಬದಲಿಗೆ ಧರ್ಮ ಮತ್ತು ವಿಜ್ಞಾನದ ಮೂಲಕ ಸಾಮರಸ್ಯದ ಬದುಕನ್ನು ಕಂಡುಕೊಳ್ಳುವ ನಿಲುವನ್ನು ಇಲ್ಲಿ ಕಾಣಬಹುದಾಗಿದೆ. ಹಾಗಾಗಿ ವಿಜ್ಞಾನದ ವಿಷಯಗಳನ್ನು ಧಾರ್ಮಿಕ ಪರಿಭಾಷೆಯಲ್ಲಿ ವ್ಯಕ್ತಪಡಿಸುವ ಮನೋಧರ್ಮವನ್ನು ಕನ್ನಡದ ನವೋದಯ ಕವಿಗಳಲ್ಲಿ ಕಾಣಬಹುದಾಗಿದೆ.[೫] ವಿಜ್ಞಾನ ವಿಚಾರ ಪ್ರಜ್ಞೆಗೆ ಒತ್ತು ಕೊಟ್ಟಂತೆ ಚಿಂತನೆಯ ಮಾರ್ಗಗಳು ವಿಸ್ತಾರಗೊಂಡವು. ಕವಿಗಳೂ ಕೂಡ ಈ ನಿಟ್ಟಿನಲ್ಲಿ ತಮ್ಮ ಚಿಂತನೆ ಹರಿಯಬಿಟ್ಟರು. ಆದರೆ ಆರಂಭದಲ್ಲಿ ಧರ್ಮ – ದೇವರುಗಳ ಬಗ್ಗೆ ಇರುವ ಭಯದಿಂದ ಕವಿಗಳೂ ಕೂಡ ಸಂಪೂರ್ಣವಾಗಿ ಹೊರಬರಲಾಗಲಿಲ್ಲ. ಅದಕ್ಕೆ ಧರ್ಮ ಮತ್ತು ವಿಜ್ಞಾನದ ಸಾಮರಸ್ಯವನ್ನು ಪ್ರತಿಪಾದಿಸಿದರು.

ಪ್ರಕೃತಿ ಗೀತೆಗಳ ವೈಶಿಷ್ಟ್ಯ: ನಮ್ಮ ಕವಿಗಳ ಮೆದುಳು ಬಳ್ಳಿಗೆ ಲಗ್ಗೆ ಹಾಕಿ ಬಂಧಿಸಿರುವ ಸಂಗತಿಗಳಲ್ಲಿ ಪ್ರಕೃತಿಯೂ ಒಂದು. ನಿಸರ್ಗ ಎಲ್ಲರ ಮನಸ್ಸನ್ನು ಸೆಳೆಯುವ ವೈವಿಧ್ಯತೆ ಪಡೆದುಕೊಂಡಿದೆ. ಸ್ವಚ್ಛವಾದ ಬೆಳಕೂ, ನಿರ್ಮಲವಾದ ಗಾಳಿಯೂ ಯಥೇಚ್ಛವಾಗಿ ದೊರೆಯುವ ಪ್ರಕೃತಿಯ ಹೊರ ಆವರಣದಲ್ಲಿ ಭಾವನಾತ್ಮಕ ಸಂಬಂಧದೊಂದಿಗೆ ವಿಹರಿಸಿದಾಗ ಬದುಕಿನ ಜಟಿಲ ಜಂಜಾಟದಿಂದ ಬಿಡುಗಡೆ ಹೊಂದಿ ಸಫಲರಾಗುವಂತ ಭಾವನೆಯಾಗುತ್ತದೆ. ಮನಸ್ಸು ತಣಿಯುತ್ತದೆ. ಇಂದ್ರಿಯಗಳು ಪುಲಕಗೊಳ್ಳುತ್ತವೆ. ರಸಿಕತೆಯ ಧನ್ಯತೆ ರೂಪುತಾಳುತ್ತದೆ. ಆತ್ಮೋನ್ನತಿಗೆ ಪ್ರೇರಣೆ ನೀಡುತ್ತದೆ.

ಪ್ರಕೃತಿ ಎಲ್ಲ ಕವಿಗಳಿಗೂ ಎರಡು ರೂಪದಲ್ಲಿ ಪ್ರೇರಣೆ ನೀಡುತ್ತದೆ. ಹೊಚ್ಚಹೊಸತಪ್ಪ ಶಿಶು ಸಹಜವಪ್ಪ ಪ್ರಕೃತಿ ಪ್ರೇಮ ಬೌದ್ಧಿಕವಾದುದ್ದಾದರೆ; ಅದು ಕೆಲವು ವೇಳೆ ಬಗೆಗಣ್ಣಿಗೆ ಮಿಗಿಲಾದ ರೂಪದಲ್ಲಿ ಗೋಚರವಾಗಿ ಶಕ್ತಿ ರೂಪದಲ್ಲಿ ಕಾಣುತ್ತದೆ. ಒಂದು ಬೌದ್ಧಿಕವಾದರೆ, ಮತ್ತೊಂದು ಆಧ್ಯಾತ್ಮಿಕ ಅರ್ಥದಲ್ಲಿ ಗೋಚರಿಸುತ್ತದೆ. ಕವಿಯ ಮನಸ್ಸಿನ, ವಯಸ್ಸಿನ ಹಾಗೂ ಪರಿಸರದ ಹಿನ್ನೆಲೆಯಲ್ಲಿ ಅದು ಮುಗ್ದತೆಯಾಗಿ ಪ್ರಭಾವ ಬೀರುತ್ತದೆ.

ಕನ್ನಡ 'ನವೋದಯ ಕಾವ್ಯ ಪರಂಪರೆ' ನಮಗೆ ನೂರಾರು ಮೌಲಿಕ ಕವಿಗಳ ಕೊಡುಗೆಯನ್ನು ನೀಡಿತು. ಆಧುನಿಕ ಕನ್ನಡ ಕಾವ್ಯದ ಔನತ್ಯ ಬೆಳಗಿದ್ದೇ ನವೋದಯದಲ್ಲಿ ಹೆಚ್ಚು ಹೆಚ್ಚು! ಬಿ. ಎಂ. ಶ್ರೀಕಂಠಯ್ಯನವರ ಹೊಸ ಹಾದಿಯಲ್ಲಿ ಸಾಗಿದವರು ಅನೇಕರು.

ಮನುಷ್ಯ ಪ್ರಕೃತಿಯ ಶಿಶು. ಆದರೂ ಒಬ್ಬನಿಗಾದ ಅನುಭವ ಎಲ್ಲರಿಗೂ ಆಗುವುದಿಲ್ಲ. ಅದರಲ್ಲೂ ಹುಟ್ಟಿದಾರಭ್ಯದಿಂದ ಪ್ರಕೃತಿಯ ಸಂಪರ್ಕ ಮತ್ತು ಸಂಘರ್ಷದೊಂದಿಗೆ ಹುಟ್ಟಿ ಬಂದ ಕವಿಗಳಿಗೆ ಅದು ವಿಭಿನ್ನ ರೀತಿಯ ಪ್ರಭಾವ ಬೀರುತ್ತದೆ. ಕುವೆಂಪು ಪ್ರಕೃತಿಯಿಂದ ಪಡೆದ ಪ್ರೇರಣೆ ಮತ್ತು ಪ್ರಭಾವ ಅತಿಶಯವಾದದ್ದು. ಅವರ ಎಲ್ಲ ಬರವಣಿಗೆಯಲ್ಲೂ ಪ್ರಕೃತಿ ಒಂದು ಪಾತ್ರವಾಗಿ, ಒಂದು ಶಕ್ತಿಯಾಗಿ, ಪ್ರೇರಣೆಯ ವಸ್ತುವಾಗಿ, ಚೈತನ್ಯದ ರೂಪವಾಗಿ

ಬಳಕೆಗೊಂಡಿರುವುದನ್ನು ನಾವು ಕಾಣಬಹುದು. ಕುವೆಂಪುರವರಿಗೆ ಬೌದ್ಧಿಕವಾಗಿಯೂ, ಆಧ್ಯಾತ್ಮಿಕವಾಗಿಯೂ ಪ್ರಕೃತಿ ಪ್ರಭಾವ ಬೀರಿರುವುದುಂಟು. ತಾವು ಕಂಡುಂಡ ಪ್ರಕೃತಿಯ ಸೊಬಗನ್ನು ಹಾಡಿದ್ದಾರೆ. ಪ್ರಕೃತಿಯಲ್ಲಿ ವಿಹರಿಸುತ್ತಿದ್ದಾಗ ತಮಗೆ ಸೌಂದರ್ಯ ದರ್ಶನವಾಯಿತೆಂದು, ಆ ಸೌಂದರ್ಯದರ್ಶನದ ಜೊತೆ ಜೊತೆಯಲ್ಲಿಯೇ ಕಾವ್ಯ ದೇವಿಯ ಸಾಕ್ಷಾತ್ಕಾರವಾಯಿತೆಂದು ಸ್ಮರಿಸುತ್ತಾರೆ. ಸೃಷ್ಟಿಯ ಸೊಬಗಿನಲ್ಲಿಯೇ ಶಿವನ ರೂಪ ದರ್ಶಿಸುತ್ತಾರೆ. ಶಿವನು ಕೊಟ್ಟ ಭೂಮಿಯನ್ನು ನಾವು ಒಲಿಯಲಾರದೆ ಹೋದರೆ ಮುಂದೆ ಬರುವ ಸ್ವರ್ಗ ಸುಖವನ್ನು ನಾವು ಹೇಗೆ ಒಲಿಯುತ್ತೇವೆ ಎಂದು ಕವಿ ಕೇಳುತ್ತಾರೆ.

ಪ್ರಕೃತಿ ಕವಿಗಳಿಗೆ ಬೆರಗು ಮತ್ತು ಆನಂದವನ್ನು ನೀಡುವುದು ಒಂದಾದರೆ, ಅದು ಸೌಂದರ್ಯ ರೂಪಿಯಾದ ಪರಮಾತ್ಮನ ಒಂದು ರೂಪ ಎಂಬ ತತ್ವದಲ್ಲಿ ಕವಿಗಳು ಪ್ರಕೃತಿಯನ್ನು ತಮ್ಮ ಬಗೆಗಣ್ಣಿನಿಂದ ಕಂಡಿದ್ದಾರೆ. ಹಾಗಾಗಿ ಕವಿಗಳಿಗೆ ಪ್ರಕೃತಿಯೇ ಸಂಗಾತಿ, ಪ್ರಕೃತಿಯೇ ಸ್ಫೂರ್ತಿಶಕ್ತಿ, ಪ್ರಕೃತಿಯೇ ಶಾಂತಿದಾಯಿ, ಪ್ರಕೃತಿಯೇ ಗುರು, ಪ್ರಕೃತಿಯೇ ದೇವರ ಸಂಕೇತ, ಪ್ರಕೃತಿಯೇ ಜಗಜ್ಜನನಿ, ಪ್ರಕೃತಿಯೇ ಚಿನ್ಮಯೀ ಶಕ್ತಿ, ಪ್ರಕೃತಿಯೇ ಮಹಾ ಮಾಯೆಯಾಗಿ ಕಂಡಿದೆ.

ನವೋದಯ ತಲೆಮಾರಿನ ಕವಿಗಳಿಗೆ ಪ್ರಕೃತಿ ಸೌಂದರ್ಯದ ಗಣಿ, ಶಿವ ಸ್ವರೂಪಿ, ಪರಮ ಪಾವನ ಶಕ್ತಿ ರೂಪಿಣಿ. ಪ್ರಕೃತಿ ಸಾನಿಧ್ಯದಿಂದ ಮಾತ್ರ ಮನಸ್ಸು ಆನಂದಾನುಭೂತಿಯನ್ನು ಪಡೆಯುತ್ತದೆ. ಬಾನು, ಬನ, ಖಗ, ಮೃಗಗಳ ಅನ್ಯೋನ್ಯ ಸಂಬಂಧವನ್ನು, ಅವು ಆತ್ಮಾನಂದಕ್ಕೆ ಪೂರಕವೆಂದು ಭಾವಿಸಿದ್ದಾರೆ. ತಮ್ಮ ಆತ್ಮದ ಕದ ತೆರೆಯುವ ಕೀಲಿಕೈ ಎಂದು, ಭಾವ ಸಮಾಧಿಗೊಯ್ಯುವ ಸಾಧನವೆಂದು ಕಂಡಿದ್ದಾರೆ. ಋತುಮಾನಗಳ ಹಿನ್ನೆಲೆಯಲ್ಲಿ ಪ್ರಕೃತಿಯಲ್ಲಾಗುವ ಬದಲಾವಣೆಗಳಿಗೂ ಮನುಷ್ಯನ ಮನೋವ್ಯಾಪಾರಕ್ಕೂ ಸಂಬಂಧ ಉಂಟೆಂದು ಭಾವಿಸಿದ್ದಾರೆ. ಪ್ರಕೃತಿಯನ್ನು ದರ್ಶಿಸುವಲ್ಲಿ ಕವಿ ಕೆಲವೆಡೆ ತತ್ವಜ್ಞಾನಿಯಾಗಿ, ವಿಜ್ಞಾನಿಯಾಗಿ ಕೆಲವು ಕಡೆ ಮೂರೂ ಗುಣದ ವ್ಯಕ್ತಿ ತಾನೊಬ್ಬನೆಯಾಗಿ ನಿಲ್ಲುತ್ತಾನೆ.

ಸೂರ್ಯೋದಯ ಚಂದ್ರೋದಯ
ದೇವರ ದಯೆ ಕಾಣೊ!
ಬಿಸಿಲಿದು ಬರಿ ಬಿಸಿಲಲ್ಲವೊ
ಸೂರ್ಯನ ಕೃಪೆ ಕಾಣೊ!
ಸೂರ್ಯನು ಬರಿ ರವಿಯಲ್ಲವೊ
ಆ ಭ್ರಾಂತಿಯ ಮಾಣೊ!
ರವಿ ವದನವೆ ಶಿವಸದನವೊ
ಬರಿ ಕಣ್ಣದು ಮಣ್ಣೊ
ಶಿವನಿಲ್ಲದ ಸೌಂದರ್ಯವೆ
ಶವ ಮುಖದ ಕಣ್ಣೊ! . . [೬]

ಕವಿ ಪ್ರಕೃತಿಯಲ್ಲಿ ಜಡವನ್ನು ದರ್ಶಿಸಿದಂತೆ ಚೇತನವನ್ನು ದರ್ಶಿಸಿದ್ದಾನೆ. ಜಡ ಚೇತನಗಳು ಸಮೀಪ ಸಂಬಂಧಿಗಳು. ಜಡವೂ ಚೇತನದ ಒಂದು ಮುಖ ಎನ್ನುವ ತತ್ವಕ್ಕೆ ಬರುತ್ತಾನೆ. ನಿಸರ್ಗದ, ಕಲ್ಲು, ಮಣ್ಣು, ಗಿಡ, ಮರ, ನದಿ, ನದಗಳೆಲ್ಲವೂ ಕವಿಗೆ

ಆತ್ಮದ ಆವೇಶ ಭಾವಗಳಾಗಿ ಹೊಳೆಯುತ್ತವೆ. ಈಶ್ವರ ಶರೀರದ ಚಿನ್ಮಯ ಮಹಾಂಗಗಳಾಗಿಯೂ, ಬ್ರಹ್ಮದ ಮಹಾ ಚಿತ್ತ ಶರಧಿಯ ತರಂಗಗಳಾಗಿಯೂ ಗೋಚರಿಸುತ್ತವೆ. ಉದಯಾಸ್ತಗಳಲಿ, ವನಗಿರಿಗಳಲಿ, ತಂಗಾಳಿಯಲಿ, ರೌದ್ರವರ್ಷಧಾರೆಯಲಿ, ಬೆಳದಿಂಗಳಲಿ ಎಳೆಹಸುರಮೇಲೆ ಮಿನುಗುವ ಹಿಮದ ಮಣಿಗಳಲಿ, ಪಕ್ಷಿ ಪ್ರಾಣಿಗಳಲಿ, ಹಚ್ಚ ಹಸುರಿನ ಸೌಂದರ್ಯದೊಲುಮೆಯಲಿ, ಮಿಂಚಿನ ಹೊಳಪಿನಲಿ, ನೀಲಿ ಆಕಾಶದ ವಿಸ್ತಾರದಲಿ, ಮೃಣ್ಮಯಿಯಾಗಿ, ಚಿನ್ಮಯಿಯಾಗಿ ಕಾಣುತ್ತದೆ.

" . . . .ಸ್ಥೂಲ, ಜಡ, ಜಗವೆಲ್ಲ
ಧ್ಯಾನದೃಷ್ಟಿಗೆ ಭಾವವಿನ್ಯಾಸದಂದದಲಿ
ವೇದ್ಯವಾಗುತಿದೆ : ಕವಿದರ್ಶನಕೆ ಜಡವಿಲ್ಲ;
ಜಡವೆಂಬುದೆಲ್ಲ ಚೇತನದ ನಟನೆಯ ಲೀಲೆ
ರಸವಲ್ಲದಿನ್ನಿಲ್ಲ. . . .
ರಸಋಷಿಯ ಪ್ರತಿಭಾಸಮಾಧಿಗದು ಪ್ರತ್ಯಕ್ಷ"[೨]

ಹೀಗೆ ನಿಸರ್ಗದ ಎಲ್ಲ ಅಂಶಗಳಲ್ಲೂ ಆತ್ಮದ ಆವೇಶ ಭಾವವನ್ನು ಕವಿ ದರ್ಶಿಸುತ್ತಾರೆ. ನಿಸರ್ಗ ಕೇವಲ ಜಡವಾಗಿ, ಸ್ಥೂಲ ವಸ್ತುಗಳಾಗಿ ಕಾಣುವುದಿಲ್ಲ. ಜೀವವಿಲ್ಲದ ಹೆಣವಾಗಿ, ಸೌಂದರ್ಯವಿಲ್ಲದ ಅಮಂಗಳವಾಗಿ ಕಾಣದೆ ಈಶ್ವರ ಶರೀರದ ಚಿನ್ಮಯ ರೂಪಿಯಾಗಿ ಕಾಣುತ್ತದೆ.

ಮನುಷ್ಯ ನಿರ್ಮಿಸುವ ಕಲೆಗಿಂತ ಪ್ರಕೃತಿ ನಿರ್ಮಿಸುವ ಕಲೆ ದೊಡ್ಡದು. "ಮಾನವ ಚೇತನಕ್ಕೂ ಪ್ರಕೃತಿಗೂ ಪರಸ್ಪರ ಸಂಬಂಧವಿದೆ. ಎರಡೂ ಒಂದೇ ವಿಶ್ವ ಶಕ್ತಿಯ ಬೇರೆ ಬೇರೆ ಮುಖಗಳು. ಆ ವಿಶ್ವ ಶಕ್ತಿಯ ಒಂದೇ ಬೆಳಕು ನಮ್ಮ ಒಳಗೂ ಹೊರಗೂ ಬೆಳಗುತ್ತಿರುತ್ತದೆ. ಈ ವಿಶ್ವೈಕ್ಯತಾ ಬುದ್ಧಿಯನ್ನು ನಾವು ಕ್ರಮ ಕ್ರಮವಾಗಿ ಬೆಳೆಸಿಕೊಳ್ಳುತ್ತಾ ಬರಬೇಕು. ನಮಗೆ ಈ ಬುದ್ಧಿ ಬೆಳೆದಂತೆಲ್ಲ ಮಾನವನ ಪ್ರಬುದ್ಧವಾದ ಚೇತನ, ಪಶು ಜೀವನ, ಜಡ ಪ್ರಕೃತಿ ಇವು ಎಲ್ಲ ಒಂದೇ ಶಕ್ತಿಯ ಪ್ರಕಾರಾಂತರಗಳಾಗಿವೆ; ಒಂದೇ ವಿಕಾಸದ ಹಾದಿಯಲ್ಲಿ ನಡೆಯುತ್ತಾ ಒಂದೊಂದು ಮಜಲು ಮುಟ್ಟಿ ನಿಂತಿವೆ ಎನ್ನುವುದರ ಅರಿವಾಗುತ್ತದೆ. ಮಣ್ಣು, ನೀರು, ಗಾಳಿ, ಹೂ, ಹಣ್ಣುಗಳೆಲ್ಲ ಕೇವಲ ಉಪಯೋಗಾನಂತರದಲ್ಲಿ ತ್ಯಜಿಸಿ ಎಸೆಯಬಹುದಾದಂತಹುಗಳಲ್ಲ. ಸಾಮೂಹಿಕ ವೃಂದಗಾನದಲ್ಲಿ ಒಂದೊಂದು ವಾದ್ಯದ ಅವಶ್ಯಕತೆಯೂ ಹೇಗೆ ಸ್ಪಷ್ಟವಾಗಿದೆಯೋ ಹಾಗೇ ಈ ಮಾನವ ಚೇತನ ವಿಕಾಸಕ್ಕೆ ಪ್ರಕೃತಿಯ ಒಂದೊಂದು ಅಂಗವೂ ಅವಶ್ಯಕವಾಗಿದೆ. ಪ್ರಕೃತಿಯನ್ನು ಯೋಗ್ಯವಾದ ರೀತಿಯಲ್ಲಿ ಅನುಸಂಧಾನಗೈದರೆ ಅದರಲ್ಲಿ ನುಡಿಗೊಡುವ ದೈವಿಕಾಂಶದ ಸ್ಪಂದನವನ್ನು ನಾವು ಕೇಳುವುದು ಸಾಧ್ಯವಾಗುತ್ತದೆ. ನಿಜವಾದ ದಾರ್ಶನಿಕನು ಪ್ರಕೃತಿಯಲ್ಲಿ ಜಗಜ್ಜನನಿಯ ಲೀಲಾ ವಿಲಾಸಗಳನ್ನು ಸ್ಪಷ್ಟವಾಗಿ ಕಾಣುತ್ತಾನೆ. . . . . . . ಕವಿಗೆ ನೀರು ಕಾಲುತೊಳೆಯುವ ಸಾಧನ ಮಾತ್ರವಲ್ಲ, ಹೃದಯವನ್ನು ನಿರ್ಮಲಗೊಳಿಸುವ ಸಾಧನವಾಗುತ್ತದೆ. ಭೂಮಿ ಆತನನ್ನು ಹೊತ್ತಿದೆ ಎಂದು ಮಾತ್ರ ಅವನು ತಿಳಿದಿಲ್ಲ. ಅದರ ಸ್ಪರ್ಶದಲ್ಲಿ ಅತೀತದ ಸ್ಪರ್ಶವನ್ನೇ ಅವನು ಅನುಭವಿಸುತ್ತಾನೆ. ಪ್ರಕೃತಿ ಸೌಂದರ್ಯದ ತಳದಲ್ಲಿರುವ ವಿಶ್ವಮೂರ್ತಿಯ ಶಿಲ್ಪ ಸೌಂದರ್ಯವನ್ನು ಅವನ ಕಣ್ಣು ಕಾಣುತ್ತದೆ. ಮುಗಿಲ

ಮರೆಯಿಂದ, ಸ್ವರ್ಗದ ಕಡೆಯಿಂದ, ಬೀಸಿ ಬರುವ ಗಾಳಿಯಲ್ಲಿ ಅನಂತತೆಯ ಮಧುರ ಗಾನವನ್ನು ಅವನ ಕಿವಿ ಕೇಳುತ್ತದೆ. . . . ."[೬] ಎಂಬ ಎಸ್.ವಿ. ಪರಮೇಶ್ವರ ಭಟ್ಟರ ಮಾತುಗಳು ಕವಿ ದರ್ಶನಕ್ಕೆ ಸಿಕ್ಕಿದ ಪ್ರಕೃತಿಯ ವೈವಿಧ್ಯತೆಯನ್ನು ಪುಷ್ಟೀಕರಿಸುತ್ತವೆ. ಏಕೆಂದರೆ ಪ್ರಕೃತಿ ಎಲ್ಲರಿಗೂ ಬೆರಗು ಹಾಗೂ ಚೈತನ್ಯಕ್ಕೆಡೆಮಾಡಿ ಕೊಡುತ್ತದೆ. ನಿರಂತರ ನಾವಿನ್ಯತೆ ತೋರುವ ಪ್ರಕೃತಿ ಕವಿಯ ಭಾವದೀಪ್ತಿಗೆ ಚೇತನ ನೀಡುತ್ತದೆ. ಜೀವ ವಿಕಾಸಕ್ಕಿಂತ ಮೊದಲು ಪ್ರಕೃತಿ ವಿಕಾಸ. ಜೀವಿಗಳಿಗಾಗಿ ಸೃಷ್ಟಿಯಾದದ್ದು. ಇದೂ ಕೂಡ ದೈವ ಕೃಪೆಯಿಂದಾದುದು ಎಂಬ ತಾತ್ವಿಕತೆಯೇ ಪ್ರಕೃತಿಯಲ್ಲಿ ಬೆರಗಿನೊಂದಿಗೆ ಭಗವಂತನನ್ನು ಕಾಣುವ ಪ್ರಯತ್ನ ವ್ಯಕ್ತಿಯದಾಗಿದೆ.

ಹಿರಿಯ ತಲೆಮಾರಿನ ಕವಿಗಳಲ್ಲಿ ಮಧುರಚೆನ್ನರು ಪ್ರಮುಖರು. ಅವರ ಪ್ರಸಿದ್ಧವಾದ ಕವನ 'ದೇವತಾ ಪೃಥಿವಿ'. ಅನುಭಾವದ ನೆಲೆಯಲ್ಲಿ ಕವಿತೆ ರಚಿಸುವ ಮಧುರ ಚೆನ್ನರು ಭೂಮಿಯನ್ನು ದೇವತೆ ಎಂಬ ವಿಶೇಷಣದಿಂದ ಗುರುತಿಸಿದ್ದಾರೆ. ಆಧ್ಯಾತ್ಮಿಕದ ಅನುಭವ ಮೂರ್ತರೂಪದಿಂದ ಅಮೂರ್ತದ ಕಡೆ ಚಲಿಸುವಂತೆ, ತನಗೆ ದೇವರ ಅನುಭವ ಆಗಬೇಕಾದರೆ ತಾಯಿಯ ಅನುಗ್ರಹವಿಲ್ಲದೆ ಆಗಲಾರದು ಎಂಬ ದೃಢ ನಂಬಿಕೆಯಿಂದಲೇ ಭೂಮಿಯನ್ನು "ಏಳಮ್ಮ ಮಲಗಿರುವ ತಾಯಿ ಪೃಥಿವೀ" ಎಂದು ಏಳಿಸುವ ಸಾಹಸ ಮಾಡಿದ್ದಾರೆ.

ಮೊಲೆ ಹಾಲು ಸಾಕಮ್ಮ ಸವಿಲಾಲಿ ಬೇಕಮ್ಮ
ಮುದ್ದಾಡಿ ರಮಿಸಿ ಮೈದಡವಿ। ಏಳಮ್ಮ
ಮಲಗಿರುವ ತಾಯಿ ಪೃಥಿವೀ।

. . . .

ಕತ್ತಲೆಯ ಆ ಸೋಂಕು ಹೂಬಿಸಿಲ ಈ ಮಂಕು
ಕಪ್ಪೇನು ಮತ್ತ ಬಿಳುಪೇನು। ಏಳಮ್ಮ
ಮಲಗಿರುವ ತಾಯಿ ಪೃಥಿವೀ

ಕಾಣದ ಆ ಕುರುಡು ಕಾಣುವ ಈ ಕುರುಡು
ಕಂಡೇನು ಕಾಣದಿದ್ದೇನು। ಏಳಮ್ಮ
ಮಲಗಿರುವ ತಾಯಿ ಪೃಥಿವೀ[೭]

ಲೌಕಿಕ ಸಂಬಂಧಗಳ ಗಡಿಗೆರೆಗಳನ್ನು ದಾಟಿದ ಸಂಬಂಧ ಇಲ್ಲಿದೆ. ಕತ್ತಲೆ - ಬೆಳಕು, ಹುಟ್ಟು - ಸಾವಿನ ಸಂಕೇತ ಹಿನ್ನೆಲೆಯಲ್ಲಿ. ಅಥವ ಸುಖ - ದುಃಖ ಹಿನ್ನೆಲೆಯಲ್ಲಿ ಇರಬಹುದು. ಪೃಥವಿ ಅಂದಾಗ ಋತು ಬದಲಾವಣೆಗಳೂ ಆಗಿರಬಹುದು.

ಲೌಕಿಕದ ಹಸಿವನ್ನು ಹಿಂಗಿಸಿಕೊಂಡು ಆತ್ಮನ ಹಸಿವು ಹಿಂಗಿಸಿಕೊಳ್ಳುವ ತವಕ ಈ ಕವಿತೆಯಲ್ಲಿ ಅಡಗಿದೆ. ಮೊಲೆ ಹಾಲು ಸವಿದಾದಮೇಲೆ ಮನದ ಹಾಲು ಬಯಸುವ ಬಯಕೆಯಲ್ಲಿಯೇ ಸಾಧಕನ ಅಂತರಂಗದ ಅಳಲು ವ್ಯಕ್ತವಾಗಿದೆ. "ಜೀವನು ದೇವರ ಪ್ರೇರಕತ್ವವನ್ನು ಒಪ್ಪಿಕೊಳ್ಳುವುದು ಒಂದು ಸ್ಥಿತಿ. ಅದೇ ಪಾರಮಾರ್ಥಿಕತೆ. ಅಲ್ಲಿಂದ ಮುಂದೆ ಕೆಲವು ಸಾಧಕರಿಗೆ 'ಕೇವಲ'ದ ಹಸಿವೆ ಇರುವುದು. ಅದಕ್ಕಾಗಿ ಅವರು ಸಾಧನೆಯಲ್ಲಿ ಮುಂದೆ ಸಾಗಬೇಕಾಗುವುದು. ಅಂತಹ ಸಂದರ್ಭದಲ್ಲಿ ಹೊಸ

ಸಂಕಟವೊಂದು ಉದ್ಭವಿಸುವುದು. ಅದೇ ಆತ್ಮನ ಕಾಳರಾತ್ರಿ. ಇಲ್ಲಿ ಅಚ್ಚೋತ್ತಿದಂತಹ ಅನುಭವದ ಸಂಸ್ಕಾರವು ಜೀವಂತವಾಗಿರುತ್ತದೆ. ದೇವತಾ ಪೃಥವಿ ಎಂಬ ಕವಿತೆ ಇಂಥ ಕಾಲದ ಹಗರಣದ ಕುರುಹು"[೧೦] ಎಂದು ಹೇಳಿರುವ ಗುರುಲಿಂಗ ಕಾಪಸೆಯವರ ಮಾತು ಸಮರ್ಪಕವಾಗಿದೆ. ಪೃಥವಿಯಲ್ಲಿ ಮಾತೃಭಾವವನ್ನು ದರ್ಶಿಸುವ ಮೂಲಕ ಕವಿತೆಗೆ ಕಾವ್ಯತ್ವದ ಆವರಣವನ್ನು ಕಟ್ಟಿಕೊಟ್ಟಿರುವುದು ಇಲ್ಲಿನ ವಿಶೇಷ.

ಪ್ರತ್ಯಕ್ಷ ಹಾಗೂ ಅನನ್ಯವಾದ ದೈವೀಶಕ್ತಿಯನ್ನು ಕಾಣುವ ಹಂಬಲದ ಕವಿತೆಯೇ ದೇವತಾ ಪೃಥವಿ. ಒಂದು ಹಸಿವೆಯನ್ನು ಹಿಂಗಿಸಿಕೊಂಡು ಇನ್ನೊಂದು ಹಸಿವೆಗೆ ಆತುರಪಡುವುದು ಕಂಡುಬರುತ್ತದೆ. "ಕವಿತೆಯ ಒಡಲಲ್ಲಿ 'ಹಿಂದಿತ್ತು ಕಾಲಿರುಳು', 'ಕತ್ತಲೆಯ ಆ ಸೊಂಕು' ಎಂಬುದರ ನೆನಿಕೆಯಿದ್ದು, ಅವು ಒಂದು ಕಾಲದ ಆತ್ಮನ ಕಾಳ ರಾತ್ರಿಯನ್ನು ಸಂಕೇತಿಸುತ್ತವೆ. ಉಳಿದ ವರ್ಣನೆಯಲ್ಲಿ ನಿದ್ದೆ – ಎಚ್ಚರ, ಜಡ – ಚೇತನ, ಕತ್ತಲೆ – ಬೆಳಕುಗಳ ದ್ವಂದ್ವವು ತಾತ್ವಿಕ ಚಿಂತನೆಯ ಫಲವಾಗಿ ಆಧ್ಯಾತ್ಮಿಕ ಅನುಭವವಾಗಿ ವಿಶಿಷ್ಟರೀತಿಯಲ್ಲಿ ಅಭಿವ್ಯಕ್ತಿಯನ್ನು ಪಡೆದಿದೆ. ಕವಿತೆಯ ಕೆಲವು ನುಡಿಗಳು ಬೆಡಗಿನ ವಚನಗಳನ್ನು ಹೋಲುತ್ತವೆ. ಹಾಗಿದ್ದರೂ, ಕಾವ್ಯ ಸೌಂದರ್ಯಕ್ಕೆ ಕೊರತೆ ಇಲ್ಲ".[೧೧] ಅನುಭಾವದ ನೆಲೆಯಲ್ಲಿ, ಕಲಾತ್ಮಕತೆಯ ಹೊದಿಕೆಯೊಂದಿಗೆ ಈ ಕವಿತೆ ನಿಧಾನವಾಗಿ ಅನಾವರಣಗೊಳ್ಳುತ್ತದೆ.

"ಮಧುರಚೆನ್ನರ 'ದೇವತಾ ಪೃಥವಿ', ಮಾತೃಶಕ್ತಿಯ ಆರಾಧನೆಯ ಸುಂದರ ರೂಪಕ. ಇದು ಅವರ 'ನನ್ನ ನಲ್ಲ'ಕ್ಕಿಂತ ಬೇರೆಯಾಗಿ ಕಾಣುವುದು ಇಲ್ಲಿ ಸಾಧಿತವಾಗಿರುವ ಮಗುತನದಿಂದಾಗಿ. ಮಗುತನವೆಂಬುದು ಅಹಂ ನಿರಸನದಿಂದ ಮಾತ್ರ ಸಾಧ್ಯವಾಗುವ ಸ್ಥಿತಿ. ಆದ್ದರಿಂದ ಇಲ್ಲಿರುವುದು ಬರೀ ಮುಗ್ದತೆ ಮಾತ್ರವಲ್ಲ ಅದರೊಡನೆ ಬೆರೆತ ಪಕ್ವತೆಯೂ. 'ನನ್ನ ನಲ್ಲ'ದಲ್ಲಿ ಇನ್ನೂ ಹಣ್ಣಾಗಿರದಿದ್ದ ಮನಸ್ಸಿನ ತಲ್ಲಣ ತಳಮಳಗಳದೇ ಪ್ರಾಧಾನ್ಯವಾಗಿದ್ದರೆ ಇಲ್ಲಿ ಅರಿವು ಫಲಕೊಟ್ಟ ನಂತರದ ದಿವ್ಯ ನಿರುಮ್ಮಳತೆ ಇದೆ. ಆ ದಿವ್ಯ ಚೆಲುವಿನ ಮಾಧುರ್ಯ, ಮಾರ್ದವತೆಗಳಿವೆ".[೧೨] ಆದ್ದರಿಂದ ಇದು ನನ್ನ ನಲ್ಲ ಕವಿತೆಯ ಮುಂದುವರಿಕೆಯಾಗಿಯೂ ಕಾಣುತ್ತದೆ. ಬೆಂಬಿಡದ ಸವಾಲುಗಳ ಬದುಕಿನ ನಡುವೆಯೂ ಆತ್ಮನ ಹಸಿವನ್ನು ಹಿಂಗಿಸಿಕೊಳ್ಳುವ ಪ್ರಯತ್ನ ಆಧ್ಯಾತ್ಮಿಕ ಪೀಪಾಸುಗಳಿಗೆ ಮಾತ್ರ ಸಾಧ್ಯ. 'ದೇವತಾ ಪೃಥವಿ' ಅಂಥ ಸಾಧಕರ ಪ್ರತೀಕವಾಗಿದೆ.

ಸಾಧಕನ ಮನಸ್ಸಿನ ಅತೃಪ್ತ ಸ್ಥಿತಿಯನ್ನು, ಕಾಣಬೇಕೆಂಬ ಉತ್ಕಟ ವಾಂಛೆಯನ್ನು ಹಿಡಿದಿಡುವ ಪ್ರಯತ್ನ 'ದೇವತಾ ಪೃಥಿವೀ' ಕವಿತೆಯಲ್ಲಿದೆ.

ಇವರ ಮತ್ತೊಂದು ಕವಿತೆ 'ಧ್ರುವ '–ಕವಿತೆಯಲ್ಲಿ ಸುನಿತಾದೇವಿ ನಿದ್ದೆ ತಿಳಿದೆದ್ದು ತನ್ನ ಮಗನನ್ನು ಕಾಣದೆ ಹಂಬಲಿಸುವುದನ್ನು ಪೌರಾಣಿಕ ಚೌಕಟ್ಟಿನಲ್ಲಿ ದರ್ಶಿಸಿದರೂ ಅಲ್ಲಿ ತಾಯಿಯ ಅಂತಃಕರಣದ ತುಮುಲ, ಮಗುವಿನ ಬಗ್ಗೆ ಇರುವ ವಾತ್ಸಲ್ಯ ವಾಸ್ತವಿಕವಾಗಿ ಕಂಡುಬರುತ್ತದೆ. ಮಗನಿಗಾಗಿ ಅವಳು ಅಲೆಯುವ, ಶೋಧಿಸುವ, ಕಳವಳಕ್ಕೆ ಒಳಗಾಗಿರುವ ರೀತಿಯನ್ನು ಮಾತೃವಾತ್ಸಲ್ಯಕ್ಕೆ ನಿದರ್ಶನವೆಂಬಂತೆ ಬಣ್ಣಿಸಿದ್ದಾರೆ.

ಸುನೀತಿ ದೇವಿ। ನಿದ್ದೆ ತಿಳಿದು ಎದ್ದು ಕುಳಿತು
ಸುನೀತಿ ದೇವಿ। ನಿದ್ದೆ ತಿಳಿದು ಎದ್ದು ಕುಳಿತು ॥ ಪ ॥

ಎದ್ದು ಕುಳಿತು ಹೊದ್ದ ಸೆರಗ
ಸರಿಸಿ ಮುದ್ದು ಮಗನ ಕಡೆಗೆ
ಕೈಯ ಚಾಚಿ ಕಾಣದಾದಳು
ಮಗನ ಕಡೆಗೆ –
ಕೈಯ ಚಾಚಿ ಕಾಣದಾದಳು ॥
. . . .
ಸಣ್ಣ ಕೂಸು ಐದು ವರ್ಷ
ತುಂಬಲಿಲ್ಲ ಇನ್ನು ತನಕ
ಎನ್ನ ಕೂಸು ಎಲ್ಲಿ ಹೋಯಿತು?
ಸಣ್ಣ ಗಿಣಿಯು –
ಕತ್ತಲಲ್ಲಿ ಎತ್ತ ಹಾರಿತು? [೧೩]

ಹೀಗೆ ಹುಡುಕಿ ಹೊರಟ ಸುನೀತಿಗೆ ಗಿಡವೂ, ದನವೂ, ಕಲ್ಲು, ಎಲ್ಲವೂ ಧ್ರುವನ ಮೂರ್ತಿಯಾಗಿ ಕಂಡು ಭ್ರಮೆಗೊಳಿಸುತ್ತವೆ. ಆಕೆ ಹುಚ್ಚಿಯಂತೆ ಹುಡುಕುವ, ನಿಟ್ಟುಸಿರು ಬಿಡುವ, ಮಕ್ಕಳಳು ಕೇಳಿ ಕಣ್ಣು ತೆರೆವ ಸ್ಥಿತಿಯು ಪುತ್ರ ಪ್ರೇಮದ ಆಧಿಕ್ಯವನ್ನು ವ್ಯಕ್ತಪಡಿಸುತ್ತದೆ.

ಮಧುರ ಚೆನ್ನರ ಕವಿತೆಗಳಲ್ಲಿ ಆಧ್ಯಾತ್ಮಿಕ ಎಳೆಗಳು ಇರುವಂತೆ ವಾತ್ಸಲ್ಯದ ಎಳೆಗಳೂ ಕಂಡುಬರುತ್ತವೆ. ದ್ರುವ ಕವಿತೆಯಲ್ಲಿ ತಾಯಿ ಮಗುವಿನ ಸಂಬಂಧದ ಚಿತ್ರವಿದೆ. "ನಿಧಾನವಾಗಿ ಸಾಭಿನಯದೊಂದಿಗೆ ಪ್ರಾರಂಭವಾಗುವ ಕವಿತೆ ಸುನೀತಿಯ ಭಾವದ ಉದ್ವೇಗದೊಂದಿಗೆ ತೀವ್ರತರ ಸಂವೇದನೆಯನ್ನು ಪಡೆದುಕೊಂಡು ತಾಯಿಯ ಕಾತುರತೆ, ಕಳವಳ, ದುಃಖತಪ್ತತೆಗಳನ್ನು ಚಿತ್ರಿಸುತ್ತದೆ. ಕಣ್ಣುತುಂಬ ನೀರುತಂದು ಉಬ್ಬಿದ ಕೊರಲ ಸೆರೆಯಿಂದ ಮೂಕಳಂತೆ ಸುನೀತಿಯು ಮನೆಬಿಟ್ಟು ಹೋದದ್ದು, ತೋಟ – ಪಟ್ಟಿ, ಹಳ್ಳ – ಕೊಳ್ಳ, ಬಾವಿ – ಕೆರೆಗಳಲ್ಲಿ ಹುಡುಕಾಡಿದ್ದು ಓದುಗರ ಅಂತಃಕರಣವನ್ನು ಕಲಕಿಬಿಡುತ್ತದೆ.

. . . .
ಗಿಡವೆ ದ್ರುವನು, ದನವೆ ದ್ರುವನು
ಕಲ್ಲೆ ದ್ರುವನು, ಸೊಲ್ಲೆ ದ್ರುವನು
ಎಲ್ಲ ಕಡೆಗೆ, ದ್ರುವನ ಭ್ರಾಂತಿಯೇ
ಸುನೀತಿಯಲ್ಲಿ –
ಮೂಡಿತಂದು ಧ್ರುವನ ಮೂರ್ತಿಯೇ!

ಹೀಗೆ ಕವಿತೆ ಮುಕ್ತಾಯಗೊಂಡಾಗ ಸುನೀತಿಯ ಜೊತೆಗೆ ನಾವೂ ಧ್ರುವನ ಮೂರ್ತಿಯ ಭ್ರಾಂತಿಯಲ್ಲಿ ಮುಳುಗಿ ಹೋಗಬೇಕಾಗುತ್ತದೆ. ತಾಯ್ತನ, ವಾತ್ಸಲ್ಯಭಾವವನ್ನು ಇಷ್ಟು ಪರಿಣಾಮಕಾರಿಯಾಗಿ ಚಿತ್ರಿಸುವ ಕವಿತೆ ಹೊಸಗನ್ನಡದಲ್ಲಿ

ಇನ್ನೊಂದಿಲ್ಲವೆನಿಸುತ್ತದೆ".[೧೪] ಭಾವನಾತ್ಮಕ ಸಂಬಂಧದಿಂದ ಸುತ್ತಿಕೊಂಡಿರುವ ಈ ಕವಿತೆ ಅಂತಃಕರಣದ ನೆಲೆಯಲ್ಲಿ ಸಂಚರಿಸುತ್ತದೆ.

ನಾಡಿನ ನದಿಯನ್ನು, ನಿಸರ್ಗದ ಸಿರಿಯನ್ನು, ಪೌರಾಣಿಕ ಹಿರಿಮೆಯನ್ನು, ಧಾರ್ಮಿಕ ಮಹತ್ವವನ್ನು ಸಾರುವ ಕವಿತೆ ಪಂಜೆ ಮಂಗೇಶರಾವ್‌ರ 'ಹುತ್ತರಿ ಹಾಡು'. ಕೊಡಗಿನ ಸಂಸ್ಕೃತಿಯ ಪ್ರತೀಕವಾಗಿರುವ ಹುತ್ತರಿ ಹಾಡಿನಲ್ಲಿ ಭೂದೇವಿಯೇ ಕೊಡಗು ನಾಡನ್ನು ಬಯಸಿ ನೋಡಲು ಬಂದಿದ್ದಾಳೆ ಎಂದು ಬಗೆದಿದ್ದಾರೆ. ಆದಿ ಪ್ರಾಸದ ಗೇಯತೆಯಿಂದ ಕೂಡಿದ್ದು, ಕೊಡಗು ಜನಾಂಗದ ಬದುಕು ರೂಪಿಸಿದ ಕಾವೇರಿಯ ಬಣ್ಣನೆಯೂ ಸೇರಿದೆ.

ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ?
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ?
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆ ಕಳೆ ಕಳೆವಳೋ?
ಅಲ್ಲೆ ಆ ಕಡೆ ನೋಡಲಾ?
ಅಲ್ಲೆ ಕೊಡಗರ ನಾಡಲಾ
ಅಲ್ಲಿ ಕೊಡವರ ಬೀಡಲಾ!

ಇಂತಹ ನಾಡಿನಲ್ಲಿ ಒಗ್ಗಟ್ಟಿಲ್ಲ, ಒಂದೇ ಮನವಿಲ್ಲ. ಇನ್ನಾದರೂ,

ನೆಮ್ಮದಿಯನಿದು ತಾಳಲಿ!
ಅಮ್ಮೆಯಾ ಬಲ ತೋಳಲಿ!
ನಮ್ಮ ಕೊಡಗಿದು ಬಾಳಲಿ![೧೫]

ಈ ಕವಿತೆ ಪ್ರಾಂತೀಯ ಸೀಮಿತಕ್ಕೆ ಒಳಪಟ್ಟಿದ್ದರೂ ಮಾತೃತ್ವದ ವಿಸ್ತೃತ ರೂಪವನ್ನು ಒಳಗೊಂಡಿದೆ. ಜೀವದ್ರವವಾದ ಕಾವೇರಿ ಹೊಸ ಚೈತನ್ಯ ಸ್ವರೂಪಿಯಾಗಿದ್ದಾಳೆ. ಗಿರಿ, ವನ, ನದಿಗಳಿಂದ ಕೂಡಿದ ಕೊಡಗು ತನ್ನ ಧೀಶಕ್ತಿಯಿಂದ ತಲೆಎತ್ತಿ ಬಾಳಬೇಕೆಂಬ ಆಶಯ ಕವಿಯದು. 'ನಮ್ಮ ಕೊಡಗಿದು ಬಾಳಲಿ' ಎನ್ನುವ ನುಡಿಗಳಲ್ಲೆ ಸ್ವಾಭಿಮಾನದ ಹಿರಿಮೆ ಇದೆ.

ಬೇಂದ್ರೆಯವರ ಪ್ರಕೃತಿ ದರ್ಶನ ವಿಶಿಷ್ಟವಾದದ್ದು. ಸಾಮಾನ್ಯ ಜನರ ಆಡುಮಾತಿನಿಂದ ನಾದ ಪ್ರಧಾನವಾದ ಶೈಲಿಯಲ್ಲಿ ನಿಸರ್ಗದ ವೈಶಿಷ್ಟ್ಯವನ್ನು ಸೆರೆ ಹಿಡಿಯುವ ಬೇಂದ್ರೆಯವರು ನಿಸರ್ಗದ ರುದ್ರ ರಮಣೀಯತೆಯನ್ನು, ಅದರ ಕ್ರಿಯೆಯನ್ನು, ಅದರಿಂದಾಗುವ ಆನಂದವನ್ನು, ಲೌಕಿಕ ನೆಲೆಯಿಂದ ಅಲೌಕಿಕ ನೆಲೆಯವರೆಗೂ ವ್ಯಾಪಿಸಿಕೊಂಡು ಅದರ ನಿಗೂಢತೆಯನ್ನು ಶೋಧಿಸಲು ಯತ್ನಿಸಿದ್ದಾರೆ.

ಭೂಮಿ ಸಹನೆಯ ಮೂರ್ತಿ. ಇಲ್ಲಿ ಅನೇಕ ಕಾಳಗ ಆಗಿ, ರಕ್ತದ ಹೊಳೆ ಹರಿದಿದ್ದರೂ ಅವಳು ಮೊದಲಗಿತ್ತಿಯಂತೆ ಶೋಭಿಸುತ್ತಾಳೆ ಎಂಬಲ್ಲಿ ವಿರೋಧ ಭಾವ ತೋರುತ್ತದೆ. ಯಾವ ಕಾರ್ಯ ನಿಂತರೂ ಭೂಮಿಯ ಕಾರ್ಯ ನಿಲ್ಲುವುದಿಲ್ಲ. ಅವಳು ದುಃಖವನ್ನು ನುಂಗಿ, ಮೊದಲಗಿತ್ತಿಯ ಉತ್ಸಾಹದಿಂದ ಋತುಮಾನದ ಕಾರ್ಯದಲ್ಲಿ

ತೊಡಗುತ್ತಾಳೆ. ಆದರೆ ಆಕೆಯ ಆಶ್ರಯ ಹೊಂದಿರುವ ನಮ್ಮಲ್ಲಿ ಭಾಷೆ, ದೇಶ, ಧರ್ಮಗಳ ಭಿನ್ನತೆಯಿಂದ ಛಿದ್ರಗೊಂಡಿರುವ ಭಾವೈಕ್ಯತೆಯನ್ನು ಸಾಧಿಸಲು ಮಂಗಳ ಮುಹೂರ್ತವನ್ನು ಕೃಪೆಮಾಡೆಂದು ಕವಿ ಪ್ರಾರ್ಥಿಸಿದ್ದಾರೆ.

ಮೊದಲಗಿತ್ತಿಯಂತೆ ಮೆರೆಯುವೆಯೇ ತಾಯಿ,
ಮೊದಲಗಿತ್ತಿಯಂತೆ ಮೆರೆಯುತಿಹೆ
ಹಿಂಡಾಗಿ ಪುಂಡರು ಅಂಡಲೆಯುವರು ನಿನ್ನ
ನೆತ್ತರು ಒರೆಹಚ್ಚಿ ನೋಡುತಿರುವೆ
. . . .
ಬಸಿರು ತುಂಬಲು ಹಸಿರುಡಿಗೆಯನುಟ್ಟೆಂದು
ವನವಾಸ ನವಮಾಸ ತೀರಿಸುವೆ.
ಹಾಲಿನ ಹೃದಯಕ್ಕೆ ಕುಬ್ಬುಸವನು ತೊಡಿಸಿ
ಹೂ ಮುಡಿಸಿ ಕೊಂಡೆಂದು ನೀನಲಿವೆಯ?
ಬಸಿರು ತುಂಬಲು ಹಸಿರುಡಿಗೆಯನುಟ್ಟೆಂದು
ವನವಾಸ ನವಮಾಸ ತೀರಿಸುವೆ? [೧೬]

"ಚರಿತ್ರೆಯ ದುರಂತ ಮುಖವನ್ನು ದಟ್ಟವಾಗಿ ಚಿತ್ರಿಸುವ ಈ ಕವಿತೆಯಲ್ಲಿ ವ್ಯಕ್ತಿಯ ನಾನಾ ಕ್ರೂರ ಮುಖಗಳನ್ನು ತೋರುತ್ತಾರೆ. ಆತನ ನೆಲದಾಸೆ, ವಿಜೃಂಭಿಸಿದ ಕ್ರೂರ ಶಕ್ತಿಯಿಂದ ರಕ್ತದ ಹೊಳೆ ಹರಿದು, ನೆಲ ತೋಯ್ದಿರುವುದನ್ನು ಹೇಳುತ್ತಲೇ ಎಲ್ಲವುದನ್ನು ಸಹಿಸಿಕೊಂಡು ಏನೂ ಆಗದಂತೆ ಇರುವ ಭೂಮಿಯ ಸಹನೆಯನ್ನು ಅದರ ಚಿರಂತನತೆಯನ್ನು ವ್ಯಕ್ತಪಡಿಸಿದ್ದಾರೆ.

ವರುಷ ವರುಷವೂ ಹೊಸತನವನ್ನು ತೋರುವ ಭೂಮಿಯ ಚೆಲುವನ್ನು ಕವಿ ಕಂಡು ಹೇಳಿದ್ದಾರೆ. ಅಷ್ಟೇ ಅಲ್ಲ, ಎಲ್ಲಾ ಚಕ್ರಾಧಿಪತಿಗಳು ಕಾಲದಲ್ಲಿ ಲೀನವಾದರೂ ಭೂಮಿತಾಯಿ ತಲೆಎತ್ತಿ ನಿಂತಿರುವ ಸಹನೆಯ ಧೀಶಕಿ ಎಂಬುದು ಕವಿಯ ನುಡಿ. ನಿನ್ನ ತೇಜದ ಮುಂದೆ ರಾಜತೇಜವು ಕೂಸು ಎನ್ನುತ್ತಾರೆ."[೧೭]

ಮಾಯೆಯನ್ನು ತಾಯಿಯಾಗಿ ಕಂಡಿದ್ದಾರೆ. ಭೂಮಿಯನ್ನು ತಾಯಿಯಾಗಿ ಕಂಡಿದ್ದಾರೆ. ತಾಯಿ ತತ್ವ ಸಚ್ಚಿದಾನಂದತತ್ವಕ್ಕೇರಿದೆ. 'ತಾಯಿಗಿಂತ ಯಾರು ಹೆಚ್ಚು'? ಎಂಬ ಪ್ರಶ್ನೆಯಿಂದಲೇ ತಾಯಿ ಮಹಾತ್ಮೆ ಎಷ್ಟೆಂಬುದನ್ನು ತಿಳಿಸಿದ್ದಾರೆ. ಮಾತನ್ನು ಕೂಡ ಮಾತೆಗೆ ಹೋಲಿಸಿದ್ದಾರೆ. ಮಾತು ಮಾತೆಯಾಗಿ ಅಂಬಿಕಾತನಯತ್ವಕ್ಕೂ, ಕವಿತ್ವಕ್ಕೂ ಜನ್ಮವಿತ್ತಿತು. ಹಾಗಾಗಿ ಕವಿಗೆ ಮಾತೆ ಜ್ಯೋತಿರ್ಲಿಂಗ.

ಪ್ರಕೃತಿಯ ಶಿಶುವಾದ ಮಗು ತಾಯಿಯನ್ನು ತಬ್ಬಿ ಅವಳ ಮುಖಾಂತರ ಇಡೀ ಜಗತ್ತನ್ನು ತಿಳಿಯುವಂತೆ; ಅದೇ ಪ್ರಕೃತಿಯನ್ನು, ಜಗತ್ತನ್ನು ಮಾತೆ ಎಂದು ಕವಿ ಆರಾಧಿಸುತ್ತಾನೆ. ಭವ್ಯವಾಗಿ ಹೊಳೆಯುವ ಪ್ರಕೃತಿಯು ತನ್ನ ಐಹಿಕ ಅನುಕೂಲಗಳನ್ನು ಪೂರೈಸುವ ಭೌತಿಕವಸ್ತು ಎಂದು ತಿಳಿದವನೇ ಅದನ್ನು ದೈವಿ ಶಕ್ತಿ ಎಂದು ಆರಾಧಿಸಿದ.

ಪ್ರಕೃತಿಯಲ್ಲಿ ಮಾತೆಯ ಆರಾಧನೆ ಮಾಡಿದ್ದಾರೆ. ತನ್ನ ಊರನ್ನು ಮಾತೆಯಾಗಿ, ಕನ್ನಡ ನಾಡನ್ನು ದೇವತೆಯಾಗಿ, ಭಾರತವನ್ನು, ಭೂಮಿಯನ್ನು, ವಿಶ್ವಮಾತೆಯಾಗಿ ದರ್ಶಿಸಿದ್ದಾರೆ.

ಹೆತ್ತ ತಾಯಿಯನ್ನು ರಕ್ಷಿಸುವ ಹೊಣೆ ಮಕ್ಕಳದು. ಮಾತೃಭೂಮಿಯನ್ನು ಹಾಗೆಯೇ ರಕ್ಷಿಸಬೇಕು. ಇಲ್ಲಿನ ಪ್ರತಿ ಕಣಕಣವೂ ಪವಿತ್ರವೆಂಬ ಭಾವ ನಮ್ಮಲ್ಲಿರಬೇಕೆಂಬುದು ಕವಿಯ ಆಶಯ. ಅದಕ್ಕಾಗಿ ಭಾರತಾಂಬೆಯನ್ನು ಪರಾಧೀನತೆಯ ಬಂಧನದಿಂದ ಬಿಡುಗಡೆಗೊಳಿಸಲು ಪ್ರತಿಯೊಬ್ಬರ ಹೋರಾಟ ಬೇಕು. ತಾಯಿಯನ್ನು ರಕ್ಷಿಸಿದಾಗ 'ಅಂದರಳ್ವುದು ತಾಯಿಯ ಮೊಗವು' ಎಂದು ತಮ್ಮ 'ಬಿಡುಗಡೆ' ಕವನದಲ್ಲಿ ಬಿಂಬಿಸಿದ್ದಾರೆ.

ಇಗೊ। ಹೊರಟೆವು ಬಿಡುಗಡೆಗಾಗಿ
ಬಹ। ರಾರು ನಮಗಿದಿರಾಗಿ?
ತೊಳ। ತೊಳಗುದು ತಾಯಿಯ ಬಸಿರು
ಕಳೆ। ಗೊಳುವದು ನಾಡಿನ ಹೆಸರು
ತೊಳೆ। ದಳಿವುದಕೀರ್ತಿಯ ಕೆಸರು
ದೊರ। ಕಿಸಲೀ ಬಿಡುಗಡೆಯುಸಿರು
ಅದಕಾಗಿ। ತಾಗಿ। ಸಾಗಿ. . . .[೧೮]

ಇದು ಸ್ವಾತಂತ್ರ್ಯ ಚಳುವಳಿಯ ತೀವ್ರತೆಯಲ್ಲಿ ರೂಪು ತಾಳಿದ ಕವಿತೆ. ಇಂದು ತಾಯಿ ಬಿಡುಗಡೆಗೆಂದು ಹೊರಟ ವೀರರು ಈವರೆವಿಗೂ ಎಲ್ಲಿದ್ದರು? ಏನುಮಾಡುತ್ತಿದ್ದರು? ತಾಯಿ ಪರಾಧೀನತೆಗೆ ಒಳಗಾದದ್ದು ತಿಳಿಯದಂತ ಗಾಢ ನಿದ್ರೆಯಲ್ಲಿದ್ದರೆ? ಎಂಬ ಹಲವಾರು ಪ್ರಶ್ನೆಗಳು ಎದುರಾಗುತ್ತವೆ.

ಸೆರೆಯಾಳಂತೆ, ಪರಕೀಯರ ಹಿಡಿತಕ್ಕೊಳಪಟ್ಟ ದೇಶವನ್ನು ಬಿಡುಗಡೆಗೊಳಿಸಬೇಕು. ಅದರ ಧವಳ ಕೀರ್ತಿ ಬೆಳಗಬೇಕೆಂಬ ಉತ್ಕಟ ಭಾವದಿಂದ ಹೋರಾಟಕ್ಕೆ ಹೊರಟುನಿಂತ ಸಿಪಾಯಿಗಳ ಘೋಷದಂತೆ ಕವಿತೆ ರೂಪುಗೊಂಡಿದೆ.

ಭೂಮಿತಾಯಿ ಫಲವತಿಯಾಗಿ ರಕ್ಷಿಸುವ ದೇವತೆ ಎಂಬುದನ್ನು 'ಭೂಮಿತಾಯಿ' ಕವಿತೆಯಲ್ಲಿ ಹೇಳಿದ್ದಾರೆ. ಆಕೆ ಇಡೀ ದೇಹವನ್ನೇ ಆಹಾರದ ನೆಲೆಯಾಗಿ ಮಾಡಿಕೊಂಡು ಕಾಪಾಡುವ ತಾಯಿಯಾಗಿದ್ದಾಳೆ. ಪ್ರಾಣಿ, ಪಕ್ಷಿ, ಜೀವ ಜಂತುಗಳೊಂದಿಗೆ ಜಡ ಚೇತನಗಳನ್ನು ರಕ್ಷಿಸುತ್ತಾಳೆ ಎಂಬುದು ಕವಿಯ ನಂಬಿಕೆಯಾಗಿದೆ.

'ಮೈ ತುಂಬ ಬಾಯಿ ನೀರು
ತುಟಿ ಮುದ್ದು ನನ್ನ ಪಾಲು
ಎದೆಯಾಳ ಮೊಲೆಯುನೀನು
ಮೈ ತುಂಬ ನನಗೆ ಹಾಲು:[೧೯]

ಎಂದು ನುಡಿಯುತ್ತ ಮಗುವಾದ ಮಾನವನನ್ನು ಆಕೆ 'ಬಾನಗಲ ತೊಟ್ಟಿಲಲ್ಲಿ ತೂಗುತ್ತಿರುವಳು' ಎಂದು ಭೂಮಿಯ ವಿರಾಟ್ ಶಕ್ತಿಯನ್ನು ಪರಿಚಯಿಸಿದ್ದಾರೆ. ಜೊತೆಗೆ ಆಕೆಗೆ ತಾನು ಕೃತಜ್ಞನಾಗಿರುವುದನ್ನು ತಿಳಿಸುತ್ತಾರೆ.

ಬಾನಗಲ ತೊಟ್ಟಿಲಲ್ಲಿ
ನೀ ತೂಗುತಿರಲು ನನ್ನ;
ಕಟ್ಟಿರಲು ಚಿಕ್ಕೆ ಕಟ್ಟಿ
ನಾ ಮರೆವುದೆಂತು ನಿನ್ನ?'
. . . .
ಓ ತಾಯಿ ನೆಲವೆ! ನಿಲವೆ!
ತಮ್ ಬೆಳಕು ಹೊಮ್ಮಲಿನ್ನು,
ನಮ್ ಮೈಯ್ಯ ಬೆಳಕುದುಂಬೆ
ನೀನಾಗ ನಲಿವೆ ಗೆಲುವೆ. [೨೦]

ಚೈತನ್ಯ ಸ್ವರೂಪಳಾಗಿ ಭೂಮಿತಾಯಿ ಕಂಡು ಬರುತ್ತಾಳೆ. ಕವಿ ನಿಸರ್ಗದ ಶಿಶುವಾಗಿ ಅನುಭವಿಸಿದ ಅನುಪಮ ಸುಖವನ್ನು ಸ್ಮರಿಸಿ ಕೃತಜ್ಞತೆಯಿಂದ ನುಡಿಯುತ್ತಾನೆ. ಭೂಮಿಯೇ ತಾಯಿ, ಆಕೆಯ ಮಕ್ಕಳೇ ಮನುಕುಲವೆಂಬ ವಿಶ್ವಮಾನವ ಪ್ರಜ್ಞೆಯನ್ನು ಬಿಂಬಿಸಿದ್ದಾರೆ. ಭೂಮಿಯ ವಿಶಾಲತೆ ನಮ್ಮ ಹೃದಯ ವೈಶಾಲ್ಯತೆಯಾಗಬೇಕು ಎಂಬುದು ಕವಿಯ ಆಶಯವೂ ಆಗಿದೆ. ಇದನ್ನು ಕುರಿತು ವಾಮನ ಬೇಂದ್ರೆಯವರು, "ವರ್ಣ ದ್ವೇಷ ಅಳಿಯದೆ ಮಾನವನಲ್ಲಿ ಪ್ರಗತಿ ಅಸಾಧ್ಯ ಎಂಬ ಮಾತು ಈ ರೂಪಕದಲ್ಲಿದೆ. ಹಾಲು, ಬೆಳಕು, ಸುಖ, ಹಾಡು, ಅರಿವು ಮತ್ತು ಹಗಲು ಎಲ್ಲವುಗಳ ಬಣ್ಣ ಬಿಳಿದು. ಇದು ಜ್ಞಾನದ ಸಂಕೇತ. ಮನುಷ್ಯನಿಗೆ ಭೂಮಿತಾಯಿಯ ಬಗ್ಗೆ ಇರುವ ಎಲ್ಲಾ ಅಜ್ಞಾನದ ಪರದೆಗಳು ಸರಿಯಲಿ ಎಂಬ ಹಾರೈಕೆ ಈ ಕವನದ ಮೂಲ ಸತ್ವ – ತಮ್ ಬೆಳಕು ಮತ್ತು ನಮ್ ಮೈಯು ಈ ಶಬ್ದ ಪುಂಜವು ಸುಖಸ್ಪರ್ಶ ದ್ಯೋತಕವಾಗಿದೆ" [೨೧] ಎಂದಿದ್ದಾರೆ. ಇಂದಿಗೂ ಕೂಡ ಭೂಮಿಯ ಬಗ್ಗೆ ಮಾನವ ಎಚ್ಚೆತ್ತ ಪ್ರಜ್ಞೆಯಿಂದ ನಡೆದುಕೊಳ್ಳುತ್ತಿಲ್ಲ. ಭವಿಷ್ಯದ ಬಗ್ಗೆ ನಿರ್ಲಕ್ಷ್ಯ ತಾಳಿ ದುರಂತಕ್ಕೆ ಒಳಗಾಗುವುದನ್ನು ಕಾಣುತ್ತಿದ್ದೇವೆ.

ಬೇಂದ್ರೆಯವರು ಕೂಡ ಪ್ರಕೃತಿಯನ್ನು ಮಾತೆಯಾಗಿ ಕಂಡಿದ್ದಾರೆ. ಇವರಿಗೆ ಪ್ರಕೃತಿ ಬೇರೆಯಲ್ಲ, ತಾಯಿ ಬೇರೆಯಲ್ಲ. ತನ್ನ ಹುಟ್ಟಿಗೆ ಕಾರಣಳಾದ ತಾಯಿಯೇ ಪ್ರಕೃತಿ. ಅವಳಿಂದ ಬೆಳಕು ಮತ್ತು ಅರಿವು. ಅವಳ ಪ್ರತಿಭೆಯ ಕಣ ತಾನು ಎಂಬುದು ಕವಿಯ ಭಾವನಾತ್ಮಕ ಮಾತಾಗಿದೆ. ಈ ಪ್ರಕೃತಿ ನವ ತಾರುಣ್ಯವತಿ. ಚೆಲುವಿ ಎಂದು ಬಣ್ಣಿಸಿದ್ದಾರೆ. ಎಲ್ಲಾ ತಾಯಿಯನ್ನು ಪ್ರಕೃತಿಯಲ್ಲಿ ಕಾಣುವ ಹಿರಿತನವಿದೆ. ಅವರಿಗೆ 'ಚಿಗರಿಗಂಗಳ ಚೆಲುವಿ', 'ಮೊದಲಗಿತ್ತಿ', 'ಚಳಿಯಾಕೆ', 'ನನ್ನವಳು', 'ಶ್ರಾವಣ' ಧಾರವಾಡದ ತಾಯಿ', 'ಕರ್ನಾಟಕ ಮಾತೆ', 'ಭಾರತಮಾತೆ', 'ವಿಶ್ವಮಾತೆ' ಪ್ರಕೃತಿಯೇ ಆಗಿದ್ದಾರೆ. ಇವರ ಪ್ರಕೃತಿ ವೈಭವವನ್ನು 'ಶ್ರಾವಣ ವೈಭವ'ದಲ್ಲಿ ಕಾಣಬಹುದು. ಜೀವ ವಿಕಾಸದ ಪರಿಯನ್ನು ರೂಪಕವಾಗಿ ಚಿತ್ರಿಸಿದ್ದಾರೆ.

'ಏನು ಹಸಿರು! ಏನು ಹಳದಿ!
ಸುತ್ತು – ಮುತ್ತು ನೋಡು ಕೆಳದಿ!

ಹುಲ್ಲ ಹೂವು ಆದರೇನು;
ಹಬ್ಬದುಬ್ಬಿನಲ್ಲಿವೆ;
ದಿಬ್ಬಗಳನು ತಬ್ಬಲೆಂದು
ಎಲ್ಲ ನೆಲಕು ಹಬ್ಬಿವೆ'
. . . .
ಹುಡಿಯು ಹರಳಿ ಹೂವು ಆಗೆ?
ಹುಳಕೆ ರೆಕ್ಕೆ ಒಡೆದವು;
ಮುಸುಕು ಹರಿದು ಪಕ್ಕ ತೆರೆದು
ಚಿಟ್ಟೆ ಮುಕ್ತಿ ಪಡೆದವು. [೨೨]

ನಿಸರ್ಗದ ವ್ಯಾಪ್ತಿ ವೈವಿಧ್ಯ ಹಾಗೂ ಜೀವಪರವಾದದ್ದು ಎಂಬುದು ಇದರಿಂದ ತಿಳಿಯುತ್ತದೆ.

'ಪ್ರಕೃತಿ ಮಾತೆ' ಸೃಜನಶೀಲಳೆಂಬುದನ್ನು ಕವಿ ರಮ್ಯತೆಯಿಂದ ಚಿತ್ರಿಸಿದ್ದಾರೆ. ಹಾಗೆಯೇ "ಪ್ರಕೃತಿಯ ಗಂಧ, ನಾದ, ಎಚ್ಚರವನ್ನು ಕಾವ್ಯವಾಗಿಸಿದ್ದಾರೆ. ಅವರು ಪ್ರಕೃತಿಯ ಸೃಷ್ಟಿಯಾದ ಈ ಮಾನವ ಪ್ರಾಣಿಯನ್ನು ಪೂರ್ಣನನ್ನಾಗಿ ಮಾಡಲು ಪ್ರಕೃತಿಮಾತೆಯನ್ನೇ ಪ್ರಾರ್ಥಿಸಿರುವ ರೀತಿ ಇಡೀ ಮನುಕುಲದ ಪ್ರಾರ್ಥನೆಯಂತಿದೆ"[೨೦] ಇಂತಹ ಭಾವವನ್ನು 'ಸೂರ್ಯನ ಹೊಳಿ' ಕವಿತೆಯಲ್ಲಿ ಕಾಣಬಹುದು.

ಈ ಮಣ್ಣಿನ ಒಡಲಲ್ಲಿ
ಈ ಗಾಳಿಯ ಎಳೆಯಲ್ಲಿ
ಈ ಮಿಂಚಿನ ಸುಳಿಯಲ್ಲಿ
ನಿನ್ನ ಮಗುವೊಂದು ತನ್ನ ಜೀವವನ್ನೆ ಕಣ್ಣಾಗಿ ಮಾಡಿ
ನಿನ್ನನ್ನೇ ನೋಡುತ್ತಿದೆ, ನಿನ್ನನ್ನೇ ಬೇಡುತ್ತಿದೆ.
ಈ ವಿಕಲ ಪ್ರಾಣಿಯನ್ನು
ಸಕಲ ಜೀವನಕ್ಕಾಗಿ ಸಿದ್ಧಮಾಡು ಎಂದು – [೨೩]

ಪ್ರಕೃತಿ ಮಾತೆಯ ಉಪಕಾರ ಸ್ಮರಣೆಗೆ ಕೃತಜ್ಞತೆಯ ಪೂಜೆ ಜಡ – ಚೇತನಗಳಿಂದ ನಡೆದಿದೆ ಎಂಬುದು 'ನಕ್ಷತ್ರ' ಕವನದಲ್ಲಿ ರೂಪಕ ಶೈಲಿಯಲ್ಲಿ ಕಾಣಬಹುದು.

ಮರಮರವು ಬಾನಿಗೋ ಕೈಮುಗಿವ ರೀತಿ,
ಹೃದಯವೇ ಸುಪ್ತ – ಜಪ – ವಿನಯ ನೀತಿ
ಗಂಧ ನೀಡಿದ ಮಣ್ಣಿಗೆ ತಾನೇ
ಬಾಡಿದ ಹೂವಿನ ಪೂಜೆ!" – [೨೪]

ಬೇಂದ್ರೆಯವರ ಪ್ರಕೃತಿ ದೇವಿಗೆ ವಿನಯದ ನಿವೇದನೆ ಇದೆ. "೧೯೨೪ರಲ್ಲಿ ತಾಯಿಯನ್ನು ಕಳೆದುಕೊಂಡ ಬೇಂದ್ರೆಯವರಿಗೆ ಮುಂದಿನ ಜೀವನದಲ್ಲಿ ತಾಯಿ ಅರ್ಥಪೂರ್ಣವಾದ ಪ್ರತೀಕವಾದಳು. ಧಾರವಾಡ, ಕರ್ನಾಟಕ, ಭಾರತ, ವಿಶ್ವ, ಲಲಿತಾ, ಗಾಯತ್ರಿ, ಪಾಂಡಿಚೇರಿಯ ಮದರ್, ಗಂಗೆ – ಇವೆಲ್ಲ ತಾಯ್ತನದ ಸೃಜನ ಮತ್ತು

ಧಾರಣಾಶಕ್ತಿಯ ವಿವಿಧ ಪ್ರತಿಮೆಗಳಾಗಿವೆ"[೨೫] ಎಂಬ ಕೀರ್ತಿನಾಥ ಕುರ್ತಕೋಟಿಯವರ ಮಾತು ಗಮನಾರ್ಹವಾದುದಾಗಿದೆ.

ಕುವೆಂಪು ಬರಹದಲ್ಲಿ ಪ್ರಕೃತಿ ಮಹತ್ತರ ಪಾತ್ರ ವಹಿಸಿರುವುದು ಕಂಡು ಬರುತ್ತದೆ. ಇಡೀ ನಿಸರ್ಗದಲ್ಲಿ ತಾಯಿಯನ್ನು ಕಾಣುವ ಸಂದರ್ಭವನ್ನು ಕುವೆಂಪು ತಮ್ಮ ಕವಿತೆಯಲ್ಲಿ ಚಿತ್ರಿಸಿದ್ದಾರೆ. ಕಪನೀ ತೀರದಲ್ಲಿ ಒಮ್ಮೆ ಬೆಟ್ಟ ದರ್ಶಿಸಲು ಹೋದಾಗ ಅಲ್ಲಿನ ವನಸೊಬಗಿಗೆ ಮೈಮರೆತ ಕವಿ ನಿಸರ್ಗವೇ ತಾಯಿಯೆಂದು ಭಾವುಕತೆಯಿಂದ ವರ್ಣಿಸಿದ್ದಾರೆ. ಕಾಡು, ಬೆಟ್ಟ, ನದಿ, ಹಕ್ಕಿ, ದುಂಬಿಗಳ ಝೇಂಕಾರಗಳಲ್ಲಿ ತಾಯಿಯನ್ನು ಕಾಣುತ್ತಾರೆ:

ಅದೆ ತಾಯಿ, ಅದೆ ತಾಯಿ ।
ಇಲ್ಲಿರುವಳದೆ ತಾಯಿ
ಕಾಡಿರುವ ನಾಡೆಲ್ಲ
ಕವಿಗೆ ತಾಯೊಡಲೊ;
ಮಲೆ ಕಾಡು ಹೊಳೆ ಬೀಡು
ಕವಿಗೆ ತಾಯ್ಮಡಿಲೊ !
. . . .
ಕರೆಯುತಿಹಳೀ ಕಪಿನಿ
ಕರೆವಂತೆ ತುಂಗೆ ![೨೬]

ಸದಾ ಮಕ್ಕಳು ತಾಯಿಯ ಮಡಿಲನ್ನು ಆಶ್ರಯಿಸಿಯೇ ಬೆಳೆಯುವುದಿಲ್ಲ. ಬುದ್ಧಿ ಭಾವಕೋಶಗಳು ಬೆಳೆದಂತೆ ಬದುಕುವ ದಾರಿ ಹುಡುಕಿಕೊಂಡು ಹೊರಡುವ ವ್ಯಕ್ತಿಗೆ ತಾನು ನಿಂತ ನೆಲೆಯಲ್ಲಿ ಕಣ್ಣಾಡಿಸಿದಾಗ ವನಸಿರಿ ಸೊಬಗಿನಲ್ಲಿ ಮಾತೃವಾತ್ಸಲ್ಯದ ಬಾಲ್ಯದ ದಿನಗಳು ಮರುಕಳಿಸಿ ನವೀಕರಣಗೊಳ್ಳುತ್ತವೆ. ಆತ್ಮಬಲವನ್ನು ಹೆಚ್ಚಿಸುತ್ತದೆ. ಹಸಿರು ಚೈತನ್ಯ ಸ್ವರೂಪಿಯಾದದ್ದು, ಭಾವ ಪರವಶನಾಗಿದ್ದರೂ ಆಳದಲ್ಲಿ ಬದುಕಿನ ಭದ್ರತೆಯೊಂದು ಇಣುಕು ಹಾಕುತ್ತದೆ.

'ಋತುಚಿನ್ಮಯೀ ಜಗನ್ಮಾತೆ'ಗೆ ಕವಿತೆಯಲ್ಲಿ ಋತು ಚಿನ್ಮಯಿಯೆ ಕವಿಗೆ ಲೋಕಮಾತೆಯಾಗಿದೆ.

ಓಂ! ಸಚ್ಚಿದಾನಂದ ತ್ರಿತ್ವ ಮುಖವಾದ ಪರಬ್ರಹ್ಮದಲ್ಲಿ
ಅಭವದೊತ್ತಾದೆ, ಭಯದ ಬಿತ್ತಾದೆ, ಋತದ ಚಿತ್ತಾದೆ ನೀಂ;
ಇಳಿದು ಬಾ ಇಳೆಗೆ, ತುಂಬಿ ಬೆಳಗೆ ಜೀವ ಕೇಂದ್ರದಲ್ಲಿ;
ಮತ್ತೆ ಮೂಡಿಬಾ ಒತ್ತಿ ನೀನೆನ್ನ ಚಿತ್ತ ಪೃಥವಿಯಲ್ಲಿ ।[೨೭]

ಜೀವ ಜಲದ ಶಕ್ತಿ ಹಾಗೂ ಅದರ ಅನಿವಾರ್ಯತೆಗೆ ಕವಿ ಜಗನ್ಮಾತೆ ಎಂದು ಪ್ರಾರ್ಥಿಸಿದ್ದಾರೆ. ಜಗತ್ತನ್ನು ರಕ್ಷಿಸಲು, ಜೀವ ರಾಶಿ ಬದುಕಲು, ನಿಸರ್ಗ ನಳನಳಿಸಲು, ಮನುಕುಲ ಮಹದಾನಂದ ಪಡಲು ಋತು ಚಿನ್ಮಯಿಯ ಅನುಗ್ರಹದಿಂದ ಎಂದು ಕವಿ ನಮಿಸಿದ್ದಾರೆ.

ನಿಸರ್ಗದ ಚಲುವಿನಲ್ಲಿ ಚಿಗುರು ಉನ್ನತ ಸ್ಥಾನ ಪಡೆದಿದೆ. ಅದರಲ್ಲೂ 'ಕೆಂದಳಿರು' ಕಣ್ಮನ ಸೆಳೆಯುವಂತಿರುತ್ತದೆ. ಇಂತಹ ಕೆಂದಳಿರು ಕವಿಗೆ ಭೂಮಿತಾಯಿಯ ಹಸುಳೆಗಳಾಗಿ ಕಂಗೊಳಿಸಿವೆ.

ಆಃ! ನಿಂತು ನೋಡಲ್ಲಿ,
ಸ್ವರ್ಗವರಳುತಿದೆ ಆ ಮರದ ಮೈಸಿರಿಯಲ್ಲಿ!
. . . .
ಚೇತನದ ಚಿಲುಮೆ ಚಿಮ್ಮುತಿದೆ ಆ ಮರದಲ್ಲಿ
ನಾ ಕಂಡ ಚಲುವೆಯರ ಚೆಂದುಟಿಗಳೆಲ್ಲ
ಸಂಮಿಲಗೈದಂತೆ ತೋರುತಿಹುದಿಲ್ಲಿ!
ಭೂಮಿ ತಾಯಿಯು ತನ್ನ ಹಸುಳೆಗಳನ್ನೆಲ್ಲ
ಶಿಶು ಪ್ರದರ್ಶನಕೆಂದು ಕಳುಹಿಸಿಹಳಿಲ್ಲಿ! [೨೮]

ತಾಯಿ – ಮಕ್ಕಳ ಸಂಬಂಧದಂತೆ ನಿಸರ್ಗದಲ್ಲಿರುವ ಮರ, ಗಿಡಗಳ ಸೊಗಸು. ಭೂಮಿತಾಯಿಯ ಶಿಶುಗಳಾಗಿ ಮರಗಿಡಗಳು ಕಂಗೊಳಿಸುತ್ತವೆ. 'ಶಿಶು ಪ್ರದರ್ಶನಕ್ಕೆಂದು ಕಳುಹಿಸಿಹಳಿಲ್ಲಿ' ಎಂಬುದು ವಿಶೇಷವಾಗಿ ಗಮನ ಸೆಳೆಯುತ್ತದೆ. ಪ್ರದರ್ಶನಕ್ಕೆ ಕಳುಹಿಸುವ ಯಾವ ವಸ್ತುಗಳಾದರೂ ವಿಶೇಷ ಬೆಡಗು, ಚೆಲುವಿನಿಂದ, ಸೊಗಸಿನಿಂದ ತುಂಬಿರುತ್ತದೆ. ಅಂತಹ ಸೊಗಸು ಮರದ ಮೈಸಿರಿಯಲ್ಲಿ ವ್ಯಕ್ತವಾಗಿದೆ. ಮರ ಸಾಮಾನ್ಯವೆನಿಸಿದರೂ ನೋಡುವ ನೋಟದಲ್ಲಿ ಅಸಮಾನ್ಯತೆ ವ್ಯಕ್ತವಾಗಿದೆ. ಅದೊಂದು ದರ್ಶನವಾಗಿ ಕಾಣುತ್ತದೆ. ಅದು, ಕವಿಯ ಕಾಣಿಕೆಯೂ ಹೌದು. ಮೃಣ್ಮಯದಲ್ಲಿ ಚಿನ್ಮಯವಿದ್ದಂತೆ, ಜಡವನ್ನು ಚೇತನ ಗೆಲುವಂತೆ ಮೆರೆದ ಚಿಗುರು. ಇದು ಭೂಮಿ ತಾಯಿಯ ಸಂತಾನ. ಕವಿಯ ಕಣ್ಣಿಗೆ ರೋಮಾಂಚನ!

ತಾಯಿಯಾದವಳಿಗೆ ಮಗುವಿನ ಬಗ್ಗೆ ಕಾಳಜಿ, ಅಷ್ಟೇ ಅಕ್ಕರೆ. ಆ ಮಗುವಿನ ಸುಖ ಆನಂದಕ್ಕಾಗಿ ತನ್ನನ್ನೇ ಅರ್ಪಿಸಿಕೊಂಡಿರುತ್ತಾಳೆ. ಅದನ್ನೇ ಮಾತೃವಾತ್ಸಲ್ಯ ಎನ್ನುವುದು. ಇಂತಹ ಮಾತೃತ್ವವೇ ನಿಸರ್ಗವಾಗಿದೆ. ನಿಸರ್ಗದ ಒಂದೊಂದು ಅಂಶವೂ ತಾಯಿ ಮಗುವಿಗಾಗಿ ನೀಡಿದ ಆಟಿಕೆಯ ವಸ್ತು. ಬಗೆಗಣ್ಣಿಗೆ ಮಾತ್ರ ಗೋಚರಿಸುವ ತಾಯ್ತನ ಹಾಗೂ ಮಗುವಿನ ಅವಿನಾಸಂಬಂಧದಂತೆ ನಿಸರ್ಗಕ್ಕೂ ಮನುಷ್ಯನಿಗೂ ಇರುವ ಸಂಬಂಧ ಎಂಬುದನ್ನ ನಿರೂಪಿಸುವ ಕವಿತೆ: 'ತಾಯಿಯ ಆಶ್ವಾಸನೆ.'

ಏಕೆ ಬೇಸರ, ನಿನಗೂ?
ಇಲ್ಲೆ ಇಹೆನಲ್ಲ ಮಗೂ!
ನಿನಗಾಗಿ ಈ ಹಸುರು ಹುಲ್ಲಾಗಿ ಬಂದೆ
. . . .
ಕಲ್ಪನೆಯ ಬಾಹುಗಳ ಬಿಡುಮಗುವೆ;
ಸೌಂದರ್ಯತನುವೆನ್ನನಪ್ಪು, ಮಗುವೆ;
ಆವೇಶದಧರದಲಿ ಮಾತೃವಕ್ಷವನೊತ್ತಿ
ಸ್ತನ್ಯದಾನಂದವನು ಈಂಟಿ ನಗುವೆ! [೨೯]

ಇದು ಪ್ರಕೃತಿ ಕೇಂದ್ರಿತ ಕವಿತೆ. ದೇಶೀ ಪರಂಪರೆ, ಮಾರ್ಗ ಪರಂಪರೆಗಳ ಪ್ರಶ್ನೆಯಾಗಿಯೂ ಕಾಣುತ್ತದೆ. ತಾಯಿ ಇಲ್ಲದಿರುವ ಸ್ಥಿತಿಯಲ್ಲಿ ಸುತ್ತಲಿನ ಪ್ರಕೃತಿಯ ಚೆಲುವಿನಲ್ಲಿ ತಾಯಿ ಇದ್ದು ಅಂತೆ ಆಕೆಯ ಸ್ಪರ್ಶವೇ ಮುಂತಾದ ಮಾತೃ ವಾತ್ಸಲ್ಯ ಅನುಭವಿಸಲು ಸಾಧ್ಯವಿದೆ, ಎಂಬುದನ್ನು ಈ ಕವಿತೆ ತೋರಿಸುತ್ತದೆ.

ನಿಸರ್ಗದಿಂದ ಮನುಜ ಶಾಂತಿ ಪಡೆಯಲು ಸಾಧ್ಯವೆಂಬುದನ್ನು 'ಓಂ ಅನವರತವೂ!' ಕವಿತೆಯಲ್ಲಿ ಹೇಳಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ಓಂ ಕಾರವೇ ಬೀಜಮಂತ್ರ. ನಿಸರ್ಗದೇವತೆಯಿಂದ ನಿರಂತರ ಮನಶ್ಯಾಂತಿ ಎಂದು ಕವಿ ಭಾವಿಸಿದ್ದಾರೆ.

ಓಂ
ಅನವರತವೂ
ನಿನ್ನ ಮಡಿಲೊಳೆಯೆ ಮಲಗಿರುವೆನೆಂಬೊಂದು
ಶಿಶು ನಿರ್ಭರತೆ ನನ್ನದಾಗಿರಲಿ, ತಾಯಿ.
. . . .
ದೇಹದಲಿ ವಿಶ್ರಾಂತಿ,
. . . .
ಮನದಿ ವಿಶ್ರಾಂತಿ;
ಚೇತನದಿ ತುಂಬಿ ಬರಲಂಬುಧಿಯ ಗಂಭೀರ ಶಾಂತಿ!
ಓಂ ಶಾಂತಿಃ ಶಾಂತಿಃ ಶಾಂತಿಃ! [೩೦]

ಅಲೌಕಿಕ ನೆಲೆಯಲ್ಲಿ ಶಾಂತಿ ಸೂತ್ರದ ದರ್ಶನವಾಗುತ್ತದೆ. ಜಗತ್ತಿಗೆ ಅತ್ಯಂತ ಜರೂರಾಗಿ ಬೇಕಾಗಿರುವುದು ಶಾಂತಿ. ಇದು ರಕ್ಷಣೆ, ಭರವಸೆ, ಭದ್ರತೆಯನ್ನು ಅವಲಂಬಿಸಿರುತ್ತದೆ. ಅಂಥ ರಕ್ಷಣೆ, ಭರವಸೆ, ಭದ್ರತೆ ಎನ್ನುವುದು ತಾಯಿಯ ಮಡಿಲಲ್ಲಿ ದೊರೆಯುತ್ತದೆ ಎಂಬುದು ಕವಿ ಪ್ರಜ್ಞೆ.

ಕುವೆಂಪುರವರನ್ನು ಕವಿಯಾಗಿ, ಭಾವ ಜೀವಿಯಾಗಿ ರೂಪಿಸಿದ ಮಲೆನಾಡೇ ತನಗೆ ತಾಯಿ ಎಂಬುದು ಕವಿಯ ಭಾವ. ಇತರರ ಹೊಗಳಿಕೆಗೆ ನೀನು ದನಿಗೂಡಿಸಬೇಕಿಲ್ಲ, ಏಕೆಂದರೆ ತಾಯಿ ಹೊಗಳಲು ಇಚ್ಛಿಸಳು. ಮಗನ ಬೆಳವಣಿಗೆ ಕಂಡು ಆನಂದಿಸುವಳು. ಅದಕ್ಕಾಗಿ ನೀನು ನನಗೆ ತಾಯಿಯೇ ಆಗಿರು. ಎಲ್ಲರಂತೆ ನೀನೂ ನನ್ನನ್ನು ಹೊಗಳುವುದು ಬೇಡ ಎಂದು ಕವಿ ಪ್ರಾರ್ಥಿಸುತ್ತಾರೆ.

ಇತರರೆನ್ನನು ಹೊಗಳುವರೆಂದು ನೀನೇಕೆ
ಹೊಗಳುತಿಹೆ? ಇತರರೇನನು ಕೊಡರು. ಅದಕಾಗಿ
ಹೊಗಳಿಕೆಯ (ನಿಡಿಯ ತೊಡುಗೆಯ) ಕೊಡುತಿಹರು. ಕೂಗಿ
ಮಾತೆ ಹೊಗಳುವುದಿಲ್ಲ; ಮುದ್ದಿಸೊಲಿಯುವಳಾಕೆ ಕಂದನನು.
ಹೆಸರಿಗಿಂತಲು ಹಿರಿದೆ ತಾಯಿಯೊಲ್ಮೆಯು ನನಗೆ [೩೧]

ಹೊಗಳಿಕೆ ಸುಲಭವಾಗಿ ಸಿಗುತ್ತದೆ. ಆದರೆ ಒಲುಮೆ ಎಂಬುದು ಪರಾಕು ಸಂಸ್ಕೃತಿಯಿಂದ ಭಿನ್ನವಾದದ್ದು. ಇದು ಪ್ರಾಣ ಸಂಹಿತೆಗೆ ದಕ್ಕುವಂತಹುದು. ತಾಯಿಯ ವಾತ್ಸಲ್ಯ ಭಾವಕ್ಕೆ ಸಂವಾದಿಯಾದದ್ದು ಮತ್ತೊಂದಿಲ್ಲ.

ಮನೆಯ ಮುಂದೆ ಹೂವಿನ ತೋಟದಲ್ಲಿ ಭವ್ಯವಾಗಿ, ಬೃಹತ್ತಾಗಿ ಅರಳಿ ರಂಜಿಸುತ್ತಿದ್ದ ಡಾಲಿಯಾ ಹೂವಿನಿಂದ ಉದ್ಭವಿಸಿರುವ ಕವನ "ಆಃ ರಾಜರಾಜೇಶ್ವರಿ!" ಹೂವಿನಲ್ಲೂ ದೇವತೆ ದರ್ಶನವಾಗಿದೆ:

ಶ್ರೀ ರಾಜ ರಾಜೇಶ್ವರಿಯ ರಾಗ ಭೋಗಾಲಯದ
ಸೌಂದರ್ಯ ಗೋಪುರವೆ ಪುಷ್ಪರೂಪವನಾಂತು
ಡಾಲಿಯಾ ಹೂವಿನಾಕಾರದಲಿ ಬಂದಿತು
ನನ್ನನಾಶೀರ್ವದಿಸುತಿಹುದು . . . .
. . . . ಹೇ ಭವ್ಯ ಭವತಾರಿಣಿ,
ಪೂವಾದೊಡೇಂ? ವಿಭೂತಿ ವ್ಯಕ್ತೆ ನೀಂ! ನಿನಗೆ,
ಸರ್ವಾವತಾರ ಪುಣ್ಯಕ್ಷೇತ್ರ ಶಾರದೆಗೆ
ಋಷಿಯ ದರ್ಶನ ನಮನವಿದೆಕೊ, ಹೂವವತಾರಿಣಿ! [೨೨]

ನಿಸರ್ಗದಲ್ಲಿ ವಿಕಸನಗೊಳ್ಳುವ ಕುಸುಮದಲ್ಲಿ ಹೆಣ್ಣಿನ ಚೆಲುವು, ಕೋಮಲತೆಯನ್ನು ದರ್ಶಿಸಿದ್ದಾರೆ. ಇಂತಹ ಸೌಂದರ್ಯದ ನೆಲೆಯಲ್ಲಿ ತಾಯಿಯನ್ನು ಕಾಣುವುದರೊಂದಿಗೆ ದೈವತ್ವವನ್ನು ಆರೋಪಿಸಿದ್ದಾರೆ.

ಇವರ 'ತುಂಗೆ' ಕವಿತೆಯಲ್ಲಿ ಹರಿಯುವ ನದಿಯೂ ಮಾತೆಯಾಗಿದ್ದಾಳೆ. ಮನಕೆ ಆನಂದವೀವ ಹೆಣ್ಣಾಗಿದ್ದಾಳೆ.

ಓ ನನ್ನ ತುಂಗೆ
ಸಹ್ಯ ಪರ್ವತ. ತೀರ್ಥ ಪೋಷಿತ ತರಂಗೆ,
ನಿಬಿಡ ವನಮಾಲಿನಿಯೆ, ಪುಣ್ಯಶಾಲಿನಿಯೆ,
ನೋಡಿದನಿತೂ ನಿನ್ನ ನೋಡಿ ನಾ ತಣಿಯೆ! [೩೩]

ನೀರು ಗರ್ಭಸಂಬಂಧಿಯಾದದ್ದೂ ಹೌದು, ಜೀವ ಸಂಬಂಧಿಯೂ ಹೌದು. ನಿಸರ್ಗದ ಜೀವದ್ರವವಾಗಿ ಕಾಣುವ ತುಂಗೆಯ ಹರವು ವೈವಿಧ್ಯಮಯವಾದದ್ದು. ಅಂತಹ ವೈವಿಧ್ಯತೆ ಕವಿಯ ಬಗೆಗಣ್ಣಿಗೆ ಸಿಕ್ಕಿ ಕಾವ್ಯ ಸೃಷ್ಟಿಗೆ ಕಾರಣವಾಗುವಂತೆ ಆನಂದಮಯವಾಗಿಸುತ್ತದೆ.

ನಿಸರ್ಗ ಸೌಂದರ್ಯವೇ ಹೆಣ್ಣು. ಆಕೆಯ ನುಡಿಯನ್ನು ಹೃದಯವಿದ್ದವನು ಬಲ್ಲ. ಜನನಿಬಿಡ ಸಂತೆಯಿಂದ ದೂರವಾಗಿ, ಜನದ ಸಂತೆಯನಗಲಿ, ಮೈಮರೆತಾಗ ತಾಯಿಯ ಸಾನಿಧ್ಯ ಪಡೆಯಲು ಸಾಧ್ಯ. ನಿಸರ್ಗ ದೇವತೆಯೇ ಕವಿಗೆ ಮನತಣಿಸುವ ಮೈಮರೆಸುವ, ಮುದ್ದಿಸುವ ತಾಯಿ.

ಹಗಲಿರುಳು ನೀನೆನ್ನ ಹಿಂಬಾಲಿಸಿದೆ, ಜನನಿ,
ಅದನರಿಯದೇಕಾಂಗಿ ಎಂದು ತಿಳಿದೆ;
ನಿನ್ನ ನೂಪುರ ರವಮಂ ಕೇಳಿಬರಲೆನಗೆಂದು
ಅದು ಬರಿಯ ಮಾಯೆ ಎಂದರಿತೆ ತಾಯೆ.
. . . .

ಜಗದ ಸಂತೆಯನಗಲಿ ಗಡಿ ಬಿಡಿಯನಲ್ಲಿಟ್ಟು
ಅಡವಿಗಳ ಹೃದಯಮಂ ಸೇರಲೀಗ,
ಅಂದು ಕೇಳದ ರವಂ ಇಂದು ಕೇಳುವುದೆನಗೆ
ಅಂದು ಕಾಣದ ರೂಪು ಥಳಿಸುತಿಹುದು! [೨೪]

ತಾಯಿಯ ಅಮೂರ್ತ ರೂಪ ಕಲ್ಪನೆ ಇಲ್ಲಿ ಕಂಡುಬರುತ್ತದೆ. ಅಮೂರ್ತದಿಂದ ಮೂರ್ತರೂಪ ಪಡೆಯುವ ತಾಯಿಯನ್ನು ಜಂಜಡದ ಬದುಕಿನಿಂದ ದೂರವಾದಾಗ ದರ್ಶಿಸಲು ಸಾಧ್ಯ. ಅದನ್ನು ದರ್ಶಿಸುವ ಮನೋಧರ್ಮ ಮುಖ್ಯವಾಗಿರಬೇಕು. ಕವಿ ಮನಸ್ಸು ಜಗದ ಸಂತೆಯನಗಲಿ, ಗಡಿಬಿಡಿಯ ಕೈಬಿಟ್ಟು ವನ್ಯ ಲೋಕಕ್ಕೆ ಕಾಲಿಟ್ಟು, ಮೈ ಮರೆಯುವ ಸ್ಥಿತಿ ತಲುಪಿದಾಗ ಮಾಯೆ ಮಾಯೆಯಾಗಿ ತಾಯಿ ರೂಪ ಗೋಚರಿಸಿದೆ. ಇದು ನಿಸರ್ಗ ಪ್ರೇಮಿ ಕುವೆಂಪು ಅಂತಹವರಿಗೆ ದಕ್ಕುವ ದರ್ಶನವಾಗಿದೆ.

ಬಾಲ್ಯದಿಂದ ಯೌವ್ವನದ ಹಂತದಲ್ಲಿ ನಿಸರ್ಗದೇವತೆಯೇ ತಾಯಿಯಾಗಿ ಕವಿಯನ್ನು ರೂಪಿಸಿದ್ದು. ಇದೇ ಕವಿತೆಗೆ ಪೂರಕವಾಗಿರುವಂತಹ ಕವಿತೆ "ಸೊಬಗನಾಸ್ವಾದಿಸಲು ಸಮಯವೆಮಗಿಲ್ಲ". ಮನುಷ್ಯ ಸೌಂದರ್ಯ ಹುಡುಕಿ ಹೋಗಬೇಕಿಲ್ಲ. ಕಣ್ಣೆದುರಿನಲ್ಲಿರುವ ಸೌಂದರ್ಯ ನೋಡುವ ವ್ಯವಧಾನ, ಅಭಿಮಾನವಿರಬೇಕು. ಇಲ್ಲದಿದ್ದರೆ ಬರೀ ಜಂಜಡದ ಬದುಕಿಗೆ ಸಿಕ್ಕಿ ಅರ್ಥವಿಲ್ಲದ ಜೀವನ ಕಾಣಬೇಕಾಗುತ್ತದೆ.

"ಸೊಬಗನಾಸ್ವಾದಿಸಲು ಸಮಯವೆಮಗಿಲ್ಲ
ನಭನೀಲವನು ನೋಡಿ ಬೆರಗಾಪರಲ್ಲ!
. . . .
ದಿನದಿನವು ನೋಡುವೆವು ಸೃಷ್ಟಿವೈಚಿತ್ರ್ಯಮಂ;
ದಿನದಿನವು ಮಾತಾಡುವೆವು ಪ್ರಕೃತಿ ಸೌಂದರ್ಯಮಂ;
ಮನಮಾತ್ರ ಕೊರಗುತಿದೆ ಜಡವಾಗಿ, ಬಡವಾಗಿ,
ಹೇ ವಿಶ್ವಜನನಿ, ಒಲಿದೆಮ್ಮ ಸಲಹಮ್ಮ! [೨೫]

ನಾಗರಿಕತೆಯ ಬದುಕಿನಲ್ಲಿ ನಿಸರ್ಗವು ನೋಟವಾಗುತ್ತದೆಯೇ ಹೊರತು, ದರ್ಶನವಾಗುವುದಿಲ್ಲ. ಅವಸರದ ನೀತಿ, ಬದುಕಿನ ಜಂಜಾಟ, ಯಾಂತ್ರಿಕ ಜೀವನದಿಂದ ಸೃಷ್ಟಿಯ ಸೌಂದರ್ಯ ದರ್ಶನವಾಗದು. ಅಂತಹ ದರ್ಶನ ಪಡೆಯುವ ಅವಕಾಶ ಹಾಗೂ ಮನಸ್ಥಿತಿಯನ್ನು ನಿಸರ್ಗ ದೇವತೆಯಿಂದ ದಕ್ಕಿಸಿಕೊಳ್ಳಲು ಕವಿ ಪ್ರಾರ್ಥಿಸಿದಂತಿದೆ.

ಜನಜಂಗುಳಿಯಲ್ಲಿ, ವ್ಯವಹಾರಿಕ ಜಗತ್ತಿನಲ್ಲಿ, ಹಣ, ಅಧಿಕಾರದಲ್ಲಿ ಸಿಗದ ಸೊಗಸು, ತೃಪ್ತಿ, ಸಮಾಧಾನ, ನಿಸರ್ಗದಿಂದ ಮಾತ್ರ ಪಡೆಯಲು ಸಾಧ್ಯ ಎಂಬುದಕ್ಕೆ ಈ ಮಾತು ಸಾಕ್ಷಿ. ಕುವೆಂಪು ನಿಸರ್ಗವನ್ನು ಅನಂತ ಮುಖದಲ್ಲಿ ಕಂಡು ಚೈತನ್ಯ ಪಡೆದಿದ್ದಾರೆ.

ಭೂಮಿಯನ್ನು ಅಂಬೆಯನ್ನಾಗಿ ಭಾವಿಸಿರುವ ದಿನಕರ ದೇಸಾಯಿ ತಮ್ಮ "ದಿನಕರನ ಚೌಪದಿ"ಯಲ್ಲಿ ನಿನ್ನ ನಿಜ ಪ್ರಾಯ ಯಾವುದು? ಎಂದು ಪ್ರಶ್ನಿಸಿದ್ದಾರೆ.

ನಿನ್ನ ಬಾಲ್ಯವನುಲಿಯುತಿದೆ ಹಸಿರು ಹುಲ್ಲು
ವೃದ್ಧಾಪ್ಯವನ್ನು ಸಾರುತಿದೆ ಬಂಡೆಗಲ್ಲು
ಹೂವುಗಳ ನಗು ನಿನ್ನ ತಾರುಣ್ಯವೆಂಬೆ
ನಿನ್ನ ನಿಜ ಪ್ರಾಯವಾವುದು ಹೇಳು ಅಂಬೆ. [೩೭]

ಮನುಷ್ಯನು ತನ್ನ ಜೀವಮಾನದ ಅವಧಿಯಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಬಾಲ್ಯ ಯೌವ್ವನ, ವಾರ್ಧಕ್ಯಗಳನ್ನು ಅನುಭವಿಸಬಲ್ಲ, ತೋರಬಲ್ಲ ಸಾಮರ್ಥ್ಯ ಮಿತಿಯನ್ನು ಪಡೆದುಕೊಂಡಿರುತ್ತಾನೆ. ಆದರೆ ಪ್ರಕೃತಿಯು ಏಕ ಕಾಲದಲ್ಲಿಯೇ ಈ ಎಲ್ಲ ಅವಸ್ಥಾಂತರಗಳನ್ನು ತೋರಿಸಬಲ್ಲ ಚೈತನ್ಯವನ್ನು ತನ್ನಲ್ಲೇ ಅಡಗಿಸಿಕೊಂಡಿದ್ದು, ಏಕಕಾಲಕ್ಕೆ ಬಿಂಬಿಸಬಲ್ಲ ಅನಂತ ಸಾಮರ್ಥ್ಯವನ್ನು ಪಡೆದುಕೊಂಡಿರುತ್ತಾಳೆ. ಪ್ರಕೃತಿಯ ನಿಜದ ನೆಲೆಯನ್ನು ಕಂಡುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಅವರಿವರು ಕಂಡದ್ದು ಅವರವರ ಪಾಲಿನ ಸತ್ಯ ಇದರ ಸಮಷ್ಠಿ ರೂಪವೇ ಪ್ರಕೃತಿ ಚೈತನ್ಯ.

ದಿನಕರ ದೇಸಾಯಿ ಭೂಮಿಯನ್ನು ಕುರಿತು ಬರೆದ ಚೌಪದಿ ಅರ್ಥಪೂರ್ಣವಾಗಿದೆ. ಭೂಮಿಯ ಮೇಲಿನ ಹುಲ್ಲನ್ನು ಬಾಲ್ಯಕ್ಕೂ, ಹೂವನ್ನು ಯೌವ್ವನಕ್ಕೂ, ಬಂಡೆಗಲ್ಲನ್ನು ಮುಪ್ಪಿಗೂ, ಹೋಲಿಸಿದ ಕವಿ ಚಿರಯೌವ್ವನೆಯಾದ ಭೂಮಿಯಲ್ಲಿ 'ನಿನ್ನ ನಿಜ ಪ್ರಾಯ ಯಾವುದು' ಎಂದು ಕೇಳುವ ಪ್ರಶ್ನೆ ಮಾರ್ಮಿಕವಾಗಿದೆ.

ಗಗನದೇವಿಯ ಹಣೆಗೆ ಚಂದಿರನ ಬೊಟ್ಟು
ರಂಗೋಲಿಗಾಗಿ ಬೆಳದಿಂಗಳ ಹಿಟ್ಟು
ಬಾಂದಳವ ಸಿಂಗರಿಸಿದವರಾರು ತಂಗಿ?
ಹೇಳಿದರೆ ಒಲಿಸುವೆನು ಚಿಕ್ಕೆಗಳ ಅಂಗಿ [೩೭]

ಈ ಚುಟುಕು ಒಂದು ಬಗೆಯ ಅವರ್ಣನೀಯವಾದ ಆನಂದದ ಸೀಮೆಗೆ ಕರೆದೊಯ್ಯುತ್ತದೆ, ರೂಪಕದೊಂದಿಗೆ ರಸಾನುಭಾವವುಂಟಾಗಿಸುತ್ತದೆ. ಚಂದಿರನೆ ಹಣೆಯ ಬೊಟ್ಟಾಗಿ, ಬೆಳದಿಂಗಳು ರಂಗೋಲೆಯ ಹಿಟ್ಟಾಗಿ, ಆಕಾಶಮಾತೆ ಶೃಂಗಾರಗೊಂಡಿದ್ದಾಳೆ. ಹೀಗೆ ಶೃಂಗರಿಸಿದವರು ಯಾರೆಂದು ಹೇಳಿದರೆ ತಂಗಿಗೆ ಚಿಕ್ಕೆಗಳ ಅಂಗಿಯನ್ನು ಹೊಲಿಸುವ ಕವಿಯ ಸಾಹಸ ರೋಚಕಮಯವಾಗಿದೆ.

ಇದೇ ಕವಿ 'ಬೂರಲ ಮರ'ದ ಹೂ ಸಮೃದ್ಧಿಯನ್ನು ಬಸುರಾದ ಹೆಣ್ಣಿಗೆ ಹೋಲಿಸಿದ್ದಾರೆ. ಹೂ ಬಿಟ್ಟ ವೃಕ್ಷವನ್ನು ನಗ್ನ ಹೆಣ್ಣಾಗಿ ಕಂಡಿರುವುದು ಕವಿಯ ವೈಶಿಷ್ಟ್ಯ.

ಮುಡಿ ತುಂಬ ನಡು ತುಂಬ ಹೂಗಳನ್ನು ತೊಟ್ಟು
ನಗ್ನವಾಯಿತು ವೃಕ್ಷ ವಸನವನು ಬಿಟ್ಟು
ಬೂರಲವು ಬಸುರಾಗೆ ಮೈತುಂಬ ತತ್ತಿ
ರೆಕ್ಕೆಗಳು ಬಲಿತೊಡನೆ ಹಾರುತಿದೆ ಹತ್ತಿ. [೩೮]

ತಾಯಿ ಮಕ್ಕಳ ಸಂಬಂಧವನ್ನು ವೃಕ್ಷ ಪ್ರತೀಕದೊಂದಿಗೆ ಅರುಹಿದ್ದಾರೆ. ಚಿಕ್ಕಂದಿನಲ್ಲಿ ತಾಯಿ ಮಡಿಲು ಆಶ್ರಯಿಸಿ ಬೆಳೆಯುವ ಮಕ್ಕಳು. ಮೈಕೈ ತುಂಬಿಕೊಂಡು

ಬಲಿಷ್ಠರಾಗಿ ಬೆಳೆದಾಗ ತಾಯಿಯಿಂದ ದೂರ ಸರಿಯುತ್ತಾರೆ. ಇದನ್ನು ಋತುಮಾನದ ಹಿನ್ನೆಲೆಯಲ್ಲಿ ಬೂರಲು ಮರದಲ್ಲಾದ ಬದಲಾವಣೆಯೊಂದಿಗೆ ಸಮೀಕರಿಸಿದ್ದಾರೆ.

ಇದೊಂದು ಕಾವ್ಯಮಯವಾದ ಚೌಪದಿ. ಬೂರಲವು ಬಸುರಾಗಿ ಮೈತುಂಬ ತತ್ತಿ. ಅದು ಬಲಿತಾಗ ಹತ್ತಿಯಾಗಿ ಗಾಳಿಯಲ್ಲಿ ಹಾರುತ್ತೆ ಆ ಮರದ ಸಂತತಿ. ಹೀಗೆ ನಿಸರ್ಗದ ನಾನಾ ಮಗ್ಗುಲುಗಳನ್ನು ವಿಶಿಷ್ಟವಾಗಿ ದರ್ಶಿಸಿರುವ ದೇಸಾಯಿಯವರ ಬಗ್ಗೆ ಬಿ.ಎ.ಸನದಿಯವರು, "ಸೃಷ್ಟಿ ಸೌಂದರ್ಯಾನುಭವವು ಕವಿ ಹೃದಯದಲ್ಲಿ ಹೀಗೆ ಹದಗೊಂಡು ಹೊರ ಹೊಮ್ಮಿದಾಗ ರಸಿಕನ ಮನಸ್ಸಿಗೆ ಕಚಗುಳಿಯಿಟ್ಟಂತಾಗುತ್ತದೆ. ಪ್ರಕೃತಿ ಸೌಂದರ್ಯದೊಡನೆ ಮನುಷ್ಯ ಪ್ರಕೃತಿಯೂ ಸಮಾಗಮ ಹೊಂದಿ ಹೊರಸೂಸುವ ಇಂತಹ ರಸಮಯ ಸಾಲುಗಳು ದಿನಕರ ದೇಸಾಯಿಯವರ ಭಾವುಕ ಹೃದಯಕ್ಕೆ ಆಗೀಗ ಕನ್ನಡಿ ಹಿಡಿಯುತ್ತವೆ. ಆದರೆ ಅವರ ಚುಟುಕುಗಳಲ್ಲಿ ಅಪರೂಪಕ್ಕೊಮ್ಮೆಯೇ ಒದಗಿ ಬರುತ್ತದೆ. ಯಾಕೆಂದರೆ ಆ ಕವಿಗೆ ಇಂತಹ ಮಧುರ ಚಿತ್ರ ಸೃಷ್ಟಿಯ ಕಡೆಗೆ ಗಮನ ಕಡಿಮೆ"[೩೯] ಎಂದು ಹೇಳಿರುವ ಮಾತು ಗಮನಿಸುವಂತಿದೆ.

ತನ್ನ ಕಂದನನ್ನು ಬದುಕಿನ ಹೋರಾಟಕ್ಕೆ ಸಿದ್ಧಗೊಳಿಸುವುದು ನಿಸರ್ಗ ತಾಯಿಯದಾಗಿದೆ. ಬದುಕಿನಲ್ಲಿ ಎದುರಾಗುವ ಪ್ರತಿರೋಧಗಳಿಗೆ ಎದಿಯೊಡ್ಡಿ ನಿಲ್ಲುವ ಆತ್ಮವಿಶ್ವಾಸ ಭೂತಾಯಿ ಕೊಡುಗೆ ಎಂಬುದನ್ನು ಕೆ.ಎಸ್. ನರಸಿಂಹಸ್ವಾಮಿ ತಮ್ಮ 'ಬೆಳಗಿನ ಮಂಜು' ಕವಿತೆಯಲ್ಲಿ ಚಿತ್ರಿಸಿದ್ದಾರೆ.

. . . .
ತಾಯಿ ಮಕ್ಕಳ ಆಟ ನಡೆಯುತಿದೆ ಭೂಮಿಯಲಿ;
ತಂದೆ ಬೆಳಕಿನ ಕಡೆಗೆ ತಪ್ಪು ಹೆಜ್ಜೆ
ಹಿಮದ ತೆರೆ, ಬಿಸಿಲ ತೆರೆ ಹೆಜ್ಜೆ ಹೆಜ್ಜೆಯ ನಡುವೆ;
ತಾಯಿ ಕಟ್ಟಿದ ಗೆಜ್ಜೆ ದಿಟ್ಟ ಕವಿತೆ.
ಗೆದ್ದಲಿನ ನೆಲ ಮನೆಗೆ ಹಾವು ಬಂತು;
'ನೀರ ಮೇಗಣ ಗುಳ್ಳೆ ಬದುಕೆಂದಿತು'
ಈಹದ ಪರಿಮಳವಿರದ ಹಾದಿ ಹಿಡಿದು
ಬದುಕು ದುರ್ಬಲವಾಯಿತು
ಕವಿತೆ ನೀರಸವಾಯಿತು.[೪೦]

ಭೂಮಿತಾಯಿ ತನ್ನ ಮಕ್ಕಳನ್ನು ಬೆಂಕಿಯಲ್ಲಿ, ನೀರಿನಲ್ಲಿ ಎಸೆದು ಕಟುತರವಾದ ರೀತಿಯಲ್ಲಿ ಈ ಬದುಕಿನ ಹೋರಾಟಕ್ಕೆ ಸಿದ್ಧಗೊಳಿಸುತ್ತಿದ್ದಾಳೆ. ಎಲ್ಲಾ ರೀತಿಯ ಅನುಭವಗಳಿಗೂ ವ್ಯಕ್ತಿತ್ವವನ್ನೊಡ್ಡಿ ಬೆಳೆಯಲು ಅವಕಾಶ ಕಲ್ಪಿಸುತ್ತಿದ್ದಾಳೆ. ಆದರೂ ಮಾನವ ವಿಕಾಸಕ್ಕೆ ಅನೇಕ ಅಡ್ಡಿ ಆತಂಕಗಳಿವೆ. ನೆಲವನ್ನು ನಂಬಿ ನಡೆಯುವ ಹಾದಿಯಲ್ಲಿ ಯಶಸ್ಸು ಸಿಗುತ್ತದೆನ್ನುವ ನಂಬಿಕೆಗೆ ಪ್ರತಿಯಾಗಿ ಬೇರೆ ಬೇರೆ ತತ್ವಗಳು ಎದುರಾಗಿ ವಿರೋಧವನ್ನೊಡ್ಡುತ್ತವೆ. ಮನುಷ್ಯನ ಕ್ರಿಯಾಶೀಲತೆಯನ್ನು ನಿಷ್ಕ್ರಿಯಗೊಳಿಸುತ್ತವೆ. ಕೆ.ಎಸ್.ಎನ್. ಅದನ್ನೆ ಇಲ್ಲಿ ಹೇಳಿದ್ದಾರೆ.

ಭೂಮಿತಾಯಿ ಮನುಷ್ಯನ ಕ್ರಿಯಾಶೀಲತೆಯನ್ನು ಅಷ್ಟರಮಟ್ಟಿಗೆ ಎಚ್ಚರಗೊಳಿಸಿ ನೆಲಮನೆ ಯೊಂದನ್ನು ಸಿದ್ಧಪಡಿಸಿದ್ದಾಳೆ. ಇಂತಹದನ್ನು ಬೋಧಿಸುವ ಕಾವ್ಯವೂ ನೀರಸ ಕಾವ್ಯವೆಂಬುದು ಇವರ ಅಭಿಪ್ರಾಯ.

ಕುರ್ತಕೋಟಿಯವರು ಹೇಳುತ್ತಾರೆ: "ಕೆ.ಎಸ್.ಎನ್ ಅವರ – ಶಿಲಾಲತೆ ಮತ್ತು ಮನೆಯಿಂದ ಮನೆಗೆ – ಎರಡು ಸಂಗ್ರಹಗಳಲ್ಲಿ ಭೂಮಿಯನ್ನು ವರ್ಣಿಸುವ ಅನೇಕ ಕವಿತೆಗಳಿವೆ. ತಾಯಿ ಮಕ್ಕಳ ಸಂಬಂಧದಲ್ಲಿ ನೆಲ ಹಾಗೂ ಮನುಷ್ಯನ ಸಂಬಂಧ ನಿರೂಪಿತವಾಗಿದೆ. ಭೂಮಿ ತನ್ನ ಮಗನಾದ ಮನುಷ್ಯನನ್ನು ಅರಣ್ಯಗಳಲ್ಲಿ ಪೋಷಿಸಿ, ಬೆಳೆಸಿದ ಅಗ್ನಿಕುಮಾರಿ. ಮಗ ಸಾಹಸ ಪ್ರಿಯ, ಆದರೆ ದೇವರು ಮಾತ್ರ 'ತೊರೆದ ಗಂಡ'. ಈ ಸಂಬಂಧ – ರೂಪಕದಲ್ಲಿ ಭಾವುಕತೆ ಬೇಕಾದಷ್ಟಿದ್ದರೂ ಅದು ತಾತ್ವಿಕವಾಗಿಲ್ಲ. ಹಿಮದ ತೆರೆ, ಬಿಸಿಲ ತೆರೆ, ಹೆಜ್ಜೆ ಹೆಜ್ಜೆಯ ನಡುವೆ, ತಾಯಿ ಕಟ್ಟಿದ ಕವಿತೆ ದಿಟ್ಟ ಕವಿತೆ, ಬಂದ ಬಾಗಿಲು ಮಣ್ಣು, ಬಿಡುವ ಬಾಗಿಲು ಮಣ್ಣು ನಡುವೆ ಕಾಪಾಡುವ ತಾಯಿಯ ಕಣ್ಣು – ಇಂತಹ ಸಾಲುಗಳಲ್ಲಿ ಭೂಮಿಯನ್ನು ಕುರಿತಾದ ಭಾವ ಪರವಶತೆ ಮಾತ್ರ ಕಾಣುತ್ತದೆ. ಬೇಂದ್ರೆ ಹಾಗೂ ಮಧುರ ಚೆನ್ನರ ಭೂಮಿಗೀತಗಳಲ್ಲಿಯಂತೆ ದೃಢ ವಿಶ್ವಾಸದ ದಾರ್ಶನಿಕ ಅನುಭವದ ಮೊಳಗಿಲ್ಲ. ಹೋಲಿಕೆಗಾಗಿ ಈ ಮೂರೂ ಕವಿಗಳು ಬರೆದಿರುವ ಭೂಮಿಗೀತೆಗಳು ಈ ಕಾವ್ಯ ಭಾಗಗಳನ್ನೆ ಪರೀಕ್ಷಿಸಬಹುದು.

ಹೂವೀನ ಮಕರಂದ! ಮಣ್ಣೀನ ಮಾಧುರ್ಯ
ಹಾಲ್ಹೀಂಗ ನಿನ್ನ ಮನ ಹ್ಯಾಂಗ! ಏಳಮ್ಮ
ಮಲಗಿರುವ ತಾಯಿ ಪೃಥಿವೀ.

– ಮಧುರ ಚೆನ್ನ

ಮೈ ತುಂಬ ಬಾಯಿ ನೀನು
ತುಟಿ ಮುದ್ದು ನನ್ನ ಪಾಲು
ಎದೆತುಂಬ ಮೊಲೆಯು ನಿನಗೆ
ಮೈ ತುಂಬ ನನಗೆ ಹಾಲು
. . . .
ಓ ತಾಯಿ ನೆಲವೇ ನೆಲವೇ
ತಂಬೆಳಕು ಹೊಮ್ಮಲಿನ್ನು

– ಅಂಬಿಕಾತನಯ ದತ್ತ.

ನದಿಗಳಲ್ಲಿ ನಿನ್ನೆದೆ ಹಾಲು
ಬೆಟ್ಟಸಾಲು ನಿನ್ನ ಹೆಗಲು
ಹಗಲು ನೀನು ನಗಲು
ಇರುಳು ನಿನ್ನ ನೆರಳು
. . . .
ನಿನ್ನ ದುಡಿಮೆ ನಿಶ್ಶಬ್ದ ಪ್ರತಿಮೆ
ಚಲುವೆಲ್ಲ ನಿನಗೆ ನೋವು

– ಕೆ.ಎಸ್.ನರಸಿಂಹ ಸ್ವಾಮಿ

ಈ ಮೂರು ಉದಾಹರಣೆಗಳಲ್ಲಿಯ ಸಾಮ್ಯವನ್ನು ಕುರಿತು ಹೆಚ್ಚು ಹೇಳಬೇಕಾಗಿಲ್ಲ. ಕಲೆಗಾರಿಕೆಯ ದೃಷ್ಟಿಯಿಂದ ಯಾವುದು ಯಾವುದಕ್ಕೂ ಕಡಿಮೆ ಇಲ್ಲ. ಆದರೆ ಬೇಂದ್ರೆ ಹಾಗೂ ಮಧುರ ಚೆನ್ನರಲ್ಲಿಯ ಶ್ರದ್ಧೆ ಹಾಗೂ ತಾತ್ವಿಕ ತಿಳುವಳಿಕೆ ಕೆ.ಎಸ್. ನರಸಿಂಹಸ್ವಾಮಿಯವರ ಕಾವ್ಯದಲ್ಲಿಲ್ಲ. ಕವಿ ಕೇವಲ ಭಾವನಾವಶತೆಯ ಮೂಲಕ ಭೂಮಿಗೆ ಅಂಟಿಕೊಂಡಿದ್ದಾನೆಂಬುದು ತಿಳಿಯುವಂತಿದೆ." [೪೧]

ಈ ಮಾತು ಒಪ್ಪದೆ ಕೆ.ಎಸ್.ಎನ್.ರವರ ಭೂಮಿ ಕುರಿತಾದ ಭಾವಪರವಶತೆಯ ಬಗ್ಗೆ ನರಹಳ್ಳಿ ಬಾಲಸುಬ್ರಮಣ್ಯ ಹೀಗೆ ಹೇಳುತ್ತಾರೆ: "ಕುರ್ತಕೋಟಿಯವರ ಈ ಗ್ರಹಿಕೆ ಸಮಂಜಸವೆನ್ನಿಸುವುದಿಲ್ಲ. ಅವರ ಈ ಗ್ರಹಿಕೆಯಲ್ಲಿನ ಮುಖ್ಯ ಸಮಸ್ಯೆ ಎಂದರೆ ವಿವರಣೆಯ ಕೊರತೆ. ಬೇಂದ್ರೆ, ಮಧುರ ಚೆನ್ನರ ಕವನ ಭಾಗಗಳನ್ನು ಉದ್ಧರಿಸಿ ಅವುಗಳ ಜೊತೆಗೆ ಕೆ.ಎಸ್.ಎನ್.ರವರ ಕವಿತೆಯ ಭಾಗವೊಂದನ್ನು ಹೋಲಿಸುವ ಕುರ್ತಕೋಟಿಯವರು ಕಡೆಯಲ್ಲಿ 'ಬೇಂದ್ರೆ ಹಾಗೂ ಮಧುರ ಚೆನ್ನರಲ್ಲಿಯ ಶ್ರದ್ಧೆ ಹಾಗೂ ತಾತ್ವಿಕ ತಿಳುವಳಿಕೆ ಕೆ.ಎಸ್.ಎನ್.ರವರ ಕಾವ್ಯಗಳಲ್ಲಿಲ್ಲ' ಎಂಬ ನಿರ್ಣಯವನ್ನು ತಲುಪಿ ಬಿಡುತ್ತಾರೆ. ಆದರೆ ಹೇಗೆ ಎಂಬ ವಿವರಣೆ ನಮಗಿಲ್ಲಿ ಸಿಗುವುದು ಇಲ್ಲ. ಹೀಗಾಗಿ ಕುರ್ತಕೋಟಿಯವರ ಮಾತುಗಳು ಕೇವಲ ಅಭಿಪ್ರಾಯದ ಮಟ್ಟದಲ್ಲಿ ನಿಲ್ಲುತ್ತವೆಯೇ ಹೊರತು ಅವುಗಳೊಡನೆ ನಾವು ಸಂವಾದ ನಡೆಸುವುದು ತೊಡಕಿನದಾಗುತ್ತದೆ. ಅಭಿಪ್ರಾಯವಾಗಿಯೂ ನಾವು ಕುರ್ತಕೋಟಿಯವರ ಮಾತುಗಳನ್ನು ಒಪ್ಪಲಾಗುವುದಿಲ್ಲ. ಹಾಗೆ ನೋಡಿದರೆ ಕೆ.ಎಸ್.ಎನ್.ರವರ ಕಾವ್ಯ ದರ್ಶನ, ಅವರ ಕಾವ್ಯದ ತಾತ್ವಿಕತೆ ಸ್ಪಷ್ಟವಾಗಿ ನಮಗೆ ಕಾಣಿಸುವುದು ಅವರ ಭೂಮಿ ಸಂಬಂಧಿತ ಕವಿತೆಗಳಲ್ಲಿಯೇ. ಡಿ.ಆರ್. ನಾಗರಾಜುರವರು ತಮ್ಮ 'ಶಕ್ತಿಶಾರದೆಯ ಮೇಳ' ಕೃತಿಯಲ್ಲಿ 'ಕೆ.ಎಸ್. ನರಸಿಂಹಸ್ವಾಮಿಯವರ ಕಾವ್ಯದಲ್ಲಿ ಭೂಮಿ: ತುಳುಕಿರುವ ಮೃತ್ತಿಕೆಯ ಪ್ರೀತಿ' ಎಂಬ ಭಾಗದಲ್ಲಿ ಕೆ.ಎಸ್.ಎನ್.ರವರ ಕಾವ್ಯ ದರ್ಶನ ಅವರ ಭೂಮಿ ಸಂಬಂಧಿ ಕವಿತೆಗಳಲ್ಲಿ ಹೇಗೆ ವ್ಯಕ್ತವಾಗಿದೆ ಎಂಬುದನ್ನು ವಿವರಿಸಿದ್ದಾರೆ. ಆದರೆ ನಾಗರಾಜರವರು ಕುರ್ತಕೋಟಿಯವರ ಆಪಾದನೆಯನ್ನು ಗಮನಿಸಿಯೇ ಇಲ್ಲವೆಂಬಂತೆ ತಮ್ಮ ವಿಶ್ಲೇಷಣೆ ನಡೆಸಿರುವುದು ಮಾತ್ರ ಆಶ್ಚರ್ಯವಾಗಿ ತೋರುತ್ತದೆ.

ಕುರ್ತಕೋಟಿಯವರು ಹೇಳುವಂತೆ ಕೆ.ಎಸ್.ಎನ್.ರವರು ಭೂಮಿಯ ಬಗ್ಗೆ ತಾಳುವ ನಿಲುವು ಭಾವಪರವಶತೆಯ ಮೂಲಕ ಬಂದದ್ದಲ್ಲ. ಭೂಮಿ – ಮನುಷ್ಯನ ಬಗ್ಗೆ ಅವರು ಆಳವಾಗಿ ಚಿಂತಿಸಿದ್ದಾರೆ. ಮಾನವ ಚರಿತ್ರೆಯ ಹಿನ್ನೆಲೆಯಲ್ಲಿ ಭೂಮಿ ಮನುಷ್ಯ ಸಂಬಂಧವನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ. ಈ ನೆಲದ ಬಗೆಗಿನ ನಿಷ್ಠೆಯನ್ನು, ಭೂಮಿಯ ಬಗೆಗಿನ ಶ್ರದ್ಧೆಯನ್ನು ಅನುಮಾನಕ್ಕೆಡೆ ಇಲ್ಲದಂತೆ ನಿರೂಪಿಸಿರುವ ಕೆ.ಎಸ್. ನರಸಿಂಹ ಸ್ವಾಮಿಯವರು ಭೂಮಿಯ ಬೇರೆ ಬೇರೆ ಮುಖಗಳನ್ನು ತಮ್ಮ ಕಾವ್ಯದಲ್ಲಿ ಚಿತ್ರಿಸಿದ್ದಾರೆ. 'ಭೂಮಿಗೀತ' ಕವಿತೆಯಲ್ಲಿ ಕವಿ ಭೂಮಿತಾಯಿಯ ಇನ್ನೊಂದು ಮುಖವನ್ನು ಕಾಣುತ್ತಾರೆ.

ಬಾಳಿನ ಈ ಆಸೆಗೆಲ್ಲ
ಮಣ್ಣಿನ ನೆರವಿಲ್ಲ, ಇಲ್ಲ.
ಹಾಡಿನ ಈ ತಂಪಿಗೆಲ್ಲ

ಮಣ್ಣಿನ ಒಲವಿಲ್ಲ, ಇಲ್ಲ.

. . . .

ಜ್ವಾಲಾಮುಖಿ ಚಂದ್ರಸುಖಿ
ಸೂರ್ಯ ಪ್ರಿಯೆ, ರುದ್ರಸುಖಿ
ಜಗನ್ಮಾಯೆ ಇವಳುತಾಯೆ? ಮಣ್ಣ ಹರಡಿ ಮಲಗಿರುವಳು;
ಗಳಿಗೆಯಲ್ಲಿ ರಾಜ್ಯಎದ್ದು ರಾಜ್ಯಬಿದ್ದು ಹೊರಳುತಿರಲು.

– ಭೂಮಿಗೀತ

(ಭೂಮಿಗೀತ, ಪುಟ, ೧೨೮, ಮಲ್ಲಿಗೆಯ ಮಾಲೆ)

ಭೂಮಿಯ ಈ ರೌದ್ರ ಮುಖವನ್ನು ಕವಿ ಆಶ್ಚರ್ಯದಿಂದ ಗಮನಿಸುತ್ತಿದ್ದಾರೆ.

. . . .

ಬೆಂಕಿಯಲಿ ನೀರಿನಲಿ ತನ್ನ ಮಕ್ಕಳನೆಸೆದು.
ಈಜು ಕಲಿಸುವ ನೆಲದ ತಾಯಿ – ನೋಟ
ತಾಯಿಮಕ್ಕಳ ಆಟ ನಡೆಯುತಿದೆ ಭೂಮಿಯಲಿ;
ತಂದೆ – ಬೆಳಕಿನ ಕಡೆಗೆ ತಪ್ಪು ಹೆಜ್ಜೆ.
(ಬೆಳಗಿನ ಮಂಜು, ಅದೇ ಪುಟ: ೩೩)

ಎಂಬ ನಿಲುವಿಗೂ, ಭೂಮಿ ತಾಯಿಯ ಈ ಮುಖಕ್ಕು ಇರುವ ವ್ಯತ್ಯಾಸವನ್ನು ಗಮನಿಸಿ. ಕುರ್ತಕೋಟಿಯವರು ಹೇಳುವಂತೆ ಕೆ.ಎಸ್.ಎನ್.ರವರದು, ಭೂಮಿಯ ಬಗೆಗೆ ಕೇವಲ ಭಾವಪರವಶತೆಯ ಸಂಬಂಧ ಎನ್ನುವುದಾದರೆ ಅವರಿಗೆ ಈ ದ್ವಂದ್ವ ಕಾಡುವ ಪ್ರಶ್ನೆಯೇ ಬರುತ್ತಿರಲಿಲ್ಲ.

'ಪ್ರಕೃತಿ' ನಿಯಮವನ್ನು ಮೀರಿದರೆ ಭೂಮಿತಾಯಿ ಜ್ವಾಲಾಮುಖಿ ಯಾಗುತ್ತಾಳೆನ್ನುವ ಅರಿವು ಕವಿಯ ಮನಸ್ಸು ತುಂಬುತ್ತದೆ. ಆ ಮಿತಿಯನ್ನು ಮೀರಿದರೆ ಇವಳು ಅಪ್ಪಳಿಸುತ್ತಾಳೆ.

ದಿನ ದಿನವೂ ಇದೇ ಹಾಡು,
ನೆಲದಾಸೆಗೆ ನರಬಲಿ.
ಎಳೆಯ ಬದುಕು, ಬೆಳೆದ ಬದುಕು
ಏನಿದ್ದೂ ತಬ್ಬಲಿ.
(ಭೂಮಿಗೀತ. ಪು: ೧೨೯. ಮೇಲಿನಂತೆ.)

ಕೆ.ಎಸ್.ಎನ್ ರವರ 'ನೆಲದಾಸೆಗೆ ನರಬಲಿ' ಎಂಬ ಮಾತಿನ ಹಿಂದಿನ ಭಾವ ಹಾಗು ಈ ಭಾಗದಲ್ಲಿ ಬರುವ ಗಳಿಗೆಯಲ್ಲಿ 'ರಾಜ್ಯ ಎದ್ದು ರಾಜ್ಯ ಬಿದ್ದು ಹೋಗುತ್ತಿರಲು' ಎಂಬ ಸಾಲುಗಳು ನಮಗೆ ಬೇಂದ್ರೆಯವರ, 'ಮೊದಲಗಿತ್ತಿ' ಕವಿತೆಯನ್ನು ನೆನಪಿಸುತ್ತವೆ. ಚರಿತ್ರೆಯ ದುರಂತ ಮುಖವನ್ನು ದಟ್ಟವಾಗಿ ಚಿತ್ರಿಸುವ ಆ ಕವಿತೆಯಲ್ಲಿ ಬೇಂದ್ರೆಯವರು ಮನುಷ್ಯನ ನೆಲದಾಸೆ, ರಾಜತ್ವದ ಕ್ರೂರ ಶಕ್ತಿ – ಹೇಗೆ ಮಾನವ ಇತಿಹಾಸದಲ್ಲಿ ರಕ್ತದ ಹೊಳೆಗೆ ಕಾರಣವಾಗಿದೆ ಎಂಬುದನ್ನು ವಿವರಿಸುತ್ತಾರೆ.

ಮೊದಲಗಿತ್ತಿಯಂತೆ ಮೆರೆಯುವಿಯೇ ತಾಯಿ

ಮೊದಲಗಿತ್ತಿಯಂತೆ । ಪ ।
ಹಿಂಡಾಗಿ ಪುಂಡರು ಅಂಡಲೆಯಲು ನಿನ್ನ
ನೆತ್ತರು ಒರೆಹಚ್ಚಿ ನೋಡಿರುವೆ
ಪಾತಾಳ ಕಂಡರು ಕೆಲ ತಾಯಿಗ್ಗಂಡರು
ಅವರನ್ನು ಮಡಿಲಾಗೆ ಮಲಗಿಸಿದೆ

. . . .

ನಿನ್ನ ತೇಜದ ಮುಂದೆ ರಾಜ ತೇಜವು ಕೂಸು
ಮೊದಲಗಿತ್ತಿಯು ನೀನು ಮೆರೆಯುತಿಹೆ
(ಮೊದಲಗಿತ್ತಿ. ಪು:೪೧. ನಾದಲೀಲೆ, ಅಂಬಿಕಾತನಯದತ್ತ.)

ರಾಜರನ್ನು 'ತಾಯಿಗ್ಗಂಡ'ರೆಂದು ಕರೆಯುವ ಬೇಂದ್ರೆಯವರು ಇಲ್ಲಿ ರಾಜತ್ವದ ಬಗ್ಗೆ ತೀಕ್ಷ್ಣ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಕೆ.ಎಸ್.ನ. ಅವರಲ್ಲಿ ಪ್ರತಿಭಟನೆಯ ದನಿ ಇಷ್ಟೊಂದು ಪ್ರಕಾರವಾಗಿ ನಮಗೆ ಕಾಣುವುದಿಲ್ಲವಾದರೂ ಮಾನವ ಚರಿತ್ರೆಯ ದುರಂತದ ದರ್ಶನವನ್ನು ಅವರು ತಮ್ಮ ಕವಿತೆಯಲ್ಲಿ ಪರಿಣಾಮಕಾರಿಯಾಗಿಯೆ ಅಭಿವ್ಯಕ್ತಿಸಿದ್ದಾರೆ ಎಂಬುದನ್ನು ನಾವು ಗುರುತಿಸ ಬಹುದಾಗಿದೆ".[೪೨] ಇಲ್ಲಿನ ವಾದ ಗಮನಿಸಿದಾಗ ನರಹಳ್ಳಿಯವರ ವಿಶ್ಲೇಷಣೆ ಮಹತ್ವ ಹೊಂದಿದೆ. ಆದರೆ ಮಧುರ ಚೆನ್ನ ಮತ್ತು ಬೇಂದ್ರೆಯವರು ಬಂದ ಪ್ರಾದೇಶಿಕತೆ ಮತ್ತು ಕಾಲ ಘಟ್ಟಗಳ ಜೊತೆಗೆ ಅವರ ಮೇಲೆ ಪ್ರಭಾವ ಬೀರಿದ ಅರವಿಂದರ ಆಧ್ಯಾತ್ಮಿಕ ನೆಲೆಯ ಚಿಂತನೆಗಳು ಅವರ ಕಾವ್ಯದಲ್ಲಿ ಒಡಮೂಡಿದರೆ; ಇವರಿಬ್ಬರಿಗಿಂತಲೂ ಭಿನ್ನ ನೆಲೆಯಿಂದ ಬಂದ ನರಸಿಂಹ ಸ್ವಾಮಿಯವರ ವೈಚಾರಿಕ ಹಿನ್ನೆಲೆಯಲ್ಲಿ ಅವರ ಕಾವ್ಯಗಳು ಮೂಡಿಬರುತ್ತವೆ.

ಡಿ.ಆರ್.ಎನ್.ರಲ್ಲಿ ಆಧುನಿಕ ಚಿಂತನೆ ವ್ಯಕ್ತವಾದರೆ ಕೀರ್ತಿನಾಥರದು ಆತುರದ ತೀರ್ಮಾನವಾಗಿದೆ. ಕೀರ್ತಿನಾಥರ ನಿರ್ಣಯ ವಾಕ್ಯಕ್ಕೆ ನರಹಳ್ಳಿಯವರು ಎತ್ತುವ ಆಕ್ಷೇಕಣೆ ಸರಿ ಎನಿಸಿದರೂ ಕಾಲಮಾನದ ಅಂತರವನ್ನು ಗಮನಿಸಿದಾಗ ಅಭಿಪ್ರಾಯಗಳಲ್ಲಿ ವ್ಯತ್ಯಾಸಗಳು ಕಂಡುಬರುವುದು ಅನುಭವ ಸತ್ವವನ್ನು ಅವಲಂಭಿಸಿರುತ್ತದೆ. ಮಧುರ ಚೆನ್ನ, ಅಂಬಿಕಾತನಯ ದತ್ತರ ಆಧ್ಯಾತ್ಮಿಕ ಚಿಂತನೆಗಳು ನರಸಿಂಹ ಸ್ವಾಮಿಯವರಲ್ಲಿ ಜೀವನದ ಬದ್ಧತೆಯಾಗಿ ಕಾಣುತ್ತವೆ. ಇಬ್ಬರಲ್ಲಿ ಆಧ್ಯಾತ್ಮಿಕ ಕವಿತೆಯ ಒಳಹುಗಳು ಕಾಣದೊರೆಯುತ್ತವೆ. ನರಸಿಂಹ ಸ್ವಾಮಿಯವರಲ್ಲಿ ಜೀವನದ ಶ್ರದ್ಧೆ ಮುಖ್ಯವಾಗುತ್ತದೆ. ಕೋಮಲವಾದ ಹಾಗೂ ಸುಕುಮಾರ ಭಾವಗಳಿಂದ ಕಾವ್ಯ ರಚನೆ ಪ್ರಾರಂಭಿಸಿದ ನರಸಿಂಹ ಸ್ವಾಮಿಯವರು ಹಂತಹಂತವಾಗಿ ಜೀವಪರವಾದ ಧೋರಣೆಯನ್ನು ಬಳಸಿಕೊಂಡಿದ್ದು ಕಂಡುಬರುತ್ತದೆ. ಬದಲಾದ ಕಾವ್ಯಮಾರ್ಗದ ಮಿಂಚುಗಳು ನರಸಿಂಹ ಸ್ವಾಮಿಯವರಲ್ಲಿ ಪ್ರಭಾವ ಬೀರಿರಬಹುದು. ಮಧುರ ಚೆನ್ನರದು ಪಾರಂಪರಿಕ ಶರಣ ಧರ್ಮ ಶ್ರದ್ಧೆಯ ಆಧ್ಯಾತ್ಮಿಕ ಪ್ರಭಾವ ವಲಯದಲ್ಲಿಯೇ ಚಿಂತನೆಗಳನ್ನು ಬೆಳೆಸಿಕೊಂಡವರು. ಬೇಂದ್ರೆಯವರು ವೈಧಿಕ ಪರಂಪರೆಯ ಸಾಲಿನಲ್ಲಿ ನಡೆದುಬಂದವರು. ನರಸಿಂಹ ಸ್ವಾಮಿಯವರು ಬದುಕನ್ನು ತಮ್ಮದೇ ಕಣ್ಣುಗಳಿಂದ ನೋಡಿದವರು. ಈ ಹಿನ್ನೆಲೆಯಲ್ಲಿ ಮೂರು ಹಿರಿಯ ಕವಿಗಳ ಚಿಂತನೆಯ ಭಿನ್ನತೆಯನ್ನ ಗ್ರಹಿಸುವುದು ಸರಿ ಎನಿಸುತ್ತದೆ.

'ಪಾತಾಳ ಕಂಡರೂ ಕೆಲ ತಾಯಿಗ್ಗಂಡರು' – ಈಡಿಪಸ್ ಕಾಂಪ್ಲೆಕ್ಸ್ ಎಂಬ ಅನುಮಾನ ಹುಟ್ಟುತ್ತದೆ. ರಾಜ ಸತ್ತೆ ಹಿನ್ನೆಲೆಯಲ್ಲಿ ಈ ವ್ಯಾಖ್ಯಾನ ಮಾಡುವುದಾದರೆ ಭೂಮಿಯನ್ನು ತನ್ನದಾಗಿಸಿಕೊಳ್ಳಬೇಕೆಂಬ ದುರಾಸೆ ಇಂದು ನಿನ್ನೆಯದಲ್ಲ ಹಿಂದಿನಿಂದಲೂ ನಡೆದುಬಂದಿದೆ. ಇದಕ್ಕೆ ನರಹಳ್ಳಿಯವರ ವ್ಯಾಖ್ಯಾನ ಸಮರ್ಪಕವಾಗಿದೆ.

ನಮ್ಮನ್ನು ಹೆತ್ತು ಹೊತ್ತು ಪೊರೆವ ಭೂಮಿತಾಯಿಯಲ್ಲಿ ವಾತ್ಸಲ್ಯವಡಗಿದೆ. ಆದ್ದರಿಂದ ಆಕೆ ಮಾಯೆಯಲ್ಲ. ಸಹನೆಯ ಸ್ವರೂಪಿ. ನಾವು ಮಾತ್ರ ಮಕ್ಕಳಲ್ಲ. ಗಿರಿ, ವನ, ನದಿ, ಬೆಟ್ಟವೇ ಮೊದಲಾದ ಎಲ್ಲಾ ಜೀವಗಳಿಗೂ ಜನನಿ. ಆದರೂ ತನ್ನ ಒಡಲಲಿ ಬೆಂಕಿ ತುಂಬಿಕೊಂಡಿದ್ದಾಳೆ ಎಂದು ತಮ್ಮ ಕವಿತೆ "ಶಿಲೆಗೆ ಹೂವಿನ ವಂಕಿ"ಯಲ್ಲಿ ತಿಳಿಸಿದ್ದಾರೆ.

ಹೊಟ್ಟೆ ಒಳಗಿನೆಷ್ಟು ಬೆಂಕಿ;
ಶಿಲೆಗೆ ಹೂವಿನ ವಂಕಿ.
ಹಕ್ಕಿಗೊರಳಿನ ತುಂಬ ಹಾಡಿನ ಹೊಗೆ;
ಸಿಡಿಲು ಸಿಟ್ಟಿನ ನೋಟ;
ಮಿಂಚು ಬೆಳಕಿನ ಕಾಟ;
ಕನಿಕರದ ಮಳೆಬಿದ್ದು ಎದ್ದ ಬೇಗೆ. [೮೩]

ಕವಿ ಇಲ್ಲಿ ಸಹನೆಯ ಗುಣಕ್ಕೆ ವಿರುದ್ಧವಾದ ರೌದ್ರದ ಭೀಕರತೆಯನ್ನು ಮುಖಾ ಮುಖಿಯಾಗಿಸಿದ್ದಾರೆ. ಸಹನೆಯೊಂದಿಗೆ ಈ ರೌದ್ರವೂ ಇರುವಾಗ ಆಕೆಗೆಷ್ಟು ಹೆಸರಿರಬೇಕೆಂದು ಪ್ರಶ್ನಿಸುತ್ತಾರೆ.

ನಿನಗಿಟ್ಟ ಹೆಸರು 'ಸಹನೆ'
ನೀನೇಕೆ ಮುನಿವೆ?
ಹಗೆ ಯಾರು ನಿನಗೆ?
ಇದು ಯಾವ ಯುಗದ ಬೇನೆ? [೮೪]

ಭೂಮಿತಾಯಿಯ ಸಿಟ್ಟು ಆಕ್ರೋಶಗಳೆಲ್ಲ ವಿನಾಶದ ಆಲೋಚನೆಯಿಂದ ಮೂಡಿಬಂದುದ್ದಲ್ಲ. ಎಲ್ಲವನ್ನು ನೇರ್ಪುಗೊಳಿಸಬೇಕೆಂಬ ಕರುಳಾಳದ ಹಂಬಲವನ್ನು ಗುರುತಿಸಬಹುದು. ಸಹನೆಗೂ ಒಂದು ಮಿತಿ ಇದೆ. ಮಿತಿಯ ಮೇರೆಯನ್ನು ದಾಟಿದಾಗ ಇಂತಹ ಭಾವಾವೇಶಗಳು ಸಹಜವಾಗಿ ಕಂಡುಬರುತ್ತವೆ.

ನೋವಿಗೆ ಕಾರಣ ಏನೆಂದು ಪ್ರಶ್ನಿಸುವ ಕವಿ, ಭೂಮಿಯ ಮೇಲಿನ ವ್ಯವಹಾರಗಳತ್ತ ಹೆಚ್ಚು ಒತ್ತುಕೊಡದೆ, ಭೂಮಿಯನ್ನೇ ಕೇಂದ್ರವಾಗಿರಿಸಿಕೊಂಡು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಆಯಾ ಕಾಲದ ಜನರ ಬದುಕಿನಲ್ಲಿ ಹುಡುಕಿಕ್ಕೊಳ್ಳಬೇಕಾಗುತ್ತದೆ. ಹಾಗೆಯೇ ಪ್ರಾಕೃತಿಕ ವಿಕೋಪಗಳತ್ತಲೂ ದೃಷ್ಟಿ ಹಾಯಿಸಬಹುದು.

ಈ ಪ್ರಶ್ನೆಯೊಂದಿಗೆ ಮಾನವನ ಇತಿಹಾಸ ಕೆದಕುವ ಆಶಯ ಕವಿಯದು. ಅಗೆದಲ್ಲೆಲ್ಲ ಮೂಳೆಯಿರುವ ಮನುಷ್ಯನ ನೆಲದಾಸೆಯಿಂದ ಆಕೆ ಕೆರಳುವಂತೆ ಮಾಡಿದೆಯೆಂಬುದು ಕವಿಯ ತರ್ಕ.

ಭೂಮಿ ಮನುಷ್ಯನ ಸಂಬಂಧವನ್ನು ಕವಿ ತನ್ನ 'ಹೆಜ್ಜೆ ಗುರುತು' ಕವಿತೆಯಲ್ಲಿ ಹೇಳಿದ್ದಾರೆ.

ಶಿಲಾಯುಗ ಶಿಲಾವಾದ್ಯದಸ್ಪಷ್ಟ ಮೌನದಲಿ
ಮಾನವ ಪ್ರತಿಮೆಗಳ ಮೂಕ ಚಲನ;
ಮೊದಲ ಮಳೆ ಬಿದ್ದು ಮೈಮುರಿದ ಹೊಸ ಮಣ್ಣಿನಲಿ
ಚರಾಚರ ರೂಪ ಭಾವ ಕರತಾಡನ

. . . .

"ಕಣ್ಣೆತ್ತಿ ನೋಡುವುದೂ ಕೂಡ ಬೇಡವೆ ನಿನಗೆ?
ನಿನ್ನ ನೋಡುವ ಕಣ್ಣು ನನಗೆ ಬರಲಿ!
ಹುಟ್ಟಿದುದು ಕುರಿಯಲ್ಲ ಹುಲಿಯ ಹೆಸರನು ಹೇಳಿ,
ಹೋರಾಟವನೆ ಹರಸು ಅದೆ ಸಾಗಲಿ." [೪೫]

ಕರುಣೆ ಕ್ರೌರ್ಯಗಳ ಬಗೆಗಿನ ಚಿಂತನೆ ಇಲ್ಲಿದೆ. ಜೀವ ವಿಕಾಸದ ಹಂತದಿಂದ ಪ್ರಾರಂಭಗೊಳ್ಳುವ ಕಾವ್ಯದಲ್ಲಿ ಮೌನಕ್ಕೆ ಮಾತುಕೊಡುವ ಪ್ರಯತ್ನ ನಡೆದಿದ್ದು, ವಿಚಾರ ಚಿಂತನೆಗಳು ಕಾಲ ಕಾಲಕ್ಕೆ ಬದಲಾಗುತ್ತಿದ್ದರೂ ಹೊಸ ಚಿಂತನಾ ಕ್ರಮವೊಂದು ಮೂಡಿ ಬಂದಾಗ, ಹಳತನ್ನು ನಿರಾಕರಿಸಿ ಹೊಸತನ್ನು ತಬ್ಬುವುದೇ ಎನ್ನುವ ದ್ವಂದ್ವಕ್ಕೆ ವ್ಯಕ್ತಿಯ ಚಿಂತನೆಗಳು ದಾರಿಮಾಡಿ ಕೊಡುತ್ತವೆ. ಇಂತಹ ಸಂಕ್ರಮಣಾವಸ್ಥೆಯಲ್ಲಿ ಚಿಂತನಾ ಕ್ರಮದ ರೀತಿಯನ್ನು ಕಂಡುಕೊಳ್ಳುವ ಹಂಬಲಕ್ಕೆ ಕವಿ 'ದೃಷ್ಟಿ' ಎಂಬ ಶಬ್ದ ಬಳಸಿಕೊಂಡು ಅದಕ್ಕೆ ಪೂರಕವಾಗಿ ನೆಲದ ಬದುಕನ್ನು ನಂಬಿಕೊಂಡು ಆ ನೆಲೆಯಲ್ಲಿಯೇ ಹೊಸತನ್ನು ಕಾಣಲು ತವಕಿಸುತ್ತಿದ್ದಾನೆ. ಆ ತವಕದ ಸಂದರ್ಭಗಳಲ್ಲಿ ಮೂಡಿರುವಂತಹ ಭಾವ ತರಂಗಗಳಿವು.

ಭೂಮಿಯ ಚೆಲುವು ಪ್ರೀತಿಗಳನ್ನು ಕಂಡಂತೆ, ಅದರ ರೌದ್ರ ಮುಖವನ್ನು ಕಂಡೂ, ಈ ನೆಲದ ಬಗೆಗಿನ ನಿಷ್ಠೆಯನ್ನು ಬಿಡದ, ಈ ನೆಲದ ಬದುಕಿನ ಹೋರಾಟದಲ್ಲಿ ಎಷ್ಟೇ ನೋವುಗಳಿದ್ದರೂ, ಅಡ್ಡಿ ಆತಂಕಗಳಿದ್ದರೂ ಹೆದರದೆ ಸಾಗುವ ಛಲವನ್ನು ಈ ಕವಿತೆಯಲ್ಲಿ ಕಾಣಬಹುದು.

ಇವರ ಮತ್ತೊಂದು ಕವನ 'ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ'ಯಲ್ಲಿ ದೇವರು ಭೂಮಿತಾಯಿಯ ಗಂಡನಾಗಿಯೂ, ಮನುಷ್ಯರು ಅವರಿಬ್ಬರ ಮಕ್ಕಳಂತೆಯೂ ಚಿತ್ರಿಸಿದ್ದಾರೆ. ಹೆಂಡತಿ ಮಕ್ಕಳ ತೊರೆದು ದೂರ ಸರಿದಿರುವ ಗಂಡನ ಮೇಲೆ ಗೌರವ, ಪ್ರೀತಿ, ವ್ಯಾಮೋಹ ಹೋಗದೆಂಬ ಭಾವ ಇಲ್ಲಿ ಕಾಣುತ್ತದೆ.

. . . .

ತಾಯಿ ಹೇಳಿದಳು: ನೀನೆಂದೊ ಸೋಕಿದೆಯಂತೆ
ಅವಳ ಮೋಹನ ಭುಜವನು.

ನಾನಾಗ ಅಚ್ಚರಿಯ ನಡುವೆ ಹುಟ್ಟಿದೆನಂತೆ
ಮುತ್ತಿಡುವ ಭೂ – ಧ್ವಜವನು.
. . . .
ತಾಯಂದಳಂತೆ: "ಪುಟ್ಟಾಣಿ ಅವರನು ಕೂಗು.
ಅಂಬೆಗಾಲಿಡುತ ಆ ಮುಂದೆ ಹೋಗು"
ಅದ ಕೇಳಿ ಕೇಳದವನಂತೆ ಸರಿಯಲು ನೀನು
ಬಲು ನೊಂದಳಂತೆ: ಎಂಥವರು ಇವರು. [೪೭]

ತಾಯಿ – ಮಗನ ಸಂಬಂಧದ ಹಿನ್ನೆಲೆಯಲ್ಲಿ 'ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ' ರೂಪ ತಳೆಯುತ್ತಾದರು ಮಧ್ಯ ಪ್ರವೇಶಿಸುವ ತಂದೆ, ತನ್ನ ಅಧಿಕಾರವನ್ನೆಲ್ಲ, ಮಗನ ಮೇಲೆ ಸ್ಥಾಪಿಸಲು ಹೊರಟಾಗ ಅದನ್ನು ಪೂರ್ಣವಾಗಿ ನಿರಾಕರಿಸುವ ನಿಲುವಿನಲ್ಲಿ ತನ್ನದೇ ಆದಂತಹ ಬದುಕನ್ನು ರೂಪಿಸಿಕೊಳ್ಳಲು ಹಾಗೂ ತನ್ನ ಜೊತೆಗೆ ತಾಯಿ ಇರುವಳೆಂಬ ಬಲವಾದ ನಂಬಿಕೆ ಇವನಲ್ಲಿ ಕಂಡುಬರುತ್ತವೆ. ಇದು ಮಾತೃಮೂಲ ಸಂಸ್ಕೃತಿಯಿಂದ ಮೂಡಿ ಬಂದುದಾಗಿದೆ. ಹಾಗೂ ಮಾತೃ ಮೂಲ ಸಂಸ್ಕೃತಿಯ ಆಶಯವನ್ನು ವ್ಯಕ್ತಗೊಳಿಸುತ್ತದೆ.

"ಈ ಭಾವನೆಯಂತೂ ಕನ್ನಡಕ್ಕೆ ಹೊಸತು, ಅತಿ ಧೀರ ನಿಲುವು; ಇದು ದೈವ ದ್ರೋಹವಲ್ಲ – ಮಾತೃ ಪ್ರೇಮದ ಮುಂದೆ – ನೆಲದ ಪ್ರೇಮ ಮುಂದೆ ಪಿತೃ ಮಮತೆ ದೈವಮೋಹ ಸ್ಪರ್ಧಾತ್ಮಕವಾಗಿ ನಿಲ್ಲುವಂತೆ ಕವಿಗೆ ಕಾಣುತ್ತವೆ. ತಾಯಿಯ ಪ್ರೀತಿ ನಿದ್ದೆಗಣ್ಣಿನಲ್ಲೂ ಮುಸುಕು ಕೆದರಿಕೊಳ್ಳುತ್ತಲೇಯಿರುವ ಕಂದನನ್ನು ಬೆಚ್ಚಗಿಟ್ಟುಕೊಳ್ಳುತ್ತದೆ ಎಂಬ ದೃಷ್ಟಿ ಇವರದು . . . . " [೪೮]

ಕೌಟುಂಬಿಕ ಹಿನ್ನೆಲೆಯಲ್ಲಿ ಘಟಿಸಬಹುದಾದ ಇಂತಹ ಘಟನೆಯನ್ನು ಕೆ.ಎಸ್.ಎನ್. ಸೊಗಸಾಗಿ ಚಿತ್ರಿಸಿದ್ದಾರೆ. ತಂದೆಯ ಉಪೇಕ್ಷೆಗೆ ಒಳಗಾದ ಮಗನನ್ನು ತಾಯಿ ಕೈ ಬಿಡಲಿಲ್ಲ, ತನ್ನ ಪ್ರೀತಿಯ ಕೋಟೆಯಲ್ಲಿ ಈತನನ್ನು ಬೆಳೆಸಿದ್ದಾಳೆ. ದೂರವಾದ ತಂದೆ ಆತ್ಮೀಯ ಸಂಬಂಧದ ಸಂಕೇತವಾಗಿ ಕಾಣದೆ, ಅಧಿಕಾರದ ವ್ಯಕ್ತಿಯಾಗಿ ಕಾಣುತ್ತಾನೆ. ಆದರೆ ತಾಯಿ ಪ್ರೀತಿಯ ಮೂರ್ತರೂಪವಾಗಿ ಕಾಣುತ್ತಾಳೆ.

ಭೂಮಿಯ ಚೆಲುವಿನ ಈ ಮುಖವನ್ನು ರೌದ್ರದಂತೆಯೇ ಸ್ವಪ್ನವೆಂದೊ ಮಿಥ್ಯೆಯೆಂದೊ ಕರೆದವರು ಇದ್ದಾರೆ. ಆದರೆ ಕವಿ ಅದನ್ನು ದೈವದ ಒಂದು ಶಕ್ತಿಯೆಂದು ಭಾವಿಸಿ ತೋರಿಸಿದ್ದಾರೆ.

. . . .
ಕೇಳಿ, ಜನ ಬೆರಗಾದರಂತೆ!
ತಲೆ ಬಾಗಿ ನಿಂತೆ
ಕೈ ಮುಗಿದರಂತೆ;
ಮುಕ್ತಿ ಸೋಪಾನವನೆ ಕಂಡರಂತೆ!
ನಾ ನಿನ್ನ ನೋಡುತ್ತ ಬಂದೆ;
ನೀನೆ ಮಗುವಾದೆ.
ಬಾನ ನಗೆಯಾದೆ

ನಾ ಕರೆದೆ; ಎಲ್ಲಿರುವೆ ತಂದೆ?
. . . .
ತಂದೆಯನು ಕಾಡದಿರು, ಕಂದ!
ತಾಯಿ ನಾ ಬಂದೆ;
ಏನು ಬೇಕೆಂದೆ
ಬಿಸಿಯುಸಿರು ನೆಲದೊಳಗಿನಿಂದ. [೪೮]

ಭೂಮಿ ಬಗೆಗಿನ ಆಸಕ್ತಿ ಈಗ ದೈವದ ಬಗೆಗಿನ ಕುತೂಹಲವಾಗಿ ಮಾರ್ಪಡುತ್ತದೆ. ಆದರೆ ಭೂಮಿತಾಯಿ ತನ್ನ ಕಂದನಾದ ಮನುಷ್ಯನನ್ನು ತನ್ನ ಬೆಚ್ಚನೆಯ ಪ್ರೀತಿಯಿಂದ ಸೆಳೆಯುತ್ತಾಳೆ.

"ಈ ಕವನದಲ್ಲಿ ಬೇರೆ ಬೇರೆ ವಿಚಾರ ಅಥವಾ ಆ ಶಕ್ತಿಗಳನ್ನು ಪ್ರತಿನಿಧಿಸುವ ವಿಭಿನ್ನ ಘಟಕಗಳನ್ನು ಮೊದಲು ಗಮನಿಸಬಹುದು. ನೀನು, ನಾನು, ಭೂಮಿ, ಯಾರೊ (ಕೆಲವರು), ತಾಯಿ, ತಂದೆ ಮತ್ತು ಕವಿ ಎಂಬ ಏಳು ಘಟಕಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಕವನದ ಐದು ಭಾಗಗಳಲ್ಲಿ, ಈ ಘಟಕಗಳು ಬೇರೆ ಬೇರೆಯಾಗಿ ಅಥವಾ ಒಟ್ಟಾಗಿ ಬಂದಿವೆ. ಇಲ್ಲಿ ನೀನು, ನಾನು ಎಂಬ ಸರ್ವನಾಮಗಳ ಪರಿವರ್ತಿತ ರೂಪಗಳಾದ ನನ್ನ, ನಿನ್ನ ಮೊದಲಾದ ರೂಪಗಳು ಕವನದ ಐದು ಭಾಗಗಳಲ್ಲೂ ಕಾಣಿಸಿಕೊಳ್ಳುತ್ತವೆ. ಕೆಲವು ವಿಮರ್ಶಕರು ಮಾಡಿದಂತೆ ಈ ಸರ್ವನಾಮಗಳು ಬೇರೆ ಬೇರೆ ಭಾಗಗಳಲ್ಲಿ, ಬೇರೆ ಬೇರೆ ವಸ್ತುಗಳನ್ನು ಪ್ರತಿನಿಧಿಸುತ್ತವೆಂದು ಹೇಳಿ ಬಚಾವಾಗಬಹುದು. ಆದರೆ ಅದು ಕವನದ ಶಿಲ್ಪವನ್ನು ವಿರೂಪಗೊಳಿಸಿದಂತೆ. ಈ ಏಳು ಘಟಕಗಳಿಗೂ ಕವನದುದ್ದಕ್ಕೂ ಒಂದು ನಿರ್ದಿಷ್ಟವಾದ ಮತ್ತು ನಿರಂತರವಾದ ಅರ್ಥವಿದೆ." [೪೯]

ಭೂಮಿಯನ್ನು ತಾಯಿಯೆಂದು ಬಗೆದಿರುವ ಕವಿ ಅದರ ಬಗೆಗಿನ ವಿಸ್ಮಯಕ್ಕೆ ಬೆರಗಾಗಿ ನಿಂತುಬಿಡುತ್ತಾರೆ. ಭೂಮಿಯ ನಿಗೂಢತೆಯು ಹಾಗೆ ಉಳಿಯುತ್ತದೆ.

ನೀನು ಯಾರೆಂದೊಮ್ಮೆ ನಾನು ಕೇಳಿಯೇ ಇಲ್ಲ;
ತಾಯೆಂದು ನಿನ್ನೊಡನೆ ನಡೆಯುತಿಹೆನು.
ಹೆಜ್ಜೆ ಬಳಲುವುದೆಂದು ನಾನು ಹೇಳಿಯೆ ಇಲ್ಲ;
ನೆರಳಿನಲಿ ಬಿಸಿಲಿನಲಿ ಸಾಗುತಿಹೆನು.
ನೀನು ತೋರಿದ ಬೆಟ್ಟದಿಂದ ತೊರೆಗಳು ಧುಮುಕಿ
ಹನಿಯ ಚೆಲ್ಲಿದುವೆನ್ನ ಮುಖದ ಮೇಲೆ
ಮಬ್ಬಿನಾಚೆಗೆ ಕಂಡೆ ಮುರಿದ ಕಾಮನ ಬಿಲ್ಲ
ಒಂದೆ, ಎರಡೆ, ತಾಯೆ ನಿನ್ನ ಲೀಲೆ! [೫೦]

ಇದು ಭೂಮಿ ಮತ್ತು ಮನುಷ್ಯ ಸಂಬಂಧದ ಬಗ್ಗೆಯೂ ಅದೇ ವಿಸ್ಮಯ ಕಾಣುತ್ತದೆ. ಆ ವಿಸ್ಮಯಕ್ಕೆ ಒಳಗಾದ ವ್ಯಕ್ತಿ ಭೂಮಿಯನ್ನು ಮಾಯೆ ಎಂದು ಭಾವಿಸುವ ಸ್ಥಿತಿ ತಲುಪುತ್ತಾನೆ.

ನೀನೆನ್ನ ತಾಯಾಗಿ ಕಲಿಸಿದೆಲ್ಲವು ನನಗೆ

ಎಂಬ ನಿಲುವು ತಾಳುತ್ತಾರೆ. ಮಾಯೆ ಮೀರಿ ನಿಂತ ಸ್ಥಿತಿಯನ್ನು ತಾತ್ವಿಕತೆಯಿಂದ ವಿವರಿಸದೆ ಅಚಲ ನಂಬಿಕೆಯಿಂದ ತಾಯಿಯಾಗಿ ಕಾಣುತ್ತಾರೆ.

ಕೆ.ಎಸ್.ಎನ್.ರವರ ಮತ್ತೊಂದು ಕವನ 'ಭೂಮಿ ಗೀತ'ದಲ್ಲಿ ಭೂದೇವಿಯನ್ನು ತಾಯಿಯಾಗಿ ಗ್ರಹಿಸಿ, ಅದು ಸಕಲ ಜೀವರಾಶಿಗಳಿಗೂ ಆಧಾರ. ಚೆಲುವು, ಒಲವು ಅದರ ನಿರಂತರ ವ್ಯಾಪಾರ. ದಿವಿಜ, ಮನುಜ, ದನುಜರೆನ್ನುವ ವಿಭೇದವನೆ ಅರಿಯದೆ, ಮಹಾತ್ಮರೋ ಅಲ್ಪಾತ್ಮರೋ ಹಿಡಿದು ತಡೆದು ನೋಳ್ಪೆನೆನದೆ ಬನ್ನಿರೆಂದು ಬಾಯ ತೆರೆದು ಕಣ್ಣನ್ನೊಮ್ಮೆ ತೆರೆಯದೆ ಇರುವ ಭೂಮಿ ಒಮ್ಮೊಮ್ಮೆ ತನ್ನ ಶಕ್ತಿ ಪ್ರದರ್ಶಿಸುತ್ತಾಳೆ. ಆಗ ಅವಳು ಜ್ವಾಲಾಮುಖಿ, ಚಂದ್ರಸುಖಿ, ಸೂರ್ಯಪ್ರಿಯೆ, ರುದ್ರ ಸುಖಿಯಾಗುವುದನ್ನು ನೋಡಿದರೆ ಈಕೆಯನ್ನು ತಾಯಿಯೆಂದು ಕರೆಯಲು ಸಾಧ್ಯವೇ ಎಂದು ಕವಿ ಪ್ರಶ್ನಿಸುತ್ತಾರೆ.

ತಾಯ ಸೆರೆಯ ಬಿಡಿಸಿಕೊಂಡು
ಕಣ್ ತೆರೆಯುವ ಬದುಕಿಗೆಲ್ಲ
ಆದಿಶೇಷ ಹೊತ್ತ ಭೂಮಿ
ಆದಿಶೇಷದಂತಿದೆ.
ತನ್ನ ಸಾಲ ಸಲಿಸಿಕೊಂಡು
ಅಂತ್ಯ ಶೇಷದಂತಿದೆ,
. . . .
ಜ್ವಾಲಾ ಮುಖಿ, ಚಂದ್ರ ಸುಖಿ
ಸೂರ್ಯ ಪ್ರಿಯೆ, ರುದ್ರ ಸುಖಿ
ಜಗನ್ಮಾಯೆ ಇವಳು ತಾಯೆ? ಮಣ್ಣ ಹರಡಿ ಮಲಗಿರುವಳು;
ಗಳಿಗೆಯಲ್ಲಿ ರಾಜ್ಯ ಎದ್ದು ರಾಜ್ಯ ಬಿದ್ದು ಹೊರಳುತಿರಲು,
ನೋಡಲಾರೆನೀ ಮಸಣದ ಚಲುವನೆಂದು ಮರುಗಿ ಬಾನು
ಅರಿಲನೆಳೆದು ಕಣ್ಣ ಮುಚ್ಚಿ ಒಣಗಿ ಬಿಕೋ ಎನ್ನುತಿಹುದು. [೫೧]

ಇಂತಹ ಶಕ್ತಿ ರೂಪಿಣಿಯಾದ ಭೂಮಿಗಾಗಿ ಜನ ಹೋರಾಡುವುದು ಬರಿ ವ್ಯರ್ಥ. ಆ ಶಕ್ತಿ ಎದುರು ನಮ್ಮ ಪ್ರಯತ್ನವೆಲ್ಲ ಅತಂತ್ರ, ದಿನದಿನವೂ ಇದೇ ಹಾಡು, ನೆಲದಾಸೆಗೆ ನರಬಲಿ. ಎಳೆಯ ಬದುಕು, ಬೆಳೆದ ಬದುಕು ಏನಿದ್ದೂ ತಬ್ಬಲಿ ಎಂಬ ಮಾತು ಮಾರ್ಮಿಕವಾದದ್ದು.

ಕವಿಯ ಭಾವ ಪ್ರಕೃತಿಗೆ ಸ್ಪಂದಿಸುತ್ತದೆ. ಅನುಭವದ ತರಂಗಗಳನ್ನು ಎಬ್ಬಿಸಿ ಭಾಷೆಯ ಮೂಲಕ ಕಾವ್ಯಕನ್ಯೆ ರೂಪುಗೊಳ್ಳುತ್ತಾಳೆ. ಕವಿ ಯಾವಾಗಲೂ ನಿಸರ್ಗದಲ್ಲಿ ಕಾಣುವ ವೈವಿಧ್ಯ ವ್ಯಾಪಾರಕ್ಕೆ ತಲೆ ಕೊಟ್ಟು ಮೈಮರೆಯುತ್ತಾನೆ. ಭಾವ ಜೀವಿಯಾಗುತ್ತಾನೆ. ಅಂತಹ ಸಂದರ್ಭದಲ್ಲಿ ಜ್ವಾಲಾಮುಖಿಯಂತಿರುವ ಭೂಮಿಗೆ ತಣ್ಣನೆಯ ಮುತ್ತನಿಡುವ ಚಂದ್ರ ಬಂದರೂ ಆಕೆ ಶಮನಗೊಳ್ಳದೆ ಇರುವುದನಲ್ಲಿ ಕಂಡು ಕವಿ ಭೂರಮಣಿ ತಾಯಲ್ಲ. . . . ಎಂದು ಹೇಳುತ್ತಾನೆ.

ಹುಣ್ಣಿಮೆಯ ರಾತ್ರಿಯಲಿ ಚಂದ್ರ ಬಂದನು ಚಂದ್ರ
ಅವರಿವರ ಕೇಳಿಬರಲಿಲ್ಲ
ಬಂದವನು ಸುಮ್ಮನಿರಲಿಲ್ಲ.
ತಣ್ಣಗೊಂದೇ ಮುತ್ತು ಸಹರ – ಸಾಗರ – ತಂದ್ರ –
ಜ್ವಾಲಾಮುಖೀ ಮುಗ್ಧ ಭೂಮಿಗೆಲ್ಲ.
ಬೆಳ್ಳಗೊಂದೇ ಮುತ್ತು ಭೂಮಿಗೆಲ್ಲ.
"ಭೂರಮಣಿ ತಾಯಲ್ಲ; ಬಾಳ ಮಿಡಿಗಳನ್ನೆಲ್ಲ
ಸುಡುವ ಹೂಳುವ ಒಂದು ರುದ್ರಭೂಮಿ.
ತಾಯೆನುವ ಕಲ್ಪನೆಯೇ ಆರೋಗ್ಯಕರವಲ್ಲ; –
ಈಕೆ,
ಬೆಂಕಿಯಲ್ಲಿ ಬೆಳೆದ ಮಾರಿ;
ಜೋಕೆ! [೫೨]

ಭೂಮಿ ಸಹನೆಯ ಮೂರ್ತಿ ಹೇಗೋ ಹಾಗೆ ಕೆಲ ವೇಳೆ ಜ್ವಾಲಾಮುಖಿಯಾಗಿ ಆರ್ಭಟಿಸುತ್ತಾಳೆ. ತನ್ನ ಒಡಲಲ್ಲಿ ಅಡಗಿಸಿಕೊಂಡಿರುವ ಸ್ಫೋಟಕ ಶಕ್ತಿ ಒಮ್ಮೊಮ್ಮೆ ಜಾಗೃತವಾದಾಗ ಆಕೆಯನ್ನು ಸಲಹಿ ಕಾಪಾಡುವ ತಾಯಿಯೆಂದು ಕರೆಯಲು ಸಾಧ್ಯವಾಗದಷ್ಟು ನಿಷ್ಕರುಣಿಯಾಗುತ್ತಾಳೆ. ಇದನ್ನು ಕವಿ ದರ್ಶಿಸಿದ್ದಾರೆ. 'ಕವಿಯಾದವನಿಂದ ಸತ್ಯ ಬೇಕೆಂದು, ಕಲ್ಪನೆ ಬೇಕೆಂದು ಹೇಳಿಲ್ಲ. ಏನೋ ದೇವರ ಸೃಷ್ಟಿ ಇರುವಷ್ಟು ಇಲ್ಲಿಹುದು; ಇಲ್ಲದುದು ನಿನ್ನಲಿಹುದು, ಎನ್ನ ಮನ ಬಂದಂತೆ ಹಾಡಿ ಬರೆದಿಡಬಹುದು; ಕವಿಯೇ, ಅದು ನಿನ್ನ ಪಾಡು' – ಎಂದು ತನ್ನ ಪಾಡಿಗೆ ತಾನು ಕವಿತೆ ಬರೆಯಲು ಅವಕಾಶವಿದೆ ಎಂದು ಹೇಳಿ ಮುಗಿಸುತ್ತಾರೆ.

ಭೂಮಿಯನ್ನು ಪ್ರಳಯ ಸಖಿ, ಜ್ವಾಲಾಮುಖಿ ಎಂದೆಲ್ಲಾ ಕಂಡ ಇದೇ ಕೆ.ಎಸ್.ಎನ್.ರವರು ತಮ್ಮ "೨೬ – ೧ – ೫೦"ರ ಕವಿತೆಯಲ್ಲಿ ಅವಳನ್ನು ಶಾಂತಿಪ್ರಿಯೆ, ಚಂದ್ರ ಕಾಂತಿಪ್ರಿಯೆ ಎಂದು ವರ್ಣಿಸುತ್ತಾರೆ.

ಬ್ರಿಟಿಷರು ಭಾರತದಿಂದ ಕಾಲ್ಕಿತ್ತು, ಗಣತಂತ್ರ ರಾಷ್ಟ್ರವಾದ ಭಾರತಕ್ಕೆ ಗಾಂಧೀಜಿಯ ಹೋರಾಟವನ್ನು ವರ್ಣಿಸಿ, ಕೊಂಡಾಡಿ, ರಾಜತ್ವ ಹೋಗಿ, ರಾಜ್ಯಾಂಗ ರೂಪುತಾಳಿದ ಸಂದರ್ಭದಲ್ಲಿ ಈ ಕವಿತೆ ಬಂದಿದೆ.

ತಲೆಯ ಮೇಲಿನ ಹೆಜ್ಜೆ ಎಂದೋ ತೆರಳಿತು
ಪಡುವಲಿನ ಬಿಳಿಕೆಂಪು ನೀಲಿ ನೀರನು ದಾಟಿ.
ಮರಕತ ದ್ವೀಪದರಮನೆಗೆ, ದಣಿಗೂ ದಣಿವು!
ಇತ್ತ ಈ ಬಿಡುಗಡೆಯೊ. ಮೈಮುರಿದು ಪರಶಿವನ
ತ್ರಿಶೂಲದಂತಾಯಿತು ನೋಡುವ ಕಣ್ಣಿಗೆ!
. . . .
ಬಾಂಬಿನ ಅಲಂಕಾರ ನಿನಗಿಲ್ಲ, ತಾಯೆ,
ಶಾಂತಿ ಪ್ರಿಯೆ, ಚಂದ್ರಕಾಂತಿ ಪ್ರಿಯೆ,
ಗಂಗಾ ಯಮುನಾ ನದನದೀ ಸ್ನಾತೆ,
ಉಪನಿಷದ್ವಿಪಿನ ಹೋಮಾಗ್ನಿ ಸಂಜಾತೆ! [೫೩]

ಪ್ರಜಾತಂತ್ರ ನಿರಂತರವಾಗಿ ತ್ರಿವರ್ಣ ಧ್ವಜದ ಹಾರಾಟದೊಂದಿಗೆ ಮೆರೆಯಲಿ, ಜಗತ್ತಿನ ಉದ್ಧಾರಕ್ಕೆ ನಿಲ್ಲು, ಅಹಿಂಸಾ ವತ್ಸಲೆಯಾಗಿರು ಎಂದು ಭಾರತಾಂಬೆಯನ್ನು ಪ್ರಾರ್ಥಿಸುತ್ತಾರೆ.

ಕೆ.ಎಸ್. ನರಸಿಂಹ ಸ್ವಾಮಿಯವರು ತಮ್ಮ ದಾಂಪತ್ಯ ಗೀತೆಗಳಲ್ಲಿ ಹೆಣ್ಣು ಗಂಡಿನ ಕೋಮಲ ಗುಣಗಳನ್ನು ಬಿತ್ತರಿಸುವಂತೆ, ನಾಡು ನುಡಿಯ ಬಗ್ಗೆಯೂ ಭಾವನಾತ್ಮಕ ಶೈಲಿಯಲ್ಲಿ ನಿರೂಪಿಸಿದ್ದಾರೆ. ಭೂಮಿಯನ್ನು ತಾಯಿಯಾಗಿ ಕಂಡಿರುವ ಇವರು, ಆಕೆ ಚಿರಂತನ ಸ್ವರೂಪಿ, ಮುಪ್ಪಾಗದ ನವ ಯುವತಿ ಎಂದು ತಮ್ಮ ಮಧುರವಾದ ಭಾವದಲ್ಲಿ ಚಿತ್ರಿಸಿದ್ದಾರೆ.

ಇವರ 'ಶಿಲೆಗೆ ಹೂವಿನ ವಂಕಿ', 'ನೂತನ ಚೇತನ', 'ಹೆಜ್ಜೆಗುರುತು', 'ನಾನು ಕಂಡ ಕವನ' ಕವಿತೆಗಳಲ್ಲಿ ಭೂಮಿತಾಯಿಯ ಮತ್ತು ಈ ತಾಯಿ ವೀರಕುವರನ ಪ್ರೀತಿ ಶ್ರದ್ಧೆಗಳ ಸಾಹಸವನ್ನು ಬಿಂಬಿಸಿದ್ದಾರೆ.

'ಹೆಜ್ಜೆಗುರುತು' ಕವಿತೆಯಲ್ಲಿ ಭೂಮಿಯ ಇತಿಹಾಸ ಕೆದಕಿ ನೋಡುವುದರಲ್ಲಿ ಕುತೂಹಲದೊಂದಿಗೆ ಭೂಮಿಯ ಚಲುವನ್ನು ನೋಡಿ ಆನಂದಿಸುವ ಹೃದಯ ಶ್ರೀಮಂತಿಕೆಯನ್ನು ಕರುಣಿಸೆಂದು ಪ್ರಾರ್ಥಿಸಿದ್ದಾರೆ.

ನದಿಗಳೆಲ್ಲ ನಿನ್ನದೆ ಹಾಲು;
ಬೆಟ್ಟ ಸಾಲು ನಿನ್ನ ಹೆಗಲು.
ಹಗಲು ನೀನು ನಗಲು;
ಇರುಳು ನಿನ್ನ ನೆರಳು.
ಉಸಿರುಡುಗೆ, ಮುಗಿಲಿನೊಡವೆ! –
ಮುನ್ನೀರ ಮೇಲೆ ಕಣ್ಣೀರ ಸುರಿವ ತಾಯೆ,
ನೀನಲ್ಲ ಮಾಯೆ.
. . . .
ನಿನ್ನ ದುಡಿಮೆ ನಿಶ್ಯಬ್ದ ಪ್ರತಿಮೆ;
ಚೆಲುವೆಲ್ಲ ನಿನಗೆ ನೋವು,
ಒಲವು ಮೂಡಿದರೂ ಕೆನ್ನೆ ಮಾಸದಿದೆ;
ಇದಕಿಂತ ಹಗುರ ಸಾವು!
ಬಿಡುವಿರದೆ ದುಡಿದು ನಿಟ್ಟುಸಿರನೆಳೆದು
ಹಾವಾಗಿ ಹರಿವತಾಯೆ, [೫೪]

ಇಲ್ಲಿ ಸಹನೆಯ ಪ್ರತೀಕವಾದ ಭೂಮಿಯನ್ನು ಒಂದು ಪ್ರತಿಮಾ ರೂಪದಲ್ಲಿ ಕಂಡಿದ್ದಾರೆ. ಭೂಮಿ ನಿಶ್ಯಬ್ದವಾಗಿ ಇಡೀ ಜೀವಕೋಟಿಯನ್ನು ಸಲಹುತ್ತಿದೆ. ಕ್ರಿಯಾಶೀಲವಾಗಿದ್ದು ನಿರಂತರ ಪರರ ಏಳ್ಗೆಗೆ ಶ್ರಮಿಸುವ ಭೂಮಿ ತಾಯಿಯ ಸಹನೆ ಹಾಗೂ ತ್ಯಾಗದ ಹಿರಿಮೆಯನ್ನು ಕವಿ ಚಿತ್ರಿಸಿದ್ದಾರೆ.

ಇಳಾ, ಧಾತ್ರಿ, ಸ್ಥಿರಾ, ವಸುಂಧರಾ, ಕ್ಷಮಾ ಎಂದೆಲ್ಲ ಹೆಸರಿನ ಭೂಮಿತಾಯಿ ನಿಜವಾಗಿ ಭಾರತೀಯರಿಗೆ ಎಂದಿಗೂ ಮಾಯೆಯಲ್ಲ. ಆಕೆ ಮಾಯೆಯಾದರೆ

ಇನ್ನಾವುದು ವಾಸ್ತವ? 'ಸಹನೆ'ಯಾದ ಆಕೆಗೆ ಕೋಪ ಬಂದರೆ ಯಾರು ಬದುಕಿಯಾರು? ಆಕೆ ಉಳಿಸಿದರೆ ಲೋಕ ಉಳಿದೀತು; ಆಕೆ ತನ್ನ ಮಕ್ಕಳಿಗೆ ಎರೆದ ನೆರವೋ ದಾನವೊ.,

. . . .
ಗುರಿ ದೂರವಿರಲಿ, ಧೂಳಿರಲಿ ಬೆವರು
ಬಿರುಗಾಳಿ ನಮ್ಮ ಕಡೆಗೆ,
ಮುಗಿಲ ಶಿರದಲ್ಲಿ ಗಿರಿಯ ತೊಡೆಯಲ್ಲಿ
ಮನುಜನೆದೆಯಲ್ಲಿ ದುಡಿವೆವು.

ಎನ್ನುತ್ತಾರೆ. ಇನ್ನೂ ಈ ದುಡಿತದ ನೆಲಸೊ:

ಕಣ್ಣೀರನೊರೆಸಿ
ಎಲ್ಲರೊಂದಾಗಿ ದುಡಿವೆವು.
ಶುಭವನ್ನೆ ಕಂಡು, ಶುಭವನ್ನೆ ಕೋರಿ
ಶುಭ ಗೀತೆಯನ್ನೆ ಹಾಡುವೆವು.
ಈ ಕಷ್ಟ ಮುಗಿದು, ಆ ನಾಳೆ ನಲಿದು
ನೆಮ್ಮದಿಯ ಕಾಣಲೆಂದು. [೫೫]

ಇದೊಂದು ಪ್ರಕೃತಿ ಸಮೀಕರಣ ಕವಿತೆ. ನಿಶ್ಯಬ್ದವಾಗಿ ದುಡಿಯುವುದು ಆಕೆಯ ರೀತಿ. ಕಮರಿ ಆಕೆಯ ತೊಡೆ, ಪರ್ವತಾಗ್ರ ಆಕೆಯ ಹೆಡೆ. ಬಲ್ಲವನಿಗೆ ಈ ಎಲ್ಲ ಕಡೆಯಲ್ಲಿಯೂ ನೆಲಸುಂಟು. ಅವನ ಗೈಮೆಯ ಸ್ಥಾನಗಳನ್ನೆಲ್ಲ ನೂತನ ಚೇತನ ತುಂಬಿ ದುಡಿಮೆ ಕಣ್ಣನ್ನು ತುಂಬುತ್ತಿರುವಾಗ ಇಂತಹ ಸಂಭ್ರಮಕ್ಕೆ ಒಲಿಯದವನು ಎಂತಹ ಕವಿ? ಕಲ್ಲೆ, ಕಬ್ಬಿಣವೆ ಇವನ ಕಿವಿ? ಜಾಹ್ನವಿಯಾಗಿ ತೊರೆವ, ಹರಿವ, ನೂತನ ಚೇತನಕ್ಕೆ ಸೊಕ್ಕಿ ನಾಡಕುವರರು ಕರೆಯುತ್ತಿದ್ದಾರೆ. ಈ ದಾರಿ ಶುಭದ ಮುಡಿಗೆ.

'ನೂತನ ಚೇತನ'ದಲ್ಲಿ ಗಂಗೆಯಾಗಿ ತಣಿಸುವ ಪರಿಯನ್ನು ಹೇಳುತ್ತಾರೆ.

ಮುಗಿಲ ಶಿರದಿಂದ, ಗಿರಿಯ ತೊಡೆಯಿಂದ,
ಮನುಜನೆದೆಯಿಂದ ಬಿಡುಗಡೆ.
ಬಿಸಿಲು ಬೇಯುವೆಡೆ, ನೆಳಲು ಸಾಯುವೆಡೆ,
ಕಣ್ಣು ಸೀಯುವೆಡೆ, ಎತ್ತಿ ನೀರ ಹೆಡೆ
ಬೆಂಗಾಡ ತಣಿಸಿ ಹೂ ಹಣ್ಣ ಕುಣಿಸಿ
ಮಂಕಾದ ಮನೆಗೆ ಮಳಿ ದೀಪವಿರಿಸಿ,
ಉಕ್ಕಿ ಬರುತಿಹಳು, ಸೊಕ್ಕಿ ಬರುತಿಹಳು
ನೂತನ ಚೇತನ ಜಾಹ್ನವೀ
. . . .
ದುಡಿದವರ ಒಲವ ನೆನೆದು,
ಸುಖ ಶಾಂತಿಯಿಂದ ಆ ಬಾಳು ಬಲಿತು.
ನೆಮ್ಮದಿಯ ಕಾಣಲೆಂದು
ಉಕ್ಕಿ ಬರುತಿಹಳು ಸೊಕ್ಕಿ ಬರುತಿಹಳು
ನೂತನ ಚೇತನ ಜಾಹ್ನವೀ. [೫೬]

ಗಂಗೆಯಂತೆ ಹರಿವ ನೀರೇ ತಾಯಿಯಾಗಿ ಬರುವ, ಶಕ್ತಿಯಾಗಿ ಹರಿವ ರೀತಿ ಇಲ್ಲಿದೆ. ನೂತನ ಚೇತನ ಗಂಗೆ ಹರಿದು ಬರುವ ಸೊಗಸನ್ನು, ಬೆಡಗನ್ನು ಕಲಾತ್ಮಕವಾದ ಶೈಲಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಪದ್ಯ ಬೇಂದ್ರೆಯವರ ಗಂಗಾವತರಣದ 'ಇಳಿದು ಬಾ ತಾಯಿ ಇಳಿದು ಬಾ . . . ' ಸೊಲ್ಲುಗಳನ್ನು ನೆನಪಿಗೆ ತರುವಂತಿದೆ. ಅಲ್ಲಿನ ನಾದಲಯಗಳ ರಭಸ ಕಂಡುಬರುವುದಿಲ್ಲ. ನರಸಿಂಹಸ್ವಾಮಿಯವರದು ಸುಕುಮಾರ ಭಾವ. ಬೇಂದ್ರೆಯವರದು ಭಾಷೆಯಲ್ಲಿಯೇ ಭಾವಾಭಿನಯವಿದೆ.

ಜಿ.ಎಸ್. ಶಿವರುದ್ರಪ್ಪ ತಮ್ಮ ಅನೇಕ ಕವಿತೆಗಳಲ್ಲಿ ಪ್ರಕೃತಿ ಪ್ರೇಮವನ್ನು ವ್ಯಕ್ತಪಡಿಸಿದ್ದಾರೆ. "ಪ್ರಕೃತಿ ಮಾತೆಯ ಸ್ತನ್ಯ ಪಾನದಿ ಪುಷ್ಟಿಗೊಳ್ಳುವುದು ಚೇತನ" ಎಂದು ನಂಬಿರುವ ಕವಿ ತನ್ನಂತೆ ಇತರರೂ ಅದರ ಸವಿ ಸವಿಯಬೇಕೆಂಬ ಭಾವ ಹೊಂದಿದ್ದಾರೆ. ಇವರ ಪ್ರಕೃತಿ ಕೇವಲ ಜಡವಲ್ಲ, ಅದರ ವಿವಿಧ ಅವಸ್ಥೆಯ ಅನಾವರಣದೊಂದಿಗೆ ಬದುಕಿನ ಅವಸ್ಥೆಯನ್ನು ಕಾಣಲು ಯತ್ನಿಸುತ್ತಾರೆ. "ಪ್ರಕೃತಿ ಪೂಜೆ" ಕವಿತೆಯಲ್ಲಿ ಬದುಕಿನ ಒಳಹೊರಗನ್ನು ತೆರೆದಿಟ್ಟಿದ್ದಾರೆ.

ಪ್ರಕೃತಿ ಪೂಜೆಗೆ ಬನ್ನಿರೆಲ್ಲರು
ಪ್ರಕೃತಿ ಪೂಜೆಗೆ ಬನ್ನಿರಿ
ಕಣ್ಣು ಹೃದಯಗಳೆಂಬ ಎರಡನು
ಮಾತ್ರ ಇಲ್ಲಿಗೆ ತನ್ನಿರಿ
. . . .
ಇಲ್ಲಿ ಸುಂದರ ಶಿವನ ದರ್ಶನ
ಭವ್ಯವಾಗಿದೆ ಈ ಗುಡಿ!
ದಿನದ ಧೂಳಿಯ ಕೊಳೆಯ ತೊಳೆವುದು
ಇಲ್ಲಿ ಅಮೃತದ ಸೇಚನ
ಪ್ರಕೃತಿ ಮಾತೆಯ ಸ್ತನ್ಯ ಪಾನದಿ
ಪುಷ್ಟಿಗೊಳುವುದು ಚೇತನ. [೫೭]

ಪ್ರಕೃತಿ ಮಾತೆಯಲ್ಲಿ ಸವಿದ ಸ್ತನ್ಯಪಾನದಿಂದ ಈ ಚೇತನ ಪುಷ್ಟಿಗೊಳ್ಳುವುದು ಕವಿಯ ಪ್ರಕೃತಿ ಆರಾಧನೆಯ ಹಿರಿಮೆಗೆ ಸಾಕ್ಷಿಯಾಗಿದೆ. ತಾಯಿಯ ಎದೆ ಹಾಲಿನಲ್ಲಿ ದೇಹ ಬೆಳವಣಿಗೆಯಾಗುತ್ತದೆ. ಬೆಳೆದ ದೇಹಕ್ಕೆ ಬೇಕಾದದ್ದು ಚೈತನ್ಯ. ಇದು ನಿಸರ್ಗದಿಂದ ಸಿಗುತ್ತದೆ. ಹೆಣ್ಣಿಗೆ ಸಮನಾದದ್ದು ಪ್ರಕೃತಿ ಮಾತೆ. ನಿರ್ಮಲತ್ವ ಮತ್ತು ಪರಿಶುದ್ಧತೆಗೆ ಮಗು ತಾಯಿಯನ್ನು ಆಶ್ರಯಿಸುವಂತೆ ಮಾನವ ನಿಸರ್ಗವನ್ನು ಆಶ್ರಯಿಸಬೇಕಾಗಿದೆ.

ನವೋದಯ ಮತ್ತು ನವ್ಯದ ಸಮನ್ವಯತೆ ಮೈಗೂಡಿಸಿಕೊಂಡವರಲ್ಲಿ ಜಿ.ಎಸ್. ಶಿವರುದ್ರಪ್ಪನವರು ಪ್ರಮುಖರು. ಹಾಗೆಯೇ ವಿಚಾರಾತ್ಮಕ ಬರಹಕ್ಕೆ ಪ್ರಸಿದ್ಧರು. "ಶಿವರುದ್ರಪ್ಪನವರ ಕಾವ್ಯದ ಮೊದಲ ಘಟ್ಟವನ್ನು ಸೌಂದರ್ಯಾತ್ಮಕ ಘಟ್ಟವೆಂದು ಗುರುತಿಸುವುದುಂಟು. ಚೆಲುವಿನ ಆರಾಧನೆಯನ್ನು, ಜೀವನದ ಜಿಕ್ಕಟ್ಟಿನ ಗಳಿಗೆಗಳಲ್ಲಿ ಮನಸ್ಸನ್ನು ಅದರಿಂದ ಮೆಲ್ಲನೆ ತೇಲಿಸುವಂತ ಮಾರ್ದವತೆಯನ್ನು ಅಲ್ಲಿ ಕಾಣುವೆ ಎಂಬ ಅಭಿಪ್ರಾಯವಿದೆ. ಈ ಅಭಿಪ್ರಾಯ ಆಂಶಿಕ ಸತ್ಯಮಾತ್ರ. ಜಿ.ಎಸ್.ಎಸ್‌ಅವರ

ಕಾವ್ಯದಲ್ಲಿ ಎರಡು ಜಗತ್ತುಗಳಿವೆ. ಒಂದು ಪ್ರಕೃತಿ ಜಗತ್ತು; ಮತ್ತೊಂದು ಮಾನವ ಕೇಂದ್ರಿತ ಛಿದ್ರ ಸಮಾಜ. ಇವೆರಡರ ಮುಖಾಮುಖಿ ನವೋದಯದ ದಟ್ಟ ಪ್ರಭಾವಕ್ಕೊಳಗಾಗಿಯೂ ಜಿ.ಎಸ್.ಎಸ್. ಅವರನ್ನು ಭಿನ್ನವಾಗಿಸಿರುವ ಅಂಶ". [೫೮] ಈ ಅಂಶ ಅವರ ಕವಿತೆಗಳಲ್ಲಿ ಭದ್ರವಾದ ನೆಲೆ ಕಂಡು ಕೊಂಡಿದೆ.

ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಕವಿತೆ 'ಎಲ್ಲ ನಿನ್ನ ಲೀಲೆ ತಾಯಿ' ಕವಿತೆ ನಿಸರ್ಗದ ರಮಣೀಯತೆಯನ್ನು ಪರೋಕ್ಷವಾಗಿ ಅನಾವರಣಗೊಳಿಸುತ್ತಾ ಜೀವ ಜಗತ್ತಿಗೆ ಜನಕಳೂ ರಕ್ಷಕಳೂ ಆಗಿರುವ ಭೂಮಿತಾಯಿಯ ಉಪಕಾರವನ್ನು ಸ್ಮರಿಸುವುದಾಗಿದೆ.

ಎಲ್ಲ ನಿನ್ನ ಲೀಲೆ ತಾಯೆ ಎಲ್ಲ ನಿನ್ನ ಮಾಯೆ
ನಿನ್ನ ಅಲ್ಲಗಳೆದ ನಮ್ಮ ಕರುಣೆಯಿಂದ ಕಾಯೆ
. . . .
ಗಣಿಗಿರಿಗಳ ಮಣಿವನಗಳ ಸಿರಿಯೊಡಲಿನ ಧನ್ಯೆ [೫೯]
ಎಲ್ಲ ನಿನ್ನ ಲೀಲೆ ತಾಯೆ ಎಲ್ಲ ನಿನ್ನ ಮಾಯೆ.

ಪ್ರಕೃತಿ ಮಾತೆಯ ಶ್ರೀಮಂತಿಕೆ ಹಾಗೂ ಉದಾರತೆಯನ್ನು ತಿಳಿಸುವುದರೊಂದಿಗೆ, ಆಕೆಯ ಉಪಕಾರಕ್ಕೆ ಮನುಷ್ಯ ಎಂದೆಂದೂ ಕೃತಜ್ಞನಾಗಿರಬೇಕು ಎಂದು ಪರೋಕ್ಷವಾಗಿ ತಿಳಿಸುತ್ತಾರೆ. ಇಲ್ಲಿನ ಪದ ಲಾಲಿತ್ಯ, ಭಾವ ಮಾಧುರ್ಯತೆ ನಿಸಾರರ ನಿತ್ಯೋತ್ಸವವನ್ನು ಗ್ರಹಿಸಿದಂತಾಗುತ್ತದೆ.

ಕೋಮಲ ಬರವಣಿಗೆಗೆ ಖ್ಯಾತರಾಗಿರುವ ಸೂಕ್ಷ್ಮಪ್ರಜ್ಞೆಯ ಎಚ್.ಜಿ.ಸಣ್ಣಗುಡ್ಡಯ್ಯನವರ 'ತಾಯಿ' ವಿಶೇಷತೆಯಿಂದ ಕೂಡಿದೆ. ಇವರಿಗೆ ನೆಲವೇ ತಾಯಿಯಾಗಿದೆ. ನಮ್ಮ ಭವಿತ, ನಮ್ಮ ಬದುಕು ಇವಳ ತೊಡೆಯ ಮೇಲೆ ಎಂದು ಇಡೀ ಮನುಕುಲಕ್ಕೆ ತಾಯಿ, ಈ ಭೂಮಿ ಎಂದು ಭಾವಿಸಿದ್ದಾರೆ.

ಬರಿಯ ಹೊಲವೆ ಬರಿಯ ನೆಲವೆ
ಇವಳು ಭೂಮಿ ತಾಯಿ
ಮೂರು ಯುಗಕೆ ಮೂರು ಜಗಕೆ
ಸಲುವ ಪ್ರೇಮ ದಾಯಿ
ಗುಡು ಗುಡುಗಿ ಮಿಂಚು ಸೀಳಿ ಎದೆಯು
ಝಲ್ಲೆನಿಸಿದಾಗ
ಸೆರಗ ಹೊದೆಸಿ ಸಲಹಿದಳು ತಾಯಿ ಸಸ್ಯಶಾಮಲೆ
"ನಮ್ಮ ಭವಿತ ನಮ್ಮ ಬದುಕು ಇವಳ
ತೊಡೆಯ ಮೇಲೆ" [೬೦].

ಎಲ್ಲರ ಬದುಕು ಮತ್ತು ಭವಿಷ್ಯವೆಲ್ಲವೂ ತಾಯಿಯ ಮಡಿಲಿನ ಮೇಲೆಯೇ ರೂಪುಗೊಳ್ಳು ವಂತಹುದು ನಿಜ. ಆದರೆ ಇಲ್ಲಿ ಬಳಕೆಯಾಗಿರುವ 'ಮೂರು ಯುಗ' ಜಿಜ್ಞಾಸೆಗೊಳಗು ಮಾಡುತ್ತದೆ. ಮೂರು ಯುಗಕೆ ಎನ್ನುವ ಶಬ್ದ ಈಗಾಗಲೇ ಆಗಿಹೋಗಿರುವಂತಹ ಮೂರು ಯುಗಗಳನ್ನು ತಿಳಿಸುವಂತದ್ದಾಗಿದ್ದು, ಈ ಕಲಿಯುಗವನ್ನು ಒಳಗೊಡಿರುವುದಾಗಿದೆ. ಸೃಷ್ಟಿ, ಸ್ಥಿತಿ, ಲಯವನ್ನು ಕುರಿತದ್ದೇ ಅಥವಾ

ಇಹ, ಪರ ಎಂಬುದನ್ನು ಕಂಡಾಗ ಮೂರನೆಯದು ಯಾವುದು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸೃಷ್ಟಿ, ಸ್ಥಿತಿ, ಲಯವನ್ನು ಅನ್ವಯಿಸಿಕೊಳ್ಳುವುದಾದರೆ ಮೂರು ಜಗಕೆ ಅರ್ಥ ಬರುತ್ತದೆ.

ಕಣವಿಯವರ 'ಪಥಿಕ' ಕವಿತೆಯಲ್ಲಿ ಇದೇ ಭಾವ ವ್ಯಕ್ತವಾಗಿದೆ. ಭೂದೇವಿ ತನ್ನ ಒಡಲಲ್ಲಿ ತುಂಬಿಕೊಂಡಿರುವ ಚಲುವನ್ನು ಜೀವಿಗಳ ಸಂತಸಕ್ಕಾಗಿ ಮೀಸಲಿಟ್ಟಿದ್ದಾಳೆಂದು ಕವಿ ಪಥಿಕನಿಗೆ ಹೇಳುವ ಮಾತು. ನಿಸರ್ಗವನ್ನು ನೋಡಿ ತಣಿಯಬೇಕು, ಮೈ ಮರೆಯಬೇಕು. ಆಕೆ ಹೆಣ್ಣಿನ ಚಲುವಿನಂತೆ ಗಮನ ಸೆಳೆಯುವ ಶ್ರೀಮಂತ ಹೆಣ್ಣು ಎಂದು ಕವಿ ಭಾವಿಸಿದ್ದಾರೆ.

ಯಾವ ಋತುವಿನೊಳಿಂತು ಕನಸು ಕಂಡಳೊ ಪೃಥಿವಿ
ಆಶೆ ಬೀಜಗಳೆನಿತೊ ಮಡಿಲೊಳಿರಿಸಿ
ಮಳೆಯ ರೂಪದಿ ಮುಗಿಲು ಮುತ್ತಿಡಲು ಮತ್ತೇರಿ
ಹೊತ್ತು ನಿಂತಿಹಳಮಿತ ವೃಕ್ಷ ರಾಣಿ
. . . .
ಪ್ರಕೃತಿ ತನ್ನೆದೆಯ ಮಧುವಾಟಿಕೆಯ ತೆರೆದಿರಲು
ಅದನು ತಣಿ ಇರದೆಯೆ ಸಾಗಬಹುದೆ?
ಯಾರಿಗೀ ಸುಂದರತೆ? ಯಾರಿಗೀ ಪರವಶತೆ?
ಯಾರ ಸುಖಕೀ ಸೃಷ್ಟಿ ನಿನಗಲ್ಲದೆ? [೬೧]

ಭೂಮಿಯನ್ನು ಸುಂದರ ಚೆಲುವೆಗೆ ಹೋಲಿಸಿರುವ ವಿಶಿಷ್ಟ ಕಲ್ಪನೆ ಇಲ್ಲಿದೆ. ಮನುಷ್ಯನು ನಿಸರ್ಗದಲ್ಲಿರುವ ಅಪಾರ ಸೌಂದರ್ಯವನ್ನು ಸವಿದಾಗ ಪರವಶತೆಗೆ ಒಳಗಾಗಬಲ್ಲ. ಅದನ್ನು ನೀಡುವ ಶಕ್ತಿ ಪ್ರಕೃತಿಯಲ್ಲಿದೆ ಎಂಬುದನ್ನು ಕವಿ ಹೇಳುತ್ತ ಅದನ್ನು ಸವಿಯುವ ಪ್ರಜ್ಞೆ ನಿನಗಿದೆಯೇ ಎಂದು ಮನುಷ್ಯನನ್ನು ಪ್ರಶ್ನಿಸುವುದರೊಂದಿಗೆ ನಿಸರ್ಗ ದೇವತೆಯ ಹಿರಿಮೆಯನ್ನು ಹೆಚ್ಚಿಸಿದ್ದಾರೆ.

ಕೆ.ಎಸ್. ನಿಸಾರ್ ಅಹಮದ್‌ರವರು ಕನ್ನಡ ತಾಯಿ, ಭಾರತಮಾತೆಯನ್ನು ಕುರಿತು ಹಾಡಿದ್ದು ಮಾತ್ರವಲ್ಲ, ರಾಜ್ಯ, ರಾಷ್ಟ್ರದ ಎಲ್ಲೆ ಮೀರಿ ಇಡೀ ಭೂಮಿತಾಯನ್ನೆ ತಾಯಿಯಾಗಿಸಿಕೊಂಡು ವಿಶ್ವ ಪ್ರಜ್ಞೆಯನ್ನು ಬಿಂಬಿಸಿದ್ದಾರೆ – 'ಒಂದೇ' ಕವಿತೆಯಲ್ಲಿ.

ನಾವು ನೀವು ಅವರು ಇವರು
ಒಂದೆ ಒಂದೆ ಒಂದೇ;
ಭೂಮಿತಾಯ ಕುಡಿಗಳೆಂದು
ಪಣವತೊಡಿರಿ ಇಂದೆ
. . . .
ಅಸಂಖ್ಯಾತ ವಿಶ್ವನಿವಹ
ಸೌರವ್ಯೂಹವೊಂದೆ.
ಕ್ಷೀರಪಥ ಬ್ರಹ್ಮಾಂಡವೆನಿತೊ
ಅವ್ಯಾಕೃತ ಒಂದೆ. [೬೨]

ಜನಮನದಲ್ಲಿ 'ನೇತ್ಯಾತ್ಮಕ ಭಾವವನ್ನು' ಗುರುತಿಸುವ ಕವಿ ಏಕತೆಯನ್ನು ತರುವ ಪ್ರಯತ್ನ ಮಾಡಿದ್ದಾರೆ. ಇದರಲ್ಲಿ 'ವಸುದೈವ ಕುಟುಂಬಕಂ'; ಕನ್ನಡ ಕವಿ "ಮಾನವಕುಲಂ ತಾನೊಂದೆವಲಂ" ಅದರ ಪರಿಷ್ಕೃತ ರೂಪ ವಿಶ್ವ ಮಾನವ ಪ್ರಜ್ಞೆಯನ್ನು ಕವಿತೆಯ ಎಳೆಗಳಲ್ಲಿ ಕಾಣಬಹುದು.

ಪ್ರಕೃತಿ ದೇವಿಯ ಬಗ್ಗೆ ವಿಶೇಷ ಒಲವು ಅಭಿಮಾನವಿರುವ ಗಿರಡ್ಡಿ ಗೋವಿಂದರಾಜರವರದು ಸರಳ ಸಹಜವಾದ ಬರವಣಿಗೆಯಿಂದ ಮೂಡಿಬಂದಿರುವ ಕವಿತೆಗಳಲ್ಲಿ 'ಪ್ರಕೃತಿಯ ಕುಣಿತ' ಒಂದು. ಇದರಲ್ಲಿ ನಿಸರ್ಗವನ್ನು ತಾಯಿಯಂತೆ ಪರಿಭಾವಿಸಿದ್ದಾರೆ. ತಾಯಿಯ ತೊಡೆಮೇಲೆ ಬೆಳೆದ ಮಗುವಿನ ಅನುಭವದಂತೆ ನಿಸರ್ಗದಲ್ಲಿ ಕವಿ ಅನುಭವಿಸಿದ್ದಾರೆ.

ತಾಯೆ ಪ್ರಕೃತಿ, ನಿನ್ನ ಸುಕೃತಿ
ಮಿಂಚಿನಂತೆ ಹೊಳೆದಿದೆ
ಅದರ ಮಿಂಚಿಗೆಂತೊ ಹೊಂಚಿ
ಮನವು ನಿನ್ನ ಬಳಸಿದೆ
. . . .
ಹಾಡುತಿರುವ ಹಕ್ಕಿಯಲ್ಲಿ
ಕಡಲ ತೆರೆಗಳುಕ್ಕಿನಲ್ಲಿ
ಸುಳಿವ ಗಾಳಿ ತೆಕ್ಕೆಯಲ್ಲಿ
ನಿನ್ನ ರೂಹೆ ಕುಣಿದಿದೆ. [೬೩]

ತಾಯಿಯ ಸ್ವರೂಪ ಬಹುಮುಖಿಯಾದದ್ದು. ಪ್ರಕೃತಿಯ ಸಕಲ ಚರಾಚರ ವಸ್ತುಗಳಲ್ಲಿ ಕವಿ ಗುರುತಿಸಿದ್ದಾರೆ. ಚೈತನ್ಯದಾಯಿ – ಈ ಭೂಮಿಯ ಮೇಲಿರುವಂತಹ ಎಲ್ಲ ಮರ, ಗಿಡ, ಬಳ್ಳಿ, ಹಕ್ಕಿ, ಕಡಲು, ಸುಳಿವ ಗಾಳಿಗಳಲ್ಲಿ ತಾಯಿಯ ಅಂಶವನ್ನು ಕಂಡಿದ್ದಾರೆ.

ಅನಾವೃಷ್ಟಿಯಿಂದ ಬೆಂದು ಬಸವಳಿದ ಭೂಮಿಗೆ ನೀರುಣಿಸುವಂತೆ ಕವಿ ಮಳೆಯ ಬಗ್ಗೆ ಬರೆದ ಕವಿತೆ 'ಮಳೆ ಬಂತೋ ಮಾರಾಯ!'ದಲ್ಲಿ ಭೂದೇವಿ ಮಾಸದಂತ ನಗೆಯಿಂದ ತಣಿಯಲು ಮಳೆರಾಯ ಬರಬೇಕೆಂದು ಆಶಿಸುತ್ತಾರೆ.

ತಪ್ತ ಭೂಮಿಯು ಮತ್ತೆ ಸಂತೃಪ್ತಿಯಲಿ
ಜೇಡುಗಟ್ಟಿದ ತನ್ನ ಯಾಜ್ಞಸೇನಿಯ ಮುಡಿಗೆ
ಗಂಧ ತೈಲವ ಪೂಸಿ ಎರಕೊಳ್ಳಲಿ.
ಜರಿಗೆಲಸವ ಮಾಡಿರುವ ಹಸಿರು ಬಟ್ಟೆಯನುಟ್ಟು
ಮಾಸದಂತಹ ನಗೆಯ ಮುಡಕೊಳಲಿ.

"ಸುರಿ ನಮ್ಮಪ್ಪಾ, ಸುರಿ ನಮ್ಮಪ್ಪಾ;
ಸೋಮಾರಕ್ಕೊಮ್ಮೆ ಹೋಳಿಗೀ ತುಪ್ಪ!"[೬೪]

ತಪ್ತ – ಸಂತೃಪ್ತಿ ಭೂಮಿಯ ಸ್ಥಿತಿ. ಇಲ್ಲಿ ಪೌರಾಣಿಕ ಪ್ರಜ್ಞೆ ಕೆಲಸಮಾಡಿದೆ. (ಯಾಜ್ಞಸೇನೆ – ದ್ರೌಪದಿ) ಮಳೆ ಬಿದ್ದ ಸಂದರ್ಭದಲ್ಲಿ ಪ್ರಕೃತಿಯಲ್ಲಿ ಉಲ್ಲಾಸದ ಹಸಿರು ಹೊಮ್ಮುತ್ತದೆ. ಮೇಲಿನ ಸಾಲುಗಳಲ್ಲಿ ಕಂಡುಬರುವಂತಹ ತಾಯಿಯನ್ನು ನೇರವಾಗಿ ಬಳಸದೆಯೇ ವಿವರಣೆಯ ತಾಯ ಕಲ್ಪನೆ ಬರುವಂತೆ ಮಾಡಿದ್ದಾರೆ. ಗಂಡು ಮತ್ತು ಹೆಣ್ಣು ಸಂಬಂಧವನ್ನು ಸೂಚಿಸುವ ಲೈಂಗಿಕ ಪ್ರತಿಮೆಯ ಮೂಲಕ ಕಾವ್ಯ ಗಮನ ಸೆಳೆಯುತ್ತದೆ. ಭೂಮಿತಾಯಿಗೆ ಪ್ರಿಯಕರನಂತೆ ಮಳೆರಾಯನ ಆಗಮನ ವಾಗಬೇಕೆಂಬ ಪ್ರಾರ್ಥನೆ ಕವಿಯದಾಗಿದೆ.

ಪ್ರಕೃತಿಯನ್ನು ತಾಯಿಯಾಗಿ ಭಾವಿಸಿರುವ ದಲಿತ ಕವಿ ಸಿದ್ದಲಿಂಗಯ್ಯನವರ ಕವಿತೆ 'ಪ್ರಕೃತಿ'. ನಾಡನಾಳುವ ಪ್ರಭುಗಳಿಂದ ನಿಸರ್ಗ ದೇವತೆಗೆ ಮಾರಣ ಹೋಮ ನಡೆದಿರುವುದನ್ನು ಸಶಕ್ತವಾಗಿ ಕಟ್ಟಿಕೊಡುತ್ತಲೇ, ತಾನು ನಿನ್ನ ಕಾಡುಗಳಲ್ಲಿ ಹಾಡು ಹಕ್ಕಿಯಾಗಬೇಕೆಂಬ ಬಯಕೆಯನ್ನು ವ್ಯಕ್ತಪಡಿಸುತ್ತಾರೆ.

ಸಂಕಷ್ಟಗಳ ಸೂರ್ಯ ದಿನದಿನವೂ ಮೂಡುವನು
ಮುಳುಗುವನು ವೇದನೆಯ ಹಬ್ಬದಲ್ಲಿ
ಕುದಿವ ನೀಲಿಯ ಕಡಲು ಏಳೆಡೆಯ ಕಾಳಿಂಗ
ಹೆಪ್ಪುಗಟ್ಟಿದ ನೋವು ಮುಗಿಲಿನಲ್ಲಿ

ಬಸಿರ ಬಗೆದೇಳುವರು ಅಂಗಾಗವಾಳುವರು
ತಾಯ ಸಹನೆಯ ಉಂಡ ಮಕ್ಕಳೆಲ್ಲ
ದೇವ ಮಾನವರೆಲ್ಲ ಮಿಂದು ಮುಳುಗೆದ್ದರೂ
ಬತ್ತಿಲ್ಲ ಅವಳೆದೆಯ ಬೆಳದಿಂಗಳು
. . . .
ನನ್ನ ಬದುಕಿನ ಗುರಿಯು ಏನೆಂದು ಕೇಳಿದೆಯ
ನಿನ್ನ ಕಾಡುಗಳಲ್ಲಿ ಹಾಡು ಹಕ್ಕಿ. [೬೫]

ಇಲ್ಲಿ ಹಾಡುವ ಹಕ್ಕಿಯಾಗಬೇಕೆಂಬುದು ತುಳಿತಕ್ಕೆ ಒಳಗಾದ ಜನಾಂಗದ ದನಿಯಾಗಿದೆ. ಸೂರ್ಯನ ಬೆಳಕು, ಇತರೆ ಕವಿಗಳಿಗೆ ಭರವಸೆಯ ಬೆಳಕಾಗಿ ಕಂಡರೆ, ಕ್ರೌರ್ಯ, ಅಪಮಾನ ತುಳಿತಕ್ಕೆ ಒಳಗಾದ ಕವಿ ಅದೇ ಸೂರ್ಯನ ಬೆಳಕನ್ನು ವೇದನೆಯ ಹಬ್ಬವೆನ್ನುತ್ತಾನೆ. ಸೂರ್ಯೋದಯವಾದ ಕೂಡಲೆ ದಲಿತ ವರ್ಗದವರ ಬದುಕಿನಲ್ಲಿ ಸಾಮಾಜಿಕ ಅಸಮಾನತೆಯ ಚಟುವಟಿಕೆಗಳ ಅನುಭವವಾಗುತ್ತದೆ.

ಕಾಡು ಶಬ್ದ ಪದ್ಯದ ಆರಂಭಕ್ಕೆ ಅನ್ವಯಿಸಿಕೊಂಡರೆ ದಿನ ನಿತ್ಯದಲ್ಲಿ ದಲಿತವರ್ಗಕ್ಕೆ ಕಾಡುವ ಸಮಸ್ಯೆಗಳನ್ನು; ಹಾಗೆಯೇ ಕವಿ ತನ್ನ ಗುರಿಯನ್ನು ತಿಳಿಸುತ್ತಾ ಬಳಸಿರುವ ಕಾಡು ಮತ್ತು ಪಕ್ಷಿ ಶಬ್ದ ಸ್ವತಂತ್ರ್ಯ ವಿಹಾರವನ್ನು ತಿಳಿಸುತ್ತದೆ.

ತಾಯ ಸಹನೆಯ ನೋವುಂಡ ಮಕ್ಕಳು ದಲಿತರು ಬದುಕನ್ನು ನಿರಾಕರಿಸಿಲ್ಲ. ಇದಕ್ಕೆ ಪೂರಕವಾಗಿ ಸಹನೆ ಶಬ್ದವನ್ನು ಗಮನಿಸಬಹುದು.

ದುರುಳರು ಇಡೀ ನಿಸರ್ಗವನ್ನು ಸ್ವಾರ್ಥಕ್ಕಾಗಿ ಲೂಟಿ ಮಾಡಿದರೂ ಬತ್ತಲಾರದ ನಿಧಿಯಂತೆ ಅವಳ ಸಂಪತ್ತು. ಇರುವ ಸಂಪತ್ತನ್ನು ಅನುಭವಿಸಿ ಆನಂದಿಸುವ ಮನಸ್ಸು ನಮ್ಮದಾಗಬೇಕು. ಆಗ ಮಾತ್ರ ನಿಸರ್ಗದ ಹಿರಿಮೆ ತಿಳಿದೀತು ಎನ್ನುತ್ತಾರೆ. ನಿಸರ್ಗ ತನ್ನೊಬ್ಬನ ಸ್ವಾರ್ಥಕ್ಕಾಗಿ ಅಲ್ಲ. ಅದು ಇಡೀ ಜೀವ ಸಂಕುಲದ ಏಳಿಗೆಗಾಗಿ ಎಂಬ ಅರಿವು ಸ್ವಾರ್ಥ ಮಾನವನಿಗೆ ಬಂದಿಲ್ಲ. ಬಳಸಿದಷ್ಟು ಅಕ್ಷಯವಾಗುಳಿಯುವ ಭೂಮಿಯನ್ನು ಸದ್ಬಳಕೆಯಾಗಿಸಿಕೊಳ್ಳುವಲ್ಲಿ ನಾವು ಮುಂದಾಗಬೇಕಾಗಿದೆ.

ಇವರ ಮತ್ತೊಂದು ಕವಿತೆ 'ಗ್ರಾಮ ದೇವತೆ'ಯಲ್ಲಿ ಇಡೀ ನಿಸರ್ಗದಲ್ಲೆ ಗ್ರಾಮದೇವತೆಯನ್ನು ಕಾಣುತ್ತಾರೆ. ಸ್ವಾತಂತ್ರ್ಯ ನಂತರ ಖೂಳರ ದುರ್ವರ್ತನೆ, ದುರಾಸೆಗೆ ತುತ್ತಾಗಿ ಇಡೀ ಕಾಡು ನಾಶಗೊಂಡು ಭೂಮಿ ಬರಡಾಗುತ್ತಿರುವ ದುಸ್ಥಿತಿಯಿಂದ ಉಂಟಾಗುವ ಅನಾಹುತವನ್ನು ಗ್ರಾಮದೇವತೆಗೆ ಹೋಲಿಸಿರುವುದು ಔಚಿತ್ಯಪೂರ್ಣವಾಗಿದೆ. ಗ್ರಾಮದೇವತೆ ಇರುವುದು ಭಕ್ತರ ರಕ್ಷಣೆಗಾಗಿ, ಅದೇ ಭಕ್ತರು ಗ್ರಾಮದೇವತೆಯ ಬಗ್ಗೆ ಉದಾಸೀನ ತಾಳಿ ನಿರ್ಲಕ್ಷಿಸಿದರೆ ಆಕೆ ಕೋಪದ ದಳ್ಳುರಿಯಲ್ಲಿ ಸುಟ್ಟಾಳು. ಪ್ರಕೃತಿಯ ವಿಕೋಪದಿಂದ ಇದು ಘಟಿಸುವುದೆಂಬುದನ್ನು ಗ್ರಾಮ ದೇವತೆ ಕವನದಲ್ಲಿ ಎಚ್ಚರಿಸಿದ್ದಾರೆ. ಈ ಅನಾಹುತ ಘಟಿಸುವ ಮುನ್ನ ಜನಸಮುದಾಯ ಎಚ್ಚೆತ್ತು ಕಾಡನ್ನು ಉಳಿಸಿ ನಾಡನ್ನು ರಕ್ಷಿಸಬೇಕೆಂದು ಹೇಳಿದ್ದಾರೆ.

ಕೊಡಲಿಯ ಏಟಿಗೆ ಗಡಗಡ ನಡುಗಿ
ನರಳುತ್ತಿರುವುದು ಏನಣ್ಣ
ಅದು ಮರವಲ್ಲ ಅದು ಬೇರಲ್ಲ
ಗ್ರಾಮದೇವತೆ ತಿಳಿಯಣ್ಣ
ಕಾಡನು ದೋಚಿ ನಾಡನು ಮಾರಲು
ಗುಳ್ಳೇ ನರಿಗಳು ಬರುತಿಹರು
ಈ ಖೂಳರ ಆಟ ನಿಲ್ಲಿಸಲೆಂದು
ಜನಸಮುದಾಯವೆ ಎದ್ದೇಳಿ. [೬೬]

ಇದು ಆಧುನಿಕ ಪರಿಸರ ಪ್ರಜ್ಞೆಯಿಂದ ಮೂಡಿ ಬಂದ ಕವಿತೆ. ಭವಿಷ್ಯದಲ್ಲಿ ನಾವು ಎದುರಿಸಬೇಕಾದ ಅಪಾಯಕರ ಸ್ಥಿತಿಯ ಮುನ್ಸೂಚನೆಯೂ ಬಂದಿದೆ. ಇದಕ್ಕೆ ಕಾರಣ ಕೊಡಲಿ ಏಟು. ಮನುಷ್ಯನ ದುರಾಸೆ.

ಇದು ಪಂಥ ನೆಲೆಯಲ್ಲಿ ಬಂದದ್ದು. ಇತರೆ ಕವಿಗಳಲ್ಲಿ ಕಾವ್ಯಾಭಿವ್ಯಕ್ತಿಯಲ್ಲಿ ಕಂಡುಬರುವ ಶಿಷ್ಟಾಚಾರಕ್ಕೂ ದಲಿತ ಕವಿ ಸಿದ್ದಲಿಂಗಯ್ಯನವರ ಕವಿತೆಗಳಲ್ಲಿ ಕಂಡುಬರುವ ದೇಶೀ ಪ್ರಜ್ಞೆಗೂ ಭಿನ್ನತೆಯಿದೆ. ಈ ಕವಿತೆ ಸಾಮಾಜಿಕ ವ್ಯವಸ್ಥೆಯ ಸ್ತರ ವಿನ್ಯಾಸದ ಅನುಭವದ ಮೇಲೆ ರೂಪು ಗೊಂಡದ್ದು. ಇದಕ್ಕೆ ಜನಪದೀಯ ಸ್ಪರ್ಶವಿದೆ. ಶಿಷ್ಟರು ನಗುವ ಮಗುವನ್ನು ಕಂಡು ಆನಂದಿಸಿದರೆ, ದಲಿತರು ಅಳುವ ಮಗುವನ್ನು ಕಂಡು ಚಿಂತಿಸುತ್ತಾರೆ. ನಗುವಿನಲ್ಲಿ ಸೌಂದರ್ಯವಿದೆ, ಅಳುವಿನಲ್ಲಿ ಸಮಸ್ಯೆ ಇದೆ.

ಇಂದು ನಿಸರ್ಗ ದೇವತೆ ತನ್ನ ಮಕ್ಕಳಿಂದಲೇ ತಲ್ಲಣಗೊಂಡಿದ್ದಾಳೆ. ಹಾಲು ಕರೆಯುವ ಕೈಯೇ ಕೆಚ್ಚಲು ಕೊಯ್ಯುವಂತಾಗಿರುವ ದುರಾಸೆತನದ ಖೂಳರ ಬಗ್ಗೆ ಕವಿ ಧ್ವನಿ ಪೂರ್ಣವಾಗಿ ಎಚ್ಚರಿಸಿದ್ದಾರೆ.

ಉತ್ತರ ಕನ್ನಡದ ಸಂಸ್ಕೃತಿಯಲ್ಲಿ ಹುಟ್ಟಿ ಬಂದಿರುವ ಗಣಪತಿ ಹೆಗಡೆ ನಿಸರ್ಗವನ್ನು ತಮ್ಮ ಕವಿತೆಯಲ್ಲಿ ಹದವರಿತು ಬಳಸಿದ್ದಾರೆ. ಭೂಮಂಡಲವನ್ನೆ ತಾಯಿ ಎಂದು ಭಾವಿಸಿರುವ ಇವರ ಕವಿತೆ 'ವಿಶ್ವ ಜನನಿ'. ಇದರಲ್ಲಿ ಎಲ್ಲ ಜೀವಿಗಳ ಹುಟ್ಟು ಬೆಳವಣಿಗೆಗೆ ಆಧಾರವಾಗಿರುವ ಭೂಮಂಡಲದ ಹಿರಿಮೆಯನ್ನು ಕೊಂಡಾಡಿದ್ದಾರೆ.

ತಿಳಿದಿರುವೆ ನಾನು ನೀ ದೇವನೆಂದು
ನೀ ತಾಯಿಯೆಂದು ರತ್ನ ಗರ್ಭಿತೆ ಎಂದು
ಹೆತ್ತ ನನ್ನನು ನೀನು ಹೆಸರಿಟ್ಟೆ ಮುದ್ದಾಡಿ
ಚಂದ್ರತಾರೆಯ ತಂದು ಬೊಟ್ಟಿಟ್ಟೆ ನನಗಾಗಿ.

. . . .

ಶರಣು ಮಹಾತಾಯಿ
ನಿನ್ನ ಜ್ವಾಲಾಮುಖಿಗೆ
ಗುಣಕಲ್ಲ ದ್ವೇಷಕೆ
ಸದಾ ನಮಿಪೆ. [೬೭]

ಸೌಮ್ಯ ಮೂರ್ತಿಯಾಗಿ ಕಾಣುವ ಭೂಮಿ ಒಮ್ಮೊಮ್ಮೆ ಭದ್ರಕಾಳಿಯಾಗುತ್ತಾಳೆ. ಆಕೆ ಏನಾದರೂ, ಆಕೆಯನ್ನು ಬಿಟ್ಟು ಬದುಕಿಲ್ಲ ಎಂಬುದನ್ನು ಗ್ರಹಿಸಿರುವ ಕವಿ ಆಕೆಯ ಉಗ್ರತ್ವಕ್ಕೂ ನಮಿಸುತ್ತೇನೆ ಎಂದು ಹೇಳುವಾಗ ಭೂಮಿಯ ಎರಡು ಮುಖದ ದರ್ಶನ ಮಾಡಿಸಿದ್ದಾರೆ.

ಬಿ.ಪಿ. ನಾಗರಾಜ್‌ರವರ ಕಾವ್ಯಕನ್ನಿಕೆಯ 'ನನ್ನ ದೇವತೆಯಲ್ಲಿ' ಪ್ರಿಯತಮೆಯಿಂದ ದೂರವಾದ ಕವಿ ಅವಳ ನೆನಪಿನಿಂದ ದೂರವಿರಲಾರದೆ ಪದೇ ಪದೇ ನೆನಪಿಸಿಕೊಂಡು ಆಕೆಯನ್ನು ದೇವಿಯೆಂದು ಭಾವಿಸಿ ಎದೆಯ ಗುಡಿಯಲ್ಲಿ ಪೂಜಿಸುವುದು ಕವಿಯ ಆಶಯ. ತನ್ನ ಹುಟ್ಟಿಗೆ, ಬದುಕಿನ ಹಿರಿಮೆಗೆ ಕಾರಣಳಾದ ವಿಶ್ವಮಾತೆ ಭೂಮಂಡಲದ ಬಗ್ಗೆ ಆರಂಭದಲ್ಲಿ ಅದರ ಮಾತೃತನಕ್ಕೆ ಪ್ರಶಂಸಿಸಿ, ಕೊನೆಗೆ ಅದರ ರೌದ್ರತನಕ್ಕೆ ತಲೆ ಬಾಗುವುದಾಗಿ ಕವಿ ಹೇಳಿದ್ದಾರೆ.

ಎಲ್ಲ ಕೊಡುವ ಭೂಮಿ ತಾಯಿಗೆ, ಎಲ್ಲ ಪಡೆದ ಮಕ್ಕಳ ಕೊಡುಗೆಯಾದರೂ ಏನು? ತನ್ನ ಸ್ವಾರ್ಥಕ್ಕಾಗಿ ಮಿತಿ ಇಲ್ಲದ ಆಸೆಗೊಳಗಾಗಿ ಭೂಮಿಯನ್ನು ದುರುಪಯೋಗ ಮಾಡಿಕೊಂಡು, ನಾಳಿನ ಶುಭ ಗಳಿಗೆ ಕಾಣದಂತೆ ಮಾಡಿಕೊಳ್ಳುತ್ತಿರುವ ನರನ ಹೊಟ್ಟೆಬಾಕುತನಕ್ಕೆ ಕವಿ ತನ್ನ ಕೋಪ ವ್ಯಕ್ತಪಡಿಸುತ್ತಲೇ, ಎಚ್ಚರಿಕೆ ನೀಡಿದ್ದಾರೆ.

ಬಂದೇ ಬರುವಳು ಅವಳು ಎಂದಾದರೊಂದು ದಿನ
ಎಂದು ಬರುವಳೊ ಅವಳು ಅಂದೇ ಸುದಿನ
ದೂರಾದ ನೆನಪಿನ್ನೂ ಮಾಸಿಲ್ಲ ಮನದಲಿ
ಚೂರಾದ ಆಸೆಗಳ ಆರಿಸಿ ಎಸೆದಿಲ್ಲ

ದೇವಿ ಮಾಡಿಹೆನವಳ ನನ್ನ ಎದೆ ದೇಗುಲದಿ
ಪೂಜಿಸಿಹೆ ಗೌರವದಿ ತುಂಬು ಪ್ರೀತಿಯಿಂದ
ಬೇರೆ ಬಯಕೆಯು ಬೇಡ ಬೇರೆ ಏನೂ ಬೇಡ
ಮುಗುಳು ನಗೆಯನು ಬೀರಿ ಎಲ್ಲರನು ನಗಿಸಿರಲಿ
ಒಂದೆ ನೋಟವ ತೋರಿ ನನ್ನ ಮರೆಯದೆ ಇರಲಿ [೬೮]

ಈಕೆ ನೂರು ಯುಗಕೆ ನೂರು ಜಗಕೆ ಸಲುವ ಪ್ರೇಮದಾಯಿ ಎನ್ನುವ ಮಾತಿನಲ್ಲಿ ಆಕೆ ಮಾತೃವಾತ್ಸಲ್ಯದೊಂದಿಗೆ ಆಕೆಯ ಸಹನೆ, ಆಕೆಯ ಕಾರುಣ್ಯವೂ ಅಡಗಿದೆ. ತಾಯಿ ಮಗುವ ಪೊರೆವವಳು. ಅದರಂತೆ ಸಸ್ಯ ಶ್ಯಾಮಲೆಯಾದ ಭೂಮಿತಾಯಿ ಮನುಕುಲದ ರಕ್ಷಕಳೆಂಬುದು ಇಲ್ಲಿನ ಅಭಿಪ್ರಾಯ.

ಇಡೀ ನಿಸರ್ಗದ ಭವ್ಯಾತಿಭವ್ಯ ಶಕ್ತಿ, ರೂಪ, ವೈವಿಧ್ಯತೆಯನ್ನು ಕವಿಗಳು ತಮ್ಮದೇ ಆದ ದೃಷ್ಟಿಯಲ್ಲಿ ದರ್ಶಿಸಿದ್ದಾರೆ. ಅದರಲ್ಲೂ ನವೋದಯ ತಲೆಮಾರಿನವರು ಪ್ರಕೃತಿಯನ್ನು ಶಕ್ತಿ ದೇವತೆಯಾಗಿ, ಚೈತನ್ಯ ಸ್ವರೂಪಿಣಿಯಾಗಿ ಕಂಡಿದ್ದಾರೆ. "ಅನನ್ಯ ನಿಸರ್ಗಾರಾಧನೆ, ಅನುಪಮ ಜೀವನ ಪ್ರೀತಿ, ಅಪೂರ್ವವಾದ ಆಧ್ಯಾತ್ಮದ ಒಲವು, ಅದ್ಭುತವಾದ ರಾಷ್ಟ್ರ ಪ್ರೇಮ, ಅಸಾಧಾರಣವಾದ ಚಿಂತನೆ, ಅದ್ವಿತೀಯವಾದ ಸಾಹಿತ್ಯ ಸರಸ್ವತಿಯ ಉಪಾಸನೆ, ಅಸೀಮವಾದ ಸಂಸ್ಕೃತಿಪರ ನಿಲುವು, ಅಗಣಿತವಾದ ಆದರ್ಶಗಳು – ನವೋದಯ ಕವಿಗಳನ್ನು ಜನತೆ ಇಷ್ಟಪಡುವಂತೆ ಮಾಡಿದವು."[೬೯] ನವೋದಯದಲ್ಲಿ ಕಂಡ ಈ ಚೆಲುವು ನಂತರದ ಕವಿಗಳಲ್ಲಿ ಕಾಣದಾಯಿತು. ಇದು ಕವಿಗಳ ಕಾಣ್ಕೆಯ ಭಿನ್ನತೆಗಿಂತಲೂ ನಿಸರ್ಗದಲ್ಲಿ ಆಗಿರುವ ಬದಲಾವಣೆಯೂ ಹೌದು.

ನವೋದಯ ತಲೆಮಾರಿನವರಲ್ಲಿ ಕಂಡಷ್ಟು ನಿಸರ್ಗ ಪ್ರೀತಿ ಅನ್ಯರಲ್ಲಿ ವಿರಳವೆಂದೇ ಹೇಳಬೇಕು. ನವೋದಯದ ಜನರಿಗೆ ಪ್ರಕೃತಿ ಪ್ರೇರಕ ಶಕ್ತಿಯಾಗಿ, ಆರಾಧನೆಯ ದೈವವಾಗಿ ಮನೋವಿಕಾಸಕ್ಕೆ ಚೈತನ್ಯಕಾರಿಯಾಗಿ ಕಾಣುತ್ತದೆ. ಹಾಗಾಗಿ ಅದರಿಂದ ಸಿಗುವ ಮನೋಲ್ಲಾಸಕ್ಕೆ ತಲೆದೂಗುವುದನ್ನು ಕಾಣಬಹುದು. ಪ್ರಕೃತಿ ಬರಿ ಮನುಷ್ಯ ವರ್ಗಕ್ಕೆ ಮಾತ್ರ ಚೈತನ್ಯ ಶಕ್ತಿಯಾಗಿ ನಿಂತಿಲ್ಲ. ಇಡೀ ಜೀವಸಂಕುಲದ ರಕ್ಷಣೆ ಪೋಷಣೆಗೆ ತನ್ನಲ್ಲಿ ಆಶ್ರಯ ನೀಡಿದೆ. ಆದರೆ ಅದನ್ನು ಸವಿಯುತ್ತಲೇ ನಾಶ ಮಾಡುವ ರಾಕ್ಷಸೀತನ ಮಾತ್ರ ಮನುಷ್ಯನಲ್ಲಿದೆ. ಪ್ರಕೃತಿಯನ್ನು ಆರಾಧಿಸುವ ಗೌರವಿಸುವ ಮನುಷ್ಯನೇ ಪ್ರಕೃತಿಯನ್ನು ಕಬಳಿಸುವ ನಾಶಮಾಡುವ ಮಟ್ಟಕ್ಕೆ ಇಳಿದಿದ್ದಾನೆ. ನಮಗಾಗಿ ಪ್ರಕೃತಿಯೇ ಹೊರತು ಪ್ರಕೃತಿಗಾಗಿ ನಾವಲ್ಲ ಎಂಬ ಸಾಮಾನ್ಯ ಪ್ರಜ್ಞೆಯೂ ಕೂಡ ಇಲ್ಲದ ಮನುಷ್ಯ ತನ್ನ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾನೆ. ಅದನ್ನು ಆರಾಧಿಸುವ ಉತ್ಸುಕತೆ ಹಿರಿಯ ತಲೆಮಾರಿನ ನವೋದಯದವರಲ್ಲಿ ಕಂಡರೆ, ಅದೇ ದಲಿತ ಬಂಡಾಯದ ತಲೆಮಾರಿನಲ್ಲಿ ಅದರ ದುರುಪಯೋಗದ ಬಗ್ಗೆ ಸಿಡಿದು ನಿಲ್ಲುವ ಕರಾಳ ಮುಖವನ್ನು ದರ್ಶಿಸಬಹುದು.

ಅದೇ ತಾಯಿ ಅದೇ ತಾಯಿ
ಇಲ್ಲಿರುವಳ್ ಅದೇ ತಾಯಿ
ಕಾಡಿರುವ ನಾಡೆಲ್ಲ ಕವಿಗೆ ತಾಯೊಡಲೋ
ಮಲೆ ಕಾಡು ಹೊಳೆ ಬೀಡು ಕವಿಗೆ ತಾಯ್ಮಡಿಲೊ

ಎಂದು ಕುವೆಂಪು ಹೇಳಿದರೆ;

ಕೊಡಲಿಯ ಏಟಿಗೆ ಗಡಗಡ ನಡುಗಿ
ನರಳುತ್ತಿರುವುದು ಏನಣ್ಣ
ಅದು ಮರವಲ್ಲ ಅದು ಬೇರಲ್ಲ
ಗ್ರಾಮ ದೇವತೆ ತಿಳಿಯಣ್ಣ

ಎಂದು ದಲಿತ ಕವಿ ಸಿದ್ಧಲಿಂಗಯ್ಯ ಹೇಳುತ್ತಾರೆ. ಇಡೀ ಗ್ರಾಮದ ಜೀವದುಸಿರು ಕಾಡು ಎಂಬ ಪ್ರಬುದ್ಧ ಚಿಂತನೆ ಈ ತಲೆಮಾರಿನವರಲ್ಲಿ ಜಾಗೃತಗೊಂಡಿದೆ. ಇದೇ ಪ್ರಮಾಣದಲ್ಲಿ ಕಾಡನ್ನು ದೋಚಿ ನಾಡನ್ನು ಸುಡುಗಾಡು ಮಾಡುವ ಖೂಳರ ಪ್ರಯತ್ನ ನಡೆದರೆ ಮುಂದೊಂದು ದಿನ ಕವಿ, ಕಲಾವಿದರಿಗೆ, ನಿಸರ್ಗ ಪ್ರೇಮಿಗಳಿಗೆ, ಜೀವ ಜಗತ್ತಿಗೆ ಸಂಜೀವಿನಿಯಂತಿರುವ ಕಾಡು ಕಲ್ಪನೆಯ ಸರಕಾದೀತು ಎಂಬ ಎಚ್ಚರವನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ನಿಸರ್ಗದ ವೈವಿಧ್ಯತೆಗೆ ಅನಂತ ಮುಖ. ಅದು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿರುವ ರೌದ್ರ ಮುಖ ಮಾತ್ರ ಮರೆಯಾಗಿದ್ದು, ಬಾಹ್ಯದ ಸೊಗಸು, ಸಮೃದ್ಧಿ ಜೀವ ಸಂಕುಲದ ಏಳಿಗೆಗೆ ತೆರೆದುಕೊಂಡಿದೆ. ಮರ, ಗಿಡ, ಬಳ್ಳಿ, ಹೂವು, ಹಣ್ಣು, ನದಿ, ತೊರೆ, ಸರೋವರ, ಸಮುದ್ರಗಳೆಲ್ಲ ಆಕೆಯ ಬೆಡಗಿಗಿಟ್ಟ ಉಡಿಗೆತೊಡಿಗೆಗಳಂತಿವೆ. ಅದರ ಸೊಗಸು ನವ ನಾವಿನ್ಯತೆ ಹೊಂದಿದೆ. ಚಿರಂತನ ಚೆಲುವೆಯಾಗಿ ಕಂಡಿದೆ. ಆಕೆಗೆ ಮುಪ್ಪಿಲ್ಲ ಸಾವಿಲ್ಲ. ಆಕೆಯ ಅಂಗಳದಲ್ಲಿ ಹುಟ್ಟಿ ಬೆಳೆದ ಮನುಷ್ಯನಿಗೆ ಬಾಲ್ಯ – ಯೌವ್ವನ – ಮುಪ್ಪು – ಸಾವುಗಳ ಭೀತಿ ಇದೆ. ಆದರೂ ಆತನ ಅಲ್ಪಾಯುಷ್ಯದಲ್ಲಿ ತಾನು ಶಾಶ್ವತನೆಂಬ ಭ್ರಮೆಗೆ ಒಳಗಾಗಿ ನಿತ್ಯತ್ವ ಪಡೆದು ಪೋಷಿಸುವ ಭೂಮಿಯನ್ನು ತನ್ನ ಸ್ವಾರ್ಥಕ್ಕಾಗಿ ಇತಿಮಿತಿ ಇಲ್ಲದೆ ದುರುಪಯೋಗ ಮಾಡಿಕೊಳ್ಳುತ್ತಿದ್ದಾನೆ. ಇದರಿಂದ ಒಂದಲ್ಲಾ ಒಂದು ದಿನ ಎದುರಿಸಲಾರದ ಅಪಾಯಕ್ಕೆ ಒಳಗಾಗುತ್ತಾನೆ ಎಂಬ ಗ್ರಹಿಕೆ ಎಲ್ಲ ಕವಿಗಳಲ್ಲೂ ಉಂಟು. ಒಂದು ಕಡೆ ಭೂಮಿಯ ಚೆಲುವನ್ನು ಮೈದುಂಬಿ, ಮೈಮರೆತು ವರ್ಣಿಸಿರುವಂತೆ; ಮತ್ತೊಂದು ಕಡೆ ಅದರ ಕರಾಳ ಮುಖವನ್ನು ಅಷ್ಟೇ ರೌದ್ರವಾಗಿ ಚಿತ್ರಿಸಿರುವುದರೊಂದಿಗೆ ಭವಿಷ್ಯದ ಬದುಕು ಸುಖವಾಗಿರಲು ಇಂದು ಕೇವಲ ಉಪಭೋಗಿ ಹಿತಾಸಕ್ತಿಗಳಿಗೆ ಕಡಿವಾಣ ಹಾಕಿಕೊಳ್ಳಬೇಕೆಂಬ ಎಚ್ಚರಿಕೆಯನ್ನು ಕವಿಗಳು ನೀಡಿದ್ದಾರೆ. ಭೂಮಿ ತನ್ನ ಒಡಲಾಳದ ಬೇಗುದಿಯನ್ನು ಯಾವ ಕ್ಷಣದಲ್ಲಾದರೂ ಹೊರ ಚೆಲ್ಲಿ ತನ್ನ ರೌದ್ರತೆಯನ್ನು ತೋರಬಲ್ಲಳು ಎಂಬುದನ್ನು ಕವಿಗಳು ಗ್ರಹಿಸಿರುವುದು ಇಲ್ಲಿ ಕಂಡುಬರುತ್ತದೆ.

ಪ್ರಕೃತಿಯಲ್ಲೆ ನಿಂತು ಪ್ರಕೃತಿಯನ್ನು ತಾಯಿಯೆಂದು, ಮಾತೆಯೆಂದು ಗ್ರಹಿಸಿ ಚಿತ್ರಿಸಿರುವ ಕಾವ್ಯ ಒಂದು ಕಡೆಗಿದ್ದರೆ; ಸಮಾಜದ ದುರಂತಗಳಲ್ಲಿ ನಿಂತು ಪ್ರಕೃತಿಯನ್ನು ತಾಯಿಯೆಂದು, ಮಾತೆಯೆಂದು ಗ್ರಹಿಸಿ ಚಿತ್ರಿಸಿರುವ ಕಾವ್ಯ ಮತ್ತೊಂದು ಕಡೆಗಿದೆ. ಈ ಎರಡನೆ ಆಯಾಮದ ಕವಿತೆಗಳಲ್ಲಿ ಸಾಮಾಜಿಕ ಕಾಳಜಿ, ಸಾಮಾಜಿಕ ಕಳಕಳಿ ಹಾಗು ಭವಿಷ್ಯದ ಬಗ್ಗೆ ವಹಿಸಬೇಕಾದ ಎಚ್ಚರ ಇವು ತುಂಬಿವೆ. ಸಮಾಜ ಬದಲಾಗುತ್ತ ಬಂದಂತೆ ಕವಿಗಳು ಪ್ರಕೃತಿಯನ್ನು ಗ್ರಹಿಸಿರುವ ಕ್ರಮದಲ್ಲಿ ಹಾಗು ಧೋರಣೆಗಳಲ್ಲಿ

ಆಗಿರುವ ಬದಲಾವಣೆಗಳನ್ನು ಇಲ್ಲಿ ಕಾಣಬಹುದು. ಇದು ಬಂಡವಾಳಶಾಹಿ ಮತ್ತು ಕೈಗಾರಿಕೀಕರಣಗಳ ಬೆಳವಣಿಗೆಗಳಿಂದ ಪ್ರಕೃತಿಗೆ ತಂದೊಡ್ಡಿರುವ ವಿನಾಶಕಾರಿ ವಿಪತ್ತನ್ನು ಸೂಚಿಸುತ್ತದೆ. ಇಷ್ಟು ಮಾತ್ರವಲ್ಲ, ಕಾವ್ಯದ ಮೂಲಕವೇ ನಮ್ಮನ್ನು ದಂಗು ಬಡಿಸುವಂತಹ ರೂಪಕವನ್ನೂ ಕವಿಗಳು ಸೃಷ್ಟಿಸಿದ್ದಾರೆ. ಸಿದ್ದಲಿಂಗಯ್ಯನವರ 'ಗ್ರಾಮ ದೇವತೆ' ರೂಪಕವೆ ಇದಕ್ಕೆ ಒಳ್ಳೆಯ ಉದಾಹರಣೆ.

"ಸಾಹಿತ್ಯ ಮತ್ತು ಪ್ರಕೃತಿಯ ನಡುವಿನ ಸಂಬಂಧ ಅನಾದಿಕಾಲದಿಂದಲೂ ಬೆಳೆದುಕೊಂಡು ಬಂದಿದೆ. ಸಾಹಿತ್ಯ ಎನ್ನುವುದು ವಾಸ್ತವ ಜೀವನದ ಜತೆಗೆ ಲೇಖಕನ ಕಲ್ಪನಾವಿಲಾಸದ ನೆಲೆಗಟ್ಟಿನಲ್ಲಿ ಹುಟ್ಟಿಕೊಳ್ಳುವುದರಿಂದ ಪ್ರಕೃತಿ ಲೇಖಕನೊಬ್ಬನ ಭಾವನಾಶೀಲತೆಯನ್ನು ಚೈತನ್ಯಮಯತೆಯನ್ನು ಉಳಿಸುವ ವಸ್ತುವಾಗಿದೆ. ಪ್ರಕೃತಿಯೊಳಗೆ ಎಲ್ಲವೂ ಇವೆ. ಬೆಟ್ಟ, ಗುಡ್ಡ, ಕಡಲು, ಮರ, ಗಿಡ, ಹಕ್ಕಿಗಳು ಮತ್ತು ಮಾನವ. ಹಾಗಾಗಿ ಸೌಂದರ್ಯ ಪ್ರಿಯರಾದ ಲೇಖಕರ ಸೃಜನ ಶೀಲತೆಯನ್ನು ಪ್ರಕೃತಿ ಸದಾಕಾಲ ಕಾಪಾಡಿಕೊಂಡು ಬಂದಿದೆ. ಮನುಷ್ಯನ ಭಾವನಾಶೀಲತೆಯನ್ನು ಉಳಿಸಿಕೊಂಡು ಬಂದಿದೆ. ಜಗತ್ತಿನ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬಂದಿದೆ. ಯಾಂತ್ರಿಕ ಜಗತ್ತಿನಲ್ಲಿ ತನ್ನನ್ನು ಕಳೆದುಕೊಂಡಿದ್ದ ಮನುಷ್ಯನಿಗೆ ಆಸಕ್ತಿಯಾಗಿ ನವಚೈತನ್ಯವನ್ನು ನೀಡಿದೆ. ಹಾಗಾಗಿ ಪ್ರಕೃತಿ ಸೌಂದರ್ಯಕ್ಕೆ ತಲ್ಲೀನನಾಗದ ಮನುಷ್ಯ, ಯಂತ್ರಕ್ಕೆ ಸಮನಿದ್ದ ಹಾಗೆ."[೮] ಎಂಬ ಮಾತು ಆಪ್ಯಾಯಮಾನವಾದುದು ನಿಜ. ಆದರೆ ಉಪಭೋಗಿಸುವುದರಲ್ಲೆ ಮುಂದಾಗಿದ್ದೇವೆಯೇ ಹೊರತು, ಉಳಿಸಿ, ಬೆಳೆಸುವುದರಲ್ಲಿ ಉದಾಸೀನ ರಾಗಿದ್ದೇವೆ. ಸದಾ ಕಾಲವೂ ಜೀವಜಾಲಕ್ಕೆ ಆಶ್ರಯವಿತ್ತು, ವೈವಿಧ್ಯತೆಯಿಂದ ಕಂಗೊಳಿಸುವ ನಿಸರ್ಗವನ್ನು ಇಂದು ಜೋಪಾನಗೊಳಿಸಬೇಕಾದ ಹೊಣೆ ಎಲ್ಲರದಾಗಿದೆ. ಇದು ನಮ್ಮೆಲ್ಲರ ಮನದಾಳದಿಂದ ಹುಟ್ಟಿ, ಬದುಕಿನಲ್ಲಿ ಚಾಲ್ತಿ ಪಡೆದಾಗ ಮಾತ್ರ ಶಾಂತಮಯ ನಿಸರ್ಗ ತಾಯಿಯ ದರ್ಶನವಾಗುತ್ತದೆ. ಇಲ್ಲದಿದ್ದರೆ ಭದ್ರಕಾಳಿಯ ಕರಾಳ ರೂಪದ ದರ್ಶನವಾಗುತ್ತದೆ.

ಕೊನೆ ಟಿಪ್ಪಣಿಗಳು:

೧. ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ. ಡಾ.ಜಿ.ಕೃಷ್ಣಪ್ಪ, ಪುಟ: ೨೧೭
೨. ಸ್ತ್ರೀ ಮತ್ತು ರಾಜಕಾರಣ – ಕೇಶವ ಶರ್ಮ, ಪುಟ: ೧೧.
೩. ಪ್ರಕೃತಿ, ಡಾ.ವಿಜಯ ಸುಬ್ಬರಾಜ್. ಜಿ.ಎಸ್.ಎಸ್. ೭೫ ಗೌರವ, ಸಂ. ಡಾ.ಕೆ.ವಿ.ನಾರಾಯಣ, ಪುಟ: ೪೩೯.
೪. ಗ್ರಾಮ ದೇವತೆಯ ಪರಿಕಲ್ಪನೆ, ಡಾ.ಸಿದ್ದಲಿಂಗಯ್ಯ, ದಲಿತ ಚಿಂತನೆ, ಸಂ. ಮೊಗಳ್ಳಿ ಗಣೇಶ್, ಪುಟ: ೧೦೯.
೫. ದಕ್ಷಿಣ ಕನ್ನಡ ಕಾವ್ಯದ ವಿಭಿನ್ನ ನೆಲೆಗಳು. ಡಾ.ಸಂತೋಷ ಚೊಕ್ಕಾಡಿ. ಪುಟ: ೧೬೭
೬. ಪಕ್ಷಿಕಾಶಿ, ಕುವೆಂಪು, ಪುಟ: ೨.
೭. ಮೇಲಿನಂತೆ, ಪುಟ : ೪೭

೮. ಸೀಳು ನೋಟ – ಎಸ್.ವಿ.ಪರಮೇಶ್ವರ ಭಟ್ಟ, ಪುಟ: ೧೧೬
೯. ದೇವತಾ ಪೃಥವಿ – ಮಧುರ ಚೆನ್ನ ಪುಟ: ೩೬
೧೦. ಮಧುರ ಚೆನ್ನ, ಗುರುಲಿಂಗ ಕಾಪಸೆ, ಪುಟ: ೭೯.
೧೧. ಮೇಲಿನಂತೆ, ಪುಟ: ೭೯.
೧೨. ಬೆಳಕಿನ ಬೀಜ, ಡಾ. ಗೀತಾ ವಸಂತ, ಪುಟ: ೫೦.
೧೩. ದೇವತಾ ಪೃಥವಿ, ಮಧುರಚೆನ್ನ, ಪುಟ: ೨೧.
೧೪. ಮಧುರಚೆನ್ನ, ಗುರುಲಿಂಗ ಕಾಪಸೆ, ಪುಟ: ೬೪.
೧೫. ಕನ್ನಡದ ಬಾವುಟ, ಕ.ಸಾ.ಪ., ಬೆಂಗಳೂರು, ಪುಟ: ೧೧೯.
೧೬. ವಿನಯ, ದ.ರಾ.ಬೇಂದ್ರೆ, ಪುಟ: ೨೧.
೧೭. ಮರಿಯಾದೆ, ದ.ರಾ.ಬೇಂದ್ರೆ, ಪುಟ: ೧೮.
೧೮. ನಮನ, ದ.ರಾ.ಬೇಂದ್ರೆ, ಪುಟ: ೫೦.
೧೯. ಮೇಲಿನಂತೆ, ಪುಟ: ೫೧.
೨೦. ಭೂಮಿತಾಯಿ, ಪುಟಬಂಗಾರ, ದ.ರಾ.ಬೇಂದ್ರೆ, ಪುಟ:
೨೧. ಪುಟ ಬಂಗಾರ, ವಾಮನ ಬೇಂದ್ರೆ, ಪುಟ: ೨೦೬
೨೨. ಸಖೀಗೀತ, ದ. ರಾ. ಬೇಂದ್ರೆ, ಪುಟ: ೭೧.
೨೩. ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಾಯನ, ಡಾ.ಜಿ.ಕೃಷ್ಣಪ್ಪ, ಪುಟ: ೨೬೧.
೨೪. ಅರಳು ಮರುಳು, ದ.ರಾ.ಬೇಂದ್ರೆ, ಪುಟ: ೧೬೫.
೨೫. ಮುಗಿಲ ಮಲ್ಲಿಗೆ, ದ.ರಾ.ಬೇಂದ್ರೆ, ಪುಟ: ೭೫.
೨೬. ದ.ರಾ.ಬೇಂದ್ರೆ, ಕೀರ್ತಿನಾಥ ಕುರ್ತುಕೋಟಿ, ಪುಟ: ೧೦.
೨೭. ಖೆಡ್ಡಾಕ್ಕೆ ಹೋದಂದು ಕಪಿನೀಯ ತೀರದಲ್ಲಿ, ಕುವೆಂಪು, ಪುಟ: ೪೧.
೨೮. ಅಗ್ನಿ ಹಂಸ, ಕುವೆಂಪು, ಪುಟ: ೯೦.
೨೯. ಪಕ್ಷಿಕಾಶಿ, ಕುವೆಂಪು, ಪುಟ: ೧೭
೩೦. ಅನಿಕೇತನ, ಕುವೆಂಪು, ಪುಟ: ೪೩.
೩೧. ಮೇಲಿನಂತೆ, ಪುಟ: ೫೩.
೩೨. ಕೃತ್ತಿಕೆ, ಕುವೆಂಪು, ಪುಟ: ೩೪.
೩೩. ಮೇಲಿನಂತೆ, ಪುಟ: ೯೧.
೩೪. ಕಲಾ ಸುಂದರಿ, ಕುವೆಂಪು, ಪುಟ: ೪೩.
೩೫. ಕೊಳಲು, ಕುವೆಂಪು, ಪುಟ: ೬೭.
೩೬. ಮೇಲಿನಂತೆ, ಪುಟ: ೬೮.
೩೭. ದಿನಕರನ ಚೌಪದಿ, ದಿನಕರ ದೇಸಾಯಿ, ಪುಟ: ೨೬೯.
೩೮. ಮೇಲಿನಂತೆ, ಪುಟ: ೧೫೬.
೩೯. ಮೇಲಿನಂತೆ, ಪುಟ: ೩೭೫.
೪೦. ಜನಕಾವ್ಯ ದೃಷ್ಟಿ, ಬಿ.ಎ.ಸನದಿ, ಪುಟ: ೭೧.
೪೧. ಮಲ್ಲಿಗೆಯ ಮಾಲೆ, ಕೆ.ಎಸ್.ನ., ಪುಟ: ೩೩೩.
೪೨. ಕೆ.ಎಸ್.ಎನ್. ಅವರ ಸುವರ್ಣ ಮಾಧ್ಯಮದ ಕಾವ್ಯ, ಚಂದನ, ಸಂ.ಜಿ.ಎಸ್.ಶಿವರುದ್ರಪ್ಪ, ಪುಟ: ೭೨.
೪೩. ಇಹದ ಪರಿಮಳದ ಹಾದಿ, ನರಹಳ್ಳಿ ಬಾಲಸುಬ್ರಮಣ್ಯ, ಪುಟ: ೧೬೪.
೪೪. ಮಲ್ಲಿಗೆಯ ಮಾಲೆ, ಕೆ.ಎಸ್.ನ., ಪುಟ: ೩೬೩.
೪೫. ಮೇಲಿನಂತೆ, ಪುಟ: ೩೬೫.
೪೬. ಮೇಲಿನಂತೆ, ಪುಟ: ೩೭೩.
೪೭. ಮೇಲಿನಂತೆ, ಪುಟ: ೨೮೯.
೪೮. ತಾಂತ್ರಿಕ ಹಿನ್ನೆಲೆ – ನವೋದಯ ಕಾವ್ಯದಲ್ಲಿ, ಸುಜನಾ, ಚಂದನ, ಸಂ.ಜಿ.ಎಸ್.ಶಿವರುದ್ರಪ್ಪ, ಪುಟ: ೧೩೧.
೪೯. ಮಲ್ಲಿಗೆಯ ಮಾಲೆ, ಕೆ.ಎಸ್.ನ., ಪುಟ: ೨೭೧.

೫೦. ಬಿಳಿಯ ಹೂಗಳ ಕವಿತೆ ಗೋರಿಗಳ ಮೇಲೆ, ಒಂದು ವಿಶ್ಲೇಷಣೆ,
ಎಚ್.ಎಸ್.ರಾಘವೇಂದ್ರರಾವ್, ಚಂದನ, ಸಂ.ಜಿ.ಎಸ್.ಶಿವರುದ್ರಪ್ಪ, ಪುಟ: ೧೮೮.
೫೧. ನಿನ್ನ ನಗೆಮಲ್ಲಿಗೆ, ಐರಾವತ, ಕೆ.ಎಸ್.ನರಸಿಂಹಸ್ವಾಮಿ, ಪುಟ: ೪೯೦.
೫೨. ಮೇಲಿನಂತೆ, ಪುಟ: ೧೨೮.
೫೩. ಕವಿ ಮತ್ತು ಕಾವ್ಯ ಪುಟ: ೧೪೫.
೫೪. ಮಲ್ಲಿಗೆಯ ಮಾಲೆ, ಕೆ.ಎಸ್.ನ., ಪುಟ: ೨೪೨.
೫೫. ಮೇಲಿನಂತೆ, ಪುಟ: ೪೬೧.
೫೬. ಮೇಲಿನಂತೆ, ಪುಟ: ೪೭೦.
೫೭. ಜಿ.ಎಸ್.ಎಸ್. ಸಮಗ್ರ ಕಾವ್ಯ, ಜಿ.ಎಸ್.ಶಿವರುದ್ರಪ್ಪ, ಪುಟ: ೪.
೫೮. ಕನ್ನಡ ಪರಂಪರೆ ಹಾಗೂ ಜಿ.ಎಸ್.ಎಸ್. ಕಾವ್ಯ, ಡಾ.ನರಹಳ್ಳಿ ಬಾಲಸುಬ್ರಮಣ್ಯ,
ಹಣತೆ, ಸಂ.ಡಿ.ಎಸ್.ನಾಗಭೂಷಣ, ಪುಟ: ೧೨೫.
೫೯. ನಡೆದಿದೆ ಪೂಜಾರತಿ, ಡಾ.ಎನ್.ಎಸ್.ಲಕ್ಷ್ಮಿನಾರಾಯಣ ಭಟ್ಟ, ಪುಟ: ೯೧.
೬೦. ತಾಯಿ, ಎಚ್.ಜಿ.ಸಣ್ಣಗುಡ್ಡಯ್ಯ, ಗೋಗ್ರಹಣ, ಸಂ.ಎಂ.ಸಿ.ಲಲಿತ, ಪುಟ: ೨೪.
೬೧. ಆಕಾಶ ಬುಟ್ಟಿ, ಚೆನ್ನವೀರ ಕಣವಿ, ಪುಟ: ೧೦೦.
೬೨. ಕೆ.ಎಸ್.ನಿಸಾರ್ ಅಹಮದ್ ರವರ ಪ್ರಾತಿನಿಧಿಕ ಕವನಗಳು, ಕೆ.ಎಸ್.ನಿಸಾರ್ ಅಹಮದ್,
ಪುಟ: ೧೬೫.
೬೩. ಸಮಗ್ರ ಸೃಜನ, ಗಿರಡ್ಡಿ ಗೋವಿಂದರಾಜ, ಪುಟ: ೧೮.
೬೪. ಮೇಲಿನಂತೆ, ಪುಟ: ೫೨.
೬೫. ಮೆರವಣಿಗೆ, ಡಾ.ಸಿದ್ದಲಿಂಗಯ್ಯ, ಪುಟ: ೨೫.
೬೬. ಹೊಸ ಕವಿತೆಗಳು, ಡಾ.ಸಿದ್ಧಲಿಂಗಯ್ಯ, ಪುಟ: ೨೨.
೬೭. ಶಿಶಿರ ಬಾಲೆ, ಗಣಪತಿ ಹೆಗಡೆ, ಪುಟ: ೬೩.
೬೮. ಕಾವ್ಯ ಕನ್ನಿಕೆ, ಬಿ.ಪಿ.ನಾಗರಾಜ್, ಪುಟ: ೪೨.
೬೯. ಸದಬಿರುಚಿ ಕವಿ. ವಿ. ಸೀ, ದೊಡ್ಡರಂಗೇ ಗೌಡ, ಗೌರವ, ಸಂ.ಕೆ.ವಿ.ನಾರಾಯಣ, ಪುಟ:
೪೦೨.
೭೦. ದಕ್ಷಿಣ ಕನ್ನಡ ಕಾವ್ಯದ ವಿಭಿನ್ನ ನೆಲೆಗಳು, ಡಾ.ಸಂತೋಷ ಚೊಕ್ಕಾಡಿ, ಪುಟ: ೧೬೬

ಅಧ್ಯಾಯ - ೫

ಜೈವಿಕ ಹಿನ್ನೆಲೆಯಲ್ಲಿ ಮಾತೃತ್ವ

ಮಾತುಗಳಿಗೆ ಮಿಗಿಲಾದ, ಭಾವನೆಗೆ ಮೀರಿದ, ಕಲ್ಪನೆಗೆ ಸಿಗದ ವ್ಯಕ್ತಿತ್ವ ತಾಯಿತನ. ಅದು ಮಹಿಳೆಯರಿಗೆ ಮಾತ್ರ ಲಭ್ಯವಾಗುವ ಉನ್ನತವಾದ ಘಟ್ಟ. ಅರಸ - ಮಂತ್ರಿ ಇರಬಹುದು, ಬಡವ - ಬಲ್ಲಿದನಿರಬಹುದು, ಹೆಣ್ಣು - ಗಂಡಿರಬಹುದು, ಯತಿ - ಮುನಿಗಳಿರಬಹುದು ಅವರೆಲ್ಲರೂ ತಾಯಿಯ ಗರ್ಭದಿಂದ ರೂಪುತಾಳಿಯೇ ಈ ಜಗತ್ತಿಗೆ ಕಾಲಿಡಬೇಕು. ತಾಯಿಯಿಲ್ಲದ ಹುಟ್ಟು ಕಲ್ಪಿಸಿಕೊಳ್ಳಲು ಸಾಧ್ಯವಾಗದು. ತಂದೆ ಯಾರೆಂಬ ಪ್ರಶ್ನೆಯೆದ್ದರೂ ಏಳಬಹುದು. ಆದರೆ ತಾಯಿ ಯಾರೆಂಬ ಪ್ರಶ್ನೆ ಯಾರ ಬದುಕಿನಲ್ಲೂ ಏಳುವುದಿಲ್ಲ. ಅದರಿಂದಲೆ 'ತಂದೆ ಕಲ್ಪನೆ, ತಾಯಿ ವಾಸ್ತವ' ಎಂಬ ಹೇಳಿಕೆ ಇದೆ. ಇಲ್ಲಿ ತಾಯಿಯನ್ನು ಅನುಮಾನಿಸುವ ಪುರುಷ ಪ್ರಧಾನ ದೃಷ್ಟಿಕೋನಕ್ಕೆ ಮಾತ್ರ ಅವಕಾಶವಿಲ್ಲ. ಹುಟ್ಟಿನ ಮೂಲವೇ ತಾಯಿ. ಹಾಗಾಗಿ ಈ ಲೋಕದ ಜೀವಿಗಳೆಲ್ಲರಿಗೂ ತಾಯಿಯೇ ಮೂಲವಾಗಿರುವುದರಿಂದ ಭಾರತೀಯರು ಮಾತ್ರವಲ್ಲ ಜಗತ್ತಿನ ಎಲ್ಲ ಜನರೂ ಕೂಡ ತಾಯಿಯನ್ನು ವಿಶೇಷವಾಗಿ ಪರಿಗಣಿಸುವುದು, ಕೊಂಡಾಡುವುದು ಸಹಜ. ಸ್ತ್ರೀಯನ್ನು ಹೀಯಾಳಿಸುವ, ಶೋಷಣೆಗೈಯ್ಯುವ, ನಿಯಂತ್ರಿಸುವ, ಗುಲಾಮಳನ್ನಾಗಿ ಮಾಡಿಕೊಳ್ಳುವ, ಭೋಗದ ವಸ್ತುವನ್ನಾಗಿ ಕಾಣುವ ಜಗತ್ತಿನಲ್ಲೂ ಕೂಡ ತಾಯಿಯನ್ನು ಭಿನ್ನವಾಗಿ ನೋಡುತ್ತಾರೆ. ಆಕೆಯನ್ನು ದೇವರೆಂದು ಪರಿಗಣಿಸಿ ಗೌರವಿಸಿದ್ದಾರೆ. ಶ್ರೀಸಾಮಾನ್ಯರಾದಿಯಾಗಿ, ದಾರ್ಶನಿಕರು, ಕವಿ - ಕಲಾವಿದರೂ ಕೂಡ ಆಕೆಯನ್ನು ಒಂದೇ ನಿಲುವಿನಲ್ಲಿ ಕಂಡಿದ್ದಾರೆ. ತಾಯಿಯನ್ನು ನೋಡುವ ದೃಷ್ಟಿಯೊಂದೆ. ಆದರೆ ಅಭಿವ್ಯಕ್ತಿ ಮಾತ್ರ ಭಿನ್ನ. ಇಂತಹ ವೈಶಿಷ್ಟ್ಯತೆಗೆ ತಾಯಿ ಆಕರಳಾಗಿದ್ದಾಳೆ. ಮಹಾ ಕವಿಗಳ ಬರವಣಿಗೆಗೆ ಮೀರಿ ನಿಂತಿದ್ದಾಳೆ. ಕಲ್ಪನೆಗೆ ಅತೀತವಾಗಿದ್ದಾಳೆ. ಕವಿಗಳಲ್ಲಿ ಕಂಡು ಬರುವ ಮಾತೃತ್ವದ ಹಿರಿಮೆಯನ್ನು ಕಂಡಾಗ ಈ ಅಂಶ ಸ್ಪಷ್ಟವಾಗುತ್ತದೆ.

ಎಲ್ಲ ಕವಿಗಳು ದರ್ಶಿಸಿರುವ ತಾಯಂದಿರು ಪೂಜಾರ್ಹರೇ ಆದರೂ ಕೂಡ, ಎಲ್ಲರ ನೋಟ ಒಂದೇ ಆಗಿರುವುದಿಲ್ಲ. ಕನ್ನಡ ಕವಿಗಳ ಎಲ್ಲ ವರ್ಗದವರ ತಾಯಂದಿರು ಒಂದೇ ಸ್ವರೂಪದಲ್ಲಿ ವ್ಯಕ್ತವಾಗಿಲ್ಲ. ಅದರಲ್ಲಿ ಮುಖ್ಯವಾಗಿ ಸಂಪ್ರದಾಯಸ್ಥ ವರ್ಗದವರ ತಾಯಿ, ಮಧ್ಯಮ ವರ್ಗದವರ ತಾಯಿ ಹಾಗೂ ದಲಿತ ವರ್ಗದವರ ತಾಯಿಯರು ಭಿನ್ನವಾಗಿ ವಿಶಿಷ್ಟ ಅಭಿವ್ಯಕ್ತಿಗೆ ಒಳಗಾಗಿದ್ದಾರೆ. ಆಯಾ ವರ್ಗದ ಕವಿಗಳು ತಾವು ಕಂಡ ತಮ್ಮ ತಾಯಂದಿರ ಹಿರಿಮೆಯನ್ನು ತಮ್ಮದೇ ಆದ ಭಾಷೆ ಭಾವನೆಯಲ್ಲಿ ನೈಜವಾಗಿ ಚಿತ್ರಿಸಿದ್ದಾರೆ.

ಆದರ್ಶ ನೆಲೆಯಾಗಿ ತಾಯಿ: ಸಂಪ್ರದಾಯಸ್ಥ ವರ್ಗ ಅಂದರೆ ಶ್ರೀಮಂತರ, ಮೇಲ್ವರ್ಗದವರ ತಾಯಿಯರು ಸಾಂಪ್ರದಾಯಕ ಕಲ್ಪನೆಯಲ್ಲೆ ಅಭಿವ್ಯಕ್ತಿಗೊಂಡಿದ್ದಾರೆ. ಅವರನ್ನು ತುಂಬ ಶಿಷ್ಟವಾದ ಪರಿಭಾಷೆಯಲ್ಲಿ, ಆದರ್ಶದ ಹಿರಿಮೆಯಲ್ಲಿ, ಪೌರಾಣಿಕ ಆವರಣದಲ್ಲಿ ನೆಲೆಗೊಳಿಸಿರುವುದು ಕಂಡುಬರುತ್ತದೆ. ಬದುಕಿನ ಯಾವ ಕರಾಳ ಸಂಕಟಗಳಿಗೂ ಸಿಗದೆ ಬದುಕಿರುವ ಜೀವನ ವಿಧಾನ ಅವರಲ್ಲಿದೆ. ಹಾಗಾಗಿ ಆ

ತಾಯಂದಿರಲ್ಲಿ ಯಾವ ವೈವಿಧ್ಯತೆಯೂ ಇಲ್ಲ. ಕವಿಯ ಶ್ರಮಕ್ಕೆ ಕಾರಣವೂ ಇಲ್ಲ. ನಿರಾತಂಕವಾಗಿ, ಏಕಪಾತ್ರದಲ್ಲಿ ಸಲೀಸಾಗಿ ಹರಿವ ನದಿಯಂತೆ ಆಕೆಯನ್ನು ಬಣ್ಣಿಸಿದ್ದಾರೆ. ಆಕೆಯಿಂದ ಪಡೆದ ಜನ್ಮ ಶ್ರೇಷ್ಠವೆಂದೂ, ಆಕೆ ದೇವತೆಗೆ ಮಿಗಿಲೆಂದೂ, ಆಕೆಯ ಋಣ ತೀರಿಸಲು ಯಾವ ಜನ್ಮದಲ್ಲೂ ಸಾಧ್ಯವಾಗದೆಂಬ ಭಾವಗೀತಾತ್ಮಕವಾಗಿ, ಮಧುರ ನುಡಿಗಳಿಂದ ಬಣ್ಣಿಸಿರುವುದು ಕಂಡುಬರುತ್ತದೆ.

ಅದರಲ್ಲೂ ನವೋದಯದ ಎಲ್ಲ ಕವಿಗಳೂ ತಾಯಿಯನ್ನು ಈ ಚೌಕಟ್ಟಿನೊಳಗೆ ನೋಡಿದ್ದಾರೆ. ಪ್ರಾಸ ಬದ್ಧವೂ, ಕಲಾತ್ಮಕವೂ, ಗೀತಾತ್ಮಕವೂ ಆದ ವಿಶೇಷ ನುಡಿಗಳಿಂದ ಆಕೆಯನ್ನು ಕಂಡರಿಸಿದ್ದಾರೆ. ಆಕೆಯ ವ್ಯಕ್ತಿತ್ವಕ್ಕೆ ಭವ್ಯತೆಯ ಆವರಣ ನಿರ್ಮಿಸಿದ್ದಾರೆ. ದೇವಾನುದೇವತೆಗಳಿಗಿಂತಲೂ ಮಿಗಿಲಾಗಿ ಬಣ್ಣಿಸಿ ಕೃತಜ್ಞತೆಯಿಂದ ತಲೆಬಾಗಿದ್ದಾರೆ. ಕಠಿಣ ನುಡಿಗಳಾಗಲಿ, ಉಪೇಕ್ಷೆಯ ಮಾತುಗಳಾಗಲಿ, ಔದಾಸೀನ್ಯದ ಎಳೆಗಳಾಗಲಿ ಯಾರಲ್ಲೂ ಕಾಣಲು ಬರುವುದಿಲ್ಲ. ಹೆತ್ತ ತಾಯಿಯನ್ನು ಹೊತ್ತ ಭೂಮಿಯನ್ನು ವಿಶೇಷವಾಗಿ ಸ್ಮರಿಸುವುದರೊಂದಿಗೆ ಎರಡರಲ್ಲೂ ದೈವತ್ವದ ಅಂಶವನ್ನು ಕಂಡಿದ್ದಾರೆ. ಭಗವಂತನೆ ತಾಯಿರೂಪದಲ್ಲಿ ನಮ್ಮನ್ನು ಉದ್ಧರಿಸಲು ಬಂದಿದ್ದಾನೆಂಬ ನಂಬಿಕೆಯಿಂದ ಆರಾಧಿಸಿದ್ದಾರೆ. ಪುರಾಣ ಪುಣ್ಯ ಪುರುಷರ ಸ್ಥಾನದಲ್ಲಿ ನಿಲ್ಲಿಸಿ ಗೌರವಿಸಿದ್ದಾರೆ. ಉದಾಹರಣೆಗೆ ಬೇಂದ್ರೆಯವರ ಈ ಸಾಲುಗಳನ್ನು ಗಮನಿಸಬಹುದು.

ಹೃದಯಾರವಿಂದದಲ್ಲಿರುವ ನಾರಾಯಣನೆ
ತಾನಾಗಿ ದತ್ತನರನು ।
ವಿಶ್ವದೊಳ ನುಡಿಯಾಗಿ ಕನ್ನಡಿಸುತಿಹನಿಲ್ಲಿ
ಅಂಬಿಕಾತನಯನಿವನು ।

ಅಂಬಿಕಾತನಯನು ಎಂಬುದರಲ್ಲಿ ಕಣುವ ಅಭಿಮಾನ ತಂದೆಯ ಮಗನಾಗಿ ಎಂಬುದರಲ್ಲಿ ಕಾಣದು. ತಂದೆಯ ಮುಖೇನ ಅಥವಾ ತನ್ನ ಖ್ಯಾತಿಯ ಮುಖೇನ ವ್ಯಕ್ತಿ ಪರಿಚಯಿಸಿಕೊಳ್ಳುವುದು ಸಹಜ. ಆದರೆ ಬೇಂದ್ರೆಯವರು ಇದಕ್ಕೆ ಭಿನ್ನವಾಗಿ ಆಧ್ಯಾತ್ಮಿಕದ ಚೌಕಟ್ಟಿನಲ್ಲಿ ತನ್ನ ತಾಯಿಯ ಮುಖೇನ ಪರಿಚಯಿಸಿಕೊಳ್ಳವುದು ಅವರು ತನ್ನ ತಾಯಿಯ ಬಗ್ಗೆ ತಾಳಿರುವ ಗೌರವ ಭಾವನೆಯ ಅತಿಶಯತೆಯಾಗಿದೆ.

ವಾಸ್ತವ ಮೂರ್ತಿಯಾಗಿ ಕಂಡ ಬಗೆ: ಮಧ್ಯಮ ವರ್ಗದ ಅದರಲ್ಲೂ ಶೂದ್ರ ವರ್ಗದವರು ಸನಾತನ ದೃಷ್ಟಿಯಿಂದ ಸ್ವಲ್ಪ ಭಿನ್ನವೂ, ವಾಸ್ತವಿಕವೂ ಆದ ನೆಲೆಯಲ್ಲಿ ಕಂಡಿದ್ದಾರೆ. ಆಕೆಯ ಬಡತನದ ಬದುಕನ್ನು ಜೀವನದ ಕಹಿ ಘಟನೆಗಳನ್ನು ನೈಜವಾಗಿ ಬಿಂಬಿಸಲು ಯತ್ನಿಸಿದ್ದಾರೆ. ಈ ವರ್ಗದವರ ತಾಯಿ ದೇವತೆಯಲ್ಲ, ಜನ್ಮದಾತೆ. ಆಕೆ ಸ್ಫೂರ್ತಿಯ ಚೈತನ್ಯ, ಆಕೆಯಿಂದ ಕಲಿತದ್ದು ಜೀವನದ ಪಾಠ, ಹೋರಾಟದ ಪ್ರಜ್ಞೆ, ಸ್ವಾಭಿಮಾನದ ಬದುಕು.

ದಲಿತ – ಬಂಡಾಯದವರ ತಾಯಿ ಮೇಲಿನ ಎರಡೂ ವರ್ಗದವರ ತಾಯಿಗಿಂತ ಭಿನ್ನವಾದವಳು. ಅಲ್ಪ ಸಂಖ್ಯಾತರು, ದಲಿತ ಬಂಡಾಯದವರು ತಮ್ಮ ಕರಾಳ ಬದುಕಿನಲ್ಲಿ ಹೋರಾಡಿ ನಿಂತ ತಾಯಿಯನ್ನು ಯಥಾವತ್ತಾಗಿ ಬಿಂಬಿಸಿದ್ದಾರೆ.

ಅವರ ತಾಯಿ ಬಡತನ, ಅನಕ್ಷರತೆ, ಶೋಷಣೆಯ ಕೆಂಡದುರಿಯಲ್ಲಿ ಬೆಂದು ಬಂದವಳು. ಜೀವನವೇ ಒಂದು ಹೋರಾಟವೆಂದು ಭಾವಿಸಿದವಳು. ತುತ್ತು ಅನ್ನಕ್ಕಾಗಿ ಬೆವರು ಹರಿಸಿದವಳು. ಹಗಲು ರಾತ್ರಿಗಳ ಎಣಿಕೆಯಲ್ಲೆ ಕಾಲ ನೂಕಿದವಳು. ಅನ್ಯರ ಮನೆಯ ಆಳಾಗಿ ದುಡಿದರೂ ಸ್ವಾಭಿಮಾನ ಬಲಿಕೊಡದವಳು. ತನ್ನ ಮನೆತನಕ್ಕಾಗಿ, ಮಕ್ಕಳ ಉದ್ಧಾರಕ್ಕಾಗಿ, ಗಂಡನ ಜೀವನೋಪಾಯಕ್ಕಾಗಿ ತನ್ನನ್ನು ಶ್ರೀಗಂಧದಂತೆ ತೇಯ್ದುಕೊಂಡವಳು. ಮಳೆ– ಗಾಳಿ, ಹಗಲು – ರಾತ್ರಿ ಎನ್ನದೆ ಸದಾ ತನ್ನ ವಂಶದ ಏಳಿಗೆಗಾಗಿ ಕನಸುಗಟ್ಟಿದವಳು. ಬೆವರು ಸುರಿಸಿ, ರಕ್ತ ಬಸಿದು, ಸುಖದ ಕಲ್ಪನೆ ಇಲ್ಲದೆ ಜೀವ ಕೈಲಿಡಿದು ನವೆದವಳು. ಕೀರ್ತಿ ಗೌರವದ ಪ್ರಶ್ನೆ ಇಲ್ಲದೆ, ಸುಖ ಸಂತೋಷದ ಕಲ್ಪನೆಯಿಲ್ಲದೆ ತನ್ನ ಕುಟುಂಬದ ಉನ್ನತಿಗಾಗಿ ದುಡಿದವಳು. ಇಂತಹ ತಾಯಿಯನ್ನು ಕವಿಗಳು ಅನಾವರಣಗೊಳಿಸುವಾಗ ಎಲ್ಲಿಯೂ ಸಾಂಪ್ರದಾಯಿಕ ಶೈಲಿಯ ಬಂಧಕ್ಕೆ ಬಂಧಿಯಾಗದೆ, ದೇವಾನುದೇವತೆಗಳೆಂದು ಬಣ್ಣಿಸದೆ, ಸರಳವೂ ನೇರವೂ ಕಟುವಾಸ್ತವಿಕವೂ ಆದ ಶೈಲಿಯಲ್ಲಿ ಚಿತ್ರಿಸಿದ್ದಾರೆ. ಎಲ್ಲಿಯೂ ಆಕೆಯ ಶ್ರಮವನ್ನು, ಸ್ವಾಭಿಮಾನವನ್ನು ಮರೆಮಾಚದೆ ಕಡೆದು ನಿಲ್ಲಿಸಿದ್ದಾರೆ.

ಆದರೆ ತಾಯಿಯನ್ನು ಕುರಿತ ಕವಿಗಳಲ್ಲಿ ಸಾಮಾನ್ಯವಾಗಿ ಏಕ ಸೂತ್ರದಂತೆ ಕಾಣುವ ಅಂಶಗಳೆಂದರೆ ಆಕೆ ಜನ್ಮದಾತೆ, ಮನುಕುಲದ ಮೊದಲ ಗುರು, ಕಷ್ಟ ಸಹಿಷ್ಣಳು, ಸ್ವಾಭಿಮಾನಿ, ದೇವಸ್ವರೂಪಿ, ಅನ್ನದಾತೆ, ಮಮತಾಮಯಿ, ಆನಂದದಾಯಿ, ತಂದೆಗಿಂತಲೂ ಶ್ರೇಷ್ಠ, ದೇವರಿಗಿಂತಲೂ ಮಿಗಿಲು – ಇಂತಹ ಆದರ್ಶದ ಶ್ರೇಷ್ಠತೆಯ ಮಾತುಗಳಿಂದ ಪ್ರಶಂಸಿಸಿರುವುದು ಕಂಡುಬರುತ್ತದೆ. ಯಾವ ಕವಿಯೂ ಕೂಡ ತಂದೆಯಲ್ಲಿ ದೋಷ ಕಂಡರೂ, ತಾಯಿಯಲ್ಲಿ ದೋಷ ಕಂಡಿಲ್ಲ. ಅವಳಿಂದ ಪೋಷಿಸಲ್ಪಟ್ಟು, ಉನ್ನತಿ ಪಡೆದು ಧನ್ಯತೆಯ ಭಾವ ತಾಳಿರುವ ಕವಿಗಳು ಆಕೆಯನ್ನು ಮನದಂಗಳದ ಮಹಾದೇವಿಯಾಗಿ ಆರಾಧಿಸಿದ್ದಾರೆ. ಆಕೆಯ ಉಪಕಾರ ಪ್ರಜ್ಞೆಗೆ ಕೃತಜ್ಞತೆಯ ಧನ್ಯವಾದ ಸಲ್ಲಿಸಿದ್ದಾರೆ. ಮತ್ತೊಮ್ಮೆ ಪುನರ್ಜನ್ಮ ಲಭಿಸುವುದಾದರೆ ಆಕೆಯೇ ತಾಯಿಯಾಗಲಿ ಎಂಬ ಹರಕೆ ತಾಳುತ್ತಾರೆ. ಅವಳ ಎದೆಯಾಳದ ಮಾತೃ ಪ್ರೇಮಕ್ಕೆ ಪರ್ಯಾಯವಾದದ್ದು ಮತ್ತೊಂದಿಲ್ಲ. ಅವಳು ಅನುಭವಿಸಿರುವ ದೈಹಿಕ ವೇದನೆಯಾದಿಯಾಗಿ ಬದುಕಿನ ಬವಣೆಗಳನ್ನು ಗಮನಿಸಿದಾಗ ಆಕೆ ಸಹನಾಧರಿತ್ರಿಯಾಗಿದ್ದಾಳೆ. ಆ ಋಣವನ್ನು ಒಂದೇ ಜನ್ಮದಲ್ಲಿ ತೀರಿಸಲು ಸಾಧ್ಯವಿಲ್ಲ ಎಂಬ ಕೃತಜ್ಞತೆಯ ಮಾತುಗಳಿಂದ ಆಕೆಗೆ ಉನ್ನತ ಸ್ಥಾನಮಾನವಿತ್ತು ಗೌರವಿಸಿದ್ದಾರೆ. ತಮ್ಮ ಅಂತರಂಗದ ದೇವತೆ ಎಂದು ಪೂಜಿಸಿದ್ದಾರೆ.

ಬೇಂದ್ರೆಯವರದು ಸ್ತ್ರೀ ಪೋಷಿತವಾದ ಬಾಲ್ಯ. ಚಿಕ್ಕಂದಿನಲ್ಲೇ ಸಂಭವಿಸಿದ ತಂದೆಯವರ ಸಾವು, ಅವರನ್ನು ಅಜ್ಜ, ಅಜ್ಜಿ, ತಾಯಿಯರ ವಾತ್ಸಲ್ಯದ ಪೋಷಣೆಗೆ ಒಳಪಡಿಸಿತು. ಇಂತಹ ಸನ್ನಿವೇಶಕ್ಕೆ ಸಹಜವಾದ ಪ್ರೀತಿ ಹಾಗೂ ಶ್ರದ್ಧೆ ಒಡಮೂಡಿದ್ದರಿಂದ ತನ್ನ ತಾಯಿಯನ್ನು ವಿಶೇಷವಾಗಿ ಚಿತ್ರಿಸಿದ್ದಾರೆ. ಸಂಪ್ರದಾಯದ ಜಾಡಿನಲ್ಲೆ ತನ್ನ ತಾಯಿಯಲ್ಲಿ ದೈವೀ ಶಕ್ತಿಯನ್ನು ಕಂಡಿದ್ದಾರೆ.

"ಆದರೆ ವೈದಿಕ ಸಂಸ್ಕೃತಿಗೆ ಸಹಜವಾದ ಪುರುಷ ಪ್ರಧಾನ ನಿಲುವುಗಳು, ಅಮೂರ್ತ ವೈಚಾರಿಕತೆಯ ಕಡೆಗಿನ ಒಲುವುಗಳು ಹಾಗೂ ಕ್ರಮಬದ್ಧವಾದ ಅಧ್ಯಯನಗಳು ಬೇಂದ್ರೆಯವರ ಪಾಲಿಗೆ ಬಾರದೆ ಹೋದುದಕ್ಕೆ ಈ ಪರಿಸ್ಥಿತಿಯೇ ಕಾರಣವಾಯಿತೆಂದು ಹೇಳಬಹುದು. ಶೋಷಿತರಲ್ಲಿ ಶೋಷಿತರಾದ ಮಹಿಳೆಯರ ಬವಣೆಯ ನಿಕಟವಾದ ಪರಿಚಯವು ಬೇಂದ್ರೆಯವರ ವ್ಯಕ್ತಿತ್ವದ ಮಾರ್ದವತೆಗೆ ಕಾರಣವಾಯಿತೆಂದು ತೋರುತ್ತದೆ. ಅವರ ಕಾವ್ಯದ ಕೇಂದ್ರ ಪ್ರತೀಕಗಳಲ್ಲಿ 'ತಾಯಿ' ಎಂಬ ಪರಿಕಲ್ಪನೆಯೂ ಒಂದಾಗಿ ನಿಲ್ಲುತ್ತದೆ. ಅಷ್ಟೆ ಅಲ್ಲ ಆ ತಾಯಿತನದ ತತ್ವವೇ ಅವರ ನೈತಿಕತೆಯ ಕಲ್ಪನೆಗಳನ್ನು ರೂಪಿಸಿತೆಂದರೂ ತಪ್ಪಾಗಲಾರದು."[೧] ಅವರೇ ಹೇಳುವಂತೆ "ನನಗೆ ನೈತಿಕ ಮೊದಲಾದ ಆದರ್ಶವೆಂಬುದೇನು ಇಲ್ಲ ಎಂದೆ. ಆದರೆ ನನ್ನ ತಾಯಿ ನನ್ನನ್ನು ಕಾಪಾಡುತ್ತಿದ್ದಾಳೆ. ತಾಯಿಗೆ ಕೆಡಕೆನಿಸುವಂಥ ಯಾವುದನ್ನೂ ಮಾಡಬಾರದೆಂದು ನನ್ನ ಆತ್ಮ ಎಚ್ಚರವಾಗಿರುತ್ತದೆ. . . . . . . ತಾಯಿ ಎಂಬ ಸೂತ್ರದಲ್ಲೇ ನನ್ನ ಜೀವನ ಪೋಣಿಸಿದೆ. ನನ್ನ ತಾಯಿ ಧಾರವಾಡದ ನಗರ ದೇವತೆ 'ಧಾರವಾಡದ ತಾಯಿ' ಕನ್ನಡ ತಾಯಿ, ಭಾರತ ಮಾತೆ, ನಂತರ ಇದೀಗ ಅರವಿಂದಾಶ್ರಮದ 'ಮದರ್' ಹೀಗೆ ಮಾತೃ ಪ್ರೇಮದ ಆಕಾರ ವಿಕಾರ ಪ್ರಕಾರಗಳಿಂದ ನನ್ನ ಕಾವ್ಯ ಓತಪ್ರೋತವಾಗಿದೆ."[೨] ಅವರು ಸೃಜಿಸಿದ ಎಲ್ಲ ಪಾತ್ರಗಳಿಗಿಂತ ತಾಯಿ ಪಾತ್ರ ಶ್ರೇಷ್ಠವಾದದ್ದು. ಬಹಳಷ್ಟು ಕವಿತೆಗಳಲ್ಲಿ ತಂದೆಗಿಂತ ಮಿಗಿಲಾಗಿ ತಾಯಿಯನ್ನು ಚಿತ್ರಿಸಿದ್ದಾರೆ. ಅದು ತಾಯಿ ಪೋಷಣೆಗೆ ಒಳಗಾದ ಜೀವವಾದ್ದರಿಂದ ಅವರ ಮೇಲೆ ತಾಯಿಯ ಪ್ರಭಾವ ನಿರೀಕ್ಷೆಗೂ ಮೀರಿ ಕಾಣುತ್ತದೆ. ಬಾಲ್ಯದಲ್ಲಿ ಅವರಿಗೆ ತಂದೆಯ ಪ್ರೀತಿ ಲಭಿಸದ ಕೊರತೆಯೂ ಇದಕ್ಕೆ ಕಾರಣವಿರಬಹುದು.

ತಾಯಿ ನೆಲದ ಸಂಸ್ಕೃತಿಗೆ ತಾಯಿ, ನಾಗರಿಕತೆಗೆ ತಾಯಿ, ಬದುಕಿನ ಜೀವಾಳವೇ ತಾಯಿ. ಇಂತಹ ತಾಯಿಯನ್ನು ಬೇಂದ್ರೆಯವರು ನಾನಾ ದೃಷ್ಟಿಕೋನದಿಂದ, ಧನ್ಯತಾ ಭಾವನೆಯಿಂದ ಚಿತ್ರಿಸಿದ್ದಾರೆ. "ಬೇಂದ್ರೆಯವರಿಗೆ ವ್ಯಕ್ತಿತ್ವ ರೂಪುಗೊಳ್ಳುವುದಕ್ಕೆ ಅವರ ಮನೆತನ, ಸುತ್ತಮುತ್ತಲಿನ ಪರಿಸರ, ವಿಶ್ವವಿದ್ಯಾಲಯದ ಶಿಕ್ಷಣ ಇವುಗಳ ಹೊಣೆ ನಾಲ್ಕರಲ್ಲೊಂದು ಪಾಲಾದರೆ; ಉಳಿದ ಮೂರು ಪಾಲಿನ ಹೊಣೆ ತಾಯಿಯದು"[೩] – ಎಂಬ ಕೀರ್ತಿನಾಥ ಕುರ್ತಕೋಟಿಯವರ ಮಾತು ಉಲ್ಲೇಖನೀಯ. ಏಕೆಂದರೆ ಬೇಂದ್ರೆಯವರಿಗೆ ತಾಯಿ ಅಂದರೆ ಭಕ್ತಿ ಗೌರವ. ಅವರಿಗೆ ದೇವಿ, ಚೈತನ್ಯ ರೂಪಿಣಿ. ಅವರ ಭಾವನೆಯಲ್ಲಿ ಸ್ಫೂರ್ತಿಯ ನೆಲೆಯೇ ತಾಯಿ. ಹಾಗಾಗಿ ಅವರ ತಾಯಿ ನಾನಾ ರೂಪದಲ್ಲಿ ಗೋಚರಿಸುತ್ತಾಳೆ.

ಬೇಂದ್ರೆಯವರು 'ನಾನು' ಎಂಬ ಕವಿತೆಯಲ್ಲಿ ತಾವು ದರ್ಶಿಸಿರುವ ನಾನಾ ತಾಯಂದಿರನ್ನು ಅನಾವರಣಗೊಳಿಸಿದ್ದಾರೆ. ತಾನು ಅಂಬಿಕಾತನಯ ದತ್ತನಾದ ಬಗೆಯನ್ನು ಹೀಗೆ ನಿರೂಪಿಸಿದ್ದಾರೆ.

ವಿಶ್ವ ಮಾತೆಯ ಗರ್ಭಕಮಲ ಜಾತ – ಪರಾಗ
ಪರಮಾಣು ಕೀರ್ತಿ ನಾನು ।
ಭೂಮಿತಾಯಿ ಮೈಯ ಹಿಡಿಮಣ್ಣ ಗುಡಿಗಟ್ಟಿ
ನಿಂತಂಥ ಮೂರ್ತಿ ನಾನು ।
. . . .

ಹೃದಯಾರವಿಂದದಲ್ಲಿರುವ ನಾರಾಯಣನೆ
ತಾನಾಗಿ ದತ್ತನರನು ।
ವಿಶ್ವದೊಳ ನುಡಿಯಾಗಿ ಕನ್ನಡಿಸುತಿಹನಿಲ್ಲಿ
ಅಂಬಿಕಾತನಯನಿವನು । [೪]

ಇಲ್ಲಿ ಅಭಿಮಾನ ಮತ್ತು ನಮ್ರತೆ ಬೆರೆತಿದೆ. ಜೀವ ದೇವನಲ್ಲಿ ದತ್ತನಾಗಿ ಬರುತ್ತಾನೆ. ಹೃದಯಾರವಿಂದ ಎನ್ನುವಲ್ಲಿ ಅರವಿಂದರ ಪ್ರಭಾವ ಇರಬಹುದೇ ಎನಿಸುತ್ತದೆ. ಇದೊಂದು ಅಸಮಾನ್ಯ ಕಲ್ಪನೆಯಾಗಿದ್ದು, ". . . . . ಕವಿ ಜೀವಕ್ಕೆ ಒಬ್ಬ ತಾಯಿಯಿಂದ ಸಮಾಧಾನವಿಲ್ಲ. ಅದಕ್ಕೆ ವಿಶ್ವಮಾತೆ, ಭೂತಾಯಿ, ಭರತಮಾತೆ, ಕನ್ನಡತಾಯಿ ಮತ್ತು ಜನ್ಮ ಕೊಟ್ಟ ತಾಯಿ – ಹೀಗೆ ಐವರು ತಾಯಂದಿರು ಮತ್ತು ಐದೆಯರು (ಮುತ್ತೈದೆಯರು). ಪ್ರಪಂಚದಲ್ಲಿ ಹುಟ್ಟಿಬಂದ ಮೇಲೆ ಈ ಪಂಚ ಮಾತೆಯರ ಪ್ರೇಮದ ಪುತ್ತಳಿಯಾಗಿ, ಅವರ ಮಂಡೆಗೆ ಹುಲ್ಲು ತಾರದೆ ಹೂವ ತರುವವನಾಗಿ, ಬಾಳಿ ಬೆಳಗಬೇಕು ಎಂಬುದು ಆಶೆ".[೫]

ಕಷ್ಟ ಕಾರ್ಪಣ್ಯಗಳಲ್ಲಿಯೂ ತುಂಬ ಸಹನೆಯಿಂದ ಮಕ್ಕಳಿಗೆ ಓದು ಕಲಿಸಿ ಅವರ ದುಃಖವೇ ತನ್ನ ದುಃಖವೆಂದು ಬಾಳಿದ ತಾಯಿಯನ್ನು ಕುರಿತು ಇವರ ಅನೇಕ ಪದ್ಯಗಳಲ್ಲಿ 'ಮಾತೆ' ಕವನವೂ ಒಂದು.

ಮುತ್ತ ಬಿತ್ತಿ ಮುತ್ತ ಬೆಳೆದು
ಮಾತೆ ಚಿತ್ತದಲ್ಲಿಯೂ
ನನ್ನ ಸುತ್ತಲೆಲ್ಲಿಯೂ
. . . .
ಚಿಕ್ಕೆಗಳಲಿ ಹೂವುಗಳಲಿ
ಬಿಕ್ಕುಗಳಲಿ ನೋವುಗಳಲಿ
ಒಂದು ಸ್ಪಂದಿಸುತ್ತಿದೆ
ಅದುವೆ ಜಗವ ಮುತ್ತಿದೆ
ಈ ವಿನೋದ
ವಿಮಲ ಬೋಧ
ಜೀವಮೋದವಾಗಿದೆ. [೬]

ನಿಸರ್ಗ ತಾಯಿಯ ವಾತ್ಸಲ್ಯದಂತೆ, ಜನ್ಮದಾತೆಯ ವಾತ್ಸಲ್ಯ ಶಕ್ತಿ ಇಡೀ ಬದುಕಿನಲ್ಲಿ ರಕ್ಷಾ ಕವಚದಂತಿದೆ. ಅದು ಜೀವನೋತ್ಸಾಹಕ್ಕೆ ನೆಲೆಯಾಗಿದೆ. ಇದು ಜಗದ ಎಲ್ಲ ತಾಯಂದಿರಲ್ಲೂ ಕಾಣುವಂತಹುದು. ತಾಯಿಯ ರಕ್ಷೆಯೇ ಜಗದ ರಕ್ಷೆಯಾಗಿದೆ ಎಂಬುದು ಕವಿಯ ಭಾವವಾಗಿದೆ.

ತಮ್ಮ 'ಗಂಡಸು ಹೆಂಗಸಿಗೆ' ಎಂಬ ವಾರ್ಧಕ ಷಟ್ಪದಿಯ ಕವನದಲ್ಲಿ ಇಡೀ ಸ್ತ್ರೀ ಸಮೂಹವನ್ನು 'ತಾಯಿ' ಎಂದೇ ಕರೆದಿದ್ದಾರೆ.

ತಾಯೆ ಕನಿಮನೆಯೇ ನೀ, ಅಕ್ಕ ಅಕ್ಕರತೆಯೇ
ಬಾಯೆನ್ನ ತಂಗಿ ಮುದ್ದು ಬಂಗಾರವೇ,
ನೀಯೆನ್ನ ಹೆಂಡತಿಯೋ ಮೈಗೊಂಡ ನನ್ನಿಯೋ

ಮಗಳೊ ನನ್ನೆದೆಯ ಮುಗುಳೊ?
ಈ ಯೆನ್ನ ಇರವಿಂಗೆ ಜೀವನದ ಬಾಳ್ವಿಕೆಗೆ
ಈ ಯುತ್ತ ಕೈ ಮೈಗಳಂ ಜೀವ ಭಾವದಿಂ
ಸ್ತ್ರೀಯೆ, ಕಾಪಾಡಿದೌ ಪಾಡಾಗಿ ಮೂಢನನು
ತಕ್ಕೈಸಿ ನೂರು ತೆರೆದಿ. [೭]

ತಾಯ್ತನ ಒಂದೇ ಆದರೂ ಕೂಡ ಅದರ ಅಕ್ಕರೆ ಪ್ರೀತಿ ಮಮಕಾರಗಳು ಬೇರೆ ಬೇರೆ ರೂಪದ ಸಂಬಂಧಗಳ ಒಡಲಿನಲ್ಲಿಯೂ ಕಂಡುಬರುತ್ತದೆ. ಎಂಬುದನ್ನು ಕವಿ ಗುರುತಿಸಿದ್ದಾರೆ. ಒಬ್ಬ ಪುರುಷನ ವ್ಯಕ್ತಿತ್ವದ ಪರಿಪೂರ್ಣತೆಯ ಅರಳುವಿಕೆಗೆ ಇವೆಲ್ಲವೂ ಅತ್ಯವಶ್ಯ ಎನ್ನುವುದನ್ನು ಮಾನವ ಸಂಬಂಧಗಳ ಎಳೆಗಳಲ್ಲಿ ಗುರುತಿಸಿದ್ದಾರೆ. ಇದು ಎಲ್ಲ ಕಾಲದ ಸತ್ಯವೂ ಹೌದು. ಹಾಗಾಗಿ ಬೇಂದ್ರೆಯವರಿಗೆ ತಾಯಿ ಅಂದರೆ ಬೆಳಕು ಮತ್ತು ಜ್ಞಾನ. ಒಡಹುಟ್ಟಿದ ಅಕ್ಕ ತಂಗಿಯರು ಪ್ರೀತಿಯ ಪ್ರತೀಕವಾದರೆ; ಯೌವ್ವನದಲ್ಲಿ ಜೊತೆಗೂಡಿದ ಹೆಂಡತಿ ಸತ್ಯದ ಪ್ರತೀಕವಾದರೆ; ಮಗಳು ತನ್ನೆದೆಯ ಮುಗುಳು ಎಂದು 'ಕರುಳು' ಕವಿತೆಯಲ್ಲಿ ಬಣ್ಣಿಸಿದ್ದಾರೆ.

ತಾಯಿ ಮಡದಿಯ ಹರ್ಷ ಬಾಷ್ಪವೇ ಅವನ ಬದುಕಿನ ಹುರುಳು
. . . .
ಅಯ್ಯೋ ನೊಂದೆ, ಬಂದೆಯಾ ಕಂದ ದಣಿದೆ ಎನ್ನುವ ಕರುಳು' [೮]

ತಾಯಿಯ ಕರುಳು ವಾತ್ಸಲ್ಯಮಯ, ಕಾಪಾಡುವ ಶ್ರೀರಕ್ಷೆ ಎಂಬುದನ್ನು ಬಿಂಬಿಸಿದ್ದಾರೆ.

"ಕರುಳಿನ ಕವನಗಳು' ಬೇಂದ್ರೆಯವರ ಮಾತೃತ್ವಕ್ಕೆ ಮಿಡಿದ ನುಡಿಗಳಾಗಿವೆ. 'ಬೇಂದ್ರೆಯವರ ಮುಂಚಿನ ಸಂಗ್ರಹವಾದ 'ಕರುಳಿನ ವಚನಗಳು' ತಲೆಬರಹದ ಬಗ್ಗೆ ತಮ್ಮ ಲಕ್ಷ್ಯ ಹರಿಸುತ್ತೇನೆ. ಬೇಂದ್ರೆಯವರ ಕಾವ್ಯದ ಮೂಲಗುಣ ಕರುಳು, ಲವಲವಿಕೆ, ಹಳಹಳಿಕೆ ಇಂಥ ಶಬ್ದಗಳು ಮೂಲಭಾವದ ನೇರ ಅಭಿವ್ಯಕ್ತಿಗಳು (Nostalgia). ಏನೋ ಅಸ್ಪಷ್ಟ ಕಳವಳ, ಈ ಭಾವಗಳು ಮನುಷ್ಯನಲ್ಲಿ ಇದ್ದ ಮೂಲಕವೇ ಈ ಶಬ್ದಗಳು ಹುಟ್ಟಿಕೊಂಡವು. ಹೃದಯ ಪ್ರೇಮದ ದ್ಯೋತಕವಾದರೆ, ತಲೆ ವಿಚಾರಗಳ ಅಂಗವಾದರೆ, ಕರುಳು ನಮ್ಮ ಮೂಲ ಅಸ್ಪಷ್ಟ ಹಳಹಳಿಯ ಭಾವದ ಮೂರ್ತಿ" ಎಂದು ಶಂಕರ ಮೊಕಾಶಿ ಪುಣೇಕರ್ ಹೇಳಿರುವ ಮಾತು ಬೇಂದ್ರೆಯವರ ತಾಯಿ ಕಲ್ಪನೆಗೆ ನೀಡಿದ ಭಾಷ್ಯದಂತಿದೆ.

'ನನ್ನ ಮಾನಸದ ಮದಗವೆ' ಕವಿತೆಯಲ್ಲಿ ತಾಯಿ ಮಗುವಿನ ಸಂಬಂಧದಲ್ಲಿಯ ರಹಸ್ಯಮಯತೆಯನ್ನು ಹೇಳಿದ್ದಾರೆ. ಇಲ್ಲಿ ತಾಯಿ ತನ್ನ ಮಗುವನ್ನು ಕುರಿತು, ತನ್ನ ಮನ ಹಾಗೂ ಜೀವ ತುಂಬಿ ಹರಿದ ಭಾವ ವ್ಯಕ್ತವಾಗಿದೆ. ಅವಳ ಚೇತನವಾದ, ಅವಳ ರೂಹು ಆದ, ಅವಳ ಜೀವ ಭಾಗವಾದ, ಅವಳ ಒಡಲಿನಿಂದ ಹೊರಬಂದ, ಅವಳದೇ ಆದ ಮದಗ ಅದು.

ನನ್ನ ಮಾನಸದ ಮದಗವೆ
ಮುಳುಗಿ ನೋಡಿದೆ ಮುದ್ದಿಸಿನೋಡಿದೆ,
ಮೂಸಿ ನೋಡಿದೆ

ಮುಟ್ಟಿ ನೋಡಿದೆ, ದಿಟ್ಟಿಸಿ ನೋಡಿದೆ
ನಿನ್ನಳವು ಅಸದಳವು.[೧೦]

ರೂಪಕದಲ್ಲಿ ಸ್ಪಷ್ಟವಾಗಿ ತಾಯಿಯ ಬಂಧವನ್ನು ಕಾವ್ಯವಾಗಿಸಿದ್ದಾರೆ.

ಇವರ 'ಕಂದಾ' ಕವನದಲ್ಲಿ ತಾಯಿ ಮಗುವಿಗೆ ಜನ್ಮ ನೀಡುವುದು ಸಹಜವೆಂದು ಭಾವಿಸದೆ, 'ಬ್ರಹ್ಮಾಂಡವನೊಳಗೊಂಡದ್ದು' ಎಂಬ ಆಧ್ಯಾತ್ಮಿಕದ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ.

'ಅಧರದಲ್ಲಿ ಮುದ್ದಾಗಿ ಉದರದಲ್ಲಿ ಮುತ್ತಾಗಿ
ಇದಿರು ಮೂರ್ತಿಗೊಂಡು ನಿಂತ ಜೀವದ ಹೂವೆ!
ಬ್ರಹ್ಮಾಂಡವನೊಳಗೊಂಡ
ನಾನು ಹೊತ್ತು, ಹೆತ್ತ ಪಿಂಡವೆ! [೧೧]

ಹೆತ್ತವರಿಗೆ ಮಕ್ಕಳೇ ಸರ್ವಸ್ವ, ತಾಯಿ ದೃಷ್ಟಿಯಲ್ಲಿ ಮಗುವನ್ನು ತಾಯಿ ಹೇಗೆ ಕಾಣುತ್ತಾಳೆ ಎಂಬ ಚಿತ್ರಣವಿದೆ. ಹರಕೆ, ಆರೈಕೆ, ನಂತರ ಬಯಕೆ ಈ ಮೂರೂ ಅಂಶಗಳು ಕವಿತೆಯಲ್ಲಿ ಕಂಡುಬರುತ್ತವೆ. ತಾಯಿತನ ಎಂಬುದು ಹೆಣ್ಣಿಗೆ ಲೌಕಿಕದಿಂದ ಅಲೌಕಿಕತೆಗೆ ಕೊಂಡೊಯ್ಯುವ ಸಾಧನವಾಗಿದೆ. ತಪಸ್ವಿನಿಯಾಗಿಸಿ, ಯೋಗಿಯಾಗಿಸಿ ಪರಿವರ್ತಿಸುವ ಶಕ್ತಿ ಎಂದು 'ಅವರೇನು ಬಲ್ಲರು' ಎಂಬ ಕವನದಲ್ಲಿ ಪ್ರಶ್ನಿಸಿದ್ದಾರೆ.

ನನ್ನ ಚಿಂತಾಪಹಾರಕ ಚಿಂತಾಮಣಿ
ಚಿಂತೆಯ ಪಂಚಾಗ್ನಿಯಲ್ಲಿ ತಪ ಮಾಡಿಸಿ
ತಪಸ್ವಿನಿಯ ಮಾಡಿದೆ
. . . .
ನನ್ನ ಅಮೃತದ ಝರಿಯೇ!
ನಿನ್ನ ವಿಷವುಂಡು ನೀಲಕಂಠಾಬರಣಳಾದೆ,
ಸುಖ ದುಃಖ ಸಮವೆಂಬ ಯೋಗಿಯ ಮಾಡಿದೆ.[೧೨]

"ಚಿಂತೆಯನ್ನು ದೂರಮಾಡುವ ಚಿಂತಾಮಣಿ ಮಗುವಾದರೆ; ತಾಯಿಯ ಸ್ಥಾನ ತಪಸ್ವಿನಿಯ ಸ್ಥಾನ ಎಂಬುದು ಬೇಂದ್ರೆಯವರ ವಿಚಾರವಾಗಿದೆ. ನೋವು – ನಲಿವಿನ, ಬದುಕಿನ ಸಿಹಿ – ಕಹಿಯ ಅನುಭವವನ್ನು ಸ್ತ್ರೀ ಫಲವತಿಯಾಗುವಾಗ ಮತ್ತು ಮಗುವನ್ನು ಹೆರುವಾಗ ಹೆತ್ತ ಆನಂದದ ಉತ್ಕೃಷ್ಟ ಯೋಗಿನಿಯಾಗಿಸುತ್ತದೆ ಎಂದು ಬೇಂದ್ರೆಯವರು ನಾರೀತತ್ವದ ಚಿಂತನೆಯನ್ನು ಕಾವ್ಯ ಲಹರಿಯಲ್ಲಿ ಮೂಡಿಸಿದ್ದಾರೆ."[೧೩]

ತಾಯಿಯ ಎದೆಹಾಲು ಅಮೃತಕ್ಕೆಣೆಯಾದುದು. ಅದಕ್ಕೆ ಸಮನಾದದ್ದು ಜಗತ್ತಿನಲ್ಲಿ ಬೇರೊಂದಿಲ್ಲ. ಹಡೆದ ಮಗುವಿಗೆ ಹಾಲುಣಿಸುವ ಕ್ರಿಯೆ ಕೇವಲ ಕ್ರಿಯೆಯಲ್ಲ; ಅದೊಂದು ಮಾತೃತ್ವದ ಕೊಡುಗೆ. ತಾಯಿಯಾದವಳು ಎದೆಹಾಲನುಣಿಸುವಾಗ ತನ್ನ ಮಾತೃತ್ವವನ್ನೆ ಉಣಿಸುತ್ತಾಳೆ. ಮಗುವಿನ ಸುಂದರ ಭವಿಷ್ಯಕ್ಕೆ ಭಾಷ್ಯವಾಡುತ್ತಾಳೆ. ಅಂತಹ ಶ್ರೇಷ್ಠವಾದ ಮೊಲೆಹಾಲನ್ನೆ ಕುರಿತು ಬೇಂದ್ರೆಯವರು ಹಾಡಿದ್ದಾರೆ – ರೂಪಕದಲ್ಲಿ.

ನನ್ನ ಬಾಲಗೋಪಾಲನ ಗೋದಲೆಗಳವ್ವಾ ಇವು;
ಕಪಿಲೆ ಕಾಮಧೇನುಗಳು ಕಟ್ಟಿಹುವಿಲ್ಲಿ,
ಅವನಿಗೇನು ಕಡಿಮೆ?
. . . .
ಹಾಲಿನ ಬಟ್ಟಲುಗಳಲ್ಲಿ; ಮಾಂಸದ ಬಟ್ಟಲುಗಳಲ್ಲಿ!
ಜಗದಂಬೆಯು ಜೀವ ಶಿಶುವನ್ನು ಮಲಗಿಸಿ ತೂಗುವ
ತೊಟ್ಟಿಲ ಕಾಲುಗಳಿವು,
ಅವನಿಗೇನು ಕಡಿಮೆ! [೧೪]

ಇಲ್ಲಿ ಮಾತೃತ್ವದ ಹಿರಿಮೆ – ವಿಸ್ತಾರದ ಅರಿವಾಗುತ್ತದೆ. ಇಲ್ಲಿನ ಒಂದೊಂದು ರೂಪಕವೂ ಸ್ತನದ ಮಹತ್ವವನ್ನು ಸಾರುವಲ್ಲಿ ಸಾರ್ಥಕವಾಗಿವೆ.

ಮಾತೃತ್ವವನ್ನು ಕುರಿತ ಅವರ ಮಹತ್ವದ ಕವಿತೆಗಳಲ್ಲಿ 'ತಾಯಿ' ಕವಿತೆ ಪ್ರಮುಖವಾದುದು. ಮಗುವಿನ ಹುಟ್ಟು ಬೆಳವಣಿಗೆಯನ್ನು ವಿವರಿಸುತ್ತ ಕೌತುಕದ ಚಿತ್ರ ರೂಪಿಸಿ ತಾಯಿಯ ಮಹತ್ವವನ್ನು ಸಾರುತ್ತದೆ.

ನಲ್ಲನಿತ್ತ ಮುತ್ತನೊಂದ
ತನ್ನ ಹಾಲಿನಿಂದ ತೊಳೆದ ಕಣ್ಣ ಬೆಳಗಿನಿಂದ ಬೆಳಗಿ
ಕುಣಿದರಾರೊ ನನ್ನ ಚೆನ್ನ?
. . . .
ಮಾತಿನೊಂದು ಮಂತ್ರದಿಂದ
ನಮ್ಮ ದೇಹ ಯಂತ್ರ ನಡೆಸಿದಂಥ ನಮ್ಮ ತಾಯಿಭೂಮಿ
ಆ, ಮಾತೆ ಜನ್ಮದಾತೆ! [೧೫]

ಈ ಕವಿತೆಯಲ್ಲಿ ತಾಯಿಯ ಬಯಕೆ, ಮಗುವಿನ ಬೆಳವಣಿಗೆ, ಅದರಿಂದಾದ ಆನಂದಾನುಭವದಿಂದ ತಲೆದೂಗುವ ತಾಯಿಯ ಚಿತ್ರ ಸುಂದರವಾಗಿ ಮೂಡಿ ಬಂದಿದೆ.

ಹಡೆದ ತಾಯಿಗೆ ಆನಂದವಾಗುವ ಹಂತಗಳಲ್ಲಿ ಮಡಿಲಲ್ಲಿ ಬೆಳೆದ ಮಗು ಮಾತನಾಡಲು ಆರಂಭಿಸಿದಾಗ, ಮಗು ಮಾತನಾಡದೆ ಮೂಕನಾದರೆ ಹಡೆದ ತಾಯಿ ಅನುಭವಿಸುವ ಯಾತನೆ ವರ್ಣನಾತೀತ. ಹಾಗಾಗಿ ತಾಯಿಗೆ ತನ್ನ ಕಂದನ ತೊದಲ್ನುಡಿ ಕೇಳಿದಾಗ ರೋಮಾಂಚನವಾಗುತ್ತದೆ. ಅಂತಹ ಸಂದರ್ಭವನ್ನು 'ದ್ವಿಜತ್ವ' ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ.

ಒಡಲ ಹುಟ್ಟು ಮೊದಲ ಹುಟ್ಟು
ಮಾತಿನಿಂದ ಪೂತನಾಗಿ
ತಾಯಿ ಮನದ ಮೂರ್ತಿಯಾಗಿ
ಅವಳ ಎದೆಯ ಗರ್ಭಗುಡಿಯ
ಮಿಣುಕು ಮಿಣುಕು ಬೆಳಕಿನಲ್ಲಿ
ಮುಗುಳು ನಗೆಯರಳಿಸುತ್ತ
ನಿಲ್ಲಲಾಗ ಮರಳು ಹುಟ್ಟು. [೧೬]

ವೈದಿಕ ದೃಷ್ಟಿಯಲ್ಲಿ ದ್ವಿಜಕ್ಕೆ ಬೇರೆ ಅರ್ಥ ಉಂಟು. ಆದರೆ ಬೇಂದ್ರೆಯವರು ಇಲ್ಲಿ ಎಲ್ಲ ವರ್ಗದ ತಾಯಂದಿರು ದ್ವಿಜರಿಗೆ ಜನ್ಮಧಾತೆಯಾಗುತ್ತಾರೆ. ಅಂದರೆ ಮಗುವಿನ ಜನ್ಮ ಒಂದು ಹುಟ್ಟಾದರೆ; ಆ ಮಗು ಹಾಲುಂಡು ಬೆಳೆದು ಮಾತನಾಡುವುದೇ ಇನ್ನೊಂದು ಜನ್ಮವಾಗಿದೆ. ಇಲ್ಲಿ ಮಾತೃ ವಾತ್ಸಲ್ಯದೊಂದಿಗೆ ತಾಯಿ ನುಡಿಗಿರುವ ಮಹತ್ವವನ್ನು ಬಿಂಬಿಸಿದ್ದಾರೆ. 'ಒಡಲ ಹುಟ್ಟು ಮೊದಲ ಹುಟ್ಟು ಮಾತಿನಿಂದ ಪೂತನಾಗಿ ನಿಲ್ಲಲಾಗ ಮರಳು ಹುಟ್ಟು' ಎಂಬ ಭಾವವು ತಾಯ್ನುಡಿ ಅಥವಾ ಮಾತೃಭಾಷೆಯ ಮಹತ್ವವನ್ನು ಎತ್ತಿ ತೋರುವಂತಹುದೂ ಆಗಿದೆ.

ಜನ್ಮಧಾತೆಯಾದ ತಾನು ಯಾವುದೇ ಕೆಲಸದಲ್ಲಿ ತೊಡಗಿದ್ದರೂ, ಮನಸ್ಸು ಮಾತ್ರ ಅಥವಾ ಅವಳ ಜೀವ ಮಗುವಿನಲ್ಲಿರುತ್ತದೆ. 'ಒಡಲೆರಡು ಜೀವವೊಂದು' ಎಂಬ ಮಾತೃತ್ವದ ಮಹತ್ವವನ್ನು ಕಂಡಿರುವ ಕವಿತೆ 'ತಾಯಿ ಕೂಸು'.

ಉಸಿರ ದಾರದ ತುದಿಗೆ
ಹಾರು ಹಕ್ಕಿಯ ಬದಿಗೆ
ಜೀವಪಟ ಹೆಡೆಯಾಟವಾಡುತಿಹುದು
. . . .
ಕೆಲಸದಲಿ ಬಿಡುವಿಲ್ಲ
ಕೂಸಿನಲಿ ಮನವೆಲ್ಲ
ತಾಯಿ ಯೋಗಿನಿ ಮೈಲಿ ದುಡಿಯುತಿಹಳು.

ಇದನ್ನು ಶಂಕರಮೊಕಾಶಿ ಪುಣೇಕರ್ ಅವರು – "ಈ ಕವನದಲ್ಲಿ ಕೂಸಿನ ಶ್ವಾಸೋಚ್ಛ್ವಾಸವೂ ಹಾವಿನಂತೆ ಹೆಡೆಯಾಡುತ್ತಿರುವ ಗಾಳಿಪಟಕ್ಕೆ ಹೋಲಿಸಲ್ಪಟ್ಟಿರುತ್ತದೆ. ಅದರ ಪೂರ್ಣ ಔಚಿತ್ಯವನ್ನು ತಿಳಿಯದೆಯೇ ಅದು ಎಷ್ಟೋ ವರ್ಷಗಳವರೆಗೆ ನನ್ನ ಮನಸ್ಸನ್ನು ಸೂರೆಗೊಂಡಿರುತ್ತದೆ. ಇಂಥ ಉಪಮಾನಗಳು ಬುದ್ಧಿ ಭಾವನೆಗಳನ್ನು ಮೀರಿ ಅವ್ಯಕ್ತ ಸ್ವರೂಪವನ್ನೇ ಕೆಣಕುವಂಥವು"[೧೭] ಎಂಬ ವಿಶ್ಲೇಷಣೆ ಉಚಿತವೆನಿಸಿದೆ.

ಹೀಗೆ ಮಗು ಮಲಗಿರುವಾಗಲೂ, ಬಿಡುವಿಲ್ಲದ ಬದುಕಿನ ನಡುವೆಯೂ ಮನಸ್ಸನ್ನು ಮಗುವಿನಲ್ಲೆ ನಟ್ಟು ಪೋಷಿಸುವ ತಾಯಿಯ ಮಮತೆ ಇಲ್ಲಿ ಕಾವ್ಯಾತ್ಮಕವಾಗಿ ವ್ಯಕ್ತವಾಗಿದೆ. ತನ್ನೆದೆಯ ತೊಟ್ಟಿಲಲ್ಲೆ ಮಗುವನಿಟ್ಟು ಸಲಹುವುದು ತಾಯಿಯಲ್ಲಿ ಮಾತ್ರ ಕಾಣಲು ಸಾಧ್ಯವೆಂಬುದು ಇಲ್ಲಿನ ವಿಶೇಷ.

ಬೇಂದ್ರೆಯವರು ಅರವಿಂದ ಹಾಗೂ ಶ್ರೀಮಾತೆಯವರಿಂದ ಪ್ರೇರಣೆ ಹಾಗೂ ಪುಷ್ಟಿಗೊಂಡವರು. ಶ್ರೀಮಾತಾರವರು ಮಾತೃತ್ವದ ಹಿರಿಮೆಯನ್ನು ಆಧ್ಯಾತ್ಮಿಕದ ಹಿನ್ನೆಲೆಯಲ್ಲಿ ಕಂಡಿರುವುದನ್ನು ಬೇಂದ್ರೆಯವರು ಬಲ್ಲರು. ಹಾಗಾಗಿ ಬೇಂದ್ರೆಯವರ ಕಾವ್ಯದ ಕೇಂದ್ರ ಪ್ರತಿಭೆಯೇ ತಾಯಿಯಾಗಿ ಕಂಡಿದೆ. ತಮ್ಮ ಕಾವ್ಯನಾಮ 'ಅಂಬಿಕಾತನಯದತ್ತ' ಎಂದು ಅರ್ಥಗರ್ಭಿತವಾದ, ಭಾವಗರ್ಭಿತವಾದ ರೀತಿಯಲ್ಲಿ ಸ್ವೀಕರಿಸಿರುವುದೇ ಇದಕ್ಕೆ ಸಾಕ್ಷಿ ಎನಿಸುತ್ತದೆ.

ಅಂಬಿಕಾತನಯನ ಜಂಬದ ಪಾಡಳಿದು

ನಂಬಿಕೆಯ ಹಾಡಾಗಿ ಬಂತಿಲ್ಲಿಗೆ.

. . . .

ಅಂಬಿಕೆ ಎಂಬುವಳ ಹೃದಯಾಂಬರದಲ್ಲಿ
ತತ್ತಿಯನಿಟ್ಟಿತ್ತು ನವ ಮೇಘವು
ಆ ತಾಯಿ ಮಾ ತಾಯಿ ಈ ಬಾಯಿ ತುತ್ತಲ್ಲ
ಅವಳನ್ನು ಬಿಂಬಿಸಲು ಎದೆ ಸಾಲದು

ಮೌನದಲ್ಲಿರುವದು, ಧರ್ಮಕೆ ಹೊರತೆಂದು
ಎದೆ ಮಾತು ಸಾಲಾಗಿ ಉಸಿರುವೆನು.[೧೮]

ತಾಯಿಯ ಕೃಪೆಯಿಂದ ತನ್ನ ಸೃಷ್ಟಿ, ತನ್ನ ಕಾವ್ಯಸೃಷ್ಟಿ ಎಂಬುದನ್ನು ಕವಿ ಎದೆಯಾಳದಿಂದ ಹೇಳಿದ್ದಾರೆ. ಇಡೀ ಬೇಂದ್ರೆ ಹಾಗೂ ಅಂಬಿಕಾತನಯದತ್ತ ರೂಪು ತಾಳಿದ್ದು ತಾಯಿಯಿಂದ ಎಂಬುದನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

. . . .

ನಿನ್ನ ರಕ್ತಮಾಂಸದಲ್ಲಿ
ಮೆಯ್ಯ ಮನೆಯಕಟ್ಟಲು
ಅದನು ನಾನು ಮುಟ್ಟಲು
ನಿನ್ನ ಉಸಿರಲುಸಿರಾಡಿಸೆ ಬಸುರಿನಲ್ಲಿ ಬೆಳೆದೆನು
ಒಂದು ರೂಪ ತಳೆದೆನು.[೧೯]

ತಾಯಿ ಮಗುವನ್ನು ಪಡೆಯಲು ಕನಸು ಕಾಣುತ್ತಾಳೆ. ಆಕೆಯ ಮನದ ಮೂಸೆಯಲ್ಲಿ ಭಾವವಾಗಿ ದ್ರವಿಸಿ ಜೀವರೂಪ ತಾಳುತ್ತದೆ. ಅದನ್ನು ಹಡೆದ ತಾಯಿ ತನ್ನ ಎದೆಹಾಲಿನೊಂದಿಗೆ ಪ್ರೇಮರಸವನ್ನು ಕುಡಿಸಿ ಬೆಳೆಸುತ್ತಾಳೆ. ಅದಕ್ಕೆ ಕವಿ ಕೃತಜ್ಞತೆಯಿಂದ ಸ್ಮರಿಸುತ್ತಾಳೆ.

ಮಗುವಲ್ಲಿ ಸಂಸ್ಕೃತಿಯ ಬೀಜ ಬಿತ್ತುವವಳೇ ತಾಯಿ. ತಾನು ಹಾಲುಣಿಸುವ ಸಂದರ್ಭದಲ್ಲಿ ಮಗುವಿನ ಭವಿಷ್ಯವನ್ನೇ ಕಾಣ ಬಯಸುತ್ತಾಳೆ. ತಾನು ಹಡೆದ ಮಗು ತನಗೂ, ದೇಶಕ್ಕೂ, ದೇವರಿಗೂ ಪ್ರೀತಿಯಾಗಬೇಕು. ಎಲ್ಲರ ಆದರಾಭಿಮಾನಕ್ಕೆ ಪಾತ್ರವಾಗಬೇಕೆಂಬ ಉತ್ಕಟೇಚ್ಛೆ ತಾಯಿಯದಾಗಿರುತ್ತದೆ.

ಜನ್ಮ ನೀಡಿ, ತಿಳಿವು ಕೊಟ್ಟು ಬೆಳೆಸಿದ್ದರಿಂದ ನಾನು ಜಗಕೆ ನಿನ್ನದನ್ನೇ ಕೊಟ್ಟೆನು ಎಂಬುದನ್ನು ಹೇಳುವುದರಿಂದ ತಾಯಿಯ ಅಂತರಾತ್ಮವೇ ತನ್ನ ನುಡಿ ಎಂದು ಭಾವಿಸಿದ್ದಾರೆ.

ನಿನ್ನ ಜನುಮದೊಂದು ಪಾಡು, ಹಾಡು ಆಗಿ ಮೂಡಿತು!
ನನ್ನ ಕೊರಳು ಹಾಡಿತು.

. . . .

ನಿನ್ನ ಲಲ್ಲೆಯಲ್ಲಿ ಹುಟ್ಟಿ ಬೆಳೆದು ಬಂದ ಸೊಲ್ಲಿದು!
ಬೇರೆ ಏನು ಬಲ್ಲದು.[೨೦]

ಈ ಮಾತುಗಳಲ್ಲೆಲ್ಲ ಮಾತೃನಾಮ ಖ್ಯಾತವಾಗುವುದಕ್ಕೆ ಸಮರ್ಥನೆ ನೀಡಿ ತಮ್ಮ ಮಾತೃಪ್ರೇಮದೊಂದಿಗೆ ಅದರ ಹಿರಿಮೆಯನ್ನು ಹೇಳಿದ್ದಾರೆ.

ಇಂತಹ ತಾಯಿಯ ಅಗಲಿಕೆ ಬೇಂದ್ರೆಯವರನ್ನು ಸಂಕಟಕ್ಕೆಳೆದದ್ದು ಸಹಜವೇ ಆಗಿದೆ. ತಾಯಿಯ ವಾತ್ಸಲ್ಯ ಅಪಾರವಾದದ್ದು. ಮಕ್ಕಳು ಅವಳ ಬಗ್ಗೆ ತೋರುವ ಮಮತೆ ಅದೂ ಅವಳು ಸತ್ತ ನಂತರ ತೀವ್ರವಾಗುತ್ತದೆ.

ನೂರಿಂಥ ಕಾಯ
ಧರಿಸಿದರು ನಿನ್ನಂಥ ತಾಯಿ ಸಿಕ್ಕಾಳೆ?
ಹರಸೆನ್ನ 'ಬಾ ಮಗುವೆ' ಎಂದು ನಕ್ಕಾಳೆ!

ಎಂದು ದುಃಖತಪ್ತರಾಗಿ ಹೆತ್ತ ತಾಯಿಗಾಗಿ ಹಂಬಲಿಸುತ್ತಾರೆ.

ಕನಸಿಗು ಹೊಳೆಯದ ಬರಸಿಡಿಲೆರಗಿತು
ತಾಯಿ-ಗಿಡವು ಮಾಯವಾಯಿತೆಲ್ಲೋ
. . . .
ಬಿಕ್ಕೆಲ್ಲ ಬಿಕ್ಕದರು ನೂರಿಂಥ ಕಾಯ
ಧರಿಸಿದರು ನಿನಂಥ ತಾಯಿ ಸಿಕ್ಕಾಳೆ?
ಹರಸೆನ್ನ 'ಬಾ ಮಗುವೆ' ಎಂದು ನಕ್ಕಾಳೆ? [೨೧]

ತಾಯಿಯ ವಾತ್ಸಲ್ಯ ತಾಯಿ ಸತ್ತ ನಂತರ ದೊರಕದು. ಆ ಪ್ರೀತಿಯ ಋಣವನ್ನು ತೀರಿಸಲು ಸಾಧ್ಯವಿಲ್ಲ ಎಂದು ಕವಿ ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ತಂದೆಗಿಂತಲೂ ಶ್ರೇಷ್ಠ ತಾಯಿ ಎಂಬುದು ಬೇಂದ್ರೆಯವರ ನಂಬಿಕೆ. ಇದು ಭಾರತೀಯ ಪರಂಪರೆಗೆ ಹತ್ತಿರವಾದ ಮಾತು. ಇದನ್ನು ಎಲ್ಲರಿಗೂ ಅರಿವಾಗುವಂತೆ ಕಾವ್ಯದಲ್ಲಿ ತಿಳಿಸಿದ್ದಾರೆ.

ತಾಯಿಯ ಕೃಪೆಯಿಂದ ತನ್ನ ಸೃಷ್ಟಿ, ಎಂಬುದನ್ನು ಒಂದು ಹೊಸ ಊಹೆಯ ರೂಪದಲ್ಲಿ ಕವಿ ಹೀಗೆ ಬಣ್ಣಿಸಿದ್ದಾರೆ. 'ಅಂಬಿಕಾತನಯ ದತ್ತ' ಕವನದ ಭಾವ ಸಂದರ್ಭದಲ್ಲಿ 'ನನ್ನ ಜೀವನ ಯಾವ ಪಥವನ್ನು ಹಿಡಿದಿದೆ, ಏಕೆ ಹಿಡಿದಿದೆ ಎಂಬುದರ ಧ್ಯಾನದಿಂದ ಬಂದುದು' ಎಂದು ಹೇಳಿದ್ದಾರೆ.

ಯಾವ ಯೋಗ ನಿದ್ರೆಯಲ್ಲಿ ಏನು ಕನಸು ಕಂಡೆನೋ!
ಯಾರ ಹಾಲನುಂಡೆನೊ
ಈ ವಿಶ್ವ ಜಾಲದಲ್ಲಿ ಬಂದ ಸದಕೆ ಮಿಡುಕುತಾ
ಅದರ ಧಾರೆ ಹುಡುಕುತಾ. [೨೨]

ಹೀಗೆ ಕವಿ ತಾನು ಯೋಗಿಯಾಗಿ, ತಾಯ ಒಡಲನ್ನು ಸೇರಿ, ಆ ಫಲದಿಂದ ಆನಂದ ಪಡೆಯುತ್ತ ವಿಕಾಸ ಹೊಂದಿದೆ ಎಂದು ಹೇಳಿದ್ದಾರೆ.

ಜನ್ಮಕೊಟ್ಟ ತಾಯಿಯನ್ನು ಪಾರ್ವತಿಗೆ ಸಮೀಕರಿಸಿರುವ ಬೇಂದ್ರೆ, ಆಕೆಯನ್ನು ಶಿವ, ಶಿವೇ, ರುದ್ರಾಣಿ, ಭವಾನಿ ಎಂದು ಕರೆದಿದ್ದಾರೆ. ಹಾಗಾಗಿ ಅವರಿಗೆ ತಾಯಿ ಶ್ರೇಷ್ಠತೆಯ ಪ್ರತೀಕವಾಗಿ ಕಂಡಿದ್ದಾಳೆ. ಅವರ 'ನಮನ' ಕವಿತೆ (ಶ್ರೀಶಂಕರಾಚಾರ್ಯರ ದೇವಿಕ್ಷಮಾಪನ ಸ್ತೋತ್ರದ ಕನ್ನಡಾನುವಾದ)ಯಲ್ಲಿ ಕಾಣಬಹುದು.

'ತಾಯಿ' ಎಂಬ ಕವನದಲ್ಲಿ ಕವಿ ತಾಯಿಯ ಉದಾತ್ತ ಸ್ವಭಾವಗಳ ಚಿತ್ರಣ ನೀಡುತ್ತಾ ತಾಯಿಯ ಪ್ರೀತಿ ದೊಡ್ಡದು ಎಂಬ ವಿಚಾರವನ್ನು ವ್ಯಕ್ತಪಡಿಸಿದ್ದಾರೆ.

ಕೈಯಲ್ಲಿ ಹಗ್ಗವು ಬಾಯಲಿ ಹಾಡು
ಹೃದಯವ ಮಮತೆಯ ಸಮತೆಯ ಬೀಡು
ತಾಯಿಯು ದೇವರಿಗಿಂತಲೂ ಮೇಲು
ದೇವರ ಮೊಲೆಯಲಿ ದೊರೆವುದೆ ಹಾಲು?
ಯಾವಳ ಹಿಡಿಯಲಿ ತೊಟ್ಟಿಲದಾರ
ಆಕೆಯ ಉಡಿಯಲಿ ಜಗದೋದ್ಧಾರ. [೨೩]

ತಾಯಿ ದೇವರಿಗಿಂತಲೂ ಮೇಲು ಎಂಬುದನ್ನು ಕವಿ ಸ್ಪಷ್ಟಪಡಿಸುವ ರೀತಿ ಇದು. ತಾಯಿಯ ಮೊಲೆಯಲ್ಲಿ ಹಾಲಿದೆ. ಆದರೆ ದೇವರ ಮೊಲೆಯಲ್ಲಿ ಹಾಲು ಎಲ್ಲಿದೆ? ಎಂದು ಸಹಜವಾಗಿ ಪ್ರಶ್ನಿಸುವ ಕವಿ ಸಾಮಾನ್ಯನಿಗೆ ಕಾಣದ ಅಂಶವನ್ನು ಸ್ಪಷ್ಟೀಕರಿಸುತ್ತಾರೆ.

ಪು. ತಿ. ನ. ಬೇಂದ್ರೆಯವರ ಸಮಕಾಲೀನ ಕವಿ. ಬೇಂದ್ರೆ ತಾಯಿಯ ಒಡನಾಟ ಪಡೆದು ಬೆಳೆದರೆ ಇವರು ತಂದೆಯ ಒಡನಾಟದಲ್ಲಿ ಬೆಳೆದರು. "ಪು.ತಿ.ನ.ರವರು ಬೆಳೆದದ್ದು ಪುರುಷ ಪ್ರಧಾನವಾದ, ವಿಚಾರ ಪ್ರಧಾನವಾದ, ಗಡಿಯಾರದಂತೆ ವ್ಯವಸ್ಥಿತವಾದ ವಾತಾವರಣದಲ್ಲಿ. ಬೇಂದ್ರೆಯವರ ಹಾಗೆ ಶಿಸ್ತುಗೇಡಿತನಕ್ಕಾಗಲೀ, ಕುವೆಂಪು ಇವರ ಹಾಗೆ ಬೌದ್ಧಿಕವಾದ ಒಂಟಿತನಕ್ಕಾಗಲೀ ಇಲ್ಲಿ ಅವಕಾಶವಿರಲಿಲ್ಲ. ಪುತಿನರವರ ಹಿರಿಯರು ವೈದಿಕ ಸಂಪ್ರದಾಯದ ಜಡ, ಕರ್ಮಠ ಪರಂಪರೆಗಿಂತ ಭಿನ್ನವಾದ ಜ್ಞಾನ ಪಿಪಾಸುವಾದ, ಚಿಂತನಾಶೀಲವಾದ ಆಯಾಮವನ್ನು ರೂಢಿಸಿಕೊಂಡವರು. ತೀರ್ಥಕ್ಷೇತ್ರಗಳಲ್ಲಿ ಸಹಜವಾಗಿ ಆಗಬಹುದಾದ ಹಾಗೆ, ಅವರ ಭಕ್ತಿಯು ಪ್ರದರ್ಶನದ, ವ್ಯಾಪಾರದ ಆಯಾಮಗಳನ್ನು ಪಡೆದುಕೊಂಡಿರಲಿಲ್ಲ. ಆದ್ದರಿಂದಲೇ ತಂದೆಯವರ ಬಗೆಗಿನ ನೈಜವಾದ ಗೌರವವನ್ನು ಈ ಕವಿ ವ್ಯಕ್ತಪಡಿಸಿದ್ದಾರೆ". [೨೪]

ಪುತಿನ ಅವರ ಕವಿತೆಯ ಮುಖ್ಯ ನೆಲೆಗಳಲ್ಲಿ ಒಂದಾದ ಸ್ತ್ರೀ ಸಂವೇದನೆಯ ಪ್ರಾರಂಭವನ್ನು ಗುರುತಿಸಬಹುದು. ಹಾಗೆ ನೋಡಿದರೆ ಈ ಕವಿ ತಾಯಿಯ ಮುದ್ದಿನ ಸವಿಯೊಂದಿಗೆ, ಅವಳ ಕಂಬನಿಯ ಉಪ್ಪನ್ನು ಕುಡಿದು ಬೆಳೆದವರು.

ಎಳೆಯನ ಮುದ್ದಿಡುತ್ತಿದ್ದಳು ತಾಯಿ
ತುಟಿಗಿಳಿಯುತ್ತಿರೆ ಕಣ್ಣೀರು
ತುಟಿ ಜೇನಿನ ಸಿಹಿಗುಪ್ಪಿನ ರುಚಿ ಬರೆ
ಆ ರುಚಿಯನು ಬಣ್ಣಿಪರಾರು!

ನನಸಿನಾಳದಿಂ ಕನಸಿಗೆ ಸುಳಿದೀ
ಅನುಭೂತಿಯ ಚಿಂತಿಸಿರುವೆ
ನಗೆ ಹೊರಗಿಟ್ಟಾ ಕಂಬನಿ ಎದೆವಾ
ಲೀಂಟುತ ಬೆಳೆದೆನು ಎಂಬೆ [೨೫]

ತಾಯಿ ತನ್ನ ಕಂದನ ಮುಖ ಕಂಡು ಆನಂದಿಸುವುದರ ಹಿಂದೆ ಅನುಭವಿಸಿದ ನೋವು ಅಪಾರ. ನೋವು - ನಲಿವಿನ ಮಿಶ್ರ ರೂಪವೇ ಮಗು. ಆಕೆಯ ಕಣ್ಣೀರಿಗೆ ಅನೇಕ ಕಾರಣಗಳಿರಬೇಕು. ಆದರೂ ಆಕೆಯ ಪ್ರೀತಿಯ ಹಾಲುಂಡು ಬೆಳೆದದ್ದು ಮಾಸದ ನೆನಪೆಂದು ಕವಿ ಹೇಳುತ್ತಾರೆ.

ಬೇಂದ್ರೆ ಹಾಗು ಪುತಿನರವರಿಗಿಂತಲೂ ಭಿನ್ನವಾದ ಪರಿಸರದಿಂದ ಬಂದಿರುವ ಕುವೆಂಪು ತಾಯಿಯನ್ನು ಕಂಡಿರುವ ಬಗೆಯೇ ಬೇರೆ. ಇವರ ಸುಮಾರು ೫೦ಕ್ಕೂ ಹೆಚ್ಚು ಕವಿತೆಗಳಲ್ಲಿ ಭಿನ್ನ ಭಿನ್ನ ನೆಲೆಗಳಲ್ಲಿ, ಭಿನ್ನ ಭಿನ್ನ ಸನ್ನಿವೇಶಗಳಲ್ಲಿ ಮಾತೃತ್ವದ ಸ್ವರೂಪ ದಟ್ಟವಾಗಿ ವ್ಯಕ್ತವಾಗಿದೆ. ಕೆಲವೆಡೆ ಭಾವುಕತನವಿದ್ದರೂ ಉಳಿದೆಡೆಯಲ್ಲಿ ಇವರ ಜೀವನ ದರ್ಶನ, ತಾಯಿಯ ಬಗ್ಗೆ ತಾಳಿರುವ ಗೌರವಾದರಗಳು ವ್ಯಕ್ತವಾಗಿವೆ.

ತಾಯಿಯಾದವಳು ತನ್ನ ಕಂದನ ಭವಿಷ್ಯದ ಬಗ್ಗೆ ಕನಸು ಕಾಣುವುದು ಸಾಮಾನ್ಯ ಸಂಗತಿ. ಕುವೆಂಪು ತಮ್ಮ ಕವಿತೆ 'ಜೋಗುಳ'ದಲ್ಲಿ ತಾಯಿಯು ಮಗುವನ್ನು ಮಲಗಿಸುವಾಗ, ಮಗುವಲ್ಲಿ ಮಂಗಳತ್ವ ಕಾಣುತ್ತಾಳೆ. ಸಚ್ಚಿದಾನಂದನೇ ಮಗ, ಪರಬ್ರಹ್ಮನೇ ಮಗು ಎಂಬ ದೈವೀ ಕಲ್ಪನೆಯಿಂದ ಮಗುವನ್ನು ಕಾಣುವ ಚಿತ್ರ ಮೂಡಿಬಂದಿದೆ:

ಮಲಗು ಮಲಗಲೆ ಕಂದ ಜೋ! ಜೋ!
ಮಲಗು ಎನ್ನಾನಂದ ಜೋ! ಜೋ!
. . . .
ನಿನಗಾಗಿ ಜಗದುದಯ ಜೋ! ಜೋ!
ನಿನಗಾಗಿ ಜಗದ ಲಯ ಜೋ ಜೋ
ಪರಬ್ರಹ್ಮನ್ನೈ ನೀನು ಜೋ ಜೋ
ಶಿವ ನೀನು! ಶಿವ ನೀನು! ಜೋ ಜೋ. [೨೬]

ತಾಯಿಯ ಮಡಿಲು ಮಗುವಿಗೆ ಬರೀ ಆಶ್ರಯ ಮಾತ್ರವಲ್ಲ ಅದು ರಕ್ಷಣೆಯೂ ಹೌದು. ನೆಮ್ಮದಿಯ ತಾಣವೂ ಹೌದು. ಎಲ್ಲಿಯೂ ಯಾರಲ್ಲಿಯೂ ಕಾಣದ ನೆಮ್ಮದಿ, ತೃಪ್ತಿ ತಾಯಿಯ ಪ್ರೇಮದಿಂದ ಮಾತ್ರ ಲಭ್ಯ. ತಾಯ ಮಡಿಲು ರಕ್ಷಣೆಯ ತೊಟ್ಟಿಲು - ಎಂಬ ಕವಿಯ ಭಾವ 'ತಾಯಿಯ ಮಡಿಲು' ಕವಿತೆಯಲ್ಲಿ ವ್ಯಕ್ತವಾಗಿದೆ.

ಹಗಲೆಲ್ಲ ಧೂಳಿನಲಿ ಗೊಂಬೆಯಾಟವನಾಡಿ
ಇರುಳು ಬರೆ ಮಲಗುವೆನು ನಿನ್ನ ಮಡಿಲಿನಲಿ.
. . . .
ಕೆಳೆ ಹಗೆಗಳೆಂಬುವನು, ಸೋಲು ಗೆಲುವುಗಳನ್ನು
ನಿನ್ನ ಮಡಿಲಿನ ನಿದ್ದೆ ನುಂಗಿ ನೊಣೆಯುವುದು. [೨೭]

ತಾಯಿ ಮಗು ಅನ್ಯೋನ್ಯ ಒಡವೆಗಳೆ. ಇತರೆ ಒಡವೆಗಳು ಅನಗತ್ಯ. ಮನುಷ್ಯ ನಿರ್ಮಿತ ಒಡವೆಗಳಿಂದ ಸಹಜ ಸುಖ ಸಿಗಲಾರದು ಎಂಬುದು 'ಒಡವೆಗಳು' ಕವಿತೆಯಲ್ಲಿ ವ್ಯಕ್ತವಾಗಿದೆ.

ಚಿನ್ನದ ಒಡವೆಗಳೇತಕೆ ಅಮ್ಮ?
ತೊಂದರೆ ಕೊಡುವವು ಬೇಡಮ್ಮ!
. . . .
ನನ್ನೀ ಶಿಶುತನ ನಿನ್ನೀ ತಾಯ್ತನ
ಎರಡೇ ಒಡವೆಗಳೆಮಗಮ್ಮಾ:
ನಾನಿನಗೊಡವೆಯು; ನೀನನಗೊಡವೆಯು;
ಬೇರೆಯ ಒಡವೆಗಳೇಕಮ್ಮಾ? [೨೮]

ಮಗುವಿನ ತಾಯಿ ಮೇಲಿನ ಪ್ರೇಮ ಮುಗ್ಧತೆಯಿಂದಿರುವುದು ಇಲ್ಲಿ ಕಂಡು ಬರುತ್ತದೆ. ಕವಿಯೇ ಮಗುವಾಗಿ ಪರಿಭಾವಿಸಿಕೊಂಡು ತಾಯಿ ಮಗು ಈರ್ವರಿಗೂ ಒಡವೆಗಳೆಂದು ತಾಯಿಯ ಎದುರು ತೊದಲು ನುಡಿಯಂತೆ ನಿವೇದಿಸಿದ್ದಾರೆ. ಇದೇ ಭಾವನೆಯ ಕವಿತೆ 'ಮೂರ್ತಿಯ ಚಂದ್ರ'ದಲ್ಲೂ ಪರಿಣಾಮಕಾರಿಯಾಗಿ ಮೂಡಿ ಬಂದಿದೆ.

ತಾಯಿತನವೆನ್ನುವುದು ತಪಸ್ಸಾಧನೆಗಿಂತಲೂ ಮಿಗಿಲು. ಮಾಡುವ ಕಾರ್ಯವೆಲ್ಲವೂ ತನ್ನಾತ್ಮ ಸಾಧನೆಗೆಂದು ಮಾಡಿದರೆ ತಾಯಿಗೆ ಅದೇ ಬಂಧನ ಮುಕ್ತಿ ಎಂಬ ಅಂಶ 'ಒಬ್ಬ ತಾಯಿಗೆ' ಕವಿತೆಯಲ್ಲಿ ವ್ಯಕ್ತವಾಗಿದೆ.

ಜಗದೀಶ್ವರನೆ ವಿಶ್ವ ಸಂಸಾರಿಯಾಗಿರಲು
ಸಂಸಾರ ಪಾಶವೆಂದೆನ ಬೇಡವ್ವೆ
ಹುಟ್ಟು ಹಾಕಲು ನಿನಗೆ ಬಾರದಿರೆ, ಕೂಡದಿರೆ
ಬರಿದೆ ನೀಂ ದೋಣಿಯನು ಶಪಿಸಬೇಡ!
. . . .
ಹಸುಳೆಯನು ಮೀಯಿಸಲು ಹರನಿಗಭಿಷೇಕವದು;
ಶಿಶುವಿಗೂಡಿಸೆ ಶಿವಗೆ ನೈವೇದ್ಯವೈ!
ಕಂದನಲಿ ಶಿವನ ಕಾಣುವ ಬಂಧನವೆ ಮುಕ್ತಿ;
ತಪಕೊಲ್ಲದದು ತಾಯ್ತನಕೆ ಸಾಧ್ಯವೈ! [೨೯]

ಮಗುವಿಗಾರೈಕೆ ಮಾಡಿದರೆ ಶಿವನ ಪೂಜಿಸುವಷ್ಟೇ ಶ್ರೇಷ್ಠ ಎಂಬ ಅಂಶ ತುಂಬಾ ಉದಾತ್ತವಾದುದು. ಮಗು ಶಿವನ ಮತ್ತೊಂದು ರೂಪ, ಶಿವನ ಚಿದ್ ರೂಪವಾಗಿ ತಾಯಿಯ ಮಡಿಲಲ್ಲಿ ಬಂದು ನೆಲೆಸುತ್ತದೆ ಎನ್ನುವುದು ತಾಯಿಯ ಭಾವನೆ. ತಾಯ್ತನವೇ ಹೆಣ್ಣಿಗೆ ಶ್ರೇಷ್ಠ ಎಂಬುದನ್ನು ಕವಿ ಈ ಅರ್ಥದಲ್ಲಿ ಹೇಳಿದ್ದಾರೆ.

ಪ್ರೀತಿ ವಿಶ್ವಾಸಗಳಿಂದ ಮೇಳೈಸಿದ ಕುಟುಂಬ ಜೀವನದ ವೈವಿಧ್ಯತೆ ವಿ.ಸೀ.ಯವರ ಹಲವು ಕವಿತೆಗಳ ವಸ್ತು. ದಾಂಪತ್ಯ ಜೀವನದ ವಿವಿದ ಮುಖ, ಇಂಥ

ಕವಿತೆಗಳಲ್ಲಿ ತಾಯ್ತನದ ಹಿರಿಮೆಯನ್ನು ಕಲಾತ್ಮಕವಾಗಿ ಕಂಡಿರಿಸಿದ್ದಾರೆ. ಅವರ 'ತಾಯಬಯಕೆ' ಕವಿತೆ ಇದಕ್ಕೆ ಒಳ್ಳೆ ನಿದರ್ಶನವೆನ್ನಬಹುದು.

ಬಾ ಮಗುವೆ ಬಾ ಬಳಿಗೆ ಆಡ ಕಲಿಸುವೆನು
ಆಡುತ್ತ ನೀನಿರಲು ನೋಡಿ ನಲಿಯುವೆನು
ನಾನಾರೊ ನೀನಾರೊ ಕಾಣೆ ಮಗುವೆ
ಏನು ಬರುವುದೊ ನಾಳೆ ನಮ್ಮ ನಡುವೆ

. . . .

ನನ್ನ ಕಂಣ್ಣಂಗಳದಿ ಓಡಾಡುತಿರು ಸೊಗವೆ
ನನ್ನ ಬಾಳ್ ಹಣ್ಣುಟ್ಟಿದೆಂದು ಬಗೆವೆ
ನನ್ನ ಹರಕೆಯ ಭಾಗ್ಯ ಎಂದೆಂದೂ ಸವಿ ಇರಸಿ
ನನ್ನ ತಾಯೆದೆ ಬಯಕೆ ಫಲಿಸುತಿರಲಿ. [೩೦]

ಈ ಕವಿತೆಯಲ್ಲಿ ಜನ್ಮ ನೀಡಿದ ಜನನಿ ತನ್ನ ಮಗು ಮುಂದೆ ಬಲಶಾಲಿಯಾಗಿ ಬೆಳೆದು ಜಗವೆಲ್ಲ ಪುಣ್ಯಗಳ ಸರದಾರನಾಗಬೇಕೆಂಬ ಉತ್ಕಟ ಬಯಕೆಯನ್ನು ವ್ಯಕ್ತಪಡಿಸಿರುವುದನ್ನು ಕಾಣಬಹುದು. ತನ್ನ ಕಣ್ಣೆದುರಿನಲ್ಲಿ ಹಕ್ಕಿಯಂತೆ ಹಾರಾಡಿಕೊಂಡು ತನ್ನ ಪ್ರೀತಿಯಂಗಳದಲ್ಲಿ ಆಡಿಕೊಂಡಿರಬೇಕು. ಮಾತು ಕಲಿತು ಏಳ್ಗೆ ಹೊಂದಬೇಕು. . . . . ಹೀಗೆ ಎಲ್ಲ ತಾಯಂದಿರು ತನ್ನ ಮಗು ಭವಿಷ್ಯದಲ್ಲಿ ತನ್ನ ನಿರೀಕ್ಷೆಯಂತೆ ಆಗಬೇಕು ಎಂದು ಹಂಬಲಿಸುವ ಪರಿಯನ್ನು ಈ ಕವಿತೆಯಲ್ಲಿ ಕಾಣಬಹುದು.

ಯಾರ ಭವಿಷ್ಯ ಯಾವ ರೂಪ ಧರಿಸಿ ಮಾತೃ ವಾತ್ಸಲ್ಯಕ್ಕೆ ಏನನುಭವಕ್ಕೆ ಬರುವುದೋ ಎಂಬ ಆತಂಕದ ನಡುವೆಯೂ ಆಡುತ್ತ ನೀನಿರು ನೋಡುತ್ತಾ ನಾನಿರುವೆ ಎಂದು ತನ್ನ ಕರುಳ ಕುಡಿಯ ಬಗ್ಗೆ ಇನ್ನಿಲದ ವಾತ್ಸಲ್ಯ ಭಾವ ತಾಳುತ್ತಾಳೆ. ವಿ.ಸೀ. ಯವರು ತಾಯಿಯನ್ನು ಕುರಿತು ಹೇಳುವುದರಲ್ಲಿ ವಾತ್ಸಲ್ಯ ಅಭಿಮಾನವಿದ್ದರೂ ಕೂಡ ಬೇಂದ್ರೆಯವರಷ್ಟು ತೀವ್ರವಾಗಿ ಕಾಣುವ ಗೋಜಿಗೆ ಹೋಗಿಲ್ಲ ಎನ್ನಬಹುದು.

ದಾಂಪತ್ಯ ಗೀತೆಗಳಲ್ಲಿ ಯಶಸ್ಸು ಕಂಡಿರುವ ಕೆ.ಎಸ್.ನರಸಿಂಹ ಸ್ವಾಮಿಯವರು ತಾಯಿಯನ್ನು ತುಂಬಾ ಗೌರವದಿಂದ ಕಂಡಿದ್ದಾರೆ. ಶ್ರೀಯುತರು ತಾಯಿ–ಮಗುವಿನ ಸಂಬಂಧದ ಚಿತ್ರ ಮೂಡಿಸುವಲ್ಲೂ ಯಶಸ್ವಿಯಾಗಿದ್ದಾರೆ. ಅವರ ಕವಿತೆಗಳಲ್ಲಿ ಮಾತೃತ್ವದ ಅಂತಃಕರಣವಿದೆ. ಮಾರ್ದವತೆಯಿದೆ. ಮನ ಸೆಳೆಯುವ ಶಕ್ತಿಯಿದೆ.

"ಅಬ್ಬರವಿರದ, ಆಡುಮಾತಿನ ಲಯಕ್ಕೆ ಬಹು ಹತ್ತಿರವಾದ ಭಾಷೆಯಲ್ಲಿ ಸೂಕ್ಷ್ಮ ಸಂವೇದನೆಗಳನ್ನು ಅಭಿವ್ಯಕ್ತಿ ಮಾಡುವ ರಚನೆಗಳನ್ನು ಕೆ.ಎಸ್.ಎನ್. ಈಚೆಗಿನ ವರ್ಷಗಳಲ್ಲಿ ಕೊಟ್ಟಿದ್ದಾರೆ. ಜೀವನವನ್ನು ಸಂತೋಷದಿಂದ ಸ್ವೀಕರಿಸಿದ ಕವಿ ಆ ಜೀವನದ ಆಯಾಮಗಳನ್ನು, ಸ್ತರಗಳನ್ನು ತಂದು ಕೊಳ್ಳುತ್ತಿದ್ದಾರೆ, ತಂದುಕೊಡುತ್ತಿದ್ದಾರೆ . . . . ." [೩೧] – ಎಂಬ ಎಲ್.ಎಸ್. ಶೇಷಗಿರಿ ರಾವ್‌ರ ಮಾತಿನಂತೆ ದಾಂಪತ್ಯ ಹಾಗೂ ಕೌಟುಂಬಿಕ ಜೀವನ ಚಿತ್ರ ಕೊಡುವುದರಲ್ಲಿ ಕೆ.ಎಸ್.ಎನ್. ಮೊದಲಿಗರು. ತಮ್ಮದೇ ಆದ ಶೈಲಿ, ಸೊಬಗಿನ ನುಡಿಗಳಿಂದ ಭಾವನೆಗಳಿಗೆ ರೂಪುಕೊಟ್ಟಿರುವ ಈ ಕವಿಯಿಂದ ಮಾತೃಕಲ್ಪನೆಯ ನಾನಾ ಮೆಟ್ಟಿಲುಗಳನ್ನು ದರ್ಶಿಸಬಹುದು.

ಮಾತೃತ್ವ ಸದಾ ಕಾಪಾಡುವ, ಹಾರೈಸುವ, ಆಶೀರ್ವದಿಸುವ ಶಕ್ತಿ. ಅದು ತನ್ನರಿವಿಲ್ಲದೆ, ಪ್ರತಿಫಲಾಪೇಕ್ಷೆಯಿಲ್ಲದೆ ತನ್ನ ಪಾಲಿನ ಪೊರೆವ ಕಾರ್ಯ ಮಾಡುವುದೇ ಮಾತೃತ್ವ ಎಂಬುದನ್ನು ಕೆ.ಎಸ್. ನರಸಿಂಹ ಸ್ವಾಮಿಯವರು ತಮ್ಮ 'ಸಣ್ಣ ಸಂಗತಿ' ಕವಿತೆಯಲ್ಲಿ ಕಂಡಿರಿಸಿದ್ದಾರೆ. ಈ ಕವಿತೆ ನೋಡಿದಾಗ ಬೇಂದ್ರೆಯವರ 'ತಾಯಿ ಕೂಸು' ಕವಿತೆ ನೆನಪಾಗುತ್ತದೆ. ಆದರೆ ಬೇಂದ್ರೆಯವರ ನೋಟ, ಶೈಲಿ ಭಿನ್ನ ಹಾಗೂ ಸಂದರ್ಭ ಬೇರೆ ಎಂಬುದನ್ನು ಮರೆಯುವಂತಿಲ್ಲ.

ನಟ್ಟಿರುಳ ಕರಿಮುಗಿಲ ನೀರ್ – ತುಂಬಿಗಳ ನಡುವೆ
ಹುಣ್ಣಿಮೆಯ ಕಣ್ಣು ತೆರೆದಿದೆ, ...
ನಿದ್ದೆಗಣ್ಣಿನಲೆ ಪಕ್ಕದ ತಾಯಿ ಕೈ ನೀಡಿ
ಮತ್ತೆ ಹೊದಿಕೆಯನ್ನು ಸರಿಪಡಿಸುವಳು. ಮಗು ತಿರುಗಿ
ಹೊದಿಕೆಯನೆ ಕಿತ್ತೆಸೆದು ಮಲಗುವುದು ಬರಿ ಮೈಲಿ;
ಸಣ್ಣಗಿದೆ ದೀಪ ಎಲ್ಲೊ ಒಂದು ಮೂಲೆಯಲಿ.
ಇದು ಸರಿಯೆ? ತಪ್ಪೆ? ಉತ್ತರವಿಲ್ಲ. ದೆಸೆದೆಸೆಗೆ
ಎಲ್ಲ ಮಲಗಿಹರು ಮಾತಾಡದೆಯೆ ನೋಡದೆಯೆ.
ನಿದ್ದೆ ಎಚ್ಚರಗಳಲಿ ಪೊರೆವ ಕೈ ದುಡಿಯುತಿದೆ;
ಅದನು ಲೆಕ್ಕಿಸದೆ ಮಗು ಹೊದಿಕೆಯನ್ನು ಒದೆಯುತಿದೆ. [೭]

ಇದೊಂದು ಶಬ್ದಚಿತ್ರದಲ್ಲಿ ಅಂತರ್ಗತವಾಗಿದ್ದು ಮಾತೃತ್ವದ ಹಿರಿಮೆ ಸಾರುತ್ತದೆ. ಪ್ರತಿ ಶಬ್ದಗಳ ಉಪಮೆ ಪ್ರತಿಮೆಗಳಾಗಿ ಸಾಕ್ಷಿಗೊಂಡು ಮಹೋಪಮೆ ಮತ್ತು ಬದುಕಿನ ಜ್ವಲಂತ ಸಾಕ್ಷಿ ಮೇಳೈಸಿದ ಕವನ. ಮಗುವಿಗಾಗಿ ತಾಯಿಯೇ ಹೊರತು ತಾಯಿಗಾಗಿ ಮಗುವಲ್ಲ. ಅದು ತನ್ನ ಅಂತಃಕರಣದ ಪ್ರತಿರೂಪ. ಹಾಗಾಗಿ ಅದರ ರಕ್ಷಣೆಗಾಗಿ ತಾಯಿ ಪ್ರಯತ್ನ. ತಾಯಿಯ ಅಂತಃಕರಣ ತನ್ನ ಕೂಸಿನ ಪೋಷಣೆ, ರಕ್ಷಣೆಯಲ್ಲಿರುವುದೇ ಹೊರತು; ತನ್ನ ವೈಯಕ್ತಿಕ ಪೋಷಣೆ, ರಕ್ಷಣೆಗಲ್ಲ ಎಂಬುದನ್ನು ಕವಿ ಈ ಶಬ್ದಚಿತ್ರದಲ್ಲಿ ಬಿಡಿಸಿದ್ದಾರೆ.

ಕೆ.ಎಸ್.ಎನ್.ರವರು ವಾತ್ಸಲ್ಯಭಾವವನ್ನು ವಸ್ತುನಿಷ್ಠ ದೃಷ್ಟಿಯಿಂದ ಕಂಡ ಕವಿತೆ 'ಸಣ್ಣ ಸಂಗತಿ' (ಇರುವಂತಿಗೆ) ನಟ್ಟಿರುಳಿನ ಕರಿಮುಗಿಲುಗಳ ನಡುವೆ ಹುಣ್ಣಿಮೆಯ ಚಂದ್ರ ಹಣಕಿದ್ದಾನೆ. ಅಲ್ಲಲ್ಲಿ ತಾರೆಗಳೂ ಮೂಡಿವೆ. ಆ ಕಡೆ ಎಲ್ಲೋ ಮಳೆಯಾಗುತ್ತಿರಬೇಕು ತಣ್ಣಗಿನ ಗಾಳಿ ಬೀಸುತ್ತಿದೆ. ಇತ್ತ ಈ ಮನೆಯಲ್ಲಿ ಪುಟ್ಟ ಮಗು ಮಂಚದ ಬಳಿಯ ತೊಟ್ಟಿಲಲ್ಲಿ ಅರೆಗಣ್ಣಾಗಿ ಮಲಗಿದೆ, ಬರಿ ಮೈಲಿ ಪಕ್ಕದ ತಾಯಿ ನಿದ್ದೆಗಣ್ಣಿನಲ್ಲಿಯೇ ಕೈ ನೀಡಿ ಮಗುವಿನ ಹೊದಿಕೆಯನ್ನು ಸರಿಪಡಿಸುತ್ತಾಳೆ. ಮಗು ತಿರುಗಿ ಹೊದಿಕೆಯನ್ನು ಒದ್ದು ಬರಿಮೈಲಿ ಮಲಗುತ್ತದೆ. ಇದು ಸರಿಯೊ ತಪ್ಪೊ ಯಾರು ಉತ್ತರ ನೀಡಬೇಕು? ದಿಕ್ಕಿಗೊಬ್ಬರು ಮಲಗಿದ್ದಾರೆ, ಮಾತಾಡದೆಯೆ, ಈ ಮಗುವಿನ ಕಡೆಗೆ ನೋಡದೆಯೆ, ಆದರೂ –

ನಿದ್ದೆ ಎಚ್ಚರಗಳಲ್ಲಿ ಪೊರೆವ ಕೈ ದುಡಿಯುತ್ತಿದೆ;
ಅದನು ಲಿಕ್ಕಿಸದೆ ಮಗು ಹೊದಿಕೆಯನ್ನು ಹೊದೆಯುತ್ತಿದೆ.

"ಸಾಮಾನ್ಯವಾದ ಈ 'ಸಣ್ಣ ಸಂಗತಿ'ಯಲ್ಲಿ ಕವಿ ಕಂಡಿರುವ ದರ್ಶನ ದೊಡ್ಡದು. ಈ ಸನ್ನಿವೇಶದ ಚಿತ್ರ ಸಾನೆಟ್ಟಿನ ಬಂಧದಲ್ಲಿ ಬಂಧುರವಾಗಿ ಮೂಡಿದೆ. ವಸ್ತುವಿನ ತಾದಾತ್ಮ್ಯ ಭಾವದಿಂದ ಇಲ್ಲಿಯ ಸಂಗತಿಗಳ ಪರಸ್ಪರ ಬಾಂಧವ್ಯ ಬೆಸೆದುಕೊಂಡು ಕಾವ್ಯಾರ್ಥವನ್ನು ಹುರಿಗೊಳಿಸಿದೆ. ಕರಿ ಮುಗಿಲಿನ ನಡುವೆ ಚಂದ್ರ ಮೂಡಿ ಬಂದಿರುವುದೂ ತೊಟ್ಟಿಲಲ್ಲಿ ಬರಿಮೈಲಿ ಮಲಗಿದ ಮಗುವಿನ ಚಿತ್ರಕ್ಕೆ ಸಂವಾದಿಯಾಗಿದೆ. 'ಬರಿಮೈಲಿ' ಎಂಬ ಸನ್ನಿವೇಶದ ತೀವ್ರತೆಯನ್ನು ಹೆಚ್ಚಿಸಿದೆ. 'ಸಣ್ಣಗಿನ ದೀಪ ಎಲ್ಲೊ ಒಂದು ಮೂಲೆಯಲ್ಲಿ' ಎಂಬ ಸಾಲು ಕವಿತೆಗೆ ಅಪೂರ್ವವಾದ ಧ್ವನಿಶಕ್ತಿಯನ್ನು ತಂದು ಕೊಟ್ಟಿದೆ. ಯಾವ ಉದ್ವೇಗವೂ ಇಲ್ಲದೆ, ವಿವೇಚನೆಯೂ ಅರೆಯಾಗದೆ – ಬೇಕಾದಷ್ಟು ಭಾವದ ಕಾವನ್ನು ಉಳಿಸಿಕೊಂಡು ಈ ಸಾನೆಟ್ಟು 'ಕ್ಷಣವೊಂದು ಸ್ಮಾರಕವಾಗಿ ನಿಂತಿದೆ."[೩೩]

ಇದೇ ಕವಿ, ತಾಯಿಯನ್ನು ಅಗಲಿ ಕೆಲಹೊತ್ತು ಆಟದಲ್ಲಿ ಮಗ್ನವಾದ ಮಗು ಮತ್ತೆ ತಾಯಿಯನ್ನರಸಿಕೊಂಡು ಬರುವ ಕ್ರಿಯೆಯನ್ನು 'ಗುಡಿ – ತೇರಿನ' ಪವಿತ್ರ ಪ್ರತಿಮೆಯಲ್ಲಿ ಒಂದೆಡೆ ನಿಲ್ಲಿಸಿದ್ದಾರೆ:

ತಾಯ ತೋಳಿಂದ ಜಾರಿದ ಕಂದ ದೂಳಿನಲಿ
ತೆವಳಿ ಬರುವುದು ಮತ್ತೆ ತಾಯ ಬಳಿಗೆ,
ಗುಡಿಯಿಂದ ಹೊರಟು ದೇವರ ಮೆರೆಸಿ ಬೀದಿಯಲಿ
ತೇರು ಹಿಂದಿರುಗುವುದು ಗುಡಿಯ ಬಳಿಗೆ.[೩೪]

ಗುಡಿಯನ್ನೆ ಸೇರುವ ತೇರಿನ ಈ ಭಾವದಲ್ಲಿ ತಾಯಿ ಮಗುವಿನ ಸಂಬಂಧದ ಶ್ರೇಷ್ಠತೆಯನ್ನು ಸೊಗಸಾಗಿ ಬಿಂಬಿಸಿದ್ದಾರೆ.

"ಕಣವಿಯವರ ಕಾವ್ಯ ಮನೋಧರ್ಮವನ್ನು 'ರೊಮ್ಯಾಂಟಿಕ್' ಎಂದು ಗುರುತಿಸುವುದು ವಾಡಿಕೆಯಾಗಿದೆ. ಆದರೆ ಅದು ಇದಕ್ಕಿಂತಲೂ ಹೆಚ್ಚು ಸಂಕೀರ್ಣವಾದ ಮನೋಧರ್ಮ, ಆದರ್ಶವಾದ, ನಿಸರ್ಗ ಪ್ರೇಮ, ಭಾವನಿಷ್ಠೆ ಇವು ಇವರ ರೊಮ್ಯಾಂಟಿಕ್ ಒಲವುಗಳತ್ತ ಬಟ್ಟು ಮಾಡಿ ತೋರಿಸಿದರೆ; ಸಮ ದರ್ಶನ, ಸಮ ಭಾವ, ಸ್ವೀಕೃತಿಗಳಂಥ ಮೌಲ್ಯಗಳಲ್ಲಿರುವ ಅವರ ನಂಬುಗೆ ಭಾರತೀಯ ಸಂದರ್ಭದಲ್ಲಿ ಅಭಿಜಾತ ಒಲವುಗಳನ್ನೇ ಸೂಚಿಸುತ್ತದೆ"[೩೫] – ಎಂದು ಜಿ.ಎಸ್. ಅಮೂರರ ಮಾತುಗಳು ಸಹಜವೆನಿಸುತ್ತವೆ. ಈ ಮಾತುಗಳ ಹಿನ್ನೆಲೆಯಲ್ಲೆ ಕಣವಿಯವರ ಕಾವ್ಯ ಪ್ರವೇಶ ಮಾಡಿದರೆ, ಅವರ ಅಂತರಾಳದ ಭಾವನೆಗಳು ದೊರೆಯುತ್ತವೆ. 'ತಾಯೆ ನಿನ್ನ ಮಡಿಲೊಳು' ಕವಿತೆಯಲ್ಲಿ ತಾಯಿಯ ಬಸಿರಿನಿಂದ ಬಂದು, ಆಕೆಯ ಆರೈಕೆಯಿಂದ ಬೆಳೆದು, ತಾಯಿಯನ್ನೆ ಮೊದಲ ಗುರುವಾಗಿ ಭಾವಿಸಿರುವ ಕವಿಯ ಕೃತಜ್ಞತೆಯ ನೆನಪು ಬಿಚ್ಚಿಕೊಳ್ಳುತ್ತದೆ:

ನಿನ್ನ ಬಸಿರೊಳೊಗೆದು ಬಂದು
ಎದೆಯ ಹಾಲು ಕುಡಿದು ನಿಂದು
ತೋಳ ತೊಟ್ಟಿಲಲ್ಲಿ ತೂಗಿ ಲಾಲಿಯಾಡಿದೆ;
. . . .
ಅಂದು ತೊದಲು ನುಡಿದ ಕಂದ

ಇಂದು ಹಾಡ ಪಡೆದು ಬಂದ -
ನಂತೆ ಕರುಣೆ ಅನ್ನಪೂರ್ಣೆ ಹೇಳಲಾಪೆಯಾ?
ಪ್ರೇಮ ಜೇವಿ ಪಟ್ಟ ಪಾಡು
ತಾಯೆ ನಿನ್ನ ಮಡಿಲೊಳಿಡಲು ಇಂಬುಗೊಡುವೆಯಾ? [೩೭]

ಇಂದು ಪ್ರಬುದ್ಧನಾದ ಕವಿಯ ಅಂತರಾಳದಿಂದ ಪಾಡೇ ಹಾಡಾಗಿ ಹರಿದು ಬಂದದ್ದನ್ನು ಮಾತೃ ಮಡಿಲಲ್ಲಿಡಲು ಅವಕಾಶ ಕೊಡೆಂದು ಪ್ರಾರ್ಥಿಸಿಕೊಳ್ಳುವುದರಲ್ಲಿ ತಾಯಿ ಬಗ್ಗೆ ಇರುವ ಅನನ್ಯ ಭಕ್ತಿ ಗೌರವ ಎದ್ದು ಕಾಣುತ್ತದೆ.

'ಶ್ರೀ ಮುಖ' ಕವಿತೆಯಲ್ಲಿ ತಾಯಿಯ ಶ್ರೀ ಮುಖದ ಹಿರಿಮೆಯನ್ನು, ಮಗುವಾಗಿ ಪಡೆದ ಸುಖದ ನೆನಪನ್ನು, ತಾಯಿಯ ವಾತ್ಸಲ್ಯವನ್ನು ಇಡಿಯಾಗಿ ತುಂಬಿಕೊಡುವುದನ್ನು ಕಾಣಬಹುದು.

ತಾಯ ಶ್ರೀ ಮುಖವ ಕಂಡು ಮನವು ನೆಮ್ಮದಿಗೊಂಡು
ಎದೆ ಹಿಗ್ಗಿ ಸಂತಸದಿ ಹಾಡುತಿಹುದು;
. . . .
ತಪ್ಪಿರಲಿ ಒಪ್ಪಿರಲಿ ಸೆರಗಿನಲಿ ಮುಚ್ಚಿ,
ದುಗುಡವಿರೆ ನಗೆಯ ಬೆಳದಿಂಗಳವ ಹೊಚ್ಚಿ,
ಕಂಟಕವ ದೂರಿಟ್ಟು ಸಂತವಿಸಿ ಕಾಯೆ,
ಎಂಟೆದೆಯ ಬಂಟನಾಗುವ ತೆರದಿ ತಾಯೆ! [೩೮]

ತಾಯಿಯ ವಾತ್ಸಲ್ಯ ದುಗುಡ ದೂರ ಮಾಡಿ, ಬೆಳದಿಂಗಳ ನಗೆ ಚೆಲ್ಲಿ, ಕಂಟಕವ ದೂರವಿಟ್ಟು ಸಂತೈಸುವಂತಹದು. ಮಗುವಿಗೆ ಆತ್ಮವಿಶ್ವಾಸದ ಚೈತನ್ಯ ನಿಧಿಯಾಗುವಳು. ಅದೇ ತಾಯಿತನ ಎಂಬುದು ಕವಿಯ ಮಾತು.

ಕಂಬಾರರ 'ಸರಳ ಮಾತು' ಮಾತೃತ್ವದ ಹಿರಿಮೆ ಸಾರುವ ಕವಿತೆ. ತಾಯ್ತನ ಹೆಣ್ಣಿಗೆ ತೃಪ್ತಿ ಆನಂದ ತರುತ್ತದೆ. ತಾನು ನೀತಿ ಮಾರ್ಗದಲ್ಲಿ ಮದುವೆಯಾಗಿ ಗಂಡನೊಂದಿಗೆ ಸಂಸಾರ ನಡೆಸಿ ಹಡೆದರೆ ಇಡೀ ಸಮಾಜ ಅಭಿಮಾನದಿಂದ ಓಲೈಸುತ್ತದೆ. ಒಂದು ವೇಳೆ ತಾನು ಯಾವುದೋ ಒಂದು ಒತ್ತಡಕ್ಕೆ ಸಿಲುಕಿ, ಬಡತನಕ್ಕೆ ಬೆಂದು, ಪ್ರೀತಿಗೆ ಮರುಳಾಗಿ ಬೆನ್ನಾಡಿದ ಗಂಡಿಗೆ ದೇಹ ನೀಡಿ, ಸುಖವಿತ್ತ ಹೆಣ್ಣಿಗೆ ಅನ್ಯಾಯ ಮಾಡಿದ ಆ ಪುರುಷನನ್ನು ಯಾರೂ ಟೀಕಿಸುವುದಿಲ್ಲ, ನಿಂದಿಸುವುದಿಲ್ಲ. ಬದಲಿಗೆ ಅಬಲೆಯಾದ ಹೆಣ್ಣಿನ ಬಗ್ಗೆ ನಿಲ್ಲದ ಕ್ರೂರ ಮಾತುಗಳು ಹರಿಯುತ್ತವೆ. ಇಷ್ಟಾದರೂ ಸಮಾಜದ ಈ ನಿಂದನೆಗೆ ಕಿವಿಗೊಡದೆ, ತಾಯಾದಹೆಣ್ಣು ಮಗುವನ್ನು ಪಾಲಿಸಿ ಪೋಷಿಸುವುದರ ಹೃದಯಸ್ಪರ್ಶಿ ಚಿತ್ರ ಇಲ್ಲಿದೆ.

ಹೆರಿಗೆ ವಾರ್ಡಿನ ಆ ಕೊನೆ ಹಾಸಿಗೆಯಲ್ಲಿ
ಚೊಚ್ಚಲು ಬಾಣಂತಿ, ಇನ್ನು ಬಾಲೆ
ಅಲ್ಲೆ ಗೋಡೆಯ ಮೇಲೆ ಹೂ ಬಿಟ್ಟದೆ ಬಳ್ಳಿ
ಗೊತ್ತೇ ಆಗುವುದಿಲ್ಲ, ಅದು ಅರಳಿದ್ದು ಕ್ಯಾಲೆಂಡರಿನಲ್ಲಿ!

ಈಕೆಯ ಬಳಿಗ್ಯಾರೂ ಬರೋದಿಲ್ಲ. ನಗೋದಿಲ್ಲ. ಕ್ಷೇಮ ಕೇಳೋದಿಲ್ಲ.

ಗಂಡನೋ ಮಿಂಡನೋ ಈ ಪಿಂಡದ ಕಾರಣಿಕದ
ಸುಳಿವಿಲ್ಲ, ದಾಖಲೆಯಲ್ಲಿ ಅವನ ಹೆಸರೂ ಇಲ್ಲ
ಹೋಗಲೆಂದರೆ ಈಕೆ ಮೇರಿಯೂ ಅಲ್ಲ; ಹುಟ್ಟಿದ್ದು ಏಸುವಲ್ಲ.[೩೮]

ಕ್ಯಾಲೆಂಡರಿನಲ್ಲಿ ನಿಸರ್ಗವನ್ನಿಟ್ಟು ಮೊಳೆ ಹೊಡೆದು ಗೋಡೆಗೆ ನೇತು ಹಾಕುವ ಮಂದಿಗೆ ಈ ಸರಳ ಸಂಗತಿ ತಿಳಿಯುವುದಾದರು ಹೇಗೆಂದು ಕವಿ ಕೊನೆಯಲ್ಲಿ ಪ್ರಶ್ನಿಸಿ ಕವಿತೆಗೆ ಗಂಭೀರ ಅರ್ಥ ತಂದುಕೊಟ್ಟಿದ್ದಾರೆ.

ಕಂಬಾರರ ಕವಿತೆಗೆ ಹತ್ತಿರವಾದರೂ ಭಿನ್ನವಾಗಿ ನಿಲ್ಲುವ ಕವಿತೆ ಜಿ. ಎಸ್. ಶಿವರುದ್ರಪ್ಪನವರ 'ತಾಯಿ ಮಗು'. ಶಿಶು ತಾಯ ಹಾಲಿನಲಿ ಮೈಮರೆತಿದೆ. ಹಾಲೂಡುವ ತಾಯಿಯ ಮನಸ್ಸು ಮಗನ ಅಭ್ಯುದಯ ಕನಸಿನಲಿ ಕಾಮನ ಬಿಲ್ಲಿನ ನಾಕವನೆಯ್ದಿರೆ, ಮುಂದೇನು ಎಂಬುದು ಮಗುವಿಗೆ ಅರಿವಿಗೆ ಬಾರದು, ಇಂದೇನು ಎಂಬುದು ತಾಯಿಯ ಕಣ್ಣೆದುರು ಬಾರದು. ಇಂತಹ ತಾಯಿ – ಮಗುವಿನ ಅನ್ಯೋನ್ಯ ಮಧುರ ಸಂಬಂಧ ಭಾವಸ್ಪುರಣಗೊಂಡಿರುವುದು ಕಂಡುಬರುತ್ತದೆ.

ತಾಯಿಯ ಎದೆ ಹಾಲನು ಹೀರುತ್ತಿದೆ
ಮೋಹದ ಮುದ್ದಿನ ಮಗುವೊಂದು
ಬಾನನಪ್ಪಿದ ಮೃದು ಮೋಡದವೋಲ್
ಭಗವಂತನನಪ್ಪಿದ ಭಕ್ತನವೋಲ್
ಕಾವ್ಯ ಸಮಾಧಿಯ ರಸಾನುಭೂತಿಯ
ಕಾವಿನೊಳದ್ದಿಹ ಕಬ್ಬಿಗನೋಲ್
ತಾಯೆದೆ ಹಾಲನು ಹೀರುವ ಸುಖದಲಿ
ತನ್ಮಯವಾಗಿದೆ ಶಿಶುವೊಂದು – [೩೯]

ಭಿನ್ನ ಸ್ತರಗಳಲ್ಲಿ ತಾಯಿ ಮಗುವಿನ ಸಂಬಂಧವನ್ನು ಗುರುತಿಸುವ ಪ್ರಯತ್ನವಿಲ್ಲಿದೆ. ಭಕ್ತನಿಗೂ ಭಗವಂತನಿಗೂ ಇರುವ ಧಾರ್ಮಿಕ ನೆಲೆ; ಕವಿಕಾವ್ಯ ರಚನೆಯ ಸಂಬಂಧದ ನೆಲೆಯಲ್ಲಿ, ಸಹಜವಾದ ಮನುಷ್ಯ ಸಂಬಂಧದ ನೆಲೆಯಲ್ಲಿ ಗುರುತಿಸುವ ಪ್ರಯತ್ನ ಇದಾಗಿದೆ.

ಸತ್ಯ – ಮಿತ್ಯಗಳ ಮಿಶ್ರಣವೇ ಬದುಕು. ಅದು ತಾಯಿ – ಮಗುವಿನ ಸಂಬಂಧದಲ್ಲಿ ವ್ಯಕ್ತವಾಗಿದೆ. ಮುಂದೇನೆಂಬುದರ ಸ್ಪಷ್ಟತೆ ಕಾಣದಿದ್ದರೂ, ಕಾಣಬೇಕೆಂಬ ಆಶಯವೇ ಬದುಕನ್ನು ಸಹ್ಯವಾಗಿಸುತ್ತದೆ. ಅದೇ ಜೀವನದ ಕುತೂಹಲಕ್ಕೆ ಪ್ರೇರಣೆ ನೀಡುತ್ತದೆ.

ತಾಯಿಯ ಒಲವು – ನಿಲುವುಗಳ ಅಮೃತ ಉಂಡು ಬೆಳೆದ ಕವಿ, ಬಾಲ್ಯದಲ್ಲೆ ತಾಯಿಯನ್ನು ಕಳೆದುಕೊಂಡುದರ ನೆನಪಿನೊಂದಿಗೆ, ಆಕೆಯನ್ನು ಅನ್ಯರ ತಾಯಿಯಲ್ಲಿ ಕಾಣಲು ಪಡುವ ತವಕ, ರಾತ್ರಿಯ ತಾರಾ ಮೇಳದಲ್ಲಿ ಹುಡುಕುವ ತೀವ್ರತೆಯಲ್ಲಿ ನಿರಾಶೆಗೊಂಡು ಮರುಗುವ, ಕಣ್ಣೀರು ಸುರಿಸುವುದರಲ್ಲಿ ತಾಯಿಯ ಬಗ್ಗೆ ಇಟ್ಟ ಪ್ರೀತಿಯನ್ನು ಕಾಣಬಹುದು. 'ತಾಯೊಲವೆ ತಾಯೊಲವು ಈ ಲೋಕದೊಳಗೆ' ಎಂಬ

ನಿಲುವಿಗೆ ಕವಿ ಬರುತ್ತಾರೆ. ಮತ್ತೊಮ್ಮೆ ಆಕೆಗೆ ಶಿಶುವಾಗಿ ಹುಟ್ಟಿ ನಲಿಯಬೇಕೆಂಬ ಅಭೀಪ್ಸೆಗೆ ಒಳಗಾಗಿದ್ದಾರೆ. 'ತಾಯಿಗೆ' ಈ ನಿಲುವಿನಲ್ಲಿ ವಿಶೇಷ ಗಮನ ಸೆಳೆಯುತ್ತದೆ.

ಹೆತ್ತು ಮೊಲೆಯಿತ್ತವಳು ತಾಯಿ ನೀನು
ನಿನ್ನ ಕಣ್ ಬೆಳಕಿನಲಿ ಬೆಳೆದಿದ್ದೆ ನಾನು.

ಬೆಳಕು ಆರಿತು ನನಗೆ
ಯಾವುದೋ ಒಂದು ಬಗೆ
ಬದುಕಿ ಬೆಳೆದೆನು ನಾನು ನಿನ್ನ ನೆನೆದು
ಸಿಹಿಗಿಂತ ಕಹಿಯನೇ ಹೆಚ್ಚಾಗಿ ಸವಿದು [೪೦]

ನೋವುಂಡು ಬೆಳೆದ ಜೀವಿ, ತಾನು ಸವೆಸಿದ ಬದುಕಿನ ಹಾದಿಯ ನೆನಪುಗಳನ್ನು ತೆರೆದಿಡುತ್ತಾರೆ. ಹೌದು ತಬ್ಬಲಿತನ ನೀಗುವುದು ಯಾರಿಂದಲೂ ಸಾಧ್ಯವಿಲ್ಲ. ತಾಯಿಯ ಪ್ರೀತಿಯನು ಮತ್ತೆಲ್ಲೂ ಕಾಣಲು ಸಾಧ್ಯವಿಲ್ಲ.

ಮನೆಯ ತುಂಬಿದಳಂದು ಮತ್ತೊಬ್ಬ ಮಾತೆ
ಮನತುಂಬಲೇ ಇಲ್ಲ – ಅವಳನ್ನ ದಾತೆ!
ನೀನಿತ್ತ ಒಲವನ್ನು
ಆ ದಿವ್ಯ ಸುಧೆಯನ್ನು
ಪರರಿಂದ ಕಡವಾಗಿ ಪಡೆಯಬಹುದೇ?
ದೊರೆಯದಿರೆ ಅದಕಾಗಿ ಕೊರಗಬಹುದೆ?
. . . .
ತಾಯೊಲವೆ ತಾಯೊಲವು ಈ ಲೋಕದೊಳಗೆ
ಕಡಲಿಂಗೆ ಕಡಲಲ್ಲದುಂಟೆ ಹೋಲಿಕೆಗೆ! [೪೧]

ಬೃಹತ್ತು ಮಹತ್ತುಗಳಿಗೆ ಮತ್ತಾವುದರ ಹೋಲಿಕೆಯೂ ಸರಿದೂಗದು. ಹಾಗೆಯೇ ತಾಯಿಗೆ ತಾಯಿಯೇ ಹೋಲಿಕೆ. ಜನಪದರಲ್ಲಿಯೂ ಇಂತಹುದೇ ಸಾದೃಶ್ಯದ ತ್ರಿಪದಿಯೊಂದು ಕಂಡು ಬರುತ್ತದೆ. '. . . ಸಾವಿರ ಕೊಳ್ಳಿ ಒಲಿಯಾಗ ಜೋತಿ ನಿನ್ನಾರು ಹೋಲ್ಯಾರು. . . .' ಹೀಗೆ ಮಾತೃ ರೂಪವೇ ಅಮೃತ ಪ್ರೇಮವಾಗಿ ಹರಿದು ಬಂದಿದ್ದು ಅದನ್ನು ಸವಿಯುವ ಉತ್ಕಟತೆಗೆ ಮರು ಜನ್ಮ ಬಯಸುತ್ತಾರೆ ಕವಿ.

ತಾಯಿ – ಮಗುವಿನ ಸಂಬಂಧಕ್ಕೆ ಅದೃಶ್ಯ ಶಕ್ತಿಯೊಂದು ಕಾರಣವಾಗಿರಬೇಕು. ಪ್ರೇಮವನ್ನು ತಾಯಿಯಲ್ಲಿ ಮಗು ಬೇಡುವುದಾದರೆ; ಮಗುವಿನ ಅಪ್ಪುಗೆಯ ಸುಖ ಭಕ್ತನೆಡೆಗೆ ತಾನಾಗಿ ಬರುವ ಮಾದೇವ ಕರುಣೆಯಂತೆ – ತಾಯಿಗಾಗುತ್ತದೆ. ಇಂತಹ ಮಧುರ ಸಂಬಂಧದ ಚಿತ್ರ 'ತಾಯಿ ತನ್ನ ಮಗುವಿಗೆ' ಕವಿತೆಯಲ್ಲಿ ಜಿ.ಎಸ್.ಎಸ್. ನೀಡಿದ್ದಾರೆ.

ಮಾತೃ ವಾತ್ಸಲ್ಯ ಮಧುರ ವಾತ್ಸಲ್ಯ. ಆಕೆ ತನ್ನ ಎದೆಯಾಳದ ಭಾವನೆಗಳನ್ನು ಮಗುವಿನ ಭವಿಷ್ಯದ ವಿಕಾಸಕ್ಕೆ ಧಾರೆಯೆರೆಯುತ್ತಾಳೆ, ಕನಸು ಕಟ್ಟುತ್ತಾಳೆ, ರೋಮಾಂಚನಗೊಳ್ಳುತ್ತಾಳೆ.

ನನ್ನ ಎದೆಯ ಬಳಿ ಉಸಿರಾಡುತಿಹ ನನ್ನ ಕಿರಿಯ ಕಂದ
ನನ್ನ ನಿನ್ನೆದೆಯ ಬೆಸೆಯಿತಾವುದೋ ಕಾಣದಿರುವ ಬಂಧ
ನನ್ನ ಗರ್ಭದಲಿ ಮೂಡಿಬಂದೆ ನೀನಾವ ಲೋಕದಿಂದ?
ಇಂದು ನನ್ನವನು, ನಮ್ಮ ಲೋಕದವನೈದು ದಿನಗಳಿಂದ

ಹಾಗಾಗಿ ತಾಯಿ ತನ್ನ ಮಗುವಿನ ಉಸಿರಿನೊಂದಿಗೆ ಕೇಳುತ್ತಾಳೆ: 'ಜೀವರೆಲ್ಲರೂ ಪ್ರೇಮದೊಂದು ಪಾತ್ರೆ!' ಮಗುವಿನ ಚಟುವಟಿಕೆ ಕಂಡ ತಾಯಿ ಪುಳಕಿತಳಾಗಿ ಈ ಮಾತು ಆಡುತ್ತಾಳೆ.

ಎಲ್ಲ ಬಲ್ಲರು ಶಕ್ತಿಯಿದ್ದರು ನಿಶ್ಯಕ್ತ ಮುಗ್ಧನಂತೆ,
ನಟಿಸಿ ನನ್ನೆದೆಯ ಹಾಲನುಣ್ಣುವ ಬಯಕೆಯೆನೋ ನಿನಗೆ?
ನಾನೆಲ್ಲ ಬಲ್ಲೆ; ಈಗಲಾದರೂ ಬಂದೆಯಲ್ಲ ಬಳಿಗೆ
ಭಕ್ತನೆಡೆಗೆ ತಾನಾಗಿ ಬರುವ ಮಾದೇವ ಕರುಣೆಯಂತೆ! [೮೨]

ಸಂತಾನ ಪ್ರಾಪ್ತವಾಗುವುದು ದೈವ ಕರುಣೆ ಎಂಬ ಹಿನ್ನೆಲೆಯಲ್ಲಿ ಈ ಕವಿತೆ ರಚಿತವಾಗಿದೆ. ಅದೇ ತಾಯಿ ತನ್ನ ಮಗುವನ್ನು ನೋಡಿ ನಾನಾ ತೆರದ ಭಾವನೆಗಳಿಗೆ ಒಳಗಾಗಿ ರೋಮಾಂಚಿತಳಾಗುವುದು 'ಮಗುವನ್ನು ನೋಡಿ' ಕವಿತೆಯಲ್ಲಿ ವ್ಯಕ್ತವಾಗಿದೆ.

ಇದ್ದೀತು ಏಸುದಿನ, ಮಧುರ ನವನೀತ
ಮುಗ್ಧಮನಸು!
ಬಾಳ ಬಿಸಿಗೆ ಕರಗಿ ನೀರಾದೀತು,ಈ
ಮಧುರ ಕನಸು.
ಇರುವುದರಲ್ಲೆ ಅದನು ತುಂಬಿಕೊಳ್ಳುತಿದೆ
ನನ್ನ ಮನಸು! [೮೩]

ಇಲ್ಲಿ ಕವಿ ಮಾತೃಭಾವದಿಂದ ಸ್ಪಂದಿಸಿರುವುದುಂಟು. ಮಗುವಿನ ಬಾಲ್ಯದ ಲೀಲೆಗಳು ಎಷ್ಟು ದಿನ ತಾನೆ ಹೀಗೆ ಉಳಿದಾವು ಎಂಬ ಕೊರಗು. ಹೀಗೇ ಇರಲಿ ಎನ್ನುವ ಆಶಯ ಕೂಡ ಇದರಲ್ಲಿ ವ್ಯಕ್ತಗೊಂಡಿದೆ.

ಮಗುವನ್ನು ಹಡೆದು, ಅದನ್ನು ಅಕ್ಕರೆಯ ಮಡಿಲಲ್ಲಿ ಮಡಗಿ ಆನಂದ ಪಡುವ ತಾಯಿಯನ್ನು ಕಂಡು ಅಭಿಮಾನದಿಂದ ಆಕೆಯ ಬಗ್ಗೆ ಕವಿ ವ್ಯಕ್ತಪಡಿಸುವ ಪರಿಯನ್ನು 'ತಾಯಿಗೆ' ಕವಿತೆಯಲ್ಲಿ ಕಾಣಬಹುದು. ತನ್ನ ಕರುಳ ಕುಡಿಯೊಂದಿಗೆ ಬೆರೆತ ತಾಯಿಯನ್ನು 'ಸುಂದರ ಹೂವನರಳಿಸಿದ ಲತೆಯಂತೆ' ಎಂದು ಕವಿ ಬಣ್ಣಿಸಿದ್ದಾರೆ.

ಒಂದು ಸುಂದರ ಹೂವನರಳಿಸಿದ ಲತೆಯಂತೆ
ನೀನಿರುವೆ ನಸುನಗುವ ಕಂದನೊಡನೆ
ಒಂದೇ ಬೆಳ್ಮುಗಿಲನ್ನು ಮಡಿಲಲ್ಲಿ ಹಿಡಿದಿರುವ
ಗಿರಿಕನ್ಯೆಯಂದದಲಿ ತೋರುತಿರುವೆ.
. . . .

ನಿನ್ನ ಕಣ್ಣೊಳು ಹೊಳೆವ ವಾತ್ಸಲ್ಯ ಚಂದ್ರಿಕೆಯೊ
ಳದ್ದಿ ಶಿಶು ನಗುತಲಿದೆ ಚಿಕ್ಕೆಯಂತೆ!
ಜಗವನಾಳುವ ಒಲವು ಮೈದೋರಿದೀ ಪರಿಗೆ
ಬೆರಗು ಮೌನದೊಳಿರುವ ಬಾನಿನಂತೆ! [೬೪]

ತಾಯಿಗೆ ಮಗುವೊಂದು ಸೊಬಗಿನ ಆಭರಣ. ಚೈತನ್ಯದ ಸಾಧನ. ಬಾನಿನ ಬೆಡಗಿನಂತೆ ತಾಯಿಗೆ ಶೋಭಿಸುತ್ತದೆ.

ನವೋದಯ ಧೋರಣೆಗೆ ಸೇರಿದ ಸಾ.ಶಿ. ಮರುಳಯ್ಯನವರು 'ಹರಸಮ್ಮ'- ಕವಿತೆಯಲ್ಲಿ ಹಡೆದ ತಾಯಿಯಲ್ಲಿ ಮಾತೃ ವಾತ್ಸಲ್ಯದ ತೊಟ್ಟಿಲಲ್ಲಿ ಆಶ್ರಯ ಪಡೆದು ಆನಂದಿಸುವ ಅವಕಾಶ ಕೊಡು ಎಂದು ಪ್ರಾರ್ಥಿಸಿದ್ದಾರೆ.

ನಿನ್ನ ಬಸಿರಿಂದಿಳೆಗಿಳಿದು ಬಂದು ನಾ
ನಿಂದಿಹೆನಿದೋ ತಾಯೆ ನಿನ್ನ ಮುಂದೆ;
ಬಾಳ ಹೋರಾಟಕ್ಕೆ ಅನುವಾಗಲಿಹೆನಮ್ಮ
ಸಿದ್ಧತೆಯ ನೀನೆನಗೆ ನೀಡಲೆಂದು;
. . . .
'ಮನದಿಚ್ಛೆ ಸಿದ್ಧಿಸಲಿ' ಎಂದು ಓ ಸಿದ್ಧಾಂಬೆ !
ಹರಸಮ್ಮ ನಮಿಪೆ ನಿನ್ನಡಿಗಳಲಿ. [೬೫]

'ಹರಸಮ್ಮ' ಕವಿತೆಯಲ್ಲಿ ಜನ್ಮನೀಡಿ ಈ ಜಗತ್ತನ್ನು ಪರಿಚಯಿಸಿದ ಬಗ್ಗೆ ಕೃತಜ್ಞತೆಯ ಭಾವದಿಂದ ಮಗು ತಾಯಿಯಲ್ಲಿ ಮೊರೆಯಿಟ್ಟರೆ; 'ತಾಯ ಹರಕೆ' ಯಲ್ಲಿ ಜನನಿಯಾದವಳು ತನ್ನ ಮಗನು ಬಾಳ ಹೋರಾಟದಲ್ಲಿ ಕಲಿ ಭೀಮನಾಗಿ, ಜ್ಞಾನದ ಸಿಂಧುವಾಗಿ, ಬುದ್ಧನಾಗಿ ಗೌರವದ ಬದುಕಿಗೆ ಪಾತ್ರನಾಗಲಿಯೆಂಬ ಹಾರೈಕೆಯಿದೆ. ವಿಶಾಲ ಮನಸ್ಕನಾಗಿ ಜೀವನದ ಹೋರಾಟದಲ್ಲಿ ಯಶವಂತನಾಗಲಿ ಎಂಬ ಅಭೀಪ್ಸೆ ಇದೆ.

ಹೋಗಿ ಬಾರೈ ಕಂದ ಕದನದಾ ಕಲಿಭೀಮ
ಬಾಳಹೋರಾಟಕ್ಕೆ ಯೋಧನಾಗಿ
ಜಯಸಿರಿಯ ಕರವಿಡಿದು ಹರುಷದಿಂದೊದಗೂಡಿ
ಜ್ಞಾನ ಸಿಂಧುವನೇರು ಬುದ್ಧನಾಗಿ;
. . . .
ಶಸ್ತ್ರ ಸಜ್ಜಿತನಾಗು, ನಡೆ, ಏರು ರಥವನ್ನು;
ಮಡಿಲ ಗರುಡಿಯ ವಿದ್ಯೆ ಸಾಕು ಇನ್ನು,
ನಿನ್ನ ಸಾರಥಿ ಬೇರೆ ನಿನ್ನ ಪಥವೇ ಬೇರೆ
ಮರೆಯದಿರು ಸೂತನನು ಇರಲಿ ಕಣ್ಣು ! [೬೬]

ಇಲ್ಲಿ ತಾಯಿಯ ಹಾರೈಕೆ ಇದೆ. ಬಾಳು ಹೋರಾಟದ ಕಣ. ಕ್ಷಣ ಕ್ಷಣವೂ ಅಲ್ಲಿ ಕದನ ನಡೆಯುತ್ತಲೇ ಇರುತ್ತದೆ. ಇದು ಜೀವಂತಿಕೆಯ ಲಕ್ಷಣ ಕೂಡ. ಯಾರು ಹೋರಾಟದಲ್ಲಿ ಯಶಸ್ಸು ಗಳಿಸಿಕೊಳ್ಳುವರೋ ಅವರು ಬದುಕುವ ಅರ್ಹತೆಯನ್ನು ಗಳಿಸಿಕೊಳ್ಳುವರು. ಬುದ್ಧನ ಬದುಕಿನ ಹೋರಾಟ ಮತ್ತು ಸಾಧನೆ, ಹಾಗೂ 'ಮಡಿಲು'

ಮಿತಿಯಾದರೆ ಜಗತ್ತು ತೆರೆದ ಕಣವಾಗುತ್ತದೆ. ಅದರಲ್ಲಿ ಜಯಸಿರಿಯು ನಿನ್ನದಾಗಿರಲಿ ಎಂಬ ದೊಡ್ಡ ಆಶಯ ತಾಯಿಯದಾಗಿದೆ.

"ಸಾ.ಶಿ. ಮರುಳಯ್ಯನವರ ಕವನ ಕೃಷಿಯಲ್ಲಿ ಎದ್ದು ಕಾಣುವ ಬೆಳಸು, ಅಲ್ಲಿ ಮೂಡಿನಿಂತಿರುವ ಜೀವನೋತ್ಸಾಹ ಹಾಗೂ ಸೌಂದರ್ಯಪ್ರಿಯತೆ, ಅದನ್ನು ಬಿಂಬಿಸಲು ಕವಿ ಭಾಷೆಯನ್ನು ತಿದ್ದಿ, ತೀಡಿ, ದುಡಿಸಿಕೊಳ್ಳುವ ಹದ ಗಮನಾರ್ಹವಾದ ಅಂಶ" [೪೭]– ಎಂಬ ಎಸ್. ಎಂ. ವೃಷಭೇಂದ್ರ ಸ್ವಾಮಿಯವರ ಮಾತುಗಳು ಸಾ.ಶಿ. ಯವರ ಎಲ್ಲ ಕವಿತೆಗಳಿಗೂ ಅನ್ವಯಿಸುವಂತಿವೆ.

ಗಂಗಾಧರ ಚಿತ್ತಾಲರ ಕವಿತೆ 'ತಾಯಿ' ಗಮನ ಸೆಳೆಯುವ ಕವಿತೆಗಳಲ್ಲಿ ಒಂದು. ತಾಯಿ ನೆನಪು ಮಾಸದ ನೆನಪು. ಆಕೆಯ ಬದುಕಿನ ಚಿತ್ರ ತನ್ನ ಎದೆಯಾಳದಲ್ಲಿ ಮೂರ್ತರೂಪವಾಗಿರುವುದನ್ನು ಇದರಲ್ಲಿ ಚಿತ್ರಿಸಿದ್ದಾರೆ.

ಕಂಡವರೆಲ್ಲ ಹೇಳುತ್ತಾರೆ ಅಲ್ಲಿ ಈಗ ಏನೂ ಉಳಿದಿಲ್ಲ
ಏಳು ಮಕ್ಕಳ ಹೊರೆದು
ಕೆಮ್ಮಿ ಕೆಮ್ಮಿ ಕೆಮ್ಮಿ ಸಣ್ಣಾದವಳು
ಒಳಗೊಳಗೇ ಒರಲೆ ಹತ್ತಿ ಮೈಗೂಡು ಕಳಚಿ ಮಣ್ಣಾದವಳು
. . . .
ಕಮ್ಮಿ ಎನಿಸಲೇ ಇಲ್ಲ ಯಾವ ನೆಮ್ಮದಿಗು ಉಂಡಷ್ಟು ದಿನ
ಆ ಕೈಯ ಮಮತೆಯ ಅನ್ನ! [೪೮]

"ಏಳು ಮಕ್ಕಳ ಹೆತ್ತವಳು; ಹೊತ್ತವಳು; ಸಂಕಟದಲ್ಲೂ ಎಲ್ಲರನ್ನೂ ಸುಖವಾಗಿ ಜೋಪಾನವಾಗಿ ಸಾಕಿದವಳು; ಎಂದೂ ರೇಗಿದವಳಲ್ಲ; ವೃಥಾ ಯಾರನ್ನು ಮಕ್ಕಳಿಗೆ ಆ ಬಡತನದ ಬೇಗೆ ಗೊತ್ತಾಗದಂತೆ ಎಲ್ಲರನ್ನೂ ನೋಡಿಕೊಂಡ ಆ ತಾಯಿ ಕಷ್ಟ ಸಹಿಷ್ಣುವಾದ ಶ್ರಮಜೀವಿ. ಅವಳ ವಾತ್ಸಲ್ಯ ಬೆಟ್ಟದಷ್ಟು. ಆ ನಲ್ಮೆ ತಾಯಿಯ ಕಣ್ಣ ಕಾವಲು ಸದಾ ಜಾಗೃತವಾದದ್ದು.

ತನ್ನ ಹುಟ್ಟೂರಲ್ಲಿ ಇಂದು ಏನು ತಮ್ಮದೆನ್ನುವುದು ಉಳಿದಿಲ್ಲದೇ ಹೋದರೂ – ತನ್ನ ವಂಶ ವೃಕ್ಷ ಬೆಳೆಯಲು ಕಾರಣವಾದ ತಾಯಿಬೇರು ಈ ನೆಲದ್ದು ಎಂಬುದು ಕವಿತೆಯ ನಾಯಕನಿಗೆ ನೆನಪಾದಾಗ – ಊರಲ್ಲಿ ತಮ್ಮದೇನೂ ಉಳಿದಿಲ್ಲ ಎಂದು ಹೇಳುವ ಹಾಗೇ ಇಲ್ಲ ಎಂಬುದು ಅಕ್ಕರೆಯ ವಿಮರ್ಶೆಯಾಗುತ್ತದೆ". [೪೯]

ತಾಯಿ ತೀರಿ ಮೂವತ್ತು ವರ್ಷದ ತರುವಾಯ, ತನ್ನೂರಿಗೆ ಭೇಟಿ ನೀಡಿದಾಗ ಹಿಂದಿನ ವೈಭವವಿಲ್ಲ. ಪ್ರೀತಿ ವಾತ್ಸಲ್ಯ ಉಣಿಸುವ ತಾಯಿ ಇಲ್ಲ. ಅಕ್ಕರೆಯಿಂದ ನೀರುಣಿಸಿ ಬೆಳೆಸಿದ್ದ ಕೈ ತೋಟ ಹಾಳಾಗಿ ಕರುಳು ಕಿತ್ತು ಬರುವ ಸಂಕಟದ ನೆನಪು ಈ ಕವಿತೆಯಲ್ಲಿ ತೆರೆದುಕೊಳ್ಳುತ್ತದೆ. ಉದ್ಯೋಗಸ್ಥರ ಬದುಕಿನಲ್ಲಿ ಸ್ಥಳಾಂತರ ಎಂಬುದು ಸಾಧಾರಣ ಸಂಗತಿ. ಆದರೆ ತಾನು ಹುಟ್ಟಿ ಬೆಳೆದು, ತಾಯಿ ಪ್ರೀತಿಯ ಹಾಲುಂಡು ಬೆಳೆದು, ಬಡತನದಲ್ಲೂ ಬದುಕನ್ನು ರಸಮಯವಾಗಿ ಸವಿದಿದ್ದ ನೆನಪು ಈ ಕವಿತೆಯಲ್ಲಿ ಕಾಣುತ್ತದೆ.

ತಾಯಿ - ಮಗನ ಉತ್ಕಟ ಪ್ರೀತಿ ವಾತ್ಸಲ್ಯದ ನೆನಪು ಹಸಿರಾಗಿ ಕಾಣುತ್ತದೆ. ಕೃತಜ್ಞತೆಯ ಭಾವ ಮೂಡಿಸುತ್ತದೆ.

ಇದೇ ಕವಿಯ 'ತಾಯಿಯನ್ನು ನೆನೆದು' ಕವಿತೆಯಲ್ಲಿ ತಾಯ ವಾತ್ಸಲ್ಯ ನಿರಂತರ ಎಂಬುದು ವ್ಯಕ್ತವಾಗುತ್ತದೆ. ಆಕೆ ಅಗಲಿದರೂ ಆಕೆ ನಮ್ಮಿಂದ ದೂರವಾಗದೆ ನಿಂತು 'ಮುದ್ದು ರತುನಾ, ಬಂದೆಯಾ ಬಾರೋ ಬಾ' ಎಂದು ಹಿಗ್ಗಿ ಕಣ್ಣರಳಿ ಎದೆಯುಕ್ಕಿ ನಿಂದಿಹಳು. ವಾಸಿಯಾಗದ ಬೇನೆಗೆ ಒಳಗಾಗಿ ಪರ ಊರಿಗೆ ಹೋದರೆ ಸುಧಾರಿಸಬಹುದೆಂಬ ಭಾವನೆಯಿಂದ ದೂರದ ಊರಿಗೆ ಹೋದರೂ ತಾಯಿಯನ್ನು ಉಳಿಸಿಕೊಳ್ಳಲಾರದ ಸ್ಥಿತಿಯಲ್ಲಿ ಈ ಕವಿತೆ ರಚನೆಯಾಗಿದೆ. ಮಗ ಹೊರಗಡೆ ಹೋಗಿದ್ದಾಗ ತಾಯಿ ನಿಧನದ ಸುದ್ದಿ ಕೇಳಿ ಆಘಾತಕ್ಕೆ ಒಳಗಾಗಿ ಬಂದಾಗ, ಗುಣವಾದ ಮೇಲೆ ಮುತ್ತನು ಕೊಡುವೆನೆಂದ ಅಮ್ಮ, ಕೊಡುವ ಮೊದಲೇ ತನ್ನ ತೊರೆದಳೆಂದು ಅಣ್ಣನ ಎದುರು ಹಸುಳೆ ತಂಗಿ ಕಂಬನಿ ಸುರಿಸುವ ಪ್ರಸಂಗವನ್ನು ಕರುಳಾಳದಿಂದ ಚಿತ್ರಿಸಿದ್ದಾರೆ. ಆದರೆ ತಾಯಿ ಮೂರ್ತರೂಪಳಾಗಿಲ್ಲದಿದ್ದರೂ ಅಮೂರ್ತಳಾಗಿ ಸದಾ ಮಕ್ಕಳನ್ನು ಕರೆದು ತಬ್ಬುವ ವಾತ್ಸಲ್ಯಮಯಿ - ಚಿರಂದೇವಿ ಎಂದು ಭಾವನಾತ್ಮಕವಾಗಿ ಹೇಳಿದ್ದಾರೆ.

ಈ ಊರ ಬಿಡದೆನ್ನ ಬೆನ್ನ ಬಿಡದೀ ಬೇನೆ
ಪರ ಊರ ಸೇರಿದರೇ ನನಗೆ ವಾಸಿ
ಎಂದಿಲ್ಲಿ ಬಂದಯ್ಯೋ ತಾಯಿ ಜೀವವ! ನಿನಗೆ
ಪರದ ಊರೇ ಕೊನೆಗೆ ಆಯ್ತೆ ವಾಸಿ?
. . . .
ನೀನಿಲ್ಲಾ, ನೀನಿಲ್ಲಾ! ಯಾರೆಂದರದನು ಹಾ
ಗೆನ್ನದಿರಿ ಅಗೋ ತಾಯಿ ಬರುತಲಿಹಳು;
'ಮುದ್ದು ರತುನಾ, ಬಂದೆಯಾ ಬಾರೊ ಬಾ' ಎಂದು
ಹಿಗ್ಗಿ ಕಣ್ಣರಳಿ ಎದೆಯುಕ್ಕಿ ನಿಂದಿಹಳು! [೫೦]

ತಾಯಿಯ ಪ್ರೀತಿಯ ನೆನಪೇ ಶ್ರೀರಕ್ಷೆ. ಅದು ಎಂದೆಂದೂ ತನ್ನ ಕರುಳ ಕುಡಿಗಳನ್ನು ಕಾಪಾಡುತ್ತದೆ. ಎಂದು ಆಕೆಯ ಮುಕ್ಕಾಗದ ವಾತ್ಸಲ್ಯದ ಮಾತುಗಳೇ ಸಾಕೆಂಬ ಆಶಯ ಕವಿಯದು.

ಕೆ.ಎಸ್. ನಿಸಾರ್ ಅಹಮದ್‌ರವರ 'ಅಮ್ಮ ಆಚಾರ ನಾನು' ಕವಿತೆಯಲ್ಲಿ, ತಾಯಿ ತನ್ನ ಮನೆಗೆ ಬರುವ ಸೊಸೆ ತನ್ನಂತೆ ತನ್ನ ಮನೆತನದ ಪರಂಪರೆ, ಸಂಪ್ರದಾಯ, ಧಾರ್ಮಿಕ ವಿಧಿ ವಿಧಾನಗಳನ್ನು ಅನುಷ್ಠಾನಗೊಳಿಸುವಂತಿರಬೇಕೆಂಬ ಬಯಕೆ ಹೊತ್ತಿರುತ್ತಾಳೆ. ತಾಯಿಯೇ ಧಾರ್ಮಿಕ ಆಚಾರಗಳಿಗೆಲ್ಲ ವಾರಸುದಾರಳಾಗಿರುತ್ತಾಳೆ. ಮಗನ ಮೇಲೆ ಎಷ್ಟೇ ಪ್ರೀತಿ ವಾತ್ಸಲ್ಯವಿದ್ದರೂ ಹೆಣ್ಣಿನ ಆಯ್ಕೆ ತನ್ನ ನಿಲುವಿನಂತೆಯೇ ಇರಬೇಕೆಂಬ ಆಕಾಂಕ್ಷೆ ತಾಯಿಯಾದವಳಿಗಿರುತ್ತದೆ ಎಂಬುದನ್ನು ತೋರಿಸುವ ಕವಿತೆ. ಇದರಲ್ಲಿ 'ಅಮ್ಮ ಆಚಾರ' ಬಿಡಿಸಲಾರದ ಅವಿನಾಭಾವ ಸಂಬಂಧದಿಂದ ಕೂಡಿರುತ್ತದೆ. ಮನೆಗೆ ಕಾಲಿಡುವ ಹೆಣ್ಣು ಕೂಡ ಗಂಡನ

ಮನಸ್ಸಿಗೆ ಮೆಚ್ಚುಗೆಯಾಗುವಂತೆ ಇರಲು ಪ್ರಯತ್ನಪಡುತ್ತಲೇ, ಸಾಂಪ್ರದಾಯಿಕ ನಿಷ್ಠೆಗೆ ಒಳಗಾಗುತ್ತಾಳೆ ಎಂಬುದನ್ನು ಕಾಣಬಹುದು.

. . . .

ಮೊದಲ ಸಲ ತಿರುಗಾಡಲು ಹೊರಟಾಗ
ನನ್ನಾಕೆ ತೋಳಿಲ್ಲದ ರವಿಕೆಯುಟ್ಟು
ಭಾರಿ ಸೀರೆಯನ್ನ ಸೊಂಟದ ಕೆಳಗೆ ನಾಜೂಕಾಗಿ ಕಟ್ಟಿ

. . . .

ಹೊಸಿಲ ಇನ್ನೇನು ದಾಟಬೇಕು, ಆಗ
"ಬಂದೆ ತಡೆಯಿರಿ" ಎಂದು ಒಳಗೋಡಿ
ಬಂದು "ನಡೆಯಿರಿ" ಎಂದಾಗ
ತಲೆ ಸುತ್ತಿ ನಾಲಿಗೆ ಬತ್ತಿ ನಾನಾದೆ ಮೂಕ;
ನೋಡಿದರೆ –
ಉಟ್ಟಿದ್ದಳು ನಮ್ಮಮ್ಮನ ಬುರ್ಖಾ [೫೧]

ಇದಕ್ಕಿಂತ ಭಿನ್ನವಾದ ಇವರ ಮತ್ತೊಂದು ಕವಿತೆ 'ಹೆತ್ತಾಕೆ' ತಾಯ ಸ್ಮರಣೆಯದು. ಜನ್ಮವಿತ್ತು ಸಾಕಿ, ಸಲಹಿ, ವಿದ್ಯೆ, ಬುದ್ಧಿ ನೀಡಿ ಬೆಳೆಸಿದ ತಾಯಿ ತಂದೆಯಂತೆ ಸಾವಿನ ಮಾರ್ಗ ಹಿಡಿದಾಗ ಕವಿ ಅರ್ಪಿಸುವ ಶಬ್ದಾಂಜಲಿಯೇ ಈ ಕವಿತೆ. ತಾಯಿ ಮಗುವಿಗೆ ಜನ್ಮಕೊಡುವುದು ಮಾತ್ರವಲ್ಲ, ಜೀವ ಸಂಸ್ಕಾರಗೊಳಿಸುವಾಕೆ. ಮನೆ, ಗಂಡ, ಮಕ್ಕಳುಗಳ ಕೀರ್ತಿ ಗೌರವಕೆ ತನ್ನನ್ನು ಸಾಣೆಯಂತೆ ಅರ್ಪಿಸಿಕೊಂಡಾಕೆ. ಧರ್ಮ ಸಂಸ್ಕೃತಿಯನ್ನು ಪಾಲಿಸುತ್ತ ಮುಂದಿನ ಪೀಳಿಗೆಗೆ ಜತನವಾಗಿ ವರ್ಗಾಯಿಸುವ ಆದರ್ಶ. ಕೀರ್ತಿ, ಸುಖಗಳ ತ್ಯಾಗಮಾಡಿ ಎಲ್ಲರ ಪ್ರೀತಿ ಗೌರವಕ್ಕೆ ಪಾತ್ರಳಾದವಳು.

ಶುಕ್ರವಾರದ ದಿನದ ಆರಾಧನೆ ಮಸೀದಿಯಲಿ
ಸಲಿಸಿ ನಡೆದಿಹೆ ನೇರ ತಾಯಿಯೆಡೆಗೆ;
ಅವರಾತ್ಮ ಸ್ವರ್ಗದಲಿ ನಲಿವಂತೆ ಪ್ರಾರ್ಥಿಸಲು
ಬಾಳ ಜಂಜಡ ತಳ್ಳಿ ಜಗದ ತೊಡಗೆ.
ನನ್ನ ಜೀವದ ಹಾಯಿ ಲೋಕಕಿಳಿಸಿದ ಸದಯಿ –
ತಾಯಿ; ಚಿಂತೆಯ ಚಳಿಗೆ ಚೆಲುರ ಜಾಯಿ;
ಸ್ವಂತ ಕಷ್ಟದ ಕೆಸರಿನಲ್ಲಿ ಪತಿಸುತರೇಳ್ಗೆ
ಪದ್ಮವರಳಿಸಿದಭಯಿ, ಸೌಖ್ಯದಾಯಿ. [೫೨]

ಹೀಗೆ ಸ್ಮರಿಸುವ ಕವಿ ತಾಯಿಯನ್ನು ಇಹಪರದ ನಡುಗಡಲ ತೋರುದೀಪ ಎಂದು ಕೊಂಡಾಡುತ್ತಾರೆ. ತಾಯಿಯ ತ್ಯಾಗಜೀವನವನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ.' . . . ವಿಸ್ತಾರವಾದ ಅನುಭವ ಶ್ರೀಮಂತಿಕೆ, ವಸ್ತು ಸಮೃದ್ಧಿ, ಭಾಷೆಯ ವಿನೂತನ ಆವಿಷ್ಕಾರಗಳ ಜೊತೆಜೊತೆಯಲ್ಲಿಯೇ ಅಪೂರ್ವವಾದ ಮಾತಿನ ಮೋಡಿ, ಭಾವ ಸಾಂದ್ರತೆ, ಅಭಿವ್ಯಕ್ತಿಯ ಸಹಜ ನಿರಾಯಸತೆ, ಸಮರ್ಥವಾದ ಸಂವಹನಶೀಲತೆ, ರಿಂಗಣಗುಣಿಯುವ ಪದಲಾಲಿತ್ಯ, ಇವುಗಳಿಂದ ಸಹಜೋತ್ಕಟವಾಗಿ ಹೊಮ್ಮುವ ವೈವಿಧ್ಯಮಯ ನಾದಬಂಧುರತೆ, ಎಳೆಎಳೆಯಾದ ಜಿಜ್ಞಾಸುಶೀಲತೆ, ಸಾಧಾರಣವಾದುದ್ದನ್ನು ಅಸಾಧಾರಣವೆನಿಸುವ ಕೌಶಲ್ಯ – ಇವುಗಳಿಂದಾಗಿ ಕನ್ನಡ

ಸಹೃದಯರ ವೈವಿಧ್ಯಮಯ ಅಭೀಪ್ಸೆಗಳನ್ನು ಈಡೇರಿಸುವ ಅತ್ಯಂತ ಮಹತ್ವದ ಕವಿ [೫೩] ಎಂಬ ಮಾತು ಗಮನಾರ್ಹವಾದುದು.

ಗುಂಡ್ಮಿ ಚಂದ್ರಶೇಖರ ಐತಾಳರ ನೂರೊಂದು ವಚನಗಳಿಂದ ಕೂಡಿರುವ ಕೃತಿ 'ಮಾತೃ ಸಂಹಿತೆ' ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟವಾದುದು. ಕನ್ನಡ ಸಾರಸ್ವತ ಲೋಕದಲ್ಲಿ ಬಿಡಿಗವಿತೆಗಳಾಗಿ ಈಡೀ ತಾಯಿಯ ವ್ಯಕ್ತಿತ್ವವನ್ನ, ಅವಳ ಅಂತರಂಗದ ಭಾವಗಳನ್ನ ಐತಾಳರು ತಮ್ಮದೇ ಆದ ಸಾಂಪ್ರದಾಯಿಕ ಶೈಲಿಯಲ್ಲಿ ಕಟ್ಟಿ ಕೊಟ್ಟಿದ್ದಾರೆ.

ತಾಯ್ತನದ ಹಿರಿಮೆಯನ್ನು, ಆಕೆಯ ಪ್ರೇಮವನ್ನು, ವಾತ್ಸಲ್ಯವನ್ನು ಈ ಮಾತೃಸಂಹಿತೆಯಲ್ಲಿ ಹಿಡಿದಿಟ್ಟಿದ್ದಾರೆ. ಹೆಣ್ಣಿನ ಸಾರ್ಥಕತೆಯ ಘಟ್ಟ ತಾಯಿತನ. ಆಕೆಯಲ್ಲಿ ಸಹನೆ, ಸಂಯಮಗಳು ಮಡುಗಟ್ಟಿ ನಿಂತಿದ್ದು, ಮಗುವಿನ ಹಾರೈಕೆಯಲ್ಲಿ ತೋರುವ ಕಾಳಜಿ, ಶ್ರದ್ಧೆಯನ್ನು ಮತ್ತಾರಲ್ಲೂ ಕಾಣಲು ಸಾಧ್ಯವಿಲ್ಲ. ಮಾತು ಕಲಿಸುವ ತಾಯಿ ಅವಳೇ ಮಗುವಿನ ಮೊದಲ ಗುರು. ಕಂದನ ಬೆಳವಣಿಗೆಯಲ್ಲಿ ವಹಿಸುವ ಆಸಕ್ತಿ, ವ್ಯಕ್ತಪಡಿಸುವ ಅವ್ಯಾಜ ಪ್ರೇಮ ದಟ್ಟವಾಗಿ ಕಾಣುತ್ತವೆ. 'ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನಭವತಿ' ಎಂಬ ಶಂಕರಾಚಾರ್ಯರ ಮಾತು ಮಾತೃತ್ವದ ಹಿರಿಮೆ ಸಾರುತ್ತದೆ. ಇಲ್ಲಿನ ಒಂದೊಂದು ವಚನವೂ ಬಿಡಿಬಿಡಿಯಾಗಿದ್ದು, ತಾಯಿ ಕೇವಲ ಹೆಣ್ಣಲ್ಲ, ಆಕೆ ದೇವತೆ. ಸಹನೆಯ ಮೂರ್ತಿ, ಪೊರೆವ ಶಕ್ತಿ ಎಂಬುದಕ್ಕೆ ಇಲ್ಲಿನ ವಚನಗಳು ಸಾಕ್ಷಿಯಾಗಿವೆ.

ದೇವರೆಲ್ಲಿ, ದೇವರೆಲ್ಲಿ, ದೇವರೆಲ್ಲಿ?
ಸಹನೆಯ ಸಾಕಾರಳಾದ ತಾಯಿಯಲ್ಲಿ ಆಶ್ಚರ್ಯ
ದೇವರೆಲ್ಲಿ, ದೇವರೆಲ್ಲಿ, ದೇವರೆಲ್ಲಿ?
ತಿಂಗಳ ಮುಡಿದವನೆಂದನು: [೫೪]

ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂಬ ಕರ್ಮಯೋಗಿ ಸಿದ್ಧರಾಮನ ಮಾತಿನಂತಿರುವ ವಚನ:

ಹೆಣ್ತನದ ಹಣ್ಣು ತಾಯಿ;
ವಾತ್ಸಲ್ಯ ದೇವತೆಗೆ ಹಣ್ಣು ಕಾಯಿ;
ತಿಂಗಳ ಮುಡಿದವನ ಕಾರುಣ್ಯ ದಾಯಿ! [೫೫]

ಶಿವನ ಕರುಣೆಯ ಮೂರ್ತಿಯೇ ತಾಯಿಯಾಗಿದ್ದಾಳೆ ಎಂಬ ಮಾತು ಪಾರಂಪರಿಕ ಅಭಿವ್ಯಕ್ತಿಯಾಗಿದೆ. ದೇವರು ಎಲ್ಲಾ ಕಡೆಯು ಇರಲು ಸಾಧ್ಯವಾಗದೆ ತಾಯಿಯನ್ನು ತನ್ನ ಪ್ರತಿರೂಪದಲ್ಲಿ ಜಗತ್ತಿನ ಜನರಿಗೆ ದೇವರು ಕರುಣಿಸಿದ್ದಾನೆ ಎಂಬ ಬಹು ಹಿರಿದಾದ ಮಾತಿಗೆ ಕವಿ ನುಡಿದಿರುವ ವಚನ:

. . . .
ತಿಂಗಳ ಮುಡಿದವ ತಾನೆಲ್ಲೆಲ್ಲಿಯೂ ಇರಲಾರನೆಂದು
ತಾಯಂದಿರನು ತಂದನೀಲೋಕಕೆ! [೫೬]

ಹಡೆದ ತಾಯಿಗೆ ಮಗು ಮಗುವೆ. ಅದೇ ಮಗು ಬೆಳೆದು ಜಗದ ಜನರ ದೃಷ್ಟಿಯಲ್ಲಿ ಏನಾದರು ಆಗಬಹುದು. ಪ್ರಭು, ಸಾಮ್ರಾಟ, ಚಕ್ರವರ್ತಿ. ಆದರೆ ತಾಯಿಗೆ ಮಾತ್ರ 'ಮಗು'ವಾಗೇ ಕಾಣುವುದು. ಆಕೆಯ ಒಡಲಿಂದ ಪೋಷಿಸ್ಪಟ್ಟು ಬಂದವನು. ಆಕೆ ಅಕ್ಕರೆಯ ಮಡಿಲಲ್ಲಿ ಬೆಳೆದವನು. ಯಾವ ಹೆಚ್ಚುಗಾರಿಕೆಯೂ ತಾಯಿ ವಾತ್ಸಲ್ಯದೆದುರು ನಿಲ್ಲದು ಎಂಬುದು ಕವಿಯ ಆಶಯ.

ದೊರೆಯನ್ನು ಜನರು 'ಪ್ರಭೂ' ಎಂದು ಕರೆದರು;
ದೊರೆಗಳು ತಮ್ಮೊಡೆಯನನು 'ಸಾಮ್ರಾಟ' ಎಂದು ಸಂಬೋಧಿಸಿದರು;
ಸಾಮ್ರಾಟರು ತಮ್ಮಾಳುವವನು 'ಚಕ್ರವರ್ತಿ' ಎಂದು ಹೊಗಳಿದರು;
ತಿಂಗಳ ಮುಡಿದವನೇ,
ಅವನ ತಾಯಿ ಚಕ್ರವರ್ತಿಯನು 'ಮಗೂ' ಎಂದು ಕರೆದಳು! [೫೭]

ಎಲ್ಲ ದೇವರುಗಳು ಭಕ್ತರ ಪ್ರಾರ್ಥನೆಗೆ ಸ್ಪಂದಿಸಿ ವರ ಕರುಣಿಸಿದರೆ, ತಾಯಿ ಮಾತ್ರ ಕಾಪಾಡೆಂದು ಕೇಳದಿದ್ದರೂ ಪ್ರೀತಿಯಲಿ ಸಲಹುವಳು. ಅದೇ ಮಾತೃವಾತ್ಸಲ್ಯ ಇಂತಹ ತಾಯಿಯು ಮಗುವಿಗೆ ಹಾಲನೆರೆವುದು ಪರಮ ಸುಖದಿಂದ, ಮಗು ಸವಿಯುವುದು ಪರಮಾನಂದದಿಂದ. ತಾಯಿ ಮಗುವಿನ ಆನಂದ ಇಮ್ಮುಖವಾಗಿ ಒಂದೇ ಬಾರಿ ಹರಿಯುತ್ತದೆ.

ತಾಯ ಹಾಲು ಬರಿಯ ಹಾಲಲ್ಲ;
ಅದರ ತುಂಬ ತುಂಬಿಹುದು ಪ್ರೇಮದ ಅಮೃತ;[೫೮]

ತಾಯಿಯ ಎದೆಹಾಲು ಮಗುವಿಗೆ ಬರೀ ಆಹಾರವಲ್ಲ. ಅದರೊಂದಿಗೆ ಆಕೆಯ ಗುಣ ಸ್ವಭಾವ ಬೆರೆತ ಪ್ರೀತಿಯ ಅಮೃತವಿದೆ. ಎಂದು ಶಿವನಿಗೆ ಪರಿಚಯಿಸುವ ರೀತಿಯಲ್ಲಿದೆ. ತಾಯಿ ಹಾಲಿಗೆ ಸಮನಾದದ್ದು ಮತ್ತೊಂದಿಲ್ಲವೆಂದು ವೈದ್ಯಕೀಯ ಕ್ಷೇತ್ರದಲ್ಲಿ ಖಚಿತಗೊಂಡು ಎದೆಹಾಲು ಮಹತ್ವ ಸಾರುವ ಕಾಲ ಘಟ್ಟದಲ್ಲಿ ಕವಿಯ ಈ ಭಾವ ಪುಷ್ಟಿಕರವಾಗಿದೆ.

ತಾಯಿ ಕಲಿಸಿದ ಮಾತೇ ಮಗುವಿಗೆ ಮೈಗಂಟಿ ಬರುತ್ತದೆ. ಆ ಮಗು ಸಮಾಜದ ಬೆಳಕಾಗಿ, ಅನಾಥರ ಕಷ್ಟ ನಿವಾರಿಸುವ ಧಾತಾರನಾಗಬೇಕೆಂದು ಆಶಿಸುತ್ತಾಳೆ. ತಾಯಿಯ ಪ್ರತಿರೂಪವೇ ಮಗು. ಭಗವಂತನಿಗೂ ಇದರರಿವಿದೆ. ಇದನ್ನು ಈ ಕೆಳಗಿನ ವಚನಗಳಲ್ಲಿ ನಿರೂಪಿಸಿದ್ದಾರೆ.

ತಾಯಿಯನು ಕಂದ ಕೇಳಿತು:
ನೀನೇಕೆ ಬರೆಯುವುದಿಲ್ಲವಮ್ಮ?
ಓ, ತಿಂಗಳ ಮುಡಿದವನೇ,
ಅಮ್ಮ ಅಂದಳು:
ಬರೆಯಬಲ್ಲ ನೀನೇ ನನ್ನೆಲ್ಲ ಬರಹ! [೫೯]

ಅಮ್ಮಾ, ಹಲವು ಜನ್ಮಾಂತರದಿ ನೀನಿತ್ತ ಎದೆ ಹಾಲು
ಅಳೆದರೆ ಆ ಕ್ಷೀರಾಬ್ಧಿಗೂ ಮಿಗಿಲು!

ತಾಯೇ, ಹಲವು ಜನ್ಮಾಂತರದಿ ನೀನಿತ್ತ ಕಣ್ಣೀರು
ಅಳೆದರೆ ಆ ಉಪ್ಪು ಕಡಲಿಗೂ ದಿಗಿಲು!
ಏನೆಂಬೆ, ತಿಂಗಳ ಮುಡಿದವನೇ,
ಇದ ನಂಬುವೆಯಾ? [೬೦]

ತಾಯಿಯ ಬಗ್ಗೆ ಕವಿಗಿರುವ ಅಭಿಮಾನ ಕೆಲವು ವೇಳೆ ಅತಿಯೆನಿಸುವಷ್ಟು, ಆದರೆ ಇಡೀ ಮನುಕುಲದ ಹಿನ್ನೆಲೆಯಲ್ಲಿ ತಾಯಂದಿರು ಮಕ್ಕಳಿಗೆ ಹಾಲುಣಿಸಿದ ಪರಿ ಹಾಗೂ ಅದೇ ಮಗುವಿನಿಂದ ಅನುಭವಿಸಿದ ಯಾತನೆಯ ಪರಿಗೆ ಈ ವಚನ ನಿದರ್ಶನವಾಗಿದೆ.

ಐತಾಳರ ಇಡೀ ಕೃತಿ ತಾಯಿಯನ್ನು ಕೇಂದ್ರಿತವಾಗಿಸಿಕೊಂಡ ಕವಿತೆಗಳಿಂದ ಕೂಡಿದೆ. ಅವಳ ಮನೋಮಂದಿರದ ಮಾತೃಚಿತ್ತಾರಗಳನ್ನು, ಬದುಕಿನ ವೈವಿಧ್ಯ ಸ್ತರಗಳನ್ನು, ವ್ಯವಹಾರ ಲೋಕದಲ್ಲಿ ಅವಳು ವಹಿಸುವ ಪಾತ್ರವನ್ನು ಐತಾಳರು ಈ ವಚನ ಶತಕದಲ್ಲಿ ಹಿಡಿದಿಟ್ಟಿದ್ದಾರೆ. ಇಲ್ಲಿಯ ಭಾಷೆ ಲಾಲಿತ್ಯಮಯವಾಗಿದ್ದು ಓದುಗರ ಹೃನ್ಮನದಲ್ಲಿ ಭಾವಸಂಚಾರವುಂಟು ಮಾಡುತ್ತದೆ. 'ಇಲ್ಲಿನ ಈ ಮಾತೃಸಂಹಿತೆಯಲ್ಲಿ ಕಾಣಬರುವ ಭಾವ ಕಾಲ್ಪನಿಕವಾದುದ್ದಲ್ಲ. ಇದು ಅನುಭವವೇದ್ಯವಾದದ್ದು. ತತ್ವ ನಿಷ್ಠವಾದದ್ದು. ಪ್ರಾಮಾಣಿಕವಾದ, ಹೃತ್ಪೂರ್ವಕವಾದ ತಾಯ ಕುರಿತಾದ ಒಲವು ನಲಿವುಗಳ ಮಾತು ಇಲ್ಲಿ ಪ್ರತಿ ಪುಟ ಪುಟದಲ್ಲಿ ವಚನ ವಚನಗಳಲ್ಲಿ ಪುಟಿಯುತ್ತದೆ' [೬೧] ಎಂಬ ಎಸ್.ವಿ. ಪರಮೇಶ್ವರ ಭಟ್ಟರ ಮುನ್ನುಡಿಯ ಮಾತು ಮಾತೃತ್ವವನ್ನು ವಿಜೃಂಭಿಸುವ ಮಾತಾಗಿವೆ. ಆಕೆಯ ವಾಸ್ತವಿಕ ಬದುಕನ್ನು ಬದಿಗಿರಿಸಿ ಒಮ್ಮುಖದ ನಿಲುವಿನಲ್ಲಿ ಚರ್ಚಿಸಿರುವುದು ಕಂಡುಬರುತ್ತದೆ.

ಗಿರಡ್ಡಿ ಗೋವಿಂದರಾಜರವರ 'ಹಡದವ್ವ ನಿನ ಕಂಡು' ಕವಿತೆಯಲ್ಲಿ ವ್ಯಕ್ತಿ ತಾನು ಹುಟ್ಟಿ ಬೆಳೆದ ಸ್ಥಳದಿಂದ ದೂರವಿದ್ದು ಅಪರೂಪಕ್ಕೊಮ್ಮೆ ತನ್ನ ಹುಟ್ಟಿದೂರಿಗೆ ಬಂದು ತಾಯ ಕಾಣಬೇಕೆಂಬ ತೀವ್ರ ಬಯಕೆಗೆ ಒಳಗಾಗಿ ಮನೆಗೆ ಬಂದಾಗ, ತಲೆ ಬಾಗಿಲಲ್ಲಿ ತಾಯಿಗೆ ಬದಲಾಗಿ ಅತ್ತಿಗೆ ಎದುರಾದಾಗ ಅನಾಥ ಪ್ರಜ್ಞೆಗೆ ಒಳಗಾಗುತ್ತಾನೆ.

ವರುಷದ ಮೇಲಾಯ್ತು ಹಡೆದವ್ವ ನಿನ ಕಂಡು
ಮನದೊಳಗೆಲ್ಲ ಕಳವಳ,
ಮನದೊಳಗೆಲ್ಲ ಕಳವಳ ಹಡೆದವ್ವ,
ಬಯಕೆಲ್ಲ ಬೆಂದಾವ ತಳಮಳ.

. . . .

ಆ ಮಾತು ಈ ಮಾತು, ಮಾತೀಗೆ ಮರು ಮಾತು;
ಮಾತಾ ಮುಗಿಯಾಕಿಲ್ಲ ಬೆಳತನಕ
ಮಾತಾ ಮುಗಿಯಾಕಿಲ್ಲ ಬೆಳತನಕ ಹಡೆದವ್ವ
ಹಿಂಗ ನಡದೀತೇನೆ ಕಡಿತನಕ? [೬೨]

ತಾಯಿಯೊಂದಿಗೆ ಇರುವ ಮಧುರ ವಾತ್ಸಲ್ಯದ ಮಾತು ಮುಗಿಯಲಾರವು. ಬೆಳೆದಿರುವ ಮಗನಿಗೆ, ತಾಯಿ ಕೊಡುವ ಪ್ರತಿ ಉತ್ತರ ಮಾರ್ಮಿಕವಾಗಿದೆ.

ಇನ್ನಾಲ್ಕು ದಿನ ತಡಿಯೊ ಈಗ್ಯಾಕ ಆ ಮಾತು
ಮಡದೆವ್ವ ಬರುತಾಳ ಮನಿತುಂಬ
ಮಡದವ್ವ ಬರುತಾಳ ಮನಿತುಂಬ ಹಡೆದವ್ವ
ಮರತಾಳು ಮಡದಿ ಎದಿತುಂಬ. [೬೩]

ಹಡದವ್ವನಿಗೆ ಬದಲಾಗಿ ಮಡದೆವ್ವ ಬಂದು, ಎದೆ ತುಂಬಿಕೊಂಡು ಹಡೆದವ್ವನನ್ನು ಮರೆಸುತ್ತಾಳೆ ಎಂಬ ವ್ಯವಹಾರ ಜಗತ್ತಿನ ಮಾತುಗಳಿಂದ ಮಡದಿ ಬಂದಮೇಲೆ ಹಡೆದವ್ವನನ್ನು ದೂರ ಮಾಡುವ ಮಕ್ಕಳನ್ನು ಕಂಡು ಈ ಮಾತು ಹೇಳಿದ್ದಾಳೇನೋ ಎಂಬಂತೆ ಇದೆ.

ಈ ಕವಿತೆಯ ಧಾಟಿ, ಶೈಲಿ ಪೂರ್ಣವಾಗಿ ಗರತಿ ಹಾಡಿನ ಜನಪದ ಗೀತೆಯನ್ನು ನೆನಪಿಗೆ ತರುವಂತಿದೆ. ಹಾಡಲು ಅನುಕೂಲಕರವಾಗಿದ್ದು, ಗೇಯತೆಯ ಸ್ವರೂಪ ಪಡೆದಿದೆ.

ದೊಡ್ಡರಂಗೇಗೌಡರು, ಗ್ರಾಮೀಣ ಪರಿಸರದಿಂದ ಬಂದು, ನಗರ ಸಂಸ್ಕೃತಿಯೊಡನೆ ಬೆರೆತರೂ ತನ್ನ ನೆಲದ ಗುಣವನ್ನು ಮರೆಯದೆ ತಮ್ಮ ಕವಿತೆಗಳಲ್ಲಿ ಅದನ್ನು ಸಶಕ್ತವಾಗಿ ತಂದಿದ್ದಾರೆ. ಗೌಡರು ತಮ್ಮ ಅನೇಕ ಕವಿತೆಗಳಲ್ಲಿ ಹೆಣ್ಣು – ತಾಯಿ – ದೇಶ – ಭಾಷೆಯ ಬಗ್ಗೆ ಅಭಿಮಾನದಿಂದ ತಮ್ಮ ಸ್ವೋಪಜ್ಞತೆಯನ್ನು ಮೆರೆದಿದ್ದಾರೆ. ತಾಯಿಯನ್ನು ಕುರಿತ ಅವರ 'ಅಮ್ಮ' ಕವಿತೆಯಲ್ಲಿ ತಾಯಿಯ ವಾತ್ಸಲ್ಯದ ವಿವಿಧ ಮುಖಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ.

ಅಮ್ಮಾ . . . ನೀನು ನಲ್ಮೆ ಭಾನು
ಎಷ್ಟು ಕಾಂತಿ ನಿನ್ನ ಕಣ್ಣು?
ನೋಡಿದಷ್ಟೂ ಹೊಳೆವೆ ನೀನು
ಪ್ರೀತಿ ಬೆಳಕು ಇದುವೆ ಏನು?
. . . .
ನಿನ್ನ ಕಣ್ಣ ಕಿರಣದಲ್ಲಿ
ನಗೆಯ ಚಿಮ್ಮಿ ಮಿನುಗುವಲ್ಲಿ –
ನನ್ನ ಮಬ್ಬು ಕರಗಿದೆ
ಪ್ರೇಮ ಹಬ್ಬಿ ಬೆಳೆದಿದೆ. [೬೪]

ತಾಯಿ ಪ್ರೀತಿ ಅಜ್ಞಾನದ ಕತ್ತಲನ್ನು ನೀಗಿ, ಬೆಳಕನ್ನು ನೀಡುವ ಚೈತನ್ಯ. ಬದುಕಿನಲ್ಲಿ ಎದುರಾಗುವ ಸವಾಲುಗಳನ್ನು ಮೆಟ್ಟಿನಿಲ್ಲುವ ಆತ್ಮ ವಿಶ್ವಾಸ. ಆಕೆಯ ವಾತ್ಸಲ್ಯಾನುಭವದಿಂದ ಪಡೆದುಕೊಂಡ ಶಕ್ತಿ. ಇವೆಲ್ಲವೂಆಕೆಯ ಮಾತೃಹೃದಯದಿಂದ ದತ್ತವಾದದ್ದು ಎಂದು ಕವಿ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಇವರ ಮತ್ತೊಂದು ಕವಿತೆ 'ತಾಯಿ' ಚುಟುಕು ರೂಪದಲ್ಲಿದ್ದರೂ ಅರ್ಥಗರ್ಭಿತವಾಗಿದೆ. ತಾಯಿಯ ಕೋಪದ ಹಿಂದಿನ ಸಮುದ್ದೇಶ ಇಲ್ಲಿ ಕಂಡುಬರುತ್ತದೆ.

ತಾಯಿ ಬೈದರೆ ಅದನು ಬೈಗುಳವೆಂಬರೆ ?

ಕಾಯಿ ಮಾಗುವ ಮುನ್ನ ಪಡೆಯದೇ ಉರಿಬಿಸಿಲ ಬರೆ ?
ನೋಯಿಸುವುದು ತಾಯಿಯ ಉದ್ದೇಶವಿರಲಾರದು, ಖರೆ
ತಾಯಿಯೇ ಮಗುವಿನ ಶಿಲ್ಪಿ – ಮಣ್ಣಿನ ಮಗ. [೬೫]

ಪ್ರತಿಯೊಬ್ಬ ತಾಯಿಯ ನಿಂದನೆಯ ಹಿಂದೆ ಸದುದ್ದೇಶವಿರುತ್ತದೆ. ಬೈಯ್ಯುವುದಾಗಲೀ, ಖಂಡಿಸುವುದಾಗಲೀ, ಬಡಿಯುವುದಾಗಲೀ ದ್ವೇಷದಿಂದಲ್ಲ. ತನ್ನ ಮಕ್ಕಳು ಉನ್ನತ ವ್ಯಕ್ತಿಗಳಾಗಿ, ಆದರ್ಶವಂತರಾಗಿ, ಸಮಾಜದ ಗೌರವಕ್ಕೆ ಪಾತ್ರರಾಗುವ ಘನೋದ್ದೇಶದಿಂದ ದಾರಿತಪ್ಪುವ ಸ್ಥಿತಿಯಲ್ಲಿರುವ ಮಕ್ಕಳನ್ನು ಆ ಕ್ಷಣದಲ್ಲಿ ಸರಿದಾರಿಗೆ ತರುವ ಕ್ರಿಯೆಯೇ ತಾಯಿಯ ನಿಂದನೆ ಎಂಬುದು ಇವರ ಅಭಿಪ್ರಾಯ.

ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಕವಿತೆ 'ಮರೆಗೆ ನಿಂತು ಕಾಯುತಿರುವ ಕರುಳು' ತಾಯಿಯ ಹೃದಯ ಶ್ರೀಮಂತಿಕೆ ಸಾರುವ ಕವಿತೆಯಾಗಿದೆ.

ಮರೆಗೆ ನಿಂತು ಕಾಯುತಿರುವ ಕರುಳು ಯಾವುದು,
ಸಾವಿರ ಸೋಜಿಗವ ತೆರೆವ ಬೆರಳು ಯಾವುದು?
. . . .
ಹೊರಗೆ ನಿಂತು ದುಡಿವ
ಫಲ ಬಯಸದೆ ಸಲಹುವ
ತಾಯಿ ಜೀವವೇ ನಮೋ
ಕಾಯ್ವ ಕರುಣೆಯೇ ನಮೋ [೬೬]

ತಾಯಿಯ ನಿರ್ಮೋಹ ಫಲದ ಪೋಷಣೆ, ತಾಯಿಯ ಉಪಕಾರ ಸ್ಮರಣೆ ಇಲ್ಲಿದೆ.

ಇದೇ ಇವರ ಮತ್ತೊಂದು ಕವಿತೆ 'ಅಮ್ಮ' ಮಾತೃತ್ವದ ಶ್ರೇಷ್ಠತೆಗೆ ವ್ಯಾಖ್ಯಾನದಂತಿದೆ.

ಅಮ್ಮ ಎಂಬ ಮಾತಿಗಿಂತ
ಬೇರೆ ಮಂತ್ರ ಎಲ್ಲಿದೆ?
ಅದು ನೀಡುವ ಶಾಂತಿಕಾಂತಿ
ಯಾವ ತಾರೆ ರವಿಗಿದೆ?
. . . .
ಮರೆವೆ ಹೇಗೆ ಹೇಳೆ ತಾಯಿ
ನಿನ್ನೀ ವಾತ್ಸಲ್ಯವ?
ಅರಿವೆ ಹೇಗೆ ಹೇಳೆ ತಾಯೆ
ನಿನ್ನ ಪ್ರೀತಿ ಎಲ್ಲೆಯ? [೬೭]

ಮಂತ್ರ ದೈವದ ಆರಾಧನೆಯಲ್ಲಿ ಕೇಳಿಬರುವಂತಹುದು. ಎಲ್ಲ ಶಕ್ತಿಯನ್ನು ಅಮ್ಮ ಎಂಬ ಶಬ್ದದಲ್ಲಿ ಅಡಗಿಸಿ, ಆ ಮಂತ್ರದ ಮಹಿಮೆಯನ್ನು ಶಬ್ದದಲ್ಲಿ ಕಾಣಬಯಸುವುದು ಪರಂಪರೆಯ ವ್ಯವಸ್ಥೆಯನ್ನು ಸ್ಥಿತ್ಯಂತರ ನೆಲೆಯಲ್ಲಿ ಕಾಣುವಂತದ್ದಾಗಿದೆ. ಸೂರ್ಯ ನಕ್ಷತ್ರಗಳು, ಶಾಂತಿ ಕಾಂತಿಯನ್ನು ಬಿಂಬಿಸುತ್ತವೆಯಾದರೂ ಅವೆರಡನ್ನೂ ಅಮ್ಮನಲ್ಲಿದೆ ಎಂದು ಗುರುತಿಸುವುದು ತಾಯಿ ವ್ಯಕ್ತಿತ್ವಕ್ಕೆ ಘನತೆ ತಂದು ಕೊಟ್ಟಿದೆ. ತಾನು ಸವೆಯುತ್ತಾ

ಮತ್ತೊಂದರ ಬೆಳವಣಿಗೆಗೆ ನಿಸ್ವಾರ್ಥತತೆಯಿಂದ ಅರ್ಪಣಾಭಾವದಿಂದ ಬದುಕು ನಡೆಸುವುದು ತಾಯಿಗಲ್ಲದೆ ಮತ್ತಾರಿಂದ ಸಾಧ್ಯ? ಗಾಳಿ ನೀರಿನಂತ ಪಂಚ ಭೂತಗಳಲ್ಲಿ, ಹೂವು, ಹಸಿರಿನ ಪ್ರಕೃತಿಯಲ್ಲಿ ಕಾಪಾಡುವ ಬಿಂಬವಾಗಿ ತಾಯಿ ನೆಲೆಗೊಂಡಿರುತ್ತಾಳೆ. ಇಷ್ಟು ಹೇಳಿದರೂ ಕವಿ ತಾಯಿಯ ಪ್ರೀತಿ – ವಾತ್ಸಲ್ಯವನ್ನು ಚೌಕಟ್ಟಿನಲ್ಲಿಟ್ಟು ಕಾಣಲು ಸಾಧ್ಯವೇ? ಎಂಬ ಪ್ರಶ್ನೆ ಹಾಕುತ್ತಲೇ ಎಲ್ಲರನ್ನು ಅದರ ಹುಡುಕಾಟಕ್ಕೆ ಹಚ್ಚುತ್ತಾರೆ.

ಹೆತ್ತ ತಾಯಿಯ ರೂಪ ಅನಂತ. ಕವಿತೆಯೂ ಕವಿಯ ಕೂಸು. ಅಂತ ಕೂಸಿಗೆ ತಾಯಿಯಾದ ಕವಿಯ ಮಾತು 'ಬೀಜಕ್ಕೆ ತಾಯಾಗಿ ನಿಂತ ತಣಿವು' ಕವಿತೆಯಲ್ಲಿ ವೀ. ಚಿಕ್ಕವೀರಯ್ಯ ವ್ಯಕ್ತಪಡಿಸಿದ್ದಾರೆ. ತಾಯಿಯ ರೂಪ ಅನಂತ ಎನ್ನುವುದನ್ನು ಈ ಕವಿತೆಯಲ್ಲಿ ಕವಿ ನಿರೂಪಿಸಿದ್ದಾರೆ.

. . . .
ಹಲವು ನೂರು ಪುರಾವೆ
ಬೀಜಕ್ಕೆ ತಾಯಾಗಿ ನಿಂತ ತಣಿವು
. . . .
ಅಲ್ಲಿ ನಾಡಿನ ಮೇಲೆ ಗಾಡಿನ ಮೃದಂಗ ದನಿ
ಮೆಲ್ಲ ಮೆಲ್ಲನೆ ಹೆಜ್ಜೆಯಿಕ್ಕುತ್ತದೆ
ಬಳ್ಳಿ ಸುರುಳಿಯ ಲಲಿತೆ ಹಗಲಿರುಳ ಹದಗೊಳಿಸಿ
ಅನಂತ ಸಾಹಸ ಬದುಕಿಗೂಡುತ್ತದೆ. [೬೮]

ಕವಿತೆ ಅನಂತ ಸಾಹಸದ ಬದುಕಿಗೆ ಪ್ರೇರೇಪಿಸುವ ದಿವ್ಯಶಕ್ತಿ ಎಂದು ಕವಿ ನಂಬಿ ನುಡಿದಿದ್ದಾರೆ. ಅಂಥ ಕವಿತೆಯ ಜನನಕ್ಕೆ ಕಾರಣನಾದ ಕವಿಯೇ ಹೆಣ್ಣಾಗಿ ತಾಯಿಯಾಗಿ ಕಾಣುತ್ತಾರೆ. ತಾಯ್ತನದ ಹಿರಿಮೆ ಹೇಳುತ್ತಾರೆ. 'ಯಾನಾಡಿ ಪಾಪ ಹೆತ್ತ ತಾಯಿರೂಪಗಳು ಲೋಕದಲಿ' ಎಂದು ಆಶ್ಚರ್ಯ ಪಡುತ್ತಾರೆ.

ತಮ್ಮ ಮತ್ತೊಂದು ಕವಿತೆ 'ನನ್ನ ತಾಯಿ'ಯಲ್ಲಿ 'ತಾಯಿಯ ಹೃದಯ ವೈಶಾಲ್ಯ ನಾನು ಹೊದ್ದ ಶಲ್ಯ' ಎಂದು ಸ್ಮರಿಸಿದ್ದಾರೆ.

ಮನಸ್ಸಿನಲ್ಲಿ ಮೂಡಿ
ಕನಸಿನಲ್ಲಿ ಕೂಡಿ
ಹೋದ ಹಾಗೆ ನೆನಪು
ನನ್ನ ತಾಯ ಒನಪು
. . . .
ಅವಳೆದೆಯಾಸಕ್ತಿ
ಸಂಚಯಿಸಿತು ಭಕ್ತಿ
ಹೃದಯ ತುಂಬಿ ನಕ್ಕನಗೆ
ನಿಂತಿತೆನ್ನ ರಕ್ಷೆಗೆ
ಅವಳ ಹೃದಯ ವೈಶಾಲ್ಯ [೬೯]
ನಾನು ಹೊದ್ದ ಶಲ್ಯ

ತಾಯಿಯ ನಡೆ, ನುಡಿ, ಆಕೆ ಕೊಟ್ಟ ಜ್ಞಾನ ಹಾಗು ಆಕೆಯ ಹೃದಯ ವೈಶಾಲ್ಯತೆಗಳೆಲ್ಲವೂ ತನ್ನ ಬದುಕಿಗೆ ಶೋಭೆ ಹಾಗೂ ರಕ್ಷತೆ ನೀಡುವ ಶಲ್ಯ ಎಂದು ಅಭಿಪ್ರಾಯ ಕವಿಯದು.

ತಾಯಿತನ ಎಂಬುದು ಹೆಣ್ಣಿನ ಆನಂದದ ಘಟ್ಟ, ಅಂತಹ ತಾಯಿತನ ದೊರಕಿಸಿ ಕೊಟ್ಟ ಮಗುವಿಗೆ ತಾಯಿಯೇ ವಂದಿಸುವ ವಿಶಿಷ್ಟ ಕವಿತೆ 'ಮಾತೃ ವಂದನೆ'.

. . . .
ತಾಯ್ತನದ ಸುಖವ ತಂದೊಪ್ಪಿಸಿದ
ನಿನಗೆ
ಮಾತೃವಂದನೆ ಮಗುವೆ
ನಾಳೆಗೊಂದೀಟಿರಲಿ
ಎಲ್ಲ ಇಂದೆ ಆಡಿ ಪೂರೈಸದಿರೋ
ನಿನ್ನ ಆಟ
. . . .
ಇದು ಯಾವ ಮಾಯಾಸ್ಪರ್ಶ
ಯಾವ ಪುಣ್ಯದ ಪುರಾಕೃತವೊ
ಯುಗ ಪುರುಷ
ಜೀವ ಹರ್ಷ [೭೦]

ತಾಯ್ತನಕ್ಕೆ ಮಗು ಕಾರಣ. ಮಗುವನ್ನು ಪಡೆಯುವುದು ತಾಯಿಗೆ ಅದೊಂದು ಅವರ್ಣನೀಯವಾದ ಆನಂದ. ಪುಣ್ಯದ ಫಲ ಎಂದು ಕವಿ ಮನದುಂಬಿ ಹೇಳಿದ್ದಾರೆ.

ತಾಯಿ ಯಾತನೆಯ ಸ್ಥಿತಿಯಲ್ಲಿದ್ದರೂ ತನ್ನ ಕರುಳ ಕುಡಿಯ ಯೋಗಕ್ಷೇಮದ ಬಗ್ಗೆಯೇ ಸದಾ ಗಮನ ಹರಿಸಿರುತ್ತಾಳೆ. ಅದೇ ಮಾತೃತ್ವದ ಹಿರಿಮೆ ಎಂಬುದನ್ನು ತಮ್ಮ ಕವಿತೆ 'ನಮ್ಮಮ್ಮ'ದಲ್ಲಿ ಬಿಂಬಿಸಿದ್ದಾರೆ. ಈ ಕವಿತೆ ಓದುವಾಗ ಬೇಂದ್ರೆಯವರ 'ತಾಯಿ ಕೂಸು', ಹಾಗೂ 'ನಲ್ ತಾಯಿ' ಮತ್ತು ಕೆ.ಎಸ್. ನರಸಿಂಹ ಸ್ವಾಮಿಯವರ 'ಸಣ್ಣ ಸಂಗತಿ' ನೆನಪಾಗುತ್ತವೆ. ಹೋಲಿಕೆ ಒಂದೇ ಆದರೂ ಭಾವ ಬೇರೆ, ಸಂದರ್ಭ ಬೇರೆ.

ಮಗ ಬಂದನೇ ಎಂದು
ನಡುರಾತ್ರಿಯಾದರೂ ಯಕೃತ್ತಿನ ಯಾತನೆ
ಯಿಂದ ಶತ್ತರಿಸಿ
ಮಲಗದೆ ಎದ್ದು ಕುಳಿತಿರುತ್ತಿದ್ದ
ನನ್ನಮ್ಮ ಈಗಿಲ್ಲ
ಅವಳ ಔದಾರ್ಯಯಕ್ಕೆ ಇಲ್ಲಿ ಗೆರೆಮೇರೆ
ರೈತಾಪಿಯಲ್ಲಿ ಕೈಪಳಗಿದವಳು
ಸದಾ ಜೀವನ ಪ್ರೀತೆ [೭೧]

ರೋಗದ ನರಳುವಿಕೆಯ ನಡುವೆಯೂ ತನ್ನ ಮಕ್ಕಳ ಬಗ್ಗೆ ಇಡುವ ನಿಗ, ಅಪೇಕ್ಷಿಸುವ ಪ್ರೀತಿ, ಆಕೆಯ ಮಾತೃ ವಾತ್ಸಲ್ಯಕ್ಕೆ ಕವಿಯ ಅಂತಃಕರಣ ಮಿಡಿಯುತ್ತದೆ.

ಆಕೆಯ ಸಾವಿನ ತರುವಾಯ ನೆನಪು ನಿರಂತರ ಕಾಡುತ್ತದೆ. ಪುರಾಣಗಳ ಚೌಕಟ್ಟನ್ನು ನೀಡಿ ಇತಿಹಾಸದ ಚಿತ್ರದೊಂದಿಗೆ ತನ್ನ ತಾಯಿಯ ಹಿರಿಮೆಯನ್ನು ದರ್ಶಿಸಿದ್ದಾರೆ.

ಕನ್ನಡದಲ್ಲಿ ತಾಯಿಯನ್ನು ಕುರಿತ ಕವಿತೆಗಳು ಬೇರೆಬೇರೆ ಧೋರಣೆಗಲ್ಲಿ ರಚನೆಯಾಗಿದ್ದರೂ ಲಂಕೇಶರ 'ಅವ್ವ' ತನ್ನ ನೈಜ ಹಾಗೂ ಭಾವನಾತ್ಮಕತೆಯ ಹಿನ್ನೆಲೆಯಲ್ಲಿ, ಶ್ರಮಿಕ ಸಂಸ್ಕೃತಿಯ ಪ್ರತಿನಿಧಿಯಾಗಿ ಗಮನ ಸೆಳೆಯುತ್ತದೆ. ನಂತರ ಅದೇ ಜಾಡಿನಲ್ಲಿ ಅನೇಕ ಕವಿಗಳು ತಾಯಿಯನ್ನು ಕುರಿತು ಬರೆದಿದ್ದಾರೆ. ಆ ಜಾಡಿನಲ್ಲಿ ಬಂದವರಲ್ಲಿ ಎಲ್. ಹನುಮಂತಯ್ಯ, ಎ.ಕೆ. ಹಂಪಣ್ಣ, ಸರಜೂ ಕಾಟ್ಕರ್, ಎಸ್.ಜಿ. ಸಿದ್ಧರಾಮಯ್ಯ, ವಿ. ಮುನಿವೆಂಕಟಪ್ಪ, ಸೋ.ಮು. ಭಾಸ್ಕರಾಚಾರ್, ಎನ್. ನಾಗಪ್ಪ ಮೊದಲಾದ ಹೊಸ ತಲೆಮಾರಿನ ಕವಿಗಳು ಬರೆದ ಕವಿತೆಗಳು ಉದಾಹರಣೆಯಾಗಿ ಕಾಣುತ್ತವೆ. ಇವರ ರಚನೆಗಳು ಕೇವಲ ಸಾಂಪ್ರದಾಯಕ ದೃಷ್ಟಿಯಲ್ಲಿ ಮೂಡಿ ಬಂದ ತಾಯಿ ಕವಿತೆಗಳಲ್ಲ. ಶ್ರಮಿಕ ಜಗತ್ತಿನ ಪ್ರಾತಿನಿಧಿಕ ಕೃತಿಗಳಂತೆ ಮೂಡಿಬಂದಿವೆ. ತಮ್ಮ ಬದುಕಿನ ಅನುಭವಕ್ಕೆ, ಜೀವನದ ಸ್ಥಿತಿಗತಿಗೆ, ಸಾಮಾಜಿಕ ವ್ಯವಸ್ಥೆಗೆ ದಾರುಣ ಚಿತ್ರಗಳಾಗಿ ಬಂದಿವೆ. ವ್ಯವಸ್ಥೆಯನ್ನು ತೆರೆದಿಡುವ, ಯಾತನೆಯನ್ನು ಹೊರ ಹೊಮ್ಮಿಸುವ, ಬದುಕಿನ ಕರಾಳ ಮುಖವನ್ನು ಅನಾವರಣಗೊಳಿಸುವ ಪ್ರಯತ್ನ ಇವರಲ್ಲಿ ಕಂಡು ಬರುತ್ತದೆ. ಹಸಿವು, ಅವಮಾನಗಳ ಸುಳಿಯಲ್ಲಿ ಸಿಕ್ಕಿ ಉಸಿರುಗಟ್ಟುವ ಸ್ಥಿತಿಯಲ್ಲಿರುವ ದಲಿತರ ತಾಯಿ ಅನ್ಯರ ತಾಯಿಗಿಂತ ಭಿನ್ನ ಹಾಗು ವೈವಿಧ್ಯ. ಸಾಮುದಾಯಿಕ ಪ್ರಜ್ಞೆಯಿಂದ ಕರುಳಾಳದಿಂದ ಹುಟ್ಟಿಬಂದ ಕವಿತೆಗಳಾಗಿವೆ.

ಆಧುನಿಕ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಅವ್ವನನ್ನು ಕುರಿತು ಬರೆದ ಕವಿತೆಗಳಲ್ಲಿ ಲಂಕೇಶರ 'ಅವ್ವ' ಚರ್ಚಾರ್ಹವಾದದ್ದು. ಈ ಕವಿತೆಯಲ್ಲಿ ಎಲ್ಲಿಯೂ ಅನಗತ್ಯವಾದ ಪದಗಳನ್ನಾಗಲಿ, ವಿಶೇಷಣಗಳನ್ನಾಗಲಿ, ಸಾಂಪ್ರದಾಯಿಕ ಚೌಕಟ್ಟಿನಲ್ಲಿ ವಿಜೃಂಭಿಸುವುದನ್ನಾಗಲಿ ಕಾಣ ಬರುವುದಿಲ್ಲ. ತಾಯಿಯ ಎದೆಯಾಳದ ಭಾವನೆಗಳನ್ನು, ಬದುಕನ್ನು ಎದುರಿಸಿದ ಸಾಹಸ ಗುಣವನ್ನು, ಸ್ವಾಭಿಮಾನದ ಬದುಕನ್ನು ಕವಿ ವಾಸ್ತವಿಕ ನೆಲೆಗಟ್ಟಿನಲ್ಲಿ ಚಿತ್ರಿಸಿದ್ದಾರೆ.

". . . . ಲಂಕೇಶರ ಕವನಗಳಲ್ಲಿ ಎದ್ದು ಕಾಣುವುದು ಚೈತನ್ಯ – 'ಎನರ್ಜಿ'. ಇವರ ಕೆಲವು ಕವನಗಳಲ್ಲಿ ಎದ್ದು ಕಾಣುವುದು ರೋಷ, ತಿರಸ್ಕಾರಗಳ ವಸ್ತುವಾದ ಜನರನ್ನು ಬಿಡಲಾರದ, ಮರೆಯಲಾರದ ಮನಃಸ್ಥಿತಿ. ಆದರೆ ಅವ್ವನಂತಹ ಸೊಗಸಾದ ಕವನದಲ್ಲಿ ವಿಡಂಬನೆಯ ಛಾಯೆ ಇದ್ದರೂ ಜೀವನ ಶ್ರದ್ಧೆಯಲ್ಲಿ ಸಹಜ, ಜೀವಂತ ಮೂರ್ತಿಯಂತಿದ್ದ 'ಅವ್ವ' ಶಕ್ತಿಯಾಗಿ ರೂಪು ತಾಳುತ್ತಾಳೆ. ನಾಗರಿಕತೆಯ ಸ್ವ – ಪ್ರಜ್ಞೆ *(Self - Consiousness)* ತಾನು ಏನು ಮಾಡುತ್ತೇನೆ, ಏಕೆ, ಅದು ಸರಿಯೆ, ನೋಡಿದವರು ಏನೆಂದುಕೊಂಡಾರು ಎಂಬ ಚಿಂತೆಯ ಸೋಂಕೇ ಇಲ್ಲದ ನಿಸರ್ಗದ ಶಕ್ತಿಯಾಗಿ ಬೆಳೆದು ಮಾಯವಾಗುತ್ತಾಳೆ.

ನನ್ನವ್ವ ಫಲವತ್ತಾದ ಕಪ್ಪು ನೆಲ
ಅಲ್ಲಿ ಹಸಿರು ಪತ್ರದ ಹರವು, ಬಿಳಿಯ ಹೂ ಹಬ್ಬ;
ಸುಟ್ಟಷ್ಟು ಕಸುವು, ನೊಂದಷ್ಟು ಹೂ ಹಣ್ಣು
ಮಕ್ಕಳೊದ್ದರೆ ಅವಳ ಅಂಗಾಂಗ ಪುಲಕ;

ಹೊತ್ತ ಬುಟ್ಟಿಯ ಇಟ್ಟು ನರಳಿ ಎವೆ ಮುಚ್ಚಿದಳು ತೆರೆಯದಂತೆ.

. . . .

'ನನ್ನ ಸುತ್ತಾ'ದಂತಹ ಕವನದಲ್ಲಿ ಬರಿಯ ಪಟ್ಟಿಯೇ ಚಿತ್ರಗಳ ಸರವಾಗಿ ಸುತ್ತಲಿನ ಜೀವನ ಕಟ್ಟಿಗೆಗೆ ಕಟ್ಟುತ್ತದೆ. ಇಂಥ ಕವನದಲ್ಲಿ ಕವಿಯ ಧ್ವನಿಯೂ ಕೇಳಿದಂತಾಗುತ್ತದೆ. ಇತರ ನವ್ಯ ಕವಿಗಳಂತೆ ಲಂಕೇಶರು ಪುರಾಣದ ಪ್ರತಿಮೆಗಳನ್ನು ಬಳಸುವುದಿಲ್ಲ; ಸಾಮಾನ್ಯವಾಗಿ ನವ್ಯ ಕಾವ್ಯದಲ್ಲಿ ಎದುರುಗೊಳ್ಳುವ ಕ್ಲಿಷ್ಟತೆಯೂ ಇವರ ಕವನಗಳಲಿಲ್ಲ. ಹೇಳುವುದೂ ತೀರ ವಾಚ್ಯವಾಯಿತು ಎಂದು 'ಶಾಕ್' ಮಾಡುವುದಕ್ಕಾಗಿಯೇ ಬರೆಯುತ್ತಾರೆಯೋ ಎಂದು ಮತ್ತೆ ಮತ್ತೆ ಎನಿಸುತ್ತದೆ".[೭೩] ಹೀಗೆ ವಿಮರ್ಶಕರ ದೃಷ್ಟಿಗೆ ಬಿದ್ದಿರುವ ಲಂಕೇಶರ 'ಅವ್ವ' ವಿಶಿಷ್ಟವಾದ ಕವಿತೆ.

"ಅವ್ವನನ್ನು ನೆನೆದರೆ ಸಹಜವಾಗಿ ಹೊಮ್ಮಿ ಬರುವ ಭಾವವೇ ಕವನವಾಗಿದೆಯಾಗಿ ಅರ್ಥಗಿರ್ಥಗಳ ವಿಶೇಷ ವ್ಯಾಖ್ಯಾನಗಳಿಗೆ ಇದನ್ನು ಒಳಪಡಿಸುವುದು ತೀರಾ ಅನಾವಶ್ಯಕವೆನಿಸಿಬಿಡುತ್ತದೆ. ಕವನವು ಕಟ್ಟಿ ಕೊಡುವ ಭಾವಲೋಕದ ಅನುಭವ ಮಾತಿನ ವ್ಯಾಖ್ಯೆಗೆ ಮೀರಿ ಮನಸ್ಸನ್ನು ತುಂಬಿ ನಿಲ್ಲುತ್ತದೆ".[೭೪] ಕಲ್ಲು ಮುಳ್ಳಿನ ಪರಿಸರದಲ್ಲಿ ಬೆಳೆದು ಬಾಳಿದವಳ ಚಿತ್ರವನ್ನು ಅಖಂಡವಾಗಿ ಕಟ್ಟಿಕೊಡುತ್ತದೆ.

'ಕವಿತೆಯ ವಸ್ತು ಆತ್ಮೀಯವಾದ ಒಂದು ವ್ಯಕ್ತಿಯನ್ನು ಕುರಿತದ್ದಾಗಲೂ ವ್ಯಕ್ತಿತ್ವದ ಎಲ್ಲಾ ಮುಖಗಳನ್ನು ಪ್ರತಿಬಿಂಬಿಸಿ ಅನುಭವಕ್ಕೆ ಸಮಗ್ರತೆಯನ್ನು ತಂದುಕೊಡುವ ದಿಟ್ಟತನವನ್ನು ಹೊಸ ಕವಿತೆಯಲ್ಲಿ ಕೆಲವೆಡೆ ಕಾಣಬಹುದು. ಅಗಲಿದ ತಾಯಿಯನ್ನು ಕುರಿತು ಬರೆಯುವಾಗಲೂ ಅದು ಬರಿ ಶೋಕಗೀತವಾಗದೆ ಅವಳ ಗುಣಾವಗುಣಗಳನ್ನು, ಬದುಕಿನ ಬಗೆಯನ್ನು ಮೂರ್ತೀಕರಿಸುವ ರೀತಿ ನವ್ಯ ಕವಿಯ ಆರೋಗ್ಯಕರವಾದ ಜೀವನ ದೃಷ್ಟಿಯನ್ನು ಸೂಚಿಸುತ್ತದೆ:

. . . .

ಸತ್ತಳು ಈಕೆ;
ಬಾಗು ಬೆನ್ನಿನ ಮುದುಕಿಗೆಷ್ಟು ಪ್ರಾಯ?
ಎಷ್ಟು ಯುಗಾದಿ ಚಂದ್ರ, ಒಲೆ ಎದುರು ಹೋಳಿಗೆಯ ಸಂಭ್ರಮ?
ಎಷ್ಟು ಸಲ ಈ ಮುದುಕಿ ಅತ್ತಳು
ಕಾಸಿಗೆ, ಕೆಟ್ಟ ಪೈರಿಗೆ, ಸತ್ತ ಕರುವಿಗೆ;
ಎಷ್ಟುಸಲ ಹುಡುಕುತ್ತ ಊರೂರು ಅಲೆದಳು
ತಪ್ಪಿಸಿಕೊಂಡ ಮುದಿಯ ಎಮ್ಮೆಗೆ?

. . . .

ಬನದ ಕರಡಿಗೆ ನಿಮ್ಮ ಭಗವದ್ಗೀತೆ ಬೇಡ:
ನನ್ನವ್ವ ಬದುಕಿದ್ದು
ಕಾಳು ಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ;
ಮೇಲೊಂದು ಸೂರು, ಅನ್ನ, ರೊಟ್ಟಿ ಹಚಡಕ್ಕೆ;
ಸರೀಕರ ಎದುರು ತಲೆ ಎತ್ತಿ ನಡೆಯಲಿಕ್ಕೆ [೭೫]

ಪುರಾಣ ಇತಿಹಾಸಗಳಿಂದ ಹಿಡಿದು ಸಮಕಾಲಿನ ಬದುಕಿನಲ್ಲಿ ಕಾಣುವ ಸತೀ ಸಾವಿತ್ರಿಯರು, ಭಕ್ತರು, ಭವ್ಯ ತತ್ವ ಚಿಂತಕರು ಹೀಗೆ ಕಲ್ಪನೆಯ ಎಲ್ಲ ಗುಣಗಳ ಸಹಕಾರ ರೂಪಿಗಳು ದೊಡ್ಡವರೂ ಪೂಜಾರ್ಹರೂ ಹೌದು. ಆದರೆ ಇವರ ಎತ್ತರಕ್ಕೆ ಏರದೆ, ಸಾಧಿಸದೆ, ಪೂಜಾರ್ಹಳಾಗದೆ ಸದ್ದಿಲ್ಲದೆ ಸರಿದು ಹೋದ ಸಾಧಕಿಯಂತೆ ಲಂಕೇಶರ 'ಅವ್ವ' ಇದ್ದಾಳೆ. ಬದುಕು ಬಂದಂತೆ ಸ್ವೀಕರಿಸುತ್ತ ನಡೆದವಳು. ಪಾಪ – ಪುಣ್ಯಗಳ ಭೀತಿಗೆ ಬೀಳದೆ ಎದೆ ತೆರೆದು ಬದುಕನ್ನು ತುಂಬಿಕೊಂಡವಳು. ಇಂಥ ಸರಳ ಸುಂದರ ಅವ್ವ ಕವನದುದ್ದಕ್ಕೂ ಪ್ರೀತಿಯ ಸೆಲೆಯಾಗಿ ನಿಲ್ಲುತ್ತಾಳೆ.

ಲಂಕೇಶರ 'ಅವ್ವ – ೨' ಅವರ ತಾಯಿಯ ನಿಧನರಾಗಿ ಇಪತ್ತೈದು ವರ್ಷಗಳ ತರುವಾಯ ಆಕೆಯ ಸ್ಮೃತಿಯಲ್ಲಿ ಬರೆದ ಕವನ. ಪರಿಸರದಲ್ಲಿ ಬದಲಾದಂತೆ, ಕವಿ ಬದುಕಿನಲ್ಲಿ, ಶೈಲಿಯಲ್ಲಿ ಬದಲಾವಣೆಯಾಗಿದೆ. ಈ ಹಂತದಲ್ಲಿ 'ನಾನು' ಎಂಬ ಕವಿಯ ಸಂವೇದನಾಶೀಲ ಮನಸ್ಸು ಈ ಕವನದಲ್ಲಿ ಅಂತಸ್ಥವಾಗಿ ನಿಂತು ತನ್ನಲ್ಲಿ ತನ್ನವ್ವನ ತನ ಎಷ್ಟು ಉಳಿದಿದೆ ಎಂಬುದರ ಪರಿಶೀಲನೆಗೆ ತೊಡಗಿದಂತಿದೆ.

ತನ್ನ ಅವ್ವನಿಗೂ ತನಗೂ ಇದ್ದ ಸಂಬಂಧಗಳನ್ನು ನೆನಪಿನಾಳಕ್ಕೆ ಇಳಿದು ನೋಡುತ್ತಾರೆ. ಜ್ವರಬಂದು ಮಲಗಿದ್ದಾಗ ಅವ್ವನ ನಂಬಿಕೆಯ ಶುಶ್ರೂಷೆ, ತನ್ನವ್ವನ ತೊಡೆ ಮೇಲೆ ತಲೆ ಇಟ್ಟು ಮಲಗಿದ್ದು; ಆಕೆಯ ಸೀರೆಯ ಕಮ್ಮನೆ ವಾಸನೆ ಅನುಭವಿಸಿದ್ದು; ಆಕೆ ತನ್ನ ಬಾಯಿಗೆ ಎಲೆ, ಭಜೆ, ಜ್ವರಕ್ಕೆ ಲವಂಗ ತಿನ್ನಿಸಿದ್ದು. . . . . ಹೀಗೆ ಕವಿ ತನ್ನವ್ವನ ನೆನೆಪುಗಳ ಬೆನ್ನತ್ತುತ್ತಾರೆ.

'ತಾಯ್ತನದ ವಿನಯ ಮತ್ತು ಮೌನ'ಗಳನ್ನು ತೀವ್ರವಾಗಿ ಗೌರವಿಸುತ್ತಾರೆ. ಬದುಕು ಎಲ್ಲಾ ತತ್ವ ಸಿದ್ಧಾಂತಗಳನ್ನು ಮೀರಿ ಬೆಳೆಯುತ್ತದೆ ಎಂದು ತಿಳಿದಿರುವ ಕವಿಗೆ ನಾಗರಿಕತೆಗಿಂತ ಅವ್ವನಿಂದ ಕಲಿತ ವಿನಯ ಮತ್ತು ಮಾನವೀಯತೆಯೇ ದೊಡ್ಡ ಮೌಲ್ಯಗಳಾಗಿ ಕಾಣುತ್ತವೆ. ಈ ಹಿನ್ನೆಲೆಯಲ್ಲಿ ಕವಿಯ ಅಂತರಾಳದಲ್ಲಿ ಅವ್ವ ಶಾಶ್ವತವಾಗಿ ಉಳಿಯುತ್ತಾಳೆ.

ಈ ಅವ್ವನ ಹೂತು ಈಕೆಯ ಮೇಲೆ ಕವನ ಕಟ್ಟಿ
ಇವತ್ತಿಗೆ ಇಪತ್ತೈದು ವರ್ಷವಾಯಿತು.
ಕವನಕ್ಕೆ ಪಡೆದ ಸಂಭಾವನೆ ಕೂಡಾ ಖರ್ಚಾಗಿದೆ
. . . .
ಸ್ಪಷ್ಟತೆ, ವೈಚಾರಿಕತೆಯೇ ಆಧುನಿಕ ಮನುಷ್ಯನ
ನಿರ್ದಿಷ್ಟ ಲಕ್ಷಣ ಎಂದು ಹೇಳುವ ನನಗೆ
ಕೊಂಚ ತಾಯ್ತನದ ವಿನಯ ಮತ್ತು ಮೌನ
ಕಾಲು ಶತಮಾನದ ಬಳಿಕ;
ಜಗಳಗಂಟಿಯಾಗಿದ್ದ ಈ ಅವ್ವ ಈಗ ನನ್ನಲ್ಲಿ
ವಿನಯ ಮತ್ತು ಮೌನ. [೭೫]

ಒರಟುತನವಿರಲಿ. ವೈಚಾರಿಕತೆ ಇರಲಿ. ಪ್ರತಿಷ್ಠೆ – ಪ್ರಭಾವಗಳಿರಲಿ ಇವುಗಳಿಂದ ಬಿಡುಗಡೆ ಹೊಂದಿ ಅಂತರ್ಮುಖಿಯಾದಾಗ ಮಾಗಿದ ಮನಸ್ಸಿಗೆ. ಅನುಭವದ ಎಳೆಗಳು ವ್ಯಕ್ತಿಯನ್ನು ಪಕ್ವಗೊಳಿಸುವುದರಲ್ಲಿ ಸಾಧ್ಯವಾಗುವಂತ ಕ್ರಿಯೆ. ಇಂತಹ ಸಂದರ್ಭದಲ್ಲಿ

ತಾಯಿಯ ಚಿತ್ರ ಕವಿಗೆ ಸಂಯಮ, ವಿನಯವನ್ನು ಕಲಿಸಿಕೊಡುವಲ್ಲಿ ಸಫಲವಾಗುತ್ತದೆ. ಆಕೆಯ ಬದುಕೇ ತನಗೆ ಪಾಠವಾಗುತ್ತದೆ ಎಂದು ಕವಿ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

"ಆದರೆ 'ಅವ್ವ – ೧'ರಲ್ಲಿ ಕಾಣಿಸಿಕೊಳ್ಳುವ ದಟ್ಟ ವಿವರಗಳು, ಉಪಮೆಗಳು, ರೂಪಕಗಳು 'ಅವ್ವ – ೨'ರಲ್ಲಿ ಮಾಯವಾಗಿದೆ. ಕವಿತೆ ಹೆಚ್ಚು ಅಚ್ಚಗನ್ನಡದ ನುಡಿಗಟ್ಟುಗಳಿಂದ ರಚನೆಯಾಗಿದ್ದರೂ ಅರ್ಥಗಳನ್ನು ಧ್ವನ್ಯಾರ್ಥಗಳಲ್ಲಿ ಒಳಗೊಂಡು ಸಂಕೀರ್ಣವಾಗಿದೆ. 'ಉಮಾಪತಿಯ' ಅವ್ವ, 'ರೊಟ್ಟಿ'ಯ ಅವ್ವ, 'ಮುಸ್ಸಂಜೆ'ಯ ಅವ್ವ ಲಂಕೇಶರ ಸಾಹಿತ್ಯದ ಕರ್ತೃತ್ವ ಶಕ್ತಿಗಳು. ಹಾಗೆಯೇ 'ಅಕ್ಕ', 'ತಮ್ಮ' ಕೂಡ. ಆದರೆ 'ಅಕ್ಕ – ತಮ್ಮ', ಅವ್ವನಿಗಿಂತ ಭಿನ್ನ ಮತ್ತು ಸೀಮಿತ. ಆದರೆ 'ಅವ್ವ' ಸ್ವಚ್ಛಂದ, ಸಮೃದ್ಧ ಹಾಗೂ ಸೀಮಾತೀತ. ಆತ್ಮ ಚರಿತದ ರೀತಿಯಲ್ಲಿ ಅವ್ವ ಮತ್ತು ಮಗನ ಸಂಬಂಧದ ಗೊಂದಲಗಳನ್ನು ಅಗೆಯುವ, ಶೋಧಿಸುವ, ಪರಿಶೀಲಿಸುವ ನಿಟ್ಟಿನಲ್ಲಿ 'ಅವ್ವ – ೨' ಕವನ ರಚನೆಯಾಗಿದೆ"[೨೬] – ಎಂದು ಕರೀಗೌಡ ಬೀಚನಹಳ್ಳಿಯವರ ಮಾತು ವಾಸ್ತವಿಕವೆನಿಸುತ್ತದೆ.

ಸಮಾಜಮುಖಿಯಾದ ತುಡಿತ, ಕತ್ತಲ ಬದುಕಿನ ಅನುಭವ ದ್ರವ್ಯದಿಂದ ಪರಿಪಕ್ವಗೊಂಡಿರುವ ಎಲ್. ಹನುಮಂತಯ್ಯನವರ 'ಅವ್ವ' ಕವನ ಸಂಕಲನದಲ್ಲಿನ 'ಅವ್ವ 'ಕವಿತೆ ವಿಶೇಷವಾಗಿ ಗಮನ ಸೆಳೆಯುತ್ತದೆ. ಅಂತರಂಗದ ಅನುಭವದಿಂದ ಅಲೆಅಲೆಯಾಗಿ ತೇಲಿ ಬರುವ 'ಅವ್ವ'ದಲ್ಲಿ ತನ್ನ ಜನಾಂಗದ ನೋವಿದೆ, ಸ್ಥಿತಿಗತಿಯ ಚಿತ್ರವಿದೆ, ವೇದನೆಯ ಆಳವಿದೆ. ಹೀಗಿದ್ದರೂ ಬದುಕನ್ನು ಸವಾಲಾಗಿ ಸ್ವೀಕರಿಸಿ ಮನೆ ಬೆಳೆಸಿ, ಮಕ್ಕಳನ್ನು ಬೆಳೆಸಿ ಧನ್ಯಳಾದ ತಾಯಿಯ ಶ್ರಮ ಸಂಸ್ಕೃತಿಯ ತಿರುಳಿದೆ.

ಬರಿಗೊರಳ ತುಂಬ
ಕರಿಮಣಿಯ ಪೋಣಿಸಿ
ತನಗಿಲ್ಲದ ಅಕ್ಷರದ ಅಡ್ಡಿಕೆಯ
. . . .
ಎಣ್ಣೆ ಇಲ್ಲದೆ ಬತ್ತಿ
ಕರಿ ನೆರಳ ಓಡಿಸಲು ಹೆಣಗಾಡುತ್ತಿದ್ದಾಗ
ಜೀವ ಬೆಳಕಿನ ಬುತ್ತಿ
ಕಾಲ ಚಕ್ರನ ಜೊತೆಗೆ ಸವೆಯುತ್ತಿತ್ತು.
ಹಗಲುಗಳ ಹಸೆ ಮೇಲೆ
ತೀಡಿದ್ದ ಅರಿಶಿನಕೆ ಪನ್ನೀರ ಚುಮುಕಿಸದೆ ಹೊರಟು ಹೋದೆ![೨೨]

ಎದೆಯಲ್ಲಿ ನೋವು, ಸಂಕಟಗಳನ್ನು ತುಂಬಿಕೊಂಡ ಕವಿಗೆ ಮಧುರವಾದ, ಸಾತ್ವಿಕವಾದ, ರಾಗಾಲಾಪನೆಗೊಳಪಡುವ ಭಾವ ತುಂಬಿ ಬರಲು ಸಾಧ್ಯವಿಲ್ಲ. ಹಾಗಾಗಿ ದಲಿತ ಕವಿಗಳಲ್ಲಿ ಕಾಣುವ ಹಿಂಸ ರೂಪಕಗಳು, ನೆತ್ತರು, ನಂಜಿನ ಕಮಟು ವಾಸನೆಗಳೇ ತುಂಬಿ ಬರಲು ಸಾಧ್ಯ

'ಅವ್ವ' ಶೀರ್ಷಿಕೆಯೊಂದಿಗೆ ಇರುವ ಕವನ ಸಂಕಲನದಲ್ಲಿ ಸರಜೂ ಕಾಟ್ಕರ್ ತನ್ನ ತಾಯಿಯ ಅನೇಕ ಮುಖಗಳನ್ನು ದರ್ಶಿಸಿದ್ದಾರೆ. ಬಡತನ, ಅನಕ್ಷರತೆಯೊಂದಿಗೆ ಹಳ್ಳಿ ಮುಗ್ಧೆಯಾಗಿದ್ದ ತಾಯಿ ಅನ್ಯರಿಗೆ ಆಳಾಗದೆ, ಸಮಸ್ಯೆಗಳಿಗೆ ಬೆನ್ನೊಡ್ಡದೆ ಮಕ್ಕಳು

ಮರಿ ಪಡೆದು, ಅವುಗಳನ್ನು ಅಕ್ಕರೆಯ ತೊಟ್ಟಿಲಲ್ಲಿಟ್ಟು, ಸಾಕಿ ಸಲಹಿ ಎಂಬತ್ತು ವರ್ಷದ ಸಾರ್ಥಕ ಬದುಕು ಬಾಳಿ ಯಾರಿಗೂ ನೋವಾಗದಂತೆ ಮರೆಯಾದ ತಾಯಿಯಿಂದ ಕವಿ ಕಲಿತದ್ದು ವಿಶ್ವವಿದ್ಯಾಲಯ ಶಿಕ್ಷಣಕ್ಕಿಂತಲೂ ಮಿಗಿಲಾದದ್ದು. ಆಕೆಯ ಸಹನೆ, ತ್ಯಾಗ ಹಾಗೂ ಶ್ರಮದ ಬದುಕೇ ಆಕೆ ಬಗ್ಗೆ ಗೌರವ ಮೂಡಲು ಸಾಕಾಗುತ್ತದೆ. ಕವಿ ಈ ಎಲ್ಲ ಅಂಶಗಳನ್ನು ಹತ್ತಾರು ಕವಿತೆಗಳಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಇವರ 'ಅವ್ವ' ಕವನದಲ್ಲಿ ತಾಯಿಯ ಜೀವನ ನೋವಿರದ ಜೀವನ. ಆಕೆ ಮಾತು ವಚನಗಳಾಗಿ ನಮ್ಮನು ಕಾಪಾಡಿದವು. ಬಂದಂತೆ ನಗುನಗುತಾ ಹೊರಟು ಹೋದದ್ದನ್ನು ತಿಳಿಸುತ್ತಾ, ಆಕೆಯ ಸ್ಪರ್ಶ ಚೈತನ್ಯದ ಶಕ್ತಿ ಎಂದು ಭಾವಿಸಿದ್ದಾರೆ.

ಆಕೆ ಎತ್ತಿಕೊಂಡ ಮಗು ಎಂದೂ ಅಳಲಿಲ್ಲ
ಆಕೆ ಹಚ್ಚಿದ ಗಿಡ ಎಂದೂ ಬಾಡಲಿಲ್ಲ
ಆಕೆ ಯಾರಿಗೂ ಎಂದೂ ಬೇಸರವಾಗಲಿಲ್ಲಾ
ಆಕೆಯ ಮಾತುಗಳೆಲ್ಲ ವಚನಗಳಾಗಿದ್ದವು
ಬಂದಂತೆಯೇ ಆಕೆ ನಗುನಗುತ ಹೊರಟು ಹೋದಳು. [೮೮]

ಆಕೆ ಯಾರಿಗೂ ಕೇಡುಬಯಸದೆ, ಸ್ವಾರ್ಥಿಯಾಗದೆ ಎಲ್ಲರೊಳಗೊಂದಾಗಿ ಬಾಳಿ ಬದುಕು ಮುಗಿಸಿದ್ದನ್ನು ಕವಿ ಸೂಚ್ಯವಾಗಿ ತಿಳಿಸಿದ್ದಾರೆ. ಇಲ್ಲಿ 'ಆಕೆ ಎತ್ತಿಕೊಂಡ ಮಗು' ಎಂಬ ಮಾತು ಆಕೆಯ ಪ್ರೀತಿ ವಾತ್ಸಲ್ಯದೊಂದಿಗೆ ಪೋಷಿಸಿದ್ದನ್ನು ಧ್ವನಿಸುತ್ತದೆ.

ತಾಯಿ ಸಹನೆಯ ಮೂರ್ತಿ. ಆಕೆ ಜೀವನದುದ್ದಕ್ಕೂ ಕಷ್ಟವನ್ನೆ ಹಾಸು ಹೊದ್ದವಳು. ಅವಳ ಆ ಸಹನೆಯೇ ನಾನಿಷ್ಟು ಗಟ್ಟಿಯಾಗಿ ನಿಂತು ಬದುಕಲು ನೆರವಾಗಿದೆ ಎಂದು ತಾಯಿಯ ದಾರಿದ್ರ್ಯದ ಬದುಕಿನ ಚಿತ್ರವನ್ನು ಬಿಡಿಸುವ ಕವಿತೆ 'ಅವ್ವ: ಮತ್ತು ವಿಶ್ವವಿದ್ಯಾಲಯ' ದಲ್ಲಿ ಹೇಳಿದ್ದಾರೆ.

ನಾನೆಂದೂ ನೀನು ರೇಷ್ಮೆ
ಸೀರೆ ಉಟ್ಟಿದ್ದನ್ನು ನೋಡಲಿಲ್ಲ
ನಿನ್ನ ಮೈಮೇಲೆ ಗುಂಜಿ ಕಾಳಿನಷ್ಟು
ಬಂಗಾರವನೆಂದೂ ಕಾಣಲಿಲ್ಲ.
ಎಂದೂ ಶಾಂತವಾಗಿ ಒಂದೆಡೆ
ಕೂತಿದ್ದನ್ನು ಕಡೆಯವರೆಗೂ ನೋಡಲಿಲ್ಲ
. . . .
ಹೇಳು: ಹೃದಯದ ಯಾವ ಮೂಲೆಯಲ್ಲಿ
ನಿನ್ನ ಹೆಸರನ್ನು ಕೊರೆದುಕೊಳ್ಳಲಿ?
ಅಥವಾ ಜಗತ್ತಿನ ಅದ್ಯಾವ ವಿಶ್ವವಿದ್ಯಾಲಯವನ್ನು
ನಿನ್ನ ಹೆಸರಿನಿಂದ ಕರೆಯಲಿ? [೮೯]

ಈ ಕವಿತೆಯನ್ನು ಅನುಭವಿಸಿದಾಗ ನೆನಪಾಗುವ ಸಾಲುಗಳೆಂದರೆ 'ಮನೆಯೆ ಮೊದಲ ಪಾಠ ಶಾಲೆ, ಜನನಿ ತಾಯೆ ಮೊದಲ ಗುರುವು, ಜನನಿಯಿಂದ ಪಾಠ ಕಲಿತ ಜನರು ಧನ್ಯರು' ನೆನಪಾಗದೆ ಉಳಿಯದು. ತಾಯಿಯಿಂದ ಪಡೆದ ಶಿಕ್ಷಣ ಯಾವ ವಿಶ್ವವಿದ್ಯಾಲಯದಿಂದಲೂ ಪಡೆಯಲಾರದ ಶಿಕ್ಷಣ ಎಂಬುದನ್ನು ಕವಿ ಅಭಿಮಾನದಿಂದ

ತಿಳಿಸಿದ್ದಾರೆ. ಆ ತಾಯಿ ಪಾಡು ಪಟ್ಟು ಬದುಕನ್ನು ನಿರಾಕರಿಸದೆ ಸವಾಲಾಗಿ ಸ್ವೀಕರಿಸಿದ್ದ ಆಕೆಯ ಸಹನೆಗೆ ಸಾಕ್ಷಿಯಾಗಿದೆ.

ಅವ್ವನ ಅನಿಸಿಕೆಯ ಪ್ರತಿರೂಪವಾಗಿ ಕವಿ ವಿದ್ಯೆ ಕಲಿತು ದೊಡ್ಡವನಾಗಲು ಆಕೆಯ ಆಸಕ್ತಿಯೇ ಕಾರಣವೆಂಬುದು ಇದೇ ಕವಿಯ 'ಅವ್ವ: ಒಂದು ಅನಿಸಿಕೆ' ಕವಿತೆಯಲ್ಲಿ ವ್ಯಕ್ತವಾಗಿದೆ. ಶಾಲಾ ದಿನಗಳಲ್ಲಿ ತನ್ನ ಮಗ ಓದಬೇಕೆಂಬ ಆಸೆ ಹೊತ್ತು ಶಾಲೆಯವರೆಗೂ ಹೋಗಿ ಮಾಸ್ತರನ್ನು ಭೇಟಿಯಾದ ಘಟನೆ ಕವಿಯ ಮೇಲೆ ಬೀರಿರರುವ ಪ್ರಭಾವ ಶಾಶ್ವತವಾಗಿದೆ.

ನನಗಾಗಿ ಕೇವಲ ಒಂದೇ
ಒಂದುಸಲ ನೀನು
ಶಾಲೆಗೆ ಬಂದೆ: ನನ್ನ ಅಭ್ಯಾಸದ
ಬಗೆಗೆ ಮಾಸ್ತರರಿಗೆ ಕೇಳಲು
ಅಷ್ಟೇ ಸಾಕಾಗಿತ್ತು:
ಆ ನಿನ್ನ ಆಸಕ್ತಿಯೇ ನನ್ನನ್ನು
ಇಲ್ಲಿಯವರೆಗೆ ಕರೆದು ತಂದಿತು
ಎಂ.ಎ.
ಪಿಎಚ್.ಡಿ.ಗಳನ್ನು ಅದು
ಸಹಜವಾಗಿ ಗೆಲ್ಲಿಸಿತು. [೮೦]

ತಾಯಿಯ ವಾತ್ಸಲ್ಯ ಆಕೆ ಶಾಲೆಯವರೆಗೂ ಎಳೆತಂದು, ತನ್ನ ಮಗನ ಓದು ಹೇಗೆ ನಡೆಯುತ್ತಿದೆ ಎಂಬುದನ್ನು ತಿಳಿಯುವ ಕಾತುರತೆಗೆ ಪಕ್ಕಾದದ್ದು ಮಗನಿಗೆ ಶ್ರೀರಕ್ಷೆಯಾಗಿ ಆತ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಯಿತೆಂಬ ಕೃತಜ್ಞತೆಯ ಭಾವ ಇದರಲ್ಲಿದೆ.

ತಾಯಿಯ ನಿಧನದ ಕ್ಷಣ ಕವಿಗೆ ಇಡೀ ಜಗತ್ತೆ ದುಃಖಿಸಿದಂತಾಯಿತು. 'ಅವ್ವ : ಮಣ್ಣಿಗೆ ಮಣ್ಣು' ಕವಿತೆ 'ಅವ್ವ'ನ ಮುಂದುವರಿದ ಭಾಗದಂತೆ ಕಾಣುತ್ತದೆ. ಎಂಬತ್ತು ದಾಟಿದ ದಿನಗಳನ್ನು ಸಾರ್ಥಕವಾಗಿ ಪೂರೈಸಿದ ತಾಯಿ ಕಣ್ಮುಚ್ಚಿದಾಗ ಮಟಮಟ ಮಧ್ಯಾಹ್ನ ಧಾರಾಕಾರವಾಗಿ ಆಕಾಶ ಅಳಹತ್ತಿತು ಎಂಬ ಮಾತುಗಳಿಂದ ದುಃಖದ ತೀವ್ರತೆಯನ್ನು ಚಿತ್ರಿಸಿದ್ದಾರೆ.

ಮಾಗಿದ ಎಲೆ
ತೊಟ್ಟು ಕಳಚಿ
ತನ್ನಷ್ಟಕ್ಕೆ ತಾನೆ ಕೆಳಬಿದ್ದಂತೆ
ಎಂಬತ್ತು ದಾಟಿದ ನನ್ನ ಅವ್ವ
ಒಂದು ದಿನ
ಒಮ್ಮಿಂದೊಮ್ಮೆಲೇ ಕಳಚಿ ಬಿದ್ದಳು
. . . .
ಮಟಮಟ ಮಧ್ಯಾಹ್ನ
ಧಾರಾಕಾರವಾಗಿ ಆಕಾಶ ಅಳಹತ್ತಿತು. [೮೧]

ಇದೊಂದು ಸುಂದರ ರೂಪಕವಾಗಿ ತಾಯಿ ಅಗಲಿಕೆಯ ದುಃಖ ಕಣ್ಣಿಗೆ ಕಟ್ಟಿದಂತಿದೆ.

'ಅವ್ವ' ಸತ್ತ ದಿನ, ಮರುದಿನ, ಅದೆಷ್ಟೋ ದಿನ 'ಕವಿತೆ ಮೂರು ಹಂತಗಳಲ್ಲಿ ಬಿಚ್ಚಿಕೊಳ್ಳುತ್ತದೆ. ಅವ್ವ ಸತ್ತ ದಿನ ಇಡೀ ಪ್ರಕೃತಿಯೇ ದುಃಖದಲ್ಲಿ ಭಾಗಿಯಾಗಿತ್ತು. ಸ್ತಬ್ಧವಾಗಿ ಚಲನೆ ಇಲ್ಲದ ಪ್ರಕೃತಿಯಿಂದ ಪಂಚ ಭೂತಗಳಿಗೆಲ್ಲ ಸ್ಟ್ರೋಕ್ ಆದಂತೆ ಆಗಿತ್ತು.

ಅವ್ವ ಸತ್ತ ದಿನ ಮನಗಳೆಲ್ಲ ಬಿರುಕುಬಿಟ್ಟು, ಮನೆಯ ತುಂಬ ಗೋಡೆಗಳೆದ್ದು ಮಮತೆ ಗಡಿಪಾರಾದಂತೆ ಇತ್ತು. ಆಕೆ ಸತ್ತ ಎಷ್ಟೋ ದಿನಗಳ ನಂತರ ಬಾನಿನಲ್ಲಿ ಹೊಸ ಚುಕ್ಕಿ, ಚಂದ್ರಮನ ಆಗಮನದಿಂದ ಸತ್ತ ಅವ್ವಳೇ ಮತ್ತೆ ಮೂಡಿ ಬೆಳಕು ಹರಿಸಿದಂತೆ ಕವಿಯ ಬಾಳ ವಿಕಾಸದಲ್ಲಿ ತಾಯಿಯ ಪ್ರೀತಿಯೇ ಚೈತನ್ಯ ಶಕ್ತಿಯಾಗಿ ಕಾಪಾಡಿದಂತೆ ಕಾಣುತ್ತದೆ.

ಅವ್ವ ಸತ್ತ ದಿನ: ಮಟಮಟ ಮಧ್ಯಾಹ್ನದಲ್ಲಿಯೇ
ಮುಳುಗಿ ಹೋದ ಸೂರ್ಯ; ಆವರಿಸಿತು ಕತ್ತಲೆ
ಬಾನೆಲ್ಲ ಖಾಲೀ ಖಾಲೀ; ಇದ್ದ ಚುಕ್ಕಿಗಳೆಲ್ಲ
ಒಮ್ಮಿಂದೊಮ್ಮೆಲೇ ಕಣ್ಣಿನಿಂದ ಮರೆಯಾಗಿ ಹೋದವು.
. . . .
ಸತ್ತ ಅವ್ವಳೇ ಮತ್ತ ಮೂಡಿ
ಬದುಕಿನಲ್ಲಿ ಬೆಳಕು ಹರಿಸಿದಳು. [೮೨]

ಸರಜೂರವರು ಇಡೀ ಕೃತಿಯಲ್ಲಿ ತನ್ನ ಅವ್ವನ ಸ್ಥಿತಿಗತಿಯೊಂದಿಗೆ ಆಕೆಯ ಮನದಾಳದ ಮಾತೃತ್ವದ ಹಿರಿಮೆಯನ್ನು ಧನ್ಯತೆಯ ಭಾವದಿಂದ ಕಂಡಿದ್ದಾರೆ.

ಎಸ್.ಜಿ. ಸಿದ್ಧರಾಮಯ್ಯನ 'ಮರುಜೇವಣಿ' ಕೃತಿಯಲ್ಲಿ ಬರುವ 'ಅವ್ವ' ಜನಪದ ಶೈಲಿಯಿಂದ ಗಮನ ಸೆಳೆಯುವ ಕವಿತೆಯಾಗಿದೆ. ಗ್ರಾಮೀಣ ಪರಿಸರದಲ್ಲಿ, ಬಡತನದ ಬಾಳಿನಲ್ಲಿ, ಮನತನದ ಏಳ್ಗೆಗಾಗಿ ತನ್ನನ್ನು ಒಡ್ಡಿಕೊಂಡು ಬದುಕನ್ನು ಹೋರಾಟದಂತೆ ಕಂಡ ತಾಯಿಯ ಬಗ್ಗೆ ಹೇಳುತ್ತಾ 'ನಿನ್ನ ಸಂಗಾತಿಯಾಗಿಯೆ ನಿಂತವರು ಎತ್ತ ಹೋದರು? ನಿನ್ನ ಹೆಜ್ಜೆಯೊಂದಿಗೆ ಹೆಜ್ಜೆ ಹಾಕಬೇಕಿದ್ದವರು ಏನಾದರೆಂಬ' ನೋವು ನಿರಾಶೆಯ ಭಾವನೆಯನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಚಿತ್ರಿಸಿದ್ದಾರೆ. ಕುಲದ ಹಿರಿಮೆಗೆ ಬದ್ಧಳಾಗಿ, ಸರೀಕರೆದುರು ತಲೆಬಾಗದೆ, ಸಂಗಾತಿಯ ನೆರವಿಲ್ಲದೆ, ಜೀವವನ್ನು ಬೆಳಕು ಕಾಣುವ ಕನಸಿನೊಂದಿಗೆ ಸವೆಸಿದ್ದನ್ನು ಇಲ್ಲಿ ಗ್ರಾಮೀಣ ಶೈಲಿಯಲ್ಲಿ, ರೈತಾಪಿ ಜನರ ಬಾವುಣಿಕೆಯ ಭಾವನೆಯಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ.

ಎತ್ತ ಹೋದರು ತಾಯೆ ನಿನ್ನ ಹೆಜ್ಜೆಯ ಗೆಜ್ಜೆ
ಮತ್ತೆ ಬಂದನೆ ಅವ್ವ
ಆದಿ ಅಂತ್ಯವಿಲ್ಲದ ಅಂತಃಕರಣದ ಬಳಿಗೆ
ಸೋತವನ ಕೈ ಹಿಡಿದು ಎದೆಗವಚಿ
ಮೈದಡವಿ ನೆತ್ತಿ ಮೂಸುವ ನಿಲುವು
ಸಾಕೆನಿಸುವಷ್ಟು ಕೈ ತುತ್ತು

. . . .

ಬೋಧಿ ಗುರುವಿನ ಮಾತನುಂಗಿದ ಬೆಳಕೆ
ಗಾಂಧಿ ತಾತನ ಮಾತಿನಲಿ ಮಿಂಚಾದ ಸೆಳಕೆ
ಎಲ್ಲಿದ್ದೆ ಎಲೆ ತಾಯೆ
ಎತ್ತ ಹೋದರು ಸುತ್ತಿ ಮೊರೆಯುವ
ಹೆಜ್ಜೆ ಗೆಜ್ಜೆಯ ಸಾಲೆ.[೮೩]

ಗ್ರಾಮೀಣ ಪರಿಸರದಲ್ಲಿ ಸ್ವಾಭಿಮಾನದ ಬದುಕಿಗೆ, ಮನೆತನದ ಏಳ್ಗೆಗೆ ಮನಸ್ಸಿಟ್ಟು ಬದುಕಿನಲ್ಲಿ ಎದುರಾದ ಎಲ್ಲ ಕಷ್ಟಕೋಟಲೆಗಳನ್ನು ಸಹಿಸಿ ಹೋರಾಟದ ಬದುಕಿಗಾಗಿ ಶ್ರಮಿಸಿದ ಈ 'ತಾಯಿ' ನಿದರ್ಶನವಾಗಿದ್ದಾಳೆ. ಗ್ರಾಮೀಣ ಸಂವೇದನೆಯ ಈ ತಾಯಿಯ ಚಿತ್ರ ನೀಡುವಲ್ಲಿ ಕವಿ ಅದಕ್ಕೆ ಇಂಬಾಗಿ ನಿಲ್ಲುವ ಭಾಷೆ, ಭಾವನೆಗಳನ್ನು ನೀಡಿ ವಿಶಿಷ್ಟ ಕವಿತೆಯಾಗಿಸಿದ್ದಾರೆ.

ವಿ. ಮುನಿವೆಂಕಟಪ್ಪನವರ 'ಹಡೆದವ್ವ' ಕವಿತೆ ಮುಗ್ಧ ತಾಯಿಯ ಚಿತ್ರಣವಾಗಿದೆ. ಕುಗ್ರಾಮದಲ್ಲಿ ಹುಟ್ಟಿ, ಕೂಲಿನಾಲಿ ಮಾಡಿ ಜೀವನ ನಿರ್ವಹಿಸಿದ ಗ್ರಾಮ್ಯಳು. ನಿಸರ್ಗದ ಮಡಿಲಲ್ಲಿ ಬೆಳೆದು, ಉಳ್ಳವರ ಹೊಲಗದ್ದೆಗಳಲ್ಲಿ ದುಡಿದು ದಣಿದವಳು. ಬೇನೆ ನಿವಾರಿಸಲು ಹಸಿರು ಸೊಪ್ಪಿನ ರಸ ಕುಡಿದವಳು. ಮಂತ್ರಕ್ಕೆ ಮೊರೆ ಹೋದವಳು. ಹಗಲುಗನಸಿನ ಕೂಸು. ಅವಳ ಮನಸ್ಸು ಮಗುವಿನಂತಹುದು. ನಿರ್ಮಲ, ನಿಷ್ಕಪಟ. ಆದರೂ ಸುಖ ಕಾಣದೆ, ಸೆರಗೊಡ್ಡಿ ಬೇಡಿ ಹೊಟ್ಟೆ ತುಂಬಿಸಿಕೊಂಡ ಸಾಧ್ವಿ ಎಂದು ಬಣ್ಣಿಸಿದ್ದಾರೆ.

ದೆಹಲಿ ಗೊತ್ತಿಲ್ಲ ದಗಾ ಗೊತ್ತಿಲ್ಲ
ನಗರ ಗೊತ್ತಿಲ್ಲ ನಾಜೂಕು ಗೊತ್ತಿಲ್ಲ
ದಿಕ್ಕದಿಕ್ಕಿಗೂ ಕೈಮುಗಿದವಳು
ಹಗಲುಗನಸಿನ ಕೂಸು ಹಡೆದವ್ವ

. . . .

ಕತ್ತಲಲ್ಲೇ ಕರಗಿದವಳು
ನೀರಿನಂತೆ ನಡೆದವಳು
ಭೂಮಿಯಂತೆ ಬದುಕಿದವಳು
ನಲವತ್ತೇಳರ ಸ್ವಾತಂತ್ರ್ಯ ಗೊತ್ತಿಲ್ಲದವ್ವ
ಹಗಲುಗನಸಿನ ಕೂಸು ಹಡೆದವ್ವ[೮೪]

ದಲಿತ ವರ್ಗದಲ್ಲಿ ಹುಟ್ಟಿ ಬದುಕಿನ ಅಸಮಾನತೆಯ ನಡುವೆಯೂ ಅಸಮಾನ್ಯಳಾಗಿ ಬಾಳಿ ಬದುಕಿದ, ಏನೂ ತಿಳಿಯದ ಮುಗ್ಧೆ. ನಯ ನಾಜೂಕಿನ ತಳುಕು ಗೊತ್ತಿಲ್ಲ. ಕನಸು ಮಾತ್ರ ಕೈಬಿಡದೆ ಹಸನಾದ ಬದುಕಿಗೆ ಹಗಲಿರುಳು ಶ್ರಮಿಸಿದವಳು. ಸ್ವಾತಂತ್ರ್ಯದ ಸುಖ ಕಾಣದೆ, ಭೂಮಿಯಂತೆ ಸಹನೆಯ ಸಾಕಾರವಾಗಿ ಬದುಕಿದ್ದವಳು ಈ ತಾಯಿ ಎಂದು ಬಣ್ಣಿಸಿದ್ದಾರೆ.

'ಹಸಿವು ಅವಮಾನ' ನಮ್ಮ ಜಾತಿ ವ್ಯವಸ್ಥೆಗೆ ಹಿಡಿದ ಕನ್ನಡಿ. ಇಂತಹ ಕವಿತೆ ಸಾಮಾಜಿಕ ಅವಮಾನಕ್ಕೆ ಒಳಗಾದವರಿಂದ ಹುಟ್ಟಲು ಸಾಧ್ಯ

ಬಿರಿದ ನೆಲ ಬೆಂದ ದಿನಗಳು
ಬಂಗಾರ ಬೆಳೆವ ಬೀಡು
ಬಸಿದ ಜಲ ನೊಂದ ಜೀವಗಳು
ಬತ್ತಿದ ನದಿಗಳ ನಾಡು
. . . .
"ಉತ್ತಮರ ಕಲ್ಯಾಣಿ ಬಾವಿಗೆ
ಇಳಿಯಬಾರದಲ್ಲವ್ರು ಕೆಟ್ಟ
ಜಲ್ಮ ನಮ್ಮದು" ಎಂದು
ಅವ್ವ ಉಸಿರುಗರೆದಳು.[೭೫]

ಬರಗಾಲದ ದಿನಗಳಲ್ಲಿ ಬಂಗಾರ ಬೆಳೆವ ನಾಡೂ ಸುಡುಗಾಡಾದಾಗ ಒಮ್ಮೆ ಬಿರಿಬಿಸಿಲ ಬೇಗುದಿಯಲ್ಲಿ ಬಾಯಾರಿದ್ದ ವ್ಯಕ್ತಿ ನಿಸರ್ಗ ಸಹಜವಾಗಿ ಮೈದುಂಬಿಕೊಂಡಿದ್ದ ಕಲ್ಯಾಣಿಗೆ ಹೋಗಿ ನೀರು ಕುಡಿದು ಹಸಿವು - ನೀರಡಿಕೆ ನೀಗಿಕೊಳ್ಳಲು ಯತ್ನಿಸಿದಾಗ ಸವರ್ಣೀಯರು ಬೆನ್ನಾಡಿ ಬಡಿದ ಹೃದಯ ವಿದ್ರಾವಕ ಚಿತ್ರ ಇಲ್ಲಿ ಅನಾವರಣಗೊಳ್ಳುತ್ತದೆ. ಅಂತಹ ಸಂದರ್ಭದಲ್ಲಿ ಹಟ್ಟಿಯಲ್ಲಿ ಮಿಣುಕು ದೀಪದ ಬೆಳಕಿನಲ್ಲಿ ಮುದ್ದು ಮಾತೆ ಬೆನ್ನಮೇಲೆ ಹಸ್ತ ಸವರುತ್ತಾ 'ಉತ್ತಮರ ಕಲ್ಯಾಣಿ ಬಾವಿಗೆ ಇಳಿಯಬಾರದಲ್ಲವ್ರು. ಕೆಟ್ಟ ಜಲ್ಮ ನಮ್ಮದು' ಎಂದು ನಿಟ್ಟುಸಿರುಗರೆದ ಅವ್ವನ ನೆನಪು ಬದುಕಿನ ದೂರ ಪ್ರಯಾಣದಲ್ಲೂ ಕಣ್ಣಿಗೆ ಕಟ್ಟುವಂತಿದೆ ಎಂದು ಮೆಲುಕು ಹಾಕುತ್ತಾ ನಮ್ಮ ಜಾತಿ ವ್ಯವಸ್ಥೆಯ ಕರಾಳ ಮುಖದ ದರ್ಶನ ಮಾಡಿಸುತ್ತಾರೆ.

ಮತೀಯ ವಾದಿಗಳು ಈ ನೆಲವನ್ನು ದಲಿತರ ಕಣ್ಣೀರಿನಿಂದ ತೊಯ್ಸಿದ ದೈತ್ಯರು. ಇವರ ಅಟ್ಟಹಾಸದ ಎದುರು ಎಷ್ಟು ಅಮಾಯಕರ ನಿಟ್ಟುಸಿರು ಹರಿದಿದ್ದಾವೊ. ನೊಂದ ಜನರ ನೋವೆ ಹಾಡಾಗಿ ಹರಿದ ಇಲ್ಲಿನ ಚರಿತ್ರೆ ಕರಾಳವಾದದ್ದು ಎಂಬುದನ್ನು ಈ ಕವಿತೆಯಲ್ಲಿ ಗ್ರಹಿಸಬಹುದು. ಇಂತಹ ಉಸಿರುಗಟ್ಟಿದ ವಾತಾವರಣದಲ್ಲೂ ಬದುಕನ್ನು ಸವಾಲಾಗಿ ಸ್ವೀಕರಿಸಿದ ಮುಗ್ಧ ಹೆಣ್ಣುಗಳಲ್ಲಿ ಮಾತೃತ್ವದ ಅಂತಃಕರಣ ಬತ್ತದೆ ಇರುವುದನ್ನು ಇಲ್ಲಿ ಕಾಣಬಹುದು.

ದಲಿತರ ಬದುಕು ನೋವಿನ ಬದುಕು. ಉಳ್ಳವರ ಗತ್ತಿಗೆ ಸಿಕ್ಕಿ, ಗಂಜಿಗಾಗಿ ಒದ್ದಾಡಿ, ಶ್ರಮವನ್ನೆ ಧಾರೆ ಎರೆದು ಧಣಿಗಳನ್ನು ಬೆಳೆಸಲೋಸುಗ ಕೊರೆವ ಚಳಿಯಲ್ಲಿ ನಡುಗಿ, ಸುಡುವ ಬಿಸಿಲಲಿ ಬೆಂದು, ಬದುಕು ನಿರಾಕರಿಸದೆ, ಸಂಬಂಧಗಳನ್ನು ಕಳಚಿಕೊಳ್ಳದೆ ಸಮಾಜಕ್ಕೆ ಆದರ್ಶವಾಗಿ ನಿಂತವರು. ಶ್ರಮ ಸಂಸ್ಕೃತಿಯ ಹರಿಕಾರರು. ಹಾಗಾಗಿ ಅವರ ನೋವೇ ಕಾವ್ಯವಾಗುತ್ತದೆ. ಅದರಲ್ಲಿ ಆ ಕುಟುಂಬದ ಬೇಗೆ ಕಣ್ಣಿಗೆ ರಾಚುತ್ತದೆ. ಅಪ್ಪ, ಅವ್ವ, ಅಣ್ಣ, ತಮ್ಮ, ಅಕ್ಕ, ತಂಗಿ, ಮಡದಿ, ಮಕ್ಕಳ ಬಿಡಿಸಿಕೊಳ್ಳಲಾರದ ಪ್ರೀತಿಯ ಕೊಂಡಿ ಬಿಗಿಯಾಗಿರುವುದು ಕಾಣುತ್ತದೆ. ಈ ಎಲ್ಲದರ ಹಿಂದೆ ತಾಯಿಯ ತ್ಯಾಗ, ಹೋರಾಟ ನಿಚ್ಚಳವಾಗಿರುತ್ತದೆ ಎಂಬ ಅಂಶ ದಲಿತ ಕವಿ ಎ.ಕೆ. ಹಂಪಣ್ಣನವರ 'ಅವ್ವ' ಕವಿತೆ ಒಳಗೊಂಡಿದೆ.

ಆದರೆ . . . . . . ನಾನೊಮ್ಮೆ ನನ್ನ
ನೆತ್ತರ ಮಡುವಿನಲ್ಲಿ ಬಿದ್ದಾಗಲೊಮ್ಮೆ
. . . .

ಅವ್ವ ಅವರಿವರ ಆಸೆಗಳ ತಲೆಯ ಮೇಲೊತ್ತಿ
ಅವರಿವರ ಮನೆಮಾಡು ತೊಲೆ ಕಂಬಗಳಿಗೆ ತೆರಳಿ
ಮಬ್ಬು ಮುಂಜಾನೆ ಕನಸುಗಳ ಗುಡಿಸುತ್ತಾ
ಚಿತೆಯೇ ಚಿಂತೆಗಳಾದವು ಬಿಡು ಬಿಗುಮಾನ
ಅವ್ವ ಮಾಡುತ್ತಿದ್ದ ಅಡುಗೆ ಗೊತ್ತೆ
ಬೆಳದಿಂಗಳ ಬೆಂಕಿಯಲ್ಲಿ ಸೊಪ್ಪ ಕುದಿಸಿ
ಚಿಟಕಿ ಉಪ್ಪು ಬೆರೆಸಿ ಉದುಕ ಕುಡಿದದ್ದು
ಮಾತ್ರ ಸೂರ್ಯನಷ್ಟು ನೆಪ್ಪು [೮೧]

ಅಲೆಮಾರಿ ಬದುಕಿಗೆ, ರಂಗವಲ್ಲಿ ಬರೆದು ನೆಮ್ಮದಿ ತರುವಂತೆ ಮಡದಿ ಮಾತಂಗಿಯಲ್ಲಿ ಕಳಕಳಿಯ ನಿವೇದನೆಯೊಂದಿಗೆ ಅವ್ವ – ಮಡದಿಯರ ತಲೆಮಾರಿನ ಅಂತರದ ಚಿತ್ರವಿದೆ. ಅವ್ವ ದಿನಗಟ್ಟಲೆ ಬೇಲಿ ಮುರಿದು ಸೌದೆಯನ್ನು ಸೊಂಟ ಮುರಿಯ ಹೊತ್ತ ಇಪ್ಪತ್ತು ದಿನದ ಬಾಣಂತಿಯ ಚಿತ್ರ ಕರುಳು ಕಿವುಚುತ್ತದೆ.

ಇಲ್ಲಿನ ಭಾಷೆ, ಶೈಲಿ, ದಲಿತ ಜನರ ನೋವನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿವೆ. ಪ್ರಾಸದ ಮೋಹವಾಗಲೀ, ಕಲ್ಪನೆಯ ರಂಗಾಗಲೀ, ಆರಾಧನೆಯ ವೈಭವವಾಗಲೀ ಇಲ್ಲದೆ ತಾಯಿಯ ಚಿತ್ರ ಯತ್ತಾವತ್ತಾಗಿ ಮೂಡಿಬಂದಿದೆ. ಯಾತನೆಯ ನೆನಪು ಕಾವ್ಯವಾಗಿ ರೂಪು ತಾಳಿದೆ. ದಲಿತ ಸಂವೇದನೆಗೆ ನಿದರ್ಶನವಾಗಿದೆ.

ಆದಿಮರಿಗೆ ಸಾಮಾಜಿಕವಾಗಿ ನೆಮ್ಮದಿ, ಸುಖವೆಂಬುದಿಲ್ಲ. ಬೇಗುದಿಯ ಬದುಕಿನಲ್ಲಿ ನಿರಂತರ ನರಳಬೇಕಾದ ಕಠೋರತೆಯನ್ನು 'ಇವತ್ತಿಗೆ ಇಷ್ಟು ಸಾಕು' ಕವಿತೆ ಬಿಂಬಿಸುತ್ತದೆ.

ತಾಯ ಗರ್ಭದಲ್ಲಿ
ಎಷ್ಟೊಂದು ಸುಖವಿತ್ತು
ನದರಿತ್ತು ಹೊತ್ತು
ಗೊತ್ತಿಲ್ಲದೆ ಕೈಕಾಲು
ಆಡಿಸಿದ ದಿನಗಳೆಷ್ಟು? [೮೨]
. . . .

ದಲಿತರು ಇಲ್ಲಿ ಹುಟ್ಟುವುದಕ್ಕೆ ಹಿಂಸೆ ಪಡುತ್ತಾರೆ. ಅವರ ಕಲ್ಪನೆ, ಕನಸುಗಳು ಇಲ್ಲಿ ಚಿಗುರಲಾರವು. ಗುಡಿಸಲು ನೆಲಕಚ್ಚಿ ಮಹಲುಗಳು ಮೆರೆದಿರುವ ಈ ಸಮಾಜದಲ್ಲಿ ಆದರ್ಶಗಳು ನಗೆಪಾಟಲಿಗೆ ಗುರಿಯಾಗಿವೆ. ಹಾಗಾಗಿ ಈ ಭೂಮಿಗೆ ಕಾಲಿಡುವುದರ ಸುಖಕಿಂತ ತಾಯ ಒಡಲಲ್ಲೇ ಸುಖವಿದೆ, ಹಿತವಿದೆ ಎಂಬ ಮಾತುಗಳಿಂದ ಇಲ್ಲಿ ಹುಟ್ಟಿರುವುದಕ್ಕೆ ಪಶ್ಚಾತ್ತಾಪ ಪಡುತ್ತಾನೆ ಕವಿ. ಇಲ್ಲಿನ ಬರವಣಿಗೆಯಲ್ಲಿ ಕರುಳು ಹಿಂಡುವ ಚಿತ್ರವಿದೆ. ದಲಿತ ಬದುಕಿನ ಸ್ಥಿತಿಗತಿಯನ್ನು ತೆರೆದಿಡುತ್ತದೆ.

ಎನ್. ನಾಗಪ್ಪ 'ಸಾಕವ್ವ' ಎಂಬ ಕವಿತೆಯಲ್ಲಿ ತಮ್ಮ ಬದುಕಿನ ಅನುಭವವನ್ನು ಕಂಡರಿಸಿದ್ದಾರೆ. ಈ ಕವಿತೆ ನಾಲ್ಕು ಮಟಗಳಿಂದ ಕೂಡಿರುವ ನೀಳ್ಗವಿತೆ. "ಹಿಟ್ಟು ಬಟ್ಟೆಗಾಗಿ ಪಾಡುಪಟ್ಟು ಪಾಡ ಹಾಡಾಗಿಸಿದ ಹಡೆದವ್ವನ ಬೆಂದೊಡಲ ಬಗೆಗೆ ನೆನಹಿನ

ಬಟ್ಟೆ ನೇಯುವ ಹವಣಿಕೆ ಇದಾಗಿದೆ' ಎಂದಿರುವ ಎಸ್.ಜಿ.ಸಿದ್ಧರಾಮಯ್ಯನ ಮಾತುಗಳಿಗೆ ಸಾಕ್ಷಿಯಾಗಿದೆ. ಹಸಿವು ಅವಮಾನಗಳಿಂದ ನೊಂದು ಬೆಂದ ಸಾಕವ್ವನ ಒಂದೊಂದು ನುಡಿಯೂ ನಿಟ್ಟುಸಿರ ಬೇಗುದಿಯಾಗಿ ಕಾಣುತ್ತದೆ. ಇಲ್ಲಿನ ಕಠೋರ ಸಾಮಾಜಿಕ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಹಡೆದಡೆದು ಹಡೆದಷ್ಟೂ
ಹಡೆಯುವಾಸೆಯೊತ್ತು
ಹಡೆದದ್ದು ಹನ್ನೆರಡೂ
ಅಳಿದುಳಿದದ್ದು ಇಡಗಂಟಾಗಿ
ಯಡವಟ್ಟಿನ – ಯೆಂಟೂ.

ಹೀಗೆ ಪ್ರಾರಂಭವಾಗುವ ಕವಿತೆ ಇಡೀ ಕುಟುಂಬದ ಚಿತ್ರವನ್ನು ಅನಾವರಣಗೊಳಿಸುತ್ತದೆ. ಶ್ರಮಸಂಸ್ಕೃತಿಯ ಹಿನ್ನೆಲೆಯಿಂದ ಬಂದ ಹೆಣ್ಣಿನ ಸಾಹಸದ ಗಾಥೆ ಇಲ್ಲಿದೆ.

ಮೈಯ್ಯ ಬೆವರ ಹನಿ
ಹನಿಯಲ್ಲಿದು ನೆತ್ತರಬನಿ
ಹೆತ್ತವಳ ಕನಸೊಂದು
ಮನೆ ಮುರುಕ ಮೂಗರುಕ
ಸರೀಕರ ಮುಂದೆ ದಿಟ
ಬದುಕ ಬದುಕಿದ ಸಾಕವ್ವ
ನೀ ಈ ನೆಲದವ್ವ ಕಣೇ.೮೮
. . . .

ಭವಿಷ್ಯದ ಕನಸು ಕಟ್ಟಿ ಮಕ್ಕಳನ್ನು ಜತನವಾಗಿ ಪೋಷಿಸಿ, ಶಿಕ್ಷಣವನ್ನು ನೀಡಿ ಬೆಳೆಸಿದ ತಾಯ ಕಣ್ಣೆದುರೇ ಮಕ್ಕಳು ಮೂರಾ ಬಟ್ಟೆಯಾದ ಸನ್ನಿವೇಶದಿಂದ ಆಕೆಯ ಎದೆಯಾಳದಲ್ಲಿ ಉಂಟಾಗುವ ಕ್ಷೋಭೆಯನ್ನು ಊಹಿಸಿದಾಗ ಆ ತಾಯಿಯ ಬಗ್ಗೆ ಕಣ್ಣು ಒದ್ದೆಯಾಗುತ್ತವೆ.

ಕವನವನ್ನೇ ಬರವಣಿಗೆಯ ಮಾಧ್ಯಮ ಮಾಡಿಕೊಂಡಿರುವ ಹೊಸ್ಕೆರೆ ಎಸ್. ಶಿವಸ್ವಾಮಿಯವರ 'ಅಮ್ಮ' ಕವಿತೆ ಗಮನ ಸೆಳೆಯುತ್ತದೆ. ಭಾಷೆ, ಭಾವನೆಯ ದೃಷ್ಟಿಯಿಂದಲೂ ಬಡತನದ ಕರಾಳ ಮುಖವನ್ನು ಪರಿಚಯಿಸುತ್ತದೆ.

ನನ್ನಮ್ಮ ಬಿಳಲು ಬಿಡುವ ಆಲ,
ವಿಸ್ತಾರ ಅಬ್ಧಿ!
ಪಾತಾಳದಾಳಕ್ಕೆ ಇಳಿದ ಒಲವಿನ
ಅಂತರಾಳದ ಸೆಲೆ ನನ್ನಮ್ಮ
. . . .
ಕುಂತಿ, ಸಾವಿತ್ರಿ, ಅರುಂಧತಿ, ಸೀತೆ
ಎಲ್ಲದರ ಮೂರ್ತರೂಪ ನನ್ನಮ್ಮ
"ನಿನ್ನಂತೆ ಪರರು" ಎಂಬುದ
ಕಲಿಸಿ ಕೊಟ್ಟಾಕೆ!

ಮಕ್ಕಳನ್ನು ಹಡೆದು, ಬಡತನದಲ್ಲೂ ಮಾತೃವಾತ್ಸಲ್ಯದ ತುತ್ತುಣಿಸಿ ಬೆಳೆಸಿದ ಈ ತಾಯಿ ಮಮತೆಯ ಮಹಾಪೂರವನೆರೆದವಳು. ಸಾರ್ಥಕ ಬದುಕು ಬಾಳಿದವಳು. ಬಡತನದಲ್ಲೆ ಸಮಸ್ಯೆಗಳನ್ನು ಎದುರಿಸಿ ಬಾಳಿದವಳು

ಸೋ.ಮು. ಭಾಸ್ಕರಾಚಾರ್ ರವರ 'ಅವ್ವನ ನೆನಪು' ತನ್ನ ತಾಯಿ ಸವೆಸಿದ ಹೆಜ್ಜೆಗಳನ್ನು ಗುರುತಿಸುವ ಕವಿತೆಯಾಗಿದೆ. " . . ಈ ಪದ್ಯ ಬಡವರ ಮನೆಯ, ಗ್ರಾಮೀಣ, ಅನಕ್ಷರಸ್ಥೆ ಗೃಹಿಣಿಯ ಚಿತ್ರವನ್ನು ಅಖಂಡವಾಗಿ ನಮ್ಮೆದುರು ನಿಲ್ಲಿಸುತ್ತದೆ. ಇದರಲ್ಲಿ ಅನಗತ್ಯವಾದ, ಕೇವಲ ಜಾಗ ತುಂಬುವುದಕ್ಕಾಗಿ ಬರೆದ ಒಂದು ಸಾಲೂ ಇಲ್ಲ. . . . . "[೯೦] ಎಂದು ವಿಮರ್ಶಕ ಎಚ್.ಜಿ. ಸಣ್ಣಗುಡ್ಡಯ್ಯನವರು ವಿಶ್ಲೇಷಿಸಿರುವ ಕವಿತೆ ಇದಾಗಿದೆ.

ನನ್ನವ್ವ :
ಹಳ್ಳಿಗಾಡಿನ ಮುಗ್ಧೆ
ಬಳ ಸಾಣೆಗೊಡ್ಡಿದ ಕಾಡ ಚಂದನ
ಊರವರಿಗೆ ಘನತೆಯ ಹೆಣ್ಣು
ಅಪ್ಪನ ಸಂಸಾರದ ಕಣ್ಣು ಅಸಾಧಾರಣ ದೈವಭಕ್ತೆ
ಅಕ್ಷರದ ಗಂಧ – ಗಾಳಿಯಿಲ್ಲದ ಗೃಹಸ್ಥೆ
ಸಂಸಾರ ಸಾರಥ್ಯದಲ್ಲಿ ಪ್ರಬುದ್ಧೆ.[೯೧]

ಹೀಗೆ ಹೇಳುತ್ತಾ ಪರಿಸರವನ್ನು, ಬದುಕನ್ನು, ಹೇಳುತ್ತಲೇ ಬದುಕಿದ ಆದರ್ಶವನ್ನೂ, ಆಕೆಯ ಅಂತಃಕರಣದ ಮಾತೃವಾತ್ಸಲ್ಯವನ್ನು ಅನಾವರಣಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬದುಕನ್ನು, ವಿಶ್ವವನ್ನು ಮುಖ್ಯವಾಗಿ ವೈಚಾರಿಕ ನೆಲೆಯಲ್ಲಿ, ನೀತಿಯ ನೆಲೆಗಟ್ಟಿನಲ್ಲಿ, ಆದರ್ಶದ ಹಿರಿಮೆಯಲ್ಲಿ ನೋಡುವ ವಿಶಿಷ್ಟ ನೋಟ ಸಿ.ಎಚ್. ಮರಿದೇವರದು. ತಮ್ಮ 'ತಂದೆ ತಾಯಿ' ಕವಿತೆಯಲ್ಲಿ ತನ್ನ ಜನ್ಮಕ್ಕೆ ಕಾರಣರಾದವರನ್ನು ಕೃತಜ್ಞತೆಯಿಂದ ಸ್ಮರಿಸಿದ್ದಾರೆ.

. . . .
ತಾಯೆ ನೀ ಎನ್ನ ಧಾರಣೆಗೈದೆ
ನವಮಾಸಗಳು ನಿನ್ನ ಗರ್ಭದಿ ಹೊತ್ತೆ
ಹೆತ್ತೆ ಅದೊಂದು ದಿನ
ಓ! ತಾಯಿ ನೀ ಹೊತ್ತೆ
ಸಾಕಿ ಸಲಹಿದೆ ನಿನ್ನ ಸ್ತನ್ಯಪಾನವಿತ್ತು
ನಾಬೆಳೆದಂತೆ – ತಂದೆ ನೀ ಹೊತ್ತೆ ನನ್ನ
ನೀ ಹೋದ ಎಡೆಯಲ್ಲೆಲ್ಲ
. . . .
ಓ! ಎನ್ನ ತಂದೆ ತಾಯಿಗಳೇ
ಇದೋ ತಂದಿಹೆನು – ವಿಜಯ

ದಶಮಿಯ ದಿನದಂದು
ನಿಮ್ಮ ಪೂಜಿಸುವ [೯]

ತಾಯಿ ತಂದೆ ಋಣ ತೀರಿಸಲು ಸಾಧ್ಯವಿಲ್ಲ. ಆದರೂ ಅವರ ನೆನಪೊಂದು ಪೂಜೆ. ಅಂದು ತನ್ನ ಕೃತಿ ಅರ್ಪಣೆಯೇ ತನ್ನ ಕೃತಜ್ಞತೆಯ ಅರ್ಪಣೆ ಎಂಬುದನ್ನು ಈ ಕವಿತೆಯಲ್ಲಿ ವಿವರಿಸಿದ್ದಾರೆ. ತಾಯಿ – ತಂದೆಯರ ಉಪಕಾರ ಸ್ಮರಣೆಯೊಂದಿಗೆ ಭಕ್ತಿ ಸಮರ್ಪಣೆ ಮಾಡಿದ್ದಾರೆ.

ಗಣಪತಿ ಹೆಗಡೆಯವರದು ಭಾವತನ್ಮಯತೆ ಗುಣ. ಆದರ್ಶ ಪ್ರಿಯತೆ, ನಿಸರ್ಗ ಪ್ರೇಮ, ಗತಕಾಲದ ಘನತೆಯ ಸ್ಮರಣೆ, ಜೀವನ ಶ್ರದ್ಧೆ, ಭಾವೈಕ್ಯತೆ, ವಿಶ್ವಬಂಧು ತತ್ವಗಳನ್ನು ಪ್ರಕಟಿಸುವ ಭಾವುಕ ನಿಲುವಿದೆ, ಇವರ 'ಅಮ್ಮ ಅಂತ ಕರಿ ಸಾಕು' ಕವಿತೆಯಲ್ಲಿ ತಾಯಿಯಾಗಲು ಅನುಭವಿಸಿದ ಯಾತನೆಯನ್ನೆಲ್ಲ ನೆನಪು ಮಾಡಿ ಕೊಟ್ಟು ಮಗನಿಂದ ತಾಯಿಯ ನಿರೀಕ್ಷೆ ನಿರ್ಲಕ್ಷ್ಯವಲ್ಲ. ಅಮ್ಮ ಅನ್ನುವ ಪ್ರೀತಿಯ ಕರೆ ಸಾಕು ಎಂಬ ಹಂಬಲವಿದೆ. ಮಗನು ಗಳಿಸಿಕೊಟ್ಟ ಸಂಪತ್ತು, ಸೌಕರ್ಯಗಳಿಗಿಂತ ಮಗನ ಅಂತರಂಗದಿಂದ ಮೂಡಿಬರುವ 'ಅಮ್ಮ' ಎನ್ನುವ ಪದವೇ ಅವಳಿಗೆ ತೃಪ್ತಿ, ಸಮಾಧಾನ ತಂದು ಕೊಡುತ್ತದೆ.

ನೀ ಹುಟ್ಟಿದ ದಿನವೇ
ಕರಳಬೆನ್ನಿಗ್‌ಕಟ್ಟಿ
ಬಗ್ಗಿ ಬಗ್ಗಿ ಹೆಂಟೆ ಒಡ್ಡೆ
ಧೂಳತಿಂದೆ ಕೆಮ್ದೆ
ಗದ್ದೀ ಮ್ಯಾಗಿನ್‌ಬಾಣಂತನ
ಅಮ್ಮ ಅಂತ ಕರಿ ಸಾಕು. . . .
. . . .
ರಟ್ಟೆಯಾವ್ವು ಮೂಳಿಯಾವ್ವು
ಹೊಟ್ಟೆಯಾವ್ವು ಬೆನ್ ಯಾವ್ವು
ತಿಳಿವೊಲ್ಲು ನಿಂಗೆ
ಅಮ್ಮ ಅಂತ ಕರಿ ಸಾಕು. . . .
ಏನು ಬ್ಯಾಡ ಮತ್ತೆ. [೯೩]

ಜೀರ್ಣ ದೇಹವೊತ್ತು, ಮಗನ ಮೇಲಿನ ಮಮತೆ ಮರೆಯದ ಗುಟುಕು ಜೀವದ ತಾಯಿಯೊಬ್ಬಳು, ನಿರ್ಲಕ್ಷಿಸುತ್ತಿರುವ ಮಗನಲ್ಲಿ ಬೇಡುವ ಮಾತು 'ಅಮ್ಮ ಅಂತ ಕರಿ ಸಾಕು. . . . ಏನು ಬ್ಯಾಡ ಮತ್ತೆ'. ತಾಯಿ ಋಣ ತೀರಿಸಲು ಯಾರಿಂದಲೂ ಸಾಧ್ಯವಿಲ್ಲ. ಹೀಗಿರುವಾಗ ತನ್ನ ಮಗನ ನಿರ್ಲಕ್ಷ್ಯಕ್ಕೆ ಒಳಗಾದಾಗ ಹಡೆದ ತಾಯಿಗೆ ಹೇಳಿಕೊಳ್ಳಲಾರದ ವೇದನೆಯಾಗುತ್ತದೆ.

ಎಲ್ಲವುದಕ್ಕಿಂತ ಹಿರಿದಾದ ಋಣ, ಮಾತೃಋಣ ಎಂಬ ಕಲ್ಪನೆ ಭಾರತೀಯರದು. ಅಂತ ಋಣದ ಹಿರಿಮೆಯಲ್ಲಿರುವ ತಾಯಿಯನ್ನು ಕುರಿತು ಗಡಿನಾಡು ಪ್ರಾಂತ್ಯದ (ಪಾವಗಡ) ಮೋಕ್ಷಗುಂಡಂ ನಾಗಭೂಷಣಶರ್ಮ ತಮ್ಮ 'ಅಮ್ಮನ ಋಣ' ಕವಿತೆಯಲ್ಲಿ ವಿಭಿನ್ನವಾಗಿ ಸ್ಮರಿಸಿದ್ದಾರೆ.

ಅಮ್ಮ ಹೇಗೆ ತೀರಿಸಲಿ ನಿನ್ನ ಋಣ?
ಆಗುವುದೆ ನನ್ನಿಂದ ತೀರಿಸಲು ನಿನ್ನ ಋಣ?
ನವ ಮಾಸಗಳು ಹೊಟ್ಟೆಯಲಿ ಹೊತ್ತ ಋಣ
ಪ್ರಾಣವನೆ ಪಣವಾಗಿಟ್ಟು ಹೆತ್ತ ಆ ಋಣ.

ಇದೇ ನಿನಗೆ ಕಾಶಿ ರಾಮೇಶ್ವರ
ಇದೇ ನಿನಗೆ ಪುರಿ, ಅಮರೇಶ್ವರ
ಇದೇ ನಿನಗೆ ಮಧುರೈ ಮಧುರ
ಇದೇ ನಿನಗೆ ಸ್ವರ್ಗ, ನರಕ ಸಾರ
ಎಂದರಾ ವಂಶೋದ್ಧಾರಕರು.[೯೪]

ಆಧುನಿಕತೆಯ ಬಲೆಗೆ ಬಿದ್ದು, ಮೋಹದ ಹೆಂಡತಿಗೆ ಬಲಿ ಬಿದ್ದು, ತಾಯಿಯನ್ನು ಸಾಕಲಾರದೆ ಅನಾಥಾಶ್ರಮಕ್ಕೆ ಸೇರಿಸುವ ಮಾತೃನಿರ್ಮೋಹಿಗಳ ಪಾಪ ಕೃತ್ಯವನ್ನು ಖಂಡಿಸುತ್ತಾರೆ. ಆಕೆ ಋಣ ತೀರಿಸುವುದು ಅನಾಥಾಶ್ರಮಕ್ಕೆ ಸೇರಿಸುವುದಾದರೆ, ಇಳಿವಯಸ್ಸಿನ ತಾಯಿಗೆ ಅದೇ ಅನಾಥಾಶ್ರಮ ಕಾಶಿ ರಾಮೇಶ್ವರವಾಗುವಂತೆ ಮಾಡಿದ್ದಾರೆಂದು ಯುವ ಜನಾಂಗದ ಬೇಜವಾಬ್ದಾರಿಯನ್ನು ವಿಡಂಬಿಸುತ್ತಾರೆ.

ನಿರುದ್ಯೋಗ ಎಂತಹ ವ್ಯಕ್ತಿಗೂ ನೋವಿನ ಸಂಗತಿ. ಕಲಿತ ವಿದ್ಯೆಗೆ, ವ್ಯಯಿಸಿದ ಶ್ರಮಕ್ಕೆ, ಕಟ್ಟಿದ ಕನಸಿಗೆ, ಆಧುನಿಕ ಶಿಕ್ಷಣ ಗ್ರಾಮೀಣ ಮಕ್ಕಳಿಗೆ ಹೊಸ ಲೋಕವೊಂದನ್ನು ತೆರೆದರೂ, ಕಲಿಕೆ ಅವರಿಗೆ ಸುಖವನ್ನೇನು ತಂದು ಕೊಡುತ್ತಿಲ್ಲ. ಕಲಿಯುವಾಗಲೇ ಅಡ್ಡಿಗಳು. ಅಂತಹ ಸಂದರ್ಭದಲ್ಲೂ ಹಡೆದ ತಾಯಿ ಬೆಳೆದ ಮಗನನ್ನು ಪೊರೆಯುವ ದಾರುಣ ಸ್ಥಿತಿಗೆ ಇಳಿದಾಗ ಅವಳ ಅಂತಃಕರಣದಲ್ಲಿ ಉಂಟಾಗುವ ವೇದನೆ ಅಪಾರ. ಇಂತಹ ಚಿತ್ರ ಪಿ. ಭೋಗರಾಜುರವರ 'ಅಮ್ಮನ ವರಾತ'ದಲ್ಲಿದೆ.

ತೊಟ್ಟಿಲು ತೂಗೋ
ಬಿಡುವು ವೇಳೆ ಓದೋ

ಎಂದು ಮುಖಕ್ಕೆ ರಾಚುವಂತೆ ಕಲಿಕೆಯ ಆಸಕ್ತಿಯ ಮಗುವಿಗೆ ಹೇಳುವ ತಾಯಿಗೆ, ಶಾಲೆಯ ಶಿಕ್ಷಣ ಮುಖ್ಯವಲ್ಲ, ಬದುಕಿನ ಕಲೆಯೇ ಪ್ರಧಾನ.

ನೀವಾದ್ರೂ ಕಲಿರೋ
ದುಡಿತ ಜೀವಿತದಲಿ ಒಂದಿಷ್ಟು ಉಳಿಸಿರೊ.[೯೫]

ಈ ಸಂದೇಶದ ತಾಯಿ ಮಾತಿನಲ್ಲಿ ಶಾಲೆಯ ಕಲಿಕೆಗಿಂತ ದುಡಿಮೆ ಪ್ರಿಯವಾಗುತ್ತದೆ. ಇಷ್ಟಾದರೂ ಕಲಿತು ಬಲಿತು ನಿರುದ್ಯೋಗಿಯಾದ ಮಗನಿಗೆ ತಾಯಿಯೇ ಆಶ್ರಯ ಮತ್ತು ಆಧಾರವಾಗುವುದು.

ಇದೇ ಕವಿಯ 'ಮಾಯದ ಗಾಯ'ದಲ್ಲಿ ತಾಯಿಯ ವೇದನೆ ಶತಮಾನಗಳ ಇತಿಹಾಸವಾಗಿ ಕವಿಗೆ ಕಂಡಿದೆ. ತಾಯಿ ವಾತ್ಸಲ್ಯಮಯಿ. ಇಂತಹ ವಾತ್ಸಲ್ಯದಿಂದಲೇ ನಿರುದ್ಯೋಗಿ ತರುಣರು ಇನ್ನೂ ಜೀವಂತವಾಗಿರುವುದು.

ಮ. ಸುರೇಶ್ ಬಾಬುರವರ 'ತಾಯಿ' ವಾತ್ಸಲ್ಯದ ಸಂಕೇತವಾಗಿ ಗಮನ ಸೆಳೆಯುತ್ತದೆ.

ಮಾತೆ ನಿನ್ನ ಮಹಾತ್ಯಾಗವ
ಎನಿತು ಅರಿಯಲಿ
ಜನುಮ ಕೊಟ್ಟ ನಿನ್ನನಾ
ಹೇಗೆ ಮರೆಯಲಿ.
. . . .
ತಾಯಿ ತಾನೆ ಮೊದಲ ಗುರು
ಎಲ್ಲ ಆತ್ಮಕೂ
ಕಣ್ಣು ತೆರೆದ ಕ್ಷಣ ಕಾಣ್ವೆ
ಎಲ್ಲ ಜೀವಕು.[೯೭]

ಇಲ್ಲಿ ಮಾತೃತ್ವದ ಹಿರಿಮೆ ಹಾಗೂ ಪ್ರೀತಿಯ ನೆನಪಿದೆ. ಅದಕ್ಕಾಗಿ ಕವಿ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ.

ಗ್ರಾಮೀಣ ಪರಿಸರದಿಂದ ಬಂದು, ಗ್ರಾಮ್ಯತೆಯನ್ನೇ ಬರವಣಿಗೆಯ ಸ್ಥಾಯಿಯಾಗಿಸಿ ಕೊಂಡಿರುವ ಶಿವರಾಮಯ್ಯನವರ ಅಪ್ರಕಟಿತ ಕವಿತೆ 'ಅಮ್ಮ' ವಿಶೇಷತೆಯಿಂದ ಕೂಡಿದೆ.

ಮೊದಲ ವಿಶ್ವ ಯುದ್ಧದ ಸರಿಸುಮಾರಿಗೆ ಹುಟ್ಟಿದ
ನಮ್ಮಮ್ಮ ಬೋರಮ್ಮ ಹತ್ತು ಮಕ್ಕಳ ತಾಯಿ
ಮೊನ್ನೆ ಬೆಳಕರಿದಂತೆ ಬೆಂಕಿ ಕುದುರೆಯ ಏರಿ
ಬಂದ ದಾರಿಗೆ ಸುಂಕವಿಲ್ಲದೆ ಹೋಗಿಬಿಟ್ಟಳು
. . . .
ಕುಟ್ಟಾಣಿ ಕುಟ್ಟಿ ಎಲೆ ಅಡಿಕೆ ಒಡ್ಡೋಲಗ ನಡೆಸಿ
ಬಂದು ಹೋದವರ ಮನೆಮಾರು ಕಷ್ಟ ಸುಖ ವಿಚಾರಿಸಿ
ನಿಮಪ್ಪ ಬೆಂಕಿ ರಾಮನಂತಿದ್ದನೆಂದು ದೂರಿ ನಗುತ್ತಾ
ಇದು ನಿತ್ಯ ಹೊಸತೆಂಬಂತೆ ಪರಸಂಗ ಮಾಡುತಿದ್ದಳವಳು
ಈಗ ನೋಡಿದರೆ ಮಂಚ ಇದೆ ಕಥೆ ಇದೆ ಎಲ್ಲ ಇದೆ
ಆದರೆ ಅಮ್ಮನ ದನಿ ಎಲ್ಲಿ? . . . .[೯೭]

ಹಳ್ಳಿಗಾಡಿನ ಹೆಂಗಸರು ಗಟ್ಟಿಗರು, ಶ್ರಮಿಕರು ಹಾಗೂ ವಿಚಾರವಂತರು ಎಂಬುದನ್ನು ತಮ್ಮ 'ಅಮ್ಮ' ಕವಿತೆಯ ಮೂಲಕ ತೋರಿಸಿಕೊಟ್ಟಿದ್ದಾರೆ. ತನ್ನ ತಾಯಿ ಜೀವನದಲ್ಲಿ ಘಟಿಸಿದ ಘಟನೆಗಳಿಗೆ ಎದೆಯೊಡ್ಡಿ ನಿಂತದ್ದು; ಬಾಲ್ಯದಲ್ಲಿ ಅನುಭವಿಸಿದ ಮುಗ್ಧತೆಯ ನೆನಪುಗಳನ್ನು ಹೊತ್ತು ನಿಂತದ್ದು; ವ್ಯವಸಾಯದಲ್ಲಿ ಗಂಡಿನ ಹೆಗಲಿಗೆ ಹೆಗಲಾಗಿ ದುಡದದ್ದು; ಅಕ್ಷರಗಂಧ ಗಾಳಿಯಿಲ್ಲದಿದ್ದರೂ ರಾಮಾಯಣ ಮಹಾಭಾರತಕ್ಕೆ

ಪ್ರತಿಕ್ರಿಯಿಸಿ ಪ್ರಬುದ್ಧತೆ ಮೆರೆದಿದ್ದು ಆಕೆಯ ವಿಶೇಷತೆ. ಬಾಳ ಜಂಜಾಟದಲ್ಲಿ ತನ್ನ ಮಕ್ಕಳು ಮರಿಗಳನ್ನು ಜತನವಾಗಿ ಕಾಪಾಡಿದ ಆದರ್ಶಮಾತೆ. ಜಾನಪದ ಭಕ್ತೆ. ಆಕೆ ಭೌತಿಕ ಶರೀರ ತ್ಯಜಿಸಿದರೂ ಮಗನ ನೆನಪಿನಂಗಳದಲ್ಲಿ ನೆಲೆ ನಿಂತವಳು. ಇಡೀ ಕವಿತೆ ಜನಪದ ಶೈಲಿಯಂತಿದ್ದು, ಗಂಭೀರವಾಗಿ ಓದಿಸಿಕೊಳ್ಳುವುದಲ್ಲದೆ, ಆಪ್ತತೆಗೆ ಒಳಗಾಗುತ್ತದೆ.

ತಾಯಿಯನ್ನು ಕುರಿತ ಕವಿತೆಗಳು ಬಹಳಷ್ಟು ಬಂದಿವೆ. ರಾಮದಾಸ್‌ರವರ 'ಮಗುವೆ' (೧೯೯೪ – ಕವಿತೆ, ಪುಟ:೩), ನಟರಾಜ ಬೂದಾಳುರವರ 'ಅವ್ವ ಮತ್ತು ಕುಡಿಕೆ' ಹಾಗೂ 'ಬಸಿರ ನೋವಲ್ಲಿ ಸೊಲ್ಲ ಕೂಗು' (ಸೂಜಿಗಲ್ಲು ಹುಡುಗಿ, ಪುಟ; ೮, ೧೩.), ಕೆ. ಮಲ್ಲಿಕಾರ್ಜುನ ಹೊಸ್ಕೆರೆಯವರ 'ತಾಯಿ' (ಆವಹ– ಸಂ. ಎನ್. ನಾಗಪ್ಪ, ಪುಟ: ೩೭.), ಕಂಟಲಗೆರೆ ಸಣ್ಣಹೊನ್ನಯ್ಯನವರ 'ತಾಯಿ' (ಅಕ್ಕನ ದುಕ್ಕ, ಪುಟ: ೨೩.), 'ವೀರೇಶ್' ರವರ 'ಮಮತೆ' (ಕೋಲ್ಮಿಂಚು, ಪುಟ: ೩೨) ಮುಂತಾದವು ಗಮನಸೆಳೆಯುವ ಕವಿತೆಗಳಾಗಿವೆ. ಕಾವ್ಯಪಂಥಗಳ ಹಿನ್ನೆಲೆಯೊಂದಿಗೆ ಚರ್ಚಿತವಾಗಿರುವ ಕವಿತೆಗಳಲ್ಲಿ ವೈವಿಧ್ಯತೆ ಇದೆ. ಆಕೆಯ ದುಡಿತ, ತುಡಿತ, ಸಾಮಾಜಿಕ ಹೋರಾಟಗಳೊಂದಿಗೆ ಭಾಷೆಯಲ್ಲೂ ಗಮನ ಸೆಳೆವ ಪ್ರಾದೇಶಿಕ, ವರ್ಗ, ವರ್ಣಗಳ ಹಿನ್ನೆಲೆಯಲ್ಲಿ ರೂಪುಗೊಂಡಿವೆ.

ಹಳ್ಳಿಗಾಡಿನಲ್ಲಿ ಹುಟ್ಟಿಬೆಳೆದು, ಬಡತನವನ್ನೇ ಬಾಚಿ ತಬ್ಬಿಕೊಂಡು, ಸಮಾಜದ ಶೋಷಣೆಯ ಈಟಿಗೆ ಸಿಕ್ಕಿ ನಲುಗಿಹೋದ ದಲಿತ – ಬಂಡಾಯದವರ ತಾಯಿಯಲ್ಲಿ ನೋವಿದೆ, ಯಾತನೆಯಿದೆ. ಕರುಳಾಳದ ವ್ಯಥೆಯಿದೆ. ಆಕೆಯಿಂದ ಕಲಿತ ಪಾಠ ಯಾವ ವಿಶ್ವವಿದ್ಯಾಲಯವೂ ನೀಡದ ಶಿಕ್ಷಣಕ್ಕಿಂತ ಮಿಗಿಲಾಗಿದೆ. 'ಅನುಭವವೇ ಶಿಕ್ಷಣ, ಶಿಕ್ಷಣವೇ ಅನುಭವ' ಎನ್ನುವುದು ಈ ತಾಯಿಯಲ್ಲಿ ಮಾತ್ರ ದರ್ಶಿಸಲು ಸಾಧ್ಯ. ಇಲ್ಲಿ ಭಾಷೆ ಸಂಪ್ರದಾಯದ ಚೌಕಟ್ಟು ದಾಟಿದೆ, ಕಲ್ಪನೆಯ ಎಲ್ಲೆಯಿಂದ ದೂರ ಸರಿದಿದೆ, ಸುಂದರ ಶೈಲಿಯಿಂದ ಅತೀತವಾಗಿದೆ. ಇಲ್ಲಿರುವುದು ನೇರ, ನಿಖರ, ಕರಾಳ ಹಾಗೂ ಕಠೋರವಾದ ಕಟುಸತ್ಯ. ಒಂದೊಂದು ಕವಿತೆಯ ಹಿಂದೆಯೂ ಒಂದೊಂದು ಜೀವದ ಮಿಡಿತವಿದೆ. ಕಣ್ಣೀರಿನ ಕಥೆಯಿದೆ. ದಾರಿದ್ರ್ಯದ ವೇದನೆಯಿದೆ. ನಗರ ವಾಸಿಗಳೂ, ಶ್ರೀಮಂತರೂ, ಶಿಷ್ಟ ಸಂಪ್ರದಾಯದವರೂ ಆದ ಮೇಲ್ವರ್ಗದವರು ತಾಯಿಯಿಂದ ಜನ್ಮಪಡೆದದ್ದು, ಆಕೆಯಿಂದ ಪೋಷಿಸಲ್ಪಟ್ಟು ಬೆಳೆದದ್ದೇ ಶ್ರೇಷ್ಠ ಎಂಬ ಕೃತಜ್ಞತೆಯಲ್ಲಿ ತಾಯಿಯನ್ನು ಕಂಡಿದ್ದಾರೆ. ಅದರಲ್ಲೂ ನವೋದಯ ತಲೆಮಾರಿನವರಲ್ಲಿ ಈ ಪ್ರಜ್ಞೆ ಹೆಚ್ಚಾಗಿದೆ. ಆದರೆ ಹಳ್ಳಿಗಾಡಿನ, ಬಡತನದ, ಶೋಷಣೆಗೊಳಗಾದ ಜನರು ಆಕೆಯಿಂದ ಜನ್ಮ ಪಡೆದದ್ದನ್ನು ಸ್ಮರಿಸುವುದರೊಂದಿಗೆ ಆಕೆಯ ಎದೆಯಾಳದ ವಾತ್ಸಲ್ಯವನ್ನು, ಬವಣೆಯ ಬದುಕನ್ನು ಚಿತ್ರಿಸಿದ್ದಾರೆ.

ಇಲ್ಲಿನ ತಾಯಿಗೆ ಮೈತುಂಬ ಬಟ್ಟೆಯಾಗಲಿ, ಝುಗಮಗಿಸುವ ಆಭರಣಗಳಾಗಲಿ, ಕಣ್ಣು ಕೋರೈಸುವ ಸೌಂದರ್ಯವಾಗಲಿ, ಘಮಘಮಿಸುವ ಸುಗಂಧ ದ್ರವ್ಯದ ಸಾಧನಗಳಾಗಲಿ ಕಂಡಿಲ್ಲ. ಸುಖ ಎಂದರೇನೆಂದು ತಿಳಿದಿಲ್ಲ. ಆನಂದದ ಕಲ್ಪನೆಯಿಲ್ಲ, ವಿಶ್ರಾಂತಿ ಎಂಬುದು ಇಲ್ಲವೇಯಿಲ್ಲ. ದುಡಿಮೆ. . . ದುಡಿಮೆ. . . ದುಡಿಮೆ. . . ಮಣ್ಣಲ್ಲಿ ಮಣ್ಣಾಗುವರೆಗೂ ದುಡಿದು ತಣ್ಣಗೆ ಹೋದ ಜೀವದ ಕಣ್ಣೀರಿನ ಕಥೆಯಿದೆ.

ಇದು ಇಲ್ಲಿನ ಸಾಮಾಜಿಕ ವ್ಯವಸ್ಥೆಯ ಕ್ರೂರತೆಗೆ ಸಾಕ್ಷಿಯಾಗಿದೆ. ನಮ್ಮನ್ನಾಳುವ ಜನರ ಉದಾಸೀನಕ್ಕೆ ಹಿಡಿದ ಕನ್ನಡಿಯಾಗಿದೆ. ಸಾಮಾಜಿಕ ಅಸಮಾನತೆಗೆ ನಿದರ್ಶನವಾಗಿದೆ.

"ಈ ಸಂಕಲನದ 'ಅವ್ವ' ಎಂಬ ಕವಿತೆ ನನ್ನ ಪ್ರಕಾರ ಇಲ್ಲಿನ ಎಲ್ಲಾ ಕವಿತೆಗಳಿಗೂ ಪ್ರವೇಶ ದ್ವಾರವಾಗಬಲ್ಲದು. ಲಂಕೇಶರ ಅತ್ಯುತ್ತಮ ಕವಿತೆಯಾದ 'ಅವ್ವ' ಕವಿತೆಯ ಜೊತೆಗೆ ಇದನಿಟ್ಟು ನೋಡಿದರೆ ನಮ್ಮ ಕಾವ್ಯದ ಒಳ ಲೋಕದ ಬದಲಾಗುತ್ತಿರುವ ನಕಾಶೆ ಮೂಡತೊಡಗುತ್ತದೆ. ಲಂಕೇಶರ 'ಅವ್ವ' ಪುರಾಣ ಓದದವಳು, ಹರಿಕತೆ ಕೇಳದವಳು. ಆದರೆ ಇಲ್ಲಿನ 'ಅವ್ವ' ಹರಿಕತೆ, ಪುರಾಣಗಳು ಇವೆ ಎಂಬುದನ್ನೇ ಅರಿಯದವಳು. ಈ ಅವ್ವ ಸರೀಕರ ಮುಂದೆ ತಲೆ ಎತ್ತಿ ನಡೆಯ ಬಯಸುವವಳು. ಹೀಗೆ ತಲೆ ಎತ್ತಿ ನಡೆಯಬೇಕಾದರೆ ಹೇಳಿಕೊಳ್ಳುವ ಮಟ್ಟಿಗಲ್ಲದಿದ್ದರೂ ಸುಮಾರಾಗಿಯಾದರೂ ಆಸ್ತಿ ಪಾಸ್ತಿ ಇರಬೇಕಲ್ಲ. ಈ ಅವ್ವನಿಗೆ ಅವೊಂದೂ ಇಲ್ಲ. ಇವಳು ಹುರುಳಿ ಅಳ್ಳುಗಳ ದಳ್ಳಾಳಿಗೆ ಮಾರಿ ಪುಡಿಗಾಸ ಕುಡಿಕೆಯಲಿ ಕೂಡಿಟ್ಟು ಕರುಳ ಕುಡಿಗೆ ಕಾಯುತ್ತಿದ್ದವಳು"[೮] – ಎಂದು ಎಲ್. ಹನುಮಂತಯ್ಯನವರ 'ಅವ್ವ' ಕೃತಿಗೆ ಮುನ್ನುಡಿ ನುಡಿದಿರುವ ಹೆಚ್.ಎಸ್. ಶಿವಪ್ರಕಾಶರ ಮಾತು ದಲಿತ ಲೋಕದ ಎಲ್ಲ ತಾಯಂದಿರ ಬದುಕನ್ನು ಬಿಂಬಿಸುವ ನುಡಿಗಳಾಗಿವೆ.

ಕೊನೆ ಟಿಪ್ಪಣಿಗಳು:

೧. ಹಾಡೆ ಹಾದಿಯ ತೋರಿತು, ಎಚ್.ಎಸ್.ರಾಘವೇಂದ್ರ ರಾವ್, ಪುಟ: ೮೭.
೨. ದ.ರಾ.ಬೇಂದ್ರೆ, ಕಸ್ತೂರಿ (ಮಾಸ ಪತ್ರಿಕೆ) ಸಂದರ್ಶನ, ಡಿಸೆಂಬರ್ – ೧೯೯೩.
೩. ಬಾರೋ ಸಾಧನ ಕೇರಿಗೆ, ಕೀರ್ತಿನಾಥ ಕುರ್ತಕೋಟಿ, ಪುಟ: ೭.
೪. ವಿನಯ, ದ.ರಾ.ಬೇಂದ್ರೆ, ಪುಟ: ೧೭.
೫. ಬಾ ಹತ್ತರ, ವಾಮನ ಬೇಂದ್ರೆ, ಪುಟ: ಹಿನ್ನುಡಿಯಲ್ಲಿ ೧೮೯.
೬. ನಮನ, ದ.ರಾ.ಬೇಂದ್ರೆ, ಪುಟ: ೮೮.
೭. ಗರಿ, ದ.ರಾ.ಬೇಂದ್ರೆ, ಪುಟ: ೭.
೮. ಉಯ್ಯಾಲೆ, ದ.ರಾ.ಬೇಂದ್ರೆ, ಪುಟ: ೬
೯. ಇಳಿದು ಬಾ ತಾಯೆ, ಶಂಕರ್ ಮೊಕಾಶಿ ಪುಣೇಕರ್, ಪುಟ: ೧೧.
೧೦. ಅರಳು ಮರಳು, ದ.ರಾ.ಬೇಂದ್ರೆ, ಪುಟ: ೧೭೭.
೧೧. ಉಯ್ಯಾಲೆ, ದ.ರಾ.ಬೇಂದ್ರೆ, ಪುಟ: ೧೦.
೧೨. ಮೇಲಿನಂತೆ, ಪುಟ: ೯೨.
೧೩. ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ. ಜಿ.ಕೃಷ್ಣಪ್ಪ. ಪುಟ: ೭೮.
೧೪. ಉಯ್ಯಾಲೆ, ದ.ರಾ.ಬೇಂದ್ರೆ, ಪುಟ: ೯೩.
೧೫. ನಾದ ಲೀಲೆ, ದ.ರಾ.ಬೇಂದ್ರೆ, ಪುಟ: ೭೭.
೧೬. ಮೇಲಿನಂತೆ, ಪುಟ: ೭೯.
೧೭. ಇಳಿದು ಬಾ ತಾಯೆ, ಶಂಕರ್ ಮೊಕಾಶಿ ಪುಣೇಕರ್, ಪುಟ: ೩೫.
೧೮. ಬಾಲಬೋಧೆ, ದ.ರಾ.ಬೇಂದ್ರೆ, ಪುಟ:
೧೯. ಹಂಗು, ದ.ರಾ.ಬೇಂದ್ರೆ, ಪುಟ: ೪೨.
೨೦. ಮೇಲಿನಂತೆ, ಪುಟ: ೪೬.

೨೧. ಸಖೀಗೀತ, ದ.ರಾ.ಬೇಂದ್ರೆ, ಪುಟ: ೩೭
೨೨. ನಮನ, ದ.ರಾ.ಬೇಂದ್ರೆ, ಪುಟ: ೩೪.
೨೩. ಕವನ ಸಂಗ್ರಹ, ದ.ರಾ.ಬೇಂದ್ರೆ, ಪುಟ: ೧೨೨.
೨೪. ಹಾಡೆ ಹಾದಿಯ ತೋರಿತು, ಎಚ್.ಎಸ್.ರಾಘವೇಂದ್ರ ರಾವ್, ಪುಟ: ೧೦೦.
೨೫. ಪು.ತಿ.ನ., ಪುಟ: ೨೮೮.
೨೬. ಮರಿವಿಜ್ಞಾನಿ, ಕುವೆಂಪು, ಪುಟ: ೧೩.
೨೭. ಕಲಾ ಸುಂದರಿ, ಕುವೆಂಪು, ಪುಟ: ೩೭
೨೮. ನನ್ನ ಮನೆ, ಕುವೆಂಪು, ಪುಟ: ೨.
೨೯. ಪ್ರೇಮ ಕಾಶ್ಮೀರ, ಕುವೆಂಪು, ಪುಟ: ೭
೩೦. ಸ್ನೇಹ – ವಿಶ್ವಾಸ, ವಿ.ಸೀ., ಪುಟ: ೨೦೪.
೩೧. ಹೊಸಗನ್ನಡ ಸಾಹಿತ್ಯ ಚರಿತ್ರೆ ಎಲ್.ಎಸ್.ಶೇಷಗಿರಿ ರಾವ್, ಪುಟ: ೧೨೬
೩೨. ಮಲ್ಲಿಗೆಯ ಮಾಲೆ, ಕೆ.ಎಸ್.ನರಸಿಂಹ ಸ್ವಾಮಿ, ಪುಟ:೨೯
೩೩. ಕಾವ್ಯಾನುಸಂಧಾನ, ಚೆನ್ನವೀರ ಕಣವಿ, ಪುಟ: ೧೪೬.
೩೪. ಕಣವಿ ಸಮಗ್ರ ಕಾವ್ಯ ಚೆನ್ನವೀರ ಕಣವಿ, ಪುಟ: ೩೨.
೩೫. ಜಿ.ಎಸ್.ಅಮೂರ, ಕಣವಿ ಸಮಗ್ರ ಕಾವ್ಯ, ಚೆನ್ನವೀರ ಕಣವಿ, ಪುಟ: ಪ್ರಸ್ತಾವನೆಯಲ್ಲಿ.
೩೬. ಮೇಲಿನಂತೆ, ಪುಟ: ೧.
೩೭. ಆಕಾಶ ಬುಟ್ಟಿ, ಚೆನ್ನವೀರ ಕಣವಿ, ಪುಟ: ೮೫.
೩೮. ಈವರೆಗಿನ ಹೇಳತೇನ ಕೇಳ, ಚಂದ್ರಶೇಖರ ಕಂಬಾರ, ಪುಟ: ೫.
೩೯. ಸಮಗ್ರ ಕಾವ್ಯ, ಜಿ.ಎಸ್.ಶಿವರುದ್ರಪ್ಪ, ಪುಟ: ೧೬.
೪೦. ಮೇಲಿನಂತೆ, ಪುಟ: ೨೨.
೪೧. ಮೇಲಿನಂತೆ, ಪುಟ: ೨೩.
೪೨. ಮೇಲಿನಂತೆ, ಪುಟ: ೮೨.
೪೩. ಮೇಲಿನಂತೆ, ಪುಟ: ೮೬.
೪೪. ಮೇಲಿನಂತೆ, ಪುಟ: ೮೯.
೪೫. ನನ್ನ ಕವನಗಳು, ಡಾ.ಸಾ.ಶಿ.ಮರುಳಯ್ಯ, ಪುಟ: ೧೪.
೪೬. ಮೇಲಿನಂತೆ, ಪುಟ: ೧೫.
೪೭. ಡಾ.ಎಂ.ಎಸ್.ವೃಷಭೇಂದ್ರಸ್ವಾಮಿ, ನನ್ನ ಕವನಗಳು, ಸಾ.ಶಿ.ಮರುಳಯ್ಯ, ಪುಟ: ಮುನ್ನುಡಿಯಲ್ಲಿ.
೪೮. ೭೨ ಕವಿತೆಗಳು, ಗಂಗಾಧರ ಚಿತ್ತಾಲ, ಪುಟ: ೧೩೮.
೪೯. ಸ್ತ್ರೀ, ದೊಡ್ಡರಂಗೇಗೌಡ, ಆಧುನಿಕ ಕನ್ನಡ ಕವಿತೆಗಳು, ಸಂ.ದೊಡ್ಡರಂಗೇ ಗೌಡ, ಪುಟ: ೧೬೯.
೫೦. ೭೨ ಕವಿತೆಗಳು, ಗಂಗಾಧರ ಚಿತ್ತಾಲ, ಪುಟ: ೨೮.
೫೧. ಕೆ.ಎಸ್.ನಿಸಾರ್ ಅಹಮದ್ ರವರ ಪ್ರಾತಿನಿಧಿಕ ಕವನಗಳು, ಕೆ.ಎಸ್.ನಿಸಾರ್ ಅಹಮದ್, ಪುಟ: ೫೭.
೫೨. ಮೇಲಿನಂತೆ, ಪುಟ: ೨೦೦.
೫೩. ಡಾ. ಎಚ್. ಜೆ. ಲಕ್ಕಪ್ಪಗೌಡ, ಮೇಲಿನಂತೆ, ಪುಟ : ಮುನ್ನುಡಿ ೬
೫೪. ಮಾತೃ ಸಂಹಿತೆ, ಗುಂಡ್ಮಿ ಚಂದ್ರಶೇಖರ ಐತಾಳ, ಪುಟ: ೩, ವ: ೧೦.
೫೫. ಮೇಲಿನಂತೆ, ಪುಟ: ೬, ವ: ೧೭
೫೬. ಮೇಲಿನಂತೆ, ಪುಟ: ೬, ವ: ೨೦.
೫೭. ಮೇಲಿನಂತೆ, ಪುಟ: ೯, ವ: ೩೧.
೫೮. ಮೇಲಿನಂತೆ, ಪುಟ: ೧೩, ವ:೪೨.
೫೯. ಮೇಲಿನಂತೆ, ಪುಟ: ೨೧, ವ: ೬೪.
೬೦. ಮೇಲಿನಂತೆ, ಪುಟ: ೩೫, ವ: ೧೦೧.
೬೧. ಎಸ್.ವಿ.ಪರಮೇಶ್ವರ ಭಟ್ಟ, ಮಾತೃ ಸಂಹಿತೆ, ಗುಂಡ್ಮಿ ಚಂದ್ರಶೇಖರ ಐತಾಳ, ಪುಟ: ಮುನ್ನುಡಿಯಲ್ಲಿ.

೬೨. ಸಮಗ್ರ ಸೃಜನ, ಡಾ.ಗಿರಡ್ಡಿ ಗೋವಿಂದ ರಾಜ, ಪುಟ: ೬೬.
೬೩. ಮೇಲಿನಂತೆ, ಪುಟ: ೬೬.
೬೪. ಹೆಜ್ಜೆ ಗುರುತು, ದೊಡ್ಡರಂಗೇಗೌಡರ ಆಯ್ದ ಕವಿತೆಗಳು, ಸಂ.ಡಾ.ನಲ್ಲೂರು ಪ್ರಸಾದ್, ಪುಟ: ೧೧೨.
೬೫. ಮೇಲಿನಂತೆ, ಪುಟ: ೧೯೦.
೬೬. ನಡೆದಿದೆ ಪೂಜಾರತಿ, ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಪುಟ: ೮೬.
೬೭. ಮೇಲಿನಂತೆ, ಪುಟ: ೧೧೯.
೬೮. ವೀಚಿ. ಸಮಗ್ರ ಕಾವ್ಯ, ವೀಚಿ., ಪುಟ: ೩೯೩.
೬೯. ಮೇಲಿನಂತೆ, ಪುಟ: ೧೦೪.
೭೦. ಮೇಲಿನಂತೆ, ಪುಟ: ೩೩೧.
೭೧. ಮೇಲಿನಂತೆ, ಪುಟ: ೪೩೪.
೭೨. ಹೊಸಗನ್ನಡ ಸಾಹಿತ್ಯ ಚರಿತ್ರೆ, ಎಲ್.ಎಸ್.ಶೇಷಗಿರಿ ರಾವ್, ಪುಟ: ೧೨೫.
೭೩. ಲಂಕೇಶರ ಅವ್ವ, ಎಚ್.ಎಸ್.ಪಾರ್ವತಿ, ನಮ್ಮ ಕನ್ನಡ ಕಾವ್ಯ ಸಂಕಲನ: ಓ.ಎಲ್.ನಾಗಭೂಷಣ ಸ್ವಾಮಿ, ಪುಟ: ೩೪೦.
೭೪. ಹೊಸ ಕಾವ್ಯದ ಚಿಗುರು – ಒಗರು, ಕಾವ್ಯಾನು ಸಂಧಾನ, ಚೆನ್ನವೀರ ಕಣವಿ, ಪುಟ: ೧೫೯.
೭೫. ಅವ್ವ – ೨, ಕರಿಗೌಡ ಬೀಚನಹಳ್ಳಿ, ನಮ್ಮ ಕನ್ನಡ ಕಾವ್ಯ ಸಂಕಲನ: ಓ.ಎಲ್.ನಾಗಭೂಷಣ ಸ್ವಾಮಿ, ಪುಟ: ೩೪೨.
೭೬. ಅವ್ವ – ೨, ಕರಿಗೌಡ ಬೀಚನಹಳ್ಳಿ, ನಮ್ಮ ಕನ್ನಡ ಕಾವ್ಯ ಸಂಕಲನ: ಓ.ಎಲ್.ನಾಗಭೂಷಣ ಸ್ವಾಮಿ, ಪುಟ: ೩೪೩.
೭೭. ಅವ್ವ, ಎಲ್.ಹನುಮಂತಯ್ಯ, ಪುಟ: ೧.
೭೮. ಅವ್ವ, ಡಾ.ಸರಜೂ ಕಾಟ್ಕರ್, ಪುಟ: ೧.
೭೯. ಮೇಲಿನಂತೆ, ಪುಟ: ೨.
೮೦. ಮೇಲಿನಂತೆ, ಪುಟ: ೪.
೮೧. ಮೇಲಿನಂತೆ, ಪುಟ: ೫.
೮೨. ಮೇಲಿನಂತೆ, ಪುಟ: ೪೫.
೮೩. ಮರುಜೇವಣಿ, ಎಸ್.ಜಿ.ಸಿದ್ಧರಾಮಯ್ಯ, ಪುಟ: ೨೩.
೮೪. ಬಹುಜನ ಕಾವ್ಯ, ಸಂ.ಡಾ.ಎ.ಮುನಿವೆಂಕಟಪ್ಪ, ಪುಟ: ೨೮.
೮೫. ಮೇಲಿನಂತೆ, ಪುಟ: ೨೯.
೮೬. ಆದಿಮ ಕನ್ಯೆ, ಎ.ಕೆ.ಹಂಪಣ್ಣ, ಪುಟ: ೬೪.
೮೭. ಮೇಲಿನಂತೆ, ಪುಟ: ೨೯.
೮೮. ಸಾಕವ್ವ, ಎನ್.ನಾಗಪ್ಪ, ಪುಟ: ೧.
೮೯. ಇದುವರೆಗಿನ ಕವಿತೆಗಳು, ಡಾ.ಹೊಸ್ಕೆರೆ ಎಸ್.ಶಿವಸ್ವಾಮಿ, ಪುಟ: ೩೧.
೯೦. ಎಚ್.ಜಿ.ಸಣ್ಣಗುಡಯ್ಯ (ಹಿನ್ನುಡಿ ಮಾತು), ಗಾಂಧಿ ತಾ... ತಾ..., ಸೋ.ಮು.ಭಾಸ್ಕರಾಚಾರ್, ಪುಟ: ೬೧.
೯೧. ಮೇಲಿನಂತೆ, ಪುಟ: ೧.
೯೨. ಶಬ್ದಪಾಕ, ಸಿ.ಎಚ್.ಮರಿದೇವರು, ಪುಟ: ೫೭
೯೩. ಶಿಶಿರ ಬಾಲೆ, ಗಣಪತಿ ಹೆಗಡೆ, ಪುಟ: ೧.
೯೪. ಅಮ್ಮನ ಋಣ, ಮೋಕ್ಷಗುಂಡಂ ನಾಗಭೂಷಣ ಶರ್ಮ, ಪುಟ: ೪.
೯೫. ಸೂರಿನೊಳಗೆ, ಪಿ.ಭೋಗರಾಜು, ಪುಟ: ೧೮.
೯೬. ಮಾನಸ ಚಂದ್ರಿಕೆ, ಮ.ಸುರೇಶ್ ಬಾಬು, ಪುಟ: ೧.
೯೭. ಅಮ್ಮ (ಅಪ್ರಕಟಿತ ಕವಿತೆ), ಶಿವರಾಮಯ್ಯ, ಪುಟ: ೧.
೯೮. ಅವ್ವ, ಎಲ್.ಹನುಮಂತಯ್ಯ ಪುಟ: ೨. ಮುನ್ನುಡಿ. ಎಚ್.ಎಸ್.ಶಿವಪ್ರಕಾಶ್.

ಅಧ್ಯಾಯ: ೬

ಕವಯಿತ್ರಿಯರಲ್ಲಿ ಮಾತೃತ್ವ

ಸ್ಥಾಪಿತ ಮೌಲ್ಯಗಳ ಚೌಕಟ್ಟಿನಲ್ಲಿ ಹೆಣ್ಣನ್ನು ನಿರ್ಬಂಧಿಸಿದ್ದು ಎಲ್ಲಾ ಧರ್ಮಗಳಲ್ಲೂ, ಎಲ್ಲಾ ಸಮಾಜಗಳಲ್ಲೂ ಕಂಡುಬರುತ್ತದೆ. ಆದರೆ ಬಂಡವಾಳಶಾಹಿ ಮತ್ತು ಕೈಗಾರಿಕೀಕರಣ ಹಾಗು ಅಕ್ಷರ ಜ್ಞಾನದಿಂದ ಪಾಶ್ಚಾತ್ಯ ಮಹಿಳೆಯರಿಗೆ ಸಂಬಂಧಿಸಿದಂತೆ ಇದ್ದಂತಹ ನಿರ್ಬಂಧಿತ ಕಲ್ಪನೆಗಳು ಶಿಥಿಲಗೊಂಡು ಹೊಸ ಚಿಂತನೆಗೆ ದಾರಿ ಮಾಡಿ ಕೊಟ್ಟಿತು. ಆದರೆ ನಮ್ಮ ದೇಶದಲ್ಲಿನ ಅನಕ್ಷರತೆ, ಮೌಢ್ಯತೆ ಜೊತೆಗೆ ಇಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಕೌಟುಂಬಿಕ ನಂಬಿಕೆಗಳು ಹೆಣ್ಣನ್ನು ಕತ್ತಲೆಯ ಕೋಣೆಯಲ್ಲಿ ಇರಿಸಲು ಯತ್ನಿಸಿದವು. "ಪುರುಷ ಕೇಂದ್ರಿತ ಗ್ರಹಿಕೆಗಳು ಹೆಣ್ಣಿನ ಗುಣ ಸ್ವಭಾವವನ್ನು ನಿರ್ದೇಶಿಸುವಂತೆ, ಅಂತಹ ಗುಣ ಸ್ವಭಾವಗಳಿಗೆ ಹೊಂದಿಕೆಯಾಗುವ ಕೆಲಸಗಳನ್ನು ನಿಗದಿಪಡಿಸಿತು. ಹೆಣ್ಣಿನ ಸ್ವಭಾವಗಳು ಮನೆಗೆಲಸ ಅಪೇಕ್ಷಿಸುವ ತ್ಯಾಗ, ಸಹನೆ, ಸೂಕ್ಷ್ಮತೆ, ಮಿತವ್ಯಯ, ಸಂಚಯನ ಪ್ರವೃತ್ತಿಗಳು ಹೆಣ್ಣಿನದಾಗಿವೆ ಎಂದು ಅಂತಹ ಗುಣಗಳನ್ನು ವೈಭವೀಕರಿಸುತ್ತಲೇ ಹೆಣ್ಣನ್ನು ಖಾಸಗೀ ಜಗತ್ತಿನ ನೇಪಥ್ಯಕ್ಕೆ ತಳ್ಳಲಾಯಿತು".[೧] ಪುರುಷ ವರ್ಗದ ನಿಯಂತ್ರಣದಲ್ಲಿ ಆಕೆಯ ಬದುಕು ನಿಂತಿತು.

ಆದರೆ ನಮ್ಮಲ್ಲಿ ಶಿಕ್ಷಣದ ಪ್ರಾಮುಖ್ಯತೆ, ಉದ್ಯೋಗದ ಅವಕಾಶಗಳು, ರಾಜಕೀಯ ಪ್ರೇರಣೆಗಳಿಂದ ಸ್ತ್ರೀಯರಲ್ಲಿ ಜಾಗೃತಿ ಮೂಡಿತು. ಇದೇ ವೇಳೆಗೆ ಪಶ್ಚಿಮದಿಂದ ಬೀಸಿದ ವೈಚಾರಿಕ ಗಾಳಿಯೊಂದಿಗೆ ಬೆರೆತು ಬಂದ 'ಸ್ತ್ರೀವಾದಿ ಸಿದ್ಧಾಂತ'ದ ಬೀಜಗಳು ದೇಶೀ ನೆಲದಲ್ಲಿ ಆಶ್ರಯ ಪಡೆದು ಮೊಳಕೆಯೊಡೆಯಲು ಸಾಧ್ಯವಾಯಿತು. ಸ್ತ್ರೀವಾದಿ ಧೋರಣೆ ಕಲಿತ ಉದ್ಯೋಗಸ್ಥ ಸ್ತ್ರೀಯರಲ್ಲಿ ಟಿಸಿಲೊಡೆದು ಇಂದು ಇಡೀ ಮಹಿಳಾ ಲೋಕವನ್ನು ಆವರಿಸಿದೆ. ಸಾಮಾಜಿಕವಾಗಿ, ಧಾರ್ಮಿಕವಾಗಿ, ಕೌಟುಂಬಿಕವಾಗಿ ಹಾಗೂ ಆರ್ಥಿಕವಾಗಿ ಪುರುಷರಿಂದ ಶೋಷಣೆಗೊಳಗಾಗಿದ್ದ ಮಹಿಳೆಯರಲ್ಲಿ ಜಾಗೃತ ಪ್ರಜ್ಞೆ ಆವರಿಸಿತು. ಕುಟುಂಬದ ಒಳಗಾಗಲಿ ಹೊರಗಾಗಲಿ ಸ್ತ್ರೀ ತಾನು ಸ್ವಾಭಿಮಾನದಿಂದ ಪುರುಷನಿಗೆ ಸರಿಸಾಟಿಯಾಗಿ ಬೆಳೆಯಬೇಕೆಂಬ ಆತ್ಮವಿಶ್ವಾಸ ಮೂಡಿಸಿತು. ಪುರುಷರು ತೊಡಿಸಿದ್ದ ಎಲ್ಲ ಬಗೆಯ ಸಂಕೋಲೆಗಳಿಂದ ಬಿಡುಗಡೆಗೊಂಡು ಹೊಸ ಬದುಕು ಕಾಣುವ ಆಶಯದೊಂದಿಗೆ ಪ್ರಕಟವಾದ ಸ್ತ್ರೀವಾದಿ ನಿಲುವು ಇಂದು ಬರಹದಲ್ಲಿ, ಚಳುವಳಿಯಲ್ಲಿ, ಸಂಘಟನೆಗಳಲ್ಲಿ, ಸಹಕಾರ ಪ್ರಜ್ಞೆಯಲ್ಲಿ ಪ್ರಸಾರಗೊಳ್ಳುತ್ತಿದೆ.

"ಮಹಿಳೆಯರಿಂದ ರಚಿತವಾಗಿರುವ ಕೃತಿಗಳಲ್ಲಿ ಬಹುಪಾಲು ಕೃತಿಗಳು ತೀವ್ರತೆಯ ಕೊರತೆಯಿಂದ ಸೊರಗಿದ್ದರೆ, ಮಹಿಳೆಯರ ಜೀವನದಲ್ಲಿ ಪರಂಪರಾಗತವಾಗಿ ಬಂದ ನೀರವವೇ ಕಾರಣ – ಜೊತೆಗೆ ಮಹಿಳೆಯರು ಬೆಳೆಸಿಕೊಳ್ಳಬೇಕಾದ ಮೌಲ್ಯಗಳ *Indoctritisation* ಹೀಗಾಗಿ ಮಹಿಳೆಯರ ಕೃತಿಗಳಲ್ಲಿ ಬಹುಪಾಲು ಕೃತಿಗಳು ಅಡಿಗೆ, ಅಡಿಗೆ ಮನೆ, ಅರಚುವ ಅತ್ತೆ, ಕಿರಿಚುವ ಮಕ್ಕಳು, ಅಬ್ಬರಿಸುವ ಗಂಡ, ಮಧ್ಯದಲ್ಲಿ ಅಲ್ಪಸ್ವಲ್ಪ ಪ್ರೇಮ ಸಲ್ಲಾಪ ಇಂಥ ಪ್ರಸಂಗಗಳಿಂದಲೇ

ಕೂಡಿದ್ದರೆ ಆಶ್ಚರ್ಯವಲ್ಲ".[೨] ಮಹಿಳೆಯರು ಕಾವ್ಯಕೃಷಿಗೆ ತೊಡಗಿದ ಆರಂಭದ ಕಾಲದಲ್ಲಿ ಈ ಮಾತುಗಳು ನಿಜವೆನಿಸಿದರೂ ಪ್ರಸ್ತುತಕ್ಕೆ ಈ ಮಾತು ಅನ್ವಯವಾಗಲಾರದು.

೨೦ನೇ ಶತಮಾನದ ೮೦ರ ದಶಕದಲ್ಲಿ ಇಂತಹ ಆರೋಪಗಳು ಸ್ತ್ರೀ ಸಾಹಿತ್ಯದ ಬಗೆಗೆ ಸಹಜವಾಗಿಯೇ ಕೇಳಿಬರುತ್ತಿದ್ದವು. ಪಾಶ್ಚಾತ್ಯರಿಂದ ಬೀಸಿ ಬಂದ ಸ್ತ್ರೀ ವಾದಿ ಚಿಂತನೆ ಭಾರತೀಯ ವಿದ್ಯಾವಂತ ಮಹಿಳೆಯರಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿತು. ಮನ ಬಿಚ್ಚಿ ತಮ್ಮ ಅಂತರಾಳದ ನೋವಿನ ಸಂವೇದನೆಗಳನ್ನು ಮುಕ್ತವಾಗಿ ಅಭಿವ್ಯಕ್ತಿಸಬಲ್ಲ ಸಾಮರ್ಥ್ಯವನ್ನು ಪಡೆದುಕೊಂಡರು. ಈ ಮಾತನ್ನು ಇಂದಿನ ಎಲ್ಲ ಲೇಖಕಿಯರಿಗೂ ಸಾರಾಸಗಟಾಗಿ ಅನ್ವಯಿಸಲಾಗದು. ಕೆಲವು ಅಪವಾದಗಳೂ ಇವೆ. ಆದರೆ ಇದೆಲ್ಲದರ ನಡುವೆ ಎಲ್ಲ ರಂಗದಲ್ಲೂ ಪುರುಷನಿಗೆ ಹೆಗಲೆಣೆಯಾಗಿ ದುಡಿವ ಮಹಿಳೆ ವೈಯಕ್ತಿಕವಾದ ಆರ್ಥಿಕ ಭದ್ರತೆಯನ್ನೂ ಪಡೆದುಕೊಂಡಿದ್ದಾಳೆ. ಹೀಗಾಗಿ ತನ್ನ ಕಣ್ಣುಗಳಿಂದಲೇ ಸಮಾಜವನ್ನು ನೋಡುವ, ತನ್ನ ಬುದ್ಧಿ ಬಲದಿಂದಲೇ ಚಿಂತನೆ ಮಾಡಬಲ್ಲ ಸಾಮರ್ಥ್ಯ ಪಡೆದಿದ್ದಾಳೆ. ನವೋದಯ ಕಾಲದಲ್ಲಿ ಇಷ್ಟರಮಟ್ಟಿಗಿನ ಅವಕಾಶಗಳು ಸ್ತ್ರೀಯರಿಗೆ ದೊರೆಯುತ್ತಿರಲಿಲ್ಲ.

"ಇತ್ತೀಚೆಗೆ ಮಹಿಳೆಯು ತನ್ನ ಮೌನವ್ರತವನ್ನು ಮುರಿಯತೊಡಗಿದ್ದಾಳೆ. ತನ್ನ ಬಗೆಗೇ ಇರುವ ಭಯಗೊಳಿಸುವಂಥ ಅನೇಕ ಸತ್ಯಗಳನ್ನು ಗ್ರಹಿಸತೊಡಗಿದ್ದಾಳೆ. ಇದುವರೆಗೆ ತಾನು ಭದ್ರವೆಂದು ನೆಲೆಯೂರಿದ್ದು ಸೈದ್ಧಾಂತಿಕ ಬುನಾದಿಯಿಲ್ಲದ ಅಂತರಾಳದಲ್ಲಿ ಎನ್ನುವ ಎಚ್ಚರದೊಂದಿಗೇ ವಸ್ತುಸ್ಥಿತಿಯನ್ನು ಸ್ವೀಕರಿಸುವ, ಪ್ರತಿಕ್ರಿಯಿಸುವ, ಪ್ರತಿಭಟಿಸುವ ಪ್ರಕ್ರಿಯೆಯಲ್ಲಿ ಅವಳು ತೊಡಗಿಕೊಳ್ಳುತ್ತಿದ್ದಾಳೆ".[೩] ಜಾಗೃತಗೊಂಡ ಮಹಿಳೆ ವೈಚಾರಿಕ ನೆಲೆಯಲ್ಲಿ ನಿಂತು ಅಭಿವ್ಯಕ್ತಿಗೊಳಿಸುತ್ತಿದ್ದಾಳೆ.

ಎಲ್ಲ ವರ್ಗದ ಮಹಿಳೆಯರಲ್ಲೂ ಈ ಸಂವೇದನೆ ಜಾಗೃತಿಗೊಳಿಸಿದ್ದರೂ ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ಲೇಖಕಿಯರು ಕಾಣುತ್ತಿಲ್ಲ. ಲಭ್ಯವಿರುವ ಲೇಖಕಿಯರಲ್ಲಿ ಸ್ತ್ರೀವಾದಿ ನಿಲುವಿನಿಂದ ಮೂಡಿರುವ ಬರಹದಲ್ಲಿ ಆತ್ಮವಿಶ್ವಾಸವಿದೆ, ವೈಚಾರಿಕತೆ ಇದೆ, ಸ್ವಾಭಿಮಾನವಿದೆ. ಅದರಲ್ಲೂ ದಲಿತ ಬಂಡಾಯ ಪಂಥ ಸ್ತ್ರೀಯರ ಬರವಣಿಗೆಗೆ ಭದ್ರ ನೆಲೆ ಒದಗಿಸಿಕೊಟ್ಟಿತು. ಬಾಲ್ಯವಿವಾಹ, ಮೂಢನಂಬಿಕೆಗಳನ್ನು ಧಿಕ್ಕರಿಸುವುದರೊಂದಿಗೆ; ಅಕ್ಷರ ಲೋಕ ಪ್ರವೇಶಿಸುವ, ಉದ್ಯೋಗದಲ್ಲಿ ತೊಡಗುವ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಸಬಲರಾಗುವ ಧೀಶಕ್ತಿಯನ್ನು ಕೊಟ್ಟಿತು. ಈ ಹಿನ್ನೆಲೆಯಲ್ಲಿ ಮಹಿಳೆಯರ ಕಾವ್ಯ ಕ್ಷೇತ್ರ ಇಂದು ಹೊಸ ಹಾದಿಯಲ್ಲಿ ಮುನ್ನಡೆಯುತ್ತಿದೆ. ಆತ್ಮವಿಶ್ವಾಸದ ತರಂಗಗಳೊಂದಿಗೆ ಅವರ ಸ್ವಾನುಭವವೇ ಕಾವ್ಯವಾಗಿ ಹರಿದಿದೆ.

"ಸ್ತ್ರೀ ಸಂವೇದನೆಯ ಮಾತು ಇತ್ತೀಚಿನದಾದರೂ ಸಂವೇದನೆ ಇತ್ತೀಚಿನದಲ್ಲ. ಸಂವೇದನೆಯ ಸ್ವರೂಪ ಕಾಲ ಕಾಲಕ್ಕೆ ಬೇರೆ ರೀತಿಯಾಗಿರಬಹುದು; ಬೇರೆ ನೆಲೆಗಳಿಂದ ಪ್ರೇರಿತವಾಗಿರಬಹುದು . . ."[೪] – ಎಂಬ ಮಾತು ಒಪ್ಪುವಂತಹುದಾಗಿದೆ.

ಮಹಿಳೆಯರಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಗದ್ಯ ಬರಹಗಾರರು ಕಂಡಷ್ಟು ಪದ್ಯ ಬರಹಗಾರರು ಕಂಡುಬರಲಿಲ್ಲ. ಕಂಡರೂ ಕೂಡ ಬೆರಳೆಣಿಕೆಯಷ್ಟು ಮಂದಿ. ಅವರೂ

ಕೂಡ ಸಾಂಪ್ರದಾಯಕ ಚೌಕಟ್ಟಿನಲ್ಲೆ ತಮ್ಮ ಭಾವನೆಗಳಿಗೆ ಅಭಿವ್ಯಕ್ತಿ ರೂಪ ತೊಡಿಸಿದರೆ, ನಂತರದ ದಿನಗಳಲ್ಲಾದರೂ ನಿರೀಕ್ಷಿಸುವ ಪ್ರಮಾಣದಲ್ಲಿ ಲೇಖಕಿಯರು ಕಂಡುಬರಲಿಲ್ಲ. ಪುರುಷರಿಗೆ ಹೊಯ್ ಕೈಯ್ಯಾಗಿ ನಿಲ್ಲುವ ಸಾಮರ್ಥ್ಯ ತೋರಲಿಲ್ಲ. ಇದಕ್ಕೆ ಭಾರತದ ಸಾಂಪ್ರದಾಯಿಕ ಮನಸ್ಸು ಮತ್ತು ಅದು ಸೃಷ್ಟಿಸಿದ ವ್ಯವಸ್ಥೆ ಕಾರಣ ಎನಿಸುತ್ತದೆ. ಹಾಗಾಗಿ ಪುರುಷರಂತೆ ಸ್ತ್ರೀಯರೂ ಕೂಡ ತಮ್ಮ ಭಾವನೆಗಳನ್ನು ಮುಕ್ತವಾಗಿ ಅಭಿವ್ಯಕ್ತಿಪಡಿಸಲು ಇರುವ ತೊಂದರೆ ತೊಡಕುಗಳು ಹಲವಾರು.

"ಆಧುನಿಕ ಮಹಿಳಾ ಕಾವ್ಯ ಕುರಿತು ಮಾತನಾಡುವಾಗ ಮಹಿಳೆಯರ ಸಾಂಸ್ಕೃತಿಕ, ಸಾಹಿತ್ಯಕ ಪರಂಪರೆ ಮಹತ್ವದ್ದಾಗುತ್ತದೆ. ನಮ್ಮ ಸಂಸ್ಕೃತಿ ಎಂದರೆ ಅದು ಪುರುಷರ ಸಂಸ್ಕೃತಿಯೇ, ಪುರುಷನಿಂದ ನಿರ್ಮಿತವಾಗಿ ಸ್ತ್ರೀ ಪುರುಷರಿಬ್ಬರೂ ಪಾಲಿಸಿಕೊಂಡು ಬಂದಂಥದು. ಸ್ತ್ರೀಗೆ ಪ್ರತ್ಯೇಕ ಅಸ್ತಿತ್ವವೇ ಇಲ್ಲ. ಹೀಗಾಗಿ ಪ್ರತ್ಯೇಕ ಚರಿತ್ರೆಯೂ ಇಲ್ಲ. ಏನಿದ್ದರೂ ಅವಳು ಪುರುಷನ ನೆರಳಾಗಿ ಅವನನ್ನು ಅನುಸರಿಸಿ ಬಂದಿದ್ದಾಳೆ. ಪುರುಷ ಸಂಸ್ಕೃತಿಯ ಅಬ್ಬರದಲ್ಲಿ ಸ್ತ್ರೀ ಧ್ವನಿ ಕೇಳದಂತಾಗಿದೆ, ಸ್ತ್ರೀ ಸಂಸ್ಕೃತಿ ಕಾಣದಂತಾಗಿದೆ. ಅದನ್ನು ಹೆಕ್ಕಿ ತೆಗೆಯುವುದು, ನಿಚ್ಚಳಗೊಳಿಸುವುದು ಈ ಕಾಲದ ಅಗತ್ಯವಾಗಿದೆ."[೫] ಇದು ಇಂದಿನ ವಿಚಾರವಂತ ಬರಹಗಾರ್ತಿಯರಲ್ಲಿ ಕಂಡು ಬರುತ್ತದೆ.

ಸ್ತ್ರೀಯರು ಕಾವ್ಯ ಕ್ಷೇತ್ರದಲ್ಲಿ ಗಣನೀಯ ಪ್ರಮಾಣದಲ್ಲಿಲ್ಲ. ಅದರಲ್ಲೂ ದಲಿತ ಕಾವ್ಯದಲ್ಲಿ ಕವಯತ್ರಿಯರು ಬಹಳ ಕಡಿಮೆ. ಇದು ಕೇವಲ ದಲಿತ ಕಾವ್ಯಕ್ಕೆ ಮಾತ್ರ ಅನ್ವಯವಾಗುವ ಮಾತಲ್ಲ. ಇಡೀ ಕನ್ನಡ ಕಾವ್ಯಲೋಕವನ್ನು ಅವಲೋಕಿಸಿದಾಗ ಪುರುಷರಷ್ಟು ಪ್ರಮಾಣದಲ್ಲಿ ಸ್ತ್ರೀಯರು ದೊರೆಯಲಾರರು. ಇದಕ್ಕೆ ಹಲವು ಕಾರಣಗಳೆಂಬುದನ್ನು ಹಿಂದೆಯೆ ಚರ್ಚಿಸಲಾಗಿದೆ. ಆದರೂ ಯಾವುದೇ ಪಂಥ – ವರ್ಗದ ಮಹಿಳೆಯರು ತಮ್ಮ ಸೃಜನಶೀಲ ಪ್ರಕ್ರಿಯೆಯಲ್ಲಿ ಹಿಂಜರಿಯಲು ಇರುವ ತೊಡಕುಗಳಲ್ಲಿ ಮುಖ್ಯವಾಗಿ ಈ ಕೆಳಗಿನ ಐದನ್ನು ಚರ್ಚಿಸಬಹುದು :

೧. ಸಾಮಾಜಿಕ ವ್ಯವಸ್ಥೆ
೨. ಧಾರ್ಮಿಕ ಕಟ್ಟುಪಾಡು
೩. ಪ್ರೋತ್ಸಾಹದ ಕೊರತೆ
೪. ಶಿಕ್ಷಣದ ಕೊರತೆ
೫. ಸ್ತ್ರೀಯರಿಗಿರುವ ಕೀಳಿರಿಮೆಯ ಪ್ರಜ್ಞೆ

೧. ಸಾಮಾಜಿಕ ವ್ಯವಸ್ಥೆ: ಯಾವುದೇ ಸಮಾಜದಲ್ಲಿ ಬರವಣಿಗೆಯ ಮೇಲೆ ಅಲ್ಲಿನ ಸಾಮಾಜಿಕ ವ್ಯವಸ್ಥೆ ಪ್ರಭಾವ ಬೀರುತ್ತದೆ. ಅಲ್ಲಿನ ಆರ್ಥಿಕ ರಾಜಕೀಯ ಹಿನ್ನೆಲೆ ಪ್ರಧಾನ ಪಾತ್ರವಹಿಸುತ್ತದೆ. ನಮ್ಮದು ಪುರುಷ ಪ್ರಧಾನ ಸಮಾಜ. ಯಜಮಾನಿಕೆ ಎಂಬುದು ಪುರುಷನ ಹಿಡಿತದಲ್ಲೆ ಇರುವುದರಿಂದ ಮಹಿಳೆ ತಾನು ಪುರುಷನ ಅಧೀನಳಾಗಿರಬೇಕಾಗುತ್ತದೆ. ಗಂಡನ ದುಡಿಮೆಗೆ ಕೈಯೊಡ್ಡಿ ಕುಳಿತು ಸಂಸಾರ ತೂಗುವ ಜವಾಬ್ದಾರಳಾಗಿದ್ದಾಳೆ. ಹೊರಗಿನ ವ್ಯವಹಾರ, ವಹಿವಾಟುಗಳನ್ನು ಗಂಡಸೇ ನಿರ್ವಹಿಸುವುದರಿಂದ ಅವನಿಗಿರುವ ವ್ಯಾಪಕ ಅವಕಾಶ ಸ್ತ್ರೀಗೆ ಇರುವುದಿಲ್ಲ. ಈಕೆ ಕೇವಲ ಕೋಣೆ ಒಳಗಿನ ವ್ಯವಹಾರಕ್ಕೆ, ಕೋಣೆ ಒಳಗಿನ ಸಂಸ್ಕೃತಿಗೆ ಒಗ್ಗಿ

ಹೋಗಿರುತ್ತಾಳೆ. ನಮ್ಮ ಕೋಣೆ ಸಂಸ್ಕೃತಿಯಾದರೂ ಕೂಡ ಗಂಡ, ಮಕ್ಕಳು, ತಾಯಿ, ತಂದೆ, ಅತ್ತೆ, ಮಾವ, ರಕ್ತ ಸಂಬಂಧಿಕರ ಯೋಗಕ್ಷೇಮ, ಊಟೋಪಚಾರ, ಮನೆತನದ ಕೀರ್ತಿ ಗೌರವಕ್ಕೆ ಆದ್ಯತೆ ನೀಡುವ ರೀತಿಯಲಿದ್ದು, ಆಕೆ ಕೇವಲ ಅಂಧಾನುಕರಣೆಯಂತೆ ಜೀವನ ನಿಭಾಯಿಸುವ ಸ್ಥಿತಿಯಲ್ಲಿರುವುದರಿಂದ ಆಕೆಯ ಬರವಣಿಗೆಗೆ ತಡೆಹಾಕಿದಂತಾಗಿದೆ.

"ಸಂಸಾರದಲ್ಲಿ ತನ್ನ ವಿಮೋಚನೆ, ಸಹನೆ, ತ್ಯಾಗ ಸ್ನೇಹಗಳಿಗೆ ಸವಾಲುಗಳಾಗಿ ಬರುವ ಸಂದರ್ಭಗಳನ್ನು ನಿಭಾಯಿಸುವುದು ಹೇಗೆ, ಎಂಬಂತಹ ಸಂಗತಿಗಳಿಂದ ಮೊದಲುಗೊಂಡು, ಮಕ್ಕಳ ಲಾಲನೆ ಪಾಲನೆ ಮನೆಯ ಅಂದ ಚೆಂದ ಮನೆಯ ಖರ್ಚುವೆಚ್ಚಗಳ ನಿರ್ವಹಣೆ, ತೋಟಗಾರಿಕೆ, ಅಡಿಗೆ – ಹೊಸ ರುಚಿ, ಗೃಹ ವೈದ್ಯ – ಗೃಹೋಪಕರಣಗಳ ರಿಪೇರಿ ಇವು ಹೆಣ್ಣಿಗೆ ಬೋಧಿಸಲ್ಪಡುವ ಸಂಗತಿಗಳಾಗಿರುತ್ತವೆ".[೬]

ಸಾಂಪ್ರದಾಯಿಕ ಸ್ತ್ರೀವಾದಿಗಳಿಗೆ ರಾಮಾಯಣ, ಮಹಾಭಾರತ, ಪುರಾಣಗಳಿಂದ ಪ್ರೇರಿತರಾದ ಅಲ್ಲಿನ ಪತಿವ್ರತಾ ಮಹಿಳಾಮಣಿಗಳೇ ಇಂದಿಗೂ ಆದರ್ಶ. ಅವರ ನಂಬಿಕೆ ಶ್ರದ್ಧೆಗಳೇ ಇವರ ನಂಬಿಕೆ ಶ್ರದ್ಧೆಗಳು. ಸಾಂಪ್ರದಾಯಕತೆಯನ್ನು ಮೆರೆಸುವುದೇ ಇವರ ಏಕೈಕ ಗುರಿ. ಭಾರತೀಯ ಪರಂಪರೆಯಲ್ಲಿ ಅಂತರ್ಗತವಾಗಿರುವ ದೋಷ ದೌರ್ಬಲ್ಯಗಳಾಗಲಿ, ಅಲ್ಲಿ ಸ್ತ್ರೀಯರಿಗೆ ವಿಧಿಸಿರುವ ನಿರ್ಬಂಧಗಳಾಗಲಿ, ಆಕೆಯ ಸ್ವಾತಂತ್ರ್ಯ ಸಮಾನತೆಗೆ ಒದಗಿರುವ ಕಟ್ಟುಪಾಡುಗಳಾಗಲಿ ಇವರಿಗೆ ಕಾಣುವುದೇ ಇಲ್ಲ. ಸಂಪ್ರದಾಯದ ಜಪದೊಂದಿಗೆ ಆಕೆಯನ್ನು ಕಾಣುವುದೇ ಅವರಿಗೊಂದು ಮಾದರಿ ಹಾಗೂ ಮೌಲ್ಯಗಳ ಕಲ್ಪನೆ. ಜೀವವಿರೋಧಿಯಾದ ನಿಯಮಗಳನ್ನು ಈಗಲೂ ಸ್ತ್ರೀ ಅನುಸರಿಸಬೇಕೆಂಬ ಹುಚ್ಚು ಭ್ರಮೆ ಈ ಜನರಲ್ಲಿದೆ. ಬದಲಾದ ಕಾಲದಲ್ಲಿ ಚಿಂತನೆಗಳು ಬದಲಾಗದೆ ಹೆಪ್ಪುಗಟ್ಟಿರುವ ಜಡವಾದಿಗಳ ತಾಳಕ್ಕೆ ತಕ್ಕ ಹೆಜ್ಜೆ ಹಾಕಿ ಹೆಣ್ಣನ್ನು ಆ ಒಂದು ನಿರ್ಬಂಧದಲ್ಲಿಟ್ಟು ಬೆಳೆಸಬೇಕೆಂಬ ಆದರ್ಶ ಈ ವರ್ಗದಲ್ಲಿದೆ.

"ಪುರುಷಕೇಂದ್ರಿತ ಗ್ರಹಿಕೆಗಳು ಹೆಣ್ಣಿನ ಗುಣಸ್ವಭಾವವನ್ನು ನಿರ್ದೇಶಿಸುವಂತೆ, ಅಂತಹ ಗುಣಸ್ವಭಾವಗಳಿಗೆ ಹೊಂದಿಕೆಯಾಗುವ ಕೆಲಸಗಳನ್ನು ನಿಗದಿಪಡಿಸಿತು. ಹೆಣ್ಣಿನ ಸ್ವಭಾವಗಳು ಮನೆಗೆಲಸ ಅಪೇಕ್ಷಿಸುವ ತ್ಯಾಗ, ಸಹನೆ, ಸೂಕ್ಷ್ಮತೆ, ಮಿತ ವ್ಯಯ, ಸಂಚಯನ ಪ್ರವೃತ್ತಿಗಳು ಹೆಣ್ಣಿನದಾಗಿವೆ ಎಂದು ಅಂತಹ ಗುಣಗಳನ್ನು ವೈಭವೀಕರಿಸುತ್ತಲೇ ಹೆಣ್ಣನ್ನು ಖಾಸಗಿ ಜಗತ್ತಿನ ನೇಪತ್ಯಕ್ಕೆ ತಳ್ಳಲಾಯಿತು".[೭] ನಿಯಂತ್ರಣ ಹಾಗೂ ಅಧೀನತೆಗೊಳಗಾಗಿ ಬದುಕುವ ಸ್ಥಿತಿ ಹೆಣ್ಣಿನದು ಎಂಬ ದಾಸ್ಯತನವೇ ಸನಾತನ ವಾದಿಗಳಿಗೆ ಆದರ್ಶವೆನಿಸಿದೆ.

೩. ಧಾರ್ಮಿಕ ಕಟ್ಟುಪಾಡು: ನಮ್ಮ ಎಲ್ಲ ಜಾತಿ ವರ್ಗಗಳಲ್ಲೂ ಕೂಡ ಹೆಣ್ಣನ್ನು ನಿಯಂತ್ರಿಸುವ ಶಕ್ತಿ ಧರ್ಮದ ಮೂಲದಿಂದಲೇ ಬಂದಿದೆ. ಆಧುನಿಕ ಶಿಕ್ಷಣವೇನೇ ಇರಲಿ, ವಿಜ್ಞಾನ ಯುಗವೇ ಬರಲಿ, ವೈಚಾರಿಕ ಚರ್ಚೆಗಳೇ ನಡೆಯಲಿ ಇವೆಲ್ಲ ಕೇವಲ ವೇದಿಕೆಯ, ವಿಶ್ಲೇಷಣೆ ಮಟ್ಟಕ್ಕೆ ಸೀಮಿತಗೊಂಡಿರುವುದುಂಟು. ಆಧುನಿಕ ಚರ್ಚೆ ಚಿಂತನೆಗಳು ಕೇವಲ ಕೆಲವೇ ಜನರ ವಲಯದಲ್ಲಿ ಸುತ್ತು ಹಾಕುವ ಸಂಗತಿಗಳಾಗಿವೆ. ಇಡೀ ಮಹಿಳಾ ಲೋಕವನ್ನು ತಟ್ಟಿ ಜಾಗೃತಿಗೊಳಿಸುವ ಕೆಲಸ ನಡೆದಿಲ್ಲ. ಜೊತೆಗೆ

ಸಂಪ್ರದಾಯವಾದಿಗಳು ಹೆಣ್ಣನ್ನು ಹಿಂದಿನಂತೆ ನಡೆಸಿಕೊಳ್ಳುವುದೇ ಒಂದು ಆದರ್ಶ, ಅದೊಂದು ಭಾರತೀಯರ ಶ್ರೇಷ್ಠತೆ ಎಂಬ ಗೊಡ್ಡು ಆದರ್ಶವನ್ನೆ ವಿಶೇಷವಾಗಿ ಪ್ರಚಾರಕ್ಕೆ ತಂದಿರುವುದರಿಂದ, ಅದಕ್ಕೆ ಮಠ ಮಾನ್ಯಗಳು, ಕೆಲವು ಸಂಘಸಂಸ್ಥೆಗಳು ಹಿಂದಿನದನ್ನೇ ಉಳಿಸಿ ಬೆಳೆಸಿಕೊಂಡು ಹೋಗಲು ಟೊಂಕ ಕಟ್ಟಿ ನಿಂತಿರುವುದೂ ಕೂಡ ಸ್ತ್ರೀಯರು ಮುಕ್ತವಾಗಿ, ತಮ್ಮ ಭಾವನೆಗಳನ್ನು ನಿರ್ಭಿಡೆಯಿಂದ ಅಭಿವ್ಯಕ್ತಿಪಡಿಸಲು ಸಾಧ್ಯವಾಗಿಲ್ಲ. ಅವರು ಹಳೆಯದನ್ನು ಧಿಕ್ಕರಿಸಿ ತಮ್ಮ ವೈಚಾರಿಕ ಪ್ರಖರತೆಯಿಂದ ಬರೆದರೆ ಸ್ವೀಕರಿಸುವಂಥ ವಿಶಾಲ ಭಾವನೆ ಹೊತ್ತ ಪುರುಷ ಸಮಾಜವಿಲ್ಲ. ಹಾಗಾಗಿ ಪುರುಷ ಸಮಾಜಕ್ಕೆ ಬದ್ಧವಾಗುವಂತೆ, ಅವರ ಆಶಯದಂತೆ ತಮ್ಮ ಆಶಯಗಳನ್ನು ರೂಢಿಸಿಕೊಳ್ಳಬೇಕಾದ ಅನಿವಾರ್ಯತೆ ಮಹಿಳೆಯರದಾಗಿರುವುದು ಒಂದು ದುರಂತ.

ಹೆಣ್ಣಿಗೆ ಧಾರ್ಮಿಕ ಸಂಕೋಲೆ ತೊಡಿಸಿದ ಗಂಡು, ಆಕೆಯನ್ನು ತನ್ನ ಇಷ್ಟಾನಿಷ್ಟಗಳಿಗೆ ಬಳಸಿಕೊಳ್ಳುವುದನ್ನು ನಿಲ್ಲಿಸಲಿಲ್ಲ. ಹೆಣ್ಣಿಗೊಡ್ಡಿದ ನೀತಿ ನಿಬಂಧನೆಗಳ ಹಿಂದೆ ಗಂಡಿನ ಸ್ವಾರ್ಥವೇ ಇದೆ ಎಂಬುದನ್ನು ಆಧುನಿಕ ಕವಯತ್ರಿಯರು ಮನಗಂಡಿರುವುದು ಕಂಡುಬರುತ್ತದೆ.

ಮಲ್ಲಿಕಾ ಘಂಟಿ ತಮ್ಮ 'ಹೊಣೆಗಾರಿಕೆ' ಎಂಬ ಕವನದಲ್ಲಿ ಗಂಡಿನ ಕೀರ್ತಿ ಕಾಮನೆಗೆ ಹೆಣ್ಣು ಬಲಿಯಾದುದ್ದನ್ನು ಹೀಗೆ ಚಿತ್ರಿಸಿದ್ದಾರೆ.

ಬಸುರಿ ಸೀತೆಯ ಅಗ್ನಿಯಂಥ ಅಡವಿಗೆ ಅಟ್ಟಿದ್ದು ಪ್ರಜೆಗಳಿಗಾಗಿ
ಗಂಡರೈವರು ಹೆಂಡತಿಯ ಪಣಕ್ಕಿಟ್ಟಿದ್ದು ಧರ್ಮಕ್ಕಾಗಿ
ಹರಿಶ್ಚಂದ್ರ ಹೆಂಡತಿಯ ಮಾರಿದ್ದು ಸತ್ಯಕ್ಕಾಗಿ
ಬುದ್ಧ ಮಧ್ಯ ರಾತ್ರಿಯಲೆದ್ದು ಹೆಂಡತಿಯ ಬಿಟ್ಟು ಹೋಗಿದ್ದು
ಜ್ಞಾನೋದಯಕ್ಕಾಗಿ
ದೇವಾನು ದೇವತೆಗಳಿಂದ
ಹುರಿಗೊಂಡ ಸಂಕಲೆಯ ತುದಿ
ನಿಮ್ಮ ಕೈಯಲ್ಲಿರುವುದು ನಿಚ್ಚಳವಾಗಿ ಕಾಣುತ್ತಿದೆ.[೮]

ಆಧುನಿಕ ಸ್ತ್ರೀ ಸಂವೇದನೆಯ ದೃಷ್ಟಿಯಿಂದ ರಚಿತವಾದ ಈ ಕವಿತೆ. ಪುರುಷರು ಎಲ್ಲ ಕಾಲದಲ್ಲೂ ತಮ್ಮ ಕೀರ್ತಿ, ಕಾಮನೆ, ಧರ್ಮ, ತತ್ವಗಳ ಸ್ವಾರ್ಥತೆಗಳಿಗಾಗಿ ಹೆಣ್ಣನ್ನು ಪ್ರಾಣಿಯಂತೆ ನಿಕೃಷ್ಟವಾಗಿ ಬಳಸಿಕೊಂಡಿರುವುದನ್ನು ಮನವರಿಕೆ ಮಾಡಿಕೊಡುತ್ತದೆ.

೩. ಪ್ರೋತ್ಸಾಹದ ಕೊರತೆ: ಮಹಿಳಾ ಸಾಹಿತ್ಯ ಇತ್ತೀಚೆಗೆ ತನ್ನ ವ್ಯಾಪ್ತಿಯಲ್ಲಿ ಮುನ್ನಡೆದರೂ ನಿರೀಕ್ಷಿಸಿದ ರೀತಿಯಲ್ಲಿ ಪ್ರಗತಿ ಕಂಡಿಲ್ಲ. ಮಹಿಳಾ ಚಿಂತನೆಗಳಿಗೆ, ಆಶಯಗಳಿಗೆ ಸ್ಪಷ್ಟವಾಗಿ ಸ್ಪಂದಿಸುವ ಧೋರಣೆ ನಮ್ಮ ಸಮಾಜದಲ್ಲಿ ಇಲ್ಲ. ಎಲ್ಲವುದನ್ನೂ ಧಾರ್ಮಿಕ ಪ್ರಜ್ಞೆ, ವ್ಯವಹಾರಿಕ ಜಾಣ್ಮೆಯಿಂದಲೇ ನೋಡುವ ಸಮಾಜ ಸ್ತ್ರೀಯ ಬರವಣಿಗೆಗೆ ಉತ್ತೇಜನಕಾರಿಯಾದ ರೀತಿಯಲ್ಲಿ ಸ್ಪಂದಿಸುತ್ತಿಲ್ಲ. ಆಕೆಯ ಬರಹವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದೊಂದು ದೊಡ್ಡ ಸಾಹಸವಾದರೂ ಅದಕ್ಕೆ ಮಾರುಕಟ್ಟೆ ರೂಪಿಸುವುದು ಇನ್ನೂ ದುಸ್ತರವಾದುದ್ದಾಗಿದೆ. ಇಂತಹ ಕಾರ್ಯಕ್ಕೆ ಪುರುಷನನ್ನೇ ಆಕೆ ಆಶ್ರಯಿಸಬೇಕಾದ ಸ್ಥಿತಿ ಇರುವುದರಿಂದಲೂ ಅದೊಂದು

ಪರಾವಲಂಬಿ ಕಾರ್ಯವಾಗಿರುವುದರಿಂದ ಆಕೆಯ ಉತ್ಸಾಹಕ್ಕೆ ತಣ್ಣೀರು ಎರಚಿದಂತಾಗುತ್ತದೆ. ಈ ಎಲ್ಲ ಕಾರಣಗಳಿಂದ ಸ್ತ್ರೀಯರು ಪುರುಷರಷ್ಟು ಪ್ರಮಾಣದಲ್ಲಿ ನಿರ್ಭೀತಿಯಿಂದ ಸಾಹಿತ್ಯ ಕೃಷಿ ಮಾಡಲು ಸಾಧ್ಯವಾಗಿಲ್ಲ.

"ನಮ್ಮ ಸಂಸ್ಕೃತಿಯಲ್ಲಿ, ನಮ್ಮ ಸಮಾಜದ ಮನೋ ಭಿತ್ತಿಯಲ್ಲಿ ಮಹಿಳೆಯ ಸಹಜ ಸ್ವಭಾವ ಗುಣಗಳನ್ನು ಕುರಿತಂತೆ ಹಲವು ರೂಢಿಗತ ಗ್ರಹಿಕೆಗಳು ನೆಲೆಗೊಂಡುಬಿಟ್ಟಿವೆ. ಮಹಿಳೆ ಚಂಚಲೆ, ದುರ್ಬಲೆ ಹಾಗೂ ಅಸ್ಥಿರ ಮನಸ್ಕಳು- ಆತ್ಮ ವಿಶ್ವಾಸದ ಕೊರತೆಯಿಂದ ಬಳಲುವವಳು, ಅಶಕ್ತಳು. ಅವಳಲ್ಲಿ ಉತ್ಪಾದನಾ ಸಾಮರ್ಥ್ಯಕ್ಕಿಂತ ಪಾಲನಾ ಸಾಮರ್ಥ್ಯವೇ ಸಹಜ ಗುಣವಾಗಿದೆ. ಅವಳಲ್ಲಿ ಕಾಮನ್ ಸೆನ್ಸ್ ಮತ್ತು ಕಲ್ಪನಾ ಪ್ರತಿಭೆಗಳು ಚುರುಕಾಗಿರುತ್ತವೆಯೇ ಹೊರತು ಬುದ್ಧಿಶಕ್ತಿ ಕಡಿಮೆಯೇ. ಅಷ್ಟಿಷ್ಟು ಓಡುವ ಬುದ್ಧಿಶಕ್ತಿ, ಮನೆ, ಕುಟುಂಬ, ಮಕ್ಕಳು ಎಂಬ ದಿಸೆಯಲ್ಲಷ್ಟೇ ಓಡುವಂತಾಗಿದೆ" – ಇಂತಹ ನಂಬಿಕೆಯ ಕೂಪದಲ್ಲಿ ಹೆಣ್ಣು ಒದ್ದಾಡುತ್ತಿದ್ದಾಳೆ.

೪. ಶಿಕ್ಷಣದ ಕೊರತೆ: ನಮ್ಮಲ್ಲಿ ಶಿಕ್ಷಣ ಉಳ್ಳವರ ಸ್ವತ್ತಾಗಿದೆ. ಹಣವಂತರ ಪಾಲಾಗಿದೆ. ಪಟ್ಟಭದ್ರ ಹಿತಾಸಕ್ತಿಗಳ ಹಿಡಿತದಲ್ಲಿ ಶಿಕ್ಷಣಕ್ಷೇತ್ರ ಸಿಲುಕಿದೆ. ಶಿಕ್ಷಣ ಸಂಸ್ಥೆಗಳನ್ನು ಖಾಸಗಿ ವಲಯದಲ್ಲಿ ತೆರೆಯುವ ಅವಕಾಶ ಮಾಡಿಕೊಟ್ಟಿರುವ ಸರ್ಕಾರ, ಅದೊಂದು ಉದ್ಯಮವಾಗಿ, ಲಾಭದಾಯಕ ಕೃಷಿಯಂತೆ ಮಾಡಿದೆ. ಬಡವರು, ಅಲ್ಪಸಂಖ್ಯಾತರು, ದಲಿತರು ತಮ್ಮ ಆಶಯಕ್ಕೆ ತಕ್ಕಂತೆ ಶಿಕ್ಷಣ ಪಡೆಯಲಾರದ ಸ್ಥಿತಿ ಇದೆ. ಅದರಲ್ಲೂ ಸ್ತ್ರೀಯರಿಗಿಂತ ಪುರುಷರಿಗೆ ಶಿಕ್ಷಣದ ಅಗತ್ಯ ಎಂಬುದು ಬಹುಮತದ ಅಭಿಪ್ರಾಯವಾಗಿದೆ. ಇಂದು ಶಿಕ್ಷಣ ಬದುಕಿಗಾಗಿ, ಜೀವನ ಸುಧಾರಣೆಗಾಗಿ, ಸಮಾಜದ ಏಳ್ಗೆಗಾಗಿ, ಉನ್ನತ ಬದುಕಿಗಾಗಿ ಎಂಬ ಪರಿಕಲ್ಪನೆಯಿಂದ ಬಹುದೂರ ಸಾಗಿದ್ದೇವೆ. ಉದ್ಯೋಗಕ್ಕಾಗಿ ಶಿಕ್ಷಣ, ಹಣ ಗಳಿಕೆಗಾಗಿ ಶಿಕ್ಷಣ, ಅಧಿಕಾರಕ್ಕಾಗಿ ಶಿಕ್ಷಣ, ಪ್ರತಿಷ್ಠೆಗಾಗಿ ಶಿಕ್ಷಣ ಎಂಬ ಸೀಮಿತ ಪ್ರಜ್ಞೆಗೆ ಒಳಗಾಗಿರುವುದರಿಂದ ಕುಟುಂಬದಲ್ಲಿ ಹುಟ್ಟಿದ ಗಂಡು ಹೆಣ್ಣುಗಳಲ್ಲಿ ತಾರತಮ್ಯತೆ ಕಾಣುತ್ತೇವೆ. ಮನೆಯ ಕಣ್ಣಾಗಿ, ಕುಟುಂಬದ ಉತ್ತರಾಧಿಕಾರಿಯಾಗಿ ಆಸ್ತಿ ಹಾಗೂ ದುಡಿಮೆಯ ಉತ್ತರಾಧಿಕಾರಿಯಾಗಿರಲು ಮಗನನ್ನು ಪರಿಗಣಿಸಿದಷ್ಟು ಮಗಳನ್ನು ಪರಿಗಣಿಸದೇ ಇರುವುದೂ ಕೂಡ ಒಂದು ಪ್ರಮುಖ ಅಂಶ. ಆದರೆ ಇನ್ನು ಕೆಲವು ಶ್ರೀಮಂತ ಕುಟುಂಬಗಳಲ್ಲಿ ಮಗನಿಗೆ ಕೊಟ್ಟ ಆದ್ಯತೆಯನ್ನು ಮಗಳಿಗೂ ನೀಡಿದರೂ ಅದೂ ಕೂಡ ಸಂಪ್ರದಾಯದ ಪ್ರಜ್ಞೆಯಲ್ಲಿ ಇರುತ್ತದೆ. ಮಾತ್ರವಲ್ಲ ಕೇವಲ ತಾಂತ್ರಿಕ ವೈದ್ಯಕೀಯ ಶಿಕ್ಷಣಕ್ಕೆ ಆದ್ಯತೆ ನೀಡುವುದೂ ಕೂಡ ಹೆಣ್ಣಿನ ಚಿಂತನೆಗೆ ಕಡಿವಾಣ ಹಾಕಿದಂತಾಗಿದೆ. ಆಕೆಗೆ ದುಡಿಮೆಯ ಯಂತ್ರವನ್ನಾಗಿಸುವುದೇ ಅವರ ಗುರಿಯಾಗಿರುತ್ತದೆಯೇ ಹೊರತು ಪ್ರಜ್ಞಾವಂತ ನಾಗರಿಕ ನಾರಿಯಾಗುವಂತೆ ಮಾಡಬೇಕೆಂಬ ಕಾಳಜಿ ಇರುವುದಿಲ್ಲ. ಮಿಗಿಲಾಗಿ ದುಬಾರಿ ಶಿಕ್ಷಣ ನೀಡಿ ಹೆಣ್ಣನ್ನು ಬೆಳೆಸಿ ಅನ್ಯರ ಮನೆಯ ಉದ್ಧಾರಕ್ಕೆ ನಾವೇಕೆ ಮುಂದಾಗಬೇಕು ಎಂಬ ಪ್ರಜ್ಞೆ ಕೆಲವರಲ್ಲಿದೆ. ಹೆಚ್ಚು ಶಿಕ್ಷಣ ಪಡೆದ ಹೆಣ್ಣಿಗೆ ಅನುಗುಣವಾದ ವರನನ್ನು ಹುಡುಕುವುದು ಅಷ್ಟೇ ಕಷ್ಟಕರ ಸಂಗತಿ. ಕೆಲವು ವರ್ಗದಲ್ಲಿ ಉನ್ನತ ಶಿಕ್ಷಣ ಪಡೆದ ಹೆಣ್ಣುಗಳಿಗೆ ಸರಿ ಸಮಾನವಾದ ಗಂಡುಗಳು ಸಿಗುವುದು ದುಸ್ತರವಾಗಿ ಕಾಡುತ್ತಿದೆ. ಹಾಗಾಗಿ ಭವಿಷ್ಯದ ಕಡೆ ಕಣ್ಣಿಟ್ಟ ಪೋಷಕರು ಹೆಣ್ಣಿಗೆ ಉನ್ನತ ಶಿಕ್ಷಣ ಕೊಡಿಸಲು ಹಿಂಜರಿಯುತ್ತಾರೆ.

ಉನ್ನತ ಶಿಕ್ಷಣ ಪಡೆದ ಹೆಣ್ಣಿಗೆ ಎರಡು ರೀತಿಯ ದುಬಾರಿ ಖರ್ಚು ಪೋಷಕರ ಹೆಗಲ ಮೇಲೆ ಬೀಳುತ್ತದೆ. ಒಂದು ಉನ್ನತ ಶಿಕ್ಷಣಕ್ಕೆ ತಗುಲುವ ವೆಚ್ಚ, ಮತ್ತೊಂದು ಉನ್ನತ ಶಿಕ್ಷಣ ಪಡೆದ ತರುವಾಯ ಆಕೆಯ ಅಪೇಕ್ಷೆಗೆ ತಕ್ಕ ವರನನ್ನು ಶೋಧಿಸುವಾಗ ಆತ ಕೇಳುವಷ್ಟು ವರದಕ್ಷಿಣೆ ಕೊಡಬೇಕಾದ್ದು ನಮ್ಮ ವ್ಯವಸ್ಥೆಯಲ್ಲಿ ಎದ್ದು ಕಾಣುವ ದೊಡ್ಡ ದುರಂತವಾಗಿದೆ. ಈ ಎಲ್ಲ ಹಿನ್ನೆಲೆಯಿಂದ ಶಿಕ್ಷಣವನ್ನು ಲಿಂಗಾಧಾರಿತವಾಗಿ ಪರಿಗಣಿಸುವ ಧೋರಣೆ ಪೋಷಕರಲ್ಲಿ ಕಂಡುಬರುತ್ತಿರುವುದರಿಂದ ಹೆಣ್ಣು ತನ್ನ ಜ್ಞಾನದ ಪರಿಧಿಯನ್ನು ಹಿಗ್ಗಿಸಿಕೊಂಡು ಬೆಳೆಯಲು ಸಾಧ್ಯವಾಗುತ್ತಿಲ್ಲ.

"ಒಂದು ಮನೆ ಇಡೀ ಸಮಾಜದ ಸೂಕ್ಷ್ಮ ಪ್ರಕೃತಿ. ಮನೆಯೊಂದರಲ್ಲಿ ಹೆಣ್ಣು - ಗಂಡಿನ ಪಾತ್ರವೇನು? ಅವರ ಕೆಲಸಗಳೇನು? ಕೆಲಸದ ಹಂಚಿಕೆ ಸ್ವರೂಪ ಮತ್ತು ಪ್ರಮಾಣ ಏನು? ಈ ಕೆಲಸದ ಬಗೆಗೆ ಹೆಣ್ಣು - ಗಂಡಿನ ಗ್ರಹಿಕೆ ಏನು? ಮತ್ತು ಆ ಶ್ರಮ ವಿಭಜನೆಯ ಹಿಂದಿನ ತಾತ್ವಿಕತೆ ಏನು? - ಎಂಬುದನ್ನು ತಿಳಿಯುವುದು ಮುಖ್ಯ"[೧೦] ಇಂತಹ ಆಲೋಚನೆಗಳಿಂದಲೇ ಸ್ತ್ರೀಯರಿಗಿರುವ ಪ್ರತಿಕೂಲ ವಾತಾವರಣ ಏನೆಂದು ತಿಳಿಯುತ್ತದೆ.

೫. ಸ್ತ್ರೀಯರಿಗಿರುವ ಕೀಳರಿಮೆಯ ಪ್ರಶ್ನೆ : ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಯಾವಾಗಲೂ ಹಿಂಬಾಲಕಳಾಗಿಯೇ ಕಂಡುಬರುತ್ತಾಳೆ. ಪುರುಷ ತನಗೆ ಅನಿಸಿದ್ದನ್ನು, ಅನುಭವಿಸಿದ್ದನ್ನು, ಆಗಬೇಕೆಂಬುದನ್ನು ಯಾವ ರೀತಿಯಲ್ಲಾದರೂ ಅಭಿವ್ಯಕ್ತಿಗೊಳಿಸಲು ಅವಕಾಶವಿದೆ. ಸಂಪ್ರದಾಯವನ್ನು ಉಲ್ಲಂಘಿಸುವ, ಹೊಸ ಪರಂಪರೆಗೆ ನಾಂದಿ ಹಾಡುವ ಧೀಶಕ್ತಿ ತೋರಿಸಬಲ್ಲ. ಅದೇ ಭಾವನೆಯನ್ನು ಸ್ತ್ರೀ ಹೊಂದಿದ್ದರೂ ಕೂಡ ಅದನ್ನು ಪುರುಷನಷ್ಟು ನಿರ್ಭಿಡೆಯಿಂದ ಅಭಿವ್ಯಕ್ತಿಪಡಿಸಲು ಅನೇಕ ಚಡಪಡಿಕೆಗೆ ಒಳಗಾಗುತ್ತಾಳೆ. ತನ್ನ ಆಲೋಚನೆಯೆಲ್ಲಾ ಇಡೀ ಸ್ತ್ರೀ ಸಮುದಾಯದ ಆಲೋಚನೆಯಂತೆ ಭಾವಿಸಿದರೂ ಅದನ್ನು ಪುರುಷ ಸಮಾಜ ವೈಯಕ್ತಿಕ ನೆಲೆಯಲ್ಲೆ ಕಾಣಲು ಯತ್ನಿಸುವುದರಿಂದ ಆಕೆಯ ಆಲೋಚನೆಗೆ ಗ್ರಹ ಬಡಿದಂತಾಗುತ್ತದೆ. ಪುರುಷನ ಚಿಂತನೆಗಳನ್ನು ನೋಡುವ ರೀತಿಗೂ, ಸ್ತ್ರೀಯರ ಚಿಂತನೆಗಳನ್ನು ನೋಡುವ ರೀತಿಗೂ ನಮ್ಮಲ್ಲಿ ವ್ಯತ್ಯಾಸ ಕಡಿಮೆಯಾಗದೆ ಕಂದಕದಂತೆ ಅಂತರ ಕಾಪಾಡಿಕೊಂಡು ಬಂದಿರುವುದರಿಂದ ಮಹಿಳೆಗೆ ಎಲ್ಲಿ ತನ್ನ ಆಲೋಚನೆಗಳಿಗೆ ಅಪಾರ್ಥವಾಗುತ್ತದೆಯೋ, ಎಲ್ಲಿ ವ್ಯಕ್ತಿಗತ ಹಿನ್ನೆಲೆಯಲ್ಲಿ ಸಮಾಜ ಸ್ವೀಕರಿಸೀತೊ ಎಂಬ ಆತಂಕದಿಂದ ಆಕೆ ಸಂಪ್ರದಾಯದ ಹಿಡಿತದಲ್ಲೆ ಉಸಿರು ಕಟ್ಟಿಕೊಂಡು ತೊಳಲಾಡುತ್ತಿರುವುದು ಹಾಗೇ ಮುಂದುವರಿದಿದೆ.

ಇಂತಹ ಕತ್ತಲೆ ಕೋಣೆಯಲ್ಲಿ ಉಸಿರು ಕಟ್ಟುವ ವಾತಾವರಣದಲ್ಲಿ ಬದುಕು ನಿಭಾಯಿಸುವ ಆಧುನಿಕ ಮಹಿಳೆ ಅನೇಕ ಸವಾಲುಗಳ ನಡುವೆಯೂ ಕೂಡ ತನ್ನ ಅಸ್ತಿತ್ವದ ದಾರಿ ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಆಶಾದಾಯಕ ಸಂಗತಿಯಾಗಿದೆ. ಸ್ವಾತಂತ್ರ್ಯ ಸಂಗ್ರಾಮದ ಕಾಲದಿಂದ ಹಿಡಿದು ಈ ತನಕವೂ ಕೂಡ ಪುರುಷರೊಂದಿಗೆ ಹೆಜ್ಜೆ ಹಾಕುವ ಸಾಹಸವನ್ನು ಕೆಲವು ಸ್ತ್ರೀಯರು ತೋರಿರುವುದು ಕಂಡುಬರುತ್ತದೆ. ಅದರಲ್ಲೂ ಇತ್ತೀಚೆಗೆ ದಲಿತ ಬಂಡಾಯ ಪಂಥ ಶಕ್ತಿಶಾಲಿಯಾಗಿ ಬೆಳೆದ ಸಂದರ್ಭದಲ್ಲಿ

ಗಣನೀಯವಾದ ಪ್ರಮಾಣದಲ್ಲಿ ಮಹಿಳಾ ಲೇಖಕರು ಕಂಡುಬರುತ್ತಾರೆ. ದಲಿತ ವರ್ಗದಿಂದ ಮಿತ ದೇವನೂರ, ಆರ್. ವೀಣಾ ಮೇಟಿಕುರ್ಕೆ, ದು. ಸರಸ್ವತಿ, ಜಿ.ಟಿ. ಲಲಿತಾ ನಾಯಕ್, ಸುಕನ್ಯಾ ಮಾರುತಿ, ಉಮಾ ಎಚ್. ಚಿತ್ರದುರ್ಗ ಮುಂತಾದವರು ಕಂಡುಬಂದಂತೆ ಇತರ ವರ್ಗದಿಂದ ಗಣನೀಯ ಸಂಖ್ಯೆಯ ಲೇಖಕಿಯರು ಕಂಡುಬರುತ್ತಾರೆ.

ದಲಿತ ಬಂಡಾಯದ ಆಶೋತ್ತರಗಳಿಗೆ ಒಲಿದು ಬರೆದ ಮಹಿಳೆಯರಲ್ಲಿ ಪ್ರಗತಿಪರ ಚಿಂತನೆಯ, ಸ್ವಾಭಿಮಾನದ, ಸಾಂಘಿಕ ಪ್ರಜ್ಞೆಯ ಒಲವುಗಳನ್ನು ಕಾಣಬಹುದು. ಹಿಂದುಳಿದ ಜಾತಿ ಜನಾಂಗ ಹಾಗೂ ದಲಿತರು, ಅಲ್ಪ ಸಂಖ್ಯಾತರು, ಈ ವಾಹಿನಿಯಲ್ಲಿ ಸೇರ್ಪಡೆಯಾದರು. ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯೂ ಒತ್ತಾಸೆಯಾಗಿ ನಿಂತಿತು. ಆಧುನಿಕ ಶಿಕ್ಷಣ ಬೆಂಗಾವಲಾಗಿ ಬಂತು. ಈ ಹಿನ್ನೆಲೆಯಲ್ಲಿ ಮಹಿಳೆಯರು ಹೊಸ ಹುರುಪಿನಿಂದ ಬರೆಯಲು ಆರಂಭಿಸಿದರು.

ನವೋದಯದ ಕಾಲದಲ್ಲಿ ಮಹಿಳೆಯರಲ್ಲಿ ಹೆಚ್ಚು ಮಂದಿ ಗದ್ಯ ಬರವಣಿಗೆಯಲ್ಲಿ ತೊಡಗಿದ್ದು ಕಂಡುಬರುತ್ತದೆ. ತಿರುಮಲಾಂಬ, ಶ್ಯಾಮಲಾದೇವಿ, ಸರಸ್ವತಿ ಗೌಡರ, ಕಲ್ಯಾಣಮ್ಮ ಇವರೆಲ್ಲ ಗದ್ಯ ಬರವಣಿಗೆಯಲ್ಲೇ ಖ್ಯಾತರು. ಆದರೆ ಜಯದೇವತಾಯಿ ಲಿಗಾಡೆಯವರು ಶರಣ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬಂದಿದ್ದು ಕಾವ್ಯ ಕ್ಷೇತ್ರದಲ್ಲಿ ಯಶಸ್ವಿಯಾದರು. ಅವರ ಆಧ್ಯಾತ್ಮಿಕ ಚಿಂತನೆಗಳು ವಚನ, ತ್ರಿಪದಿಗಳಲ್ಲಿ ಹರಿದು ಬಂದವು.

ನವ್ಯ ಪಂಥ, ಕಾಮವನ್ನೇ ಕೇಂದ್ರವಾಗಿಟ್ಟುಕೊಂಡು, ಅದರ ಸುತ್ತ ಗಿರಿಕಿ ಹೊಡೆದದ್ದೇ ಹೆಚ್ಚು. ತಮ್ಮ ಅನುಭವದ ಎರಡು ದಡಗಳಾಗಿ ಹೆಣ್ಣು ಮತ್ತು ಕಾಮವನ್ನು ಬಳಸಿಕೊಂಡರು. ಯಾವ ವಿಷಯದ ವಿಶ್ಲೇಷಣೆ ಎನಿಸಿದರೂ ಅದರಲ್ಲಿ ಹೆಣ್ಣಿನ ವಾಸನೆ ಹೊಡೆಯುವಂತಿತ್ತು. ಹಾಗಾಗಿ ಹೆಣ್ಣನ್ನು ಹಾಗೂ ಕಾಮವನ್ನು ವಿವಿಧ ನಮೂನೆಗಳಲ್ಲಿ ಕಡೆದು ನಿಲ್ಲಿಸಿದರು. ಈ ಹಿನ್ನೆಲೆಯಲ್ಲಿ ನವ್ಯ ಪಂಥ ಸ್ತ್ರೀಯರನ್ನು ಆಕರ್ಷಿಸಲು ಸಾಧ್ಯವಾಗಲಿಲ್ಲ. ನವ್ಯದ ಧೋರಣೆಗೆ ಬೆಚ್ಚಿ ಬಿದ್ದ ಮಹಿಳಾ ಲೇಖಕಿಯರು ತಟಸ್ಥ ನಿಲುವು ತಾಳಿದ್ದೇ ಅವರ ಪ್ರತಿಭಟನೆಯ ಸ್ವರೂಪ ಎನ್ನಬಹುದು. ಆದರೂ ನವ್ಯ ಕೊನೆ ಕೊನೆಗೆ ಕೆಲವು ಸ್ತ್ರೀಯರನ್ನು ಆಕರ್ಷಿಸಿತು. ನವ್ಯದ ಕಾಳಜಿ, ಆಶಯ, ತಂತ್ರವನ್ನು ಮೆಚ್ಚಿದ ಕೆಲ ಕವಯತ್ರಿಯರು ತಮ್ಮ ಸಾಮರ್ಥ್ಯ ತೋರಿಸಿದರು. ಅವರಲ್ಲಿ ವಿಜಯಾ ದಬ್ಬೆ, ಸ. ಉಷಾ, ಸರ್ವಮಂಗಳ, ಶಶಿಕಲಾ ವಸ್ತ್ರದ ಮುಂತಾದ ಕವಯತ್ರಿಯರು ನವ್ಯದ ಆಕೃತಿಯೊಂದಿಗೆ ಕವಿತೆಗಳನ್ನು ಬರೆದಿರುವುದು ಕಂಡುಬರುತ್ತದೆ.

"ಬಂಡಾಯ ಒಂದು ಶೋಕಿಯಾಗದೆ, ನಮ್ಮ ಪರಿಸರವನ್ನು ಗಾಢವಾಗಿ ವೈಜ್ಞಾನಿಕವಾಗಿ ಅಧ್ಯಯನ ಮಾಡಲು ನಮ್ಮನ್ನು ಹಚ್ಚುವಂತಾಗಬೇಕು; ಹಲವು ಒಳನೋಟಗಳನ್ನು ನಮಗೆ ನೀಡುವಂತಾಗಬೇಕು. ಈ ಒಳನೋಟಗಳಿಂದ ಸಾಕಷ್ಟು ಸಂಯಮಿತನಾಗಿ ಕಾವ್ಯ ಶ್ರದ್ಧೆಯಿಂದ ಬರೆಯುವ ಕವಿಯ ಕಾವ್ಯ ತುಂಬ ಪ್ರಸ್ತುತವೆನಿಸುತ್ತದೆ. ಬದುಕಿನ ಕುರಿತಾದ ನಮ್ಮ ಅರಿವಿನ ಕ್ಷಿತಿಜವನ್ನು ವಿಸ್ತರಿಸುತ್ತದೆ; ನಮ್ಮ ಸಂವೇದನಾಲೋಕಕ್ಕೆ ಹೊಸ ಆಯಾಮವನ್ನು ಕೊಡಿಸುತ್ತದೆ. ಎಂದು

ನಂಬಿರುವವ ನಾನು".[೧೧] ಎಂಬ ಆರ್ಕೆಯವರ ಮಾತನ್ನು ಸ್ತ್ರೀ ಸಂವೇದನೆಗೂ ಅನ್ವಯವಾಗುತ್ತದೆ.

ದಲಿತ ಬಂಡಾಯ ಪರಂಪರೆ ಧ್ವನಿ ಇಲ್ಲದವರಿಗೆ ಧ್ವನಿ ನೀಡಿದಂತೆ, ಮಹಿಳೆಯರಿಗೂ ತೀವ್ರವಾದ ರೀತಿಯಲ್ಲಿ ಪ್ರೇರಣೆ ನೀಡಿತು. ಚ. ಸರ್ವಮಂಗಳ, ಸ. ಉಷಾ, ಶೈಲಜ ಉಡಚಣ, ಹೇಮ ಪಟ್ಟಣಶೆಟ್ಟಿ, ಶಶಿಕಲಾ ವಸ್ತ್ರದ, ಕಮಲ ಹೆಮ್ಮಿಗೆ, ಸುಕನ್ಯಾ ಮಾರುತಿ, ಕೆ.ಆರ್. ಸಂಧ್ಯಾ ರೆಡ್ಡಿ, ವಿದ್ಯಾ ಕುಂದರಗಿ, ಮಲ್ಲಿಕಾ ಘಂಟಿ, ವಿಜಯಶ್ರೀ ಸಬರದ, ಡಿ. ವಿಜಯ, ವೈದೇಹಿ, ಬಿ.ಟಿ. ಲಲಿತಾ ನಾಯಕ್, ಪ್ರತಿಭಾ ನಂದಕುಮಾರ್, ಪುಷ್ಪ ಹೆಚ್.ಎಲ್., ಡಿ.ಬಿ. ರಜಿಯಾ, ಭಾನು ಮುಷ್ತಾಕ, ಕೆ. ಶರೀಫಾ, ರಜಿಯಾ ಬಾಳಕಟ್ಟೆ, ವಿನಯಾ ನಾಯಕ, ಬಾ.ಹ. ರಮಾಕುಮಾರಿ, ಲಲಿತ ಸಿದ್ದಬಸವಯ್ಯ, ಉತ್ತನೂರು ರಾಜಮ್ಮಶೆಟ್ಟಿ, ಕನಕ, ಎಂ.ಆರ್. ಕಮಲ ಮೊದಲಾದ ಲೇಖಕಿಯರು ತಮ್ಮ ಅನುಭವಗಳಿಗೆ ಕಾವ್ಯ ಸ್ವರೂಪ ನೀಡಿದ್ದಾರೆ.

ಕವಯತ್ರಿಯರೆಲ್ಲರೂ ತಾಯಿಯನ್ನು ಕುರಿತು ಗಂಭೀರವಾಗಿ ಕವಿತೆ ರಚಿಸಿಲ್ಲ. ಅವರ ಸಂಖ್ಯೆ ವಿರಳವಾಗಿರುವಂತೆ ಮಾತೃತ್ವವನ್ನು ಬಿಂಬಿಸಿರುವ ಕವಿತೆಗಳು ಇನ್ನೂ ವಿರಳವಾಗಿವೆ. ಅದಕ್ಕೆ ಕಾರಣ ತಮ್ಮ ಅನುಭವಗಳನ್ನು ತಾವೇ ಹೇಳಿಕೊಳ್ಳುವುದರಲ್ಲಿ ಹೊಸತೇನೂ ಕಾಣದೆಂಬ ವಿಚಾರ ಅವರನ್ನು ಕಾಡಿರಬಹುದು. ತಮ್ಮ ಬದುಕಿನಲ್ಲಿ ತಾಯಿಯಾಗುವುದು, ವಾತ್ಸಲ್ಯ ತೋರಿಸುವುದು ಸಹಜ ಪ್ರಕ್ರಿಯೆಯಾಗಿರುವುದರಿಂದ ಅದರಲ್ಲಿ ನಿರಾಸಕ್ತಿ ಇರಬಹುದು. ನಾವು ಹೇಳುವ ಸಂಗತಿಗಳೆಲ್ಲ ಕವಿಗಳೇ ಹೇಳಿರುವುದರಿಂದ ಚರ್ವಿತಚರ್ವಣ ಏಕೆಂಬ ನಿರ್ಲಕ್ಷ್ಯವೂ ಆಗಿರಬಹುದು. ಅಥವ ತಮ್ಮ ಅನುಭವಕ್ಕೆ ಸ್ಪಷ್ಟ ರೂಪ ಕೊಡಲು ಸಾಧ್ಯವಾಗದೇ ಹೋಗಿರಬಹುದು. ಅವರ ಕೊರತೆ ಅನ್ನುವುದಕ್ಕಿಂತ ವಾಸ್ತವಿಕವೆನಿಸಿರಬಹುದು.

ತಾಯ್ತನದ ವಿವಿಧ ಮುಖಗಳನ್ನು ಪುರುಷರು ದರ್ಶಿಸಿರುವಂತೆ ಸ್ತ್ರೀಯರು ಏಕೆ ದರ್ಶಿಸಲು ಸಾಧ್ಯವಾಗಿಲ್ಲವೆಂಬ ಪ್ರಶ್ನೆ ಏಳುವುದು ಸಹಜವಾಗಿದೆ. ಜೈವಿಕ ಹಿನ್ನೆಲೆಯಲ್ಲಿ ತನ್ನ ಗರ್ಭದಲ್ಲಿ ಭ್ರೂಣಾವಸ್ಥೆಯಿಂದ ಆರಂಭಗೊಂಡು, ಮಗುವನ್ನು ಹಡೆದು ಅದನ್ನು ಸಾಕಿ ಸಲುಹಿ, ಮೊದಲ ಗುರುವಾಗಿ, ಸಮಾಜವನ್ನು, ಪರಿಸರವನ್ನು, ಪರಂಪರೆಯನ್ನು, ಕಲೆ, ಸಾಹಿತ್ಯ, ಸಂಸ್ಕೃತಿಯ ಓಂಕಾರವನ್ನು ಮೊದಲು ಪರಿಚಯಿಸುವಳಾಗಿ ಮಹತ್ತರ ಪಾತ್ರ ವಹಿಸುವುದು ಮಹಿಳೆ. ಅದು ಆಕೆಗೆ ಗೌರವವನ್ನು, ಮಹತ್ತನ್ನು ಒದಗಿಸಿಕೊಡುತ್ತದೆ. ಆಕೆಗೆ ವಿಶೇಷ ಅಸ್ತಿತ್ವ ಒದಗಿಸಿಕೊಡುವುದು ತಾಯ್ತನದ ಹಂತ. ಹೀಗಿದ್ದರೂ ಆಕೆ ತನ್ನ ಮಾತೃತ್ವ ಭಾವನೆಗಳನ್ನು ಅಂತರಂಗದಲ್ಲಿ ಅನುಭವಿಸಿ ಆನಂದಿಸಿಕೊಂಡಂತೆ, ತನ್ನ ಕವಿತೆಗಳಲ್ಲಿ ಪಡಿಮೂಡಿಸಿ ಓದುಗರ ಆನಂದಕ್ಕೆ ಕಾರಣವಾಗಲು ಹಿಂಜರಿದಿರುವುದು ಕಂಡುಬರುತ್ತದೆ. ಇದೊಂದು ಸೋಲೆ? ಅಥವ ಉದ್ದೇಶ ಪೂರ್ವಕವಾದ ನಿರ್ಲಕ್ಷ್ಯ ಧೋರಣೆಯೇ? ಅಥವ ಆಕೆಯನ್ನು ಆವರಿಸಿಕೊಂಡಿರುವ ನಾಚಿಕೆ, ನಂಬಿಕೆಗಳೇ? ಎಂಬ ಹತ್ತಾರು ಪ್ರಶ್ನೆಗಳು ಎದುರಾಗುತ್ತವೆ. ಒಂದಂತು ನಿಜವಿರಬೇಕು: ತಾನು ಜೈವಿಕ ಹಿನ್ನೆಲೆಯಲ್ಲಿ ಅನುಭವಿಸಿದ್ದನ್ನು ಗಂಡು ಪರಿಭಾವಿಸಿದಷ್ಟು ತಾನು ಪರಿಭಾವಿಸಲು ಸಾಧ್ಯವಾಗಿರಲಿಕ್ಕಿಲ್ಲ. ಉದಾಹರಣೆಗೆ ಭೂಮಿ ದುಂಡಾಗಿದೆ. ಅದು ಸೂರ್ಯನ ಸುತ್ತಲೂ ತನ್ನ ಪರಧಿಯಲ್ಲಿ

ಸುತ್ತುತ್ತಿದೆ. ಆದರೆ ಅದರ ಮೇಲಿರುವ ನಮಗೆ ಗೋಚರವಾಗುವುದಿಲ್ಲ. ನಮಗೆ ಸೂರ್ಯ ಚಲಿಸಿದಂತೆ ಗೋಚರಿಸುತ್ತದೆಯೇ ಹೊರತು ಭೂಮಿ ಚಲಿಸಿದಂತೆ ಗೋಚರಿಸುವುದಿಲ್ಲ. ಭೂಮಿಯಿಂದ ದೂರ ನಿಂತು ನೋಡಿದವರಿಗೆ ಮಾತ್ರ ಭೂಮಿ ದುಂಡಾಗಿರುವುದೂ ನಿಜ, ಅದು ಸೂರ್ಯನ ಸುತ್ತಲೂ ಚಲಿಸುತ್ತಿರುವುದೂ ನಿಜ. ಹಾಗಾಗಿ ದೂರ ಸಾಗಿ ನಿಂತು ನೋಡುವ ಭಾವಪ್ರಜ್ಞೆ ಮಹಿಳೆಯರಲ್ಲಿ ಕಂಡುಬರುತ್ತಿಲ್ಲ. ಓಡುವ ಬಸ್ಸಿನಲ್ಲಿ ಕುಳಿತವನಿಗೆ ನೆಲ ಓಡುವಂತೆ, ಮರ ಗಿಡ ಸುತ್ತುವರಿದಂತೆ ಕಾಣುತ್ತದೆ. ಆದರೆ ಅದೇ ಬಸ್ಸಿನಿಂದ ಇಳಿದು ದೂರ ನಿಂತಾಗ ಬಸ್ಸು ಓಡುವುದು ಕಾಣುತ್ತದೆ, ಗಿಡ ಮರಗಳು ಇದ್ದಲ್ಲೆ ಇರುವುದು ಗೋಚರವಾಗುತ್ತದೆ. ಹಾಗೆ ಮಹಿಳೆ ತಾನು ಬರೀ ತಾಯಿಯಾಗಿ ಅನುಭವಿಸಿದ್ದಾಳೆಯೇ ಹೊರತು ಅದನ್ನು ದೂರ ನಿಂತು ನೋಡಿ ಅದಕ್ಕೆ ಕವಿತ್ವದ ಅಭಿವ್ಯಕ್ತಿ ಕೊಡಲು ಸಾಧ್ಯವಾಗಿಲ್ಲ. ಅದನ್ನು ಆಕೆ ಅಂತರ ದೃಷ್ಟಿಯಿಂದ ಪರಿಭಾವಿಸಿ ನಿರ್ಮೋಹಳಾಗಿ, ನಿರ್ಭಿಡೆಯಿಂದ ಬರೆಯಲು ಯತ್ನಿಸಿದರೆ ಪುರುಷರಿಗಿಂತಲೂ ಉತ್ಕೃಷ್ಟವೂ, ವಾಸ್ತವವೂ, ಕಲಾತ್ಮಕವೂ, ವೈವಿಧ್ಯಮಯವೂ ಆದ ಮಾತೃತ್ವದ ಕವಿತೆಗಳು ಖಂಡಿತ ಹುಟ್ಟಿ ಬರಲು ಸಾಧ್ಯ ಹಾಗೆಂದು ಸ್ತ್ರೀಯರು ಮಾತೃತ್ವವನ್ನು ಕುರಿತು ಕವಿತೆಗಳನ್ನೇ ಬರೆದಿಲ್ಲವೆಂದಲ್ಲ, ಕೆಲವರು ಬರೆದಿದ್ದಾರೆ. ಆದರೆ ಪುರುಷರು ಬರೆದಷ್ಟು ಪ್ರಮಾಣದಲ್ಲಿ ಮಹಿಳೆಯರು ಬರೆದಿಲ್ಲ ಎನಿಸುತ್ತದೆ. ಇದಕ್ಕೆ ಮತ್ತೂ ಒಂದು ಕಾರಣವಿರಬಹುದು: ತಾಯಿಯಾದವಳಿಗೆ ಗಂಡು ಮಕ್ಕಳ ಮೇಲೆ ಆರಂಭದಲ್ಲಿ ಬಹಳ ಪ್ರೀತಿ. ಮದುವೆಯಾಗಿ ಸೊಸೆ ಬಂದ ಮೇಲೆ ಗಂಡು ಮಕ್ಕಳ ಮೇಲಿದ್ದ ಪ್ರೀತಿ ಹೆಣ್ಣು ಮಕ್ಕಳ ಮೇಲೆ ಹರಿಯುತ್ತದೆ. ಹಾಗಾಗಿ ತಾಯಿಯ ಅತಿಯಾದ ಪ್ರೀತಿಯನ್ನು ಗಂಡುಮಗು ಅನುಭವಿಸುತ್ತದೆ. ತನ್ನ ತಾಯಿ ತನ್ನ ಮೇಲೆ ಬೀರಿದ ಪ್ರೀತಿ, ಮಮತೆ, ವಾತ್ಸಲ್ಯ ಕವಿಗಳನ್ನು ಎಲ್ಲಕಾಲಕ್ಕೂ ಕಾಡುತ್ತದೆ. ಆದ್ದರಿಂದ ತಾಯಿಯ ಬಗ್ಗೆ ಮಹಿಳೆಯರಿಗಿಂತ ಪುರುಷರಿಗೇ ಹೆಚ್ಚು ಗೌರವಾದರಗಳು ಉಂಟು. ಪುರುಷರು ತಾಯಿಯನ್ನು ಹೆಚ್ಚು ಹಚ್ಚಿಕೊಂಡಂತೆ, ತಂದೆಯರನ್ನು ಹೆಚ್ಚು ಹಚ್ಚಿಕೊಂಡಿಲ್ಲದಿರುವುದು ಕಂಡುಬರುತ್ತದೆ. ತಂದೆಯಾದವನಿಗೆ ಗಂಡು ಮಕ್ಕಳ ಮೇಲಿನ ಪ್ರೀತಿಗಿಂತ ಹೆಣ್ಣು ಮಕ್ಕಳ ಮೇಲೆ ಪ್ರೀತಿ ಜಾಸ್ತಿ ಇರುತ್ತದೆ. ಹಾಗಾಗಿ ಹೆಣ್ಣು ಮಕ್ಕಳು ತಾಯಿಗಿಂತ ಹೆಚ್ಚಾಗಿ ತಂದೆಯನ್ನು ಅವಲಂಬಿಸುತ್ತಾರೆ. ಅವರ ಮೇಲೆ ಹೆಚ್ಚು ಅಭಿಮಾನ ಅಕ್ಕರೆ ಇರುತ್ತದೆ. ಇದು ನಿಸರ್ಗ ನಿಯಮವೂ ಹೌದು. ಹೆಣ್ಣು ಗಂಡನ್ನು ಆಕರ್ಷಿಸುತ್ತದೆ; ಗಂಡು ಹೆಣ್ಣನ್ನು ಆಕರ್ಷಿಸುತ್ತದೆ. ಈ ಹಿನ್ನೆಲೆಯಿಂದ ಕವಯತ್ರಿಯರು ತಮ್ಮ ಕವಿತೆಗಳಲ್ಲಿ ಮಾತೃತ್ವವನ್ನು ಕುರಿತು ಬರೆಯುವುದರಲ್ಲಿ ಅಷ್ಟಾಗಿ ಆಸಕ್ತಿ ವಹಿಸದೇ ಇರಬಹುದು.

ಕವಿಗಳಂತೆ ಕವಯತ್ರಿಯರೂ ಕೂಡ ಮಾತೃತ್ವದ ವಿವಿಧ ಮಜಲುಗಳನ್ನು ಅಭಿವ್ಯಕ್ತಿಸಿದ್ದಾರೆ. ಭಾಷೆ – ದೇಶ, ನಾಡು – ನುಡಿ ಹಿನ್ನೆಲೆಯಲ್ಲಿ, ಸಂಕೀರ್ಣ ವ್ಯವಸ್ಥೆಯಲ್ಲಿ, ಜೈವಿಕವಾಗಿ, ನೈಸರ್ಗಿಕವಾಗಿ ಮಾತೃತ್ವವನ್ನು ದರ್ಶಿಸಿದ್ದಾರೆ.

ಜಯದೇವತಾಯಿ ಲಿಗಾಡೆ ತಮ್ಮ 'ಭಾರತಾಂಬೆಯ ಕೂಗು' ಕವಿತೆಯಲ್ಲಿ ಪರಾಧೀನಕ್ಕೆ ಒಳಗಾಗಿ ತಲೆತಗ್ಗಿಸಿ ನಿಂತಿರುವ ಭಾರತಾಂಬೆಯ ಮನದಾಳದ ನೋವನ್ನು ತ್ರಿಪದಿಯಲ್ಲಿ ಚಿತ್ರಿಸಿದ್ದಾರೆ.

ಭಾರತಾಂಬೆಯು ನಾನು। ಕೊರಗೂತ ಕೂಗುವೆ।

ಯಾರಿಲ್ಲವೇನು ಈ ಭೀಕರ – ರಕ್ಕಸರ
ಕ್ರೂರ ದವಡೆಯಿಂದ ಬಿಡಿಸಲು।
. . . .
ಪಂಚಶೀಲದ ತತ್ವ ಮಿಂಚೀನ ವೇಗದಲ್ಲಿ
ಸಂಚರಿಸಲೆಂದು ಜಗದೊಳು – ಸಾರಿರಿ
ಸಂಚಿತ 'ವಿಜಯ ದುಂದುಭಿ'ಯ॥

(ಕುಂಕುಮ ಭೂಮಿ, ಸಂ. ಶಶಿಕಲಾ ವೀರಯ್ಯಸ್ವಾಮಿ, ಪುಟ: ೧೫೦, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೦)

ಇಡೀ ರಾಷ್ಟ್ರದ ಸಾತ್ವಿಕ ಗುಣವನ್ನು ಉಲ್ಲೇಖಿಸುತ್ತಾ ಆಕಡೆಗೆ ಎಲ್ಲರ ಗಮನ ಸೆಳೆದು, ಇನ್ನಾದರೂ ತನ್ನ ಪಂಚಶೀಲದ ಹಿರಿಮೆಗಾಗಿ ರಾಷ್ಟ್ರ ಸ್ವಾತಂತ್ರಗೊಳ್ಳಬೇಕೆಂದು ಕರೆಕೊಟ್ಟಿದ್ದಾರೆ.

ಈ 'ಪಂಚಶೀಲತ್ವ' ಎಂಬುದು ರಾಜಕೀಯ ಆಧಾರಿತವಾದದ್ದೇ ಅಥವ ಭಾರತೀಯರ ಪಂಚಶೀಲತ್ವವೇ ಎಂಬುದು ಖಚಿತವಾಗಿಲ್ಲ. ಆದರೆ, ರಾಷ್ಟ್ರ ಪರಕೀಯರ ಕೈವಶವಾಗಿ ತಲೆತಗ್ಗಿಸಿಕೊಂಡು ನಿಂತಿರುವುದರ ಬಗ್ಗೆ ಹೇಳುತ್ತಾ, ಇನ್ನಾದರೂ ದಾಸ್ಯದಿಂದ ಮುಕ್ತವಾಗಿ, ಎಂದಿನ ಭವ್ಯ ಪರಂಪರೆಯೊಂದಿಗೆ ರಾಷ್ಟ್ರ ತಲೆ ಎತ್ತಿ ಮೆರೆಯಬೇಕೆಂಬ ಆಸೆಯಂತು ವ್ಯಕ್ತವಾಗಿದೆ.

ಲಿಗಾಡೆಯವರ ಆಶಯವನ್ನೇ ಹೊತ್ತಿರುವ ಬೆಳಗೆರೆ ಜಾನಕಮ್ಮನವರ ಕವಿತೆ 'ಭಾರತಮಾತೆಯ ವಾಕ್ಯ', ಸಾಂಪ್ರದಾಯಕ ನೆಲೆಯಲ್ಲಿ ಭಾರತಾಂಬೆಯನ್ನು ದರ್ಶಿಸಿರುವುದಾಗಿದೆ.

ಏಳಿರಿ ಕೇಳಿರಿ ಸುತರೆ ಬಾಳು ಮುಳುಗುತಲಿಹುದು
ತಾಳಲಾರೆ ನನ್ನ ಒಡಲ ದುಃಖವಿದನು
ಪರರ ಬಲೆಯೊಳು ಸಿಲುಕಿದೆನ್ನ ಬಿಡಿಸಿದಿರಿ
ಅರಿವು ಮೂಡಿತು ಎಂದು ಬರಿದೆ ಕೂಗದಿರಿ
ತಾಯ ಭಾರತಿ ಎಂದು ಕರವ ಮುಗಿಯುವಿರಿ
. . . .
ಏಳಿರಿನ್ನೆಚ್ಚತ್ತು ಬಾಳ ಹದಗೊಳಿಸಿ
ಜನಕಜೆಯು ಪೂಜಿಪಳು ಪೂಗುಚ್ಛ ಮುಡಿಸಿ.

(ಕುಂಕುಮ ಭೂಮಿ, ಸಂ. ಶಶಿಕಲಾ ವೀರಯ್ಯಸ್ವಾಮಿ, , ಪುಟ: ೧೫೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೦)

ಭಾರತೀಯರಲ್ಲಿರುವ ಅನೈಕ್ಯತೆಯನ್ನು ಪರೋಕ್ಷವಾಗಿ ಟೀಕಿಸಿ, ಇನ್ನಾದರೂ ಸ್ವಾತಂತ್ರ್ಯದ ಸುಖವನ್ನು ಒಟ್ಟಾಗಿ ಅನುಭವಿಸಬೇಕೆಂದು ಕರೆಕೊಟ್ಟಿದ್ದಾರೆ. ಲಿಗಾಡೆಯವರದು ಸ್ವಾತಂತ್ರ್ಯ ಪೂರ್ವದ ಕಥೆಯಾದರೆ; ಜಾನಕಿಯವರದು ಸ್ವಾತಂತ್ರ್ಯಗೊಂಡ ಭಾರತದ ಕಥೆಯನ್ನು ಬಿಂಬಿಸುತ್ತದೆ.

'ಎಲ್ಲಿಗೆ ಬಂತೋ ಸಂಗಯ್ಯ' – ಕವಿತೆ ಮೇಲಿನ ಎರಡು ಕವಿತೆಗಳಿಗಿಂತ ಭಿನ್ನವಾಗಿದ್ದು, ಚಿಂತನೆಗೆ ದಾರಿಮಾಡಿಕೊಡುತ್ತದೆ. ಈ ಕವಿತೆಯಲ್ಲಿ ಶೈಲಜಾ ಉಡಚಣ

ಸ್ವಾತಂತ್ರ್ಯ ನಂತರದಲ್ಲಿ ದೇಶದಲ್ಲಾಗಿರುವ ವೇಷಧಾರಿಗಳ ಬದುಕನ್ನು ಅನಾವರಣಗೊಳಿಸುತ್ತಾ, ದೇಶಕ್ಕೆ ಎದುರಾಗಿರುವ ಸವಾಲು ಸಂಕಷ್ಟಗಳ ಚಿತ್ರವನ್ನು ಬಿಂಬಿಸಿದ್ದಾರೆ.

ಹಸಿದ ಹೊಟ್ಟೆಗಳು ಓಡೋಡಿ ಬಂದವು
ಅರೆಮರೆ ಮಂದಬುದ್ಧಿಗಳು ತಲೆತುರಿಸಿಕೊಂಡವು
ಗಬಗಬ ತಿಂದವು ಅತ್ತಿತ್ತ ನೋಡದೆ
ಗೊತ್ತುಗುರಿ ನೆನೆಯದೆ ನಾನು ತಾನು ತಿಳಿಯದೆ.
ಎಲ್ಲಿಗೆ ಬಂತೋ

. . . .
ನ್ಯಾಯ ಅನ್ಯಾಯ ನಾಟಕ ನಡೆಸಿದವರಿಗೆ
ಬೆಳಗಿದ್ದು ಸಾಕು ಬೆಳಗ ಬೇಕಿದೆ ನನಗೆ
ಉರಿ ಗಂಧ ತೇಯುತ್ತಾ ನನ್ನೊಳಗಿನ ನವಸೃಷ್ಟಿಗೆ
ಎಲ್ಲಿಗೆ ಬಂತೋ

(ಕುಂಕುಮ ಭೂಮಿ, ಸಂ. ಶಶಿಕಲಾ ವೀರಯ್ಯಸ್ವಾಮಿ, ಪುಟ: ೧೫೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೦)

ಸ್ವಾತಂತ್ರ್ಯ ನಂತರದಲ್ಲಿ ಕೆಲವರು ಅಧಿಕಾರ ಅಹಮಿಕೆಗಳಿಂದ ಪಿತ್ತ ನೆತ್ತಿಗೇರಿಸಿಕೊಂಡು ಮೆರೆದ ಬಗ್ಗೆ ಕಿಡಿಕಾರುತ್ತಾರೆ. ಈ ಜನ ನಿಜವಾಗಿ ಫಲಾನುಭವಿಗಳಾಗಬೇಕಾಗಿದ್ದವರನ್ನು ಮರೆತಿರುವುದನ್ನು ವ್ಯಂಗ್ಯ ವಿಡಂಬನೆಗಳಿಂದ ಚುಚ್ಚಿದ್ದಾರೆ. ಇಂತಹ ವಂಚನೆಯ ಜಾಲದಿಂದ ಬಿಡುಗಡೆಗೊಂಡು ಸಾಮಾಜಿಕ ಜೀವನ ಹಸನಾಗುವಂತ ವಾತಾವರಣ ದೇಶದಲ್ಲಿ ನಿರ್ಮಾಣವಾಗಬೇಕೆಂಬ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ.

ಇದೇ ಕವಯತ್ರಿಯ ಚಿಂತನೆ ಸ್ವಾಭಿಮಾನದ ಕವಚತೊಟ್ಟಿರುವುದು ಕೆಳಗಿನ ಕವಿತೆಯಲ್ಲಿ ಕಂಡುಬರುತ್ತದೆ.

ಅಂದು ಇತ್ತು
ಹಲವರ ತುತ್ತನುಂಡು
ತೃಪ್ತಿಗೊಳ್ಳುವ ಮನಸು
ಇಂದು ಬೆಳೆದು
ನನಗೆ ನಾನೆ ನಿರ್ಮಿಸಬೇಕು
ನನ್ನ ಲೋಕದ ಕನಸು [೮]

ಎಂದು ಶೈಲಜಾ ಉಡಚಣ ೧೯೭೭ರಲ್ಲಿ ರಚಿಸಿದ 'ಒಂದು ಘಳಿಗೆ' ಕವನ ಸಂಕಲನದಲ್ಲಿ ಹೇಳಿರುವ ಮಾತುಗಳಿಂದ ಮಹಿಳಾ ಕಾವ್ಯದ ಆಶಯ, ಧ್ಯೇಯ, ಧೋರಣೆಗಳನ್ನು ಕಾಣಬಹುದು.

ಹೆಣ್ಣು ಸಾಂಪ್ರದಾಯಕ ವ್ಯವಸ್ಥೆಯಿಂದ ಬಿಡುಗಡೆಗೊಂಡು ತನ್ನದೇ ಆದ ನಿಜದ ನೆಲೆಯನ್ನು ಕಂಡುಕೊಳ್ಳುವಂತಹ ಸಂಕ್ರಮಣ ಸ್ಥಿತಿಯಲ್ಲಿ ಅವಳ ಮನಸ್ಸಿನಲ್ಲಿ ಮೂಡಿದ ಭಾವಗಳು, ಹಿಂದಿನ ತನ್ನ ಸ್ಥಿತಿಯ ಬಗೆಗೆ ವಿಷಾದದ ದನಿ ಮತ್ತು ಹೊಸದರತ್ತ

ತುಡಿಯುವ ಮನೋಭಾವ ಈ ಕವಿತೆಯಲ್ಲಿ ಕಂಡುಬರುತ್ತದೆ. ಬಹುತೇಕ ಲೇಖಕಿಯರ ಕವಿತೆಗಳಲ್ಲಿ ಇದೇ ಸಂವೇದನೆ ಕಂಡುಬರುತ್ತದೆ.

ಸ. ಉಷಾರವರ 'ಅಮ್ಮನಿಗೆ' ಕವಿತೆಯಲ್ಲಿ ಹೊಸ ಕಾಲದ ಹೆಣ್ಣಿನ ಆಶಯ, ಹಂಬಲ, ಬಯಕೆಗಳು ಗಮನ ಸೆಳೆಯುತ್ತವೆ. ಅಮ್ಮನನ್ನು ಕುರಿತ ಕವಿತೆಗಳಲ್ಲಿ ಇದೊಂದು ಗಂಭೀರವಾಗಿ ಚಿಂತನೆಗೆ ಹಚ್ಚುವ ಕವಿತೆಯಾಗಿದೆ.

ಬೇಡಮ್ಮಾ ಬೇಡ
ಆಕಾಶದಗಲಕ್ಕೂ ನಿನ್ನ ಸೆರಗು ನರಿಗೆ ಹರಡಿ
ಬಿಸಿಲ ಮರೆಸಿ ಬದುಕಿನ ಹಸಿರ ಬಿಳಿಚಿಸಬೇಡ
ವರುಷ ಹದಿನೇಳಾಯಿತು ಸೆರಗು ಹಾರಿಸಿ ಅಲೆದು
ಕಂಡ ಕಂಡವರಿಗೆಲ್ಲ ಕಣ್ಣ ಹೊಡೆಯಬೇಡ
ಗಾಳಿಗುದುರಿ ಹತ್ತಿ ಗಂಡುಬೀರಿಯಾಗಬೇಡವೆಂದು
ನಿನ್ನಮ್ಮ, ಅವಳಮ್ಮ, ಅವಳಮ್ಮ
ಲಾಗಾಯಿತಿನಿಂದ ನನ್ನಂಥ ಪಡ್ಡೆಗಳ
ಕಿವಿಯಲ್ಲಿ ಊದಿದ ಪುಂಗಿ ನೀನೂ
ಊದಬೇಡ
ಈಗ ತಾನೇ ಹೆಡೆಯಾಡಿಸುತ್ತಿದ್ದೇನೆ
ಯಾರನ್ನಾದರೂ ಕಚ್ಚಿ ವಿಷವಿಳಿಸಿಕೊಳ್ಳುತ್ತೇನೆ
ನನಗೆ ದಾರಿ ಬಿಡು [೧೩]

ಅಮ್ಮ ಹಳತರ ತಲೆಮಾರಿನ ಪ್ರತಿಧ್ವನಿ, ಮಗಳು ಹೊಸದರ ದನಿಯಾಗಿ ಪ್ರತಿಧ್ವನಿಯ ಏಕತಾನತೆಯನ್ನು ಮುರಿದು ಹೊಸತನ ಮೂಡಿಸುವ ಹಂಬಲದ ನೂತನ ದನಿಯಾಗಿ ಕಂಡುಬರುತ್ತಾಳೆ. ಇದೊಂದು ಲೈಂಗಿಕ ಪ್ರತಿಮೆಯಾಗಿಯೂ ಹೆಚ್ಚು ಅರ್ಥಪೂರ್ಣತೆ ಪಡೆದುಕೊಂಡಿದೆ. ಹಿರಿಯರು ನಿರ್ಮಿಸಿದ್ದ ಸರಹದ್ದಿನೊಳಗೆ ತನ್ನ ಲೈಂಗಿಕ ತೃಷೆಯನ್ನು ನೀಗಿಸಿಕೊಳ್ಳಬೇಕಾಗಿದ್ದ ಜಡ ವ್ಯವಸ್ಥೆಯನ್ನು ಪ್ರಶ್ನಿಸುತ್ತಲೇ, ತಮ್ಮ ಮನವೊಪ್ಪುವವರೊಂದಿಗೆ ತನ್ನ ಲೈಂಗಿಕ ತೃಷೆಯನ್ನು ಈಡೇರಿಸಿಕೊಳ್ಳುವ ಬಯಕೆ ವ್ಯಕ್ತವಾಗಿದೆ. ಆದರೆ ಇದು ಮುಕ್ತ ಲೈಂಗಿಕತೆಯ ಆಲೋಚನೆಯಲ್ಲ, ತನ್ನ ಆಯ್ಕೆಯ ಅವಕಾಶದ ಹಕ್ಕೊತ್ತಾಯದ ಸ್ವರೂಪವಾಗಿದೆ. ಇದು ವ್ಯಕ್ತಿ ಸ್ವಾತಂತ್ರ್ಯದ ಧ್ವನಿಯೂ ಹೌದು.

ಇಲ್ಲಿನ ಸೆರಗು ವಿಶೇಷ ಅರ್ಥ ಪಡೆದುಕೊಂಡಿದೆ. ಇದು ಆಕಾಶದಂತೆ ಅನಾದಿ ಕಾಲದಿಂದಲೂ ಹೆಣ್ಣಿನ ಮೇಲೆ ಕವಿದ ಕತ್ತಲೆಯ ಮುಸುಕಾಗಿದೆ. ಅದನ್ನು ಸರಿಸಿಕೊಂಡು ಹೊರ ಬಂದು ನಿಸರ್ಗ ಸಹಜವಾದ ಗಾಳಿ – ಬೆಳಕನ್ನು, ಬಯಲು – ಬಿಸಿಲನ್ನು ಸವಿಯಬೇಕೆಂಬ ಆಸೆ ಆಕೆಗಿದೆ. ಅದಕ್ಕಾಗಿ ನಿರ್ಬಂಧದ ಕೋಟೆ ದಾಟಿ ಹೊರಬರುವ ತವಕ ಇಲ್ಲಿದೆ. 'ದಾರಿ ಬಿಡು' – ಎಂಬ ಮಾತೇ ತಾನು ನೂತನ ಶಕ್ತಿ ತಾಳಿ ಮೈದುಂಬಿ ಹೊರಬರುವ ಪರಿವರ್ತನ ಗುಣದ ಪ್ರತೀಕವಾಗಿದೆ. ಇಲ್ಲಿನ 'ಅಮ್ಮ' ಹಿಂದಿನಿಂದಲೂ ಆಚರಿಸಿಕೊಂಡು ಬಂದ ಆದರ್ಶದ ಹೆಣ್ಣಾಗಿ ಕಂಡರೆ, ಮಗಳಾದವಳು ಆಧುನಿಕತೆಯ ಮಹಿಳೆಯಾಗಿ ಹೊಸ ಬದುಕಿಗೆ ಹಂಬಲಿಸುವ ತವಕದ ಹೆಣ್ಣಾಗಿದ್ದಾಳೆ.

"ಮಹಿಳೆಯರ ಸ್ವಾತಂತ್ರ್ಯ ಬಹುಮಟ್ಟಿಗೆ ಕಾರ್ಯಗತವಾಗುವುದು ಅವರಿಗೆ ಲೈಂಗಿಕ ಸ್ವಾತಂತ್ರ್ಯವಿದ್ದಾಗ. ಈ ಲೈಂಗಿಕ ಸ್ವಾತಂತ್ರ್ಯದ ಭಾಗವಾಗಿ ವಿಚ್ಛೇದದ ಹಾಗೂ ಆಸ್ತಿ ಹಕ್ಕುಗಳು ಲಗತ್ತಾಗಿರಬೇಕು. ಹಾಗಿದ್ದರೆ ಮಾತ್ರ ಮಹಿಳೆಯರ ಸ್ವಾತಂತ್ರ್ಯದ ಕಲ್ಪನೆ ಹೆಚ್ಚು ಸಮಗ್ರವೂ ಅರ್ಥಪೂರ್ಣವೂ ಆಗಿರುವುದು ಸಾಧ್ಯ. ಯಾವ ಸಮಾಜದಲ್ಲಿ ಮಹಿಳೆಯರ ಸ್ವಾತಂತ್ರ್ಯ ಇವೆಲ್ಲವನ್ನೂ ಒಳಗೊಳ್ಳುವಷ್ಟು ವ್ಯಾಪಕವಾಗಿರುತ್ತದೋ ಅಲ್ಲಿ ಮಾತ್ರ ಮಹಿಳೆಯ ಸರ್ವತೋಮುಖ ವಿಕಾಸ ಸಾಧ್ಯ; ಬಿಡುಗಡೆ ಸಾಧ್ಯ . . . ".[೧೪]

"ನೀ ಹಾಕಿರುವ ಅಣೆಕಟ್ಟೆ
ಒಡೆದು ಬಿರುಮಳೆಗೆ ಸೊಕ್ಕಿ ಭೋರ್ಗರೆದು ನುಗ್ಗಿ
ನಿನ್ನಂತಾಗದೆ ಬದುಕುತ್ತೇನೆ.
(ಸ.ಉಷಾ, ಅಮ್ಮನಿಗೆ, ತೊಗಲು ಬೊಂಬೆಯ ಆತ್ಮ ಕಥೆ)

ಅಮ್ಮನ ಸಂಪ್ರದಾಯಗಳ ಅಣೆಕಟ್ಟೆ ಒಡೆಯಬೇಕು ಅವಳು ಬದುಕಿದ್ದು ಅವಳ ನಿಜದ ಬದುಕಲ್ಲ ಎಂಬುದನ್ನು ಒಡನುಡಿಯುತ್ತ, ಸಹಜ ಬದುಕಿಗಾಗಿ ಹಂಬಲಿಸುತ್ತಾಳೆ. ಮಗಳು, ಭೋರ್ಗರೆದು ನುಗ್ಗುವ ಶಕ್ತಿ ಇದ್ದೂ ನನಗೆ ದಾರಿ ಬಿಡು ಎಂದು ಅಮ್ಮನನ್ನೇ ಕೇಳುತ್ತಾಳೆ. ಅವಳೊಂದಿಗಿನ ಕರುಳ ಸಂಬಂಧ ಉಳಿಸಿಕೊಳ್ಳುವುದರಿಂದ ಹೆಣ್ಣಿನ ಮಾರ್ದವತೆಯನ್ನು ಇದು ಧ್ವನಿಸುತ್ತದೆ."[೧೫]

ಬಲ್ಲೆಯಾ ಮಗಳೇ, ನನ್ನವ್ವ
ಬಾಲಗ್ರಹದಿಂದ ಜರ್ಜರಿತೆ
ನೇರ ಮುಪ್ಪಿಗೆ ಸಿಕ್ಕು
ಗಪ್ಪನೆ ಕುಸಿಯುತ
ನರಳುತಲಿದ್ದಾಳೆ
ಹತ್ತು ಹಲವು ಚಿಂತೆಗಳಿಂದ
. . . .
ಹೆಣ್ಣಿನ ಸ್ವಾತಂತ್ರ್ಯ ನಿಷಿದ್ಧ
ಎಂಬುದನು ನಮ್ಮ ನಾಡಿನ ನೆಲಗುಣ, ಜಲಗುಣ,
ಮಾಡೀ ಕಾಪಾಡಿದೀ ಭಾರತೀ ಪುತ್ರರು
ಇಂದು ಸಾವಿರದ ಜಾತಿ –ಭಾಷೆಗಳಲ್ಲಿ
ಹರಿದು ಹಂಚಿದ್ದಾರೆ ದೇಶವನ್ನು
ಸಂಸ್ಕೃತಿಯ ಕೋಶವನ್ನು – ಹೆತ್ತ – ತಾಯಿಯನ್ನು [೧೬]

ಇಲ್ಲಿ ಹೆತ್ತ ತಾಯಿಯೂ ಹೌದು, ಹೊತ್ತ ತಾಯಿಯೂ ಹೌದು. ಆದರೆ ಈ ಇಬ್ಬರು ತಾಯಂದಿರ ಮನದಾಳದ ಹಿಂದೆ ಸ್ತ್ರೀ ಶೋಷಣೆಯ ನೋವಿನ ದನಿ ಇದೆ.

ಹೊಸ ಚಿಂತನೆಯನ್ನು ಬೆಳೆಸಿಕೊಂಡ ಮಹಿಳೆಯೊಬ್ಬಳು ಹಿಂದಿನದನ್ನು ಮರುಚಿಂತನೆಗೊಡ್ಡುವ ಸಮಯದಲ್ಲಿ ಅದನ್ನೆಲ್ಲ ಮಗಳಿಗೆ ಹೇಳುವ ರೀತಿಯಲ್ಲಿ ಅಭಿವ್ಯಕ್ತಿಗೊಂಡಿರುವ ಈ ಕವಿತೆಯಲ್ಲಿ 'ಸಾವಿರದ' ಶಬ್ದ ಕೇವಲ ಸಂಖ್ಯೆ ಮಾತ್ರವಾಗಿ ನಿಲ್ಲದೆ ಇವುಗಳ ಅಂತ್ಯ ಇಲ್ಲವೆ ಎನ್ನುವುದರತ್ತ ಗಮನ ಹರಿಸಿದೆ. ಹಾಗೆಯೇ ಅವು ಇಲ್ಲವಾಗಬೇಕು. ಹೊಸತು ಮೂಡಬೇಕು ಎನ್ನುವ ಆಶಯವಿದೆ. ಬಾಲಗ್ರಹ, ಕುಸಿತ,

ಚಿಂತೆ – ಇವು ಪುರುಷ ಪ್ರಧಾನವಾದ ಸಮಾಜ ಸ್ತ್ರೀಯರನ್ನು ಹಿಡಿದಿಟ್ಟುಕೊಂಡುದರ ಸ್ಥಿತಿಯನ್ನು ಧ್ವನಿಸುತ್ತವೆ. ಅದನ್ನು ಹೊರಗಿನ ಪ್ರಕೃತಿಗೂ ಅನ್ವಯಿಸಿ ಇಡೀ ದೇಶದ ವ್ಯಾಪ್ತಿಯನ್ನು ಪಡೆದುಕೊಂಡಿರುವ ರೀತಿಯನ್ನು ಹೇಳುತ್ತಲೇ, ಸ್ತ್ರೀ ವಾದಿ ಚಿಂತನೆಯನ್ನು ಬಿಂಬಿಸುತ್ತಾಳೆ.

"ಹೂ ಮಗಳಿಗೊಂದು ಹಾರೈಕೆ' – ಕವಿತೆಯಲ್ಲಿ ಕವಯತ್ರಿ ಹೇಮಾ ಪಟ್ಟಣಶೆಟ್ಟಿ ತಾಯಿ ತನ್ನ ಮಗಳಿಗೆ ಹೇಳುವ ತಿಳುವಳಿಕೆಯಂತಿದೆ. 'ವಿರಹೋತ್ಸವ', 'ಹೊಸ ಹಾಡು', 'ಕಣ್ಣುಗಳಲ್ಲಿ ಕನಸು ತುಂಬಿ' ಮೊದಲಾದ ಸಂಕಲನಗಳನ್ನು ಪ್ರಕಟಿಸಿರುವ ಹೇಮಾ ಅವರ ಕಾವ್ಯ ಜಗತ್ತು – ಮುಖ್ಯವಾಗಿ ಕುಟುಂಬದೊಳಗಿನ ಆಪ್ತ ಸಂಬಂಧಗಳ ಮೂಲಕ ಅನಾವರಣಗೊಳ್ಳುತ್ತಾ ಸ್ತ್ರೀಯ ಜಗತ್ತನ್ನು ಅನ್ವೇಷಿಸಲು ಹೊರಡುತ್ತದೆ. ಅದು ತನ್ನ ಮಗ, ಮಗಳು, ತನ್ನ ಗಂಡ, ಒಂದು ಹೂ, ಒಂದು ರದ್ದಿ ಕಾಗದ ಇರಬಹುದು. ಅದರ ಮೂಲ ಕೇಂದ್ರ ಮಾತ್ರ ಸ್ತ್ರೀಪರ ದನಿಯೇ ಆಗಿದೆ".[೧೭]

ಹೆಣ್ಣು ಪುನರ್ನಿರ್ಮಾಣದ ಶಕ್ತಿ ದೇವತೆ. ಆಕೆಯಲ್ಲಿ ಆ ಶಕ್ತಿ ಇರುವುದರಿಂದಲೇ ಅಕೆಯ ಬಗ್ಗೆ ಹೆಮ್ಮೆಯ ಅಭಿಮಾನ. ಇಂತಹ ತಾಯಿ ರೂಪುಗೊಳ್ಳುವುದು ಹೆಣ್ಣಿನ ಮುಂದುವರಿದ ಹಂತದಲ್ಲಿ. ಅಂತಹ ವಿಶೇಷತೆ ಪಡೆದಿರುವ ಹೆಣ್ಣನ್ನು ತುಂಬ ಹೀನಾಯವಾಗಿ ನಡೆಸಿಕೊಳ್ಳುವ ಸಮಾಜ, ತಾಯಿಯನ್ನು ಮಾತ್ರ ಗೌರವಿಸುತ್ತದೆ. ಈ ಅಂಶವನ್ನು 'ಮರೆತು ಬಿಡು' ಕವಿತೆಯಲ್ಲಿ ಮಲ್ಲಿಕಾ ಘಂಟಿ ಹೇಳಿದ್ದಾರೆ.

ಹೆಣ್ಣಾಗಿ ಹುಟ್ಟಿದ್ದಕ್ಕೆ
ಹೆಮ್ಮೆ ಪಡು
. . . .
ಹೆತ್ತ ತಾಯಿಯರನ್ನೇ
ಅಬಲೆಯೆನ್ನುತ್ತ
ಹೆರುವ ತಾಯಂದಿರಿಗೆ
ಪಾತಿವ್ರತ್ಯದ ನೇಣು
ಕುಣಿಕೆಯ ತೋರುವ ರಾಮರ
ಸಿದ್ಧ ಅಚ್ಚಿನಲ್ಲಿ ಹಾಯ್ದು ಬರುವ
ಈ ಕುನ್ನಿಗಳನ್ನೆಲ್ಲ ಮರೆತು ಬಿಡು.
ಛಲದ ಕೈದೀವಿಗೆ ಹಿಡಿದು
ನೆಟ್ಟ ದೃಷ್ಟಿಯ ಕೀಳದೆ
ಸಹಬಾಳ್ವೆಯ ಪಥದಲ್ಲಿ
ಗುರಿ ಮುಟ್ಟಲು ಹೊರಟ
ನಮ್ಮಗಳ ಎದೆಯಲ್ಲಿ
ಪ್ರೀತಿ ಒರತೆ ಇರುವಾಗ
ಮರೆತು ಬಿಡು ಹೆಣ್ಣಾಗಿರುವುದ [೧೮]

ಸಂತಾನಾಪೇಕ್ಷೆಗೆ ಹೆಣ್ಣನ್ನು ಸಾಧನವನ್ನಾಗಿ ಬಳಸಿಕೊಳ್ಳುವ ಪುರುಷರು ಆಕೆಯ ಬಗ್ಗೆ ತಾಳುವ ನಿರ್ಲಕ್ಷ್ಯ ಮನೋಭಾವದ ಬಗ್ಗೆ ತೀವ್ರ ಅಸಮಾಧಾನಗೊಂಡ ಕವಯತ್ರಿ ಹೆಣ್ಣುತನ ಪವಿತ್ರವಾದದ್ದು, ಅದಕ್ಕೊಂದು ಪಡಿಯಚ್ಚನ್ನು ನಿರ್ಮಿಸಿ

ಬಂಧನದಲ್ಲಿರಿಸುವುದನ್ನು ಸಹಿಸದೆ ಅದಕ್ಕೆ ತನ್ನದೇ ಆದ ಹೊಸ ಆಯಾಮವನ್ನು ಹೆಣ್ಣೇ ರೂಪಿಸಿಕೊಳ್ಳುವ ಹಂಬಲವನ್ನು ವ್ಯಕ್ತಪಡಿಸುತ್ತಾರೆ.

ಹೆಣ್ಣಿಗೆ ಪ್ರೀತಿಯೇ ಜೀವದ್ರವ ಆ ಮುಖೇನ ಹೊಸ ಬಗೆಯ ಸಮಾಜವನ್ನು ನಿರ್ಮಾಣ ಮಾಡಿ, ಹೆಣ್ಣಿಗೂ ತನ್ನದೇ ಆದ ಒಂದು ವ್ಯಕ್ತಿತ್ವವಿದೆ, ಕ್ರಿಯಾಶೀಲ ಸಾಮರ್ಥ್ಯವಿದೆ ಎಂಬುದನ್ನು ತೋರಿಸಬೇಕಾದ ಸಕಾಲ ಬಂದಿದೆ ಎಂಬುದನ್ನು ಆತ್ಮವಿಶ್ವಾಸ ತುಂಬುವುದರ ಮೂಲಕ ಜಾಗೃತಗೊಳಿಸುತ್ತಿದ್ದಾರೆ.

ಇದೇ ಕವಯತ್ರಿಯ ಮತ್ತೊಂದು ಕವಿತೆಯಲ್ಲಿ ಪುರುಷರಿಂದಾದ ಅಪಮಾನ, ಅನ್ಯಾಯ, ದಬ್ಬಾಳಿಕೆಗಳ ಬಗ್ಗೆ ಪ್ರತೀಕಾರದ ಕಿಚ್ಚು ಕಾರಿರುವುದು ಕಂಡುಬರುತ್ತದೆ. ಮುಂದೊಂದು ದಿನ ತನ್ನ ಮಗುವೇ ತನ್ನ ಅಂತರಂಗದಲ್ಲಿನ ಕಿಚ್ಚು ನಂದಿಸುವ ನಂಜಾಗಬೇಕೆಂಬ ಆವೇಶವಿದೆ. ಇದು ಎಚ್ಚೆತ್ತ ತಾಯಿಯ ಹೊಸ ಬದುಕಿನ ಹುಡುಕಾಟದ ಪ್ರಯತ್ನವಾಗಿಯೂ ಕಾಣುತ್ತದೆ.

ನನ್ನೆದೆಯ ಮೊಲೆಯಿಂದ ಹರಿದು ಬಂದಿಹ ಹಾಲು
ಹಾಲಲ್ಲ ಮಗುವೆ ಅದು ನನ್ನೆದೆಯ ನಂಜು
ಅದನುಂಡು ಬೆಳೆಯಬೇಕಿಂದು ನೀ ನಂಜುಂಡನಾಗಿ
ನನ್ನೆದೆಯ ಬೆಂಕಿಗೆ ತಂಪೆರೆಯಲು.
. . . .
ಕಿಚ್ಚು ಬಿದ್ದಿದೆ ನನ್ನೆದೆಗಿಂದು ಹೊತ್ತಿ ಉರಿಯಲಿ ಒಮ್ಮೆ
ಕಚ್ಚಿದ ನಾಯಿಗಳು ಬೆಂದು ಬೂದಿಯಾಗಲಿ ನಿನ್ನ ಮುಂದೆ [೧೯]

ಪುರುಷ ಪ್ರಾಧಾನ್ಯತೆಯನ್ನು ಧಿಕರಿಸುತ್ತಾ, ಸ್ತ್ರೀ ಪುರುಷರ ಸಮಾನತೆ, ಸಹಬಾಳ್ವೆಯ ಬಗ್ಗೆ ಯೋಚಿಸುವ ಕವಯತ್ರಿಯ ಮನಸ್ಸು, ತನಗೆ ಹುಟ್ಟಲಿರುವ ಮಗುವನ್ನು ಪುರುಷ ಪ್ರತಿಷ್ಠೆಯ ಮುಂದುವರಿಕೆಯಾಗಿ ಕಾಣಬಯಸದೆ ಮನುಷ್ಯತ್ವವನ್ನು ಪಡೆದುಕೊಂಡಿರುವ ವ್ಯಕ್ತಿಯೊಬ್ಬನನ್ನಾಗಿ ಬೆಳೆಸಬೇಕಾದ ಮತ್ತು ಅವನು ಬೆಳೆದು ನಿಲ್ಲಬೇಕಾದ ಸ್ಥಿತಿಯನ್ನು ತಿಳಿಸುತ್ತದೆ.

ಇಲ್ಲಿ ಬಳಕೆಯಾಗಿರುವ ಕಿಚ್ಚು, ಉರಿ, ನಾಯಿ, ಬೆಂದ ಬೂದಿ . . . ಮುಂತಾದವು ಸ್ತ್ರೀಯರ ಮೇಲೆ ಪುರುಷರು ನಡೆಸಿದ ದರ್ಪದೌರ್ಜನ್ಯವನ್ನು ಕಟುತರವಾಗಿ ಖಂಡಿಸುವ ಧೋರಣೆಯದಾಗಿದೆ. ಹಾಗೆಯೇ ಇದು ಪುರುಷರಿಂದಾದಂತಹ ಎಲ್ಲ ಆಕ್ರಮಣವನ್ನು ದೂರುತ್ತಾ ಮಗನ ಮೂಲಕ ಇಡೀ ಪುರುಷ ಸಮುದಾಯದಲ್ಲಿ ಒಂದು ಬದಲಾವಣೆಯನ್ನು ಕಾಣುವ ಇಚ್ಛೆ ಕಂಡುಬರುತ್ತದೆ. ಆದರೆ, ಗಂಡು ಸಂತಾನದ ಹುಟ್ಟಿಗೆ ಕಾರಣಳಾದ ಹೆಣ್ಣು ಅಂತಹ ಚಿಂತನೆಗಳಿಗೆ ಜನ್ಮಕೊಟ್ಟಂತಾಗುವುದಿಲ್ಲವೆ? ಎಂಬ ಪ್ರಶ್ನೆ ಎದ್ದು ನಿಲ್ಲುತ್ತದೆ.

ಚ. ಸರ್ವಮಂಗಳರವರ ಕವಿತೆ 'ತಡೆ'ಯಲ್ಲಿ ಬಂಧನದ ಕೋಟೆ ಹಾರುವ ತವಕ ಹೆಣ್ಣಿನದಾಗಿದ್ದು, ಅದನ್ನು ತಾಯಿಯಲ್ಲಿ ಮಗಳು ನಿವೇದಿಸಿಕೊಳ್ಳುವುದು

ಕಂಡುಬರುತ್ತದೆ. ಅಮ್ಮ, ತಾಯಿ, ಅವ್ವ, ಈ ಪ್ರತೀಕಗಳ ಹಿನ್ನೆಲೆಯಲ್ಲಿ ಹೆಣ್ಣಿನ ಮನದಾಳದ ಭಾವನೆಗಳಿಗೆ ಮೂರ್ತರೂಪ ಕೊಟ್ಟಿರುವುದು ಇಲ್ಲಿ ವ್ಯಕ್ತವಾಗಿದೆ.

ಅಮ್ಮಾ
ಸಾಕು ಮಾಡೆ ನಿನ್ನ ಪುರಾಣ
ಆಲದ ಮರದ ನೆರಳಲ್ಲಿ ಬೆಳೆದು
ಮಾಸಿದ ಗೋಡೆಗಳ ನಡುವೆ
ಬಿಚ್ಚಿಡಬೇಕೇನಮ್ಮಾ ನನ್ನೆದೆಯ ಗೂಡ?
. . . .
ತೊಡೆ ಸಂಧಿಯಲ್ಲಿ ಬದುಕು ಹುದುಗಿಸಿ
ಬದುಕಲಾರೆ; ನೀನು,ಅಜ್ಜಿ ಸುತ್ತಿದ
ವರ್ತುಲದಲ್ಲೇ ಸುತ್ತಲಾರೆ, ಕುತ್ತಿಗೆಗೊಂದು
ಬಿಗಿದು ಹಿಡಿಯಬೇಡ ಅಮ್ಮಾ. . . . [೨೦]

"ಗಾಣದೆತ್ತಿನಂತೆ ವರ್ತುಲದಲ್ಲೆ ಸುತ್ತುವ ಕ್ರಿಯೆ ಪ್ರಗತಿಗೆ ಮಾರಕ ಎನ್ನುವ ಅರಿವು ಮಹಿಳೆಯಲ್ಲಿ ಉಂಟಾಯಿತು. ಆದರೂ 'ನಿನ್ನಂತಾಗದೆ ಬದುಕುತ್ತೇನೆ' ಎನ್ನುವುದು ಅಷ್ಟು ಸರಳ ಸಾಧ್ಯವಲ್ಲ ಎಂಬುದನ್ನು ಅವಳು ಬಲ್ಲಳು".[೨೧]

ಮಗಳು ತನ್ನ ಮನದಾಳದ ಬಯಕೆಯನ್ನು ತೋಡಿಕೊಳ್ಳುವುದು ತಾಯಿ ಎದುರಲ್ಲಿ. ಮಗಳ ಉದ್ಧಾರ, ಯಶಸ್ಸಿನ ಕನಸು ಕಟ್ಟಿರುವ ತಾಯಿ ಅದನ್ನು ಗ್ರಹಿಸಿಯಾಳು. ಅವಳ ಇಚ್ಛೆಯನ್ನು ಅನುಗ್ರಹಿಸಿಯಾಳು ಎಂಬುದನ್ನು ಇಲ್ಲಿ ಕಾಣಬಹುದು.

ತಾನು ಅನುಭವಿಸಿದ ಯಾತನೆ ತನ್ನ ಒಡಲಲ್ಲಿ ಹುಟ್ಟಿದ ಮಗಳಿಗೆ ಬರಬಾರದೆಂಬ ಕನವರಿಕೆ ಎಲ್ಲ ತಾಯಂದಿರಲ್ಲೂ ಇರುತ್ತದೆ. ಇದರಲ್ಲಿ ತಾಯಿಯ ಆಶಯ ಮಗಳು ಸುಖವಾಗಿರಬೇಕು, ನೆಮ್ಮದಿಯ ವಾತಾವರಣದಲ್ಲಿ ಬಾಳಬೇಕೆಂಬ ವಾಂಛೆ ಇಲ್ಲದ ಯಾವ ತಾಯಿಯೂ ಇರಲಾರಳು ಎಂಬುದಕ್ಕೆ ಉದಾಹರಣೆಯಾಗಿ ಎಂ.ಆರ್. ಕಮಲರವರ 'ಮಗಳಿಗೊಂದು ಕತೆ' ಕವಿತೆ ನೋಡಬಹುದು.

ಕದವ ತಟ್ಟದಿರು ನನ್ನ ಮಗಳೆ
ತೆರೆಯಲಾರೆ ನನ್ನ ಕರೆಯಲಾರೆ
ನಿನಗೆ ಗೊತ್ತೆ ಮಗಳೆ
ಇದೆಂಥ ಪಾಷಾಣ ಪಾಪ ಕೂಪವೆಂದು
ಧರೆಯಾಳುವವರೆಲ್ಲಾ ದೈತ್ಯರೆಂದು
ನಿನಗೆ ಗೊತ್ತೇ ಮಗಳೆ [೨೨]

ಈವರೆಗಿನ ಎಲ್ಲ ಸಮಾಜ ದೇಶದ ಆಡಳಿತದಲ್ಲೂ ಸ್ತ್ರೀಯರಿಗೆ ವಿಧಿಸಿರುವ ಕಟ್ಟುಪಾಡುಗಳನ್ನು ರೂಪಿಸಿರುವವರು ಪುರುಷರೇ ಆಗಿದ್ದಾರೆ. ಇದೊಂದು ಹೇರುವ ಕ್ರಮ. ಸ್ತ್ರೀಯರು ಹೀಗಿರಬೇಕೆಂದು ನಿರ್ದೇಶಿಸಿ ನಿಯಂತ್ರಿಸುವವರು ಪುರುಷರೇ ಆಗಿದ್ದಾರೆ. ಮಹಿಳೆಯ ಪಾಲ್ಗೊಳ್ಳುವಿಕೆಯ ಗೈರು ಹಾಜರಾತಿ ಎದ್ದು ಕಂಡುಬರುತ್ತವೆ.

ಹೀಗಾಗಿ ಪುರುಷರಿಂದಾಗಿರುವಂತಹ ನಿರ್ಮಿತ ಕಟ್ಟುಪಾಡುಗಳೆಲ್ಲ ಏಕ ಮುಖಿಯಾಗಿದ್ದಾವೆಯೇ ಹೊರತು, ಸ್ತ್ರೀಯರ ಸಹಭಾಗಿತ್ವವನ್ನು ಪಡೆದುಕೊಂಡಿಲ್ಲ ಎಂಬುದನ್ನು ಪರೋಕ್ಷವಾಗಿ ಪ್ರಸ್ತಾಪಿಸಿದ್ದಾರೆ.

ಎಸ್.ವಿ. ಪ್ರಭಾವತಿಯವರ 'ಭೂಮಿ' ಕವಿತೆ ದೀರ್ಘವಾಗಿದ್ದು, ಇದರಲ್ಲಿ ಭೂಮಿಯ ನೈಸರ್ಗಿಕ ಸಂಪತ್ತು, ನಿರಂತರ ನಡೆಯುವ ಬದಲಾವಣೆ ಹಾಗೂ ಸೊಬಗು ಸೌಂದರ್ಯಕ್ಕೆ ಹೆಣ್ಣೆಂದು ಪರಿಭಾವಿಸಿದ್ದಾರೆ. ದುರ್ಬಲರ ಹೊಸಕಿ ಹಾಕಿ, ಬಲವಿದ್ದವರ ಅರಸಿ ಹೊಸಗಂಡನ ಹುಡುಕುವ ಚಂಚಲೆ ಎಂದು ಭೂಮಿಯನ್ನ ಜರಿದಿದ್ದಾರೆ. ಹೊರಗೆ ಹಸಿರೊದಿಕೆ ಹೊದ್ದು ಸೌಂದರ್ಯದ ಖನಿಯಾಗಿರುವ ಇದೇ ಭೂಮಿ ಮನುಷ್ಯನ ದುರಾಸೆಗೆ ಕೋಪಗೊಂಡು ಗುಡುಗುವಳೆಂದು ಭೂಕಂಪವನ್ನು ಕುರಿತು ಅದರ ರುದ್ರರಮಣೀಯ ಹೋಮದ ಬಗೆಗೆ ಹೇಳುತ್ತಾ ನಿನಗಿದು ತರವೇ ಈ ಮಾರಣ ಹೋಮ? ಎಂದು ಪ್ರಶ್ನಿಸುತ್ತಾರೆ. ನಾಲ್ಕು ಭಾಗಗಳಲ್ಲಿ ಹರಿದಿರುವ ಈ ಕವಿತೆಯಲ್ಲಿ ಭೂಮಿಯ ವಿವಿಧ ರೂಪವನ್ನು ದರ್ಶಿಸಿದ್ದಾರೆ.

> ಗುಂಡಗುರುಳಿ ದುಂಡಾಗಿ ಹೊಗೆಬೆಂಕಿ
> ಒಳಗೇ ಅಮುಕಿ ಹಸಿರು ಚೆಲ್ಲುತ ನಿಂತ ತಾಯೇ
> ನಮ್ಮಮ್ಮ ಮಹತಾಯಿ ಭೂಮಿತಾಯೇ
> ಹಸಿರಿನ ಪಸೆ ಎಷ್ಟು ಹೊತ್ತೇ ನಿನಗೆ ?
> . . . .
> ಹುಡಿಯಡಿ ಕಿತ್ತ ಕೈ ಕಾಲು ಸಿಕ್ಕಿಸಿ ಎತ್ತಾ
> ಕಿಸುವುದು? ಇದು ತರವೆ ನಿನಗೆ?
> ಈ ಮಾರಣ ಹೋಮ?
> ಸ್ವಂತ ಮಕ್ಕಳ ರಕ್ತ ಕಾಮ? [೨೩]

ಈ ಕವಿತೆಯಲ್ಲಿ ಭೂಮಿಯನ್ನು ಚಂಚಲ ಹೆಣ್ಣಾನ್ನಾಗಿ ಕಂಡಿರುವ ಕವಯತ್ರಿ ಆಕೆಯ ಮೇಲೆ ನಡೆಯುವ ದಬ್ಬಾಳಿಕೆ ದೌರ್ಜನ್ಯವನ್ನ ಮೌನವಾಗಿ ಕೈಬಿಟ್ಟಿರುವುದು ಕಂಡುಬರುತ್ತದೆ. ಆಕೆಯ ರೌದ್ರಾವತಾರಕ್ಕೆ ದುರಾಸೆ ಜನರ ಕೃತ್ಯವೂ ಇದೆ ಎಂಬುದನ್ನು ಗ್ರಹಿಸಬಹುದಿತ್ತು. ಆದರೆ ಬರೀ ಸ್ತ್ರೀಯ ಬದುಕಿನ ಮುಖವನ್ನು ಮಾತ್ರ ಕಾಣಲು ಪ್ರಯತ್ನಿಸಿದ್ದಾರೆ. ಆದರೂ ಅದರ ಬಹುಶೃತ ಸಂಗತಿಗಳನ್ನು ಕೊಡುವಲ್ಲಿ ಸಫಲರಾಗಿದ್ದಾರೆ.

ಇದೇ ಕವಯತ್ರಿ ತನ್ನ 'ಧಾರಣಿ' ಕವಿತೆಯಲ್ಲಿ ಭೂಮಿಯನ್ನು ಕುರಿತು ಹೇಳುವಾಗ ಈವರೆವಿಗೂ ನಂಬಿರುವ ಕ್ಷಮಯಾಧರಿತ್ರಿ ಎಂಬ ಮಾತಿಗೆ ಅಪವಾದವಾಗಿದ್ದಾಳೆ ಎನ್ನುತ್ತಾರೆ. ಭೂಮಿತಾಯಿ ಹಸಿರು ಬರೀ ತೋರಿಕೆ, ಅವಳ ಒಡಲಲ್ಲಿ ನಿಗಿನಿಗಿ ಬೆಂಕಿ ಇದೆ. ಆದರೂ ಅವಳ ನೆತ್ತಿ ಮೇಲೆ ಹುಲು ಮಾನವರು ಅಂಟಿಕೊಂಡು ಮನೆ ಮಠ ಕಟ್ಟಿಕೊಂಡಿದ್ದಾರೆ. ತನ್ನ ಒಡಲ ಬೆಂಕಿಗೆ ಸಮಸಮ ತನ್ನೊಡಲ ಬೆಂಕಿ ಸುರಿದು ಭೂದೇವಿಯ ಅಧರಾಮೃತ ಪಾನದಿಂದ ಸೂರ್ಯ ಕುಡುಕನಂತೆ ಕೆಂಪೇರಿ ಮುಳುಗುತ್ತಾನೆ – ಸುಂದರ ರೂಪಕದೊಂದಿಗೆ ಭೂಮಿ – ಸೂರ್ಯನ ಪ್ರೇಮಾಲಿಂಗನದ ಚಿತ್ರ ನೀಡಿದ್ದಾರೆ. ಇಬ್ಬರದೂ ಯುಗಯುಗಗಳಿಂದ ನಡೆದ

ಮೈಥುನ. ಬೇಸರವೇ ಬಾರದ, ಮುಪ್ಪೇ ಇರದ ಮಿಲನ. ಆದರೂ ಅವರನ್ನು ನಾವು ಆಶ್ರಯಿಸಿ ಬದುಕುವ ಸಾಹಸ ಮಾಡಿದ್ದೇವೆ ಎಂದು ಹೇಳುತ್ತಾರೆ.

ಚಗೆಯ ಒಡಲು ಈ ಧಾರುಣಿಯ ಮಡಿಲು
ಕ್ಷಮಯಾ ಧರಿತ್ರಿ ಎಂಬುದೆಲ್ಲಾ ಹಸಿಹಸಿ ಸುಳ್ಳು
ಬೇಯುತ್ತಿರುವ ಒಡಲ ಬೆಂಕಿಯ
ಹಳಿದಿ ನೀರಾಗಿ ಉಗುಳುತ್ತಾಳೆ
ನನ್ನ ಮೇಲಿನ ಹಸಿರು ಬರೀ ತೋರಿಕೆ
ಎಂದು ಸ್ಪಷ್ಟವಾಗೇ ಬಗುಳುತ್ತಾಳೆ
. . . .
ಹಳೇ ಗಂಡನ ಪತ್ತೆಯಾಗುವವರೆಗೆ ನಿನಗೆ
ತೂಕಡಿಕೆ ಆ ಅರೆ ಎಚ್ಚರದಲ್ಲಿ ನಿನ್ನ ಮೈಮೇಲೆ
ಎಲ್ಲ ಅವ್ಯವಹಾರ, ಒಂದೆರಡೆಜಾವ, ಮತ್ತೆ
ಇಬ್ಬನಿಯಲಿ ಮೈ ತೊಳೆದು ಹೂ ಸುಗಂಧ ಪೂಸಿ
ಕಣ್ಣರಳಿಸಿ ಅವನು ಬಂದನೆಂದರೆ ನಿನಗೆ
ಸಡಗರ ಹೊಸ ಯೌವ್ವನ, ಯುಗಯುಗ
ಗಳಿಂದ ನಡೆದ ಮೈಥುನ
ಬೇಸರವೇ ಬಾರದ ಮುಪ್ಪೇ ಇರದ
ನಿಮ್ಮಿಬ್ಬರ ಈ ಮಿಲನ. [೨೪]

ಭೂಮಿ ಸೂರ್ಯರು ಶಾಶ್ವತರು. ಅವರು ಅನಾದಿಕಾಲದಿಂದಲೂ ಪ್ರೀತಿಯ ಅಪ್ಪುಗೆಯಲ್ಲಿದ್ದಾರೆ. ಹೀಗೆ ಹೆಣ್ಣು ಗಂಡಿನ ಜೈವಿಕ ಕ್ರಿಯೆಯನ್ನು ಭೂಮಿ ಸೂರ್ಯರಲ್ಲಿ ಕವಿ ಕಂಡು ಸಶಕ್ತಪೂರ್ಣವಾಗಿ ಚಿತ್ರಿಸಿದ್ದಾರೆ.

ಇವರ ಮತ್ತೊಂದು ಕವನ 'ಭೂಮಿ ನಾನು' ವಿಶಿಷ್ಟವಾದದ್ದು. ಇವರ ಇತರೆ 'ಭೂಮಿ', 'ಧಾರಿಣಿ' ಕವಿತೆಗಳಲ್ಲಿ ಭಾವಿಸಿರುವಂತೆಯೇ ಇಲ್ಲಿಯೂ ಭೂಮಿಯನ್ನು ಕಾಮ ತೀರಿಸಿಕೊಳ್ಳುವ ಚಟದ ಹೆಣ್ಣಿಗೆ ಹೋಲಿಸಲಾಗಿದೆ. ಹಗಲು ಸೂರ್ಯನೊಂದಿಗೆ, ಇರುಳು ಚಂದ್ರನೊಂದಿಗೆ ರಮಿಸಲು ಕಾಯುತ್ತಾಳೆ. ಸೂರ್ಯ ಪ್ರಖರತೆಯವನಾದರೆ, ಚಂದ್ರ ಅಮೃತಸಿಂಚನದ ಶಾಂತ ಸ್ವಭಾವಿ. ಆದರೆ ಅಮಾವಾಸ್ಯೆಗೊಮ್ಮೆ ಮರೆಯಾಗುವ ಚಂದ್ರನಿಂದ ಅತೃಪ್ತಿಗೊಳಗಾಗುತ್ತಾಳೆ. ಆ ಗುಣ ಸೂರ್ಯನಿಗಿಲ್ಲದಿರುವುದು ಒಂದು ವಿಶೇಷ. ಅದರಿಂದ ಭೂಮಿ ರೋಷಗೊಂಡು ಗುಡುಗುತ್ತಾಳೆ, ಬಾಯಿ ತೆರೆದು ಬೆಂಕಿ ಉಗುಳುತ್ತಾಳೆ. ಆದರೂ ಅಂತ್ಯದಲ್ಲಿ ಶಾಂತಳಾಗುತ್ತಾಳೆ. ಅದಕ್ಕೆ ಅವಳು ಕ್ಷಮಯಾಧರಿತ್ರಿ ಎಂದು ಕರೆಯುವುದರೊಂದಿಗೆ ಭೂಮಿಯನ್ನು ಹಿಂದಿನಿಂದಲೂ ಭಾವಿಸಿರುವ ಆಶಯಕ್ಕೆ ಕವಿ ಮನಸ್ಸು ಸ್ಪಂದಿಸಿರುವುದು ಕಂಡು ಬರುತ್ತದೆ.

ಚಂದ್ರ ಕಾಯುತ್ತಾನೆ ರಾತ್ರಿಗಾಗಿ
ಹಗಲು ಅವನಿಗೆ ಬೆಲೆ ಇಲ್ಲ
ಸೂರ್ಯ ಕಾಯುತ್ತಾನೆ ಹಗಲಿಗಾಗಿ
ರಾತ್ರಿ ಅವನಿಗೆ ಹುಗಲಿಲ್ಲ
ಭೂಮಿ ಕಾಯುತ್ತಾಳೆ ಈ ಇಬ್ಬರಿಗಾಗಿ
ಸರದಿಯಲ್ಲಿ ಬರುವ ಈ ಪ್ರಿಯಕರರ ಪಾಳಿಗಾಗಿ
. . . .

ಹಾಗೆಂದೇ ಈಗೀಗ ಇವಳೂ ನಡುಗುತ್ತಾಳೆ
ಗುಡುಗುತ್ತಾಳೆ ಬಾಯಿ ತೆರೆಯುತ್ತಾಳೆ ಬೆಂಕಿ
ಹರಿಸುತ್ತಾಳೆ ಆದರೂ ಮರೆಯುತ್ತಾಳೆ
ಕ್ಷಮಯಾಧರಿತ್ರಿ [೨೫]

ಭೂಮಿಯ ಈ ರೊಚ್ಚಿನ ಭಾವ ಸ್ಥಾಯಿಯಾಗಿ ನಿಲ್ಲದೆ ಸಂಚಾರಿಯಾಗುವುದು ಸ್ತ್ರೀ ಸಹಜವಾದ ಕ್ಷಮಾ ಗುಣವೇ ಆಗಿದೆ.

ಭೂಮಿಯನ್ನು ಕುರಿತ ಇವರ ಬಹಳಷ್ಟು ಕವಿತೆಗಳಲ್ಲಿ ಭೂಮಿಯ ಸಹನೆಯನ್ನ, ಅದರ ಸೊಗಸನ್ನ, ಅದರ ಸಂಪತ್ತನ್ನ ಹಾಗೂ ಅದರ ಚಂಚಲತೆಯ ಗುಣವನ್ನ ಹೆಣ್ಣಾಗಿ ಗ್ರಹಿಸಿ ತಮ್ಮ ಕಲಾತ್ಮಕತೆಯ ಶೈಲಿಯಲ್ಲಿ ನಿರೂಪಿಸಿದ್ದಾರೆ.

ಕೆ.ರತ್ನಮ್ಮ ತಮ್ಮ 'ಮಂಥನ' ಕೃತಿಯ 'ಜಯತೆ' ಕವಿತೆಯಲ್ಲಿ ಭಾರತಾಂಬೆಯನ್ನು ಬಣ್ಣಿಸಿದ್ದಾರೆ. ಮಾನವೀಯತೆ, ಶಾಂತಿ, ಸಹನೆ, ಸೌಂದರ್ಯದ ಪ್ರತೀಕವಾದ ಭಾರತಾಂಬೆ ವಿಶ್ವಮಾತೆಯ ಮಗಳಾಗಿ ಜನಿಸಿ, ಜಗತ್ತು ಮೆಚ್ಚುವಂತೆ, ನಾಡ ಕಲಿಗಳು ಮರೆಯದಂತೆ ಬಾಳಬೇಕೆಂಬ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ.

ಜಯತೇ ಜಯತೇ
ಸತ್ಯಮೇವ ಜಯತೆ
ಭಾರತೀಯರ ಅಭಯ ಧಾತೆ
ಸಾರುತಿಹ ಸತ್ಯಮೇವ ಜಯತೆ
ವಿಶ್ವದೆಲ್ಲೆಡೆ ಇರಲಿ ಮಾನವೀಯತೆ
ಪೂರ್ತಿ ನಶಿಸಿ ಹೋಗಲಿ ದಾನವತೆ
. . . .
ವಿಶ್ವ ಸಂದೇಶದಿ ಶಾಂತಿಯ ದೂತೆ
ಘನತೆಯ ಕವಿಗೆ ಪ್ರೀತಿಯ ಮಾತೆ

ಸತ್ಯ ಅಹಿಂಸೆಯ ಸಾಕಾರ ಮಾತೆ
ನಾಡ ಕಲಿಗಳು ಮರೆಯದ ಸುಪ್ರೀತೆ [೨೬]

ಪ್ರತಿಭಟನೆಯ ದನಿಗಳ ನಡುವೆಯೂ ಅಲ್ಲೊಂದು ಇಲ್ಲೊಂದು ಸ್ವೀಕೃತ ಮೌಲ್ಯಗಳ ಒಪ್ಪಿಗೆಯ ಸೂಚನೆ ಎಂಬಂತೆ ಸ್ತುತಿ ರೂಪದ ಕವಿತೆಗಳು ಕಂಡುಬರುತ್ತವೆ. ಅಂಥದಕ್ಕೆ ಈ ಕವಿತೆ ಉದಾಹರಣೆಯಾಗಿದೆ. ಭಾರತಾಂಬೆ ವಿಶ್ವಮಾತೆಯ ಮಗಳಾಗಿ ವಿಜೃಂಭಿಸಬೇಕೆಂಬ ಆಸೆಗೆ ಮಾರ್ಗೋಪಾಯವನ್ನು ಸೂಚಿಸದೆ ಕೇವಲ ಆಶಯದೊಂದಿಗೆ ಕವಿತೆ ಮುಕ್ತಾಯ ಕಾಣುತ್ತದೆ.

ದೇಶವನ್ನು ಕುರಿತ ಕವಿತೆ 'ಜಯತೇ' ಆದರೆ, ನಾಡನ್ನು ಕುರಿತ ಕವಿತೆ 'ಓ ತಾಯಿ' ಯಾಗಿದೆ. ಹಲವು ಭಾಷೆ, ಧರ್ಮಗಳ ವೈವಿಧ್ಯತೆ ಹೊಂದಿರುವ ಕನ್ನಡಮ್ಮ ನಮ್ಮನ್ನು ಪೊರೆವ ತಾಯಿ ಎಂದು ಭಾವಿಸಿ, ಆಕೆಯ ಕೃಪೆಯಾಚಿಸಿರುವುದು ಕಂಡುಬರುತ್ತದೆ.

ಓ ತಾಯಿ ಭುವನೇಶ್ವರಿ
ನಮ್ಮ ಕನ್ನಡ ನಾಡಿನೈಸಿರಿ
ಹಚ್ಚುತಿಹೆವು ಕನ್ನಡ ಜ್ಯೋತಿ
ಹರಸಿ ಕರುಣಿಸಮ್ಮ ಸನ್ಮತಿ

. . . .

ಕನ್ನಡ ಮನವು ಸೊಂಪು ನುಡಿಯು ಪೆಂಪು
ಕನ್ನಡ ಭಾಷೆ ಇಂಪು ಮನಕೆ
ನೀಡುತಿಹುದು ಅನಿತು ತಂಪು
ಕನ್ನಡ ಬಾಳ್ವೆ ಕಂಪು ಕನ್ನಡ ಸೇವೆ ಕಂಪು [೨೭]

ದೇಶವನ್ನು ಕುರಿತ ಕವಿತೆ ಮೇಲಿನದಾದರೆ ಇದು ಆ ಧಾಟಿಯಲ್ಲೇ ನಾಡುನುಡಿಯನ್ನು ಕುರಿತು ಬರೆದ ಕವಿತೆಯಾಗಿದೆ. ಕನ್ನಡಾಂಬೆಯನ್ನು ಪ್ರಶಂಸಿಸಿ, ಆಕೆಯ ಪ್ರೀತಿ ಮಡಿಲಲ್ಲಿ ಬಾಳುವುದೊಂದು ಅಭಿಮಾನದ ಸಂಗತಿ ಎಂದು ಕೊಂಡಾಡಿದ್ದಾರೆ.

'ಓ ತಾಯಿ' ಧಾಟಿಯಲ್ಲಿಯೇ ಹರಿದು ಬಂದಿರುವ ಕವಿತೆ 'ತಾಯಿಗೆ ನಮನ'. ಕರ್ನಾಟಕದ ಕವಿ ಪರಂಪರೆಯೊಂದಿಗೆ ಪ್ರಸ್ತುತ ಕರ್ನಾಟಕದ ಸ್ಥಿತಿಗತಿಯ ಚಿತ್ರ ನೀಡಿ, ಅನ್ಯ ಭಾಷೆಗಳ ದಾಳಿಯಲ್ಲಿ ಸಿಲುಕಿರುವ ಕನ್ನಡಾಂಬೆ ನಿತ್ಯ ಬಾಳಲಿ ಎಂದು ಹೇಳಿದ್ದಾರೆ. ಹೆತ್ತ ತಾಯಿ ಮತ್ತೆ ಮಿತ್ರ ತಾಯಿ ಇಬ್ಬರೂ ಸೊಗ ಹೊಡೆದು ಮೆರೆಯಲಿ ಎಂಬ ಅನ್ಯಭಾಷಾಭಿಮಾನದ ಮಾತುಗಳನ್ನು ಆಡಿದ್ದಾರೆ.

ನಮಿಸುವೆನು ತಾಯೆ
ಕನ್ನಡ ರಾಜೇಶ್ವರಿಯೆ
ಹರಸಮ್ಮ ಎಮ್ಮ
ಕನ್ನಡ ಭುವನೇಶ್ವರಿಯೆ

. . . .

ಹೆತ್ತ ತಾಯಿ ಮತ್ತೆ ಮಿತ್ರ ತಾಯಿ
ಇಬ್ಬರೂ ಸೊಗವಡೆದು ಮೆರೆಯಲಿ
ಪ್ರೀತಿ ಪ್ರೇಮದಿ ಹೊರನಾಡ ಜನರು ಬೆರೆಯಲಿ
ನಲಿಯುತ್ತ ನಾಡುನುಡಿಗೆ ಕೃತಜ್ಞತೆಯ ಹರಿಸಲಿ
ಉತ್ತುಂಗ ಕನ್ನಡಿಗರ ಕನಸು ನನಸಾಗಲಿ
ಮನದಲ್ಲಿ ನಿತ್ಯ ರಾಜ್ಯೋತ್ಸವ ನೆಲೆಗೊಳಲಿ [೨೮]

ಒಕ್ಕೂಟ ರಾಜ್ಯಗಳ ನಾಡು ಭಾರತ. ಇಲ್ಲಿನ ಎಲ್ಲ ಭಾಷೆ, ಧರ್ಮಗಳನ್ನು ಗೌರವಿಸುವ ಸೌಹಾರ್ದತೆಯ ಪ್ರಜ್ಞೆ ಕನ್ನಡಿಗರಲ್ಲಿರಬೇಕೆಂಬುದನ್ನು ಕವಯತ್ರಿ ಪರೋಕ್ಷವಾಗಿ ತಿಳಿಸಿದ್ದಾರೆ. ಈ ಕವಯತ್ರಿಯ ನಿಲುವು ಹಿಂದಿನವರ ಆಲೋಚನೆಗೆ ಬದ್ಧವಾಗಿದೆ. ಪರಂಪರೆಯ ಮುಂದುವರಿಕೆಯಾಗಿದೆ.

ತಾಯಿಯನ್ನು ವಟವೃಕ್ಷಕ್ಕೆ ಹೋಲಿಸಿ ಅದು ಹೇಗೆ ಭೂಮಿಯ ಒಡಲನ್ನು ಸೀಳಿ ಮೇಲೆದ್ದು ಬೆಳೆದು, ಅನೇಕ ಸಂಕೇತಗಳಿಗೆ ಧ್ವನಿಯಾಗುವುದ ಚಿತ್ರಿಸಿದ್ದಾರೆ. ಹೆಣ್ಣು ಹೇಗೆ ನರಭಕ್ಷಕರ ಮೇಜವಾನಿಗೆ ಬಳಕೆಯಾಗುತ್ತಾಳೆ, ಅಮಲುಜನಕ್ಕೆ ಹೆಣದ ಹಾಸಾಗಿ,

ಕರಿನೆರಳ ಗೂಥದಲಿ ಕಪ್ಪಾದ ಕೈಗಳು ಬೆಳಕಿನಲಿ ಬೆಳಗುವ ವಾಸ್ತವಿಕ ಚಿತ್ರವನ್ನು ಸಮರ್ಪಕವಾಗಿ ನಿರೂಪಿಸಿದ್ದಾರೆ.

ನನ್ನವ್ವ ನೆರಳು ತಂಪಿನ
ಮಹಾವಟವೃಕ್ಷ!!
ನೆಲದೆದೆ ಸೀಳಿ ಕವಲಾಗಿ
ಹೊರಟ ಬೇರುಗಳ ಜಾಡು ಅಯೋಮಯ
ನಿಮಿರಿ ನಿಂತ ತಲೆ ಶಿಖರದೆಡೆಯಲ್ಲಿ
ಸ್ವರ್ಣಗೋಲ
ವಿಶ್ವರೂಪದ ಹಿಡಿದು ದೃಷ್ಟಿಯಲಿ
ಜಡಿದು
ಬಂಧಿಸುವ ಬಯಕೆಯೆದೆಗಳನುಲಿ
. . . .
ಉದ್ಧಾರ ದೀಕ್ಷಕಂಕಣದ
ಗಿಲುಕುಗಿಲಿನ ಸದ್ದು
ತಾರ ಸಪ್ತಕದಲ್ಲಿ ಕೊರಳಿರಿವ
ಬಿರಿದು ಬಾವಲಿ ಚೆಲ್ಲಿ
ಮನೆಯಿಂದ ಮಹಾವೃಕ್ಷದ ಬುಡಕೆ
ಕಸರತ್ತು ಕರಾಮತ್ತು [೨೯]

"ಡಾ.ವಿಜಯಾ ಸುಬ್ಬರಾಜ್ ಸಮಕಾಲಿನ ಲೇಖಕಿಯರ ನಡುವೆ ಸ್ವಂತಿಕೆಯ ಮೊಹರು ಒತ್ತಿ ನಿಂತಿದ್ದಾರೆ. ಅವರ ಠಸ್ಸೆ ಇರುವ 'ಹಾಡೇನ ಪಾಡೇನ' ಕನ್ನಡ ಕಾವ್ಯ ಕ್ಷೇತ್ರದಲ್ಲಿ ಹೊರ ಬಂದಿರುವ ಈ ದಶಕದ ಮಹತ್ವದ ಕವನ ಸಂಕಲನ. ಅವರ ಪ್ರಬುದ್ಧ ಹಾಗೂ ಯಶಸ್ವಿ ಕವಿತೆಗಳು ಈ ಸಂಕಲನದಲ್ಲಿ ಸೇರ್ಪಡೆಯಾಗಿದ್ದೂ ಒಮ್ಮೆಲೇ ಅವರನ್ನು ಗಣ್ಯ ಕವಿಗಳ ಸಾಲಿನಲ್ಲಿ ಕೂಡುವಂತೆ ಮಾಡಿವೆ. ಅವರ ಇದುವರೆಗಿನ ಕಾವ್ಯ ಕೃಷಿಯಲ್ಲಿ ಇದು ಗಮನಾರ್ಹವಾದ ಸಿರಿಬೆಳೆ"[೩೦] – ಎಂದು ಕಮಲಾ ಹಂಪನಾರವರ ಪ್ರಶಂಸೆಯ ಮಾತುಗಳನ್ನು ಪಡೆದಿರುವ ಕವಯತ್ರಿ ವಿಜಯಾ ಸುಬ್ಬರಾಜ್‌ರವರ 'ನನ್ನವ್ವ!' ಗಮನ ಸೆಳೆವ ಕವಿತೆಯಾಗಿದೆ.

ಇವರ ಮತ್ತೊಂದು ಕವಿತೆ 'ಅತ್ತರೆ ಅಳಲೇಳು ಈ ಕೂಸು ನನಗಿರಲಿ' ಎಂಬುದರಲ್ಲಿ ತಾಯಿಯ ಮಮತೆ ವ್ಯಕ್ತವಾಗಿದೆ. ಹಡೆದ ಮಗುವಿನ ಬಗ್ಗೆ ಒಡಲ ಆಶ್ರಯ ನೀಡಿ, ಮಡಿಲಲ್ಲಿ ಬೆಳೆಸುವ ತಾಯಿಗೆ ತನ್ನ ಕಂದನ ಬಗ್ಗೆ ಇರುವ ವಾತ್ಸಲ್ಯ ಮಮತೆಯೊಂದಿಗೆ ಆ ಮಗು ತನ್ನನ್ನು ಯಾವ ಕಾಲದಲ್ಲೂ ತಾಯಿ ಅನ್ನುವುದನ್ನು ಮರೆಯಬಾರದೆಂದು ಆಶಿಸುತ್ತಾಳೆ.

ಅತ್ತರೆ ಅಳಲೇಳು ಈ ಕೂಸು ನನಗಿರಲಿ
ಹೆತ್ತೊಡಲ ಪಿಂಡ ನನ್ನೊಡಲ ಖಂಡ
ನನ್ನ ಕೂಸಿದು ನನಗೆ ಸಾಕುವುದು ಹೊರೆಯಲ್ಲ
ನನ್ನೆದೆಯ ಗದ್ದುಗೆಗೆ ಇವನ ದೊರೆ ಬೇರಿಲ್ಲ!.
. . . .
ಯಾವುದೇನೇ ಇರಲಿ ಯಾರದೇನೇ ಬರಲಿ
ನನ್ನ ನಲ್ಮೆಯ ಕೂಸು ನನ್ನ ಗುಡಿಸಲ ಹಣತೆ

ರಂಪಾಟ ತುಂಟಾಟವೇನಿದ್ದರೂ ಇರಲಿ
ನನ್ನ ಕೂಸಿದು ನನಗೆ ಹೂ ನಗೆಯ ಚಂದ್ರಾಮ [೨೧]

ಈ ಕವಿತೆಯಲ್ಲಿ ತಾಯಿಯೇ ತನ್ನ ಕಂದನ ಬಗ್ಗೆ ಅಭಿವ್ಯಕ್ತಿಸುವ ಕರುಳ ಬಳ್ಳಿಯ ಭಾವನೆ ವ್ಯಕ್ತವಾಗಿದೆ. 'ಹೆತ್ತೋರಿಗೆ ಹೆಗ್ಗಣ ಮುದ್ದು, ಕಟ್ಟಿಕಂಡೋರಿಗೆ ಕೋಡಂಗಿಮುದ್ದು' ಎನ್ನುವ ಗಾದೆ ಮಾತಿಗೆ ಬಡತನ ಬೇಗುದಿಯಲ್ಲಿರುವ ತಾಯಿ ತನ್ನ ಗುಡಿಸಲಿನ ದೀಪ ನನ್ನ ಕಂದ ಎಂದು ಹೇಳುವ ಮಾತೃತ್ವದ ಹೃದಯ ಶ್ರೀಮಂತಿಕೆ ಇಲ್ಲಿ ಕಂಡುಬರುತ್ತದೆ.

ಕವಯತ್ರಿ ಲಲಿತ ಸಿದ್ದಬಸವಯ್ಯನವರ 'ಇಹದ ಸ್ವರ' ಸಂಕಲನದಲ್ಲಿ ಕಾಣುವ 'ಹೆರಿಗೆ ಬೇನೆ' ಕವಿತೆಯಲ್ಲಿ ನಿಘಂಟಿನಲ್ಲಿನ ಮೀರಿದ ಅರ್ಥ, ಅಮರಕೋಶದಲ್ಲಿ ಸಿಗದ ಅರ್ಥ, ಭಾಷೆಯ ಕಟ್ಟಿಗೆ ಸಿಗದ ಭಾವ 'ಹೆರಿಗೆ ನೋವು' ಎಂಬುದನ್ನು ಕಾಣಬಹುದು. 'ಅಮ್ಮನಾಗುವುದು ಕಾಡಿಗೂ, ನಾಡಿಗೂ ಒಂದೇ ತೆರದ ತಪಸ್ಸು' ಎಂಬ ಕಾವ್ಯಾತ್ಮಕ ಅರ್ಥದಲ್ಲಿ ತಾಯಿಯಾಗುವ ಕ್ರಿಯೆಯನ್ನು, ಮಗುವಿಗೆ ಜನ್ಮ ನೀಡುವುದನ್ನು ಹೆಣ್ಣಿನ ಬಹುದೊಡ್ಡ ಕರ್ಮ ಎಂದು ಹೇಳುತ್ತಾರೆ.

ಉಂಡೂಟ ಕಂಡ ಕೊಲೆ
ಗಳೆರಡನ್ನೂ ಮರೆಯಲಾಗದು ಮನುಷ ಜನ್ಮ
ವೆಂದಮ್ಮ ಪದೇ ಪದೇ ಹೇಳುತ್ತಿದ್ದುದರ
ಜೊತೆಗಿನ್ನೊಂದು ಸೇರಿಸಬೇಕು
ಹೆರಿಗೆ ಬೇನೆ

. . . .

ರಣ ಬಿಸಿಲಿಗೊಡ್ಡಿದರೆ ಅಪ್ಪಳಿಸುವ ಹದ್ದು
ಕುಕ್ಕುವ ಕೊಕ್ಕಿಗೆ ಯಾವುದು ಛಂದಸ್ಸು
'ಅಮ್ಮ' ನಾಗುವುದು ಕಾಡಿಗೂ ನಾಡಿಗೂ
ಒಂದೆ ತೆರದ
ತಪಸ್ಸು [೨೨]

ಅಮ್ಮನಾಗುವುದು ಕಾಡಿಗೂ, ನಾಡಿಗೂ ಒಂದೆ ತೆರದ ತಪಸ್ಸು ಕೇವಲ ಕ್ರಿಯೆಯಲ್ಲ ಅದೊಂದು ಸಾಧನೆಯ ಸಿದ್ಧಿ. ಅದು ತಪಸ್ಸು ಎಂದು ಕವಯತ್ರಿ ತಾಯ್ತನದ ಹಿರಿಮೆಯನ್ನ ಪ್ರಕೃತಿಯ ಹಿರಿಮೆಯೊಂದಿಗೆ ಸಮೀಕರಿಸಿ ನೋಡಿದ್ದಾರೆ. ಇದೊಂದು ಹೆಣ್ಣಿನ ಮನದಾಳದ ಭಾವನೆಯಿಂದ ಮೂಡಿಬಂದ ವಾಸ್ತವಿಕ ಚಿತ್ರಣವಾಗಿದೆ. ತಾಯ್ತನದ ಮಹತ್ವದೊಂದಿಗೆ ತಾಯಾಗುವ ಸಂದರ್ಭದಲ್ಲಿನ ನೋವನ್ನು ತಿಳಿಸುತ್ತದೆ.

ಶ್ರೀಮತಿ ಕೆ. ಷರೀಫಾರವರ ಕವಿತೆ 'ಹೊಕ್ಕಳು – ಹುರಿ' ಕಿರಿದಾಗಿದ್ದರೂ ಕರುಳು ಬಳ್ಳಿಯ ಸಂಬಂಧದ ಬಗ್ಗೆ ತಿಳಿಸುತ್ತದೆ. ಗರ್ಭದಲ್ಲಿ ಮೂಡಿದ ಬಿಂದುವಿಗೂ. ಹೊತ್ತು ನಿಂತ ತಾಯಿಗೂ ಹೊಕ್ಕಳು ಹುರಿಯ ಸಂಬಂಧವಾದರೆ; ಮಗು ಜನನವಾಗಿ ಜಗತ್ತಿಗೆ ಕಾಲಿಟ್ಟಾಗ ಹೊಕ್ಕಳು ಹರಿಯುವ ಸಂಬಂಧ ಮಾನಸಿಕ ಬಂಧ. ಇದು ತಾಯಿ ಮಗುವಿಗಿರುವ ಅವಿನಾಭಾವ ಸಂಬಂಧವೆಂಬುದನ್ನು ತಿಳಿಸುತ್ತದೆ.

ಗರ್ಭದಲಿ ಮೂಡಿದ ಬಿಂದುವಿಗೂ
ಹೊತ್ತು ನಿಂತ ತಾಯಿಗೂ
ಹೊಕ್ಕಳು ಹುರಿಯ ಸಂಬಂಧ
ದಿನ ತುಂಬಿದಾಗ ಹೊಕ್ಕಳ ಹುರಿ
ಕತ್ತರಿಸಿದ ಮೇಲೆ ಉಳಿದದ್ದು
ತಾಯಿಯೊಂದಿಗೆ ಕರುಳು – ಬಳ್ಳಿಯ
ಹೊಕ್ಕಳು ಹುರಿಯುವ ಸಂಬಂಧ
ಕಡಿಯದಿರುವ ಮಾನಸಿಕ ಬಂಧ [೩೩]

ತಾಯಿ – ಮಗುವಿನ ಸಂಬಂಧವನ್ನು ಹೊಕ್ಕಳು ಬಳ್ಳಿ ಕತ್ತರಿಸುವ ಮೂಲಕ ಬೇರ್ಪಡಿಸುವುದು ಸಹಜ ಕ್ರಿಯೆಯಾದರೂ, ಅದು ನಿರಂತರ ಮುಂದುವರಿಕೆಯಾಗಿ, ತಾಯಿ ಮಕ್ಕಳ ಭಾವನಾತ್ಮಕ ಸಂಬಂಧವನ್ನು ಕತ್ತರಿಸಿ ಹಾಕದಿರಲಿ ಎಂದು ಆಶಿಸುತ್ತಾ ಮಾನವ ಸಮಾಜದ ಅಸ್ತಿತ್ವವನ್ನು ಕುರಿತು ಹೇಳುವ ಮಾತಾಗಿದೆ.

ಶುಭಾವತಿಯವರ ಕವಿತೆ 'ತಾಯಿಯ ಪ್ರೇಮ' ಸಹಜವಾಗಿ ಮಗುವಿನ ಬಗ್ಗೆ ತಾಯಿಯಾದವಳು ತಾಳುವ ಅಭಿಮಾನ, ಆಸೆ, ಆಕಾಂಕ್ಷೆಗಳ ಚಿತ್ರದಿಂದ ಕೂಡಿದೆ. ತಾಯಿ ಕಂದನಿಗಾಗಿಯೇ ಬದುಕುವುದು, ಹಾಡುವುದು, ಪ್ರೇಮ ಹರಿಸುವುದು ಎಂಬುದನ್ನು ಈ ಕವಿತೆಯಲ್ಲಿ ಕಾಣಬಹುದು.

ನಾ ಹಾಡುವೆ ಕವಿಯಾಗುವೆ
ಓ ಕಂದ ನಿನಗಾಗಿಯೆ
. . . .
ಆ ಪ್ರೇಮವು ಸೊಗಸಾಗಲು
ಮಗುವಾದೆ ನನ್ನೊಡಲಲ್ಲಿ
ಕನಸೆಲ್ಲವು ನನಸಾಗಲು
ತೇಲಲು ನಾ ಸವಿಗಲಿನಲಿ
ಸುಖವಾಗಿರು ಹಾಯಾಗಿರು ಎಂದೆಂದು ನೀ ಮಡಿಲಿನಲಿ [೩೪]

"ಹೆಣ್ಣು ಹೆಣ್ಣಾಗಿರುವ ತನಕ ಆಕೆಯ ಬಾಳು ಆಕೆಯ ಸುಖಕ್ಕೆ ಮೀಸಲಾಗಿರುತ್ತದೆ. ಆದರೆ ತಾಯಿಯಾದ ಬಳಿಕ ತಾಯ್ತನದ ಜವಾಬ್ದಾರಿ ಹೆಚ್ಚುತ್ತದೆ. ಗೌರವದ ಸ್ಥಾನ ಮಾನಗಳು ಲಭಿಸುತ್ತವೆ. ತಾಯಿ ಎಂಬ ಎರಡಕ್ಷರದ ಶಬ್ದಕ್ಕೆ ಜಗದಗಲದ ವ್ಯಾಪ್ತಿ ಇದೆ. ಮಹತ್ವವಿದೆ. ಆಕೆ ಕರುಳು ಕರುಣೆಯ ಕಡಲು. ಕ್ಷಮೆ ಭೂಮಿತಾಯಿಗೂ ಮಿಗಿಲು. ತ್ಯಾಗಕ್ಕೆ ಮತ್ತೊಂದು ಹೆಸರು ತಾಯಿ"[೩೫] ಎಂಬ ಎಂ.ಎಲ್.ನರಸಿಂಹಮೂರ್ತಿಯವರ ಮಾತು ಈ ಕವಿತೆಗೆ ಅನ್ವಯಿಸುವಂತಿದೆ. ತಾಯಿಯ ಅಂತಃಕರಣ ಎಷ್ಟೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಇವರ ಮತ್ತೊಂದು ಕವಿತೆ 'ಮಗುವಿನ ಹಾಡು'. 'ತಾಯ ಪ್ರೇಮ'ದಲ್ಲಿ ತಾಯಿ ಅಭಿಪ್ರಾಯವಿದ್ದರೆ; 'ಮಗುವಿನ ಹಾಡು' ಕವಿತೆಯಲ್ಲಿ ಮಗುವಿನ ಅನಿಸಿಕೆ ಇದೆ. ಇವೆರಡರಲ್ಲೂ ತಾಯಿ ಮಗುವಿನ ವಾತ್ಸಲ್ಯದ ಚಿತ್ರಣವಿದೆ.

ಪ್ರೀತಿಯಿಂದ ಅಪ್ಪುವಳು ನನ್ನ ಅಮ್ಮ
ನೀತಿಯನ್ನು ಕಲಿಸುವಳು ನನ್ನ ಅಮ್ಮ
. . . .
ಕೆಟ್ಟ ಕೆಲಸ ಮಾಡುತಾ ದುಷ್ಟನಾಗಿ ಬಾಳದಿರು
ನಿಷ್ಠೆಯಿಂದ ನೂರು ವರುಷ ಬಾಳು ಎಂದು ಹರಸುವಳು
ತಾಯಿಗಿಂತ ದೇವರಿಲ್ಲ ಎಂಬುದೀಗ ಅರಿತೆನು
ಪಾದ ಪೂಜೆಯಿಂದ ಮುಕ್ತಿಯನ್ನು ಪಡೆವೆನು
ಮಕ್ಕಳೇ ದೇವರು [೩೬]

'ಮಗು ಮಾನವನ ತಂದೆ' ಎಂಬ ಹೇಳಿಕೆಗೆ ಅನ್ವಯಿಸುವಂತೆ ಇಲ್ಲಿ ಮಗು ಮಾತನಾಡುತ್ತದೆ. ಇದು ಎಲ್ಲ ತಾಯಂದಿರ ಬಯಕೆ, 'ಆಚಾರಕ್ಕರಸಾಗು ನೀತಿಗೆ ಪ್ರಭುವಾಗು ಮಾತಿನಲಿ ಚೂಡಾಮಣಿಯಾಗು ನನ ಕಂದ ಜ್ಯೋತಿಯೇ ಆಗು ಜಗಕೆಲ್ಲ' ಎಂಬ ಜನಪದರ ಮಾತುಗಳು ಮರುಕಳಿಸಿದಂತೆ ಕಂಡುಬರುತ್ತದೆ.

ತಮ್ಮ ವಿಚಾರಗಳನ್ನು, ಚಿಂತನೆಗಳನ್ನು ಕವಿತೆಯಾಗಿಸಲು ಸಾಧ್ಯವಾಗದಿದ್ದರೂ ಸಾಮಾಜಿಕ ಕಾಳಜಿ ಇಲ್ಲಿದೆ. "ಈ ಕವನಗಳಲ್ಲಿ ಸೂತ್ರ ಬದ್ಧತೆ ಇಲ್ಲ, ಶಿಸ್ತಿಗೆ ಒಳಪಟ್ಟಿಲ್ಲ, ಛಂದಸ್ಸಿನ ಲಯ ಸೂತ್ರಗಳಿಲ್ಲ. ಆದರೆ ಸಹಜ ಅಭಿವ್ಯಕ್ತಿ ಇದೆ, ಅಂತಃಕರಣವಿದೆ, ಜೀವನದೆಡೆಗಿನ ಅದಮ್ಯ ತುಡಿತವಿದೆ"[೩೭] ಎಂದು 'ಪಂಚಮಿ'ಯವರು ನುಡಿದಿರುವುದು ಒಪ್ಪುವಂತಹುದಾಗಿದೆ. ಇಲ್ಲಿನ ಕವಿತೆಗಳು ಶಿಶು ಗೀತೆಗಳಂತೆ ಗಮನ ಸೆಳೆಯುತ್ತವೆ.

ಕವಯತ್ರಿ ಎಸ್.ವಿ. ಪ್ರಭಾವತಿಯವರ 'ತಾಯಿ – ಭೂಮಿ' ಸಹನೆಯ ಪ್ರತೀಕವಾಗಿದೆ. ಈ ದೇಶದ ಒಂದೊಂದು ಶೋಷಣೆಗೂ ಕಾರಣರಾದ ಜಗದ್ಗುರುಗಳ, ಶಾಸನ ಬರೆಸಿದವರ, ತನ್ನದೆಂದು ಕೊಚ್ಚಿಕೊಂಡು ಸ್ವಾರ್ಥದ ಕೋಟೆ ಕಟ್ಟಿದವರ ಬಗ್ಗೆ ಸಹನೆಯಿಂದ ಚಿಂತಿಸುವ ಕವಿಯ ಮನಸ್ಸು ತಾಯಿ – ಭೂಮಿಯಂತೆ ಇದೆ.

ಇವರೂ ಕೂಡ ಎಲ್ಲರಂತೆ ಒಂದು ದಿನ ಬದುಕಿನ ವ್ಯಾಪಾರ ಮುಗಿಸಿ ಹೋಗುವುದು ಖಾತ್ರಿಯಾಗಿದ್ದರೂ, ತಾವು ಶಾಶ್ವತವೇನೋ ಎಂಬಂತೆ, ಮಾನವೀಯತೆಯ ಮುಖವಾಡ ಧರಿಸಿ ಸಮಾಜ ಕಂಠಕರಾದವರನ್ನು ಕಂಡು ವ್ಯಥೆಯ ಕನಿಕರದ ನಿಟ್ಟುಸಿರು ಬಿಟ್ಟಿದ್ದಾರೆ. ಬದುಕು ಮಳೆಹನಿ ಹೇಗೆ ಹಸಿರೊಡೆಸಿ ಕರ್ತವ್ಯ ತೀರಿಸಿ ನಡೆಯುವುದೋ ಹಾಗೆ ಬಾಳಿರೋ ಎಂದು ಬುದ್ಧಿ ಹೇಳಿದ್ದಾರೆ. ಆದರೆ ತಿದ್ದಿಕೊಳ್ಳದ ಜನ ಇರುವಾಗ ಏನು ಮಾಡುವುದೆಂಬ ಅಸಹಾಯಕತೆ ಕವಿಯನ್ನು ಕಾಡಿದೆ.

ತಾಯಿಯಂತೆ ಭರಿಸಿರುವೆ ನಾ ಇವರುಗಳ
ನನ್ನನ್ನು ಹಂಚಿಕೊಂಡವರ ದೇಶದ ನೆಲವ
ಇಂಚಿಂಚು ತಿಂದವರ ನನ್ನ ಮನಸ್ಸೆಂಬ
ಸರೋವರದಲೀಸಾಡ ಬಂದವರ, ನನ್ನ
ಒಂದೊಂದು
ಮೂಲೆಯನೂ ತಮ್ಮದೆಂದುಕೊಂಡವರ
. . . .
ಇವರೇ ರಾವಣ ಕುಂಭಕರ್ಣರಾಗುತ್ತಾರೆ.

ತಾವು ರಾಮಲಕ್ಷ್ಮಣರೆಂದೇ ಭಾವಿಸುತ್ತಾರೆ.
ದುರ್ಯೋಧನನ ಒಳಗೇ ಅಡಗಿ ಕುಳಿತ ಕೃಷ್ಣ
ನಂತೆ ನಟಿಸುತ್ತಾರೆ ಇವರು ಯಾವ ರಾಮಾ
ಯಣ ಭಾರತ ಬರೆಯುವುದು ಬೇಡ.
ಮಳೆಹನಿ ಹೇಗೆ ಹಸಿರೊಡೆಸಿ ಕರ್ತವ್ಯ ತೀರಿಸಿ
ನಡೆಯುವುದೋ ಹಾಗೆ ಬಾಳಿರೋ
ಎಂದು ಬುದ್ಧಿ ಹೇಳಿದ್ದೇನೆ - ಏಕಾಂತದಲಿ
ಕಚ್ಚಾಡಿದ್ದೇನೆ [೩೮]

ಕವಿತೆಯ ರಚನೆಯಲ್ಲಿ ಪೌರಾಣಿಕ ಪ್ರಜ್ಞೆ ಕಾರ್ಯ ನಿರ್ವಹಿಸಿದೆ. ಅದು ಪ್ರಸ್ತುತದಲ್ಲೂ ಪುನರಾವರ್ತನೆಗೊಳ್ಳದೆ, ವರ್ತಮಾನದ ಸಹಜತೆಗೆ ಮೈತೆರೆದುಕೊಳ್ಳಬೇಕು ಎಂಬ ಧ್ವನಿಯನ್ನು ಗುರುತಿಸಬಹುದು. ಸೇವೆಯ ಹೆಸರಿನಲ್ಲಿ ಸುಲಿಗೆ ಮಾಡುವ, ಸಭ್ಯರಂತೆ ಸೋಗು ಹಾಕುವ ವಂಚಕರನ್ನು ಕುರಿತು ಹೇಳುತ್ತಲೆ ಮನುಷ್ಯ ಮಳೆಯಂತೆ ತನ್ನ ಪಾಲಿನ ಉಪಕಾರ ಸಲ್ಲಿಸಿ ಹೋಗಬೇಕೆಂಬ ಆದರ್ಶದ ಮಾತುಗಳು ಇಲ್ಲಿವೆ.

'ವೃಷಭಾವತಿ' - ನದಿಯನ್ನು ಕುರಿತ ಕವಿತೆ. ಮಾಲಿನ್ಯದಿಂದ ತುಂಬಿಹೋಗಿರುವ, ಬಳಕೆಗೆ ಅನುಪಯುಕ್ತವಾಗಿರುವ ಈ ನದಿಯ ಒಳಗುದಿಯನ್ನು ಹರಿಸಿದ್ದಾರೆ. ಹಿಂದೆ ಶುಭ್ರಳಾಗಿ, ಭೇದ ಭಾವವಿಲ್ಲದೆ ಹರಿದು ತಣಿಸಿದ್ದ ಈ ನದಿಗೆ ವಿಷವಿಕ್ಕಿದವರ ಬಗ್ಗೆ ಚಿಂತಿಸುವಂತೆ ಮಾಡಿದೆ. ಆಧುನಿಕ ಜಗತ್ತಿನಲ್ಲಿ ಕಾರ್ಖಾನೆಗಳು ಜೀವನ ಸುಧಾರಣೆಗೆ ಸಾಧನವಾದಂತೆ, ಜೀವ ಹಿಂಡುವ ಮಾಧ್ಯಮಗಳಾಗಿರುವುದು ಉಂಟು. ಹೀಗಾಗಲು ಮನುಷ್ಯನ ವಿವೇಕ ಶೂನ್ಯ ವರ್ತನೆಯೇ ಕಾರಣ. 'ವೃಷಭಾವತಿ' ಇಲ್ಲಿ ಕೇವಲ ಸಾಂಕೇತಿಕ. ಎಲ್ಲ ನದಿ ಜಲಪಾತಗಳ ಹಣೆಬರಹವೂ ಇದೇ ಆಗಿದೆ ಎಂಬುದನ್ನು ನಾವು ಮರೆಯುವಂತಿಲ್ಲ. ನದಿ ಪಾತ್ರಗಳನ್ನು ಶುಭ್ರವಾಗಿ ಇಟ್ಟುಕೊಂಡಾಗ ಸಮಾಜಕ್ಕೆ ಪೂರಕ. ಇಲ್ಲದಿದ್ದರೆ ಅದೇ ಮಾರಕವಾಗುತ್ತದೆ ಎಂಬ ಚಿಂತನೆಗೆ ಈ ಕವಿತೆ ದಾರಿಮಾಡಿ ಕೊಟ್ಟಿದೆ.

ವೃಷಭಾವತಿ ಒಮ್ಮೆ ಹರಿದು ಉಕ್ಕೇರಿ ನೆಲಜಲಹೊಲ
ಭೇದ ಭಾವವಿಲ್ಲದೆ ಉಣಿಸಿದ್ದಳು ಎಲ್ಲರನೂ ತಣಿಸಿದ್ದಳು
ಈಗೇಕೆ ವಿಷವಾದೆ ನಾನು ಎಂದು ಪರಿತಪಿಸುತ್ತಾಳೆ. ತನಗೆ ವಿಷ
ವೂಡಿದವರ ಕಾಣಲಾಗದೇ ಹಿಡಿಯಲಾಗದೇ ತಡೆಯಲಾಗದೇ ಹೀಗೆ
. . . .
ಅಂದಿನೊಬ್ಬ ಪ್ರಿಯಕರ ಬಂದು ಕೇಳುತ್ತಾನೆ ಮತ್ತೆ ಮತ್ತೆ
ವೃಷಭಾವತಿ ಹರಿಯಲಾರೆಯ ನೀನು ಹಿಂದಿನಂತೆ
ಹರಿವ ಬಯಕೆ ನನಗಿದೆ ಗೆಳೆಯ ಹರಿದೇನು ನಾನು
ತುಂಬಿ ಸುರಿದೇನು ನಾನು ಸೋಸಿಬಿಡು ಈ ಕೊಳೆಯ
ಪಿಸುಮಾತಿನಲಿ ಉಸುರುತ್ತೇನೆ ನಾನು [೩೯]

ಪರಿಸರ ಹಿಂದಿನಂತೆ ಇಂದು ಪರಿಶುದ್ಧವಾಗಿ ಉಳಿದಿಲ್ಲ. ಕೈಗಾರಿಕೆಗಳು ಆರ್ಥಿಕ ಪ್ರಗತಿಯನ್ನು ಬಿಂಬಿಸುತ್ತಿರುವ ದಿಸೆಯಲ್ಲೆ ಆಲೋಚಿಸುತ್ತಿದ್ದೇವೆಯೇ ಹೊರತು. ಅದು ಉಂಟು ಮಾಡುತ್ತಿರುವ ಪರಿಸರ ಮಾಲಿನ್ಯದ ಬಗೆಗೆ ನಾವು ಗಂಭೀರವಾಗಿ

ಚಿಂತಿಸುತ್ತಿಲ್ಲ. ಇದನ್ನು ಜಾಗತೀಕರಣದ ಸಂದರ್ಭದಲ್ಲಿಟ್ಟು ನೋಡಿದಾಗ ಹೆಚ್ಚು ಧ್ವನಿಪೂರ್ಣವಾಗುತ್ತದೆ. ಇದು ಕವಯತ್ರಿಗಿರುವ ಸಮಕಾಲಿನ ಪ್ರಜ್ಞೆಯಾಗಿದೆ.

ಎಲ್ಲರ ಮನಸ್ಸಿಗೆ ಮುದ ನೀಡುವ, ಬದುಕಿಗೆ ಆಧಾರವಾಗುವ ನದಿ ಕೇಳುವುದು ಒಂದನ್ನೆ: ಕೊಳೆ ಸೇರದೆ, ಸೋಸಿ ಬಿಡಿ ಹಿಂದಿನಂತೆ ಹರಿಯುತ್ತೇನೆ ಎಂಬ ಮಾತು ಧ್ವನಿಪೂರ್ಣವಾಗಿದೆ.

ಎಸ್.ವಿ. ಪ್ರಭಾವತಿಯವರ 'ಭೂಮಿ' – ಕವನ ಸಂಕಲನದಲ್ಲಿ ಕಾಣುವ ಬಹಳಷ್ಟು ಕವಿತೆಗಳನ್ನು ಸಾಂಪ್ರದಾಯಕ ಚೌಕಟ್ಟಿನಿಂದ ಹೊರ ನಿಂತು ಭೂಮಿಯನ್ನು ಒಂದು ಸ್ತ್ರೀಯನ್ನಾಗಿ ಪರಿಭಾವಿಸಿದ್ದಾರೆ. ಆಕೆಯನ್ನು ಪುಣ್ಯದ ಪ್ರತೀಕವಾಗಿ, ಧರ್ಮದ ಅಧಿದೇವತೆಯಾಗಿ ಕಾಣುವ ಪುರಾಣ ಕಲ್ಪನೆಯಿಂದ ಹೊರತಾಗಿ ಆಕೆಯನ್ನು ಪ್ರಿಯಕರನಿಗಾಗಿ ಕಾಯುವ ಕಾಮಿನಿಯಾಗಿ, ಮನುಷ್ಯನ ಸಿಟ್ಟು ಸೆಡವುಗಳೆಲ್ಲ ಆಕೆಯಲ್ಲೂ ಇದೆ. ಜೊತೆಗೆ ಸಹನೆಯ ಮೂರ್ತಿಯೂ ಹೌದೆಂದು ಚಿತ್ರಿಸಿದ್ದಾರೆ.

ಎಸ್. ವಿ. ಪ್ರಭಾವತಿ ತಮ್ಮ 'ಭೂಮಿ' ಕೃತಿಯಲ್ಲಿ ಭೂಮಿಯನ್ನು ಪ್ರಿಯತಮೆಯಾಗಿ ಭಾವಿಸಿರುವಂತೆ, ಶುಭಾವತಿಯು ಕಾವೇರಿಯನ್ನು ಪ್ರಿಯತಮನಿಗಾಗಿ ಹುಡುಕುವ ಹರೆಯದ ಹೆಣ್ಣಾಗಿ ಪರಿಭಾವಿಸಿದ್ದಾರೆ. ನದಿಯನ್ನು ಹೆಣ್ಣಿಗೆ ಹೋಲಿಸುವುದು ನಮ್ಮ ಹಿಂದಿನಿಂದಲೂ ರೂಢಿಗತವಾದ ಶೈಲಿ. ಆದರೆ ಆಕೆಯಲ್ಲಿ ಚಲುವಿದ್ದರೂ, ಆಕೆಯನ್ನು ಗೌರವ ಭಾವದಿಂದ ದೇವತೆಯಾಗಿ ನೋಡುವುದೇ ನಮ್ಮ ಪರಿಪಾಠ. ಆದರೆ ಈ ಇಬ್ಬರು ಕವಯತ್ರಿಯರು ಈ ಪರಿಪಾಠ ಕೈಬಿಟ್ಟು ಹೊಸ ದೃಷ್ಟಿಕೋನದಿಂದ ನೋಡಿರುವುದೇ ಇಲ್ಲಿನ ವಿಶೇಷ.

ಕಾವೇರಿ ಝುಳ ಝುಳನೆ ಹರಿಯುತಿರುವಳು
ಮತ್ತೇರಿ ಪ್ರಿಯತಮನ ಹುಡುಕುತಿರುವಳು
ಯೌವನ ತುಂಬಿದ ಹೆಣ್ಣಿನ ಹಾಗೆ
ಹೂವಿಗಾಗಿ ಕಾತರಿಸೊ ದುಂಬಿಯ ಹಾಗೆ
. . . .
ಸಾಗರವು ಅಂದಿತು ನಿನಗೆ ನಾ ಆಬಾರಿ
ಸಾಗರವು ಸಂತಸದಿ ಕಾವೇರಿಯ ಅಪ್ಪಿತು
ಇವರ ಮಿಲವನ್ನು ಜಗವೆಲ್ಲ ಒಪ್ಪಿತು [೪೦]

'ಕಾವೇರಿ' ಶಬ್ದವೇ ಯೌವ್ವನದೊಳಗಿನ ಕಾವು ಏರುವ ಸ್ಥಿತಿಯನ್ನು ಧ್ವನಿಸುತ್ತದೆ. ಯೌವ್ವನದ ಭರಾಟೆಯಲ್ಲಿ ಸಹಜವಾಗಿ ಅತ್ತಿತ್ತ ಹರಿಯುವ ಕಣ್ಣೋಟದ ಬಗ್ಗೆ ಮತ್ತು ಅಂತರಂಗದ ಬಯಕೆಗಳನ್ನು ಒಗ್ಗೂಡಿಸಿ ತಿಳಿಸುತ್ತದೆ. ನದಿಯನ್ನು ಹೆಣ್ಣಾಗಿ, ಸಮುದ್ರವನ್ನು ಪ್ರಿಯಕರನಾಗಿ ಕಾಣುವ ಸಂಪ್ರದಾಯಕ್ಕೆ ತಕ್ಕಂತೆ ಇಲ್ಲಿ ಕವಯತ್ರಿ ಪರಿಭಾವಿಸಿದ್ದಾರೆ.

ಕಾವ್ಯ ಕಟ್ಟುವ ಕ್ರಿಯೆ ಕೇವಲ ಉಳ್ಳವರ ಸ್ವತ್ತಲ್ಲ. ರಾಜ ಸೇವಾಸಕ್ತರಿಗೆ ಮಾತ್ರ ಸೀಮಿತ ಕ್ರಿಯೆಯಲ್ಲ. ಕೂಲಿ ಕಾರ್ಮಿಕನೂ, ಕಡು ಬಡವನೂ, ನಿರ್ಗತಿಕನೂ ಕೂಡ

ಇಂದು ಕಾವ್ಯ ಕಟ್ಟುವ ಕ್ರಿಯೆಯಲ್ಲಿ ತೊಡಗಿದ್ದಾನೆ. ತನ್ನ ಜೀವನದ ಸ್ಥಿತಿಗತಿಗಳನ್ನು, ಬದುಕಿನ ತೀವ್ರತೆಯನ್ನು, ಅಗತ್ಯತೆಗಳನ್ನು, ತುರ್ತುಗಳನ್ನು ಕುರಿತು ಕಾವ್ಯ ಕಟ್ಟಬಹುದು. ಆರಾಧನೆಯಾಗಿ ಬೆಳೆದು ಬಂದಿದ್ದ ಕಾವ್ಯ ಕೃಷಿ ಇಂದು ತನ್ನ ಪರಂಪರೆಯ ಶಿಸ್ತು ಮೀರಿ ಬೆಳೆಯುತ್ತಿದೆ. ಶಿಲ್ಪ, ಬಂಧ, ಶೈಲಿ, ಛಂದಸ್ಸು – ಇತ್ಯಾದಿಗಳಿಂದ ಬಿಡಿಸಿಕೊಂಡು ವಿಚಾರಕ್ಕೆ ಆದ್ಯತೆ ಕೊಟ್ಟು ಸಾಂಸ್ಕೃತಿಕ ಒಳ ನೋಟಗಳನ್ನು ಬಿಂಬಿಸುವತ್ತ ಸಾಗಿದೆ. ಹೀಗಾಗಿ ಒಂದು ಕಾಲಕ್ಕೆ ಸಾಹಿತ್ಯ, ಕಲೆ, ಸಂಸ್ಕೃತಿಯ ಶಿಷ್ಟಾಚಾರಗಳಿಂದ ವಂಚಿತರಾಗಿದ್ದ ಸ್ತ್ರೀಯರು, ಅಲ್ಪಸಂಖ್ಯಾತರು, ದಲಿತರು, ಬುಡಕಟ್ಟು ಜನಾಂಗದವರೂ ಕೂಡ ಮೈ ಕೊಡವಿ ಎದ್ದು ನಿಂತು ತಮ್ಮ ಸಂಸ್ಕೃತಿಯ ಪುನರ್‌ಮೌಲೀಕರಣಕ್ಕೆ ತೊಡಗಿದ್ದಾರೆ. ಅದನ್ನು ತಮ್ಮ ವೈಚಾರಿಕ ಬರಹಗಳಿಂದ ಅಭಿವ್ಯಕ್ತಿ ಪಡಿಸಿರುವುದನ್ನು ನೋಡಿದಾಗ ಸ್ತ್ರೀಸಂವೇದನೆ ಕನ್ನಡ ಕಾವ್ಯ ಲೋಕದಲ್ಲಿ ಬೇರು ಬಿಟ್ಟಿರುವುದು ಕಂಡುಬರುತ್ತದೆ.

ಕವಿಗಳ ವೈವಿಧ್ಯತೆಯಂತೆ ಕವಯತ್ರಿಯರಲ್ಲೂ ವೈವಿಧ್ಯತೆ ಇದೆ, ಸ್ವೋಪಜ್ಞತೆ ಇದೆ. ಸ್ವಾಭಿಮಾನದ ಕೆಚ್ಚಿದೆ. ಇವರೂ ಕೂಡ ತಾಯಿಯನ್ನು ಬೇರೆ ಬೇರೆ ರೂಪದಲ್ಲಿ ಕಂಡಿದ್ದಾರೆ. ಪರಂಪರೆಯ ಪ್ರಜ್ಞೆಯೊಂದಿಗೆ ಆಧುನಿಕ ಸಂವೇದನೆಗಳು ಇಲ್ಲಿ ಮೇಳಯಿಸಿರುವುದು ಕಂಡುಬರುತ್ತದೆ. ತಾಯಿಯನ್ನು, ದೇಶವನ್ನು, ನಾಡನ್ನು, ಭಾಷೆಯನ್ನು ಕವಿಗಳು ಭಾವಿಸಿದಷ್ಟು ಪ್ರಮಾಣದಲ್ಲಿ ಕವಯತ್ರಿಯರೂ ಪರಿಭಾವಿಸದಿದ್ದರೂ ಕೂಡ ಕಡೆಗಣಿಸುವ ಸ್ಥಿತಿಯಲ್ಲಿ ಇಲ್ಲ. ಹಳೆ ತಲೆಮಾರಿನವರಲ್ಲಿ, ಮೇಲುವರ್ಗದವರಲ್ಲಿ ತಾಯಿಯನ್ನು ಆರಾಧ್ಯ ದೇವತೆಯಾಗಿ ಕಂಡಿರುವ ಪರಿಪಾಠ ಮಹಿಳೆಯರಲ್ಲೂ ಉಂಟು. ಆದರೆ ದಲಿತ ಬಂಡಾಯ ವರ್ಗದವರಿಂದ ಬಂದಿರುವ, ಸ್ತ್ರೀ ಸಂವೇದನೆಯ ಬಗ್ಗೆ ಕಾಳಜಿಯುಳ್ಳ ಬರಹಗಾರ್ತಿಯರಲ್ಲಿ ಸಂಪ್ರದಾಯದ ಜಾಡು ಬದಲಿಸಿರುವುದು ಕಂಡು ಬರುತ್ತದೆ. ಹೆಣ್ಣನ್ನು ಪುರುಷ ವರ್ಗ ಎಷ್ಟೊಂದು ರೀತಿಯಲ್ಲಿ ಶೋಷಿಸಿದೆ, ಅನುಭವಿಸಿದೆ, ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡಿದೆ ಅದನ್ನು ಪ್ರಶ್ನಿಸುವ, ಧಿಕ್ಕರಿಸುವ, ಪ್ರತೀಕಾರಕ್ಕೆ ಕಾದಿರುವ ಸ್ಥಿತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ.

"ಇದೇ ಸಂದರ್ಭದಲ್ಲಿ ನಮ್ಮ ಮಹಿಳಾ ಸಾಹಿತಿಗಳಲ್ಲಿರುವ ಕೆಲವು ಭ್ರಮೆಗಳನ್ನು ಗಮನಿಸಬೇಕು. ನಮ್ಮ ಹೆಚ್ಚಿನ ಬರಹಗಾರ್ತಿಯರ ಸಾಹಿತ್ಯ ಸೃಷ್ಟಿಯ ಹಿಂದೆ ಯಾವುದೇ ರೀತಿಯ ಆಂತರಿಕ ಒತ್ತಡವಾಗಲೀ, ಅನುಭವಗಳ ಸಂಕೀರ್ಣತೆಯಾಗಲೀ ಇರುವುದಿಲ್ಲ. ಪ್ರಜ್ಞೆಗಳು ತೀವ್ರವಾದ ಸಂವೇದನೆಗಳಿಗೆ ಒಳಗಾಗುವುದಕ್ಕೂ ಅವರ ಬರವಣಿಗೆಗಳಿಗೂ ಅರ್ಥಾರ್ಥ ಸಂಬಂಧವೂ ಇರುವುದಿಲ್ಲ. ಆದುದರಿಂದಲೇ ನಮ್ಮ ಬಹುಪಾಲು ಲೇಖಕಿಯರು, 'ಹರಿಜನ ಮಹಿಳೆ, ಭಿಕ್ಷುಕಿ, ಪತಿತೆ, ಶೋಷಿತೆ ಮುಂತಾದವರ ಬಗೆಗೆ ತಾವು ಬರೆದಿದ್ದೇವೆ. ಮಹಿಳಾ ಸಂವೇದನೆಗಳಿಗೆ ಸ್ಪಂದಿಸಿದ್ದೇವೆ' ಎನ್ನುವ ಭ್ರಮೆಯನ್ನು ಬೆಳೆಸಿಕೊಳ್ಳುತ್ತಾರೆ. ಈ ಮಾದರಿಯ ಬುದ್ಧಿ ಪೂರ್ವಕವಾದ ರಚನೆಗಳು ಕೇವಲ ಹೊರ ವಿವರಗಳನ್ನು ಕೆಲವೊಮ್ಮೆ ಅದೂ ಜಾಳು ಮತ್ತು ಕೃತಕವಾಗಿ ಕಟ್ಟಿಕೊಡುತ್ತವೆಯೇ ಹೊರತಾಗಿ ಭಾವಸ್ಪಂದಿಗಳಾಗುವುದಿಲ್ಲ. ಆ ಮಹಿಳೆಯರ ಸಂಘರ್ಷದ ಸ್ವರೂಪವನ್ನು ಅರ್ಥೈಸಿಕೊಳ್ಳುವುದಿಲ್ಲ. ಈ ಮಿತಿಯನ್ನು ಒಪ್ಪಿಕೊಂಡೇ ಈ ನೆಲೆಯ ಅಧ್ಯಯನವು ನಡೆಯಬೇಕಾಗುತ್ತದೆ."[೪೧] ಹಾಗಾಗಿ ಮಹಿಳೆಯರು ಭ್ರಮೆ ಮತ್ತು ಭಯಗಳಿಂದ

ಮುಕ್ತರಾಗಿ ಸ್ವಾಭಿಮಾನದಿಂದ ಬರೆಯತೊಡಗಿದಾಗ ಗಮನ ಸೆಳೆಯುವ ಬರಹಗಳು ಮೂಡಿಬರಲು ಸಾಧ್ಯ.

ಹಿಂದಿನಂತೆ ಹೆಣ್ಣು ಪುರುಷರ ಆಜ್ಞಾನುವರ್ತಿಯಾಗಿಯೇ ಬಾಳಬೇಕು, ಆತನಿಗೆ ಅಧೀನಳಾಗಿರಬೇಕು, ನಿಷ್ಠೆ ಭಕ್ತಿ ತೋರಬೇಕೆಂಬುದನ್ನು ಕೈ ಬಿಟ್ಟು, ಪುರುಷನಿಗೆ ಸರಿಸಾಟಿಯಾಗಿ ಬಾಳಬೇಕು. ಸ್ವಾಭಿಮಾನದ ಹೆಣ್ಣಾಗಬೇಕು. ಗಂಡಿನ ಸ್ವತಂತ್ರ ಆಲೋಚನೆಗಳಂತೆ ಹೆಣ್ಣಿನ ಸ್ವತಂತ್ರ ಆಲೋಚನೆಗಳೂ ಇವೆ ಎಂಬುದನ್ನು ತೋರಿಸಬೇಕೆಂಬ ಆತ್ಮವಿಶ್ವಾಸದ ಮಾತುಗಳು ಕಲಿತ ಹೆಣ್ಣಿನಲ್ಲಿ ಜಾಗೃತಗೊಂಡಿವೆ. ಅದರಲ್ಲೂ ಶೋಷಿತ ವರ್ಗದಿಂದ ಬಂದವರಲ್ಲಿ ಸಂಪ್ರದಾಯದ ಉಲ್ಲಂಘನೆ ಹಾಗೂ ಹೊಸ ಪರಂಪರೆಗೆ ತವಕ ಕಂಡುಬರುತ್ತದೆ. ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ತನ್ನತನದ ಹಿರಿಮೆಗೆ ಒತ್ತಾಸೆಯಾಗಿ ನಿಲ್ಲಬೇಕೆಂಬ ಉತ್ಕಟತೆ ಇದೆ. ಪುರಾಣೇತಿಹಾಸಗಳಲ್ಲಿ ಕಂಡುಬರುವ ಯಜಮಾನ ಸಂಸ್ಕೃತಿಯನ್ನು, ಪುರುಷ ಪ್ರಧಾನ ವ್ಯವಸ್ಥೆಯನ್ನು, ಪರಂಪರಾಗತ ಧೋರಣೆಯನ್ನು ಆಧುನಿಕ ದೃಷ್ಟಿಕೋನದಿಂದ ನೋಡುವ ಹೊಸ ಚಿಂತನೆ ತೋರಿದ್ದಾರೆ. ಭಾಷೆಯ ಬಳಕೆಯಲ್ಲಿ, ಶೈಲಿಯಲ್ಲಿ, ತಂತ್ರಗಾರಿಕೆಯಲ್ಲಿ ತಮ್ಮತನವನ್ನು ಬಿಂಬಿಸಿರುವುದುಂಟು. ಸ್ತ್ರೀ ಸಂವೇದನೆಯನ್ನು ಜಾಗತಿಕ ಮಟ್ಟದ ಚಿಂತನೆಯಲ್ಲಿ ಕಂಡಿರುವ ಕನ್ನಡದ ಕವಯತ್ರಿಯರೂ ಕೂಡ ಅಲ್ಲಿನ ಧ್ಯೇಯ ಧೋರಣೆಯ ಹಿನ್ನೆಲೆಯಲ್ಲಿ ಅಲ್ಲಿನ ಆಶಯಗಳನ್ನು ತಮ್ಮ ಆಶಯಗಳನ್ನಾಗಿ ಸ್ವೀಕರಿಸಿ ಬರವಣಿಗೆಯಲ್ಲಿ ಸ್ಪಂದಿಸಿರುವುದು ಕಂಡುಬರುತ್ತದೆ.

ಇಲ್ಲಿನ ಬದುಕನ್ನು ಗ್ರಹಿಸಿಕೊಂಡು, ಇಲ್ಲಿನ ವಾತಾವರಣವನ್ನು ಬಿಂಬಿಸುವಲ್ಲಿ ಸಾಮರ್ಥ್ಯ ತೋರಿದ್ದಾರೆ. ಪುರುಷರನ್ನು ಅನುಸರಿಸುವ, ಹಿಂದಿನ ಆದರ್ಶಗಳನ್ನು ಪರಿಪಾಲಿಸುವ ಧೋರಣೆಯನ್ನು ಕೈಬಿಟ್ಟಿದ್ದಾರೆ. ಪುರುಷರಿಗಿರುವ ಸ್ವಾಭಿಮಾನವು ತಮ್ಮಲ್ಲೂ ಉಂಟು. ಹೊಸ ಪರಂಪರೆಯ ಜನಕರೂ ಆಗಬಲ್ಲೆವೆಂಬ ಸವಾಲಿನ ಧೋರಣೆಯನ್ನು ತಮ್ಮ ಕವಿತೆಗಳಲ್ಲಿ ಕವಯತ್ರಿಯರು ತೋರಿಸಿಕೊಟ್ಟಿದ್ದಾರೆ.

ಕೊನೆ ಟಿಪ್ಪಣಿಗಳು:

೧. ವಿರಚನೆ, ಶ್ರೀಮತಿ ಗಾಯತ್ರಿ ನಾವಡ, ಪುಟ: ೨೭
೨. ಮಹಿಳೆ ಮತ್ತು ಕನ್ನಡ ಸಾಹಿತ್ಯ, ಬರಹಗಾರ್ತಿಯರ ಇತಿ – ಮಿತಿಗಳು. ಚಿ.ನ.ಮಂಗಳ. ಮಹಿಳೆ ಮತ್ತು ಕನ್ನಡ ಸಾಹಿತ್ಯ, ಸಂ.ಡಾ.ಜಿ.ಎಸ್.ಶಿವರುದ್ರಪ್ಪ, ಪುಟ: ೧೯.
೩. ಮಹಿಳಾ ಸಂವೇದನೆ, ಡಾ.ಮಣಿಮಾಲಿನಿ.ವಿ.ಕೆ., ೧೯೯೮ ಸಾಹಿತ್ಯ ವಿಮರ್ಶೆ. ಸಂ.ಡಾ.ಜಿ.ಎಂ.ಹೆಗಡೆ, ಪುಟ: ೧೬೨.
೪. ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಸಂ.ಬರಗೂರು ರಾಮಚಂದ್ರಪ್ಪ, ಪುಟ: ೫೮ ಪ್ರಸ್ತಾವನೆ.
೫. ಆಧುನಿಕ ಮಹಿಳಾ ಕಾವ್ಯ, ಹೇಮಾ ಪಟ್ಟಣ ಶೆಟ್ಟಿ, ಪುಟ: ೪೫
೬. ಚಹರೆ, ಡಾ.ಎಚ್.ಎಸ್.ಶ್ರೀಮತಿ, ಪುಟ: ೮೦.

೭. ವಿರಚನೆ, ಶ್ರೀಮತಿ ಗಾಯತ್ರಿ ನಾವಡ, ಪುಟ: ೨೮.
೮. ರೊಟ್ಟಿ ಮತ್ತು ಹುಡುಗಿ, ಡಾ.ಮಲ್ಲಿಕಾ ಘಂಟಿ, ಪುಟ:೩೨
೯. ಚಹರೆ, ಡಾ.ಎಚ್.ಎಸ್.ಶ್ರೀಮತಿ, ಪುಟ: ೮೨.
೧೦. ವಿರಚನೆ, ಶ್ರೀಮತಿ ಗಾಯತ್ರಿ ನಾವಡ, ಪುಟ: ೨೮.
೧೧. ಸಾಹಿತ್ಯ ಸಿದ್ಧಂತ ಮತ್ತು ಹೋರಾಟ, ಡಾ.ಆರ್ಕೆ, ಪುಟ: ೪೧.
೧೨. ಒಂದು ಘಳಿಗೆ, ಶೈಲಜ ಉಡಚಣ, ಪುಟ:೧೮
೧೩. ತೊಗಲು ಬೊಂಬೆಯ ಆತ್ಮಕಥೆ, ಸ.ಉಷಾ, ಪುಟ: ೧೩.
೧೪. ಸಾಹಿತ್ಯ ಸಿದ್ಧಾಂತ ಮತ್ತು ಹೋರಾಟ, ಆರ್ಕೆ, ಪುಟ: ೨೦.
೧೫. ಆಧುನಿಕ ಮಹಿಳಾ ಕಾವ್ಯ, ಆರ್ಕೆ, ಪುಟ: ೧೦೨.
೧೬. ತೊಗಲು ಬೊಂಬೆಯ ಆತ್ಮಕಥೆ, ಸ.ಉಷಾ, ಪುಟ: ೨೩
೧೭. ದಲಿತ ಬಂಡಾಯ ಕಾವ್ಯ ಮತ್ತು ವಿಚಾರವಾದಗಳು, ಡಾ.ಪ್ರಹ್ಲಾದ ಅಗಸನ ಕಟ್ಟೆ, ಪುಟ: ೪೧೦.
೧೮. ಕವಿತೆ ೧೯೯೪, ಡಾ.ಮಲ್ಲಿಕಾ ಘಂಟಿ, ಸಂ.ಮೃತ್ಯುಂಜಯ, ಹೊರಕೇರಿ, ಪುಟ: ೧೩.
೧೯. ಮಲ್ಲಿಕಾ ಘಂಟಿ, ನಮ್ಮದಲ್ಲದ ಧ್ವಜವಿದು, ಉಲ್ಲೇಖ, ದಲಿತ ಬಂಡಾಯ ಕಾವ್ಯ ಮತ್ತು ವಿಚಾರ ವಾದಗಳು, ಡಾ.ಪ್ರಹ್ಲಾದ ಅಗಸನ ಕಟ್ಟೆ, ಪುಟ: ೪೩೯.
೨೦. ಅಮ್ಮನ ಗುಡ್ಡ, ಚ.ಸರ್ವಮಂಗಳ, ಪುಟ: ೧೩.
೨೧. ಆಧುನಿಕ ಮಹಿಳಾ ಕಾವ್ಯ, ಹೇಮಾ ಪಟ್ಟಣ ಶೆಟ್ಟಿ, ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ವಿವಿಧ ಲೇಖಕರು, ಪುಟ: ೧೦೨.
೨೨. ಜಾಣೆ ಮತ್ತು ಕವಿತೆಗಳು, ಎಂ.ಆರ್.ಕಮಲ, ಪುಟ:
೨೩. ಭೂಮಿ, ಡಾ.ಎಸ್.ವಿ.ಪ್ರಭಾವತಿ, ಪುಟ: ೧.
೨೪. ಮೇಲಿನಂತೆ, ಪುಟ: ೮.
೨೫. ಮೇಲಿನಂತೆ, ಪುಟ: ೧೬.
೨೬. ಮಂಥನ, ಡಾ.ಕೆ.ರತ್ನಮ್ಮ, ಪುಟ: ೫೨.
೨೭. ಮೇಲಿನಂತೆ, ಪುಟ: ೫೩.
೨೮. ಮೇಲಿನಂತೆ, ಪುಟ: ೫೪.
೨೯. ಹಾಡೇನ ಪಾಡೇನ, ಡಾ.ವಿ.ಸುಬ್ಬರಾಜ್, ಪುಟ: ೭೧.
೩೦. ಮೇಲಿನಂತೆ, ಪುಟ: ಕಮಲ ಹಂಪನ ರವರ ಮುನ್ನುಡಿ.
೩೧. ಮೇಲಿನಂತೆ, ಪುಟ: ೫೩.
೩೨. ಇಹದ ಸ್ವರ, ಲಲಿತ ಸಿದ್ಧಬಸವಯ್ಯ, ಪುಟ: ೧೫.
೩೩. ಪಾಂಚಾಲಿ, ಶ್ರೀಮತಿ ಕೆ.ಶರೀಫ, ಪುಟ: ೧.
೩೪. ಸ್ನೇಹ ಗೀತ, ಶುಭಾವತಿ, ಪುಟ: ೧೧.
೩೫. ಚಿಂತನದ ಚತುರ್ಮುಖ, ಪ್ರೊ.ಎಂ.ಎಲ್.ನರಸಿಂಹ ಮೂರ್ತಿ, ಪುಟ: ೧೫೨.
೩೬. ಸ್ನೇಹಗೀತ, ಶುಭಾವತಿ, ಪುಟ: ೧.
೩೭. ಮೇಲಿನಂತೆ, ಪುಟ: ಮುನ್ನುಡಿ, ಪಂಚಮಿ.
೩೮. ಭೂಮಿ ಕವಿತೆಗಳು, ಡಾ.ಎಸ್.ವಿ.ಪ್ರಭಾವತಿ, ಪುಟ: ೬
೩೯. ಮೇಲಿನಂತೆ, ಪುಟ: ೧೭
೪೦. ಸ್ನೇಹಗೀತ, ಶುಭಾವತಿ, ಪುಟ: ೨.
೪೧. ಮಹಿಳ ಸಂವೇದನೆ, ಡಾ.ಮಣಿಮಾಲಿನಿ.ವಿ.ಕೆ., ೧೯೯೮, ಸಾಹಿತ್ಯ ವಿಮರ್ಶೆ, ಸಂ.ಡಾ.ಜಿ.ಎಂ.ಹೆಗಡೆ, ಪುಟ:೧೬೩.

ಅಧ್ಯಾಯ - ೭

ಸಂಕೀರ್ಣ ನೆಲೆಯಲ್ಲಿ ಮಾತೃತ್ವ

ಪುರಾಣಗಳಲ್ಲಿಯೂ, ವೇದೋಪನಿಷತ್ತುಗಳಲ್ಲಿಯೂ ಪುರುಷ ಪ್ರಾಧಾನ್ಯನಾದರೂ, ಅವನ ಬದುಕಿನಲ್ಲಿ ಸ್ತ್ರೀ ಅವಿಭಾಜ್ಯ, ಅನಿವಾರ್ಯ ಹಾಗೂ ಪೂಜನೀಯಳಾಗಿ ನಿಲ್ಲುವಳು. ಭಗವತಿ, ದಾಯಿ, ಮಾತಾ ಎಂಬುದಾಗಿ ವರ್ಣಿಸಿದೆ. ಆದಿಮುನಿಗಳಿಂದ ಹಿಡಿದು ಪ್ರಾಜ್ಞರೆಲ್ಲರೂ ತಾಯಿಯನ್ನು ಅಂಬಿಕೆ, ಮೂಕಾಂಬಿಕೆ, ತಾಯಿ ಎಂಬ ಉದ್ಗಾರದೊಂದಿಗೆ ಪೂಜಿಸುತ್ತಿದ್ದರು. ಇಂದಿಗೂ ನಗರ ಕಾಯುವ, ಗ್ರಾಮ ಕಾಯುವ, ಗ್ರಾಮದೇವತೆ, ರಾಜ್ಯದೇವತೆ, ರಾಷ್ಟ್ರದೇವತೆ, ನಿಸರ್ಗದೇವತೆ ತಾಯಿ ಸ್ವರೂಪಿಣಿಯೇ. ಅವಳು ಗಾಯತ್ರಿ, ಸಾವಿತ್ರಿ, ಸರಸ್ವತಿ, ಚಾಮುಂಡಿ, ಭಾರತಮಾತೆ ಎಂಬ ಹೆಸರಿನ ಶಕ್ತಿಮೂರ್ತಿ.

ಜಗತ್ತನ್ನು ಮಾತೆ ಎಂದು, ದೇಶವನ್ನು ಜನನಿಯೆಂದು, ನಿಸರ್ಗವನ್ನು ತಾಯಿಯೆಂದು ಭಾವಿಸಿ ಆರಾಧಿಸುವ ಸಂಸ್ಕೃತಿ ನಮ್ಮಲ್ಲಿದೆ. ಜೈವಿಕವಾಗಿ ಜನ್ಮ ನೀಡುವ ಮಾತೆಯನ್ನು ಗೌರವಿಸುವಷ್ಟೇ ಪ್ರಮಾಣದಲ್ಲಿ ದೇಶ, ಭಾಷೆ, ವಿಶ್ವ, ನಿಸರ್ಗವನ್ನು ಗೌರವಿಸಿದ್ದಾರೆ. ಜನ್ಮ ನೀಡುವ ತಾಯಿಯನ್ನು ಸೃಷ್ಟಿಕರ್ತಳೆಂದು, ಪೊರೆವಳೆಂದು ಭಾವಿಸಿ ದೇವರ ಪ್ರತಿ ರೂಪದಲ್ಲಿ ದರ್ಶಿಸಿರುವುದನ್ನು ಕಾಣುತ್ತೇವೆ. ಬದುಕಿನ ಒಳಿತು – ಕೆಡುಕುಗಳಿಗೆ ದೇವಿಯೇ ಕಾರಣಳೆಂದು ನಮ್ಮ ಜನಪದರು ನಾನಾ ಹೆಸರಿನಿಂದ ನಾನಾ ರೂಪದಲ್ಲಿ ಆರಾಧಿಸುವುದುಂಟು. ಅಂತಹ ಮಾತೆಯನ್ನು 'ಅಮ್ಮ' ಎಂದು ಕರೆಯುವುದರೊಂದಿಗೆ ಮಾರಮ್ಮ, ದ್ಯಾವಮ್ಮ, ದುರ್ಗಮ್ಮ, ಕಾಳಿ, ಶಕ್ತಿ, ಮುಂತಾದ ಹೆಸರಿನಲ್ಲಿ ಕರೆದು ಪೂಜಿಸುವುದುಂಟು.

ಭಾರತೀಯರು ಲೌಕಿಕ – ಅಲೌಕಿಕವಾಗಿ, ಮೂರ್ತ – ಅಮೂರ್ತವಾಗಿ ತಾಯಿಯನ್ನು ಕಂಡಿದ್ದಾರೆ. ಸಂಕೀರ್ಣವಾದ ನೆಲೆಯಲ್ಲಿ, ಸಂಕೀರ್ಣವಾದ ಅರ್ಥದಲ್ಲಿ, ಭಾವನಾತ್ಮಕ ನೆಲೆಯಲ್ಲಿ ತಾಯಿ ಗೋಚರಿಸಿರುವುದನ್ನು ನಿಘಂಟುಕಾರರೂ ಕೂಡ ಕಂಡಿದ್ದಾರೆ. ಈ ಬಗ್ಗೆ ಕಿಟ್ಟೆಲ್‌ರವರು ತಮ್ಮ 'ಕನ್ನಡ – ಇಂಗ್ಲೀಷ್ ಡಿಕ್ಷನರಿ'ಯಲ್ಲಿ ಸೋದಾಹರಣ ಉದಾಹರಣೆ ನೀಡಿದ್ದಾರೆ.

ಕವಿ ಕಲಾವಿದರು ಭಾವ ಜೀವಿಗಳು, ಕಲ್ಪನಾ ವಿಲಾಸಿಗಳು. ಅವರ ಕಲ್ಪನೆ ಭಾವ ತೀವ್ರತೆಗೆ ಮನೋಲ್ಲಾಸಕ್ಕೆ ಪೂರಕವಾಗಿರುತ್ತದೆ. ಕವಿಯೂ ಕೂಡ ಸೃಜನಶೀಲ ಕ್ರಿಯೆಯಲ್ಲಿ ಮಗ್ನನಾಗಿರುವ ಸಂದರ್ಭದಲ್ಲಿ ತನ್ನ ತನಕ್ಕೆ ವಿರಾಮ ನೀಡಿ, ಕಲ್ಪನಾ ಲೋಕಕ್ಕೆ ಜಿಗಿದು ತನ್ನ ಮಾಧ್ಯಮದ ಮೂಲಕ ಅದನ್ನು ಸೆರೆಹಿಡಿಯಲು ಯತ್ನಿಸುತ್ತಾನೆ.

ನಿಸರ್ಗದಲ್ಲಿ ಚೈತನ್ಯ ಕಾಣುವ, ಜಡದಲ್ಲಿ ಜೀವತ್ವ ದರ್ಶಿಸುವ ಶಕ್ತಿ ಕವಿಗಿರುತ್ತದೆ. ತನ್ನ ಸುತ್ತ ಮುತ್ತಲಿನ ಘಟನೆಗಳನ್ನು ಕುತೂಹಲದಿಂದ ಗಮನಿಸುತ್ತಿರುತ್ತಾನೆ. ತನ್ನ ಬದುಕಿನೊಂದಿಗೆ ಬೆಸುಗೆ ಹಾಕಿಕೊಂಡಿರುವ ಸಂಗತಿಗಳಿಗೆ

ವಿಶಿಷ್ಟ ಅರ್ಥ ಕೊಡಲು, ರೂಪ ಕೊಡಲು ಅದನ್ನು ಬರಹರೂಪದಲ್ಲಿ ಶಾಶ್ವಗೊಳಿಸಲು ನಿರಂತರ ಯತ್ನಿಸುತ್ತಾನೆ. ದಿನ ನಿತ್ಯದ ಸೂರ್ಯೋದಯ ಚಂದ್ರೋದಯ ಹಗಲು ರಾತ್ರಿಗಳ ಬಗ್ಗೆ ಸೂಕ್ಷ್ಮ ಪ್ರಜ್ಞೆಯಿಂದ ಪ್ರತಿಕ್ರಿಯಿಸುತ್ತಾನೆ. ನಿಸರ್ಗದಲ್ಲಾಗುವ ಬದಲಾವಣೆಗೆ ಪುಳಕಗೊಳ್ಳುತ್ತಾನೆ. ತನ್ನ ಒಳತೋಟಗೆ ಕಾರಣವಾದ ಎಲ್ಲ ಅಂಶಗಳನ್ನು ಆತ ತಾದಾತ್ಮ್ಯ ದೃಷ್ಟಿಯಿಂದ ಗ್ರಹಿಸುತ್ತಾನೆ. ಇದು ಲೋಕವ್ಯವಹಾರಕ್ಕಿಂತ ಭಿನ್ನ ಹಾಗೂ ವಿಶಿಷ್ಟವಾದದ್ದು. ಇದು ಕವಿ ಕಲಾವಿದರಿಗೆ ಮಾತ್ರ ಸಾಧ್ಯವಾಗುವಂತಹುದು.

"ಕಲೆಯಲ್ಲಿ ಸೃಷ್ಟಿ ಮತ್ತು ಸೃಷ್ಟಿಕರ್ತನ ಸರಸ ಸಂಬಂಧವಿದೆ. ಆತನ ಚೆಲುವಿನ ನಾನಾ ರೂಪಗಳು ಅಭಿವ್ಯಕ್ತವಾಗಿರುತ್ತವೆ. ಕಲಾವಿದನು ಯುಗಚೇತನೆಯ ದೃಷ್ಟಾ ಮತ್ತು ಸೃಷ್ಟಾ ಆಗಿರುತ್ತಾನೆ. ಆತನಿಗೆ ಯಾವ ಬಂಧಗಳೂ ಇಲ್ಲ. ತನ್ನ ಅಭಿವ್ಯಕ್ತಿ ಸಾಧನೆಗೆಂದು ಸ್ಥೂಲ ಮತ್ತು ಭೌತಿಕ ವಸ್ತುಗಳನ್ನು 'ಒಮ್ಮೊಮ್ಮೆ ಆಯ್ದುಕೊಂಡರೂ ಆತನ ಅಂತಿಮ ಗುರಿ ಮಹತ್ತರವಾಗಿರುತ್ತದೆ'. ಐಂದ್ರಯಿಕ ಸುಖದಿಂದ ಆತ್ಮದ ಮುಕ್ತಾವಸ್ಥೆಯವರೆಗೆ ಆತನ ಸಾಧನೆ ಸಾಗಿರುತ್ತದೆ. ಅಂದರೆ, ಕಲೆ ಅಪರಿಮೇಯ ಅನಂತ" ! [೧]

ಕೃತಜ್ಞತೆಯ ಗುಣ ಮನುಷ್ಯ ಸಹಜವಾದದ್ದು. ಯಾವ ರೂಪದಲ್ಲಾಗಲೀ, ಯಾರಿಂದಲಾಗಲೀ, ಎಷ್ಟು ಪ್ರಮಾಣದಲ್ಲಾಗಲೀ ತನ್ನ ಬದುಕಿನ ವಿಕಾಸಕ್ಕೆ, ಚಿಂತನೆಯ ಜೀವಂತಿಕೆಗೆ, ಕ್ರಿಯಾಶೀಲ ಚಟುವಟಿಕೆಗೆ ನೆರವಿತ್ತವರನ್ನು ಪ್ರೀತಿಸುವ, ಗೌರವಿಸುವ ಹಾಗೂ ಅದಕ್ಕೆ ಕೃತಜ್ಞತೆಯಿಂದ ತಲೆಬಾಗುವ ಗುಣ ಮನುಷ್ಯ ಸಹಜವಾದದ್ದು. ಉಪಕೃತಗೊಂಡ ಸಾಮಾನ್ಯ ಜನ ಕೃತಜ್ಞತೆಗೆ ಹಲವಾರು ಮಾರ್ಗ ಹುಡುಕಿದರೆ; ಕವಿಯಾದವನು ತನ್ನದೇ ಆದ ಶಿಷ್ಟ ಮಾರ್ಗವೊಂದರಿಂದ ಶಾಶ್ವತತೆಯ ರೂಪ ಕೊಡುವುದರೊಂದಿಗೆ ಕೃತಜ್ಞತೆಗೆ ಪಾತ್ರನಾಗುತ್ತಾನೆ. ಹಣ, ವಸ್ತ್ರ, ಒಡವೆಗಳನ್ನು ಕೊಡುವುದರ ಮೂಲಕ ಶ್ರೀಸಾಮಾನ್ಯರು ಕೃತಜ್ಞತೆಯ ದಾರಿ ಕಂಡುಕೊಂಡರೆ; ಕವಿಯಾದವನು ತನ್ನ ಕಾವ್ಯದ ಮೂಲಕ ಉಪಕಾರ ಸ್ಮರಣೆಗೆ ನಿದರ್ಶನನಾಗುತ್ತಾನೆ. ಹಾಗಾಗಿ ತನ್ನ ಬದುಕಿಗೆ ನೆರವಾದ, ಬುದ್ಧಿ ಭಾವಗಳ ವಿಕಸನಕ್ಕೆ ಇಂಬಾಗಿ ನಿಂತ ವ್ಯಕ್ತಿಗಳನ್ನಾಗಲೀ, ವಸ್ತುಗಳನ್ನಾಗಲೀ ಕವಿ ಕೃತಜ್ಞತೆಯಿಂದ ಸ್ಮರಿಸಿ ಅವಕ್ಕೆ ಕಾವ್ಯಸ್ಮಾರಕ ನಿರ್ಮಿಸುವುದನ್ನು ಕಾಣಬಹುದು.

ತನಗೆ ವಿದ್ಯೆ ಹೇಳಿದ ಗುರುಗಳನ್ನು, ಜನ್ಮ ನೀಡಿದ ಮಾತಾಪಿತರನ್ನು, ಬಾಳ ಸಂಗಾತಿಯಾಗಿ ಬಂದು ಸಾರ್ಥಕ ಬದುಕಿಗೆ ನೆರವಾದ ಪತ್ನಿಯನ್ನು, ಗೆಳೆಯರನ್ನು, ಬಂಧುಗಳನ್ನು, ದೇವರನ್ನು, ನಿಸರ್ಗವನ್ನು, ಅನನ್ಯವಾಗಿ ಕಾವ್ಯರೂಪದಲ್ಲಿ ಕಂಡಿರಿಸಿರುವುದನ್ನು ಕವಿಗಳಲ್ಲಿ ಕಾಣುತ್ತೇವೆ. ಹಾಗೆಯೇ ಈ ಎಲ್ಲವುಗಳಲ್ಲಿಯೂ ತಾಯಿಯ ಸ್ವರೂಪ ಕಾಣುವ ಅತಿ ಎತ್ತರದ ಹಾಗೂ ವಿಶಾಲ ಭಾವದ ದೃಷ್ಟಿ ತೋರಿರುವುದನ್ನು ಕನ್ನಡ ಕಾವ್ಯ ಲೋಕದಲ್ಲಿ ಕಾಣಲು ಸಾಧ್ಯವಿದೆ. ಪರಮ ಜಿನೇಂದ್ರವಾಣಿಯೇ ಸರಸ್ವತಿ ಎಂದು ಭಾವಿಸಿರುವ ಪಂಪ, ನುಡಿಯೇ ಶಾರದೆ ಎಂದು ಗ್ರಹಿಸುವ ಕವಿರಾಜಮಾರ್ಗಕಾರ, ಲಕ್ಷ್ಮಿಯನ್ನೇ ಧರಣಿದೇವಿ ಎಂದು ಗ್ರಹಿಸಿರುವ ಪುರಂದರದಾಸರಿಂದ ಹಿಡಿದು ಆಧುನಿಕ ಕಾಲದ ಆಧ್ಯಾತ್ಮಿಕ ಲೋಕದ ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ಪತ್ನಿ ಶಾರದಾ ದೇವಿಯಲ್ಲಿ ಲೋಕಮಾತೆಯ ದರ್ಶನ ಕಂಡಿದ್ದಾಗಲೀ, ಕುವೆಂಪು ತನ್ನ ಧರ್ಮಪತ್ನಿಯಲ್ಲಿ ದೇವತೆಯನ್ನು

ದರ್ಶಿಸಿರುವುದಾಗಲೀ, ಬೇಂದ್ರೆಯವರು ಅರವಿಂದಾಶ್ರಮದ ತಾಯಿಯಲ್ಲಿ ಜಗನ್ಮಾತೆಯ ವಿರಾಟ್ ಸತ್ವವನ್ನು ಕಂಡಿರುವುದಾಗಲೀ ಇದಕ್ಕೆ ಉದಾಹರಣೆಯಾಗಿ ಕಂಡು ಬರುತ್ತವೆ.

ಈ ದೃಷ್ಟಿಯಲ್ಲಿ ನಿಸರ್ಗದಲ್ಲಿ ಚೈತನ್ಯ ಕಾಣುವ, ಸ್ತ್ರೀಯಲ್ಲಿ ಬ್ರಹ್ಮಾಂಡದ ಸೃಷ್ಟಿಯ ಶಕ್ತಿ ಕಾಣುವ, ವಿದ್ಯಾ ದೇವತೆಯ ಶಾರದೆಯಲ್ಲಿ ಉಗ್ರ ರೂಪಿನ ಕಾಳಿ ಶಕ್ತಿ ಕಾಣುವ ಕವಿ ಭಾವನೆಗಳಿಗೆ ಕೊರತೆ ಇಲ್ಲ. ಬಹಳಷ್ಟು ಕವಿಗಳು ಹೆಚ್ಚು ದರ್ಶಿಸಿರುವುದೆಲ್ಲವೂ ಚೈತನ್ಯಮಯ ಶಕ್ತಿರೂಪಿಯಾದ ತಾಯಿತನವನ್ನು. ಈ ಹಿನ್ನೆಲೆಯಲ್ಲಿ ಸಂಕೀರ್ಣದಲ್ಲಿ ಮಾತೃತ್ವದ ಸ್ವರೂಪವನ್ನು ಕನ್ನಡದ ಕೆಲವು ಪ್ರಮುಖ ಕವಿಗಳ ಪ್ರಾತಿನಿಧಿಕ ಕವಿತೆಗಳಲ್ಲಿ ಕಾಣಲು ಸಾಧ್ಯವಿದೆ.

ಸರಸ್ವತಿಯನ್ನು ವಿದ್ಯೆಯ ಅಧಿದೇವತೆ ಎಂದು ನಮ್ಮ ಹಿರಿಯರು ಆರಾಧಿಸಿರುವುದು ಕಂಡು ಬರುತ್ತದೆ. ಕನ್ನಡದ ಮೊದಲ ಕೃತಿ ಕವಿರಾಜಮಾರ್ಗದಲ್ಲಿಯೂ ಇದನ್ನು ಕಾಣಬಹುದು. ಶ್ರೀವಿಜಯನು ಸರಸ್ವತಿಯನ್ನು ಸ್ಮರಿಸಿ, ತನ್ನಂತರಂಗದಲ್ಲಿ ಶಾಶ್ವತವಾಗಿ ನೆಲೆಗೊಳಿಸುವಂತೆ ಪ್ರಾರ್ಥಿಸಿದ್ದಾನೆ.

> ಶ್ರೀವಿಷದ ವರ್ಣೆ ಮಧುರ
> ರಾವೋಚಿತೆ ಚತುರರುಚಿರ ಪದ ರಚನೆ ಚಿರಂ
> ದೇವಿ ಸರಸ್ವತಿಹಂಸೀ
> ಭಾವದೆ ನೆಲಗೊಳ್ಗೆ ಕೂರ್ತು ಮನ್ಮಾನಸದೊಳ್.[೨]

ಮೂಲತಃ ಈ ಪದ್ಯ ಸರಸ್ವತಿಯ ಸ್ತುತಿಯಂತೆ ಕಂಡುಬಂದರೂ ಇಲ್ಲಿರುವ ಭಾವ ದೈವೀಭಾವ. ಹೆಣ್ತನವನ್ನು ಆರೋಪಿಸುವುದರಿಂದ ಇಲ್ಲಿ ಮಧುರತೆ, ಚತುರತೆ ಮತ್ತು ಚಿರಂತನತೆಯನ್ನು ಹೇಳುತ್ತ 'ಕೂರ್ತು' ಎನ್ನುವ ಶಬ್ದ ಬಳಕೆಯಾಗಿದೆ. ಒಲಿಯುವಿಕೆ ತಾಯಿಮಕ್ಕಳ ಸಂಬಂಧದ್ದಾಗಿರುತ್ತದೆ. ದೈವೀಭಾವ ಸಂಬಂಧ ಮನುಷ್ಯ ಸಂಬಂಧದ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತದೆ.

ಇದನ್ನು ಭಾಷೆಗೆ ಅನ್ವಯಿಸಿ ಮಾತನಾಡುವುದಾದರೆ ವರ್ಣ ಅಥವ ಅದರಿಂದ ಉಂಟಾಗುವ ಪದರಚನೆ ನಿರಂತರವಾಗಿ ಉಳಿಸುವುದರ ಬಗೆಗೆ ಆಲೋಚಿಸಿರುವುದಾಗಿದೆ. ಜನಪದರಲ್ಲಿ ಹಾಡನ್ನು ಹಾಡುವ ಸಂದರ್ಭವನ್ನು ಗಮನದಲ್ಲಿರಿಸಿಕೊಂಡು 'ಗಂಟಲ ತೊಡರ ಬಿಡಿಸಿ, ನಾಲಿಗೆಯಮೇಲೆ ನೆಲೆಸು' ಎಂಬುದು ಜನಪದರ ಮೊರೆಯಾದರೆ; ಶಿಷ್ಟಕವಿಯ ಅಭೀಪ್ಸೆಯೇ ಬೇರೆ ರೀತಿಯದು. ಅದು 'ಮನ್ಮಾನಸದೊಳ್' ಎಂಬಲ್ಲಿಗೆ ಈ ಆಲೋಚನೆ ಬೆಳೆದಿದೆ. ಅಂಗಾಂಗಗಳಿಗಿಂತ ಅಂತರಂಗದಲ್ಲಿ ನೆಲೆಸು ಎಂದು ಮೊರೆಯಿಡುವಲ್ಲಿ ಕಾವ್ಯ ರಚನೆಯನ್ನು ಗಮನದಲ್ಲಿರಿಸಿಕೊಂಡು ಹೇಳಿರುವ ಮಾತಾಗಿದೆ.

ಸರಸ್ವತಿಯನ್ನು ಇದೇ ಭಾವನೆಯಲ್ಲಿ ನಮ್ಮ ಆದಿ ಕವಿ ಪಂಪನೂ ಕೂಡ ವಿದ್ಯೆಯ ಅಧಿದೇವತೆ ಎಂದು ಸ್ಮರಿಸಿದ್ದಾನೆ. ತನ್ನ ಆದಿಪುರಾಣದಲ್ಲಿ ಜಿನವಾಣಿಯೇ ಸರಸ್ವತಿ ರೂಪದಲ್ಲಿ ಹರಿದು ಬಂದಿದೆ ಎಂದಿದ್ದಾನೆ. ಏಕೆಂದರೆ ಪ್ರತಿಯೊಬ್ಬ ಶಿಷ್ಟಕವಿಯು ತನ್ನ ಕಾವ್ಯಾರಂಭದಲ್ಲಿ ಸರಸ್ವತಿಯ ಕೃಪೆಯನ್ನು ಬಯಸಿ ಪ್ರಾರ್ಥಿಸುತ್ತಾನೆ. ಹಾಗೆ

ಪ್ರಾರ್ಥಿಸುವಾಗ ಆಯಾ ಧರ್ಮದ ವಿಚಾರಗಳು ಒಳ ಸೇರಿಕೊಂಡಿರುತ್ತವೆ ಎಂಬುದನ್ನು ಪಂಪನ ಆದಿಪುರಾಣದಲ್ಲಿ ಬರುವ ಕವಿತೆಯಲ್ಲಿ ಪರಿಶೀಲಿಸಬಹುದು:

ಪರಮ ಜಿನೇಂದ್ರ ವಾಣಿಯೆ ಸರಸ್ವತಿ ಬೇರದು ಪೆಣ್ಣರೂಪಮಂ
ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ
ದರಿಸುವ ಭವ್ಯ ಕೋಟಿಗೆ ನಿರಂತರ ಸೌಖ್ಯಮನೀವುದಾನದ
ರ್ಕೆರೆದಪೆನಾ ಸರಸ್ವತಿಯೆ ಮಾಳ್ಕೆಮಗಿಲ್ಲಿಯೆ ವಾಗ್ವಿಳಾಸಮಂ [೩]

ಇದೇ ರೀತಿ ಕುಮಾರವ್ಯಾಸನು ಕೂಡ ತನ್ನ ಆರಾಧ್ಯ ದೈವನಾದ ವೀರನಾರಾಯಣನನ್ನು ಸ್ಮರಿಸುವಾಗ ಲಕ್ಷ್ಮಿಯ ಒಡೆಯನೇ ವೀರನಾರಾಯಣ ಎಂದಿದ್ದಾನೆ.

ಶ್ರೀವನಿತೆಯರಸನೆ ವಿಮಲರಾ
ಜೀವ ಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನ ನಿಕರದಾತಾರ
ರಾವಣಾಸುರ ಮಥನ ಶ್ರಮಣಸು
ಧಾವಿನೂತನ ಕಥನ ಕಾರಣ
ಕಾವುದಾತನ ಜನವ ಗದುಗಿನ ವೀರನಾರಯಣ [೪]

ಎಂದು ಸ್ಮರಿಸಿದರೆ, ಪುರಂದರ ದಾಸರು ತಮ್ಮ ಕೀರ್ತನೆಯೊಂದರಲ್ಲಿ ಲಕ್ಷ್ಮಿಯನ್ನು ಧರಣಿ ದೇವಿ ಎಂದು ಕರೆದಿದ್ದಾರೆ.

ಈ ಪರಿಯ ಸೊಬಗಾವ ದೇವರಲಿ ಕಾಣೆ
ಗೋಪೀಜನ ಪ್ರೀಯ ಗೋಪಾಲಗಲ್ಲದೆ ॥ಪ॥

ದೊರೆತನದಲಿ ನೋಡೆ ಧರಣಿದೇವಿಗೆ ರಮಣ
ಸಿರಿಯತನದಲಿ ನೋಡೆ ಶ್ರೀಕಾಂತನು. . . . [೫]

ಸಂಚಿಯ ಹೊನ್ನಮ್ಮ ತನ್ನ 'ಹದಿಬದೆಯ ಧರ್ಮ'ದಲ್ಲಿ ಹೆಣ್ಣನ್ನು ನಿಕೃಷ್ಟವಾಗಿ ಕಾಣುವ ಸಮಾಜದ ಕಣ್ಣು ತೆರೆಸುವ ಕಾರ್ಯವನ್ನು ಮಾಡಿದ್ದಾಳೆ.

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು ॥ [೬]

ಮಾತೃತ್ವವನ್ನು ಭಾಷೆ, ನದಿ, ನೆಲಕ್ಕೆ ಅನ್ವಯಿಸಿ ಮಾತನಾಡುವಾಗ ಕಂಡುಬರುವ ದೃಷ್ಟಿ ಧೋರಣೆಗಳು ಶ್ರೇಷ್ಠತೆಯಿಂದ ಕೂಡಿರುತ್ತವೆ. ಅದೇ ಹೆಣ್ಣನ್ನು ಸಮಾಜದಲ್ಲಿ ನೈಜ ಸ್ಥಿತಿಯಲ್ಲಿ ಕಂಡಾಗ ಈ ಸಾಮಾಜಿಕ ವ್ಯವಸ್ಥೆಯ ಸ್ವರೂಪ ಎಂತಹುದು ಎಂಬ ಅರಿವಾಗದಿರದು. ಹೊನ್ನಮ್ಮನ ಕಾಲಕ್ಕಾಗಲೇ ಸ್ತ್ರೀಯರನ್ನು ನೋಡುವ ದೃಷ್ಟಿ ದೋಷದಿಂದ ಕೂಡಿದ್ದಿತು. ಅಂದಿನ ಹೆಣ್ಣು ಇರುವ ಸ್ಥಿತಿಯನ್ನು ತಿಳಿಸುತ್ತ ಅದರ ಬಗೆಗೆ

ತನ್ನ ಅಸಹನೆಯನ್ನು ವ್ಯಕ್ತಗೊಳಿಸುತ್ತ ನೇತ್ಯಾತ್ಮಕವಾಗಿ ಯಾವರೀತಿಯಲ್ಲಿರಬೇಕಾಗಿತ್ತು ಎಂಬುದನ್ನು ಸೂಚಿಸಿದಂತಿದೆ.

ಪ್ರತಿಯೊಬ್ಬ ಕವಿಯೂ ತನ್ನದೇ ಆದ ತತ್ವ ಧೋರಣೆಗಳಿಂದ ಗಮನ ಸೆಳೆಯುತ್ತಾನೆ. ಕಾವ್ಯವು ಕವಿಗೆ ತಾಯಿಯಾಗಬಲ್ಲದು. ಹಾಗೆಯೇ ಕವಿಯ ಚೇತನವೇ ತಾಯಿಯಾಗಬಹುದು.ಇದಕ್ಕೆ ನಿದರ್ಶನವಾಗಿ ಕುವೆಂಪು ತಮ್ಮ 'ಮರಿ ವಿಜ್ಞಾನಿ' ಶಿಶುಗೀತೆಯಲ್ಲಿ. 'ತಾಯಂತೆ ಮಗಳು ನೂಲಂತೆ ಸೀರೆ' ಎಂಬ ನುಡಿಗೆ ಸಮರ್ಥನೆ ಅಮ್ಮನ ಮೂರ್ತಿಯಲ್ಲಿ ಕಾಣುತ್ತದೆ. ಇದು ಕೀರ್ತಿವಂತ ವ್ಯಕ್ತಿಯ ಚೇತನವೇ ತಾಯಿ ಎಂಬುದು ಇಲ್ಲಿನ ಆಶಯ.

ಮೂರ್ತಿಯೆ, ಬಲ್ಲೆಯ ನೀನಾರೆಂದು ಬಲ್ಲೆಯ ಹೇಳಣ್ಣ !
ನಮ್ಮಮ್ಮನ ಮೂರ್ತಿಯು ನಾನೆಂದು ಬಲ್ಲೆನು ಕಾಣಣ್ಣ !
. . . .
ಬಲ್ಲೆನು, ನಾ ನಮ್ಮಮ್ಮನೆ ಮೂರ್ತಿ
. ಅಮ್ಮನೆ ವಿಶ್ವವು, ಪ್ರೀತಿಯೆ ಕೀರ್ತಿ [೭]

ತಾಯ್ತನದ ಮಹತ್ವ ಯಾವುದೋ ಒಂದು ಸ್ಥಳಕ್ಕೆ ಸೀಮಿತಗೊಂಡದ್ದಲ್ಲ. 'ಅಮ್ಮನೆ ವಿಶ್ವವು' ಎಂಬಲ್ಲಿ ಅದರ ಅನಂತತೆ, ವಿಶ್ವವ್ಯಾಪಕತೆಯನ್ನು ತಿಳಿಸುತ್ತಲೇ ಪ್ರೀತಿಯ ಎಳೆಗಳನ್ನು ಹೇಳಲಾಗಿದೆ.

ಮಾತೃ ಪ್ರಧಾನ ವ್ಯವಸ್ಥೆಯ ಚಿಂತನೆಗಳೆಲ್ಲ ಸ್ತ್ರೀವಾದಿ ನೆಲೆಯಲ್ಲಿ ಕೆಲಸ ಮಾಡಿವೆ. ವ್ಯಕ್ತಿ, ತಾಯಿಯ ಮುಖೇನ ತನ್ನನ್ನು ಗುರುತಿಸಿಕೊಳ್ಳುವನು. ಬೆಳೆದು ಪಕ್ವವಾದ ನಂತರ, ತಾಯಿಯ ಮೂರ್ತ ಸ್ವರೂಪವೇ ತಾನೆಂಬ ವಿಶಾಲತೆಯ ಕಡೆ ಹರಿಯುತ್ತದೆ. ಆಕೆಯಲ್ಲಿ ವಿಶ್ವ ಭಾವನೆಯನ್ನು ಕಂಡಿರುವುದಲ್ಲದೆ, ಆಕೆಯ ಪ್ರೀತಿಯಲ್ಲಿ ತನ್ನ ಕೀರ್ತಿ ಇದೆ ಎಂದು ಭಾವಿಸಿ ಆಕೆಯ ಉನ್ನತ ನೆಲೆಯನ್ನು ದರ್ಶಿಸಿರುವುದು ಈ ಕವಿತೆಯ ವೈಶಿಷ್ಟ್ಯ ಹೀಗೆ ಹೇಳಿದ ಕವಿ ಕೊನೆಗೆ ಆತ್ಮನ ಅನಂತತೆಯನ್ನು ಮನವರಿಕೆ ಮಾಡಿಕೊಡುತ್ತಾರೆ.

ಹುಟ್ಟು, ಸಾವು, ತೆರಿಗೆಗಳಿಂದ ವ್ಯಕ್ತಿ ತಪ್ಪಿಸಿಕೊಳ್ಳಲಾರ. ಆದರೆ ತೆರಿಗೆ ಎಂಬುದು ಕಚ್ಚುವ ನಾಯಾದಾಗ ರಕ್ಷಣೆಯ ತಾಯಿಯೇ ಕವಿತೆಯಾಗಿದ್ದಾಳೆ ಕವಿಗೆ. ತಮ್ಮ 'ತೆರಿಗೆ ನಾಯಿ'ಯಲ್ಲಿ ಇದನ್ನು ಕುವೆಂಪು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ತೆರೆದು ಬಾಯಿ ತೆರಿಗೆ ನಾಯಿ
ಅಟ್ಟುತಿಹುದು ಬಂದು ಕಾಯಿ
ಹೇ ದೇವಿ ಕಬ್ಬ ತಾಯಿ! . . . . [೮]

ಕವಿಯ ಏಕಾಗ್ರತೆಗೆ ಭಂಗ ತರುವ 'ತೆರಿಗೆ ನಾಯಿ'ಯಿಂದ ರಕ್ಷಿಸಲು ಕಾವ್ಯವೆಂಬ ತಾಯಿಯೇ ಬರಬೇಕೆಂಬುದು ಕವಿಯ ಪ್ರಾರ್ಥನೆಯಾಗಿದೆ. ಆದರೆ 'ಕವಿತೆ'

ಎಂಬ ತಾಯಿ 'ತೆರಿಗೆ' ಎಂಬ ನಾಯಿ ಕಚ್ಚುವಿಕೆಯನ್ನು ಹೇಗೆ ತಡೆಯಬಲ್ಲದು ಎಂಬುದನ್ನು ಸಮರ್ಥವಾಗಿ ಕವಿ ವಿವರಿಸಿಲ್ಲ.

ಕವಿತೆ ತಾಯಿ ಆದಂತೆ, ಸೌಂದರ್ಯವೂ ತಾಯಿಯಾಗಬಲ್ಲದು ಎಂಬುದನ್ನು ತಮ್ಮ 'ಸೌಂದರ್ಯ' ಕವಿತೆಯಲ್ಲಿ ತೋರಿಸಿ ಕೊಟ್ಟಿದ್ದಾರೆ. ಸೌಂದರ್ಯವೇ ವಿಶ್ವದ ತಾಯಿ ಎಂಬುದು ಕವಿಯ ಕಲ್ಪನೆ.

. . . .
ನನ್ನಾತ್ಮ ಸೌಂದರ್ಯ; ನಿನ್ನಾತ್ಮ ಸೌಂದರ್ಯ;
ನಾನಿಲ್ಲಿ, ನೀನಲ್ಲಿ; ಸೌಂದರ್ಯಮಹುದೆಲ್ಲ !
ಸೌಂದರ್ಯವಾನಂದ; ಸೌಂದರ್ಯವೈಶ್ವರ್ಯ !
ವಿಶ್ವಕ್ಕೆ ತಾಯಾರುಬಲ್ಲೆಯೇಂ? – ಸೌಂದರ್ಯ ! [6]

ಒಂದು ಭಾಷೆಯ ಸೌಂದರ್ಯ, ಹೊರ ರೂಪಕ್ಕಿಂತ ಹೆಚ್ಚಾಗಿ ಅದರ ಆತ್ಮದಲ್ಲಿ ಅಡಗಿರುತ್ತದೆ. ಸೌಂದರ್ಯ ಎಂಬುದು ಭೌತಿಕ ನೋಟಕ್ಕಷ್ಟೇ ಸೀಮಿತಗೊಳ್ಳದೆ, ಆಧ್ಯಾತ್ಮಿಕವಾದ ಆತ್ಮವನ್ನೂ ಒಳಗೊಳ್ಳುವುದು ಮಹತ್ವದ ಚಿಂತನೆಯಾಗಿದೆ. ಇದೇ ಮಾತು ಭಾಷೆಗೂ ಅನ್ವಯಿಸಿದಾಗ ಆತ್ಮದ ಕಲ್ಪನೆ ರಸ, ರೀತಿ, ಧ್ವನಿಗೂ ವ್ಯಾಪಿಸಿಕೊಳ್ಳುತ್ತದೆ. ಸೌಂದರ್ಯ ಸತ್ಯ ಶಿವ – ಈ ಮೂರೂ ಸಾವಯವ ಸಂಬಂಧವಿರುವಂತಹವು. ಈ ಮೂರು ಗುಣವನ್ನು ಭಾಷೆಯಲ್ಲಿ ಮತ್ತು ತಾಯ ನೆಲೆಯಲ್ಲಿ ಕಾಣಬಹುದು. ಕೊನೆಯ ಸಾಲಿನ ಮೊದಲರ್ಧ ಭಾಗದಲ್ಲಿ ಬರುವ ಪ್ರಶ್ನೆಗೆ ಕೊನೆಯಲ್ಲಿ ಬರುವ 'ಸೌಂದರ್ಯ' ಶಬ್ದ ಆಶ್ಚರ್ಯದಿಂದ ಕೂಡಿದೆ.

ಎಲ್ಲರ ಆತ್ಮವೂ ಸೌಂದರ್ಯ ಭೂತಿಯಾದದ್ದು. ಪರಮಾತ್ಮನ ನೆಲೆಗೆ ಯೋಗ್ಯವಾದುದೆಲ್ಲವೂ ಸೌಂದರ್ಯಮಯವಾದದು. ಹಾಗಾಗಿ ಸೌಂದರ್ಯವೇ ಆನಂದ, ಐಶ್ವರ್ಯ, ಇವುಗಳ ತಾಯಿಯೂ ಕೂಡ ಸೌಂದರ್ಯವೆಂಬುದು ವಿಶಾಲ ಭಾವನೆಗೆ ನಿದರ್ಶನವಾಗಿದೆ. ಕವಿಯ ಸೌಂದರ್ಯ ಪ್ರಜ್ಞೆಗೆ ಸಾಕ್ಷಿಯಾಗಿದೆ.

ಸಾಧಕ ಕವಿ ಅಧಿಕಾರದ ಕರ್ತವ್ಯ ನಿರ್ವಹಣೆ ಕಾಲದಲ್ಲಿ ಮತ್ತೆ ಮತ್ತೆ ವೇಗವಾಹನಗಳಲ್ಲಿ ಸಂಚರಿಸಬೇಕಾಗಿ ಬಂದಾಗ ತನ್ನ ಸಂಚಾರದ ಮಾರ್ಗದಲ್ಲಿಯ ಸೌಂದರ್ಯಕ್ಕೂ ಮಾರು ಹೋಗುತ್ತಾನೆ. ಆ ಸೌಂದರ್ಯದಲ್ಲಿ ಭಗವದ್ದರ್ಶನದ ಅನುಸಂಧಾನ ನಡೆಯುತ್ತದೆ. ಉದಾಹರಣೆಗೆ, ಕಬ್ಬಿನ ಗದ್ದೆಯ ನಡುವಣ ರಸ್ತೆಯಲ್ಲಿ ಕಾರು ಚಲಿಸುವಾಗ ಕಬ್ಬಿನ ಹೂವಿನ ಚಾಮರ ಸಮುದ್ರ ಅಲೆ ಅಲೆಯಾಗಿ ಚಲಿಸುವ ದಿವ್ಯ ದರ್ಶನಕ್ಕೆ 'ಓಂ ಇಕ್ಷು ಪುಷ್ಪ ಜಗನ್ಮಾತೆ ನಮೋ ನಮಃ' ಎಂಬ ಮಂತ್ರ ಧ್ಯಾನ ಪೂಜೆ ಸಲ್ಲುತ್ತಿರುತ್ತದೆ. ಹಾಗೆಯೇ ಮುಂದೆ ಕ್ಷಣಾಂತರದಲ್ಲಿ, ನೀರು ತುಂಬಿ ಬೆಳ್ಳಿಯಾಗಿ ಹೊಳೆಯುವ ಬಿತ್ತರದ ಕೆರೆ ಕಂಗೊಳಿಸಿ, ಓಂ ಸರೋಚಾರು ಜಗನ್ಮಾತೆ ನಮೋ ನಮಃ' ಜಪೋಪಾಸನೆಗೆ ಚೇತನ ಶರಣಾಗುತ್ತದೆ. ಇತ್ಯಾದಿ, ಇತ್ಯಾದಿ, ಇತ್ಯಾದಿ. ಜಗತ್ತಿನ ಚರಾಚರದಲ್ಲೂ, ಚೇತನಾಚೇತನಗಳಲ್ಲೂ ಭಗವತ್ ಶಕ್ತಿ ಇರುವುದಕ್ಕೆ ಕವಿಮನ ತಲೆಬಾಗುತ್ತದೆ. ಅಲ್ಲೆಲ್ಲ ವಿಶ್ವಮಾತೆಯ ದರ್ಶನವಾಗುತ್ತದೆ:

ಅಮ್ಮನ ಮಡಿಲು ಅಮೃತದ ಹೊಳೆಯಂತೆ ನಿರ್ಭಯವಾದದ್ದು.

ಅಮ್ಮನ ಮಡಿಲೊಳು ಮಲಗಿರುವೆನಗೆ
ಗುಮ್ಮನ ಭಯವಿಹುದೇನಣ್ಣಾ
ಅಮೃತದ ಹೊಳೆಯೊಳು ತೇಲುವ ನನಗೆ
ಮೃತ್ಯುವ ಭಯವಿಹುದೇನಣ್ಣಾ? [೧೦]

ಇಲ್ಲಿ 'ಹೊಳೆ' ಎಂಬ ಶಬ್ದದ ವ್ಯಾಪ್ತಿಯನ್ನು ಕೇವಲ ನೀರಿನ ಹರುವಿಕೆಗಷ್ಟೇ ಸೀಮಿತಗೊಳಿಸದೆ, ಪ್ರಕಾಶಿಸು, ನಿರಂತರತೆ ಕಾಪಾಡು, ಥಟ್ಟನೆ ಚಿಂತನೆ, ಆಲೋಚನೆ, ಭಾವ ಮೂಡಿಬರುವಂತಹದನ್ನು ಜ್ಞಾತಿಯಾಗಿ ಗಮನಿಸಬಹುದು. ಈ ಭಾವಕ್ಕೆ ಹೊಂದಿಕೊಂಡಂತೆ ಜನಪದ ಗೀತೆಯಲ್ಲಿ ಹೆಣ್ಣೊಬ್ಬಳು, ತವರಿನ ಬಗೆಗೆ ಸದಾಶಯವನ್ನು ವ್ಯಕ್ತಗೊಳಿಸುತ್ತ 'ಹಾಲುಂಡ ತವರೀಗೆ' ತ್ರಿಪದಿಯಲ್ಲಿ 'ಹೊಳೆದಂಡೆಯ ಗರಿಕೆ' ಶಬ್ದ ಬಳಸಿರುವುದನ್ನು ಇಲ್ಲಿ ನೆನಪಿಸಬಹುದು. ಇಲ್ಲಿಯ 'ಹೊಳೆ' ನಿರಂತರ ಆರ್ದ್ರತೆಯನ್ನು ಧ್ವನಿಸುವಂತಹುದಾಗಿದೆ. ಇದೇ ಭಾವದಲ್ಲಿ ಅಮ್ಮನ ಮಡಿಲು ಅಮೃತದ ಹೊಳೆಯಾಗಿ ಕವಿ ಕಂಡಿದ್ದಾರೆ. ಅಮ್ಮನ ಆಶ್ರಯವೆಂಬುದು ರಕ್ಷಣೆಯ ಕೋಟೆಯಂತಿರುತ್ತದೆ. ಅಲ್ಲಿ ಭಯಪಡುವ ಆತಂಕವೇ ಬರದು. ಅಲ್ಲಿ ಪ್ರೀತಿಯ ನಿರಂತರತೆಯಲ್ಲಿ ನಿರ್ಭಯದಿಂದ ಜೀವಿಸುವ ಭಾವ ಇದಾಗಿದೆ.

ಅಮ್ಮನ ಮಡಿಲೇ ಅಮೃತದ ಹೊಳೆ, ಅದರಲ್ಲಿ ತೇಲುವ ಕವಿಗೆ ಮೃತ್ಯುಭಯ ಕಾಣದು. ತಾಯಿ ಮಡಿಲು ರಕ್ಷಣೆಯ ತಾಣ ಎಂಬುದು ಕವಿಯ ನಂಬಿಕೆ. ಅವರ ಮತ್ತೊಂದು ಕವಿತೆ 'ವಸಂತೋದಯ'ದಲ್ಲಿ ತನ್ನ ತಾಯಿಗೂ, ಜಗದ ತಾಯಿಗೂ ಅಭೇದ ಕಲ್ಪಿಸಿರುವುದನ್ನು ಕಾಣಬಹುದು. ಇವೆರಡರ ಸೃಷ್ಟಿಗೂ ಆಕೆಯೇ ಮೂಲ, ಆಕೆಯೇ ತಾಯಿ ಎಂಬುದು ಕಲ್ಪನೆ.

ನನ್ನಮ್ಮ ಜಗದಮ್ಮ;
ಜಗದಮ್ಮ ನನ್ನಮ್ಮ
. . . .
ನನ್ನಮ್ಮನಾಗಿಯೂ ಜಗದಮ್ಮ!
ಜಗದಮ್ಮನಾಗಿಯೂ ನನ್ನಮ್ಮ! [೧೧]

ಋತುಮಾನಗಳು ವಿಶ್ವವ್ಯಾಪ್ತಿಯಾದುದು. ಭಾಷೆಯೂ ವಿಶ್ವವ್ಯಾಪ್ತಿಯಾದುದು. ಆ ಪ್ರಕೃತಿಯನ್ನು ಮತ್ತು ಭಾಷೆಯನ್ನು ತಾಯಿಯಂತೆ ಗ್ರಹಿಸಿರುವುದುಂಟು. ನಮ್ಮಮ್ಮ ಎಂದು ಆರಂಭವಾಗುವ ಕವಿತೆ ಜಗದಮ್ಮನವರೆಗೆ ವ್ಯಾಪಿಸುವುದು. ಮಾತೃತ್ವದ ಪರಿಕಲ್ಪನೆಯನ್ನು ವ್ಯಷ್ಟಿ ನೆಲೆಯಿಂದ ಸಮಷ್ಟಿಯ ನೆಲೆಗೆ ಕೊಂಡೊಯುತ್ತದೆ. ಪರಿಮಿತಿ ಮತ್ತು ವ್ಯಾಪಕತೆಯಲ್ಲೂ ತನ್ನ ತನವನ್ನು ಗುರುತಿಸಿಕೊಳ್ಳಲಾಗಿದೆ. ಮಾತೃತ್ವದ ವ್ಯಾಪ್ತಿ ವಿಶ್ವ ಸೃಷ್ಟಿಯವರೆಗೂ ಇದೆ ಎಂಬುದು ಕವಿಯ ಚಿಂತನೆ. ಜಗತ್ತಿನ ರಕ್ಷಣೆ ಹೊತ್ತ ದೇವಿಯನ್ನು ವಿಶಾಲ ದೃಷ್ಟಿಯಿಂದ ಭಾವಿಸಿಕೊಂಡು ತಾಯಿಯಂತೆ ಸ್ಮರಿಸಲಾಗಿದೆ.

ಕುವೆಂಪು ತನ್ನ ಸಹಭಾಗಿನಿ ಹೇಮಾವತಿ ಬಗ್ಗೆ ಅಪಾರ ಗೌರವ, ಪ್ರೀತಿ. ದಾಂಪತ್ಯದ ಅನ್ಯೋನ್ಯತೆಗೆ ಈರ್ವರೂ ಉದಾಹರಣೆಯಂತೆ ಕಾಣುತ್ತಾರೆ. ಶ್ರೀಯುತರ ಬದುಕಿಗೆ ಇಂಬಾಗಿ, ಬೆಳಕಾಗಿ ಕಂಡಿರುವ ತನ್ನ ಪತ್ನಿಯನ್ನು ತಾಯಿ, ತಂದೆ, ಗುರು

ಎಂದು ಕರೆಯುತ್ತಾರೆ. ಪತ್ನಿಯಾದವಳು ತನ್ನ ವಿಶಿಷ್ಟ ಗುಣದಿಂದ ಇದಕ್ಕೂ ಮಿಗಿಲಾದ ಸ್ಥಾನ ಗಳಿಸಬಲ್ಲಳು. ಹೆಂಡತಿಯೂ ಬದುಕಿಗೆ ದಾರಿ ತೋರುವ ತಾಯಿಯಾಗಬಲ್ಲಳು.

ಯಾರು ಕೈ ಬಿಟ್ಟರೂ ನೀ ಬಿಡದಿರು;
ನೀನೆನ್ನ ತಾಯ್, ತಂದೆ, ಗುರು, ದೇವರು!
ನಿನ್ನೊಡನೆ ಹಿಂದೆನಿತೊ ಸಾರಿ ಹುಟ್ಟಿದೆ, ಸತ್ತೆ;
ಮುಂದೆಯೂ ನಿನ್ನೊಡನೆ ಜನ್ಮ ಜನ್ಮವನೆತ್ತೆ
ಹಿಂಜರಿಯೆನೈ ೧೩

ಕುವೆಂಪುರವರು ರಾಮಕೃಷ್ಣ ಮಠದಲ್ಲಿ ಬೆಳೆದವರಾದುದ್ದರಿಂದ ಅವರಲ್ಲಿ ಆಧ್ಯಾತ್ಮಿಕ ಪ್ರಭಾವ ನಿಚ್ಚಳವಾಗಿದೆ. ರಾಮಕೃಷ್ಣ ಪರಮಹಂಸರು ತನ್ನ ಹೆಂಡತಿಯಲ್ಲಿ ದೇವೀಭಾವವನ್ನು ಕಂಡುಕೊಂಡಿದ್ದರು. ಅಂತಹ ಚಿಂತನೆಯಲ್ಲಿ ಕವಿ ಬೆಳೆದವರಾದ್ದರಿಂದ ಆ ಚಿಂತನೆ ಕಾವ್ಯ ರೂಪದಲ್ಲಿ ಹೊರಹೊಮ್ಮಲು ಸಾಧ್ಯವಾಗಿದೆ.

ತನ್ನ ಬದುಕಿನ ಅರ್ಧಭಾಗ ಹೆಂಡತಿ ಎಂದು ಪರಿಗಣಿತವಾಗಿರುವುದರಿಂದ ಸಂಸಾರದ ಒಟ್ಟು ಜವಾಬ್ದಾರಿಯಲ್ಲಿ ಆಕೆಯ ಪಾಲು ಅಷ್ಟೇ ಪ್ರಮುಖವಾಗಿರುತ್ತದೆ. ಇದು ಸಾಮರಸ್ಯದ ಬಾಳುವೆಯನ್ನು ಸೂಚಿಸುತ್ತದೆ. ಇಲ್ಲಿ ಅಹಂ ಕರಗಿ, ದೈನ್ಯತೆ ಕೋರಿಕೆಯ ರೂಪದಲ್ಲಿ ಹೊರಹೊಮ್ಮಿ ಬಂದಿದೆ. ಇಲ್ಲಿನ ತಾಯಿ, ತಂದೆ, ಗುರು, ದೇವರು ವಿಶಿಷ್ಟ ಅರ್ಥ ಪಡೆದುಕೊಳ್ಳುತ್ತವೆ. ತಾಯಿ ತನ್ನ ಮಗನನ್ನು ವಿವಾಹವಾಗುವ ತನಕ ಆತನ ಯೋಗಕ್ಷೇಮದ ಹೊಣೆ ಹೊರುತ್ತಾಳೆ ಇದು ವ್ಯವಹಾರಿಕ ಸಂಬಂಧ. ಆತ ವಿವಾಹವಾದ ಬಳಿಕ ಆತನ ಮುಂದಿನ ಜವಾಬ್ದಾರಿ ಹೆಂಡತಿಯದಾಗಿರುವುದರಿಂದ ತಾಯಿಯ ಕರ್ತವ್ಯವನ್ನು ಹೆಂಡತಿಯೇ ನಿರ್ವಹಿಸಬೇಕಾಗಿರುತ್ತದೆ. ತಾಯಿ ಸ್ತ್ರೀ ರೂಪಿಯಾದರೂ ತಂದೆಯಂತೆ ಜವಾಬ್ದಾರಿಯನ್ನು ಹೊತ್ತು ಗಂಡನ ಕರ್ತವ್ಯಗಳಲ್ಲಿ ಸಮಪಾಲು ಪಡೆದಿರುತ್ತಾಳೆ. ತಂದೆ ಎನ್ನುವ ಶಬ್ದ, ಕ್ರಿಯಾಪದವಾಗಿ ಗಮನಿಸಿದಾಗ ಪುರುಷನ ವ್ಯಕ್ತಿತ್ವ ನಿರ್ಮಾಣದ ಹಿಂದೆ ನಿರ್ವಹಿಸಿದ ಜವಾಬ್ದಾರಿಯನ್ನು ಸೂಚಿಸುತ್ತದೆ. ಗುರು ಮಾರ್ಗದರ್ಶಿ, ದೇವರು ನಮ್ಮೊಳಗಿನ ಎಚ್ಚರ – ಹೀಗೆ ಬಹುಮುಖಿಯಾಗಿ ಹೆಣ್ಣು ಕರ್ತವ್ಯವನ್ನು ನಿರ್ವಹಿಸುವವಳು. ಇಂತಹ ಹೆಣ್ಣಿನ ಒಡನಾಟಕ್ಕೆ ಜನ್ಮಜನ್ಮಾಂತರದ ಸಂಬಂಧಗಳಿದ್ದು, ಹೀಗೆ ಮುಂದುವರೆಯಲಿ ಎಂಬ ಆಶಯ ಇಲ್ಲಿ ವ್ಯಕ್ತಗೊಂಡಿದೆ. ಇದೇ ಅರ್ಥ ಬರುವ ಮತ್ತೊಂದು ಕವಿತೆ 'ನಿತ್ಯದಲಿ ಭಗವತಿ'! ಇಲ್ಲಿ ಹೆಂಡತಿಯನ್ನು ದೇವತೆಯಾಗಿ ಕಂಡಿದ್ದಾರೆ.

ಲೋಕರಂಗದಲ್ಲಿ ಸತಿ;
ನಿತ್ಯದಲ್ಲಿ ಭಗವತಿ!
ಇಲ್ಲಿ ನಿನಗೆ ತೊಟ್ಟಿಲಲ್ಲೆ
ನಾನೆ ಇಟ್ಟೆ
ನಾನೆ ಕೊಟ್ಟೆ'
ಹೆಸರು 'ಹೇಳಿಬಿಡಲೆ, ನಲ್ಲೆ?'
ಹೇ . . .ಮಾ . . .ವ . . .ತಿ. ॥ ೧೪

ಲೋಕದ ಕಣ್ಣಿಗೆ ಹೆಂಡತಿಯಾಗಿ ಕಾಣುವವಳು ತನ್ನ ದಿನ ನಿತ್ಯದ ಚಟುವಟಿಕೆಗಳಲ್ಲಿ ಭಗವತಿಯ ಸ್ವರೂಪಳಾಗಿ ಕಾಣುತ್ತಾಳೆ. ನಿತ್ಯ ಎನ್ನುವ ಶಬ್ದ ಕಾಲಮಾನವನ್ನು ಮಾತ್ರ ತಿಳಿಸದೆ ಸತ್ಯ ಸ್ವರೂಪವನ್ನು ತಿಳಿಸುತ್ತದೆ. ಕವಿ ತಮ್ಮ ವೈಯಕ್ತಿಕ ಬದುಕಿನಲ್ಲಾದ ಘಟನೆಯನ್ನು ತೆರೆದಿಡುತ್ತ ತಮ್ಮ ಹೆಂಡತಿಗೆ ತಾವೇ ಹೆಸರಿಟ್ಟು ತೊಟ್ಟಿಲಿಗೆ ಹಾಕಿದ ಘಟನೆಯನ್ನು ದಾಖಲಿಸಿದ್ದಾರೆ. ಬಾಲ್ಯದಲ್ಲಿ ತಾಯಿ ತಂದೆ, ಯೌವ್ವನದಲ್ಲಿ ಗುರು, ವಾರ್ಧಕ್ಯದಲ್ಲಿ ದೇವರನ್ನು ಆಶ್ರಯಿಸುವುದು ಸರ್ವ ಸಾಮಾನ್ಯ. ಆದರೆ ಅವೆಲ್ಲವನ್ನೂ ಹೆಂಡತಿಯಲ್ಲಿ ಒಟ್ಟಿಗೆ ತರುವುದರ ಮೂಲಕ ಎಲ್ಲದರಲ್ಲಿಯೂ ಇವುಗಳು ಶ್ರೀ ರಕ್ಷೆಯಾಗಿ ತನ್ನ ಬದುಕನ್ನು ರೂಪಿಸಲಿ ಎಂಬ ಆಶಯವನ್ನು ಕವಿ ವ್ಯಕ್ತಪಡಿಸಿದ್ದಾರೆ. ಜಗತ್ತಿನ ಪ್ರತಿಯೊಬ್ಬ ದಾರ್ಶನಿಕನ ಯಶಸ್ಸಿನ ಹಿಂದೆ ಹೆಣ್ಣಿನ ಶಕ್ತಿಯೊಂದು ಇರುತ್ತದೆ ಎಂಬುದಕ್ಕೆ ಕುವೆಂಪು ಮಾತುಗಳಿಂದ ತಿಳಿಯುತ್ತದೆ. ಅವರ ಎಲ್ಲ ಸಾಧನೆಯ ಹಿಂದೆ ಪತ್ನಿ ಹೇಮಾವತಿ ಪ್ರೇರಣೆಯಾಗಿ, ನೆರವಾಗಿ ನಿಂತಿದ್ದರು ಎಂಬುದನ್ನು ಕವಿ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಕುವೆಂಪು ಆಧ್ಯಾತ್ಮದ ಬೆಳಕು ಕಂಡಿದ್ದು ರಾಮಕೃಷ್ಣಾಶ್ರಮದ ನೆರವಿನಿಂದ. ರಾಮಕೃಷ್ಣ, ವಿವೇಕಾನಂಧ, ಶ್ರೀಶಾರದಾದೇವಿಯರಲ್ಲಿ ಅನನ್ಯ ಭಕ್ತಿ, ಶ್ರದ್ಧೆ, ನಿಷ್ಠೆ. ಹಾಗಾಗಿ ಶ್ರೀ ಶಾರದಾದೇವಿಯನ್ನು 'ಮಹಾಮಾತೆ' ಎಂದು ಕರೆದಿದ್ದಾರೆ.

ಶ್ರೀ ಶಾರದಾ ದೇವಿ, ಹೇ ಮಹಾಮಾತೆ,
ಶ್ರೀ ರಾಮಕೃಷ್ಣ ಗುರುದೇವ ಸಂಪ್ರೀತೆ,
ಪರಮ ಪಾವನ ಹೃದಯೆ, ಕಲಿಯುಗದ ಸೀತೆ,
ಭಕ್ತಿಯಿಂದಾರಾಧಿಪೆವು ನಿನ್ನನಮ್ಮಾ!
. . . .
ನಿನ್ನ ನಾಮವೆ, ಜನನಿ, ಸುರನದಿಯ ತೀರ್ಥ:
ಎಲೆ ತಾಯೆ, ನೀನೇ ಪವಿತ್ರತಮ ತೀರ್ಥ!
ನಿನ್ನ ಪೂಜೆಯೆ ಭಕ್ತಿ, ಸಾಧನೆ, ವಿರಕ್ತಿ;
ನಿನ್ನ ನೆನೆವುದೆ ನಮಗೆ ಗುರುತಪಶ್ಶಕ್ತಿ! [೧೪]

ಆಧ್ಯಾತ್ಮ ಸಾಧನೆಯ ಹಿಂದೆ ಪ್ರೇರಣಾ ಶಕ್ತಿಯಾಗಿ ಕಾರ್ಯ ನಿರ್ವಹಿಸಿದ ರಾಮಕೃಷ್ಣ ಪರಮಹಂಸರ ಪತ್ನಿ ಶಾರದಾ ಮಾತೆಯನ್ನು ನೆನಪು ಮಾಡಿರುವುದರೊಂದಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿ, ಆಧ್ಯಾತ್ಮಿಕ ಪರಿವೇಷವನ್ನು ಪದ್ಯಕ್ಕೆ ತಂದುಕೊಟ್ಟಿದ್ದಾರೆ. ಪೂಜೆ, ಭಕ್ತಿ, ಸಾಧನೆ, ವಿರಕ್ತಿ – ಇಂತಹ ಶಬ್ದಗಳ ಬಳಕೆಯಿಂದ ಕವಿತೆಯ ಮಹತ್ವ ಹೆಚ್ಚಿದೆ. ಲೋಕದ ಸಕಲರಲ್ಲೂ ಇಂತಹ ಭಾವನೆ ಉದಯಿಸಲು ಸಾಧ್ಯವಾಗದು. ಆಧ್ಯಾತ್ಮಿಕದ ಕಠಿಣವಾದ ಹಾದಿಯಲ್ಲಿ ನಡೆದು ಯಾವುದಕ್ಕೂ ಜಗ್ಗದೆ, ಕುಗ್ಗದೆ, ಬಗ್ಗದೆ ಮುಂದುವರೆದು ನಿರಂತರ ಸಾಧನೆ ಮಾಡಿದವರಿಗೆ ಮಾತ್ರ ಇಂತಹ ಸ್ಥಿತಿಯನ್ನು ಮುಟ್ಟಲು ಸಾಧ್ಯವಾಗುತ್ತದೆ. ಆ ಸ್ಥಿತಿಯನ್ನೈದಿದ ಕವಿ ಶಾರದಾ ದೇವಿಯರನ್ನು ನೆನಪು ಮಾಡಿಕೊಳ್ಳುವುದರ ಮೂಲಕ ಭಕ್ತಿ ಭಾವವನ್ನು ವ್ಯಕ್ತಗೊಳಿಸಿದ್ದಾರೆ. ಹೀಗೆ ಶ್ರೀ ಶಾರದಾದೇವಿಯನ್ನು ಕುರಿತು ಪಾವಿತ್ರತೆಯ ಭಾವನೆಯಿಂದ ವರ್ಣಿಸಿದ ಕವಿ, ಮತ್ತೊಂದು ಕವಿತೆ 'ಒಂದು ಪ್ರಾರ್ಥನೆ'ಯಲ್ಲಿ ಆ

ತಾಯಿಯೆ ಕ್ಷಮಾಗುಣಳೂ, ದೋಷತಿದ್ದುವ ಗುರುಸ್ವಭಾವದವಳೂ ಎಂದು ಪ್ರಾರ್ಥಿಸಿದ್ದಾರೆ.

ತನ್ನ ಹಸುಳೆಯ ಹೂವು ಹಣೆಯಲಿ
ಮಸಿಯ ಚಿಕ್ಕೆಯು ಕಾಣಲಿ
ಹೆತ್ತ ತಾಯಿಯು ಹಾಲುಗೆನ್ನೆಗೆ ಮುತ್ತ ನೀಯದೆ ಮಾಣಳು.
ಅಂತೆನಮ್ಮೊಳು ದೋಷವಿದ್ದರು
ಕ್ಷಮಿಸಿ, ಕರುಣಿಸಿ ಎತ್ತಿಕೋ
ಅಮ್ಮ ಪಾವನೆ ನೀನು; ಹೇಸದೆ
ನಮ್ಮಗಳನೆದೆಗೊತ್ತಿಕೋ! [೧೫]

'ಈ ಕವಿತೆಗಳಲ್ಲಿ ನಡೆಯುವ ಆದರ್ಶೀಕರಣ ಹಾಗೂ ದೈವೀಕರಣಗಳನ್ನು ಕುರಿತಂತೆ ನಡೆದಿರುವ ಚರ್ಚೆಯನ್ನು ಗಮನಿಸುವ ಅಗತ್ಯವಿದೆ. ಕಾಮ, ಪ್ರೇಮ, ಸ್ನೇಹ, ವಾತ್ಸಲ್ಯ, ಗೌರವ, ಮುಂತಾದ ಭಾವನೆಗಳು ಅಸಮಾವೇಶಕ *[Mutually exclusive]* ವೆಂದು ತಿಳಿಯದೆ ಅವೆಲ್ಲವನ್ನು ಒಂದೇ ಸನ್ನಿವೇಶದಲ್ಲಿ ಕಾಣುವ ಪ್ರಯತ್ನವನ್ನು ಕುವೆಂಪು ಅವರಲ್ಲಿ ಕಾಣುತ್ತೇವೆ. ಹಾಗೆ ನೋಡಿದರೆ ಒಂದು ಬಗೆಯ ಆದರ್ಶಕ್ಕೆ ವಶರಾಗಿ ಬ್ರಹ್ಮಚರ್ಯವನ್ನು ಆರಾಧಿಸುತ್ತಿದ್ದಾಗ ಗೌರವನೀಯವಾದ ವಸ್ತುಗಳು ಗೃಹಸ್ಥ ಜೀವನದಲ್ಲಿಯೂ ಬೇರೆ ಬಗೆಯಲ್ಲಿ ಪೂಜ್ಯವಾಗುತ್ತವೆ. ಪ್ರೇಯಸಿಯನ್ನು ತಾಯಿಯೆಂದು, ದೇವಿಯೆಂದು ತಿಳಿಯುವ ಈ ಮನೋಧರ್ಮದಲ್ಲಿ ಅಂತಹ ವಿಚಿತ್ರವಾದುದ್ದೇನು ಇಲ್ಲ. ಇವೆಲ್ಲ ತಾತ್ಕಾಲಿಕವಾದ ಭಾವ ಲಹರಿಗಳಾಗಿ ಎಲ್ಲ ದಂಪತಿಗಳಲ್ಲಿಯೂ ಮಿಂಚಿ ಮಾಯವಾಗುವಂಥವೇ'[೨೩]

ಈ ಮಾತುಗಳು ಇತರೆ ಶ್ರೀಸಾಮಾನ್ಯನ ಮನಸ್ಥಿತಿಗೆ ಅನ್ವಯ ವಾಗುವಂತಹುಗಳೇ ಆದರೂ ಕೂಡ ಕುವೆಂಪು ದೃಷ್ಟಿಯಲ್ಲಿ ಹೆಂಡತಿಯು ಕೇವಲ ಸುಖದ, ಭೋಗದ, ಸೌಂದರ್ಯದ ವಸ್ತುವಾಗಿ ಕಾಣುವಂತಹುದಲ್ಲ. ತಮ್ಮ ಪತ್ನಿಯ ಬಗ್ಗೆ ಅವರಿಗಿರುವ ಪ್ರೀತಿಗೆ ಮಿಗಿಲಾದ ಗೌರವಭಾವನೆ, ಪೂಜ್ಯ ಭಾವನೆಯೆನ್ನಬಹುದು. ಇದಕ್ಕೆ ಪೂರಕವಾಗಿ ಅವರ ಮತ್ತೊಂದು ಕವಿತೆ 'ಸ್ವರ್ಗ ದ್ವಾರದಿ ಯಕ್ಷ ಪ್ರಶ್ನೆ'ಯಲ್ಲಿ ಸ್ವರ್ಗದಲ್ಲಿ ತನ್ನ ಹೆಂಡತಿಯನ್ನು ಭೇಟಿ ಮಾಡಲು ಹೋಗಿದ್ದ ಸಂದರ್ಭ ನಿದರ್ಶನವಾಗಬಹುದು.

. . . .
ಕೈ ಮುಗಿದು,
ನಿಜಕಾಗಿ ನಾಚಿಕೆಯನಾಚೆ ತಳ್ಳಿ,
ನಾನೆಂದೆ ತೊದಲಿ ತೊದಲಿ:
"ನನ್ನನುದ್ಧರಿಸೆ
ಶ್ರೀಗುರು ಕೃಪೆಯೆ ಮೆಯ್ವೆತ್ತು ಬಂದಿರುವ
ಶ್ರೀ ಮಾಹಾಮಾತೆಯಡಿದಾವರೆಯೆ ಆಗಿರುವ
ಸತಿಯ ಒಲವಿನ ಸೆರೆಯ ನಾನು . .
ನಾ . .ನು. ನಾ . . ನು. ನಾ . . ನು.
ಹೇ. . . . .ಮೀ . . . . ಗಂ . . . . ಡ!" [೧೬]

'. . ನಾನು ಕಣೇ ನಿನ್ನ ಗಂಡ ಪುಟ್ಟಪ್ಪ ಬಂದಿರುವುದು' ಎಂಬಲ್ಲಿ ಗಂಡನಿಗೆ ಹೆಂಡತಿಯಲ್ಲಿ ಇರುವ ಪ್ರೀತಿ ಎಂದರೂ, ಆಕೆ ಸರ್ಗದಲ್ಲೇ ಇರುವಂತಾ ಪುಣ್ಯಾತ್ಮಳು ಎಂಬ ಧನ್ಯ ಭಾವದಲ್ಲಿ ಈ ಮಾತುಗಳು ಬರುತ್ತವೆ. ಗಂಡ – ಹೆಂಡತಿ ನಡುವೆ ಯಾವ ಪ್ರತಿಷ್ಠೆ, ಪರಾಕ್ರಮಗಳು ಮುಖ್ಯವೆನಿಸವು. ಅಲ್ಲಿ ಏನಿದ್ದರೂ ಪ್ರೀತಿ ಹಾಗೂ ನಿಷ್ಕಪಟ ವ್ಯಕ್ತಿತ್ವ ಎಂಬುದನ್ನು ಈ ಕವಿತೆಯಲ್ಲಿ ಕುವೆಂಪು ನಿರೂಪಿಸಿದ್ದಾರೆ.

ಇಂತಹ ಗೌರವ ಭಾವನೆಗೆ ನಿದರ್ಶನವಾಗಿ 'ಅನುತ್ತರಾ' ಎಂಬ ಶೀರ್ಷಿಕೆಯ ಕವಿತೆಯನ್ನು ಕಾಣಬಹುದು. ಇಲ್ಲಿ ಪತ್ನಿ – ದೇವಿಯರನ್ನು ಏಕೀಭವಿಸುವ ಪ್ರಯತ್ನವಿದೆ.

. . . .
ಯಾರಿವಳು ಮಲಗಿರುವಳು?
ನನ್ನ ಬಲ ತೋಳೆ ತಲೆದಿಂಬಾಗಿ
ತನ್ನ ಬಲತೋಳಿನಿಂದೆನ್ನನಪ್ಪಿ
ಯಾರಿವಳು ಮಲಗಿರುವಳು?
ಉತ್ತರವೇ ವಾಣಿ:
. . . .
ಸರ್ವ ಮಂಗಲ ಮಾಂಗಲ್ಯೆ
ಶಿವೆ ಸರ್ವಾರ್ಥ ಸಾಧಕೇ
ಶರಣ್ಯೆ ತ್ರ್ಯಂಬಕೇ ಗೌರಿ
ನಾರಾಯಣಿ ನಮೋಸ್ತುತೆ ॥ [೧೭]

ಇಲ್ಲಿ ಕವಿಯ ವೈಚಾರಿಕತೆಗಿಂತಲೂ ಅವರ ಭಾವನಾತ್ಮಕವಾದ ಆಧ್ಯಾತ್ಮಿಕ ಧೋರಣೆಯೇ ಮೈವೆತ್ತು ನಿಂತಿದೆ. ಕವಿಯ ಪ್ರಖರ ಆಲೋಚನೆಗಳು ತಲೆ ತಪ್ಪಿಸಿಕೊಂಡು ಧನ್ಯತೆಯ ಭಾವ ವ್ಯಕ್ತವಾಗಿದೆ.

ಇದೇ ಭಾವನೆಯಲ್ಲಿ ಮೂಡಿಬಂದಿರುವ ಕವಿತೆ 'ರಸ ಋಷಿ ಪರಿರಂಭಿಸಿ'. ಈ ಕವಿತೆಯಲ್ಲಿ ಹೆಂಡತಿಯಿಂದ ತಾನು ಭೋಗಿಸಿಯೂ ತಪಸ್ವಿಯಾದ ಸ್ಥಿತಿಯನ್ನು ಹೇಳುತ್ತಾರೆ. 'ಯಾರಿದು?' ಕವಿತೆಯಲ್ಲೂ ಅಲೌಕಿಕದ ಹಿನ್ನೆಲೆಯಲ್ಲಿ ಶಕ್ತಿ ರೂಪಿಣಿಯಾಗಿ ಕಂಡಿದ್ದಾರೆ.

ಇದೇ ರೀತಿಯ 'ಸೌಭಾಗ್ಯವತಿಗೆ', 'ಮಂಚಯೋಗಿ', ' ಕುಂಕುಮ ರಕ್ಷೆ', 'ಸುಖ ಸಮರ್ಪಣೆ', 'ಕೃಪೆ ಸಾಕ್ಷಾತ್ಕಾರ' ಕವಿತೆಗಳಲ್ಲಿ ತನ್ನ ಹೆಂಡತಿಯನ್ನು ಅಲೌಕಿಕ ನೆಲೆಯಲ್ಲಿಯೆ ಗ್ರಹಿಸಿದ್ದಾರೆ.. ದಾಂಪತ್ಯದ ಹಂತ ದಾಟಿ (ಲೌಕಿಕದ ಹಂತ ದಾಟಿ) ಆಧ್ಯಾತ್ಮದ ಮಹಾ ಚಿಂತನೆಯಲ್ಲಿ ಪರಿಪಕ್ವತೆ ಹೊಂದಿದ ಕವಿಚೇತನ ಈ ರೀತಿ ಚಿಂತಿಸಲು ಸಾಧ್ಯ. ಈ ಎಲ್ಲ ಕವಿತೆಗಳಲ್ಲಿ ಪತ್ನಿಯಿಂದ ಪಡೆದ ಉಪಕಾರಕ್ಕೆ ಕೃತಜ್ಞತೆ ಇದೆ. ಅವಳ ತ್ಯಾಗಜೀವನಕ್ಕೆ ಗೌರವಾರ್ಪಣೆ ಇದೆ.

ಅನುತ್ತರಾ ಕೃತಿಯನ್ನು ಕವಿ ಪ್ರೇಮೋಪನಿಷತ್ತು ಎಂದು ಕರೆದಿರುವುದರಲ್ಲೆ ಒಂದು ವಿಶೇಷತೆ ಇದೆ. ಪ್ರೇಮವನ್ನು ಉಪನಿಷತ್ತೆಂದು ಭಾವಿಸಿ, ತನ್ನ ಅನುರಕ್ತ

ಪತ್ನಿಯಲ್ಲಿ ಆಧ್ಯಾತ್ಮದ ರೂಪ, ಶಕ್ತಿ, ಚೈತನ್ಯಗಳನ್ನು ಕಂಡು, ಆಕೆಯಿಂದ ತಾನು ಪೂರ್ಣನಾದೆನೆಂದು ಕವಿ ಧನ್ಯತೆಯಿಂದ ಸ್ಮರಿಸುವುದರಲ್ಲೆ ಅವರ ಪತ್ನಿ ಕೇವಲ ಸಂಸಾರದ ಸಹಧರ್ಮಿಣಿ ಮಾತ್ರವಲ್ಲ ಆತ್ಮೋನ್ನತಿಯ ಪ್ರತೀಕ ಎಂಬುದನ್ನು ನಿರೂಪಿಸುತ್ತಾರೆ.

ಬೇಂದ್ರೆಯವರಿಗೆ 'ತಾಯಿ' ಅವರ ಬರಹದಲ್ಲಿ ಹಾಸುಹೊಕ್ಕಾದಂತೆ, ಇಲ್ಲಿ ಕುವೆಂಪುಗೆ ಪತ್ನಿ ಹಾಸುಹೊಕ್ಕಾಗಿದ್ದಾಳೆ. ತಾಯಿಯನ್ನು ದೇವತೆ, ಶಕ್ತಿ, ಚೈತನ್ಯರೂಪಿಣಿ . . . ಹೀಗೆಲ್ಲ ಪರಿಭಾವಿಸುವುದು ಸಾಮಾನ್ಯವಾದದ್ದು. ಆದರೆ ಅದೇ ಭಾವನೆಯಲ್ಲಿ ಪತ್ನಿಯನ್ನು ಪರಿಭಾವಿಸಿರುವುದು ಕುವೆಂಪುರವರ ದೃಷ್ಟಿ. ಅದು ಅವರ ದಾಂಪತ್ಯದ ಹಿರಿಮೆ, ಆದರ್ಶಗಳನ್ನು ಬಿಂಬಿಸುವಂತಹದೂ ಹೌದು.

ಕುವೆಂಪುರವರ ಪ್ರಣಯ ಕವಿತೆಗಳ ಲಕ್ಷಣ ಮತ್ತು ಪರಿಮಿತಿಗಳೆರಡನ್ನೂ ಗುರುತಿಸುವ ಮಹತ್ವದ ಮಾತುಗಳನ್ನು ಜಿ.ಎಸ್. ಶಿವರುದ್ರಪ್ಪನವರು 'ಚಂದನ'ದಲ್ಲಿ ಹೀಗೆ ಹೇಳಿದ್ದಾರೆ: "ಕುವೆಂಪು ಅವರು ಮೊದಮೊದಲು ಸನ್ಯಾಸ ಜೀವನಕ್ಕೆ ಹಂಬಲಿಸಿ, ಆನಂತರ ದಾಂಪತ್ಯ ಜೀವನವನ್ನು ಒಪ್ಪಿಕೊಂಡ ಕಾರಣದಿಂದಲೊ ಏನೋ ಅವರ ಪ್ರಣಯ ಕವನಗಳು ಸಾಕಷ್ಟು ತೀವ್ರವೂ, ಸಹಜವೂ ಆಗದೆ, ಗಂಡು ಹೆಣ್ಣಿನ ಸಂಬಂಧವನ್ನು ಆದರ್ಶೀಕರಿಸುವ ಮನುಷ್ಯ ಸಹಜವಾದ ಭೋಗವನ್ನು ಆ ದೈವಲೀಲೆಯ ಒಂದು ಭಾಗವೆಂದು ಸಂತೈಸಿಕೊಳ್ಳುವ ಆಧ್ಯಾತ್ಮದ ಮುಸುಕಿನೊಳಗೆ ಆಶ್ರಯವನ್ನು ಪಡೆಯುತ್ತವೆ. ಪ್ರಕೃತಿಯನ್ನು ಕುರಿತ ಕವನಗಳಂತೆಯೇ ಅವರ ಎಷ್ಟೋ ಪ್ರಣಯ ಕವನಗಳೂ ದೊಡ್ಡ ದೊಡ್ಡ ತತ್ವಗಳನ್ನು ಪ್ರತಿಪಾದಿಸುವ ಮಾಧ್ಯಮಗಳಾಗುತ್ತವೆಯೇ ಹೊರತು, ನಿಸ್ಸಂಕೋಚವಾದ ಮತ್ತು ಸಹಜವಾದ ಮಾನವ ಭಾವಗಳ ತೀವ್ರಾಭಿವ್ಯಕ್ತಿಯಾಗುವುದಿಲ್ಲ. ಕವಿಗೆ ಈ ಸಂಸಾರವೇ ಪ್ರಜೆ; ಸಹಧರ್ಮಿಣಿ ಜಗನ್ಮಾತೆಯ ಒಂದು ಅಂಶ, ಸಂಸಾರ ಒಂದು ತಪೋವನ, ಭೋಗವೇನಿದ್ದರೂ ಆ ಶಿವ – ಶಿವಾಣಿಯರ ಲೀಲೆ ಎಂಬಂಥ ಅನಗತ್ಯವಾದ ಆದರ್ಶದ ನಿಲುವಿಗೇರುವುದರ ಮೂಲಕ, ಅವರ ಪ್ರಣಯ ಕವಿತೆಗಳು ತೀರ ವೈಯಕ್ತಿಕವೂ, ಪರಿಮಿತವೂ ಆಗಿ, ಹೆಚ್ಚೆಂದರೆ ವಿಸ್ಮಯಕ್ಕೆ ಪಾತ್ರವಾಗುತ್ತವೆ"[೧೮.]

ಕುವೆಂಪು ಮಡದಿಯನ್ನು ಮಡದಿಯಾಗಿ ಕಾಣುವುದಕ್ಕಿಂತ ಭಿನ್ನವಾಗಿ, ಅಲೌಕಿಕ ಆವರಣದಲ್ಲಿ ಕಂಡಿದ್ದಾರೆ. ಈ ಎತ್ತರದಲ್ಲಿ ದರ್ಶಿಸುವ ಮನಸ್ಥಿತಿಗೆ ಶ್ರೀ ಸಾಮಾನ್ಯರು ದರ್ಶಿಸಲು ಸಾಧ್ಯವೇ? ಕುವೆಂಪು ಕೈಹಿಡಿದ ಹೆಣ್ಣಿನ ಮನೋಧರ್ಮ ಎಲ್ಲ ಹೆಣ್ಣುಗಳಲ್ಲಿ ನಿರೀಕ್ಷಿಸಲು ಸಾಧ್ಯವೇ? ಸುಖ ಸೌಲಭ್ಯಗಳು ಎದುರಾದವರೆಲ್ಲರಲ್ಲಿಯೂ ಇಂತಹ ಆಧ್ಯಾತ್ಮಿಕ ನಿಲುವು ತಾಳಲು ಸಾಧ್ಯವೇ? ಇಂತಹ ಹತ್ತಾರು ಪ್ರಶ್ನೆಗಳಿಗೆ ಈ ಕವಿತೆಗಳು ಅವಕಾಶ ಮಾಡಿಕೊಡುತ್ತವೆ.

ನೂರು ದೇವರನ್ನೆಲ್ಲಾ ನೂಕಾಚೆ ದೂರ
ಭಾರತಾಂಬೆಯೇ ದೇವಿ ನಮಗಿಂದು ಪೂಜಿಸುವ ಬಾರ!

ಎಂದಾಗಲೀ,

ಭರತ ಭೂಮಿ ನನ್ನ ತಾಯಿ
ನನ್ನ ಪೊರೆವ ತೊಟ್ಟಿಲು
ಜೀವನವನೆ ದೇವಿಗೆರೆವೆ
ಬಿಡುತೆ ಗುಡಿಯ ಕಟ್ಟಲು-

ಈ ಪದ್ಯಗಳ ಹಿನ್ನೆಲೆಯಲ್ಲಿ ಎರಡು ಅಂಶಗಳು ಎದುರಾಗುತ್ತವೆ. ೧. ಎಲ್ಲ ದೇವರುಗಳನ್ನು ನಿರಾಕರಿಸುತ್ತಾ 'ಸ್ತ್ರೀ' ದೇವತೆಯಾಗಿ ನಿಲ್ಲುವ ಪರಿ. ೨. ಸನಾತನ ಮಾನವ ಕಲ್ಪಿತ ದೇವರನ್ನು ಅಲ್ಲಗೆಳೆಯುತ್ತಾ ಮತ್ತೊಂದು ರೂಪ ಕೊಡುವ ಯತ್ನ ಕುವೆಂಪುರವರಲ್ಲಿದೆ. ಮುಖ್ಯವಾದ ಮಾತೆಂದರೆ ಇಂತಹ ಕವಿತೆಗಳು ಕೇವಲ ಸಾಹಿತ್ಯದ ಗಂಭೀರ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ರಚಿತವಾಗಿರಲಿಲ್ಲ. ಬದಲಾಗಿ ಸಮುದಾಯದ ಜಾಗೃತಿಯನ್ನು ತನ್ನ ಆಶಯವಾಗಿಟ್ಟುಕೊಂಡವು.

ಸೌಂದರ್ಯವನ್ನು ಹಾಗೂ ಸ್ವಾತಂತ್ರ್ಯವನ್ನು ದೇವತೆಯೆಂದು ಭಾವಿಸಿರುವ ಕವಿ ಕುವೆಂಪು ಇವೆರಡರ ನಡುವೆ ಪರಸ್ಪರ ವಿರೋಧವನ್ನು ಗುರುತಿಸಿದ್ದಾರೆ. ಜೊತೆಗೆ ಎರಡನ್ನು ಸ್ವೀಕರಿಸಿದ್ದಾರೆ.

ಸೌಂದರ್ಯ ದೇವತೆಗಳ ಪೂಜೆಯನ್ನು ಮಾಡಿದರೆ
ಸ್ವಾತಂತ್ರ್ಯ ದೇವತೆಗೆ ಮುನಿಸುಬಹುದು
ಸ್ವಾತಂತ್ರ್ಯ ದೇವತೆಯ ಪೂಜೆಯನ್ನು ಮಾಡಿದರೆ
ಸೌಂದರ್ಯ ದೇವತೆಯು ಎದೆಯಿರಿವಳು . . . .
ಬಗೆಗೆ ಸತ್ಯವು ಬೇಕು
ಎದೆಗೆ ಸೌಂದರ್ಯ ಬೇಕು
ನನಗೆರಡು ಬೇಕು [೧೯]

"ಸೌಂದರ್ಯ ಮತ್ತು ಸ್ವಾತಂತ್ರ್ಯಗಳ ನಡುವೆ ಪರಸ್ಪರ ವಿರೋಧವನ್ನು ಗುರುತಿಸುವ ಈ ಧೋರಣೆ ಕುತೂಹಲಕಾರಿಯಾಗಿದೆ. ಕಲಾ ಸೌಂದರ್ಯಕ್ಕೆ ಧಕ್ಕೆ ಬಾರದಂತೆ, ಸ್ವಾತಂತ್ರ್ಯಪರವಾದ ಕವಿತೆಗಳನ್ನು ರಚಿಸುವ ಸಾಧ್ಯತೆಯಂತೂ ಇತ್ತು. ಪ್ರಾಯಶಃ ಅಂಥ ಕವಿತೆಗಳು ತನ್ನಿತರ ಕವಿತೆಗಳಿಗಿಂತ ಅಸುಂದರವೆಂಬ ನಿಲುವು ಕವಿಗಿರುವಂತೆ ತೋರುತ್ತದೆ. ಅದೇನೇ ಇರಲಿ, ಈ ಕೆಲವು ವರ್ಷಗಳಲ್ಲಿ ಕವಿಯ ಮನಸ್ಸನ್ನು ಸ್ವಾತಂತ್ರ್ಯ ದಾಹವು ಆವರಿಸಿತ್ತೆಂಬುದರಲ್ಲಿ, ಅವರ ಕಲ್ಕತ್ತಾ ಯಾತ್ರೆಯು ಅಂಥ ಭಾವನೆಗಳನ್ನು ತೀವ್ರಗೊಳಿಸಿತ್ತೆಂಬುದರಲ್ಲಿ ಅನುಮಾನವಿಲ್ಲ"[೨೦]

ತನ್ನ ಬಾಳಸಂಗಾತಿಯಲ್ಲೂ ದೇವಿಯನ್ನು ದರ್ಶಿಸಿರುವ ಕುವೆಂಪು, ಸಾಹಿತ್ಯಾಸಕ್ತರು ಅಭಿನಂದಿಸಿ ಅರ್ಪಿಸಿದ 'ನಾಟ್ಯಸರಸ್ವತಿಯ' ಸುಂದರ ವಿಗ್ರಹದಲ್ಲಿ ಕವಿ ತಾಯಿಯನ್ನು, ದೇವಿಯನ್ನು ದರ್ಶಿಸಿ, ಶಿಲ್ಪಿಗೆ ಧನ್ಯತೆ ಅರ್ಪಿಸಿದ್ದಾರೆ.

ನರ್ತಿಸು ತಾಯೆ,
ಅಜ ಜಾಯೆ,
ಮಯ ಮಸ್ತಕ ನೀರೇಜದಲಿ! [೨೧]

ಕುವೆಂಪು ತಮ್ಮ ೧೯೫೫ರ ಸಂಕ್ರಾಂತಿಯಂದು ಕಾರು ಕೊಂಡು ಪೂಜೆ ಮಾಡಿದಾಗ ಅದನ್ನು ಹೆಣ್ಣೆಂದು, ಜನನಿಯೆಂದು ಭಾವಿಸಿರುವುದು ಅವರ ಭಾವಜೀವನ ಧೋರಣೆಗೆ ನಿದರ್ಶನವಾಗಿದೆ.

ಸ್ವಾಗತಂ ಸುಸ್ವಾಗತಂ
ಚಕ್ರಚರಣೆಗೆ ಸ್ವಾಗತಂ.
. . . .
ನಮಸ್ಕರಿಸಿ ಸಮರ್ಪಿಪೆನ್
ಚಕ್ರಚರಣೆ, ಜನನಿ. ಇದೆಕೊ
ತವ ಪವಿತ್ರ ಚತುಷ್ಪದರೆ. [೨೨]

ಇಲ್ಲೆಲ್ಲ ಕವಿಯ ಭಾವುಕತೆ ವಿಜೃಂಭಿಸಿ ವಾಸ್ತವಿಕತೆ ಹಿಂಜರಿದಿದೆ. ಕಾರು ಬಳಕೆಗೆ ಬಂದ ಆರಂಭದಲ್ಲಿ ಸಾಮಾನ್ಯರಲ್ಲಿ ಇಂತಹ ಪ್ರಜ್ಞೆ ಸಹಜ. ಕುವೆಂಪೂ ಕೂಡ ಇದಕ್ಕೆ ಹೊರತಾಗಿಲ್ಲ.

ದೇವಿಯ ಮತ್ತೊಂದು ಉಗ್ರರೂಪ ಕಾಳಿ. ಅವಳ ರುದ್ರ ಭದ್ರ ಗಂಭೀರದ ಶೈಲಿಯಿಂದ ಕಾಳಿಯ ಆಗಮನ ತೆರೆದುಕೊಳ್ಳುತ್ತದೆ. 'ಕಾಳಿ ಬರುವಳು' ಎಂಬ ಕವಿತೆಯಲ್ಲಿ:

ನೋಡು ಬರುತಲಿರುವಳದೋ
ರುದ್ರಭದ್ರಕಾಳಿಯು!
ದೇವಿ, ಚಂಡಿ, ಚಾಮುಂಡಿ
ರಕ್ತರುಂಡ ಮಾಲಿಯು.
. . . .
ವಿಜಯ ರಣೋನ್ಮತ್ತೆಯಾಗಿ
ಬರುವಳಾದಿ ಮಾಯೆಯು;
ಮಕ್ಕಳೆದೆಯ ಅಳಲ ನೀಗಿ
ಬರುವಳದೋ ತಾಯಿಯು! [೨೩]

ತನ್ನ ಮಕ್ಕಳು ನೋವಿನಲ್ಲಿರುವುದ ಕಂಡ ತಾಯಿ ಕಾಳಿಯಾಗಿ ಬರುವಳು, ಮಕ್ಕಳ ಕಾಯುವಳು ಎಂಬುದು ಕವಿಯ ನಂಬಿಕೆ.

"ಭರತವರ್ಷದ ವಿಷಯದಲ್ಲಿಯೂ, ಕನ್ನಡ ನಾಡಿನ ವಿಷಯದಲ್ಲಿಯೂ ಇವರು ಉಜ್ವಲವಾದ ಭಕ್ತಿಯನ್ನು ಮೆರೆದಿದ್ದಾರೆ. ಹಿಂದಿನ ವೈಭವ, ಇಂದಿನ ಅವನತಿ, ನಾಡಿನ ಆಶೋತ್ತರಗಳು ಇವನ್ನು ಕುರಿತು ತಮ್ಮ ಅನೇಕಾನೇಕ ಕವನಗಳನ್ನು ಹಾಡಿದ್ದಾರೆ. ಯುವಕರಲ್ಲಿ ಹೊಸ ಸ್ಫೂರ್ತಿಯನ್ನು ತುಂಬಿದ್ದಾರೆ. 'ಪಾಂಚಜನ್ಯ'ವನ್ನು ಮೊಳಗಿಸಿದ್ದಾರೆ. 'ಕ್ರಾಂತಿ ಕಹಳೆ'ಯನ್ನು ಊದಿದ್ದಾರೆ".[೨೪]

ಸಂಸಾರವನ್ನು ಹೇಯವೆಂದೂ, ಅಸುಖವೆಂದೂ ಟೀಕಿಸುವುದುಂಟು. ಆದರೆ ಸಂಸಾರದಲ್ಲಿಯೂ ಒಂದು ಮಹದರ್ಥ ಉಂಟು. ಒಲಿದ ದಂಪತಿಗಳು ಪ್ರೇಮದಿಂದ

ಕೂಡಿ ಬದುಕಿದರೆ, ಅವರು ಸುಸಂಸ್ಕೃತರಾಗುತ್ತಾರೆ. ಕಾಮದ ಕಿಚ್ಚು ಕಡೆಗೆ ಪ್ರೇಮದ ಜ್ಯೋತಿಯಾಗುತ್ತದೆ. ಕವಿ ಪ್ರತಿಭೆಗೆ ಗೋಚರಿಸುವ ದೃಶ್ಯವಿದು. ಇದನ್ನು 'ಹೆಣ್ಣು ಗಂಡು' ಕವಿತೆಯಲ್ಲಿ ಕಾಣಿಸಿದ್ದಾರೆ.

ತಾಯ ಚರಣ ಕಿರಣವೊಂದು
ಕೃಪೆಯೊಳ್ಳೆನ್ನ ಪೊರೆಯಲೆಂದು
ನಿನ್ನ ರೂಪದಿಂದ ಬಂದು
ಸಲಹುತಿರುವುದೆನ್ನನಿಂದು! [೨೫]

ಪಕ್ವ ಪ್ರೇಮದ ಪ್ರಫುಲ್ಲ ಭಾವನೆ ಇದು. ಪ್ರಜ್ಞೆಯ ಪರಿವರ್ತನೆಯ ನಿರ್ಮಲ ಆದರ್ಶವಿಲ್ಲಿ ಪ್ರಕಟವಾಗಿದೆ.

ಜಗದೀಶ್ವರನೇ ಒಂದು ರೀತಿಯ ಸಂಸಾರಿಯಲ್ಲವೇ? ಕಾಣುವ ಕಣ್ಣಿದ್ದರೆ, ಜಗತ್ತಿನ ಸಂಸಾರವೂ ಅರ್ಥಪೂರ್ಣ. ಮಕ್ಕಳನ್ನು ಸಾಕಲು ತಾಯಿ ಪಡುವ ಪಾಡೆಲ್ಲ ಭಗವಂತನ ಆರಾಧನೆ. ಮಕ್ಕಳ ಸೇವೆಯನ್ನು ಕವಿ ಪ್ರತಿಭೆ ಕಾಣುವ ರೀತಿ ಇದು:

ಹಸುಳೆಯನು ಮೀಯಿಸಲು ಹರನಿಗಭಿಷೇಕವದು,
ಶಿಶುವಿಗೂಡಿಸೆ ಶಿವಗೆ ನೈವೇದ್ಯವೈ! [೨೬]

ಈ ದೃಷ್ಟಿಯಿಂದ ಜೀವನವನ್ನು ಪರಿಭಾವಿಸಿದಾಗ ಸಂಸಾರ ತುಂಬಾ ಅರ್ಥಪೂರ್ಣ, ಮಹಾ ಯೋಗ ಎನಿಸುತ್ತದೆ. ಇದನ್ನು ಕುವೆಂಪು ಸಾಧಿಸಿ ಕಂಡುಕೊಂಡ ಜೀವನ ಸತ್ಯವೂ ಹೌದು.

"ಸಮಗ್ರ ವಿಶ್ವವೇ ಈ ಮಾತೃಭಗವತಿಯ ಪ್ರಸನ್ನ ಭೂಮಿ' ಎಂಬ ತಾತ್ವಿಕ ನಿಷ್ಕರ್ಷೆ ಬೇಂದ್ರೆ ದರ್ಶನ ಸಾಧಿಸಿದ ಮತ್ತೊಂದು ವೈಶಿಷ್ಟ್ಯ. ಆಗಮಿಕ ಶಕ್ತಿ ದರ್ಶನ ನಿರೂಪಿಸುವ ಮಾತೃ ತತ್ವವನ್ನು ಬೇಂದ್ರೆ ದರ್ಶನ ಅರಗಿಸಿಕೊಂಡದ್ದನ್ನು ನಿಖರವಾಗಿ ಗುರುತಿಸಬಹುದು."[೨೭]

ತುತ್ತು ಮುತ್ತನು ನೀಡು ಸರಸತಿ ಲಕುಮಿ ಕಾಳಿಕೆ ಅಂಬೆ
ಪಾದ ಪದ್ಮಂಗಳಿಗೆ ಜೀವದ ಹಂಸನಾ ಬಲಗೊಂಬೆ. [೨೮]

ಎಂಬಲ್ಲಿ ಅರವಿಂದಾಶ್ರಮದ ತಾಯಿ ಅವರಲ್ಲಿ ಜಗನ್ಮಾತೆಯ ವಿರಾಟ್‌ಸತ್ವವನ್ನು ಅಭಿಗ್ರಹಿಸಿ 'ಓ ತಾಯಿ ಮಾಯಿ'ಯಲ್ಲಿ ಆದಿಜ್ಞಾನ ಶಕ್ತಿಯು ಸಕಲ ಸೌಂದರ್ಯದ, ರಸದ, ವಾತ್ಸಲ್ಯದ ಮೂಲ ಸ್ತೋತ್ರವಾದ ಭಗವತಿ ಮಾತೆಯನ್ನು, ಅವಳ ಅಮಿತ ತೇಜಸ್ಸನ್ನು ಕವಿ ಬೇಂದ್ರೆ ಅನನ್ಯವೆನ್ನುವಂತೆ ಚಿತ್ರಿಸಿದ್ದಾರೆ.

ಓ ತಾಯಿ ಬಂದೆ, ಮಾಮಾಯಿಅಂದೆ, ಈ ಬಾಯಿ ತುಂಬು ಒಂದೇ;
ಮಕರಂದ ಪಾನದಾ ಝುರೀ
ತೆರಿತೆರೀ ನಿನ್ನ ತಾವರೀ
ಬಂದಾದ ತುಂಬಿಯಾ ಮರೀ. [೨೯]

ಬಂಗಾಲದಲ್ಲಿ ದುರ್ಗಾಮಾತೆ ಪೂಜೆಗೆ ಅತ್ಯಂತ ಮಹತ್ವವಿದೆ. ಆದುದರಿಂದ ಶ್ರೀ ಅರವಿಂದರಿಗೆ ದುರ್ಗಾಸ್ತೋತ್ರ ಪ್ರಿಯ. ಬೇಂದ್ರೆಯವರು ಧಾರವಾಡದ ದುರ್ಗಾಮಾತೆಯನ್ನು ಧಾರವಾಡದ ತಾಯಿ ಎಂದು ನಂಬಲು ಇದೇ ಕಾರಣ.

ಪಾರ್ವತಿಯನ್ನು ವಿಶ್ವಮಾತೆಯಾಗಿ ಕಂಡಿರುವ ಕವಿತೆ 'ಪಾರ್ವತಿ ನೀನೇ ಸಲಹು'. ಅದರಲ್ಲಿ ಕನ್ನಡ ನಾಡು ಹಾಗೂ ಭಾರತದ ಮೇಲಿನ ಭಕ್ತಿ ಅಡಗಿದೆ. ಅದರಲ್ಲಿ ನಾಡು, ರಾಷ್ಟ್ರಕ್ಕೆ ಒಳಿತಾಗಲೆಂಬ ಪ್ರಾರ್ಥನೆಯಿದೆ.

ಈಶ್ವರ ನಿರ್ಮಿಸಿದೀ ಸೃಷ್ಟಿಯನು
ಪಾರ್ವತಿ! ನೀನೇ ಸಲಹು.
ನಿನ್ನದೆ ಈ ನೆಲ, ನಿನ್ನದೆ ಈ ಜಲ
ನಿನ್ನದೆ ಕನ್ನಡ ಗೆಲಹು. . .[೩೦]

ಈಶ್ವರ ಎನ್ನುವ ಶಬ್ದ ಈ ಸ್ವರ ಎಂಬ ಅರ್ಥಕ್ಕೂ ಅವಕಾಶ ಮಾಡಿಕೊಡುತ್ತದೆ. ಲೌಕಿಕ ನೆಲೆಯಲ್ಲಿ ಸೃಷ್ಟಿಕರ್ತ ಪುರುಷನಾದರೂ ಪೊರೆದು ಪಾಲಿಸುವವಳು ಹೆಣ್ಣು – ತಾಯಿ. ಈ ಕಲ್ಪನೆಯನ್ನು ದೈವೀ ನೆಲೆಗೆ ಆರೋಪಿಸಿ ಜಗತ್ತನ್ನೇ ಕಾಪಾಡುವ ಶಿವೆಯು ಈ ಜಲ, ನೆಲ, ನುಡಿಯನ್ನು ಕಾಪಾಡಲಿ ಎಂಬ ಬಯಕೆಯನ್ನು ಕವಿ ಪ್ರಕಟಿಸಿದ್ದಾರೆ. ಹೀಗೆ ಬೇಂದ್ರೆಯವರ ಬಹಳಷ್ಟು ಕವಿತೆಗಳಲ್ಲಿ ಮಾತೃತ್ವದ ಪರಿಕಲ್ಪನೆ ಅವರ ಅಂತರಾಳದಿಂದ ವಿರಾಟ್ ವರ್ಣನೆಯಲ್ಲಿ ಮೂಡಿಬಂದಿರುವುದನ್ನು ಕಾಣಬಹುದು.

ಭೂಮಿಯನ್ನು ಹೆಣ್ಣಾಗಿ, ತಾಯಾಗಿ ಕಂಡ ಗ್ರಹಿಕೆ ಹಿಂದಿನಿಂದಲೂ ಇದೆ. ಆದರೆ ಭೂಮಿಯ ಮೇಲೆಯೇ ಇರುವ ಹೂವು, ಕಾಯಿ, ಹಣ್ಣು ತುಂಬಿದ ಬನದಾಗ ತನ್ನ ಒಡಲಿನಿಂದ ತಾನೇ ಮೈತಳೆದಂತೆ ನಿಂತಿರುವ ಬೇಂದ್ರೆಯವರ 'ಚಿಗರಿಗಂಗಳ ಚೆಲುವೆ' ಅಪರೂಪದವಳು. ಇಲ್ಲಿ ಬೇಂದ್ರೆಯವರು ಪ್ರಕೃತಿ ಶೋಷಣೆ ವಿರುದ್ಧವಾಗಿ ಧ್ವನಿ ಎತ್ತಿರುವುದು ಕಂಡುಬರುತ್ತದೆ. ಮನುಷ್ಯನಿಂದಲೇ ಭೂಮಿಗೆ ಒದಗಿರುವ ಸ್ಥಿತಿಯನ್ನು ಪರಿಣಾಮಕಾರಿಯಾಗಿ ವಿಶ್ಲೇಷಿಸಿದ್ದಾರೆ.

ಚಿಗರಿಗಂಗಳ ಚೆಲುವಿ ಚೆದುರಿ ನಿಂತಾಳ ನೋಡೋ ಬೆದರಿ ನಿಂತಾಳ
ಹೊಳಿ ಹಳ್ಳ ತೊರೆದಾವೋ
ಗೆಣೆಹಕ್ಕಿ ಬೆದರಾವೋ
. . . . :
ತನ್ನತಾ ಸುತ್ತ್ಯಾಳೊ
ಹೊತ್ತಿನ ಬೆನ್ನ ಹತ್ತ್ಯಾಳೊ
ತಿಂಗಳಿ ಬಗಲಾಗೆತ್ತ್ಯಾಳೊ
ಗೆಣೆಯಾ ಎತ್ತ್ಯಾಳೊ
ಉಕ್ಕುಕ್ಕುವ ದುಃಖ ಒಳಗೊತ್ತ್ಯಾಳೊ
ನಿಂತ ನೆಲವೆಂದು
ಕಡಿಲಾಕೊ
ಹಡಿಲಾಕೊ
ಬಡಿಲಾಕೊ

ಒಡವ್ಯಲ್ಲೋ ಮಗನೆ ಉಸಿರಿದ್ದೊಡಲಂತಾಳೊ
॥ ಚಿಗರಿಗಂಗಳ . . ॥ [೩೧]

'ಭೂಮಿ ಚಿಗರಿಗಂಗಳ ಚೆಲುವಿ. ಭೂಮಿ ಮತ್ತು ಚೆಲುವಿ. ಗ್ರಹದ ಬಗೆಗಿನ ವಿವರಗಳನ್ನು ನೀಡುತ್ತಲೇ ಅವಳೇ ಹೆಣ್ಣು/ತಾಯಿ ಎಂದು ವಿವರಿಸಿರುವ ರೀತಿಯು ಕೊನೆಗೆ, ಮೂಡುವ 'ಅವಳು ಒಡವೆಯಲ್ಲ, ಉಸಿರಿರುವ ಒಡಲು' ಎಂಬ ತಿಳುವಳಿಕೆಗೆ ಅನುಗುಣವಾಗಿಯೇ ಇದೆ. ಈ ಒಡಲನ್ನು ಕಡಿಯುವುದು ಏಕೆ? ಒಡೆಯುವುದು ಏಕೆ? ಎಂಬ ಪ್ರಶ್ನೆಗಳ ಜೊತೆಗೆ, 'ಹಡಿಲ್ಯಾಕ' ಎಂಬ ಮಾತು ಭೂಮಿಯನ್ನು ಆಸ್ತಿಯೆಂದು ಪಡೆಯುವ ಅಗತ್ಯವೇನಿದೆ ಎಂಬ ಸೂಚನೆ ಕೊಡುವಂತಿದೆ'[೩೨] ಎಂಬ ವಿಮರ್ಶಕರ ಮಾತು ಸಹಜವಾದುದಾಗಿದೆ.

ಭೂಮಿ ಚಿಗರಿಗಂಗಳ ಚೆಲುವಿ ಅವಳು ಒಡವೆಯಲ್ಲ, ಉಸಿರಿರುವ ಒಡಲು. ಆಕೆಯನ್ನು ನೋವುಂಟುಮಾಡದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಮನುಷ್ಯರದಾಗಿದೆ. ಏಕೆಂದರೆ ಆಕೆ ತನಗಾಗಿಯಲ್ಲ, ಲೋಕ ಕಲ್ಯಾಣಕ್ಕಾಗಿ ಮೈದಾಳಿದ್ದಾಳೆ ಎಂಬ ಅರಿವು ನಮಲ್ಲಿರಬೇಕು ಎಂಬ ತಿಳುವಳಿಕೆಯನ್ನು ಕವಿ ನಿರೂಪಿಸಿದ್ದಾರೆ.

ಭೂಮಿಯ ಮೊದಲ ಮಗನನ್ನಾಗಿ ಬೇಂದ್ರೆಯವರು ರೈತನ ಬದುಕನ್ನು ಚಿತ್ರಿಸಿದ್ದಾರೆ. ಅವರ ಪ್ರಸಿದ್ಧ ಕವಿತೆ 'ಭೂಮಿತಾಯಿಯ ಚೊಚ್ಚಲ ಮಗ'ದಲ್ಲಿ ಅನ್ನ ಕೊಡುವ ರೈತನ ದೈನ್ಯ ಸ್ಥಿತಿಯನ್ನು ನೈಜವಾಗಿ ಚಿತ್ರಿಸಿದ್ದಾರೆ.

ಭೂಮಿತಾಯಿಯಾ
ಚೊಚ್ಚಿಲ ಮಗನನು
ಕಣ್ತೆರೆದೊಮ್ಮೆ
ನೋಡಿಹಿರೇನು?
. . . .
ಜನುಮವೆಂಬುವ
ಕತ್ತಲೆಯಲ್ಲಿ
ಬಿದ್ದಿದೆ ಒಳಗೆ
ಹೇಗೋ ಬಂದು!
ಸಾವಿನ ಬೆಳಕದು
ಕಾಣುವುದೆಂದು?
ಎಂದೋ ಎಂದೋ ಎಂದೋ ಎಂದು
ಕನವರಿಸುವದು
ತಳಮಳಿಸುವದು! [೩೩]

ಅನ್ನ ಸಕಲ ಜೀವಾಧಾರವಾದದ್ದು. ಅದನ್ನು ಲೋಕಕ್ಕೆ ಬೆಳೆದು ಕೊಡುವ ವ್ಯಕ್ತಿ ಜನಸಾಮಾನ್ಯರ ದೃಷ್ಟಿಯಲ್ಲಿ ನಿರ್ಲಕ್ಷಿತನಾದರೂ ಕವಿ ದೃಷ್ಟಿಯಲ್ಲಿ 'ಭೂಮಿ ತಾಯಿಯ ಚೊಚ್ಚಲ ಮಗನ' ಪ್ರಾಧಾನ್ಯತೆಯನ್ನು ಪಡೆದುಕೊಂಡಿದ್ದಾನೆ. ಲೋಕ ಕನಿಷ್ಠತೆ ಕಾವ್ಯ ಶ್ರೇಷ್ಠತೆಯನ್ನು ಪಡೆದುಕೊಂಡಿದೆ. ದಿನ ನಿತ್ಯದಲ್ಲಿ ರೈತನು ಎದುರಿಸುತ್ತಿರುವ ಬದುಕಿನ ಸವಾಲುಗಳು, ಅವಕೆ ಅಂಜದೆಯೇ ತನ್ನನ್ನು ಉಳಿಸಿಕೊಂಡು ಇತರರ ಅಸ್ತಿತ್ವಕ್ಕಾಗಿ ತ್ಯಾಗ ಮಾಡುವ ವ್ಯಕ್ತಿಯ ಭವಣೆಯ ಬದುಕು ದಾರುಣವೆನ್ನುವಂತಹುದು. ಹಾಗೆಯೇ

ಇನ್ನೊಂದು ಮಗ್ಗುಲಲ್ಲಿ ಅವನ ಸ್ಥಿತಿಯ ಬಗೆಗೆ ಕಾರಣಗಳನ್ನು ಕಂಡುಕೊಳ್ಳಬೇಕಾದ ಅವಶ್ಯವಿದೆ ಎಂಬುದನ್ನು ಸೂಚಿಸುತ್ತದೆ.

ರಾಷ್ಟ್ರ, ನಾಡು, ನಗರ ಮತ್ತು ಗ್ರಾಮಗಳ ನೆಲೆಯಲ್ಲಿ ವ್ಯಕ್ತಿಯ ಅಧಿಕಾರವನ್ನು ಆಧರಿಸಿ ಪ್ರಥಮ ಪ್ರಾಶಸ್ತ್ಯ ನೀಡುವುದನ್ನು ಕಾಣುತ್ತೇವೆ. ಅಂದರೆ ರಾಷ್ಟ್ರಪತಿ, ರಾಜ್ಯಪಾಲ, ಮೇಯರ್, ಗ್ರಾಮ ಪಂಚಾಯಿತಿ ಚೇರ್ಮನ್ . . . ಮುಂತಾದ ಸ್ಥಾನಗಳನ್ನು ಅಲಂಕರಿಸಿದ ವ್ಯಕ್ತಿಗಳಿಗೆ ಈ ಪ್ರಾಶಸ್ತ್ಯಗಳುಂಟು. ಇವು ಕಾಲಕಾಲಕ್ಕೆ ಬದಲಾಗುವ ಸಾಧ್ಯತೆಗಳಿವೆ. ಆದರೆ ಎಲ್ಲ ಕಾಲದಲ್ಲಿಯು ಚೊಚ್ಚಲ ಮಾನ್ಯತೆ ರೈತನದೇ ಆಗಿದೆ ಎಂಬುದು ಕವಿಯ ಆಶಯವಿರಬಹುದೆ?

ಈ ಕವಿತೆಯಲ್ಲಿ ರೈತನ ಬಡತನದ ತೀವ್ರತೆಯನ್ನು, ಆತನ ಶ್ರಮದ ಹಿರಿಮೆಯನ್ನು ಬಿತ್ತರಿಸುವುದಾದರೂ ಇಲ್ಲಿ ಭೂಮಿಯನ್ನು ತಾಯಿಗೂ, ರೈತನನ್ನು ಆಕೆಯ ಮೊದಲ ಮಗನಾಗಿ ಸಮೀಕರಿಸಿ ಬರೆದಿರುವುದೂ ಅರ್ಥಪೂರ್ಣವಾಗಿದೆ. ಭೂಮಿಯೊಂದಿಗೆ ಸದಾ ಸಂಪರ್ಕವಿಟ್ಟುಕೊಂಡು ಬೆಳೆ ಬೆಳೆಯುವ ರೈತನನ್ನು ತಾಯಿ – ಮಗನ ಸಂಬಂಧದಂತೆ ಚಿತ್ರಿಸಿದ್ದಾರೆ.

'ಗಂಗಾವತರಣ' ಕವಿತೆಯಲ್ಲಿ ಬಂಗಾಲದಲ್ಲಿ ಕಾಡಿದ ಬರಗಾಲದ ರೌದ್ರ ಪ್ರಸಂಗವನ್ನು ಕಂಡು ಸಹಜ ಕರುಣೆಯಿಂದ ಗಂಗೆಯನ್ನು ಪ್ರಾರ್ಥಿಸಿದ್ದಾರೆ. ಹೃದಯ ತುಂಬಿ ತಾಯಿ ಗಂಗೆಯನ್ನು ಪ್ರಾರ್ಥಿಸಿರುವ ಈ ಕವಿತೆಯಲ್ಲಿ ಬಳಕೆಗೊಂಡಿರುವ ಶೈಲಿಯೂ ಗಂಗೆಯ ಆಗಮನಕ್ಕೆ ಅನ್ವರ್ಥವಾಗಿದೆ.

ಇಳಿದು ಬಾ ತಾಯೆ
ಇಳಿದು ಬಾ.
ಹರನ ಜಡೆಯಿಂದ
ಹರಿಯ ಅಡಿಯಿಂದ
ಋಷಿಯ ತೊಡೆಯಿಂದ
ನುಸುಳಿ ಬಾ
ದಿಗ್ ದಿಗಂತದಲಿ ಹಣಿಸಿ ಬಾ[೩೪]
. . . .

ದೇವಲೋಕದ ಗಂಗೆ ಭಗೀರಥನ ಪ್ರಯತ್ನದಿಂದ ಭೂಮಿಯಲ್ಲಿನ ಜನರನ್ನು ತಣಿಸಲು ಬಂದಂತೆ ಪೌರಾಣಿಕ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಇಲ್ಲಿನ ಗಂಗೆ ಕೇವಲ ಗಂಗಾ ನದಿಯಲ್ಲ. ಅವಳು ಕರುಣೆಯ ಅವತಾರ. ಆಕೆ ಭೂಮಿಗೆ ಮಾತ್ರ ಬಂದರೆ ಸಾಲದು; ನೆಲದ ಮೂಲೆ ಮೂಲೆಗೂ ಹರಿಯಬೇಕು ಎಂಬ ವ್ಯಾಪಕ ಅರ್ಥದಲ್ಲಿ ಗಂಗಾ ಪ್ರವಾಹದಂತೆ ನಿರರ್ಗಳವಾಗಿ ಚಿತ್ರಿತವಾಗಿದೆ.

"ಪೌರಾಣಿಕ ಪ್ರತಿಮೆಯೊಂದರ ಮೂಲಕ ದೈವೀಶಕ್ತಿಯನ್ನು ಆಹ್ವಾನಿಸುವ ಯಾಚನೆಯ ಭಂಗಿಯಿದೆ 'ಗಂಗಾವತರಣ' ಕವನದಲ್ಲಿ. ಮಗು ತಾಯನ್ನು ಆರ್ತತೆಯಿಂದ, ಆವೇಶದಿಂದ ಕರೆಯುವ ಪರಿಯಿದು. ಬೇಂದ್ರೆಯವರಲ್ಲಿ ಮಾತೃಭಾವ,

ವಾತ್ಸಲ್ಯಭಾವಗಳನ್ನು ವಿಶೇಷವಾಗಿ ನೋಡುತ್ತೇವೆ; ಇದನ್ನು ಅವರ ಕಾವ್ಯನಾಮವೇ ಸಂಕೇತಿಸುತ್ತದೆ. 'ಗಂಗಾವತರಣ'ವೂ ಈ ಮಾತೃಭಾವಕ್ಕೆ ಸಾಕ್ಷಿ. ಕವಿ ಗಂಗೆಯನ್ನು ಆಮಂತ್ರಿಸುವುದು ವೈಯಕ್ತಿಕ ಉದ್ಧಾರಕ್ಕಾಗಿ ಅಲ್ಲ; ಸಮಷ್ಟಿಯ ಉದ್ಧಾರಕ್ಕಾಗಿ. ಜನತೆಯ ಒಳಿತಿನಬಗ್ಗೆ ಅವರಿಗಿರುವ ಕಳಕಳಿ ಇದರಿಂದ ವಿದಿತವಾಗುತ್ತದೆ." (ಬೇಂದ್ರೆಯವರ ಕೆಲವು ಕವನಗಳು : ಸಿ. ಪಿ. ಕೆ. , ಇಳಿದು ಬಾ ತಾಯಿ, ಸಂ.ಡಾ. ಬುದ್ದಣ್ಣ ಹಿಂಗಮಿರೆ ಪುಟ: ೩೯೨.) ಸಿ. ಪಿ. ಕೆ. ಯವರು ಬೇಂದ್ರೆಯವರ ತಾತ್ವಿಕ ಧೋರಣೆಯನ್ನು ಪರಿಣಾಮಕಾರಿಯಾಗಿ ಗ್ರಹಿಸಿದ್ದಾರೆ. ದೋಷದ ನಡುವೆಯೂಕೂಡ ಕವಿಯ ಭಾವಾವೇಗ, ತಾದಾತ್ಮ್ಯಗಳು ರಸಾತ್ಮಕವಾಗಿ ಕಾವ್ಯರೂಪ ಧರಿಸುವುದು ಬೇಂದ್ರೆಯವರ ವೈಶಿಷ್ಟ್ಯ.

ಕೆ.ಎಸ್. ನರಸಿಂಹ ಸ್ವಾಮಿಯವರ 'ಬಿಳಿಯ ಹೂಗಳ ಕವಿತೆ ಗೋರಿಗಳ ಮೇಲೆ' ಭಿನ್ನವಾದ ಕವಿತೆ. ಮಾನವ ದುರಾಶೆಯಿಂದ, ವಿಜ್ಞಾನದ ದುರ್ಬಳಕೆಯಿಂದ ಭೂಮಿಯನ್ನು ಸ್ಮಶಾನವಾಗಿಸುವ ಸಂದರ್ಭದಲ್ಲಿ ಕವಿ ಕಂಡ ಮಾತೃತ್ವದ ಹಿರಿಮೆ ಇಲ್ಲಿದೆ.

ಹೊತ್ತೆ ಆಗಿರಬೇಕು ನೀನು ಬಂದು!
ಬಿಸಿಲ ತಲೆಯಿಲ್ಲ;
ಹೂವ ಬಲೆಯಿಲ್ಲ;
ನಾ ಬರೆದೆ ಭೂಮಿ ಮಣ್ಣೆಂದು
ನೀನದನೆ ನೋಡುತ್ತ ನಿಂತೆ;
ಒಂದೆರಡು ಜೊಳ್ಳು ನುಡಿ,
ಕಾವಿಲ್ಲ – ಬೂದಿ, ಕಿಡಿ;
ನನ್ನನ್ನಾವರಿಸಿತ್ತು ಕವಿಯ ಚಿಂತೆ.
. . . .
ತುಂಬು ಮೊಲೆ ತುಟಿಗಿತ್ತು; 'ಕಂದ, ಕುಡಿಯೋ'
ಸೆರಗನೊದೆದು ಬಾಗಿ ನೋಡದೋದೆ.
ದಿಟ್ಟಿದಳು: 'ಸುಮ್ಮನಿರು!
ಬೇಡಮ್ಮ ನೋಡದಿರು,
ಓ ಚೆಲುವೆ ನಾನಾಗಿ 'ಹಾಳಾದೆ!' [೩೫]

ನಿಸರ್ಗ ಮಾತೆ ಚಲುವಾಗಿ ವಿಕೃತ ಮನಸ್ಕರಿಂದ ಕೆಟ್ಟರೂ, ಹಾಳಾದರೂ ಪೊರೆವ ತಾಯಿಯಾಗಿದ್ದಾಳೆ. ಪ್ರಕೃತಿಯ ಉದಾತ್ತ ಗುಣವನ್ನು ಅರ್ಥಮಾಡಿಕೊಳ್ಳದ ನೀಚ ಗುಣದ ಮನುಷ್ಯ ಕೃತಘ್ನನಾಗಿದ್ದಾನೆ. ಉಪಕಾರ ಸ್ಮರಣೆಯಿರಬೇಕು. ನಿಸರ್ಗ ಎಲ್ಲವುದನ್ನು ನೀಡುತ್ತದೆ. ಅದನ್ನು ಉಳಿಸಿ ಬೆಳಸದ ಕಟುಕ ಹೃದಯಿಗಳು ನಾವಾಗಬಾರದು.

ಕೆ.ಎಸ್.ಎನ್.ರವರ 'ಹೆಜ್ಜೆ ಗುರುತು' – ಇದರಲ್ಲಿ ಭೂಮಿಯ ವೀರಮಗ ತಾಯಿಯನ್ನು ಹುಡುಕಿ ಬರುತ್ತಾನೆ.

ಅಗ್ನಿ ಲೋಕಗಳ ಜ್ವಾಲಾಪಥದ ಗಡಿ ದಾಟಿ,
ಶತಮಾನ ಪಂಕ್ತಿಗಳ ಮೇಲೆ ಹಾರಿ,

ಕೆಂದೂಳ ಕುದುರೆಗಳ ಮಣ್ಣು ಬಂಡಿಯನೇರಿ
ಮಗ ಬಂದು ಹುಡುಕಿದನು: ಎಲ್ಲಿ ತಾಯಿ?
ನಿಂತಿತ್ತು ಮುಂದೆ ಬಾಚಿದಳದ ಸೂರಿನ ಕೆಳಗೆ
ಗಾಳಿ ಬಳಸುವ ಒಂಟಿ ಬಂಡೆ – ಬಿರುಕು
ಸತ್ತ ಮಗುವನು ಹೊತ್ತ ಹುಚ್ಚಿಯೊಬ್ಬಳ ಹಾಗೆ,
ಬೆನ್ನ ಮೇಲಿಳಿದಿತ್ತಾ ಹಸಿರ ಹರಕು [೩೬]

ಭೂಮಿ – ಮನುಷ್ಯ ಸಂಬಂಧದ ಅನ್ವೇಷಣೆ 'ಹೆಜ್ಜೆ ಗುರುತು' ಕವಿತೆಯಲ್ಲಿ ಕೂಡ ಮುಂದುವರಿಯುತ್ತದೆ. ಇಲ್ಲಿ "ತನ್ನನ್ನು ಇಷ್ಟು ಸಮೃದ್ಧ ವಿಶ್ವದೊಳಗೆ ತಂದು ಬೆಳೆಯಬಿಟ್ಟಿರುವ ತಾಯಿ ಚೇತನದ ನಿಜವಾದ ಸ್ವರೂಪ ಏನೆಂಬುದನ್ನು ತಿಳಿಯುವ ಕುತೂಹಲ ಮನುಷ್ಯನಿಗೆ. . . .ವಿಶ್ವದಲ್ಲಿ ಮನುಕುಲದ ಹುಟ್ಟಿನಿಂದಲೇ ಮಾನವ ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಲು ಇಲ್ಲಿ ಪ್ರಯತ್ನಿಸಿದೆ".[೩೭] ಡಿ.ಆರ್.ಎನ್.ರವರ ಆಲೋಚನೆಯ ಮುಂದುವರಿಕೆ ಭಾಗವಾಗಿ ನರಹಳ್ಳಿಯವರು ಕಂಡಿರುವುದು ವಿಶೇಷವಾಗಿದೆ. ಇವರು ಭೂಮಿಯ ರೌದ್ರತೆಯನ್ನು ಮನುಷ್ಯ ಒಪ್ಪಿ ನಡೆದುಕೊಳ್ಳುವ ಧೀರೋದಾತ್ತತೆಯನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ.

"ಕಣ್ಣೆತ್ತಿ ನೋಡುವುದು ಕೂಡ ಬೇಡವೆ ನಿನಗೆ?
ನಿನ್ನ ನೋಡುವ ಕಣ್ಣು ನನಗೆ ಬರಲಿ
ಹುಟ್ಟಿದುದು ಕುರಿಯಲ್ಲ ಹುಲಿಯ ಹೆಸರನು ಹೇಳಿ,
ಹೋರಾಟವನೆ ಹರಸು ಅದೆ ಸಾಗಲಿ.

ಮನುಷ್ಯ ಭೂಮಿಯ ಸಂಬಂಧವನ್ನು ಹೀಗೆ ಮಾನವ ಚರಿತ್ರೆಯ ಹಿನ್ನೆಲೆಯಲ್ಲಿ ನೋಡಿ, ಭೂಮಿಯ ಚೆಲುವು ಮತ್ತು ಪ್ರೀತಿಗಳನ್ನು ಕಂಡಂತೆ, ಅದರ ರೌದ್ರ ಮುಖವನ್ನು ಕಂಡೂ, ಈ ನೆಲದ ಬಗೆಗಿನ ನಿಷ್ಠೆಯನ್ನು ಬಿಡದ, ಈ ನೆಲದ ಬದುಕಿನ ಹೋರಾಟದಲ್ಲಿ ಎಷ್ಟೇ ನೋವುಗಳಿದ್ದರೂ ಅಡ್ಡಿ ಆತಂಕಗಳಿದ್ದರೂ ಹೆದರದೆ ಸಾಗುವ ಛಲವನ್ನು ಪ್ರಕಟಿಸುವ ಕೆ.ಎಸ್.ನ. ಅವರ ಈ ನಿಲುವನ್ನು ಕೇವಲ ಭಾವಪರವಶತೆಯ ನಿಲುವೆನ್ನುವುದು ಸರಿಯಲ್ಲ.

ಕೆ.ಎಸ್.ಎನ್.ರವರ ಭೂಮಿಯ ಬಗೆಗಿನ ತಮ್ಮ ವಿಶ್ವಾಸವನ್ನು ಗಟ್ಟಿಗೊಳಿಸಿಕೊಂಡು 'ಭೂಮಿ – ಮನುಷ್ಯ – ದೈವ'ದ ಸಂಬಂಧವನ್ನು ತಮ್ಮ ಶೋಧನೆಯ ವಸ್ತುವಾಗಿಸಿಕೊಳ್ಳುತ್ತಾರೆ. 'ಪ್ರಥಮ ರಾಜನಿಗೆ' ಕವಿತೆಯಲ್ಲಿ ಕಾಣಿಸಿಕೊಂಡ ಈ ಸ್ವರೂಪದ ವಿಶ್ಲೇಷಣೆ 'ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ' ಕವಿತೆಯಲ್ಲಿ ಹೆಚ್ಚು ಖಚಿತವಾಗಿ ಕಾಣಿಸಿಕೊಳ್ಳುತ್ತದೆ".[೩೮]

ಈ ಚಿತ್ರದ ಅಸಮಾನ್ಯತೆಯನ್ನು ವರ್ಣಿಸಬೇಕಾಗಿಲ್ಲ. ಅಧೀನನಾದ, ಅಜಿತನಾದ ಈ ಮಗನ ನಿರ್ಧಾರ ಅಸಾಧಾರಣವಾದದ್ದು. ಇಲ್ಲಿನ ಕಡೆಯ ಮೂರು ಪದ್ಯಗಳು, ಕವಿ ಸಾಹಸಕ್ಕೆ ಕೈ ದೀವಿಗೆ,

ಕಣ್ಣೆತ್ತಿ ನೋಡುವುದೂ ಕೂಡ ಬೇಡವೇ ನಿನಗೆ,
ನಿನ್ನ ನೋಡುವ ಕಣ್ಣು ನನಗೆ ಬರಲಿ.

ಹುಟ್ಟಿದುದು ಕುರಿಯಲ್ಲ, ಹುಲಿಯ ಹೆಸರನ್ನು ಹೇಳಿ
ಹೋರಾಟವನೆ ಹರಸು, ಅದೆಸಾಗಲಿ! [೩೯]

ಹಿಂದೆ ಒಂದು ಸಲ, 'ಇಡಿದಿರು ನನ್ನ ನಿನ್ನ ಸಿಂಹಾಸನದ ಮೇಲೆ' ಎಂದು ತಂದೆಯನ್ನು ಮೂದಲಿಸಿದ್ದುಂಟು ಈ ಕುವರ. ತನ್ನ ತಾಯ ಹಿರಿಮೆಯನ್ನು ಅವನೆದುರು ಹಿಗ್ಗಿ ಕೊಂಡಾಡಿದ್ದುಂಟು. ಅಂತಹ ತಾಯಿಯನ್ನು ಇಲ್ಲಿ ಅರಸಿದ್ದಾನೆ. ಕಡೆಗೆ ಇವರು ಕಂಡ ಕವನದಲ್ಲಿ ತಾಯಿ ಇವನನ್ನು ಪಡೆದ ಸುಖ ಕಾಣುತ್ತಾಳೆ.

ಋಷಿ ಕೈ ಮುಗಿದು ಹಾಡಿ ಹೋಗಿದ್ದ
ಹೊಂಗರಿಯ ದನಿಯ ನೆಲೆಗೆ!
ಎಲ್ಲಿ ಪ್ರೇಕ್ಷಕರೆ ಪಾತ್ರಧಾರಿಗಳೋ
ಅಂಥದೊಂದು ಕಡೆಗೆ, ಇದ್ದಂತೆ ಹೊರಟ!
ಅಲ್ಲಿ ಕಂಡ ಪರ್ವತಗಳಿಂದ ಎದೆಯೊಡೆದು ಬಂತು ಕರುಣೆ.
ತೊರೆದು ಗಂಡ ಬರಲಿಲ್ಲ ಮನೆಗೆ. ಓ ! ಬಂದೆಯಲ್ಲ ಮಗುವೆ!' [೪೦]

"ಈ ತಾಯಿ ಮಕ್ಕಳ ವಾತ್ಸಲ್ಯ, ಒಲವು, ಈ ಕವನವನ್ನೂ, ಇಲ್ಲಿನ ಕವಿತಾ ಪ್ರಪಂಚವನ್ನೂ ಹೆಜ್ಜೆ ಹೆಜ್ಜೆಗೂ ತುಂಬುತ್ತದೆ. ಕವಿತೆಯನ್ನೇ ಓದಿ ಅದರ ಪರಮ ಸೌಭಾಗ್ಯವನ್ನರಿಯಬೇಕು. ಬೇರೆ ಹೇಗೂ ಅದರ ಪರಿಚಯ ಮಾಡಿಕೊಡಲಾದದ್ದು." [೪೧] ವಿ.ಸೀ.ಯವರ ಈ ಮಾತುಗಳಿಂದ ಕೆ.ಎಸ್.ಎನ್.ರವರ ಕವಿತೆಗಳಲ್ಲಿ ಮಾತೃತ್ವದ ಹಿರಿಮೆ ಮಿಗಿಲಾಗಿ ಮೂಡಿ ಬಂದಿದೆ ಎಂದು ತಿಳಿಯಬಹುದು. ಹಾಗಾಗಿ "ಅವರ ಕವಿತೆ ಕನ್ನಡ ಸಾಹಿತ್ಯ ಸಂಪತ್ತಿಗೆ ಒಂದು ಹೊಸ ಶಕ್ತಿಯನ್ನು, ವಿಲಾಸವನ್ನು ತಂದು ಕೊಡುತ್ತಿದೆ. ನಾನು ಕಂಡಂತೆ ಈ ಬಗೆಯ ಶಕ್ತಿ ಇಷ್ಟು ಆರೋಗ್ಯ ದೃಢಕಾಯವಾಗಿ, ಶುಚಿಯಾಗಿ, ಲೋಕಹಿತ ಮುಖವಾಗಿ ಬೇಕೆಂದುಕಡೆ ಕಾಣಿಸದು. ಅವರ ನುಡಿಗಟ್ಟು, ಲಯವಿನ್ಯಾಸ, ರಚನೆಯ ಕಲ್ಪನಾ ಸಾಹಸ ಅವರ ಪ್ರತಿಯೊಂದು ನುಡಿತದ ಮೇಲೂ ತನ್ನ ಮುದ್ರೆಯನ್ನೊತ್ತುತ್ತದೆ". [೪೨] ಈ ಮಾತುಗಳಿಂದ ಕೆ.ಎಸ್.ಎನ್ ರವರ ಋಜುತ್ವ ಸಹಜತೆಯನ್ನು ಕಾಣಬಹುದು.

ಸರ್ವಜ್ಞ ತನ್ನದೊಂದು ತ್ರಿಪದಿಯಲ್ಲಿ ಅನ್ನದ ಮಹತ್ವ ಕುರಿತು ಹೀಗೆ ಹೇಳಿದ್ದಾನೆ:

ಅನ್ನದೇವರ ಮುಂದೆ ಇನ್ನು ದೇವರು ಉಂಟೆ
ಅನ್ನವಿರುವ ತನಕ ಪ್ರಾಣವು ಜಗಕೆಲ್ಲ
ಅನ್ನವೇ ದೈವ ಸರ್ವಜ್ಞ [೪೩]

ಅನ್ನವೇ ದೈವವೆಂದು ಅದರ ಹಿರಿಮೆಯನ್ನು ಸರ್ವಜ್ಞ ತ್ರಿಪದಿಯಲ್ಲಿ ಚಿತ್ರಿಸಿದ್ದಾನೆ ಇದೇ ಅನ್ನದ ಹಿರಿಮೆಯನ್ನು ಕೆ.ಎಸ್.ಎನ್. ರವರ 'ಅನ್ನಪೂರ್ಣೆಗೆ' ಎಂಬ ಕವನದಲ್ಲಿ ಅನ್ನವನ್ನು ಸ್ತ್ರೀ ದೇವತೆಯಾಗಿ ಕಂಡು ಪ್ರಾರ್ಥಿಸಿದ್ದಾರೆ.

ಅನ್ನಪೂರ್ಣೆ, ಅನ್ನಪೂರ್ಣೆ
ತಾಯೆ, ಬಾ ತಾಯೆ!

ಚಂದ್ರ ವರ್ಣೆ, ಸದಾಪೂರ್ಣೆ
ಬಾ ತಾಯೆ, ತಾಯೆ!
. . . .
ನೀನಿಲ್ಲದ ಮನೆ ಮನೆಯಲಿ
ಏನಿದ್ದೂ ವ್ಯರ್ಥ
ಹಸಿದೊಡಲಿನ ಕಗ್ಗವಿಯಲಿ
ಹಾಡೆಲ್ಲ ಅನರ್ಥ [೪೪]

ಇದು ಬೇಂದ್ರೆಯವರ 'ಅನ್ನಾವತಾರ' ಮತ್ತು ಕುವೆಂಪುರವರ 'ಕಲ್ಕಿ' ಪದ್ಯಗಳನ್ನು ನೆನಪಿಗೆ ತರುತ್ತದೆ. ಅನ್ನ ಮಾನವ ಜಗತ್ತಿನ ಜೀವಾಧಾರಕ ಶಕ್ತಿ. ಅದಕ್ಕಾಗಿ ಜನ ಪಡುವ ಪಾಡು ಒಂದೇ? ಎರಡೇ? ಹಸಿದವರಿಗೆ ಕಾವ್ಯ ಹಿಡಿಸದು. ಅವಿಶ್ರಾಂತ ದುಡಿಮೆ ಮಾಡಿದರೂ ಹೊಟ್ಟೆ ತುಂಬಲು ಸಾಧ್ಯವಾಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಕಾವ್ಯ ಹೇಗೆ ರುಚಿಸೀತು? ಮೊದಲು ಮನುಷ್ಯನ ಪ್ರಾತಿನಿಧಿಕ ಅವಶ್ಯಕತೆಗಳನ್ನು ಪೂರೈಸಿದ ನಂತರವೇ ಇತರ ಕಲೆಗಳು ಸ್ವಾದವಾಗುವುದು.

ಬದುಕಿನ ಏನೆಲ್ಲ ಸುಖ ಸಂತೋಷಗಳನ್ನು ಸಂಪಾದಿಸಿದ್ದರೂ ಅನ್ನವಿಲ್ಲದೆ ಅನುಭವಿಸಲು ಸಾಧ್ಯವಿಲ್ಲ. ಜಗತ್ತಿನ ಎಲ್ಲ ಜೀವರಾಶಿಗಳಿಗೂ ಅನ್ನವೇ ಆಧಾರ. ಅಂತಹ ಅನ್ನವನ್ನು ಅನ್ನಪೂರ್ಣೆ ಎಂದು ಕರೆದಿದ್ದಾರೆ, 'ಪೇರೊಕ್ಕಲು ಈ ಮಕ್ಕಳು ಬಡವರ ಮೈ ಸಾಲ. ನೆಲದೇವಿಯೇ ಉಸ್ಸೆನ್ನುವಳು ಕಂಗೆಟ್ಟಿತು ಕಾಲ: ಬಡವರಾದಿಯಾಗಿ ಎಲ್ಲರನ್ನು ಕರುಣೆಯ ತೊಟ್ಟಿಲಲ್ಲಿ ತೂಗಲು ಅನ್ನಪೂರ್ಣೆಯಾಗಿ ಸದಾ ಸಲಹು' ಎಂದು ಪ್ರಾರ್ಥಿಸಿದ್ದಾರೆ. 'ನೀವಾದರು ಸುಖವಾಗಿರಿ' ಎನ್ನುವ ಮಾತಿನ ಹಿಂದೆ ಆಕೆ ಅನುಭವಿಸಿದ ಯಾತನೆಯ ಆಳ ತಿಳಿಯುತ್ತದೆ.

"ಪ್ರೇಮ ಗೀತೆಗಳಲ್ಲಿ ಕವಿ ಪಡೆದ ಸಿದ್ಧಿ ಹೀಗೆ ವಾತ್ಸಲ್ಯ ಗೀತೆಗಳಲ್ಲಿಯೂ ಕೌಶಲ್ಯ ಪೂರ್ಣವಾಗಿ ಕಂಗೊಳಿಸುತ್ತದೆ. ಸಹಜತೆ, ಶುಚಿತ್ವ, ಸುಕುಮಾರತೆ, ಸೂಕ್ಷ್ಮ ನಿರೀಕ್ಷಣೆ, ಸೌಂದರ್ಯ ಪ್ರಜ್ಞೆ, ಜೀವನೋತ್ಸಾಹ ಮೊದಲಾದ ಗುಣಗಳನ್ನು ಇವರ ಇತರ ಉತ್ತಮ ಕವಿತೆಗಳಲ್ಲಿಯಂತೆ ಇಲ್ಲಿಯೂ ಧಾರಾಳವಾಗಿ ಕಾಣುತ್ತೇವೆ. 'ನಿಮ್ಮುಸಿರು ನನ್ನ ಕವಿತೆ ನಿಜಾಕಾರ ನನ್ನ ಕವಿತೆ' ಎಂದು ಮುಂತಾದ ತಮ್ಮ ಕವಿತೆಗಳ ಬಗ್ಗೆ ಕವಿ ಬೇರೆಡೆಯಲ್ಲಿ ಹೇಳಿಕೊಂಡಿರುವ ಮಾತನ್ನು ಈ ಸಂದರ್ಭದಲ್ಲಿಯೂ ಮೆಚ್ಚುಕೆಯಿಂದ ನೆನೆಯಬಹುದು"[೪೫] – ಎಂಬ ಚನ್ನವೀರ ಕಣವಿಯವರ ಮಾತುಗಳು ಉಲ್ಲೇಖಾರ್ಹವಾಗಿವೆ.

ವೃಕ್ಷಾರಾಧನೆ ಭಾರತೀಯರ ಧಾರ್ಮಿಕ ಆಚರಣೆಗಳಲ್ಲಿ ಒಂದು. ಇದು ಪ್ರಾಚೀನ ಕಾಲದಿಂದಲೂ ಚಾಲ್ತಿಯಲ್ಲಿದೆ. ಪ್ರತಿ ಗ್ರಾಮಗಳಲ್ಲಿ ಅರಳಿ, ಬೇವು, ಈಚಲಮರವೇ ಮೊದಲಾದ ವೃಕ್ಷಗಳನ್ನು ಬೆಳೆಸಿ ಅದಕ್ಕೆ ಪೌರಾಣಿಕ ಹಿನ್ನೆಲೆಯಲ್ಲಿ ಅರ್ಥಕೊಟ್ಟು ಆರಾಧಿಸುವುದುಂಟು. ಅಂತಹ ಒಂದು ಕಲ್ಪನೆಯಲ್ಲಿ ಚಂದ್ರಶೇಖರ ಕಂಬಾರರ 'ಈಚಲದ ಮರದವ್ವೆ' – ಒಂದು ಕವಿತೆ. ವೃಕ್ಷದಲ್ಲಿ ದೇವತೆಯನ್ನು, ಆ ದೇವತೆಯಲ್ಲಿ ತಾಯ್ತನದ ಹಿರಿಮೆಯನ್ನು ಕವಿ ಕಂಡಿದ್ದಾರೆ.

ಕೆದರಿದ ಕೂದಲು ಈಚಲು ಮರದವ್ವೆ
ಮುಖದಲ್ಲಿ ಹುರಿ ಮೀಸೆ ಗಡ್ಡದವಳೆ
ಕಣ್ಣಲಿಪ್ಪತ್ತೆಂಟು ನರಕಗಳ ಆಳುವಳೆ
ಉಧೋ ಉಧೋ ಹಡದವ್ವೆ ಅಡ ಬಿದ್ದೆ!

. . . .

ಕಾರ್ಯ ಕಾರಣವಿರದೆ ಏನಾದರಾಯಿತೇ?
ಅಥವ ಹಾಳಾಯಿತೇ? ಹೇಳಿರಯ್ಯ
ಆಕಾಶ ಪಾತಾಳ ಚಕಮಕಿ ಸಿಡಿದರೆ
ಅವಳ ನೂರೊಂದುಸಲ ನೆನೆಯಿರಯ್ಯ [೬೭]

ವೃಕ್ಷಾರಾಧನೆಯನ್ನು ಮೂಲಾಧಾರವಾಗಿರಿಸಿಕೊಂಡು ರೂಪಿತವಾದ ಕವಿತೆ. ಇದು ಶೂದ್ರ ನೆಲೆಯಲ್ಲಿ ಕವಿ ಕಂಡಿರುವಂತಹುದು. ಶಕ್ತಿ ದೇವತೆಯ ಬಾಹ್ಯ ಲಕ್ಷಣಗಳನ್ನು ತಿಳಿಸುವಂತಹುದು. ಕಾರ್ಯ ಕಾರಣಗಳಿಂದ ಲೋಕ ವ್ಯವಹಾರ ನಡೆಯುತ್ತಿದೆ. ಇದರಲ್ಲೇನಾದರೂ ವ್ಯತ್ಯಯ ಉಂಟಾಗಿ ಪ್ರಕೃತಿಯ ವಿಕೋಪಗಳು ಘಟಿಸಿದರೆ ಸಮಾಜದ ತಳಪದರದವರು ತಕ್ಷಣ ಮೊರೆಹೋಗುವುದು ಕ್ಷುದ್ರ ದೇವತೆಗಳನ್ನು. ಇಂತಹ ಆಶಯಗಳನ್ನು ಈ ಕವಿತೆಯಲ್ಲಿ ಗುರುತಿಸಬಹುದು. ಇಂತಹ ಕಲ್ಪನೆ ದ್ರಾವಿಡ ಕಲ್ಪನೆಯಾಗಿದ್ದು ಆರ್ಯ ಸಂಸ್ಕೃತಿಗಿಂತ ಭಿನ್ನವಾದುದಾಗಿದೆ. ಆರ್ಯರು ಸುಂದರ ವಸ್ತುಗಳಲ್ಲಿ ದೈವತ್ವವನ್ನು ಕಂಡರೆ, ಮಾರಿ ಮಸಣಿಗಳಲ್ಲಿ ದ್ರಾವಿಡರು ದೈವವನ್ನು ದರ್ಶಿಸುತ್ತಾರೆ.

ನಿಸರ್ಗದಲ್ಲಿ ನಡೆವ ವೈಚಿತ್ರಗಳನ್ನು ನಿಯಂತ್ರಿಸುವ ಶಕ್ತಿದೇವತೆ ಈ ಈಚಲಮರದವ್ವೆ. ಎಲ್ಲ ಅನಿಷ್ಟಗಳ ನಿವಾರಕಳಾಗಿರುವ ಶಕ್ತಿ ದೇವತೆಯನ್ನು ಈಚಲದ ಮರದವ್ವೆಯಲ್ಲಿ ಕವಿ ಕಂಡು ನಮಿಸಿದ್ದಾರೆ.

ಆಧ್ಯಾತ್ಮಿಕ ಮಹೋನ್ನತಿಯಲ್ಲಿ ಸಿದ್ಧಿಗೈದು ಖ್ಯಾತರಾದವರು ಶ್ರೀರಾಮಕೃಷ್ಣ ಪರಮಹಂಸರು. ಅವರ ಆಧ್ಯಾತ್ಮಿಕ ಸಾಧನೆಗೆ ಸಹಭಾಗಿನಿಯಾಗಿ ನಿಂತವರು ಅವರ ಧರ್ಮಪತ್ನಿ ಶ್ರೀಶಾರದಾದೇವಿ. ಆಕೆಯ ಮೌನಸಾಧನೆ ಶಿಷ್ಯರನ್ನು ಸೆಳೆದಂತೆ, ಕವಿಗಳನ್ನು ಸೆಳೆದಿದೆ. ಕುವೆಂಪು ಆದಿಯಾಗಿ ಅನೇಕ ಕವಿಗಳು ಶ್ರೀಶಾರದಾದೇವಿಯನ್ನು ಆಧ್ಯಾತ್ಮ ನೆಲೆಯಲ್ಲಿ ಕಂಡು ತಲೆಬಾಗಿದ್ದಾರೆ. ಅದರಂತೆ ಕೆ.ಎಸ್. ನಿಸಾರ್ ಅಹಮದ್‌ರವರೂ ಕೂಡ 'ಶ್ರೀಶಾರದಾದೇವಿ' ಕವಿತೆಯಲ್ಲಿ ಆಕೆಯ ತಾಯ್ತನದ ಹಿರಿಮೆಯನ್ನು ಕೊಂಡಾಡಿದ್ದಾರೆ.

ನಿಮ್ಮನೆನೆದು ಸದ್ಭಕ್ತಿಯಲ್ಲಿ ತನುಮನವ ಹೂಡಿಸಿರುವೆ,
ಭಾವ ಬುದ್ಧಿ ಚಿಜ್ಯೋತಿಯನ್ನು ನಿಮ್ಮಡಿಗೆ ಜೋಡಿಸಿರುವೆ.
ಯಾವ ಯುಗದಲೆ, ಯಾವ ನೆಲದಲೆ, ಯಾವ ಧರ್ಮದಲೆ

. . . .

ಶಿಷ್ಯಜನಕೆ, ನಿಮ್ಮೊಲವು ಮಾತೆ, ತಾಯೊಡಲ ತಂಪು ಮಡಿಲು;
ದಕ್ಷಿಣೇಶ್ವರದ ಮಂಗಳಾವರಣವೆತ್ತಿರುವ ತೋರುಬೆರಳು. [೬೭]

ಅನ್ಯ ಧರ್ಮಿಯ ಕವಿಯೊಬ್ಬನ ಪರಧರ್ಮ ಸಹಿಷ್ಣತೆ ಮತ್ತು ಆದರ ಒಗೆಗಿರುವ ಆದರ ಗೌರವಗಳನ್ನು ನೋಡಬಹುದು. ಸರ್ವ ಧರ್ಮಗಳ ಒಳತಿರುಳು ಒಳಿತನ್ನೇ ಸಾರುತ್ತವಾದರೂ ಅದನ್ನು ಅರ್ಥೈಸುವ ಜನ ಮತಧರ್ಮದ ರಾಗ ದ್ವೇಷಗಳಿಗೆ ಒಳಗಾಗಿ ಪರಸ್ಪರ ವಿರೋಧಾಭಿಪ್ರಾಯಗಳನ್ನು ಮೂಡಿಸಿದ್ದಾರೆ. ಅಂತಹ ಪಂಥಗಳನ್ನು ಖಂಡಿಸಿ ಸತ್ಯದ ಏಕತೆಯ ಸೂತ್ರಕ್ಕೆ ಮನುಕುಲವನ್ನು ತರಲು ಕವಿ ಬಯಸುತ್ತಾರೆ. ತಾಯಿಯಾಗಿ, ದೇವಿಯಾಗಿ, ಆಧ್ಯಾತ್ಮಿಕ ಸಾಧಕಿಯಾಗಿ, ಕವಿಯ ನಮನಕ್ಕೆ ಪಾತ್ರಳಾಗಿರುವ ಶಾರದಾ ದೇವಿಯನ್ನು ವಿಭಿನ್ನವಾಗಿ ಚಿತ್ರಿಸಿದ್ದಾರೆ.

'ಗಂಗಾಪೂಜೆ' ಕವಿತೆಯಲ್ಲಿ ಗಂಗೆಯನ್ನು ದೇವಿಯಾಗಿ ಕಂಡಿರುವುದು ವಿ.ಸೀ.ಯವರ ವಿಶೇಷವಾಗಿದೆ.

ಗಂಗಾ ಜನನಿಯೆ ನಿನ್ನನು ಪೂಜಿಸೆ
ಲಕ್ಷಾಂತರ ಜನ ಬಂದಿಹರು
ಹೂವು, ಕುಂಕುಮವ ಗಂಧ ವೀಳೆಯವ
ಹಣ್ಣು ದಕ್ಷಿಣೆಯ ತಂದಿಹರು. [೬೮]

ಜೀವದ್ರವ ಗಂಗೆ. ಅದು ಎಲ್ಲರಿಗೂ ಅವಶ್ಯಕವಾಗಿ ಬೇಕಾದುದು. ಅದನ್ನು ದೇವಾನುದೇವತೆಗಳೂ ಆಶ್ರಯಿಸಿದ್ದಾರೆ ಎಂಬುದು ಆಸ್ತಿಕರ ಕಲ್ಪನೆ. ಬೆಳೆ ಬೆಳೆಯಲು, ಶುಚಿಯಾಗಿರಲು, ಜೀವ ಜಂತುಗಳ ತಣಿಯಲು ಗಂಗಾ ದೇವಿ ಜೀವದ್ರವ. ಹಾಗಾಗಿ ಎಲ್ಲ ವರ್ಗ, ಜಾತಿ, ಧರ್ಮದ ಬಡವ ಬಲ್ಲಿದರಿಗೂ ಬೇಕಾದವಳು. ಅದಕ್ಕಾಗಿ ಬಡವರಿಗೂ ನೀನು ಒಲಿದು ನಮ್ಮೂರಿಗೆ ದಯಗೈಯಿ ಎಂದು ಪ್ರಾರ್ಥಿಸಿದ್ದಾರೆ. ಬರದ ಬವಣೆಗೆ ಸಿಲುಕಿ ನೀರಿನ ಆಹಾಕಾರದಿ ನಿಟ್ಟುಸಿರಿಡುವ ಜನರ ಒತ್ತಾಸೆಗೆ ನಿಂತು ಪ್ರಾರ್ಥಿಸಿದಂತಿದೆ. ಇದು ಬೇಂದ್ರೆಯವರ ಗಂಗಾವತರಣವನ್ನು ನೆನಪಿಗೆ ತರುವಂತಿದೆ.

ನಾಡ ತಾಯಿ – ಸ್ವರ್ಗ, ಮರ್ತ್ಯ, ಪಾತಾಳ – ಈ ಮೂರೂ ಲೋಕಗಳೂ ಕೂಡ ಭಾರತ ದಾಸ್ಯತನದಿಂದ ಮುಕ್ತವಾದ ಸಮಯದಲ್ಲಿ ಅಳುಕಿನೊಂದಿಗೆ ತುಳುಕಾಡಿದವು. ಜಗತ್ತಿನ ಎಲ್ಲ ರಾಷ್ಟ್ರಗಳಿಗೂ ಮೇಲ್ಪಂಕ್ತಿಯಾಗುವ, ಸರ್ವತಂತ್ರ ಸಾಮ್ರಾಜ್ಯವಾಗುವುದು ಕಂಡು ಮೂರು ಲೋಕಗಳೂ ಅಳುಕಿರಬಹುದು ಎನಿಸುತ್ತದೆ. ಮೂರು ಲೋಕಗಳಿಗೂ ಇರುವ ಗುಣ ವೈಶಿಷ್ಟ್ಯವೆಲ್ಲವೂ ಭಾರತ ಒಂದರಲ್ಲೇ ಇರುವುದರಿಂದ ಅವು ಭೀತಿಗೊಂಡಿವೆ ಎಂಬ ಕಲ್ಪನೆ ನೂತನವಾಗಿದ್ದು, ಬೆರಗಾಗುವಂತಿದೆ.

ಮೂಲೋಕವೂ ಮುಳುಗಿಹುದು ಅಳುಕಿಹುದು ತುಳುಕಿಹುದು
ಭಾರತೀಯ ಸ್ವಾತಂತ್ರ್ಯ
ಸಾಮ್ರಾಜ್ಯವೇಳುತಿರೆ – ತಲೆ ಎತ್ತಿ ನಿಲ್ಲುತಿರೆ ಗೆಲ್ಲುತಿರೆ
. . . .
ಈ ತಾಯಿಯೆ ಮಾತಾಯಿಯು
ಉಸಿರೀವಳು ಕಿಸುರೀವಳು ಕಸುವೀವಳು ಬಿಸುಪೀವಳು
ಬಾಳಿನೆಲ್ಲಾ ಕಾಳಗದಲ್ಲಿ [೬೯]

ತಮ್ಮ ಪ್ರಭಾವೀ ಶೈಲಿಯಿಂದ, ಉದ್ದೀಪಕ ಭಾವಗಳಿಂದ ಭಾರತಾಂಬೆಯು ಭವಿಷ್ಯದಲ್ಲಿ ಮೆರೆಯುವ, ಮುಟ್ಟುವ, ಸ್ಥಿತಿ - ಗತಿಯನ್ನು ತಿಳಿಸಿದ್ದಾರೆ. ತಮ್ಮ ಲಾಲಿತ್ಯಮಯವಾದ ಬರವಣಿಗೆಯಲ್ಲಿ ಭಾರತಾಂಬೆಯ ಭವ್ಯತೆಯನ್ನು ನಿರೂಪಿಸಿದ್ದಾರೆ.

ಕಾವ್ಯವನ್ನು ಕನ್ನಿಕೆಗೆ ಹೋಲಿಸುವುದು ನಮ್ಮ ಕವಿಗಳೆಲ್ಲರ ಜಾಯಮಾನ. ಆದರೆ ವಿ.ಸೀ.ಯವರು ಕಾವ್ಯವನ್ನು ದೇವಿಯೆಂದು ಭಾವಿಸಿ, ಆಕೆ ತನ್ನ ಮೇಲೆ ಬೀರುವ ವೈವಿಧ್ಯ ಪ್ರಭಾವವನ್ನು ಬಣ್ಣಿಸುತ್ತ ಆಕೆಯನ್ನು ನಿಯಂತ್ರಿಸಲು ತನ್ನಿಂದ ಸಾಧ್ಯವಿಲ್ಲವೆನ್ನುತ್ತಾರೆ.

ಬಂದಾಗ ನೀ ಬರುವೆ
ಹೋದಾಗ ಹೋಗುವೆ
ನಿನ್ನ ಮೇಲಧಿಕಾರ
ವಿಲ್ಲವೆನಗೆ
ಎನಗೆ ಬೇಕೆಂದಾಗ
ಬಾರದಿರುವೆ.
ಬೇಡ ಮುಚ್ಚಟೆಯೆನಲು
ಕಾಡುತಿರುವೆ.
. . . .
ನಿನ್ನಾಟ ಕಾಟಗಳ
ತಡೆಯಲಾರೆ,
ನಿನ್ನಾಜ್ಞೆ ಮುಂದಿಳಿದು
ನಡೆಸಲಾರೆ,
ಶರಣು ದೇವೀಶರಣು
ರಾಣಿ ನೀನು. [೫೦]

ಹೆಣ್ಣಿಗೆ ಲೌಕಿಕದ ಜನರೆಲ್ಲರೂ ತಲೆಬಾಗುವಂತೆ, ಕಾವ್ಯಾಸಕ್ತರೆಲ್ಲರೂ ಕಾವ್ಯಕನ್ನಿಕೆಗೆ ಶರಣಾಗುತ್ತಾರೆ. ಆಕೆಯಲ್ಲಿ ಭಾವಸುಖ ಸವಿದು 'ರಾಣಿ ನೀನು' ಎಂದು ಕೊಂಡಾಡುತ್ತಾರೆ.

ಇದು ಶಾಸ್ತ್ರೀಯ ಸಂಗೀತದ ರಾಗಕ್ಕೆ ಹೊಂದಿಸಿ ಬರೆದಿರುವ ಗೀತೆಯಾಗಿದೆ. ಕಾವ್ಯ ದೇವಿಯ ಗುಣ ವಿಶೇಷಗಳನ್ನು ಬಣ್ಣಿಸುತ್ತಾ ಆಕೆಗೆ ಶರಣಾಗಿ ತಲೆಬಾಗಿ ನಮಿಸಿ ಆಕೆಯ ಶ್ರೀರಕ್ಷೆಯಲ್ಲಿ ತಾನಿರಬಯಸುತ್ತಾರೆ.

ಕಾಡು ಕಡಿದು ನಾಡು ಕಟ್ಟಿರುವ ಈ ಬೀಡಿಗೆ ವಸುಂಧರೆಯೇ ತಾಯಿ. ದುಡಿವವರ ಸಿರಿದೇವಿ ಎಂದು 'ನಮ್ಮ ನಾಡು' ಕವಿತೆಯಲ್ಲಿ ಭೂದೇವಿಯನ್ನು ಸ್ಮರಿಸಿದ್ದಾರೆ. ದಿನದಿನವೂ ಹುಟ್ಟುವ ಲಕ್ಷ ಲಕ್ಷ ಮಕ್ಕಳಿಗೆ ಹಾಲುಣಿಸಿ ಕಾಪಾಡುವ ತಾಯಿಯಂತೆ ಈ ಸಿರಿದೇವಿ. ಇದು ಎಲ್ಲರ ತಾಯಿ ಎಂದು ಬಣ್ಣಿಸಿದ್ದಾರೆ.

ಕಾಡ ಕಡಿದು ಮಾಡಿದೆವು
ಬೀಡು ಗೂಡು ಕಟ್ಟಿ
ಕಾಡು ಕಾಯಿ ನಟ್ಟು ಬೆಳೆಸಿ

ನಾಡನಿದನು ಗಳಿಸಿ
ಹಾಲು ಹಣ್ಣು ಜೇನು ಹೂ
ಬೆಳೆವೆವಿಲ್ಲಿ ಹುಲುಸು

. . . .

ವಸುಂಧರೆ ಈ ತಾಯಿ
ದುಡಿವರ ಸಿರಿದೇವಿ,
ಇವಳೆ ಧಾತ್ರಿ ಇವಳೆ ಮೈತ್ರಿ
ನಮ್ಮ ನೆಲೆ ನಿಲವು [೫೭]

ತಾಯಿಯ ವಾತ್ಸಲ್ಯ ಈ ಭೂಮಿಯಲ್ಲಿ ಕಂಡಿರುವ ಕವಿ, ಇಲ್ಲಿನ ಬದುಕನ್ನು ಪ್ರೀತಿಸಿದ್ದಾರೆ, ಇಲ್ಲಿನ ಭಾಗ್ಯವನ್ನು ಸ್ಮರಿಸಿದ್ದಾರೆ. ಯಾರೇನಾದರೂ ಮೂದಲಿಸಲಿ, ನಮ್ಮನ್ನು ಪೊರೆವ ತಾಯಿಗೆ ನಾವು ತಲೆ ಬಾಗಬೇಕು. ಇದು ನಿಮ್ಮದು, ನಮ್ಮದು, ನಮ್ಮೆಲರದು ಎಂಬ ವಿಶಾಲ ಪ್ರಜ್ಞೆಯಿಂದ ನಾಡನ್ನು ನೋಡಬೇಕೆಂಬ ಉತ್ಕಟ ಬಯಕೆ ಕವಿಯದು.

ತಾಯಿ ತಂದೆಗಳು ನಿಧನರಾದರೂ ಅವರು ಬೇರೊಂದು ರೂಪದಲ್ಲಿ ಈ ಧರೆಗೆ ಬರುತ್ತಾರೆ. ಅವರ ಗುಣ ಲಕ್ಷಣಗಳು ಹುಟ್ಟುವ ಮಕ್ಕಳಲ್ಲಿ ಮೈಗೂಡಿರುತ್ತದೆ. ಎಂಬ ಕಲ್ಪನೆ ನಮ್ಮಲ್ಲಿ ಹಿಂದಿನಿಂದಲೂ ಬೇರು ಬಿಟ್ಟುಕೊಂಡು ಬಂದಿದೆ. ಆ ಹಿನ್ನೆಲೆಗೆ ಅನ್ವಯಿಸುವ ಕವಿತೆ 'ಅಮ್ಮ ಬಂದಿದ್ದಾಳೆ'.

ತನ್ನ ತಾಯಿ ತೀರಿ ಹತ್ತು ವರ್ಷಗಳಾದಮೇಲೆ, ತನಗೆ ಹುಟ್ಟಿದ ಮಗಳು ತಂದೆಯಲ್ಲಿ ತಾಯಿರೂಪ ಕಂಡಿದ್ದಾಳೆ. ತನ್ನ ಅಭಿಮಾನದ ಮಗಳು ಮಾತಿಗೆ ತಾನು ಹರೆಯದ ತಾಯಿಯಂತೆ ಸುಕ್ಕುಗಟ್ಟಿದ್ದೇನೆ ಎಂದು ಶಂಖಿಸುತ್ತಾಳೆ. ಅದೇ ರೀತಿ ಸೋದರತ್ತೆಗೆ ಕೂಡ ತಾನು ತಂದೆ ರೂಪದಲ್ಲಿ ಕಾಣುವ ಕವಿತೆ' ಅಮ್ಮ ಬಂದಿದ್ದಾಳೆ'. ತಾಯಿ – ತಂದೆಗಳ ಬಗ್ಗೆ ಇರುವ ಪ್ರೀತಿ ಒಂದೆಡೆಯಾದರೆ ಅನುವಂಶಿಯತೆಯೂ ಇಲ್ಲಿ ಕಾರ್ಯ ನಿರ್ವಹಿಸಿರುವುದುಂಟು ಅದನ್ನು ನೋಡುವ ಮನಸ್ಸು ಮುಖ್ಯವಾಗಿರುತ್ತದೆ. ಅಭಿಮಾನ ಒಂದೇ ಈ ಹೋಲಿಕೆಗಿರುವ ಮಾನದಂಡ ಎನಿಸುತ್ತದೆ.

ಅತ್ತೆ ಬೇಗ ಬಾ ಇಲ್ಲಿ ಅಮ್ಮಾ
ಅಮ್ಮ ಬಂದು ಕುಳಿತಿದ್ದಾಳೆ ಕುರ್ಚಿಯಲ್ಲಿ
ಹತ್ತು ವರ್ಷಗಳಾಯ್ತು ನಮ್ಮಮ್ಮ ಕಳೆದು
ನನ್ನ ಮಗಳಿಗೆ ಕಾಣುತಿಹೆನಂತೆ ನಾ ನಿಂದು
ಅದೇ ಸ್ಲೇಟು ಬಣ್ಣದ ಶಾಲು ಅದೇ ಕುಳಿತ ಭಂಗಿ ಅದೇ ಮುಖವಂತೆ!
ಇರಬೇಕು ನಮ್ಮಮ್ಮನಂತಲ್ಲದಿರೆ ನಾನಿನೆಂತಿರಲು ಸೈತು?
ಆದರಾಕೆಗೆ ವಯಸ್ಸು ಅಂದು ಎಂಬತ್ತಕ್ಕೆ ಮೀರಿತ್ತು.
ಮುದುರಿತ್ತು ತೊವಲು

. . . .

ಇಬ್ಬರವೂ ಗುಣ ಬ್ಯಾರೇದು ಕೆನೆ ಹಾಲು ಪರಿಮಳಿಸೆ
ಅದುವೆ ನನ್ನ ಬಾಳ್ ಪಾಯಸವು ನಾ ಹಣ್ತ ನಿಜವು [೫೮]

ಭೌತಿಕ ಶರೀರಕ್ಕೆ ಮುಪ್ಪು ಆವರಿಸಿದರೂ ಭಾವನೆಗಳಿಗೆ ಎಂದೂ ಮುಪ್ಪು ಬಾರದು ಎಂಬುದಕ್ಕೆ ಇದು ನಿದರ್ಶನವಾಗಿದೆ. "ಮಕ್ಕಳು ತಂದೆ – ತಾಯಿಗಳ ಪ್ರತಿರೂಪಗಳು. ಅವರು ಮುಖಭಾವದಲ್ಲಿ ಮೈಬಣ್ಣದಲ್ಲಿ ಮಾತ್ರವಲ್ಲದೆ ಎಷ್ಟೋ ನಡೆವಳಿಕೆಗಳಲ್ಲಿಯೂ ತಂದೆ – ತಾಯಿಗಳನ್ನು ಹೋಲುತ್ತಾರೆ. ಆದರಿಂದಾಗಿಯೇ 'ತಾಯಿಯಂತೆ ಮಗಳು, ನೂಲಿನಂತೆ ಸೀರೆ', 'ತಂದೆಯಂತೆ ಮಗ' ಎಂಬ ಗಾದೆಗಳೂ ರೂಢಿಗೆ ಬಂದಿರುವುದು. ಎಮರ್ ಸನ್ ಹೇಳಿರುವಂತೆ "ಅವರು ನಮ್ಮ ಬಾಲ್ಯವನ್ನು ನೆನಪಿಗೆ ತಂದುಕೊಟ್ಟು ನಮ್ಮನ್ನು ಗತಕಾಲಕ್ಕೆ ಕರೆದೊಯ್ಯುತ್ತಾರೆ." ಅವರು ಆಟದ ಸಾಮನುಗಳ ನಡುವೆಯಿದ್ದಾಗ, ಇನ್ನಷ್ಟು ಕಾಲ ಅವರು ಹೀಗೆಯೇ ಇದ್ದರೆ ಎಷ್ಟೊಂದು ಚಂದವೆಂದು ಎಲ್ಲ ತಂದೆ ತಾಯಿಗಳಿಗೂ ಅನಿಸುವುದು ಸಹಜ."[೫೩] ಈ ಮಾತುಗಳು ಪ್ರಚಲಿತ ನಂಬಿಕೆಯ ಮಾತುಗಳೂ ಹೌದು.

ಕಡಲನ್ನು ಹಿಂದಿನಿಂದಲೂ ಪುರುಷನನ್ನಾಗಿ, ಭೂಮಿಯನ್ನು ಸ್ತ್ರೀಯನ್ನಾಗಿ ಕಂಡಿರುವುದು ಸಹಜ. ಆದರೆ ವಿ.ಸೀ.ಯವರು ತಮ್ಮ 'ಕಡಲಿಗೆ' ಕವಿತೆಯಲ್ಲಿ 'ತಾಯ ಚೊಚ್ಚಲ ಕುವರಿ' ಎಂದು ಕರೆದಿದ್ದಾರೆ.

ತಾಯ ಚೊಚ್ಚಲ ಕುವರಿ
ನೀ ತೊಟ್ಟಿಲೆಲ್ಲಿಕ್ಕು
ನಿನ್ನ ಉಸಿರೆಂಬುದು ವೇದ ಘೋಷ
ನಿನ್ನ ಉಲಿ ಧೋರಣೆಯೇ ಸಾಮಗಾನ.
. . . .
ಇಂದು ನಾ ಕೇಳುವಂತೆ
ಕೇಳಿ ಮನ ಸೋತಂತೆ
ನಟ್ಟ ಪುಳಕದಿ ಅವರು ನೆರೆದು ನಿಂತಾರು
ಹೊತ್ತು ಹೊಸಾ ವ್ರತಗಳನ್ನು ಶುಭವ ಬಳಸಾರು.
ಮತ ಕುಲ ಪದಾಚಾರ
ನಡೆನುಡಿಯಹಂಕಾರ
ನಿನ್ನ ನೀರ್ಮೊರೆಯಲ್ಲಿ ಕರಗಿ ಹೋದಾವು
ಬಾಳ ಜಡತೆಯು ಒಡೆದು ಏಳ್ಗೆ ಸುಳಿದೀತು.[೫೪]

ಬೇಂದ್ರೆ ಅನ್ನದಾತನಾದ ರೈತನನ್ನು ಚೊಚ್ಚಲ ಮಗ ಎಂದು ಸಾಮಾಜಿ ನೆಲೆಯಲ್ಲಿ ಗುರುತಿಸಿದ್ದಾರೆ. ಆದರೆ ವಿ. ಸೀ.ಯವರು ಇಲ್ಲಿ ಕಡಲನ್ನು ತಾಯ ಚೊಚ್ಚಲ ಕುವರಿ ಎಂದು ಕಂಡಿರುವುದು ವಿಶೇಷತೆಯಾಗಿದೆ.

ಕಡಲಿನ ಅಲೆಗಳ ಆರ್ಭಟವನ್ನಾಗಲೀ, ತೆರೆಗಳ ನಾಟ್ಯವನ್ನಾಗಲೀ, ಕಮನೀಯವಾಗಿ ವರ್ಣಿಸಿ, ಕಡಲು ತನ್ನ ಗರ್ಭದಲ್ಲಿ ನವರತ್ನಗಳನ್ನು ಒಳಗೊಂಡಿದ್ದು, ರತ್ನಾಕರನಾಗಿರುವುದನ್ನು ತಿಳಿಸಿದ್ದಾರೆ. ಹಾಗೆಯೇ ಪುರಾಣಗಳ ಹಿನ್ನೆಲೆಯಲ್ಲಿ ಕಡಲಿನ ಪಾತ್ರವನ್ನು ಅದರ ಹಿರಿಮೆಯನ್ನು ಕೊಂಡಾಡಿ ಹೊಸ ತತ್ವಕ್ಕೆ, ಹೊಸ ಚೇತನ ನೀಡಿ ಭಾರತಾಂಬೆಯ ಮಕ್ಕಳನ್ನು ಉದ್ಧರಿಸು ಎಂದು ಪ್ರಾರ್ಥಿಸಿದ್ದಾರೆ. .

ಗಂಗಾಧರ ಚಿತ್ತಾಲರು ರೈತನನ್ನು 'ನೆಲದ ಮಗ'ನೆಂದು ಕರೆದು ಆತನಿಗೆ ಆಗಿರುವ ನಿರಂತರ ಅನ್ಯಾಯವನ್ನು ನಿರೂಪಿಸಿದ್ದಾರೆ. ತುಂಬ ನಿರ್ಲಕ್ಷ್ಯಕ್ಕೆ ಒಳಗಾಗಿರುವ ನೆಲದ ಮಗ ಒಂದಲ್ಲಾ ಒಂದು ದಿನ ಎದ್ದು ನಿಲ್ಲುತ್ತಾನೆ. ಮೂರು ಲೋಕವೂ ನಡುಗುವಂತೆ ಮಾಡಿ ತನ್ನ ತುಳಿದ, ಸುಲಿದ ಕಥೆಗೆ ಒಂದುತ್ತರ ಕೇಳುತ್ತಾನೆಂದು ಹೇಳುತ್ತಾರೆ.

ಅಗೋ ನೋಡು ಒರಟು ಮರ
ವಿಕಾರವಾಗಿ ನಿಂತಿದೆ
ಸುತ್ತಲೆಲ್ಲ ಒರಟು ನೆಲ
ಹಾಳುಗನಸಿನಂತಿದೆ.
. . . .
ಏಳಲಿಹುದು ಏಳಲಿಹುದು
ಒಂದು ದಿನದಲೇಳಲಿಹುದು
ಈ ಹಸಿದ ಮಯ್ಯೂ, ಕುಸಿವ ಕೈಯ್ಯೂ ಕನಲಿ ಕೆರಳಿ ಏಳಲಿಹುದು
ಬಿರುಗಾಳಿಯ ಕೂಗಿನಿಂದ
ಮೂಜಗವನೆ ನಡುಗಿಸುತ್ತ
ತನ್ನ ತುಳಿದ ಸುಲಿದ ಕತೆಗೆ ಒಂದುತ್ತರ ಕೇಳಲಿಹುದು! [೫೫]

ಈ ಕವಿತೆಯನ್ನು ಗಮನಿಸಿದಾಗ ಬೇಂದ್ರೆಯವರ 'ಭೂಮಿತಾಯಿಯ ಚೊಚ್ಚಲ ಮಗ'ನ ಕವಿತೆ ನೆನಪಾಗದೆ ಇರದು. ಹಾಗೆ ಬೇಂದ್ರೆಯವರ ಕವಿತೆಯಲ್ಲಿರುವ ತೀವ್ರತೆ ಈ ಕವಿತೆಯಲ್ಲಿ ಕಾಣಲು ಸಾಧ್ಯವಿಲ್ಲ. ಆದರೆ ಒಂದಲ್ಲಾ ಒಂದು ದಿನ ಸಿಡಿದೇಳುವ ಶಕ್ತಿಗಳಿಸಿಕೊಂಡು ತನ್ನ ಅನ್ಯಾಯಕ್ಕೆ ಉತ್ತರ ಕೇಳುವನೆಂಬ ಭವಿಷ್ಯದ ಆಶಾ ಕಿರಣವಾಗಿ ನೆಲದ ಮಗ ಕಾಣುತ್ತಾನೆ.

ಬೇಂದ್ರೆಯವರು ರೈತನನ್ನು 'ಭೂಮಿ ತಾಯಿಯ ಚೊಚ್ಚಲ ಮಗ' ಎಂದು ಕರೆದರೆ; ದೊಡ್ಡರಂಗೇಗೌಡರು 'ನೇಗಿಲ ಯೋಗಿ' ಎಂದು ಕರೆದು ಆತನ ಶ್ರಮ ಸಂಸ್ಕೃತಿಯನ್ನು ಬಿಂಬಿಸಿದ್ದಾರೆ.

ಮಣ್ಣಿನ ಮಕ್ಕಳು ಉಳುಮೆಯ ಮಾಡಲು
ದೇಶದ ಸಂಪದ ಉಕ್ಕುವ ಹೊನಲು;
. . . .
ನಿಷ್ಠೆಯ ಹಿಡಿದು ಕಾಯಕ ಮಿಡಿದು
ಹೊಲದಲಿ ದುಡಿವನು ಬೆವರನು ಬಸಿದು ! [೫೬]

ಈ ಕವಿತೆ ಬೇಂದ್ರೆಯವರ ಕವಿತೆಯಷ್ಟು ರೈತನ ಗಂಭೀರ ಚಿತ್ರ ನೀಡುವುದಿಲ್ಲ. ಆತನ ಎದೆಯಾಳದ ನೋವನ್ನು, ಸಾಮಾಜಿಕ ಸ್ಥಿತಿಗತಿಯನ್ನು ಬೇಂದ್ರೆಯವರು ಚಿತ್ರಿಸಿರುವಂತೆ ಗೌಡರು ಚಿತ್ರಿಸದಿದ್ದರೂ ಕೂಡ ಇಡೀ ರೈತನ ನಿಷ್ಕಾಮ ಕರ್ಮದ ಚಿತ್ರ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಕವಿತೆಗೆ ಹತ್ತಿರವಾದ ಭಾವ ಹೊಂದಿರುವ ಮತ್ತೊಂದು ಕವಿತೆ 'ನಾಡವರ ವ್ಯಥೆ – ಕಥೆ'ಯಲ್ಲಿ ಗ್ರಾಮೀಣರ ಬೇಗೆಯ ಬದುಕಿನ ಚಿತ್ರ ನೀಡುವಲ್ಲಿ ಸಫಲರಾಗಿದ್ದಾರೆ.

ಕಾರ್ಮಿಕ ವರ್ಗದಿಂದ ಬಂದು, ಬರವಣಿಗೆಯನ್ನು ಗಂಭೀರವಾಗಿ ಪರಿಗಣಿಸಿರುವ ಹಾಸ್ಯಲೇಖಕ, ಗೌಡನಕಟ್ಟೆ ತಿಮ್ಮಯ್ಯನವರು ಹೆಂಡತಿಯಲ್ಲಿ ಸಾಕು ತಾಯಿಯ ಗುಣ ಕಂಡ ಹಿರಿಮೆ ಇದೆ. 'ಅನುಬಂಧ' ಕವಿತೆಯಲ್ಲಿ ತನ್ನ ಪತ್ನಿಯು ತೋರಿದ ಪ್ರೀತಿ, ಪ್ರೇಮದ ಹಿನ್ನೆಲೆಯಲ್ಲಿ ಈ ಭಾವ ವ್ಯಕ್ತವಾಗಿದೆ. ಗಂಡನಾಗಿ ಅಧಿಕಾರ ಚಲಾಯಿಸಿ, ಹೆಂಡತಿಯನ್ನು ಶೋಷಣೆ ಮಾಡಿರುವುದಕ್ಕಾಗಿ ತೀವ್ರ ಅನುಕಂಪ ಬಂದು, ಪಶ್ಚಾತ್ತಾಪ ಉಂಟಾಗಿ, ಹೆಂಡತಿಯ ಬಗ್ಗೆ ಅಪಾರ ಮೆಚ್ಚುಗೆಯಿಂದ ಕುಟುಂಬ ಜೀವನದ ದರ್ಶನವಾಗುತ್ತದೆ.

ಸ್ಕೋರು ಮಾಡಿಹೆ ನಾನಾಗಲೇ
ಅರ್ಧ ಶತಕ
ನನ್ನ ಕ್ರೀಸಿನಲಿ ನಡೆದಿರೆ ಹೊಂಚು
ರಜತ ಪದಕದ ಎಳೆಯ ಮಿಂಚು
ನೀ ಹೆತ್ತ ನನ್ನ ಮಕ್ಕಳ ಜೊತೆಗೆ
ನನ್ನಪ್ಪನಿಂದ ನನ್ನನ್ನೂ ದತ್ತು ಪಡೆದ
ಕರುಣಾಮಯಿ ನೀ!
ತ್ಯಾಗಮಯ ನೀ. . . !
ನೀ ಅರ್ಧಾಂಗಿಯಲ್ಲ
ನನ್ನ ಅವಗುಣಗಳ ಮುಚ್ಚಿರುವ
ಪೂರ್ಣ ನಿಲುವಂಗಿ . . .[೫೭]

ಅನಾಮಧೇಯನಿಂದ ರಚಿತವಾಗಿರುವ 'ಗೋವಿನ ಹಾಡು' ಜನಪದ ಗೀತೆಗಳಂತೆ ಕನ್ನಡಿಗರಿಗೆ ಚಿರಪರಿಚಿತವಾಗಿದೆ. ಅದರಲ್ಲಿ ಬರುವ ಪುಣ್ಯಕೋಟಿಯು ಹುಲಿಯನ್ನು ಗೆಲ್ಲುವುದು ದೈಹಿಕ ಬಲದಿಂದಲ್ಲ, ಯುಕ್ತಿಯಿಂದಲೂ ಅಲ್ಲ, ಸಾತ್ವಿಕ ಮೌಲ್ಯಗಳಿಂದ. ಕರುವಿಗೆ ಮೊಲೆಹಾಲು ಕೊಟ್ಟು ಹಿಂದಿರುಗುವ ಸಂದರ್ಭದಲ್ಲಿ ಅದರಿಂದ ವ್ಯಕ್ತವಾಗುವ ನೀತಿ ಮಾತುಗಳು ಮಾತೃತ್ವದ ಮೌಲ್ಯಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಭಾರತೀಯ ಪರಂಪರೆಯ ಹಿನ್ನಲೆಯಲ್ಲಿ ಆದರ್ಶದ ನೆಲೆಗಟ್ಟಿನ ಮೇಲೆ ರೂಪುತಾಳಿದ ಹೃದಯಾಂತರಾಳದ ಮಾತುಗಳಾಗಿ ಹರಿದು ಬಂದಿರುವುದು ಒಂದು ಮುಖವಾದರೆ; ಒಳಹೊಕ್ಕು ಗಮನಿಸಿದರೆ ಶೋಷಣೆಯ ತೀವ್ರತೆಯ ಮುಖವಾಗಿಯೂ ಕಂಡುಬರುತ್ತದೆ.

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುವೈವತ್ತಾರು ದೇಶದಿ
ಇರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು
. . . .
ಒಂದು ದಿನ್ನಹ ಹುಲಿಯ ರಾಯನೆ
ಕಂದನೈದನೆ ಮನೆಯ ಒಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ನಾನಿಲ್ಲಿ ನಿಲ್ಲುವೆ

ಎಂದು ನಂಬಿಕೆಯ ಮಾತನ್ನು ಕೊಟ್ಟು ಕರುವಿನ ಬಳಿಗೆ ಬಂದು ಹಾಲುಣಿಸುವ ಚಿತ್ರ ಕರುಳು ಕಿತ್ತು ಬರುವಂತಿದೆ. ಮಗುವಿಗೆ ಬರಿ ಹಾಲು ಕುಡಿಸುವುದು ಮಾತ್ರವಲ್ಲ ಬದುಕಿನಲ್ಲಿ ತಾನು ಅನುಸರಿಸಬೇಕಾದ ಆದರ್ಶದ ಹಿತವಚನವನ್ನು ನೀಡುವುದನ್ನು ಇಲ್ಲಿ ನಾವು ವಿಶೇಷವಾಗಿ ಗಮನಿಸಬೇಕು.

. . . .

ಕಂದ ನಿನಗೆ ದುಃಖವೇತಕೆ
ಚೆಂದದಿಂದ ಬಾಳು ಧರೆಯೊಳು
ಮುನ್ನ ಜನ್ಮದ ಪಡೆದ ಫಲವಿದು
ಎನ್ನ ಬಿಡುವುದೆ ಎಂದಿತು. [೫೮]

ಈ ಪದ್ಯವನ್ನು ಪಾರಂಪರಿಕ ಅರ್ಥದಲ್ಲಿ ವಿವರಿಸುವುದಕ್ಕಿಂತ ಹೆಚ್ಚಾಗಿ ಸಾಮಾಜಿಕ ನೆಲೆಯಲ್ಲಿ ಅರ್ಥೈಸುವುದು ಸೂಕ್ತವೆನಿಸುತ್ತದೆ. ಹುಲಿ ಶೋಷಕರ ಪ್ರತಿನಿಧಿಯಂತೆಯೂ, ಹಸು ಶೋಷಣೆಗೊಳಗಾದವರ ಪ್ರತಿನಿಧಿಯಾಗಿದ್ದು ವಾಸ್ತವದಲ್ಲಿ ಶೋಷಕರ ಬದಲಾವಣೆ ಇಷ್ಟು ಸುಲಭವಾಗಿ ಸಾಧ್ಯವೇ? ಇದನ್ನು ಗಮನಿಸಿದಾಗ ಈ ಕವಿತೆ ಗಾಂಧಿವಾದದ ಹಿನ್ನೆಲೆಯಲ್ಲಿ ರೂಪಿತವಾಗಿರಬಹುದೇ ಎನಿಸುತ್ತದೆ. ಹಾಗಾಗಿ ಇದೊಂದು ಆದರ್ಶದ ಆಶಯವಾಗಿದೆಯೇ ಹೊರತು ಅನುಷ್ಠಾನದ ಹಾದಿಯಾದೀತೆ?

ಇಡೀ ಕವಿತೆ ಚಿಂತನೆಗೆ ದಾರಿಮಾಡಿಕೊಡುತ್ತದೆ. ಹಸು ತನ್ನ ಕರುವಿಗೆ ಹೇಳುವ ನೀತಿಯಲ್ಲಿ ಆದರ್ಶಕ್ಕಿಂತಲೂ ಅಂಜಿಕೆಯ ಪ್ರಜ್ಞೆ ಮರೆಮಾಚಿ ನಿಂತಿದೆ. ದುಷ್ಟಶಕ್ತಿಯನ್ನು ಎದುರಿಸಲು ಸಾಧ್ಯವಾಗದೆ, ಅದರ ದೈತ್ಯಶಕ್ತಿಗೆ ತಲೆಬಾಗಿರುವುದು ಇಲ್ಲಿದೆ. ಇದು ಪ್ರಾಣಿವರ್ಗದಲ್ಲಿ ಮಾತ್ರವಲ್ಲ, ಮನುಷ್ಯವರ್ಗದಲ್ಲೂ ದುಷ್ಟರಿಗೆ ಅಮಾಯಕರು ಹೇಗೆ ಬಲಿಯಾಗುತ್ತಿದ್ದರೆಂಬುದನ್ನು ಪ್ರಾಣಿರೂಪಕದೊಂದಿಗೆ ವ್ಯಕ್ತ ಪಡಿಸಲಾಗಿದೆ.

ಜಿ.ಎಸ್. ಶಿವರುದ್ರಪ್ಪನವರು ಮಾನವ ಸಮಾಜದ ಮಹಿಳೆಯರಲ್ಲಿ ಕಾಣುವ ವೈವಿಧ್ಯತೆರನಾದ ಜಡೆಯೊಂದಿಗೆ ಪ್ರಕೃತಿ ಮಾತೆಯ ಸೊಬಗಿನ ಜಡೆಯನ್ನು ಕಾಣುವಲ್ಲಿ ಯತ್ನಿಸಿದ್ದಾರೆ. ತಿಳಿ ಹಾಸ್ಯದೊಂದಿಗೆ ಆರಂಭವಾಗುವ ಈ ಕವಿತೆ ನಮ್ಮ ಬಡತನ, ದಾರಿದ್ರ್ಯದ ಚಿತ್ರವನ್ನು ಅನಾವರಣಗೊಳಿಸುತ್ತ ಸಾಗುತ್ತದೆ. ಕೊನೆಗೆ ತಾನು ಕಂಡ ವಿಶ್ವದ ಚೆಲುವನ್ನು ಜಡೆಯಾಗಿ ಹೆಣೆದು ಅದರ ಹಿಂದಿರುವ ಮಹಾಶಕ್ತಿಯ ಮುಖವನ್ನು ಕಾಣುವ ಹಂಬಲ ಇಲ್ಲಿದೆ. ಆ ಮಹಾ ಶಕ್ತಿಯನ್ನು ತಾಯಿ ಎಂದು ಗ್ರಹಿಸಿದ್ದಾರೆ. ಆ ಮುಖ ಅವ್ಯಕ್ತವಾಗಿಯೇ ಉಳಿದುಬಿಟ್ಟಿದೆ. ಆ ಮುಖವನ್ನು ಕಾಣಬೇಕೆಂಬ ಹಂಬಲ ಕವಿಯೊಬ್ಬರದು ಮಾತ್ರವಾಗಿರದೆ, ಎಲ್ಲರ ಮನದಾಳದ ಹಂಬಲವೂ ಆಗಿದೆ.

ಲಲನೆಯರ ಬೆನ್ನಿನೆಡೆ
ಹಾವಿನೊಲು ಜೋಲ್ವ ಜಡೆ
ಕಾಳಿಂದಿಯಂತಿಳಿದು, ಕೊರಳೆಡೆಗೆ ಕವಲೊಡೆದು
ಅತ್ತಿತ್ತ ಹರಿವ ಜಡೆ!

. . . .

ವಿಶ್ವವನೆ ವ್ಯಾಪಿಸುತ ತುಂಬಿರುವ ಜಡೆ
ಗಾನಗಳ ಕಾವ್ಯಗಳ ಶಿಲ್ಪಗಳ ಕಲೆಯ ಜಡೆ
ಎಲ್ಲವೂ ರಮ್ಯವೆಲ್ಲ

ಜಡೆಯಾಚೆ ತಿರುಗಿಸಿದ ತಾಯ ಮುಖ ಮಾತ್ರ ಇಂದಿಗೂ
ಕಾಣದಲ್ಲ![೫೯]

ಮಾನವ ಸಮಾಜದಲ್ಲಿ ಅಂದಿನಿಂದ ಇಂದಿನವರೆಗೂ ಸ್ತ್ರೀಯನ್ನು ಒಂದು ಶಕ್ತಿಯಾಗಿ ಕಂಡಿರುವುದುಂಟು. ಅದನ್ನು ಕವಿ ಕಾಣುವಲ್ಲಿ ಹಿಂದೆ ಬಿದ್ದಿಲ್ಲ.

ಜಿ.ಎಸ್. ಶಿವರುದ್ರಪ್ಪನವರು ತಮ್ಮ 'ಸರಸ್ವತಿಗೆ' ಕವಿತೆಯಲ್ಲಿ ಶಕ್ತಿರೂಪಿಣಿಯಾಗಿ ಶಾರದೆಯನ್ನು ಕಂಡಿದ್ದಾರೆ. ತಮ್ಮ ಅಸಹಾಯಕ, ಅಶಾಂತಿಗೆ ಸಿಕ್ಕಿ ತೊಳಲಾಡುವ ಕವಿ, 'ಕಾಳಿಯಾಗಿ ಏಳು ತಾಯಿ ಶೂಲವನ್ನು ತಾಳು ತಾಯಿ' ಎಂದು ರೋಷ ಭೀಷಣದ ಸ್ಥಿತಿ ತಲುಪುವಂತೆ ಕೆರಳಿಸಿದ್ದಾರೆ. ವ್ಯವಸ್ಥೆಯನ್ನು ಸರಿಪಡಿಸಲು ಸರಳವಾದ, ಸೌಮ್ಯ ಮಾರ್ಗದಿಂದ ಸಾಧ್ಯವಾಗದೆಂಬ ಭಾವನೆ ಕವಿಯದಾಗಿದೆ.

ಓ ತಾಯಿ ಸರಸ್ವತಿ
ನಿನ್ನ ವೀಣೆ ತಂತಿಗಳಲಿ
ಜೇಡ ಬಲೆಯನೂತಿದೆ
ನಿನ್ನ ಪಾದ ಪೀಠದ ಕೆಳ
ಗಿಲಿ ಹೆಗ್ಗಣ ಸೇರಿವೆ
. . . .
ಓ ತಾಯಿ ಸರಸ್ವತಿ
ಏನಿದೆಂಥ ದುರ್ಗತಿ
ಕಾಳಿಯಾಗಿ ಏಳು ತಾಯಿ
ಶೂಲವನ್ನು ಕಾಣು ತಾಯಿ
ಕಲ್ಲಾದರೆ ನೀನು ಹೀಗೆ
ಹೇಳಿಕೊಳ್ಳುವುದಾರಿಗೆ?[೬೦]

ಸೃಜನಶೀಲ ಸಾಹಿತ್ಯದ ಹೆಸರಿನಲ್ಲಿ ಗಟ್ಟಿ ಕಾಳಿನ ಜೊತೆಗೆ ಜೊಳ್ಳು ಸೇರುತ್ತಿರುವುದನ್ನು ಕವಿ ಕಂಡು ವಿಷಾದ ವ್ಯಕ್ತಪಡಿಸುತ್ತಾರೆ. ಇಲಿ ಹೆಗ್ಗಣಗಳು ಪರಾವಲಂಬಿ ಜೀವಿಗಳು. ಸಾಹಿತ್ಯ ಸೃಷ್ಟಿ ಸ್ವೋಪಜ್ಞತೆಯನ್ನು ಉಳಿಸಿಕೊಳ್ಳದೆ ಇರುವುದು ಕವಿಗೆ ಅಸಮಾಧಾನವನ್ನು ತಂದಿದೆ.

ವ್ಯವಸ್ಥೆಗೆ ಕನಲಿ ಕೆಂಡವಾಗುವ ಕವಿ, ಎಂತಹ ವ್ಯವಸ್ಥೆ? ಕನಲಿ ಕೆಂಡವಾಗುವ ಸ್ಥಿತಿ ಏಕೆ ನಿರ್ಮಾಣವಾಯಿತು? ಹೇಗೆ ನಿರ್ಮಾಣವಾಯಿತು? ಎಂಬುದನ್ನು ತಿಳಿಸದೆ ಕವಿತೆ ಕಾವಿನ ತೀವ್ರತೆ ಪಡೆಯದಂತೆ ಮಾಡಿದ್ದಾರೆ. ಜ್ಞಾನದೇಗುಲಗಳೆಲ್ಲ ವ್ಯಾಪಾರ ಕೇಂದ್ರಗಳಾಗಿ, ಆಸಕ್ತಿ ಶ್ರದ್ಧೆಯುಳ್ಳವರು ಕಾಲಿಡದಂತಾಗಿದೆ. ಪ್ರತಿಭೆ ಪರಿಶ್ರಮದವರ ಪಾಲಿಗೆ ಲಭ್ಯವಾಗದ ಸರಸ್ವತಿಯ ಜ್ಞಾನಕೋಶಕ್ಕೆ ಕತ್ತಲೆ ಮುಸುಕಿದೆ. ಆಕೆಯ ವೀಣೆಗೆ ಜೇಡನ ಬಲೆನೇಯ್ದಿದ್ದು ಸರಸ್ವತಿಯ ದುರ್ಗತಿಯನ್ನು ಬಿಂಬಿಸಿರುವುದು ಕಂಡುಬರುತ್ತದೆ.

ಪಟ್ಟಭದ್ರ ಹಿತಾಸಕ್ತಿಗಳ ಕೈಗೊಂಬೆಯಾಗಿರುವ ಸರಸ್ವತಿ ಕಲ್ಲಾಗದೆ ಕಾಳಿಯಾಗಿ ಎದ್ದು ಶೂಲ ಧರಿಸಿ ತನ್ನ ದುಸ್ಥಿತಿಯ ನಿವಾರಿಸಿಕೊಳ್ಳಬೇಕೆಂದು ಕವಿ ಕರೆ ಕೊಡುತ್ತಾರೆ.

ಹುಟ್ಟಿದೂರನು ಬಿಟ್ಟು ಕಾಣದೂರಿಗೆ ಹೋಗಿ, ಕೈ ಹಿಡಿದವನಿಂದ ಸುಂದರ ಬದುಕು ನಿರೀಕ್ಷಿಸುವಾಗ ಹೆಣ್ಣಿನ ಎದೆಯಾಳದಲ್ಲಿ ಮಡುಗಟ್ಟಿದ ವೇದನೆ ಇರುತ್ತದೆ. ಅಪರಿಚಿತ ಸ್ಥಳಕ್ಕೆ ಸುಪರಿಚಿತರಿಂದ ಬೀಳ್ಕೊಂಡು ಹೋಗುವಾಗ ಹುಟ್ಟಿದೂರಿನ ಸೆಳೆತ ಎಂತಹವರಲ್ಲೂ ಗಟ್ಟಿಯಾಗುತ್ತದೆ. ಎಂತಹ ಸಂಪತ್ತು, ಸುಖ ದೊರೆತರೂ ನೂತನ ಗಂಡನಮನೆ ಅನಾಥ ಪ್ರಜ್ಞೆಯಲ್ಲಿ ನರಳುವಂತಾಗುತ್ತದೆ. ಅಂತಹ ಒಂದು ಭಾವನಾತ್ಮಕ ಸಂದರ್ಭವನ್ನು ಜಿ.ಎಸ್. ಶಿವರುದ್ರಪ್ಪನವರು ತಮ್ಮ 'ಬೀಳ್ಕೊಡಿಗೆ' ಕವಿತೆಯಲ್ಲಿ ವಿಶ್ಲೇಷಿಸಿದ್ದಾರೆ.

ಈ ಕವಿತೆಯನ್ನು ಓದುವಾಗ ಗ್ರಾಮೀಣರ ಬದುಕಿನಲ್ಲಿ ಎದ್ದು ಕಾಣುವ ಸಾಂಪ್ರದಾಯಕ ಪರಿಸರದ ಚಿತ್ರ ಕಣ್ಮುಂದೆ ನಿಲ್ಲುತ್ತದೆ. ಶಕುಂತಲೆ ಕಣ್ವರ ಆಶ್ರಮದಿಂದ ಹೊರಡುವ ಸಂದರ್ಭದ ಅಗಲಿಕೆಯ ವೇದನೆಯನ್ನು ನೆನಪಿಗೆ ತರುತ್ತದೆ.

ಹೋಗಿ ಬರುವೆನು ನಾನು, ಸಂತಸದಿ ನೀವೆಲ್ಲ
ಹರಸಿ ಕಳುಹಿಸಿಕೊಡಿರಿ ಇನಿಯನೊಡನೆ:.
ಹುಟ್ಟಿದೂರನು ಬಿಟ್ಟು ಕ್ಷಣದೂರಿಗೆ ಹಾಗಿ
ಬಾಳ ನೆಡೆಸುವ ಸಮಯ ಬಂದುದೆನಗೆ

. . . .

ನಗರ ನಾಗರಿಕತೆಯ ಜಂಜಡಕೆ ಬಲುದೂರ
ತಾಯಿ ಪ್ರಕೃತಿಯ ಹಸಿರು ತೊಟ್ಟಿಲಲ್ಲಿ
ಹಕ್ಕಿಗೊರಳಿನ ಮೇಳ, ಜೋಗುಳವ ಹಾಡುತಿರೆ
ಮಲಗಿಹುದು ಶಾಂತಿಯಲಿ ಪುಟ್ಟ ಹಳ್ಳಿ. ೬೧

ಹಿರಿಯರ ಒಲುಮೆ ಹಾಗೂ ನಲ್ಲನ ಒಲವು ದೊರೆತರೆ ಸಾಕು ಎಂದು ಕೇಳಿಕೊಳ್ಳುವುದು ಆ ಹೆಣ್ಣಿನ ಬಯಕೆ. ಹೀಗೆ ಸಾಗುವ ಈ ಕವಿತೆಯಲ್ಲಿ ಇಡೀ ಊರಿನ ಚಿತ್ರ ಬಿಚ್ಚಿಕೊಳ್ಳುತ್ತದೆ. ಅಲ್ಲಿನ ಪರಿಸರ, ಅಲ್ಲಿನ ಜನರ ರೀತಿ ನೀತಿ, ಮುಗ್ಧ ಹೆಣ್ಣಿನ ಭಾವನೆಗಳನ್ನು ಕಲಾತ್ಮಕವಾಗಿ ವಿಕಾಸಗೊಳಿಸಿದ್ದಾರೆ.

ಹೆಣ್ಣು ತಾನು ಹುಟ್ಟಿದೂರನ್ನು ಬಿಟ್ಟು ಗಂಡನೂರನ್ನು ಹೊಕ್ಕು ತನ್ನ ಬದುಕನ್ನು ರೂಪಿಸಿಕೊಳ್ಳುವುದು ಎಲ್ಲ ಸಮಾಜದಲ್ಲೂ ಕಾಣುವ ಚಿತ್ರ. ಊರನ್ನೆ ತನ್ನ ಹಸಿರು ತೊಟ್ಟಿಲೊಳಿಟ್ಟು ಸಂತೈಸುವ ಪ್ರಕೃತಿಯೂ ತಾಯಿಯಾಗಿ ಕವಿಗೆ ಕಂಡಿದೆ.

ಇದೊಂದು ಸುಂದರ ರೂಪಕ. ಪ್ರಕೃತಿಯೇ ತಾಯಿ; ಪುಟ್ಟ ಹಳ್ಳಿಯೇ ಮಗು ಎಂಬ ಕಲ್ಪನೆ ಇಲ್ಲಿದೆ. ಈ ರೀತಿ ಕರುಳಾಳದ ಭಾವನೆಯೇ ಬಾಯಿ ತೆರೆದಂತೆ ಮುಕ್ತಾಯ ಕಾಣುವ ಈ ಕವಿತೆ ಹನ್ನೊಂದು ಪುಟಗಳ ನೀಳ್ಗವಿತೆಯಾಗಿದ್ದು ಸುಂದರ ಕೌಟುಂಬಿಕ ಬದುಕನ್ನು ಬಿಂಬಿಸುತ್ತದೆ. ನಮ್ಮ ಸಂಸ್ಕೃತಿಯ ಚಿತ್ರವನ್ನು ನೀಡುತ್ತದೆ. ಹೆಣ್ಣಿಗಿರುವ ಈ ಭಾವನಾತ್ಮಕ ಸಂಗತಿ ಗಂಡಿಗಿಲ್ಲ. ಆತನಿಗೆ ಒದಗಿರುವ ಬದಲಾಗದ ಬದುಕು. ಒಂದೇ ಪರಿಸರದಲ್ಲಿ ಏರ್ಪಟ್ಟ ಸಂಬಂಧಗಳಿಂದ ಆತನಿಗೆ ಇಂತಹ ನೋವಿನ ಸಂದರ್ಭಗಳು ಎದುರಾಗದು.

ಲಂಕೇಶರ 'ಅವ್ವ' ಹಾಗೂ ಎಲ್. ಹನುಮಂತಯ್ಯನವರ 'ಅವ್ವ' ಕವಿತೆಗಳಿಗೆ ಭಿನ್ನವಾದದ್ದು ಎಚ್.ಎಸ್. ಶಿವಪ್ರಕಾಶರ 'ಸಮಗಾರ ಭೀಮವ್ವ' ಕವಿತೆ. ಆಧ್ಯಾತ್ಮಿಕದ ಹಿನ್ನೆಲೆಯಲ್ಲಿ ರೂಪುಗೊಂಡ ಈ ಕವಿತೆಯು "ಅನುಭಾವಿಯೊಬ್ಬನ ತಳಮಳ, ಅಂತರಂಗದ ಆಧ್ಯಾತ್ಮಿಕದ ಹಸಿವು, ಸಂಸ್ಕೃತಿಯ ಜೀವಂತಿಕೆಗಳನ್ನು ಕವಿತೆ ಹುಡುಕಲು ಶುರು ಮಾಡುತ್ತದೆ. ಕವಿತೆಯಲ್ಲಿ ಪ್ರಬಲವಾದ ಆಕರ್ಷಣೆ ಇದೆ. ಪ್ರತಿರೋಧದ ಹಲವು ಬಗೆಗಳೂ ಇವೆ. ಇವು ಹಲವು ಸಾಧ್ಯತೆಗಳಲ್ಲಿ ಮುನ್ನುಗ್ಗುತ್ತವೆ. ಹೀಗಾಗಿ, ಅನುಭಾವಿಯೊಬ್ಬನ ಆಧ್ಯಾತ್ಮಿಕ ತಳಮಳವನ್ನು ಕವಿ ಹಿಡಿದಿಡಲು ಯೋಜಿಸುವ ಪ್ರತಿಮೆ ಮತ್ತು ಪ್ರತೀಕಗಳು ಕವಿತೆಗೆ ಹೊಸ ಆಯಾಮವನ್ನು ನೀಡಿವೆ. ಇಲ್ಲಿಯ ಪ್ರತಿಮೆಗಳು ಯೋಜಿತಗೊಂಡವುಗಳಲ್ಲ. ಬದಲಾಗಿ ಅವು, ಕವಿತೆಯ 'ಆಶಯ'ದೊಳಗೊಂಡು ಹೊರಮೂಡಿದವುಗಳು. ಒಂದು ನಿಟ್ಟಿನಲ್ಲಿ ಇದು ಮಧುರ ಚೆನ್ನರ 'ಧ್ಯಾವ್ಯ ಪೃಥಿವಿ' ಕವಿತೆಯನ್ನು ನೆನಪಿಗೆ ತರುತ್ತದೆ. ಆದರೆ, ಅಲ್ಲಿ ಪ್ರಕೃತಿಯೇ ತನ್ನ ಮೂಲ ರೂಪವನ್ನು ತೆರೆದು ನಿಲ್ಲುತ್ತದೆ. ಇಲ್ಲಿ ಸಂಸ್ಕೃತಿಯೇ ತನ್ನ ಎದೆಯಾಳವನ್ನು ತೆರೆದು ತೋರಿಸುತ್ತದೆ. ಅಲ್ಲಿ ತಳಮಳಗಳಿಲ್ಲ; ಇಲ್ಲಿ ತಳಮಳಗಳದೇ ಪ್ರಾಧಾನ್ಯ. ಅಲ್ಲಿ ಧ್ಯಾನ ಸ್ಥಿತಿಯ ತನ್ಮಯತೆ ಇದೆ; ಇಲ್ಲಿ ಧ್ಯಾನ ಸ್ಥಿತಿಯ ಉನ್ಮಯತೆ ಇದೆ. ಕೊನೆಗೆ ತನ್ಮಯತೆ ಉನ್ಮಯತೆಗಳು ಒಂದಾಗುವ ಸ್ಥಿತಿಯನ್ನು ಇಲ್ಲಿ ಕಾಣುತ್ತೇವೆ. ಆಧುನಿಕ ಬದುಕು ತೆರೆದುಕೊಳ್ಳುತ್ತಿದ್ದ ಕಾಲದ ಪ್ರತಿಮೆ 'ಸಮಗಾರ ಭೀಮವ್ವ' ಹಸಿವು, ತಳಮಳ, ಗೊಂದಲ, ಈರ್ಷ್ಯೆಗಳು ಚಿಂದಿ ಚೂರಾಗುತ್ತಿದ್ದ ಕಾಲ. ಕಾರ್ಖಾನೆಗಳು ವಿಷ ಕಾರುತ್ತಿದ್ದ ಕಾಲ. ಆದ್ಯತನಗಳನ್ನು ಇಲ್ಲವಾಗಿಸುವ ಕಡೆ ತನ್ನ ಮೂಲ ನೆಲೆಯನ್ನು ಅಳೆಯುತಿದ್ದ ಸಂದರ್ಭಕೂಡ. 'ಸಮಗಾರ ಭೀಮವ್ವ' ಕವಿತೆಗಿರುವ ಇನ್ನೊಂದು ಮುಖ ಅಲೌಕಿಕವನ್ನು ಲೌಕಿಕದ ದೀಪದೊಳಗೆ ಕಾಣುವ ಪರಿ. ಇದು ಕಷ್ಟ ಸಾಧ್ಯ ಕಾಣದ ಜಗತ್ತನ್ನು ಕಾಣಿಸುವ ಪರಿ".[೨೨] – ಎಂಬ ಮಲ್ಲೇಪುರಂ ಜಿ. ವೆಂಕಟೇಶರ ಮಾತುಗಳಿಂದ ಕವಿತೆ ಪ್ರವೇಶಿಸುವುದು ಸರಿಯಾಗುತ್ತದೆ.

ಸಮಗಾರ ಭೀಮವ್ವ ಎದೆ ಹಾಲ ನೀಡವ್ವ
ನೆಲದೆದೆಯ ಹಾಲು ಹೀರಿ ನೆತ್ತಿಗೇರಿದ ಬಿಸಿಲು
ಕರಗಲಾಗದೆ ಬೀಳ್ಬಿಡುವ ನವಲಗುಂದದ ಗುಡ್ಡ
ಅತ್ತ ಇತ್ತ ಸುಡುವೆಲರ ಸುಯ್ಲು ಊರು . . .
. . . .
ಏಸು ಕಾವಿತ್ತವ್ವ ಮಳೆಬಿದ್ದ ನೆಲದಲ್ಲಿ?
ಕಾವು ತಡೆಯದೆ ಹಾವೇಸು ಹುತ್ತವ ಬಿಟ್ಟು
ನೆಲದುದ್ದ ನೆಲದಗಲ ಹೊರಳಿದುವ್ವವ್ವಾ . . . .
ಸಮಗಾರ ಭೀಮವ್ವ ಎದೆ ಹಾಲ . . . . .[೨೩]

ಎದೆ ಹಾಲು, ಮೊಲೆಹಾಲಿಗಿಂತಲೂ ಶ್ರೇಷ್ಠ. ದಿಕ್ಕೆಟ್ಟ ಮನಸ್ಸಿಗೆ ಎದೆ ಹಾಲು ಅಲೌಕಿಕತೆಯ ಆನಂದದಿಂದ ತನ್ಮಯತೆಯನ್ನುಂಟು ಮಾಡುತ್ತದೆ. ಸಮಗಾರ ಭೀಮವ್ವ ಅಸಮಾನ್ಯವಾದ ಇಂದ್ರಿಯಾತೀತ ಅನುಭವವನ್ನು ತನ್ನ ಮನುಷ್ಯನ ನೆಲೆಗೆ ತಂದು ನಿಲ್ಲಿಸುವ ಪರಿ ಇದಾಗಿದೆ. ಗುರು ನಾಗಲಿಂಗ ಮತ್ತು ಸಮಗಾರ ಭೀಮವ್ವ– ಇವರಿಬ್ಬರ ಆಧ್ಯಾತ್ಮಿಕ ಹಸಿವು ಮತ್ತು ಹುಡುಕಾಟಗಳು ನಮ್ಮ ಬುದ್ಧಿಯನ್ನು ಕಿತ್ತು ತಿನ್ನುತ್ತಿರುವ ಆಧುನಿಕ ಜಗತ್ತಿನ ಆತಂಕ ಮತ್ತು ತಲ್ಲಣಗಳಿ. 'ನೆಲದೆದೆಯ ಹಾಲು ಹೀರಿ ನೆತ್ತಿಗೇರಿದ ಬಿಸಿಲು' ಎಂದು ಪ್ರಾರಂಭ ಗೊಂಡು 'ನೆಲದುದ್ದ ನೆಲದಗಲ ಹೊರಳಿದುವವ್ವಾ'

ಎನ್ನುವುದರ ಮೂಲಕ ಮುಕ್ತಾಯ ಕಾಣುವುದರಲ್ಲೇ ಕವಿತೆಯ ಅಸಮಾನ್ಯತೆಯ ಗುಣ ಲಕ್ಷಣಗಳನ್ನು ಕಾಣಬಹುದು.

"ಭಾರತೀಯ ಸಂಸ್ಕೃತಿಯಲ್ಲಿ ಸಾಮಾನ್ಯವಾಗಿ ಯೋಗಿಯ ಜೀವನವನ್ನು ವ್ಯಾಖ್ಯಾನಿಸುವವರೆಗೂ ಸೂಕ್ಷ್ಮ ವ್ಯತ್ಯಾಸ ಒಂದಿದೆ. ಮತ್ತು ಈ ಕವನದ ವಿಶಿಷ್ಟತೆಯೂ ಇದೆ. ಉತ್ಕಟ ವ್ಯಾಮೋಹದ, ಅನುರಾಗದ ಗರ್ಭದಲ್ಲಿದ್ದವನು ಒಮ್ಮಿಗೆಯೇ ಅದೆಲ್ಲದರ ಆಚೆಗೆ ನಡೆಯುತ್ತಾನೆ. ರತಿ ಸುಖದ ರಾತ್ರಿಗಳಲ್ಲೇ ಈಸುತ್ತಿದ್ದವನು ಒಮ್ಮೆ ಕನ್ನಡಿಯಲ್ಲಿ ಬಿಳಿಯ ಕೂದಲುಗಳನ್ನು (ಸುಖದ ನೆರೆ!) ಕಂಡು ವೈರಾಗ್ಯ ತಾಳುತ್ತಾನೆ. ಅಂತೂ ಬಾಗಿಲ ಹಿಂದೆ ಲೋಕ ನಿವೃತ್ತಿಯ ತಂಬೂರಿ ಮಿಡಿಯುತ್ತಲೇ ಇರುತ್ತದೆ: ಒಮ್ಮೆಯಾದರೂ ಎತ್ತಿಕೋ ಎಂದು. ಒಂದು ಸಾರಿ ತಂಬೂರಿ ಎತ್ತಿ ಕೊಂಡ ಮೇಲೆ ಅವನು ಮತ್ತೆ ಈ ಜಗತ್ತಿಗೆ ಮರಳಲಾರ. ಸಂಪೂರ್ಣ ಲೋಕ ನಿವೃತ್ತಿಯ ಘಟ್ಟ ಇದು. ಕ್ಷುದ್ರ ದೈನಿಕದ ಬದುಕಿಗೆ, ಚರಿತ್ರೆಗೆ ವಿದಾಯ ಇದು.

ಹೆಚ್ಚು ಕಡಿಮೆ ಇದೇ ಸ್ವರೂಪದ ವಸ್ತು ವಿವರಗಳನ್ನು ಬೇರೆ ರೀತಿಯಲ್ಲಿ ಈ ಕವನ ನಿರ್ವಹಿಸುತ್ತದೆ. ಮಂಡೆ ಸಿಡಿಯುವ ಉರಿ ಬಿಸಿಲಿನಲ್ಲಿ ಸುಳಿಯುತ್ತಿರುವ ಸುಡು ಗಾಳಿಯಲ್ಲಿ ನಾಗಲಿಂಗಯೋಗಿ ತನ್ನ ಅಂತರಂಗ ಪರಿವೀಕ್ಷಣೆಯನ್ನು ಪ್ರಾರಂಭಿಸಿದ್ದಾನೆ. ಆತನ ಜೀವನದಲ್ಲಿಯ ಮತ್ತೊಂದು ದೊಡ್ಡ ಕ್ಷಣ ಇದು. ಆತ ಹೇಗೆ ದೈಹಿಕವಾಗಿ ಒದ್ದಾಟದ ಕ್ಷಣದಲ್ಲಿದಾನೋ ಹಾಗೆಯೇ ತಾತ್ವಿಕವಾಗಿ ಕೂಡಾ. ಇಷ್ಟು ದಿನಗಳ ಕಾಲ ತಾನು ಬದುಕಿದ್ದ ರೀತಿಯನ್ನು, ಅದರ ಅರ್ಥವಂತಿಕೆಯನ್ನು ಆತ ಈಗ ಪರೀಕ್ಷಿಸ ತೊಡಗಿದ್ದಾನೆ. ಅದೇ ನವಲಗುಂದದ ಗುಡ್ಡ, ಊರು. ಈ ಅಂತರಂಗ ಪರಿವೀಕ್ಷಣೆಯ ಮಹತ್ವ ಎರಡನೆಯ ಭಾಗದಲ್ಲಿ ಕಾಣುತ್ತದೆ. ಪ್ರಜ್ಞೆಯ ಆಸ್ಫೋಟದ ಕ್ಷಣ ಅದು. ಇದ್ದಕ್ಕಿದ್ದಂತೆ ಜೀವನ ಚಕ್ರ ಸಿಡಿದು ಎಲ್ಲವನ್ನೂ ಅಸ್ತವ್ಯಸ್ತವನ್ನಾಗಿಸಿ ಇದೋ ಮತ್ತೆ ಹೊಸದಾಗಿ ಪ್ರಾರಂಭಿಸು ಎಂದು ಒತ್ತಾಯಿಸುವ ಸನ್ನಿವೇಶ ಅದು. ಸಾರ್ತ್ರನ 'ನಾಸಿಯಾ' ಕಾದಂಬರಿಯಲ್ಲಿ ನಾಯಕನಿಗೆ ಪಾರ್ಕಿನಲ್ಲಿ ಚೆಸ್‌ನೆಟ್ ವೃಕ್ಷದ ಕಾರಣದಿಂದಾಗಿ ಆದಂಥ ದರ್ಶನದ ಕ್ಷಣ ಇದು. ಯೋಗಿ ಹೊಸ ಅರಿವಿನ ಕ್ರಿಯಾಶೀಲತೆಯ ಸ್ಥಿತಿಯಲ್ಲಿದ್ದಾನೆ. ಬದುಕು ಮತ್ತೆ ಛಕ್ಕೆಂದು ಹೊಸ ದಿಕ್ಕಿಗೆ ಹರಿಯುವ ಸ್ಥಿತಿ. ಈ ಹೊಸ ಆಯ್ಕೆಯ ಬಿಕ್ಕಟ್ಟು ಎಷ್ಟು ಮಹತ್ವದ್ದೆಂದರೆ ಇಡೀ ಕಾಸ್ಮಾಸ್ ಅದರಲ್ಲಿ ಭಾಗಿಯಾಗಿದೆ. ತಾರೆ ಸಂಕುಳ ದಿಕ್ಕೆಟ್ಟ ಹಾಗೆ ಆತನ ಸುತ್ತಲೂ ಕಿಕ್ಕಿರಿದಿವೆ. ಚರಿತ್ರೆ, ವ್ಯಕ್ತಿ, ಕಾಸ್ಮಾಸ್ ಮೂರೂ ಬೆರೆತಿವೆ. ನಾಗಲಿಂಗ ಯೋಗಿ ಮತ್ತೆ ದೈನಿಕದ, ವಾಸ್ತವದ ಅಂಚಿಗೆ ಬಂದಿದ್ದಾನೆ. ಸುಡುವ ಜ್ವರ, ಮತ್ತೆ ಚರಿತ್ರೆಯ ದಡಕ್ಕೆ ಬಂದು ಆತ ಕೂತಿದ್ದಾನೆ.

ಈತನ ಇಲ್ಲಿಯತನಕದ ಪ್ರಯಾಣದ ಕಥೆಯೇನು? ಇದನ್ನೇ ಈತನ ಗೆಳೆಯ ಶಿಶುನಾಳ ಶರೀಫನೂ ಕೇಳಿದ್ದ: ನಾಗಲಿಂಗ ಯೋಗಿ ತಾನು ತಿರುಗೋದೇತಕೆ?

ಅನುಭಾವದ ವಿವರಗಳಲ್ಲಿ ಪೂರ ಮುಳುಗಿದ್ದೂ ಅಂತಿಮವಾಗಿ ಅದನ್ನು ನಿರಾಕರಿಸುವ ವಿಶಿಷ್ಟ ಕವನ ಇದು. ಒಂದು ರೀತಿಯ ಸ್ವಯಂ ನಿರಾಕರಣೆಯ ಅನುಭವವನ್ನು ಹೇಳುವ ಈ ರಚನೆ ತನ್ನ ಒಳ ದ್ವಂದ್ವಗಳಿಗಾಗಿ, ಘರ್ಷಣೆಗಳಿಗಾಗಿ, ಅಂತರ್ಮುಖೀ ರಚನೆಗಾಗಿ ಓದುಗರ ಮನಸ್ಸನ್ನು ಆವರಿಸುತ್ತದೆ. ಕವಿಯ ಇಲ್ಲಿಯ

ತನಕದ ಕವನಗಳಲ್ಲಿ ಅತ್ಯುತ್ತಮ ರಚನೆ ಇದು. ಹೀಗಾಗಿ, ಕವಿಯ ಶಕ್ತಿ, ದೌರ್ಬಲ್ಯಗಳೆರಡೂ ಇಲ್ಲಿ ಪ್ರಖರವಾಗಿ ಕಾಣಿಸಿಕೊಳ್ಳುತ್ತವೆ".[೬೪] ವ್ಯವಧಾನದೊಂದಿಗೆ ಆಧ್ಯಾತ್ಮಿಕದ ಅರಿವನ್ನುಂಟುಮಾಡಿಕೊಡುವಲ್ಲಿ ಯಶಸ್ವಿಯಾಗಿದೆ.

ಹೆಚ್.ಎಸ್. ಶಿವಪ್ರಕಾಶ್ ಅಪೂರ್ವವಾಗಿ ಅನುಭಾವಿ ಕವಿತೆಯನ್ನು ಈ ಯುಗದಲ್ಲಿ ತಂದು ಅದರೊಡನೆ ಜಗತ್ತಿನ ಕಠಿಣ ವಾಸ್ತವದ ಅರಿವನ್ನು ಬೆರೆಸಿ, ಮಾತಿನ ಜಟಿಲತೆಯಿಂದ ಗಹನವನ್ನು ಗಳಿಸಲು ಹೋಗದೆ ಬುದ್ಧಿಯಾಟ ಅಂತಃಕರಣದಲ್ಲಿ ಧ್ವನಿಸುವ ಅನುಭವವನ್ನು ಭಾಷೆಯಲ್ಲಿ ಕಟ್ಟಿಕೊಡಬಲ್ಲರು. ಅವರೇ ತಮ್ಮ ಹುಡುಕಾಟವನ್ನು 'ಹೊಸ ಪವಿತ್ರತೆಯ ಹುಡುಕಾಟ' ಎಂದು ವರ್ಣಿಸಿದ್ದಾರೆ. ಮೌಲ್ಯಗಳು ಮಾಯವಾಗುತ್ತಿರುವ ಯಾಂತ್ರಿಕ ಬದುಕಿನ ಕಾಲದಲ್ಲಿ ಅವರು ಧಾರ್ಮಿಕ ಪರಂಪರೆಯಲ್ಲಿ ಶಕ್ತಿಯನ್ನು ಕಂಡುಕೊಳ್ಳುವ ಅತ್ಯಂತ ಕುತೂಹಲಕರವಾದ ಪ್ರಯತ್ನ ಮಾಡಿದ್ದಾರೆ. ಅವರ 'ಸಮಗಾರ ಭೀಮವ್ವ' ಈಚಿನ ವರ್ಷಗಳಲ್ಲಿ ಪ್ರಕಟವಾದ ಮುಖ್ಯ ಕವನಗಳಲ್ಲಿ ಒಂದು. ಸಮಗಾರ ಭೀಮವ್ವ ಶೋಷಣೆಗೆ ಗುರಿಯಾದ ಜನರ ಪ್ರತಿನಿಧಿಯೂ ಹೌದು, ಜಗತ್ತಿನ ತಾಯಿ ಶಕ್ತಿಯ ಪ್ರತಿನಿಧಿಯೂ ಹೌದು.

ಕಡಿಯಲಾಗದ ಮರವೆ, ಕಡಿದರೂ ಹೊಲೆ
ಹೊಲೆಯೆಂಬ ಒಲೆಯಲಿ ಸುಟ್ಟರೂ
. . . .
ಮದುವೆಯಾಗದ ತಾಯೆ
ಮೊಲೆಹಾಲು ಬೇಡವ್ವ ಎದೆ ಹಾಲು ನೀಡವ್ವ
ಸಮಗಾರ ಭೀಮವ್ವ[೬೫]

'ಮೊಲೆ ಹಾಲು' – 'ಎದೆ ಹಾಲು' ವಿಭಿನ್ನವಾದ ಅರ್ಥಸ್ಫುರಣ ಉಂಟು ಮಾಡುವ ಪದಗಳು. ಮಗುವಿಗೆ ಒಂದು ಹಂತದವರೆಗೆ ತಾಯಿಯ ಮೊಲೆ ಹಾಲು ಬೇಕು. ಅದೇ ಮಗು ಬೆಳೆದು ನಿಂತಾಗ ಅದಕ್ಕೆ ಹೊರ ಜಗತ್ತಿನ ಅರ್ಥಪೂರ್ಣ ಬದುಕಿಗೆ ಅಂತಃಕರಣದ, ಮಾನವೀಯತೆಯ ಆಧ್ಯಾತ್ಮಿಕದ ಅರಿವು ಬಹಳ ಮುಖ್ಯ ಅದನ್ನು ತಾಯಿಯ ಮೂಲಕವೇ ಪಡೆದು ಜೀರ್ಣಿಸಿಕೊಂಡು ಬದುಕಿನಲ್ಲಿ ಬಳಸಿಕೊಳ್ಳಬೇಕು. ಈ ಮಾರ್ಗ ಸರಳವೂ ಸುಲಭವೂ ಆಗಿರುವುದರಿಂದ ಅದನ್ನು ಎದೆ ಹಾಲು ಎಂದು ಕವಿ ಕರೆದಿದ್ದಾರೆ. ಮೊಲೆ ಹಾಲು ಇಲ್ಲದಿದ್ದರೂ ಮಗುವಿನ ಪೋಷಣೆಗೆ ಪರ್ಯಾಯ ಸಾಧನಗಳುಂಟು. ಆದರೆ ಮಾನವೀಯತೆಯನ್ನು ಪರ್ಯಾಯ ಸಾಧನಗಳಿಂದ ತಂದುಕೊಳ್ಳಲು ಸಾಧ್ಯವಾಗದು. ಅದು ತಾಯಿಯ ಅಂತಃಕರಣದಿಂದ ಪಡೆಯುವುದರಲ್ಲಿ ಶ್ರೇಯಸ್ಸಿದೆ.

"ಅನುಭಾವದ ಬೆಳಕನ್ನು ಹುಡುಕುತ್ತ ಹುಡುಕುತ್ತ, ಇಹ – ಪರಗಳ ದ್ವಂದ್ವದಲ್ಲಿ ತೊಳಲುತ್ತ, ಕೊನೆಗೆ ಆ ಬೆಳಕು ಇರುವುದು ನಮ್ಮೆದೆಯೊಳಗೆ ಎಂಬುದು ಅರಿವಾದಾಗ ಅಲ್ಲಿ ತುಂಬಿಕೊಳ್ಳುವುದು ವಿಸ್ಮಯಭರಿತ ಆನಂದ. ನಮ್ಮ ಹಂಬಲದ ತೀವ್ರತೆಗೆ ತಕ್ಕಂತೆ ಹಲವು ಬಗೆಯಲ್ಲಿ ಮೈದಾಳುವ ಈ ಬೆಳಕಿನಿಂದ ಅಂತಿಮವಾಗಿ ನಾವು ಬಯಸುವುದು ವರ್ತಮಾನದ ಕಂಗೆಟ್ಟ ಸ್ಥಿತಿಗೆ ಸಿಗಬಹುದಾದ ಸಾಂತ್ವನವನ್ನೇ ಆದ್ದರಿಂದ ಎಲ್ಲ

ಅನುಭಾವವೂ ಈ ನೆಲದೆದೆಯಲ್ಲಿ ನಿಜವಾಗಬೇಕು. ಅಂತಹ ನೆಲದೆದೆಯ ಅಂತಃಸತ್ವಕ್ಕೆ ಸಮಗಾರ ಭೀಮವ್ವ ಪ್ರತಿಮೆಯಾಗುತ್ತಾಳೆ.

ಮಧುರ ಚೆನ್ನರ 'ದೇವತಾ ಪೃಥವಿ'ಯಲ್ಲಿ ಬರುವಂತೆ ಈ ಕವಿತೆಯಲ್ಲೂ ಭೂಮಿ ಬರುತ್ತದೆ. ಆದರೆ ಇದು ಬರದಿಂದ ಕಂಗೆಟ್ಟು ಬಾಯ್ದೆರೆದ ಭೂಮಿ. ಆ ಬರ ಮನುಷ್ಯರ ಅಂತರಂಗದ್ದೂ ಹೌದು. ಅವರ ಸಾಂಸ್ಕೃತಿಕ ಸಂದರ್ಭದ್ದೂ ಹೌದು. ಇಂತಹ ಬರದಿಂದ ಜ್ವರದಿಂದ ತ್ರಸ್ಥವಾದ ಬದುಕಿಗೆ ಮದ್ದಿರುವುದು ನೆಲದೆದೆಯ ಅಂತಃಸತ್ವದಲ್ಲಲಿಯೇ ಈ ಬರ ಮೇಲ್ತೋರಿಕೆಯದಷ್ಟೆ! ಅಂತರಂಗದ ಸಮೃದ್ಧಿಯನ್ನು ಶೋಧಿಸಿಕೊಳ್ಳುವ ಹಂಬಲದಿಂದ ಕವಿತೆ ಹೊರಡುತ್ತದೆ. ದೇವತಾ ಪೃಥವಿಯಲ್ಲಿ ಕವಿ ಭೂಮಿಯನ್ನು ಅಮೂರ್ತವಾದ ಮಾತೃ ಚೈತನ್ಯದ ಪ್ರತೀಕವಾಗಿ ಭಾವಿಸಿದರೆ, ಇಲ್ಲಿ ಆ ಚೈತನ್ಯ ಇದೇ ನೆಲದ ದಲಿತ ಹೆಣ್ಣಾದ ಭೀಮವ್ವಳಲ್ಲಿ ಮೈದೋರಿದೆ.' ಇದು ಅನುಭಾವದ ಪ್ರಜ್ಞೆಗೆ ಗೋಚರಿಸುವಂತಹುದು".[೬೬]

"ಈ ಭೂಮಿತಾಯಿಯ ಪ್ರಚಂಡ ಚೈತನ್ಯ ಅಂತಿಂಥದಲ್ಲ. ಎಲ್ಲವನ್ನು ಚಿಗುರಿಸುವ ಅರಳಿಸುವ ಆಕೆ ತನ್ನೊಡಲೊಳಗೆ ಎಂಥ ಅಗಾಧ ಫಲವಂತಿಕೆಯನ್ನಿರಿಸಿಕೊಂಡಿದ್ದಾಳೋ ಯಾರು ಬಲ್ಲರು! ಬೀಸುವ ಗಾಳಿಯೆಲ್ಲವೂ ಆಕೆಯದೇ ಉಸಿರು. ಉರಿಯುವ ಬೆಂಕಿ ಅವಳ ಮೈಯದೇ ಕಾವು. ಈ ಕಲ್ಪನೆಯ ಹಿಂದಿರುವ ಭವ್ಯತೆ ಅವಳ ಶಕ್ತಿಯ ಅರಿವನ್ನು ಮೂಡಿಸುತ್ತದೆ. ಆಕೆ ನೀಡುವ ಚೈತನ್ಯವೇ ತನ್ನನ್ನು ಬದುಕಿಸಬಲ್ಲದೆಂಬ ಅರಿವು ಕ್ಷಣ ಕ್ಷಣವೂ ಆಕೆಯನ್ನೇ ನೆನೆಯುವಂತೆ ಮಾಡಿದೆ. ಇಡಿಯ ಪೃಥ್ವಿಯನ್ನೆ ಚೈತನ್ಯದ ದೇಹವಾಗಿ, 'ಮನದ ಹಾಲನ್ನು' ಅದರಲ್ಲಿ ಅಂತರ್ಗತವಾದ ಚೈತನ್ಯವನ್ನಾಗಿ ಭಾವಿಸುವ ಭವ್ಯ ಭಾವದ ಹಿಂದೆ ಚೈತನ್ಯದ ಆರಾಧನೆ ಇದೆ. ಆ ಮೂಲ ಭಾವವನ್ನು ಮಾತೃ ಮೂಲದಲ್ಲಿ ಕಂಡು ಆರಾಧಿಸುವದು ಭಾರತೀಯ ಪರಂಪರೆಯ ಪರಿಯೇ ಆಗಿದೆ."[೬೭]

ಆಧ್ಯಾತ್ಮಿಕಕ್ಕಿಂತ ಭಿನ್ನವಾದ, ವಾಸ್ತವಿಕತೆಗೆ ಹತ್ತಿರವಾದ ಮಾತೃತ್ವದ ಹಿರಿಮೆಯನ್ನು ಸಾರುವ ಕವಿತೆ ಕೆ.ಎಸ್. ನರಸಿಂಹಸ್ವಾಮಿಯವರ 'ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ'. ಪರಸ್ಪರ ದೂರವಾಗಿದ್ದ ತಂದೆ ಮಗ ಮುಖಾಮುಖಿಯಾದ ಸಂದರ್ಭ ಈ ಕವಿತೆಯ ವಸ್ತು. ತಾಯ ಕಣ್ಣಾಸರೆಯಲ್ಲಿ ಬೆಳೆದ ಮಗ ದೊಡ್ಡವನಾಗಿ ಜವಾಬ್ದಾರಿ ನಿರ್ವಹಿಸಲು ಸಮರ್ಥ ಎಂದು ತಿಳಿದ ತಂದೆ ಮಗನ ಮೇಲೆ ತನ್ನ ಹೊಣೆಯನ್ನು ಹೊರಿಸಲು ಬಂದಿದ್ದಾನೆ. ಮಗ ಇಷ್ಟು ದಿನ ಕಾಣದಿದ್ದ ತಂದೆಯನ್ನು ಛೇಡಿಸುತ್ತಾ ಬಿಡುಗಡೆ ಬೇಡುತ್ತಾನೆ. ಆತನ ಮನಸ್ಸು ಒಂಟಿಯಾಗಿ ನಿಂತು ಸಾಕಿ ಸಲುಹಿದ ತಾಯಿಯ ಕಡೆ ವಾಲುತ್ತದೆ. ಈತನಿಗೆ ತಂದೆಯ ಹಂಗಿಲ್ಲದೇ ಬಾಳುವ ಹಂಬಲ. ಆದರೆ ತಂದೆ ' . . . ಹಗೆಯಾಗು ಹಣ್ಣಾಗಿಸೆನ್ನುಸಿರನು' ಎಂದು ಕೋರುತ್ತಾನೆ. 'ಮುಪ್ಪಿರದ ಸಾವಿರದ ನಿನ್ನ ದೊರೆತನವೆಂದು ಮುಗಿದೀತು' ಎಂದು ಮಗ ದಿನಗಳನೆಣಿಸುತ್ತಿಲ್ಲ. ತನ್ನ ಪಾಡಿಗೆ ತಾನು ಬೆಳೆಯುವೆನೆನ್ನುತ್ತಾನೆ.

ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ;
ತೊಡಿಸದಿರು ಚಂದ್ರ ಕಿರೀಟವನು
ಕೊರಳಿಗೆ ಭಾರ ನನಗೆ ನಕ್ಷತ್ರ ಮಾಲೆ;

ನಾನೊಲ್ಲೆ ದೊರೆತನವನು.

. . . .

'ಮುಪ್ಪಿರದ ಸಾವಿರದ ನಿನ್ನ ದೊರೆತನವೆಂದು
ಮುಗಿದೀತು' ಎಂದು ಕಾದಿಲ್ಲ ನಾನು.
'ಬೆಳೆದ ಮಗ ಹೊರಲಿ ನೊಗ, ಕೇಳಿ ಬಿಡುವೆನೆಂದು'
ಭ್ರಮೆಗೊಂಡು ಬಂದಿರುವೆ ನೀನು! [೬೮]

ದೇವರು ನಂಬಿಕೆಯ ವಸ್ತು. ತಾಯಿ ವಾಸ್ತವಿಕ ಸತ್ಯ. ಆಕೆಯ ಕರುಣೆಯ ಕಣ್ಣಿನಲ್ಲಿ ರೂಪುತಾಳಿದ ಮಗ ದೊಡ್ಡವನಾಗಿ ಬೆಳೆದು ನಿಂತಾಗ ಹುಡುಕಿ ಬಂದ ತಂದೆಯ ಸ್ವಾರ್ಥಕ್ಕೆ ಸೊಪ್ಪು ಹಾಕದೆ ತಂದೆಯ ಸಂಪತ್ತು ಸಾಮ್ರಾಜ್ಯಕ್ಕಿಂತ ಮಿಗಿಲಾದದ್ದು ತಾಯಿಯ ಪ್ರೇಮ ಸಾಮ್ರಾಜ್ಯವೆಂದು ಮಗ ತೋರಿಸಿಕೊಡುತ್ತಾನೆ. ತಂದೆಯ ಬೇಡಿಕೆ ನಿರಾಕರಿಸುವ ಮಗನ ನಿಲುವಿನಲ್ಲಿ ಸ್ವಾಭಿಮಾನದ ಕೆಚ್ಚಿದೆ. ತಂದೆಯ ನೆರವು – ನೆರಳು ಇಲ್ಲದೆ ಬದುಕಬಲ್ಲೆನು ಎಂಬ ದೃಢತೆ ಇದೆ.

"ಮಾನವರ ತಂದೆ ದೇವನೆಂಬ ನಂಬಿಕೆಯುಂಟು. ಅವನ ಹಂಗನ್ನು ತೊರೆಯುವ ಛಲವನ್ನು ಕವಿತೆ ಮನ್ನಿಸುತ್ತದೆ. ವಸುಂಧರೆಯ ಮಕ್ಕಳು ತಂದೆಯನ್ನು ಕಾಣದೆ ಬೆಳೆದವರು. ತಾಯ ಕಣ್ಣ ರಕ್ಷೆಯೊಂದೆ ಅವರಿಗಿರುವುದು, ಬೆಳೆದಂತೆ ತಂದೆಯ ಕೃಪೆಗಾಗಿ ಬೇಡುವ, ಹಾತೊರೆಯುವ ಬಗೆಯನ್ನು ಕವಿತೆಯ ದನಿ ನಿರಾಕರಿಸುತ್ತದೆ. ದೇವರಿಲ್ಲ ಎಂಬ ಹಠಕ್ಕಿಂತ ಇದ್ದರೂ ಅವನ ಕೃಪೆ ಬೇಡವೆಂದು ಬಾಳುವ ದುರ್ಗಮ ಮಾರ್ಗವನ್ನು ಕವಿತೆ ಮಗನ ಮೂಲಕ ಪ್ರತಿಪಾದಿಸುತ್ತದೆ".[೬೯] – ಎಂಬ ಕೆ.ವಿ. ನಾರಾಯಣರವರ ವ್ಯಾಖ್ಯಾನ ಕವಿತೆಯ ಅರ್ಥವಾಪ್ತಿಯನ್ನು ಕಟ್ಟಿ ಕೊಡುತ್ತದೆ.

ಎಂ.ಬಿ. ಹೂಗಾರರವರ ಕವಿತೆ 'ನನ್ನವ್ವ' ನವ್ಯದ ಕವಚದಲ್ಲಿ ರೂಪುಗೊಂಡ ಕವಿತೆ. ಇಲ್ಲಿನ ತಾಯಿ ದೇಶವೂ ಹೌದು, ಹೆತ್ತ ತಾಯಿಯೂ ಹೌದು. ಇಲ್ಲಿ ಹುಟ್ಟಿದವರೆಲ್ಲ ಒಂದೇ ತಾಯಿ ಮಕ್ಕಳಾದರೂ ಅವರಲ್ಲಿ ಸೋದರತೆಯ ವಾತ್ಸಲ್ಯವಿಲ್ಲ, ಸಮಾನತೆಯ ಸ್ನೇಹವಿಲ್ಲ, ಎಲ್ಲರ ಬದುಕು ಒಂದಾಗಿಲ್ಲ. ತರತಮದಲ್ಲೆ ಬಿದ್ದು ಗುದ್ದಾಡುವ ಮಕ್ಕಳನ್ನು ಈ ತಾಯಿ ಹಡೆದಿದ್ದಾಳೆ ಎಂಬ ಅರ್ಥದಲ್ಲಿ ಕವಿತೆ ತೆರೆದುಕೊಳ್ಳುತ್ತದೆ. ಕೊನೆಯಲ್ಲಿ ಹೆತ್ತ ತಾಯಿ ತನ್ನ ಅಂತರಾಳದಲ್ಲಿ ಆಶಾಕಿರಣ ತಾಳಿ ನಿಂತಿದ್ದಾಳೆ, ಬಂದೂಕಿನ ಬಾಯಿಗೆ ಗುಬ್ಬಿ ಗೂಡು ಕಟ್ಟುವ ಕ್ಷಣಕ್ಕಾಗಿ – ಎಂದು ಸಮಾಧಾನ ತಾಳುತ್ತಾರೆ.

ನನ್ನವ್ವನ ಹುಡಿಯಿಂದ
ಜಾರಿಬಿದ್ದ; ಕೋಟಿ ಕೋಟಿ ನಕ್ಷತ್ರದಂತೆ
ಹೊಳೆಯ ಬೇಕಾದವರು
ಬಿದ್ದಲ್ಲೆ ಒದ್ದಾಡುತಲಿದ್ದಾರೆ ಗುದ್ದಾಡುತಲಿದ್ದಾರೆ.

. . . .

ಅವ್ವ ತನ್ನ ಆಸೆಗೆ ಇನ್ನೂ
ಇಟ್ಟಿಲ್ಲ ಬೆಂಕಿ; ನೋಡುತ್ತಾಳೆ ಹುಬ್ಬಿಗೆ ಕೈ ಹಚ್ಚಿ
ಬೀಸೀತು ಸುಖ ಶಾಶ್ವತ;
ಕಾಯುತ್ತಾಳೆ ಅದಕ್ಕಾಗಿ

ಬಂದೂಕಿನ ಬಾಯಿಗೆ ಗುಬ್ಬಿ
ಗೂಡು ಕಟ್ಟುವ ಕ್ಷಣಕ್ಕಾಗಿ![೭೮]

ಯಾವುದೇ ದೇಶದಲ್ಲಿ ಸಂಪೂರ್ಣವಾಗಿ ಸತ್ವಭರಿತ ಜನಾಂಗವನ್ನು ಕಾಣುವುದು ಕಷ್ಟಸಾಧ್ಯವಾಗುತ್ತದೆ. ಇದ್ದುದರಲ್ಲಿ ಹೆಚ್ಚುಮಂದಿ ಸತ್ವ ಭರಿತರಾಗಿರಬೇಕೆಂದು ಎಲ್ಲರೂ ಸಹಜವಾಗಿಯೇ ನಿರೀಕ್ಷಿಸುತ್ತಾರೆ. ಆ ನಿರೀಕ್ಷೆ ಹುಸಿ ಎನಿಸಿದಾಗ ಸಾಮಾನ್ಯವಾಗಿ ನಿರಾಶೆ, ನೋವಿನ ನುಡಿ ಕಂಡುಬರುತ್ತದೆ. ಆದರೂ ಮುಂದೊಂದು ದಿನ ತನ್ನ ನಿರೀಕ್ಷೆ ನಿಜರೂಪಗೊಂಡೀತು ಎಂಬ ಆಶಾವಾದಿತನ ಈ ಕವಿತೆಯಲ್ಲಿ ಕಂಡುಬರುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ ದೇಶವನ್ನು ತಾಯಿಯಾಗಿ ಪರಿಭಾವಿಸಿ ಆಕೆಯ ಹಿರಿಮೆ ಗರಿಮೆಯನ್ನು ಮೈದುಂಬಿ ವರ್ಣಿಸುವ ಸಂಪ್ರದಾಯಕ್ಕೆ ವಿರುದ್ಧವಾಗಿ ಈ ಕವಿ ಸ್ವಾತಂತ್ರ್ಯ ನಂತರ ದೇಶದಲ್ಲಿ ಕಂಡಂತ ಪ್ರಜಾತಂತ್ರದ ದುರುಪಯೋಗ, ಶೋಷಣೆಗೆ ಒಳಗಾದವರ ಹೀನಾಯ ಬದುಕು ಹಾಗೂ ಬುದ್ಧಿವಂತರ ವಂಚನೆಗೆ ಒಳಗಾಗಿ ನೋವುಂಡ ಜನರ ದಾರುಣ ಸ್ಥಿತಿಯನ್ನು ಬಿಂಬಿಸುವ ಕವಿತೆ ಇದಾಗಿದೆ.

ದಾರಿಹೋಕ ಅಪರಿಚಿತ ಮಹಿಳೆಯಲ್ಲಿ ತನ್ನ ತಾಯಿಯ ರೂಪ ದರ್ಶಿಸಿರುವುದು ಸರಜೂ ಕಾಟ್ಕರ್ ರವರದು. ಅವರ 'ಅವ್ವ: ನಿನ್ನದೇ ಪ್ರತಿಬಿಂಬ' ಕವಿತೆಯಲ್ಲಿ ಕಂಡುಬರುತ್ತದೆ.

ನಿನ್ನ ಹಣೆಯ ಮೇಲೆ ಇದ್ದಷ್ಟೇ
ದೊಡ್ಡ ಕುಂಕುಮ
ನೀನು ಹಾಕಿಕೊಂಡಂತಹದ್ದೇ ಸೀದಾ ಸಾದಾ ಸೀರೆ
. . . .
ಥೇಟ್ ನಿನ್ನಂತೆಯೇ ಕಾಣುವ ಆಕೆ
ನನ್ನ ಮುಂದೆಯೇ ರಸ್ತೆ ದಾಟಿದಳು
ನೀನೇ ಅವಳೆಂದು, ಅವ್ವಾ
ನಿನ್ನ ಪ್ರತಿಬಿಂಬಕ್ಕೆ ಕೈ ಮುಗಿದೆ [೭೯]

ತಾಯಿಯ ನೆನಪು ನಿರಂತರ. ಆಕೆ ಅಗಲಿ ಎಷ್ಟೋ ವರ್ಷಗಳಾದರೂ ಆಕೆಯ ರೂಪು, ನಡೆ, ನುಡಿ ನಮ್ಮ ಅಂತರಂಗದಲ್ಲಿ ಅಚ್ಚೊತ್ತಿದಂತಿರುತ್ತದೆ. ಬಡತನದ ಬಾಳಿನಲ್ಲಿ ಇದ್ದು ಮರೆಯಾದ ತಾಯಿಯನ್ನೇ ಹೋಲುವ ಸ್ತ್ರೀಯೋರ್ವಳು ಕವಿಯ ಕಣ್ಣೆದುರು ರಸ್ತೆ ದಾಟುವಾಗ ಆಕೆಯಲ್ಲಿ ತನ್ನ ತಾಯಿಯ ಪ್ರತಿಬಿಂಬ ಕಂಡು ಕೃತಜ್ಞತೆಯ ಕೈ ಮುಗಿದಿರುವ ಕವಿಯ ಮಾತೃ ಪ್ರೇಮ ಈ ಕವಿತೆಯಲ್ಲಿ ವ್ಯಕ್ತವಾಗಿದೆ.

ಹೊಸ್ಕೆರೆ ಎಸ್. ಶಿವಸ್ವಾಮಿಯವರು 'ಸಾಮಾನ್ಯನೊಬ್ಬನ ಅಸಮಾನ್ಯ ಬದುಕು' ಕವಿತೆಯಲ್ಲಿ ತನ್ನ ತಂದೆಯಲ್ಲಿ ತಾಯ್ತನ ಕಂಡಿದ್ದಾರೆ.

ಮಮತೆ ವಾತ್ಸಲ್ಯ ಔದಾರ್ಯಕ್ಕೆ
ಹೆಣ್ಣನ್ನು ಹೆಸರಿಸುವುದುಂಟು

ಅಪ್ಪಾ! ಆದರೆ ಅದು ಹೆಣ್ಣಿನ ಸ್ವತ್ತಲ್ಲ
ಬಾಳಿದೆ, ತೋರಿದೆ, ಸಾರಿದೆ.
ತಾಯ ವಾತ್ಸಲ್ಯಕ್ಕೆ ಸಹಕಾರಿಯಾದೆ
ಗಂಡಿನ ದರ್ಪ ತೋರಲೇ ಇಲ್ಲ,
"ಯತ್ರನಾರ್ಯಸ್ತು ಪ್ರಜ್ಯಂತೆ
ರಮಂತೇ ತತ್ರ ದೇವತಃ"
ಅಮ್ಮನಿಗೆ ಕಷ್ಟಸುಖದಲ್ಲಿ
ಸಹಭಾಗಿಯಾದೆ, ಬದುಕಿನ ವನದಲ್ಲಿ
ತಂಗಾಳಿಯಾಗಿ ಬೀಸಿದೆ. [೨೧]

ಶ್ರಮ, ಸಹನೆ, ಪ್ರೀತಿ, ಸ್ನೇಹಕ್ಕೆ ಸಾಕ್ಷಿಯಾಗಿದ್ದ ತಂದೆಯನ್ನು ಇತರೆ ಆದರ್ಶ ಮಹನೀಯರಿಗಿಂತ ಆದರ್ಶ ವ್ಯಕ್ತಿಯೆಂದು ಕಂಡಿರುವುದು ತಿಳಿಯುತ್ತದೆ. ತಂದೆಯಲ್ಲಿ ತಾಯಿಯ ಗುಣ ಕಂಡು, ಅವರ ತ್ಯಾಗದ ಆದರ್ಶದ ಬದುಕನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಶಿವರಾಮಯ್ಯನವರ ಕವಿತೆ 'ಉರಿಯ ಉಯ್ಯಾಲೆ' ನೆಲದ ಸ್ಫೋಟಕ ಶಕ್ತಿಯನ್ನು ಪರಿಚಯಿಸುತ್ತದೆ. ಬಯಲುಸೀಮೆಯ ಗ್ರಾಮೀಣ ಬದುಕನ್ನು ಮೈಗೂಡಿಸಿಕೊಂಡು ಅದನ್ನು ಬರವಣಿಗೆಯಲ್ಲಿ ಕಟ್ಟಿಕೊಡುವ ಶಿವರಾಮಯ್ಯನವರ ಈ ಕವಿತೆಯಲ್ಲಿ ಭೂಮಿತಾಯಿ ಉರಿಯ ದೇವನ ಸುತ್ತ ಸುತ್ತುತ್ತಾಳೆ. ಗಂಡನಿಲ್ಲದ ಗರತಿಯಾದ ಆಕೆಯ ಒಡಲಿನಲ್ಲಿ ನಿಗಿನಿಗಿ ಕೆಂಡವಿದೆ. ಆಕೆ ರೋಷಗೊಂಡಾಗ ಉರಿದೇಳುತ್ತಾಳೆ, ಬೆಂಕಿಕಾರುತ್ತಾಳೆ. ಒಡಲುರಿಯ ಹೊತ್ತು ನಿಂತ ಭೂತಾಯಿಯನ್ನು ಕೆರಳಿಸುವ ಕುಕೃತ್ಯವನ್ನು ಆಕೆಯ ಮಕ್ಕಳಾದ ನಾವು ಮಾಡಬಾರದೆಂಬ ಪರೋಕ್ಷ ಎಚ್ಚರಿಕೆಯನ್ನು ನೀಡುವ ಕವಿತೆಯಾಗಿದೆ.

ಉರಿಯ ಉಯ್ಯಾಲೆ ತೂಗುತ್ತಾಳೆ
ನಮ್ಮವ್ವ । ಕೆಂಡ ಮಂಡಲ ಉರಿದು
ತಿರುಗುತ್ತಾಳೆ
. . . .
ಉರಿಯ ದೇವನ ಸುತ್ತ ಸುತ್ತುತ್ತಾಳೆ
ನಮ್ಮವ್ವ । ಗಂಡನಿಲ್ಲದ ಗರತಿ
ಮೆರೆಯುತ್ತಾಳೆ
ಬೆಂಕಿ ಬಸುರನು ಹೊತ್ತು ಸುಖಿಸುತ್ತಾಳೆ
ನಮ್ಮವ್ವ । ಲಾವಾರಸವುಕ್ಕಿ
ಹರಿಯುತ್ತಾಳೆ. . . [೨೨]

ತ್ರಿಪದಿಯ ಸ್ವರೂಪದಲ್ಲಿರುವ ಈ ಕವಿತೆ ಭೂಮಿಯ ರೌದ್ರತೆಯನ್ನು ಚಿತ್ರಿಸುವಲ್ಲಿ ಸಫಲವಾದರೂ, ಅದರ ಮತ್ತೊಂದು ಮುಖ ಸೌಮ್ಯತೆಯನ್ನು ಚಿತ್ರಿಸದೆ ಸೊರಗಿದೆ. ಕೇವಲ ಭೂತಾಯಿ ಲಾವಾರಸ ಕಾರುವ ಉಗ್ರ ದೇವತೆಯಂತೆ ಕಂಡಿದ್ದಾರೆ. ಕಣ್ಣಿಗೆ ತೋರುವ ಸಸ್ಯಶ್ಯಾಮಲೆಯಲ್ಲಿ ಊಹಿಸಲಾರದ ರೌದ್ರಶಕ್ತಿ ಅಡಗಿದೆ. ಯಾವ ಕ್ಷಣದಲ್ಲಿ ಅವಳು ತನ್ನ ವಿರಾಟ್ ಸ್ವರೂಪ ತೋರುತ್ತಾಳೋ ತಿಳಿಯದು.

ಸಂಕೀರ್ಣದಲ್ಲಿ ತಾಯಿ ಕಲ್ಪನೆಯನ್ನು ಭಿನ್ನ ಭಿನ್ನ ನೆಲೆಗಳಲ್ಲಿ ಕವಿಗಳು ಭಾವಕ್ಕೆ ತಕ್ಕಂತೆ ಕವಿತೆಯಾಗಿ ರೂಪಿಸಿದ್ದಾರೆ. ಕಲೆ ಮತ್ತು ಕಾಲ ಎರಡನ್ನೂ ಒಳಗೊಂಡ ಧ್ವನಿಯಾಗಿದೆ. ಇವುಗಳಲ್ಲಿ ವೈವಿಧ್ಯವಿದೆಯಾದರೂ ಯಾವುದೋ ಒಂದರ ಹುಡುಕಾಟ ನಿರಂತವಾಗಿ ಸಾಗಿದೆ. ಸಾಗುತ್ತದೆ. ಇದು ಶೃಜನಶೀಲತೆಯ ಗುಣ ಲಕ್ಷಣ. ಸಾಹಿತ್ಯಕ ಪಂಥಗಳ ಪ್ರತಿನಿಧಿಯಾಗಿಯೂ ಕವಿತೆಗಳು ನಿಲ್ಲುತ್ತವೆ. ಪ್ರಾದೇಶಿಕ ವೈವಿಧ್ಯವಿದೆ. ಭಾಷೆ ಬಳಕೆ ಕೂಡ ಅಂದಂದಿನ ಅಗತ್ಯತೆಯನ್ನು ಪೂರೈಸುವಲ್ಲಿ ಪೂರಕವಾಗಿದೆ.

ತಾಯಿಯ ಸಹನೆ, ಕರುಣೆ, ವಾತ್ಸಲ್ಯ ತ್ಯಾಗ, ಮಮಕಾರಗಳು ಅಪಾರ. ಆಕೆ ಎಲ್ಲ ನೋವನ್ನು ಸಹಿಸಿ ತನ್ನನ್ನು ಆಶ್ರಯಿಸಿರುವ ಮಗುವಿಗಾಗಿ ಶ್ರಮಿಸುತ್ತಾಳೆ. ನೂರಾರು ಕಷ್ಟಗಳನ್ನು ಎದುರಿಸುತ್ತಾಳೆ. ಬವಣೆಯ ಬದುಕನ್ನು ನಿಭಾಯಿಸುತ್ತಾಳೆ. ನಾಳಿನ ಸುಖಕ್ಕಾಗಿ ಇಂದು ಕಷ್ಟಗಳನ್ನು ಅನುಭವಿಸುತ್ತಾಳೆ. ಈ ಗುಣಗಳ ಮೊತ್ತವೇ ತಾಯಿ. ಇಂತಹ ಗುಣ ಮೊತ್ತಗಳನ್ನು ವಿರಳವಾಗಿ ಅನ್ಯರಲ್ಲೂ ಕಾಣಲು ಸಾಧ್ಯವಿದೆ. ಇದು ಅನುಭವಿಸಿದ ವ್ಯಕ್ತಿಗೂ ಹಾಗೂ ವ್ಯಕ್ತಪಡಿಸುವ ವ್ಯಕ್ತಿಗೂ ನಡುವೆ ಏರ್ಪಟ್ಟ ಸಂಬಂಧದೊಂದಿಗೆ ಇದು ಪ್ರಕಟವಾಗುತ್ತದೆ. ಇಂತಹ ಪ್ರಸಂಗಗಳು ಬಹಳಷ್ಟು ಜನರ ಬದುಕಿನಲ್ಲಿ ಬರುತ್ತವೆ. ಇಂತಹ ಸಂಬಂಧಗಳು ಉಪಕಾರ ಉಂಡ ವ್ಯಕ್ತಿಯಲ್ಲಿ ಕೃತಜ್ಞತೆಯ ಭಾವತರಂಗಗಳೇಳಿಸಲು ಸಾಧ್ಯ. ಅಂತಹ ಸಂದರ್ಭಗಳನ್ನು ಕವಿಗಳು ತಮ್ಮ ಬದುಕಿನಲ್ಲಿ ಕಂಡು ಉಂಡವರಾಗಿರುವುದು ಅವರ ಕವಿತೆಗಳಲ್ಲಿ ಕಂಡುಬರುತ್ತದೆ.

ತನ್ನ ಭಾವ ಶ್ರೀಮಂತಿಕೆಗೆ, ಬದುಕಿನ ಏಳಿಗೆಗೆ, ಜೀವನ ನಿರ್ವಹಣೆಗೆ, ಕೀರ್ತಿ ಗೌರವಕ್ಕೆ ನೆರವಾದವರಲ್ಲಿ ತಾಯಿತನವನ್ನು ಕಂಡಿದ್ದಾರೆ. ತಂದೆಯಲ್ಲಿ, ಗುರುಗಳಲ್ಲಿ, ಹೆಂಡತಿಯಲ್ಲಿ, ನಿಸರ್ಗದಲ್ಲಿ ತಾಯಿತನದ ಹೃದಯ ಶ್ರೀಮಂತಿಕೆಯನ್ನು ಕನ್ನಡ ಕವಿಗಳು ಕಂಡಿದ್ದಾರೆ. ಅದನ್ನು ಅನುಭವಿಸಿ ಕೃತಜ್ಞತೆಯಿಂದ ಸ್ಮರಿಸಿರುವುದುಂಟು. ಇಲ್ಲಿ ಅವರ ಕಲ್ಪನೆ, ಪಾಂಡಿತ್ಯ ಹಿಂದೆ ಸರಿದು ಮಾನವೀಯತೆ, ಕೃತಜ್ಞತೆ, ಧನ್ಯತೆಯ ಭಾವ ಜಾಗೃತಗೊಂಡು ತಲೆ ಬಾಗಿದೆ.

ಹಿರಿಯ ತಲೆಮಾರಿನ ನವೋದಯ ಪಂಥದವರಲ್ಲಿ ಸೌಂದರ್ಯದ ಪ್ರತೀಕವಾಗಿ, ಪರಂಪರೆಯ ಹಿನ್ನೆಲೆಯಲ್ಲಿ, ಸಾತ್ವಿಕ ನೆಲೆಗಟ್ಟಿನಲ್ಲಿ ಸಂಕೀರ್ಣವಾದ ತಾಯಿ ಚಿತ್ರ ಸಾಂಪ್ರದಾಯಕ ಶೈಲಿಯಲ್ಲಿ ಮೂಡಿಬಂದಿದೆ. ಅದೇ ದಲಿತ ಬಂಡಾಯದವರಲ್ಲಿ, ಸ್ತ್ರೀಯರಲ್ಲಿ ಇದಕ್ಕೆ ತದ್ವಿರುದ್ಧವೂ, ವಾಸ್ತವಿಕವೂ ಆದ ರೀತಿಯಲ್ಲಿ ಮೂಡಿಬಂದಿದೆ. ಕೇವಲ ಆಡಂಬರ ಅಟ್ಟಹಾಸದ ಪದ ಜೋಡಣೆಯ ಭರಾಟೆಯಲ್ಲಿ ಮೂಡಿಬರುತ್ತಿದ್ದ ಸಾಂಪ್ರದಾಯಕ ಕವಿತೆಗಳಿಗೆ ಭಿನ್ನವಾಗಿ ಕಲಾತ್ಮಕತೆಯೊಂದಿಗೆ, ನೈಜವಾಗಿ ಮೂಡಿಬಂದಿದೆ. ಎಲ್ಲಿಯೂ ಉಪಕರಿಸದ ವ್ಯಕ್ತಿ ಅಥವ ವಸ್ತುವಿನಲ್ಲಿ ದೇವತಾ ಶಕ್ತಿಯನ್ನಾಗಲಿ, ಪೊರೆವ ದೇವರನ್ನಾಗಲಿ, ಕಲ್ಪನೆಗೆ ಅತೀತವಾದುದ್ದನ್ನಾಗಲಿ ಚಿತ್ರಿಸಿಲ್ಲ. ಆ ವ್ಯಕ್ತಿ ಅಥವ ವಸ್ತು ತಮ್ಮ ಬದುಕಿನ ಮೇಲೆ ಬೀರಿದ ಬೆಳಕು, ನೀಡಿದ ಶಕ್ತಿ, ತೋರಿದ ಆಸಕ್ತಿ, ಓಲೈಸಿದ ಪ್ರೀತಿಯನ್ನು ಕೃತಜ್ಞತೆಯ ಭಾವದಿಂದ ಚಿತ್ರಿಸಿದ್ದಾರೆ. ಇದು ಕವಿಮನೋಧರ್ಮದ ವಿಶಿಷ್ಟ ಕಾಣ್ಕೆ ಎನ್ನಬಹುದು.

ಗೇಯತೆಯ ಧಾಟಿಯಲ್ಲಿ 'ರಾಗ'ಗಳಿಗೆ ಒಳಪಟ್ಟು ರಚಿಸಿರುವ ಪರಿಪಾಠವನ್ನು ನವೋದಯದ ಆರಂಭ ಕಾಲದಲ್ಲಿ ಸಾಂಪ್ರದಾಯಕ ಮನೆತನಗಳಿಂದ ಬಂದ ಕವಿಗಳಲ್ಲಿ ಮಾತ್ರ ಕಾಣಲು ಸಾಧ್ಯ. ಅವರಿಗೆ ಕವಿತ್ವ ಲಭ್ಯವಾಗುವುದಕ್ಕಿಂತಲೂ ಮುಂಚೆಯೇ ಸಂಗೀತದ ರಾಗ – ತಾಳಗಳ ಬಗ್ಗೆ ಸ್ಪಷ್ಟ ಪರಿಜ್ಞಾನವಿರುವುದು ತಿಳಿಯುತ್ತದೆ. ಹಾಗಾಗಿ ಕಾವ್ಯ ಭಾಷೆಗೆ ಸಂಪ್ರದಾಯಬದ್ಧವಾದ ಶಬ್ದರೂಪ ನೀಡಿದ್ದಾರೆ. ಹಿಂದಿನಿಂದ ರೂಢಿಗತವಾಗಿ ಬಂದಿದ್ದ ವ್ಯಾಕರಣ ಛಂದಸ್ಸಿನ ಸೂತ್ರಗಳನ್ನು ಕೈಬಿಟ್ಟು, ದೈನಂದಿನ ಬದುಕಿನಲ್ಲಿ ನಿರಂತರ ಬಳಕೆಗೆ ಸಾಧ್ಯವಾಗುವಂತಹ ಭಾಷೆಗೆ ಒತ್ತು ಕೊಟ್ಟಿದ್ದಾರೆ. ಇದು ಆ ಕಾಲದ ಅಗತ್ಯವೂ, ಅನಿವಾರ್ಯವಾದ ಅಂಶವೂ ಆಗಿತ್ತು. 'ಕಾಲೇ ಕಾಲೇ ನವಾಚಾರಾ' ಅಥವಾ 'ನವೋ ನವೋ ಭವತಿ ಜಾಯಮಾನಃ' ಎಂಬ ಸೂತ್ರಕ್ಕೆ ಇದು ನಿದರ್ಶನ. ವ್ಯಕ್ತಿಗತ ಗುಣ ಲಕ್ಷಣಗಳಂತೆ ಕವಿತೆಗಳೂ ಕೂಡ ಕವಿತ್ವದ ಗುಣ ಲಕ್ಷಣಗಳಾಗಿರುತ್ತವೆ. ". . . . . . ನಮ್ಮ ಕಡೆ ಪ್ರಧಾನವಾಗಿ ಶ್ರೀ ಪುಟ್ಟಪ್ಪನವರೂ, ಉತ್ತರ ಕರ್ನಾಟಕದ ಕಡೆ ಶ್ರೀ ಬೇಂದ್ರೆಯವರೂ ತಮ್ಮ ಕವಿತೆಗಳನ್ನು ಓದಿ ಈ ಬಗೆಗೆ ಉತ್ಸಾಹವನ್ನು ಸೆಳೆದರು. ಅವೆರಡೂ ವಿಶಿಷ್ಟ ಶೈಲಿಗಳು. ನಮ್ಮಲ್ಲಿ ಕೆಲವರು ಗೀತೆಗಳನ್ನು ರಾಗಗಳಿಗೆ ಹೊಂದಿಸಿ ಬರೆಯ ತೊಡಗಿದ್ದರು. ಇದರ ಅನುಕೂಲ ಪ್ರತಿಕೂಲಗಳು ಅನೇಕ ದಾಸರ ಪದ ತ್ಯಾಗರಾಜರ ಕೀರ್ತನೆಗಳು ಇವುಗಳಲ್ಲಿ ಇರುತ್ತಿದ್ದ ರಾಗ ತಾಳಗಳ ಕಟ್ಟಿಗೆ ಸಿಕ್ಕಿಸದೇ, ಬರಿಯ ಲಯಬಂಧದ ಗತಿಗಿಂತ ಸ್ವಲ್ಪ ಹೆಚ್ಚು ಗೇಯತೆ ಉಳ್ಳ ಧಾಟಿಗಳನ್ನೇ ನಿರ್ಮಾಣ ಮಾಡಿಕೊಂಡು ಸಾಹಿತ್ಯದಲ್ಲಿ ಈ ಹೊಸ ಮಾರ್ಗವನ್ನು ಬಳಕೆಗೆ ತಂದು, ಹೊಸ ಕಾಲದ ನೆಡೆಯನ್ನು, ಭಾವಗಳನ್ನು ಹೊರಕ್ಕೆ ತರಬೇಕು ಎಂದು ಪ್ರಯೋಗ ನಡೆದು ಕೆಲವು ಸುಂದರ ಗೇಯಗಳು ಹುಟ್ಟಿದವು . . . ."[೭೪] ಎಂಬ ವಿ.ಸೀ.ಯವರ ಮಾತುಗಳೆ ಅಂದಿನ ಎಲ್ಲ ಕವಿಗಳ ಮಾತೂ ಆಗಿತ್ತು ಎಂದು ಕಾಣುತ್ತದೆ. ದೇಶಾಭಿಮಾನ ನಾಡಾಭಿಮಾನಗಳನ್ನು ಜನರಲ್ಲಿ ತುಂಬಿ ಬಿಂಬಿಸಬೇಕಾದ ಅನಿವಾರ್ಯತೆ ಆ ಕವಿಗಳ ಪಾಲಿಗಿತ್ತು. ಅದಕ್ಕಾಗಿ ಅವರು ಈ ನಾದ ಮಾಧುರ್ಯದ ಗೀತೆಗಳನ್ನು ಬರೆಯುವುದು ಅಗತ್ಯವಾಗಿತ್ತು. ಆದರೆ ಕಾಲ ಸರಿದಂತೆ, ಚರ್ಚೆ ಚಿಂತನೆಗಳು ತೀವ್ರವಾದಂತೆ, ಪಂಥಗಳು ಕವಲಾಗಿ ರೂಪುತಾಳಿದಂತೆ ಕವಿತೆಯ ಬಂಧಕ್ಕೆ ವಿಶಿಷ್ಟ ಸ್ವರೂಪ ನೀಡಲು ಸಾಧ್ಯವಾಯಿತು. ಒಂದೊಂದು ಪಂಥದವರೂ ಒಂದೊಂದು ಅಂಶಗಳಿಗೆ ಆದ್ಯತೆ ನೀಡಿದ್ದು ಈ ಹಿನ್ನೆಲೆಯಲ್ಲಿ ವ್ಯಕ್ತವಾಗಿದೆ. ಜೀವನ ವಿಧಾನದಲ್ಲಿ ಬದಲಾವಣೆಯಾದಂತೆ ಕವಿಗಳ ಬರವಣಿಗೆಯಲ್ಲೂ, ಅದರ ಬಂಧ, ಭಾಷೆ, ಶೈಲಿಗಳಲ್ಲೂ ಬದಲಾವಣೆ ಕಂಡಿತು.

ಕೊನೆ ಟಿಪ್ಪಣಿಗಳು:

೧. ಅಂಬಿಕಾತನಯದತ್ತರ ಭಾವಗೀತೆಗಳು. ಡಾ.ರುಕ್ಮಿಣಿ ಪರ್ವತಿ. ಪುಟ: ೨೩೯.
೨. ಕವಿರಾಜ ಮಾರ್ಗ, ಸಂ.ಎಂವಿ.ಸೀತಾರಾಮಯ್ಯ. ಪುಟ: ೩.
೩. ಪಂಪನ ಆದಿ ಪುರಾಣ, ಸಂ.ಎಲ್. ಬಸವರಾಜು, ಪುಟ : ೧

೪. ಕುಮಾರವ್ಯಾಸನ ಕರ್ನಾಟ ಭಾರತ ಕಥಾಮಂಜರಿ, ಸಂ.ಕೆ.ವಿ. ಪುಟ್ಟಪ್ಪ ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್,ಪುಟ:೧

೫. ಪುರಂದರ ಸಾಹಿತ್ಯ, ಸಂ. ಎಸ್. ಕರ. ರಾಮಚಂದ್ರ ರಾವ್, ಪುಟ: ೨೦೨.

೬. ಹದಿಬದಿಯ ಧರ್ಮ, ಸಂ.ಡಿ.ಚಂಪಾಬಾಯಿ, ೫ನೇ ಸಂಧಿ, ೭ನೇ ಪದ್ಯ

೭. ಮರಿವಿಜ್ಞಾನಿ, ಕುವೆಂಪು, ಪುಟ: ೧೮.

೮. ಪ್ರೇತಕ್ಯೂ, ಕುವೆಂಪು, ಪುಟ: ೩೬.

೯. ಕದರಡಿಕೆ, ಕುವೆಂಪು, ಪುಟ: ೧೨.

೧೦. ಮಂತ್ರಾಕ್ಷತೆ, ಕುವೆಂಪು, ಪುಟ: ೧.

೧೧. ಮೇಲಿನಂತೆ, ಪುಟ: ೫೫.

೧೨. ಅನುತ್ತರ, ಕುವೆಂಪು, ಪುಟ: ೨೨.

೧೩. ಮೇಲಿನಂತೆ, ಪುಟ: ೨೬.

೧೪. ಅಗ್ನಿಹಂಸ, ಕುವೆಂಪು, ಪುಟ: ೧೦.

೧೫. ಮೇಲಿನಂತೆ, ಪುಟ: ೧೧.

೧೬. ಅನುತ್ತರ, ಕುವೆಂಪು, ಪುಟ: ೧೨.

೧೭. ಮೇಲಿನಂತೆ, ಪುಟ: ೧.

೧೮. ಚಂದನ, ಸಂ.ಜಿ.ಎಸ್.ಶಿವರುದ್ರಪ್ಪ, ಪುಟ: ೮.

೧೯. ನೆನಪಿನ ದೋಣಿಯಲ್ಲಿ, ಕುವೆಂಪು, ಪುಟ: ೯೧೬

೨೦. ಹಾಡೆ ಹಾದಿಯ ತೋರಿತು, ಸಂ.ಎಚ್.ಎಸ್.ರಾಘವೇಂದ್ರ ರಾವ್, ಪುಟ: ೨೫೫.

೨೧. ಅನಿಕೇತನ, ಕುವೆಂಪು, ಪುಟ: ೧.

೨೨. ಮೇಲಿನಂತೆ, ಪುಟ: ೧೦.

೨೩. ಪಾಂಚಜನ್ಯ, ಕುವೆಂಪು, ಪುಟ: ೫.

೨೪. ಎಸ್.ವಿ.ಪರಮೇಶ್ವರ ಭಟ್ಟ, ಪಾಂಚಜನ್ಯ ಕುರಿತು, ಸಹ್ಯಾದ್ರಿಯ ಸೂರ್ಯ, ಸಂ.ಚಕ್ಕೆರೆ ಶಿವಶಂಕರ್, ಪುಟ: ೧೦.

೨೫. ಚಂದ್ರ ಮಂಚಕೆ ಬಾ ಚಕೋರಿ, ಕುವೆಂಪು, ಪುಟ: ೬೦.

೨೬. ಮೇಲಿನಂತೆ, ಪುಟ: ೭.

೨೭. ದಾರ್ಶನಿಕ ಕವಿ ಬೇಂದ್ರೆ, ಶೇಷ ನವರತ್ನ, ಇಳಿದು ಬಾ ತಾಯಿ, ಸಂ.ಡಾ. ಬುದ್ದಣ್ಣ ಹಿಂಗಮಿರೆ, ಪುಟ: ೨೮೨.

೨೮. ಹೃದಯ ಸಮುದ್ರ, ದ.ರಾ.ಬೇಂದ್ರೆ, ಪುಟ: ೧೩೯.

೨೯. ಮೇಲಿನಂತೆ, ಪುಟ: ೧೪೨.

೩೦. ಅರಳು ಮರಳು, ದ.ರಾ.ಬೇಂದ್ರೆ, ಪುಟ: ೧೩೦.

೩೧. ಸಖೀಗೀತ, ದ.ರಾ.ಬೇಂದ್ರೆ, ಪುಟ: ೯೪.

೩೨. ಎಚ್.ಎಸ್.ರಾಘವೇಂದ್ರ ರಾವ್, ನಮ್ಮ ಕನ್ನಡ ಕಾವ್ಯ, ಸಂ. ಓ.ಎಲ್.ನಾಗಭೂಷಣ ಸ್ವಾಮಿ, ಪುಟ: ೧೭೮.

೩೩. ವಿನಯ, ದ.ರಾ.ಬೇಂದ್ರೆ, ಪುಟ: ೪೭.

೩೪. ಮೇಲಿನಂತೆ, ಪುಟ: ೪.

೩೫. ಮಲ್ಲಿಗೆಯ ಮಾಲೆ, ಕೆ.ಎಸ್.ನರಸಿಂಹಸ್ವಾಮಿ, ಪುಟ: ೨೬೮.

೩೬. ಮೇಲಿನಂತೆ, ಪುಟ:೨೭೦

೩೭. ಶಕ್ತಿ ಶಾರದೆಯ ಮೇಳ, ಡಿ.ಆರ್.ನಾಗರಾಜ್, ಪುಟ: ೧೪೦.

೩೮. ಇಹದ ಪರಿಮಳದ ಹಾದಿ, ನರಹಳ್ಳಿ ಬಾಲಸುಬ್ರಮಣ್ಯ, ಪುಟ: ೧೭೧.

೩೯. ಮಲ್ಲಿಗೆಯ ಮಾಲೆ, ಕೆ.ಎಸ್.ನರಸಿಂಹಸ್ವಾಮಿ, ಪುಟ: ೧೯೦

೪೦. ಮೇಲಿನಂತೆ, ಪುಟ:೧೯೮

೪೧. ವಿ.ಸೀತಾರಾಮಯ್ಯ, ಮಲ್ಲಿಗೆಯ ಮಾಲೆ, ಕೆ.ಎಸ್.ನರಸಿಂಹ ಸ್ವಾಮಿ, ಪುಟ: ೫೭೪.

೪೨. ಮನೆಯಿಂದ ಮನೆಗೆ(ಮುನ್ನುಡಿ), ವಿ.ಸೀ. ಮಲ್ಲಿಗೆಯ ಮಾಲೆ, ಕೆ.ಎಸ್.ನರಸಿಂಹ ಸ್ವಾಮಿ, ಪುಟ: ಮುನ್ನುಡಿ.

೪೩. ಸರ್ವಜ್ಞನ ವಚನಗಳು, ರಾಗೌ, ಪುಟ: ೧೮೬

೪೪. ಮಲ್ಲಿಗೆಯ ಮಾಲೆ, ಕೆ.ಎಸ್.ನರಸಿಂಹಸ್ವಾಮಿ, ಪುಟ: ೧೧೫.
೪೫. ಕಾವ್ಯಾನು ಸಂಧಾನ, ಚೆನ್ನವೀರ ಕಣವಿ, ಪುಟ: ೧೪೮.
೪೬. ಈಚಲ ಮರದವ್ವೆ, ಚಂದ್ರಶೇಖರ ಕಂಬಾರ, ಪುಟ: ೯೮
೪೭. ಕೆ.ಎಸ್.ನಿಸಾರ್ ಅಹಮದ್ ರವರ ಪ್ರಾತಿನಿಧಿಕ ಕವನಗಳು, ಕೆ.ಎಸ್.ನಿಸಾರ್ ಅಹಮದ್, ಪುಟ: ೧೭೨.
೪೮. ಸ್ನೇಹ ವಿಶ್ವಾಸ, ವಿ.ಸೀ., ಪುಟ: ೧೨೭
೪೯. ಮೇಲಿನಂತೆ, ಪುಟ: ೧೬೩.
೫೦. ಮೇಲಿನಂತೆ, ಪುಟ: ೧೭೩.
೫೧. ಮೇಲಿನಂತೆ, ಪುಟ: ೩೩೭
೫೨. ಮೇಲಿನಂತೆ, ಪುಟ: ೩೫೮.
೫೩. ಚಿಂತನದ ಚತುರ್ಮುಖ, ಪ್ರೊ.ಎಂ.ಎಲ್.ನರಸಿಂಹ ಮೂರ್ತಿ, ಪುಟ: ೩೬
೫೪. ಸ್ನೇಹ ವಿಶ್ವಾಸ, ವಿ.ಸೀ., ಪುಟ: ೫೧೦.
೫೫. ೭೨ ಕವಿತೆಗಳು, ಗಂಗಾಧರ ಚಿತ್ತಾಲ, ಪುಟ: ೩೮.
೫೬. ಹೆಜ್ಜೆ ಗುರುತು, ಸಂ.ಡಾ.ನಲ್ಲೂರ್ ಪ್ರಸಾದ್, ಪುಟ: ೧೦೫.
೫೭. ಆಕ್ರಂದನ, ಗೌಡನಕಟ್ಟೆ ತಿಮಯ್ಯ, ಪುಟ: ೩೫.
೫೮. ನಮ್ಮ ಕನ್ನಡ ಕಾವ್ಯ, ಸಂ.ಓ.ಎಲ್.ನಾಗಭೂಷಣ ಸ್ವಾಮಿ, ಪುಟ: ೧೧೪.
೫೯. ಸಮಗ್ರ ಕಾವ್ಯ, ಜಿ.ಎಸ್.ಶಿವರುದ್ರಪ್ಪ, ಪುಟ: ೧೦೪.
೬೦. ಮೇಲಿನಂತೆ, ಪುಟ: ೩೪೧.
೬೧. ಮೇಲಿನಂತೆ, ಪುಟ: ೧೫೦.
೬೨. ಸಮಗಾರ ಭೀಮವ್ವ, ಮಲ್ಲೇಪುರಂ.ಜಿ.ವೆಂಕಟೇಶ್, ನಮ್ಮ ಕನ್ನಡ ಕಾವ್ಯ, ಸಂಕಲನ. ಓ ಎಲ್.ನಾಗಭೂಷಣ ಸ್ವಾಮಿ, ಪುಟ: ೪೨೧.
೬೩. ಶಿವಪ್ರಕಾಶರ ಕವಿತೆಗಳು, ಎಚ್.ಎಸ್.ಶಿವಪ್ರಕಾಶ್, ಪುಟ: ೩೭
೬೪. ಅಮೃತ ಮತ್ತು ಗರುಡ, ಡಿ.ಆರ್.ನಾಗರಾಜ್, ಪುಟ: ೨೧೩.
೬೫. ಹೊಸಗನ್ನಡ ಸಾಹಿತ್ಯ ಚರಿತ್ರೆ, ಎಲ್.ಎಸ್.ಶೇಷಗಿರಿರಾವ್, ಪುಟ: ೨೫೦.
೬೬. ಶಿವಪ್ರಕಾಶರ ಸಮಗಾರ ಭೀಮವ್ವ – ಆಕಾಶದೊಡಲಿಗೆ ನೆಲಕದೆದೆಯ ತಂಪು, ಬೆಳಕಿನ ಬೀಜ, ಡಾ.ಗೀತಾ ವಸಂತ, ಪುಟ: ೧೦೪.
೬೭. ಮೇಲಿನಂತೆ, ಪುಟ: ೧೦೪.
೬೮. ಮಲ್ಲಿಗೆಯ ಮಾಲೆ, ಕೆ.ಎಸ್.ನರಸಿಂಹಸ್ವಾಮಿ, ಪುಟ: ೨೮೯.
೬೯. ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ, ಕೆ.ವಿ.ನಾರಾಯಣ, ನಮ್ಮ ಕನ್ನಡ ಕಾವ್ಯ ಸಂಕಲನ. ಓ.ಎಲ್.ನಾಗಬುಷಣ ಸ್ವಾಮಿ, ಪುಟ: ೨೪೩.
೭೦. ಎಂ.ಬಿ.ಹೂಗಾರ, ಹೊಸ ಧ್ವನಿ, ಸಂ.ಜಿ.ಎಸ್.ಸಿದ್ಧಲಿಂಗಯ್ಯ, ಕ.ಸಾ.ಪ., ಬೆಂಗಳೂರು, ಪುಟ: ೮೮.
೭೧. ಅವ್ವ, ಸರಜೂ ಕಾಟ್ಕರ, ಪುಟ: ೩.
೭೨. ಕನಸಿನ ನಲಿವಿನ ಕವನಗಳು, ಡಾ.ಹೊಸ್ಕೆರೆ ಶಿವಸ್ವಾಮಿ, ಪುಟ: ೨೦.
೭೩. ಉರಿಯ ಉಯ್ಯಾಲೆ, ಶಿವರಾಮಯ್ಯ, ಲಹರಿ – ೧೯(೧–೨), ಬೆಂಗಳೂರು – ೧೯೯೯, ಪುಟ: ೧೦.
೭೪. ಸ್ನೇಹ ವಿಶ್ವಾಸ, ವಿ.ಸೀ., ಪುಟ: ೫೬೧.

ಅಧ್ಯಾಯ : ೮

ಸಮಾರೋಪ :

ಮಾತೃತ್ವದ ಕಲ್ಪನೆ ಕೇವಲ ಸಂತಾನಾಪೇಕ್ಷೆಗೆ ಮಾತ್ರ ನಿಂತುಹೋಗದೆ ಮುಂದುವರಿಕೆಯಾಗಿ ಸಮಾಜಮುಖಿಯಾಗುತ್ತದೆ. ಇದರ ವಿಸ್ತೃತ ರೂಪವೇ ಸರ್ವರ ಸುಖ ಬಯಸುವುದು. ಅಂತಹ ಕಾರ್ಯದಲ್ಲಿ ತನ್ನ ಸಂತಾನವೂ ಭಾಗಿಯಾಗಬೇಕೆಂಬ ಚಿಂತನೆ ಆಕೆಯದಾಗಿರುತ್ತದೆ.

ತಾಯಿಯ ಬುದ್ಧಿವಾದ ಉಭಯ ಲಿಂಗಕ್ಕೂ ಅನ್ವಯಿಸುವಂತ ಹಿತನುಡಿಗಳು. ಉಭಯರಿಗೂ ಅನ್ವಯಿಸುವಂತಹವು ಕೆಲವು, ಉಳಿದವು ಗಂಡು ಹೆಣ್ಣು ಎಂಬುದನ್ನು ಅನುಸರಿಸಿ ಹೇಳುವಂತ ಮಾತುಗಳಾಗಿವೆ. ಉದಾಹರಣೆಗೆ: 'ಆಚಾರಕ್ಕರಸಾಗು ನೀತಿಗೆ ಪ್ರಭುವಾಗು ಮಾತಿನಲಿ ಚೂಡಾಮಣಿಯಾಗು ಜ್ಯೋತಿಯೇ ಆಗು ಜಗಕೆಲ್ಲ', 'ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸಜ್ಜೆರೆಯೊಳು ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬು ಕೆಯ್ ನಂಬಿದರ್ಗೆರೆವರವಟ್ಟಾಗಿರು ಶಿಷ್ಯರಂ ಪೊರೆ . .' ಇದು ಕೇವಲ ಗಂಡಿಗೆ ಅನ್ವಯಿಸುವ ನುಡಿಗಳಾದರೆ; "ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು ನಿಮ್ಮ ಮಡಿಲೊಳಗಿರಲು ತಂದಿರುವೆ . . . ." ಎಂಬ ವಿ.ಸೀ.ರವರ ಮಾತು ಹೆಣ್ಣು ವಂಶಾಭಿವೃದ್ಧಿಗೆ ಸಂಬಂಧಿಸಿದ ಮಾತಾಗಿದೆ.

ಆಸ್ತಿಯನ್ನು ಹಂಚಿಕೊಳ್ಳುವ ತೆರದಲ್ಲಿ ವೃದ್ಧರಾದ ತಾಯಿಯನ್ನು ಪೋಷಿಸುವ, ಪಾಲಿಸುವ ಹೊಣೆಗಾರಿಕೆಯನ್ನು ಕಾಲಾವಧಿಗೆ ಸೀಮಿತ ಪಡಿಸಿಕೊಂಡು ಮಕ್ಕಳು ಪೋಷಿಸುವ ಹಂತ ತಲುಪಿರುವುದು ಮಾತೃತ್ವದ ಸಂಬಂಧಗಳ ಶಿಥಿಲತೆ ಹಾಗೂ ಸಾಮಾಜಿಕ ಬದಲಾವಣೆ, ಆರ್ಥಿಕ ಬದಲಾವಣೆಗಳಿಂದ ಮನುಷ್ಯ ಸಂಬಂಧಗಳು ಶಿಥಿಲವಾಗಿವೆ. ಇದು ನಾಗರಿಕತೆಯ ಕೊಡುಗೆಯಾಗಿದೆ.

ನವೋದಯದ ಆರಂಭದ ಕವಿಗಳು ಪ್ರಕೃತಿಯ ಚೆಲುವು, ನಾಡಿನ ಹಿರಿಮೆ, ರಾಷ್ಟ್ರದ ಗರಿಮೆ, ತಾಯ್ನಾಡಿನ ಸೊಬಗು, ಭಾಷೆ, ಸಂಸ್ಕೃತಿ, ತಾಯಿ. . . . ಮುಂತಾದ ವಿಷಯಗಳಲ್ಲಿ ಕವಿತೆಗಳನ್ನು ರಚಿಸಿದ್ದರೂ ಕೂಡ ಅವರಲ್ಲಿ ಒಂದು ಸಾಂಪ್ರದಾಯಕ ವರ್ಗಕ್ಕೆ, ಮತ ಧರ್ಮಾಚಾರದ ಚೌಕಟ್ಟಿಗೆ ಒಳಪಟ್ಟಂತೆ ರಚಿಸಿರುವುದು ಕಂಡು ಬರುತ್ತದೆ. ಆತ್ಮನಿವೇದನೆ, ಆಶಯಗಳ ಮಹಾಪೂರ, ದೈವಾನುಗ್ರಹದ ಉತ್ಕಟ ಭಾವನೆಗಳಿಗೆ ಜೋತು ಬಿದ್ದಿದ್ದಾರೆ. ಹಳಬರಲ್ಲಿ, ಆಧುನಿಕ ಕವಿಗಳಲ್ಲಿ ಕಾಣುವ ವ್ಯವಸ್ಥೆಯಲ್ಲಿ ಕಾಣುವ ವಿಕೃತ ರೂಪವನ್ನಾಗಲೀ, ಜಾತಿ ಮತದ ಕಿರುಕುಳದ ಚಿತ್ರವನ್ನಾಗಲೀ, ಅನೈಕ್ಯತೆಯ ಭಾವವನ್ನಾಗಲೀ, ಭ್ರಷ್ಟಾಚಾರ, ಮೋಸ, ವಂಚನೆ, ಸುಲಿಗೆಗಳ ವಿರಾಡ್ರೂಪವನ್ನಾಗಲೀ, ವೇಷಧಾರಿಗಳ, ಮತೀಯ ವಾದಿಗಳ ಕರಾಳ ಚಿತ್ರವನ್ನಾಗಲಿ ಕಾಣಲು ಸಾಧ್ಯವಿಲ್ಲ. ಸ್ವಾತಂತ್ರ್ಯ ಸಂಗ್ರಾಮ ಕಾಲದ ಜೀವನ ಇಷ್ಟೊಂದು ಸಂಕೀರ್ಣಗೊಂಡಿರಲಿಲ್ಲ. ಎಲ್ಲರಿಗೂ ಶಿಕ್ಷಣವಾಗಲೀ, ವಿಚಾರವಾಗಲೀ, ಲಭ್ಯವಾಗುವ ಸ್ಥಿತಿ ಇರಲಿಲ್ಲ. ರಾಮಾಯಣ, ಮಹಾಭಾರತ, ಪುರಾಣೇತಿಹಾಸಗಳಲ್ಲಿನ ಒಳ ಸುಳಿಗಳ ವಿಶ್ಲೇಷಣೆ ಇರಲಿಲ್ಲ. ಎಲ್ಲವುದನ್ನೂ ಒಂದೇ ಚೌಕಟ್ಟಿನಲ್ಲಿ. ಶ್ರದ್ಧೆ ಗೌರವಗಳಿಂದ

ಕಾಣುವುದೇ ಆದರ್ಶವೆಂಬಂತೆ ಸ್ವೀಕರಿಸಿದ್ದರು. ಹಳೆಯದನ್ನು ಪ್ರಶ್ನಿಸುವ, ಕೈಬಿಡುವ, ಪ್ರತಿಭಟಿಸುವ ವಿಚಾರಕ್ರಾಂತಿ ಪ್ರಕಟಗೊಂಡಿರಲಿಲ್ಲ. ಹೀಗಾಗಿ ಕವಿತೆ ಬರೆಯುವುದೆಂದರೆ ಅದೊಂದು ಸಂಪ್ರದಾಯಸ್ಥ ಕುಟುಂಬದ, ಸಾತ್ವಿಕರ, ಬುದ್ಧಿವಂತರ, ಸುಶಿಕ್ಷಿತರ, ಮೇಧಾವಿಗಳ, ಪುರಾಣೇತಿಹಾಸಗಳ ಅರಿವುಳ್ಳವರ ಸಾಹಸ ಕಾರ್ಯವೆಂಬ ಭ್ರಮಾಲೋಕ ಸೃಷ್ಟಿಯಾಗಿತ್ತು.

ಆ ಕಾಲದಲ್ಲಿ ರಾಷ್ಟ್ರ ಪರಾಧೀನತೆಯಿಂದ ಬಿಡುಗಡೆ ಹೊಂದಿ, ತನ್ನ ಸ್ವಾಭಿಮಾನದ ಹಿರಿಮೆ ಗರಿಮೆಯಿಂದ ಮೆರೆಯಬೇಕು, ರಾಜ ಮಹಾರಾಜರ ಆಳ್ವಿಕೆ ಕೊನೆಗೊಂಡು, ಪಾಳೇಗಾರರ ಸಾಮಂತರ ಕಪಿಮುಷ್ಟಿಯಿಂದ ದೇಶ ಮುಕ್ತವಾಗಬೇಕು. ಇದರೊಟ್ಟಿಗೆ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಅಭಿಮಾನ ಜಾಗೃತಿಗೊಂಡು ಕರ್ನಾಟಕ ಏಕೀಕರಣವಾಗಬೇಕೆಂಬ ಉತ್ಕಟ ವಾಂಛೆ ಆ ಕಾಲದ ಎಲ್ಲ ಕವಿಗಳಲ್ಲಿ ಮಡುಗಟ್ಟಿತ್ತು. ವರ್ಣನೆ, ಪ್ರೌಢಿಮೆ, ಉಪಮೆಗಳ ವಿಶೇಷಣೆಗಳಿಂದ ತುಂಬಿದ ಭಾವೋತ್ಕರ್ಷಕ್ಕೆ ಇಂಬಾಗಿ ನಿಲ್ಲುವ ಕವಿತೆಗಳು ರಚಿತವಾಗಬೇಕು. ಓದಲು, ಹಾಡಲು, ಕೇಳಲು ಸಹಾಯಕವಾಗಬೇಕು. ಶ್ರೀ ಸಾಮಾನ್ಯರಾದಿಯಾಗಿ ಎಲ್ಲ ವರ್ಗದವರಿಗೂ ತಲುಪುವಂತಿರಬೇಕು. ಅವು ರಸಪೂರ್ಣವಾಗಿ ಸಾತ್ವಿಕ ರುಚಿಯಿಂದಿರಬೇಕು. ಹಿಂಸೆಯ ರೂಪದಲ್ಲಿ ಅಸಹ್ಯ ಹುಟ್ಟಿಸುವ ಭಾವದಲ್ಲಿ ಕವಿತೆಗಳಿರಬಾರದೆಂಬ ಕಲ್ಪನೆ ಆ ಕಾಲದ ಎಲ್ಲ ಶಿಷ್ಟ ಕವಿಗಳಲ್ಲಿ ಕಾಣುವ ಆದರ್ಶವಾಗಿದೆ. ಇದು ಪ್ರಾಚೀನ ಸಾಹಿತ್ಯದಿಂದ ಪ್ರೇರಣೆಗೊಂಡುದಾಗಿತ್ತು. ವಿದ್ವಾಂಸರ, ಸುಶಿಕ್ಷಿತರ, ಭಾವಾವಲಯದಲ್ಲೆ ಚರ್ಚೆಗೊಳಪಡುತಿದ್ದ ಕಾಲ ಅದಾಗಿತ್ತು. ಇವರೆಲ್ಲ ವಿರಳ ಜನ ಮಾತ್ರವಲ್ಲ; ಉಚ್ಚ ವರ್ಗದಿಂದ ಬಂದವರಾಗಿದ್ದರು. ಹಾಗಾಗಿ ದಲಿತ ಬಂಡಾಯದವರಲ್ಲಿ ಕಾಣುವ ರೊಚ್ಚು, ಕೆಚ್ಚು, ಪ್ರತಿಭಟನೆ, ಹೋರಾಟದ ಧ್ವನಿ ಕಾಣಲು ಸಾಧ್ಯವಿಲ್ಲ. ಈ ಶೋಷಿತ ಜನಕ್ಕೆ ತಟ್ಟಿದ ಬಿಸಿಯ ಕಲ್ಪನೆಯೂ ಇರದ, ಶೋಷಣೆಯ ಚಿಂತನೆಯೂ ಇರದವರಿಂದ ಪ್ರತಿಭಟನೆಯ ಕಾವ್ಯ ಬರಲು ಸಾಧ್ಯವಾಗುವುದಾದರೂ ಹೇಗೆ? ರಸವತ್ತಾದ ಚಿಂತನೆ, ಭಾವನೆ, ಆಕಾಂಕ್ಷೆಗಳಲ್ಲಿ ಸ್ಫೂರ್ತಿಗೊಂಡು ಭಾರತೀಯತೆಯನ್ನು (ಅದು ಎಂತಹ ಭಾರತೀಯತೆ ಎಂಬ ಪ್ರಶ್ನೆ ಅವರಿಗಿರಲಿಲ್ಲ) ಎತ್ತಿ ಹಿಡಿಯುವ ಆವೇಶದಲ್ಲಿ ಮುನ್ನುಗ್ಗಿದರು.

ಬಡತನ, ಮೌಢ್ಯ, ವಂಚನೆ, ಆರ್ಥಿಕ ಅಸಮಾನತೆ, ಅಕ್ಷರಜ್ಞಾನದ ಕೊರತೆಯಲ್ಲಿ ಸಿಕ್ಕಿ ಜರ್ಜರಿತವಾಗಿದ್ದ ದಲಿತರು, ಅಲ್ಪಸಂಖ್ಯಾತರು, ಹಳ್ಳಿಗರು, ಕೂಲಿ ಕಾರ್ಮಿಕರು, ಸ್ತ್ರೀಯರು ಕಣ್ತೆರೆಯುವಷ್ಟರಲ್ಲಿ ಜೀವನದಿಯಲ್ಲಿ ಬಹಳ ನೀರು ಹರಿದಿತ್ತು. ಕಾಲ ಬದಲಾಗಿತ್ತು. ಅಗತ್ಯಗಳು ಹತ್ತಾರು ರೂಪದಲ್ಲಿ ಕಾಡತೊಡಗಿದ್ದವು. ನಮ್ಮನ್ನಾಳುವ ನಮ್ಮವರೇ ಮೋಸಗಾರರಾದರು, ವಂಚಕರಾದರು, ಜಾತಿವಾದಿಗಳಾದರು, ಸ್ವಾರ್ಥಿಗಳಾದರು. ಸಮಾಜದ ಸ್ವಾಸ್ಥ್ಯಕ್ಕೆ ಭಂಗ ತಂದರು. ಎಲ್ಲರನ್ನು ಭ್ರಮೆಯಲ್ಲಿ ಮುಳುಗಿಸಿದರು. ಆದರ್ಶಗಳೆಲ್ಲ ಮೂಲೆ ಗುಂಪಾಗಿ, ದಾರ್ಶನಿಕರೆಲ್ಲ ಮತೀಯವಾದಿಗಳ ಬಂಧಿಗಳಾದರು. ಮೇಲು – ಕೀಳು, ಸ್ಪೃಶ್ಯ – ಅಸ್ಪೃಶ್ಯ, ಬಡವ – ಬಲ್ಲಿದ, ಹಳ್ಳಿ – ನಗರ, ಕಲಿತವ – ಕಲಿಯದವ, ಹೆಣ್ಣು – ಗಂಡುಗಳಂತೆ ವಿಂಗಡನೆಗೊಂಡು ಪರಸ್ಪರ ಕಚ್ಚಾಟದಲ್ಲಿ ತೊಡಗಿದವು. ಸಾಮಾಜಿಕ ವಿಷಮತೆ ಹೆಚ್ಚಾಗಿ, ಮತ ಧರ್ಮಗಳು ವಿಪರೀತಾರ್ಥ ಪಡೆದುಕೊಂಡು, ಸಾಮಾಜಿಕ, ಆರ್ಥಿಕ ರಂಗದಲ್ಲಿ ಏರುಪೇರಾಯಿತು.

ಬಂಡವಾಳಶಾಹಿಗಳ ಕೈಬಲವಾಯಿತು. ಕಾವಿ, ಖಾಕಿ, ಖಾದಿಗಳ ಅನ್ಯೋನ್ಯತೆಯಿಂದ ತುಳಿತಕ್ಕೊಳಗಾದವರು ಕಣ್ಣು ತೆರೆಯಬೇಕಾಯಿತು, ಜಾಗೃತಗೊಂಡ ಈ ಶೋಷಿತ ವರ್ಗದವರು ತಮ್ಮ ಪ್ರತಿಭಟನೆ, ಹೋರಾಟಕ್ಕೆ, ಐಕ್ಯತೆಗೆ ಹೊಸ ಹಾದಿ ಹಿಡಿಯಬೇಕಾಯಿತು. ಹೀಗಾಗಿ ಕಾಲಾನುಕ್ರಮದಲ್ಲಿ ಈ ಎಲ್ಲ ಗೋಜು ಗೊಂದಲಗಳಿಂದ ಕನ್ನಡಕಾವ್ಯ ಕ್ಷೇತ್ರ ವೈವಿಧ್ಯತೆ ಪಡೆಯಿತು. ಎಲ್ಲರ ದನಿಯಾಗಲು ಸಾಧ್ಯವಾಯಿತು. ಕ್ರಾಂತಿಕಾರಕ ಧೋರಣೆ ಇರುವ ಜನರಿಂದ ಪರಿಚಿತವಾದ, ಹೊರಗಣ್ಣಿಗೆ ಸುಂದರವಾದ ರೂಪಕಗಳನ್ನು ಉಪಮೆಗಳನ್ನು ಕಾಣಲು ಸಾಧ್ಯವಾಗದಾಯಿತು. ಕಾವ್ಯ ಮೈಮರೆಸುವ, ತಲೆದೂಗಿಸುವ ಸಾಧನವಲ್ಲ; ಗೊಂದಲಗಳಿಗೆ ರೂಪುಕೊಡುವ, ಹೋರಾಟಕ್ಕೆ ಸಿದ್ಧಗೊಳಿಸುವ, ಸಾಮಾಜಿಕ ನ್ಯಾಯಕ್ಕೆ ಒತ್ತು ಕೊಡುವ, ಸಮಾನತೆಗೆ ಇಂಬಾಗಿಸುವ ಕ್ರಿಯೆಗೆ ಸಾಧನವಾಗಿ ಕಂಡಿತು. ಈ ಚಿಂತನೆಯಿಂದ ದಲಿತ ಶೋಷಿತ ವರ್ಗ ತನ್ನದೇ ಆದಂತಹ ಅಭಿವ್ಯಕ್ತಿ ಮಾಧ್ಯಮ ಕಂಡು ಕೊಂಡಿತು.

ಇದೇ ವೇಳೆಗೆ ದೇಶದ ರಾಜಕೀಯದಲ್ಲಿ ಆದಂತ ಬದಲಾವಣೆ, ಹೋರಾಟದ ಫಲವಾಗಿಯೂ; ವಿದೇಶದಿಂದ ಆಮದಾದ ತತ್ವ ಸಿದ್ಧಾಂತಗಳ ಪ್ರೇರಣೆಯಿಂದಲೂ ಎಡಪಂಥೀಯ ಚಿಂತನೆಗೆ, ಹೋರಾಟದ ಬದುಕಿಗೆ ಪ್ರಚೋದನೆ ದೊರೆತು ಕಾವ್ಯ ಹೊಸ ಲಯ, ಗತಿಯನ್ನು ಕಂಡುಕೊಂಡಿತು. ಹೊಸ ವೇಷ, ಹೊಸ ರೂಪಿನಿಂದ, ಹೊಸ ಹೆಸರಿನೊಂದಿಗೆ ಬೀದಿಗಿಳಿಯಿತು. ಜಾತಿ, ಮತ, ನೀತಿ, ಕಲೆ, ಸಾಹಿತ್ಯ ಸಂಸ್ಕೃತಿಯನ್ನು ಮರು ಚಿಂತನೆಗೊಳಪಡಿಸಿತು. ಸ್ವರ್ಗ ನರಕಗಳ ಕಲ್ಪನೆ ಬಿಟ್ಟು, ಭ್ರಮೆಯ ಬೆನ್ನು ಹತ್ತದೆ, ವಾಸ್ತವಿಕತೆಯ ದಾರಿ ಹಿಡಿದು ನಡೆಯಿತು. ಬದುಕನ್ನು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯದ ಹಿನ್ನೆಲೆಯಲ್ಲಿ ರೂಪಿಸಿಕೊಳ್ಳುವತ್ತ ಗಮನ ಹರಿಸಲಾಯಿತು. ಮನಸ್ಸಿನಲ್ಲಿ ಮಡುಗಟ್ಟಿ ನಿಂತಿದ್ದ ಅತೃಪ್ತಿ, ಆಕ್ರೋಶ, ಅಸಮಾಧಾನಗಳನ್ನು ಮುಕ್ತವಾಗಿ ಹರಿಬಿಡಲಾಯಿತು. ವ್ಯಷ್ಟಿ ಹಿತದಿಂದ ಸಮಷ್ಟಿ ಹಿತದವರೆಗೆ ಆದ್ಯತೆ ನೀಡಲಾಯಿತು. ಇಂತಹ ಸಂದರ್ಭದಲ್ಲಿ ಬಳಸಿದ ಭಾಷೆ, ಶೈಲಿ, ಛಂದಸ್ಸುಗಳಲ್ಲಿ ಸ್ವಂತಿಕೆಯ ವೈವಿಧ್ಯತೆ ವ್ಯಕ್ತವಾಯಿತು. ಶಿಷ್ಟವೂ, ಸಂಪ್ರದಾಯ ಶೀಲವೂ ಆದಂತಹ ದೃಷ್ಟಿ ಬದಲಾಗಿ ಗ್ರಾಮ್ಯವೂ, ವಾಸ್ತವಿಕವೂ ಆದ ಭಾಷೆಯಲ್ಲಿ ಕಾವ್ಯವಾಹಿನಿ ಹರಿಯಿತು. ಆ ಹಿನ್ನೆಲೆಯಲ್ಲಿ ಬಂದ ಕವಿಗಳಲ್ಲಿ ಮಾತೃತ್ವದ ಕಲ್ಪನೆ ವಿಶಿಷ್ಟವೂ, ವೈವಿಧ್ಯವೂ, ವಿನೂತನವೂ ಆದ ರೀತಿಯಲ್ಲಿ ಮೂಡಿ ಬಂದಿದೆ ಎಂಬುದನ್ನು ಆಯಾ ಸಾಹಿತ್ಯಕ ಪಂಥಗಳ ಹಿನ್ನೆಲೆಯಲ್ಲಿ ಹರಿದು ಬಂದಿರುವ ಕವಿತೆಗಳ ವಿಶ್ಲೇಷಣೆಯೊಂದಿಗೆ ಚರ್ಚಿಸಲಾಗಿದೆ. ಇದು ಪೂರ್ಣ ಪ್ರಮಾಣದ ಚರ್ಚೆಯಲ್ಲ, ಒಟ್ಟು ಕನ್ನಡ ಕಾವ್ಯದ ತೀರ್ಮಾನವಲ್ಲ. ಎಲ್ಲ ಕವಿಗಳ ಅಭಿಪ್ರಾಯದ ಕ್ರೋಢೀಕರಣವೂ ಅಲ್ಲ. ಆಧುನಿಕ ಕನ್ನಡ ಕಾವ್ಯದಲ್ಲಿ ಕಾಣಬರುವ ಹೆಜ್ಜೆ ಗುರುತುಗಳ ಶೋಧನೆ ಎನ್ನಬಹುದು.

'ಬರಹಗಾರ ತನ್ನ ಭಾವನೆಗಳನ್ನು ಹೊರ ಹಾಕಲು ಅವನ ವ್ಯಕ್ತಿತ್ವ, ಪರಿಸರ, ಆರ್ಥಿಕ, ರಾಜಕೀಯ, ಧಾರ್ಮಿಕ ಪರಿಸ್ಥಿಗಳು – ಇತ್ಯಾದಿಗಳೆಲ್ಲ ಕಾರಣವಾಗುತ್ತವೆ. ಒಬ್ಬ ಬರಹಗಾರ ತಾನು ಅಭಿವ್ಯಕ್ತಿಸಿದ ಸಾಹಿತ್ಯದಲ್ಲಿ ಸಂತೋಷವನ್ನು ಹೊರಹಾಕಿದ್ದಾನೆಂದರೆ ಅವನ ಬದುಕಿನಲ್ಲಿರುವ ಸಂತೃಪ್ತ ಸ್ಥಿತಿಯನ್ನು ಅದು ಹೇಳಬಹುದು. ತನ್ನ ರಚನೆಯಲ್ಲಿ ನೋವನ್ನು ಅಭಿವ್ಯಕ್ತಿಸಿದ್ದರೆ, ಅವನ ಅಂತರಂಗದ ದುಃಖವನ್ನು ಹೊರ ಹಾಕಲು

ಪ್ರಯತ್ನಿಸಿದ್ದಾನೆನ್ನಬಹುದು. ಇದಕ್ಕೆ ವ್ಯತಿರಿಕ್ತವಾಗಿ ಎಷ್ಟೋ ಬಾರಿ ಬರಹಗಾರ ತನ್ನ ಬದುಕಿನ ಸಂಕಟಗಳನ್ನು ಮರೆಯುವುದಕ್ಕಾಗಿಯೇ ತನ್ನ ರಚನೆಗಳಲ್ಲಿ ಸಂತೃಪ್ತಿಯ ಮುಖವಾಡವನ್ನು ಧರಿಸಿಕೊಂಡಿರಲೂಬಹುದು. ಆದರೆ ಇಂತಹ ಪಲಾಯನವಾದ ಪ್ರಜ್ಞಾವಂತ ಸಾಹಿತಿಗೆ ಬಹುಕಾಲ ಸಾಧ್ಯವಾಗುವುದಿಲ್ಲ. ಅವನ ಪ್ರಜ್ಞೆಯೇ ಅನುಭವದ ನೈಜ ಅಭಿವ್ಯಕ್ತಿಗೆ ಒತ್ತಾಯಿಸುತ್ತಿರುತ್ತದೆ. ಇಂತಹ ವ್ಯಕ್ತಿತ್ವವನ್ನು, ವೈಶಿಷ್ಟ್ಯವನ್ನು, ಸಾಮಾನ್ಯರಿಗಿಂತ ಭಿನ್ನವಾದ ಮನೋಧರ್ಮವನ್ನು, ಆಲೋಚನೆಗಳನ್ನು ಹೊಂದಿರುವ ಸಾಹಿತಿಯೊಬ್ಬ ಸಾಹಿತ್ಯವನ್ನು ಸೃಷ್ಟಿಸುವ ಹಿಂದಿರುವ ಕಾಳಜಿಗಳೇನು ಎನ್ನುವುದು ನಿಜಕ್ಕೂ ಚರ್ಚಾ ಯೋಗ್ಯವಾದದ್ದು. ಸಾಹಿತ್ಯ ಸೃಷ್ಟಿ ಎಂಬುದು ಕೆಲವರು ಭಾವಿಸಿರುವಂತೆ ಕೇವಲ ರಸಾನಂದವಲ್ಲ, ಆಹ್ಲಾದವಲ್ಲ, ಚಿತ್ತವಿಲಾಸವಲ್ಲ; ಅದೊಂದು ಸಾಮಾಜಿಕ ಹೊಣೆಗಾರಿಕೆ . . .'[೧] ಈ ಮಾತುಗಳಿಗೆ ನಮ್ಮ ಆಧುನಿಕ ಕನ್ನಡ ಕಾವ್ಯ ನಿದರ್ಶನವಾಗಿದೆ. ಇಲ್ಲಿ ಉಳ್ಳವರ ನಲಿವಿದೆ, ನೊಂದವರ ನೋವಿದೆ. ಬದುಕಿನ ಬಣ್ಣ ಮೈದಾಳಿದೆ.

ಸ್ವಾತಂತ್ರ್ಯ ಹೋರಾಟ ದೇಶಾಭಿಮಾನದ ಉತ್ಕಟಾಕಾಂಕ್ಷೆಯೊಂದಿಗೆ ಆರಂಭವಾದದ್ದು. ಈ ಹೋರಾಟದ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧದ, ಹೊಸಾಹತುಶಾಹಿ ವಿರುದ್ಧದ, ರಾಷ್ಟ್ರೀಯತೆ ಪರವಾದ ಧೋರಣೆಗಳು ವ್ಯಕ್ತವಾದವು. ಆಗಿನ ತುರ್ತು ದೇಶಾಭಿಮಾನದ ಭಾವನೆಗಳನ್ನು ಜಾಗೃತಗೊಳಿಸುವ, ರಾಷ್ಟ್ರವನ್ನು ದಾಸ್ಯ ಮುಕ್ತಗೊಳಿಸುವುದಾಗಿತ್ತು. ಅದಕ್ಕಾಗಿ ನಾಡು – ನುಡಿ, ದೇಶ, ಭಾಷೆ, ಧರ್ಮ, ಸಾಹಿತ್ಯ, ಕಲೆ, ಸಂಸ್ಕೃತಿ ಪರಂಪರೆಯ ಹಿರಿಮೆಯನ್ನು ಬಿಂಬಿಸುವ ಕಾರ್ಯ ಅದಾಗಿತ್ತು. ಕಲ್ಪನೆ, ರಮ್ಯತೆ, ಗೇಯತೆ, ಭಾವುಕತೆ ಆ ಕಾಲದ ಕಾವ್ಯ ಲಕ್ಷಣವಾಗಿದ್ದೂ ಕೂಡ ಉಂಟು. ಆದರೆ ೭೦ರ ದಶಕದಲ್ಲಿ ನಮ್ಮ ದೃಷ್ಟಿ, ಗುರಿ, ದಾರಿಗಳು ಬೇರೆಯಾದ್ದರಿಂದ ಕಾವ್ಯದ ದಿಕ್ಕು ಬದಲಾಯಿತು. ಸಾಮಾಜಿಕ ಸ್ಥಿತಿಗತಿ, ವೈಯಕ್ತಿಕ ಕಾರಣಗಳು ಮಿಳಿತಗೊಂಡು ವಿಶಿಷ್ಟ ಆಯಾಮ ಪಡೆದುಕೊಂಡಿತು. ಹೋರಾಟಗಳಲ್ಲಿ, ಚಳುವಳಿಗಳಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯಗಳೂ ಇದಕ್ಕೆ ಕಾರಣವಾಗಿರಬಹುದು. ನಮ್ಮ ರಾಜಕೀಯ ಸ್ಥಿತ್ಯಂತರಗಳೂ ಕೂಡ ಬರವಣಿಗೆಯ ಮೇಲೆ ಪ್ರಭಾವ ಬೀರಿದವು. ನವ್ಯತೆಯ ರೂಪ ಧರಿಸಿ ಕಾವ್ಯ ಹೊಸ ದಿಕ್ಕಿನಲ್ಲಿ ಹೊರಳ ತೊಡಗಿತು. ಮಣ್ಣಿನ ವಾಸನೆ ಕಾವ್ಯದಲ್ಲಿ ತುಂಬಿರಬೇಕೆಂಬ ಪ್ರತಿಪಾದನೆಯೊಂದಿಗೆ ಹೊರಟ ಪಂಥದಲ್ಲಿ ತಮ್ಮ ವೈಯಕ್ತಿಕ ತುಡಿತಗಳೇ ಸಮಷ್ಟಿಯ ತುಡಿತಗಳೆಂದು ಭಾವಿಸಿದರು. ತತ್ಫಲವಾಗಿ ಈ ನವ್ಯ ಪಂಥ ಜನರಿಂದ ದೂರ ಉಳಿಯಿತು.

"ಅನ್ಯ ಸಂಸ್ಕೃತಿ ನಮ್ಮ ಸಾಹಿತ್ಯಕ್ಕೆ ಹೇಗೆ ಹೊಸ ಹಾದಿಗಳನ್ನು ತೆರೆಯಿತೋ ಹಾಗೇ ನಮ್ಮ ಸಮಾಜಕ್ಕೂ ಅನೇಕ ಬಿಡುಗಡೆಯ ಹಾದಿಗಳನ್ನು ತೆರೆಯಿತು. ಸ್ವಾತಂತ್ರ್ಯ ಸಮಾನತೆ, ರಾಷ್ಟ್ರೀಯತೆ, ವ್ಯಕ್ತಿ ವಿಶಿಷ್ಟತೆ – ಹೀಗೆ ಅನೇಕ ಹೊಸ ಜೀವನ ಮೌಲ್ಯಗಳು ಹುಟ್ಟಿಕೊಂಡವು. ಸಮೂಹ ಶಿಕ್ಷಣ, ತೆರೆದುಕೊಂಡ ಪುಸ್ತಕಪ್ರಪಂಚ ಸಮಾಜದ ಕೆಳವರ್ಗದಲ್ಲಿ ಹೊಸ ಎಚ್ಚರ ಮೂಡಿಸಿದವು. ಗಾಂಧಿ, ಅಂಬೇಡ್ಕರ್, ಲೋಹಿಯ ಇವರ ತಾತ್ವಿಕತೆ ಹಾಗೂ ಪ್ರಭಾವಶಾಲೀ ವ್ಯಕ್ತಿತ್ವಗಳು ಸಮಾಜದಲ್ಲಿ ಅನೇಕ ಹೊಸ ಗಾಳಿಗಳು ಬೀಸುವಂತೆ ಮಾಡಿದವು. ಸ್ವಾತಂತ್ರ್ಯಪ್ರಾಪ್ತಿ, ಪ್ರಜಾಪ್ರಭುತ್ವ, ಗಾಂಧಿಹತ್ಯೆ ಔದ್ಯೋಗೀಕರಣ, ನಗರೀಕರಣ, ಯಾಂತ್ರೀಕರಣ, ಉಲ್ಬಣಗೊಂಡ ಭ್ರಷ್ಟಾಚಾರ,

ಭ್ರಮನಿರಸನ, ಪರಿಸರದಲ್ಲುಂಟಾದ ಏರು ಪೇರುಗಳು, ಆರ್ಥಿಕ ಕುಸಿತ, ಮಹಾಯುದ್ಧಗಳು, ಅವುಗಳು ತಂದ ವಿನಾಶ, ಭಾರತ ನೆರೆ ರಾಷ್ಟ್ರಗಳೊಂದಿಗೆ ನಡೆಸಬೇಕಾದ ಯುದ್ಧಗಳು, ಆಂತರಿಕ ಕ್ಷೋಭೆಗಳು, ತುರ್ತು ಪರಿಸ್ಥಿತಿ, ಜೆ.ಪಿ. ಚಳುವಳಿ, ಕರ್ನಾಟಕದಲ್ಲಿ ಶೂದ್ರ ಲೇಖಕರ ಒಕ್ಕೂಟ, ಬಂಡಾಯ ದಲಿತ ಚಳುವಳಿಗಳು, ಜಮಿನ್ದಾರಿ ಪದ್ಧತಿಯಲ್ಲಾದ ಬದಲಾವಣೆ, ಭಾಷೆ – ಜಾತಿಯ ಹೆಸರಿನಲ್ಲಿ ನಡೆದ ಬರ್ಬರ ಕೃತ್ಯಗಳು ಶತಮಾನದುದ್ದಕ್ಕೂ ಎಷ್ಟೊಂದು ಭಾವೋತ್ಪಾತಗಳು, ಸಮಾಜವನ್ನು ನಡುಗಿಸಿದ ಸ್ಫೋಟಕ ಘಟನೆಗಳು! ಶತಮಾನದ ಕೊನೆಯಲ್ಲಿ ಬರವಣಿಗೆಯ, ಪುಸ್ತಕ ಸಂಸ್ಕೃತಿಯ ಬೇರುಗಳನ್ನೇ ಅಲ್ಲಾಡಿಸುವಂತಹ ಕಂಪ್ಯೂಟರ್ ಕ್ರಾಂತಿ! ಸಂಸ್ಕೃತಿ ಬಾಹುಳ್ಯವನ್ನು ಗುಡಿಸಿ ಹಾಕುತ್ತಿರುವ ಶಕ್ತ ರಾಷ್ಟ್ರಗಳ ಹೊಸ ಬಗೆಯ ಆಕ್ರಮಣ . . . ! ವಾತಾವರಣದ ಈ ಒತ್ತಡಗಳು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಕನ್ನಡ ಕಾವ್ಯಲೋಕವನ್ನು ಪ್ರಭಾವಿಸಿಯೇ ಪ್ರಭಾವಿಸಿವೆ".[೨] ಸ್ಥಳೀಯ ಮಟ್ಟದಿಂದ ಹಿಡಿದು ಜಾಗತಿಕ ಮಟ್ಟದವರೆಗೂ ಘಟಿಸಿದ ಘಟನೆಗಳ ಪ್ರೇರಣೆ ಪ್ರಭಾವಗಳಿಂದ ವಿಕಾಸಗೊಂಡ ಕನ್ನಡ ಕಾವ್ಯಕ್ಷೇತ್ರ ಕಾಲಾಂತರದಲ್ಲಿ ಹಲವಾರು ಪಂಥಗಳನ್ನು ತನ್ನ ಒಡಲಲ್ಲಿ ಸೃಷ್ಟಿಸಿಕೊಂಡು ಸಮೃದ್ಧವಾಗಿ ಬೆಳೆಯಿತು. ಆಯಾಯ ಕಾಲಘಟ್ಟಗಳಲ್ಲಿ ಕಂಡ ಸಾಮಾಜಿಕ ವೈಪರಿತ್ಯಗಳಿಗೆ ತನ್ನನ್ನು ಒಡ್ಡಿಕೊಂಡಿತು. ಒಂದು ಕಾಲಕ್ಕೆ ಏಕಮುಖಿಯಾಗಿದ್ದ ಚಿಂತನೆ ಬಹುಮುಖಿಯಾಗಿ ರೂಪು ತಾಳಿತು. ಆಧುನಿಕ ಶಿಕ್ಷಣ, ಬದಲಾದ ಜೀವನ ಕ್ರಮ ಹೊಸ ಪಾಠ ಕಲಿಸಿದವು. ಈ ಹಿನ್ನೆಲೆಯಲ್ಲಿ ಬಾಯಿಬೀಗ ಹಾಕಿಕೊಂಡಿದ್ದ ಅಲ್ಪಸಂಖ್ಯಾತರು, ದಲಿತರು, ಶೂದ್ರರು, ಸ್ತ್ರೀಯರು ಕಾವ್ಯ ಕ್ಷೇತ್ರದಲ್ಲಿ ಮಾತನಾಡಲು ಪ್ರಾರಂಭಿಸಿದರು. ಹಾಗಾಗಿ ಬದುಕು ಸಂಕೀರ್ಣಗೊಂಡಂತೆ, ಕನ್ನಡ ಭಾಷೆಯೂ ಸಂಕೀರ್ಣಗೊಂಡಿತು. ವಿಚಾರಗಳು ಕವಲೊಡೆದು ಚಿಗುರಿದವು. ಏಕಮುಖಿ ಸಂಸ್ಕೃತಿಯ ಧ್ವನಿತಗ್ಗಿ ಬಹುಮುಖಿ ಸಂಸ್ಕೃತಿ ಜಾಗೃತಿಗೊಂಡಿದ್ದು ಮಾತ್ರವಲ್ಲ, ಕಾವ್ಯ ಕ್ಷೇತ್ರದಲ್ಲಿ ಗಟ್ಟಿಯಾಗಿ ಬೇರು ಬಿಡುವಂತಾಯಿತು. ಇಂತಹ ಸಂಕ್ರಮಣ ಕಾಲದಲ್ಲಿ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಮಾತೃತ್ವದ ಸ್ವರೂಪವು ವೈವಿಧ್ಯತೆಯ ರೂಪತಾಳಿತು.

ದಲಿತರು ತಾವು ಅನುಭವಿಸಿದ ಅಸಮಾನತೆ, ಅನ್ಯಾಯ, ಯಾತನೆಯನ್ನು; ಆರ್ಥಿಕ, ಸಾಮಾಜಿಕ, ಧಾರ್ಮಿಕ, ಶೋಷಣೆಯ ತೀವ್ರತೆಯನ್ನು; ಅಕ್ಷರವಶದ ಜನಾಂಗದಿಂದ ಆದ ನೋವುಗಳನ್ನು ಭಾಷೆಯ ಮೂಲಕ ಪ್ರಕಟಿಸುವಲ್ಲಿ ಪ್ರಾಮಾಣಿಕತೆ ಇರುವುದರಿಂದ, ಅನುಕಂಪದಿಂದ ಎರವಲು ಪಡೆದ ಅಭಿವ್ಯಕ್ತಿಗಿಂತಲೂ ವಿಶೇಷವಾದುದನ್ನು ಈ ಕಾವ್ಯ ಪಂಥ ಪಡೆಯಲು ಸಾಧ್ಯವಿದೆ. ಈ ಕಾರಣದಿಂದಲೇ 'ದಲಿತ ಬಂಡಾಯ' ಕಾವ್ಯಗಳಲ್ಲಿ 'ಕಲಾಕೃತಿ'ಯ ನಯ ನಾಜೂಕಿಗಿಂತಲೂ 'ವಸ್ತು ವಿನ್ಯಾಸ' ಬಹಳ ಮುಖ್ಯವಾಗಿದೆ. ಬರೀ ಆದರ್ಶ ವಿಜೃಂಭಿಸಿದ ಸಾಹಿತ್ಯ ಸೃಷ್ಟಿಯೇ ಅದರ ಪರಮ ಗುರಿ ಅಲ್ಲ. ತಮ್ಮನ್ನು ವಂಚಿಸಿರುವ ವ್ಯವಸ್ಥೆಯ ವಿರುದ್ಧವಾಗಿ ಚಳುವಳಿ, ಹೋರಾಟವನ್ನು ಈ ಪರಂಪರೆ ನಂಬಿಕೊಂಡಿದೆ. "ಸಾಹಿತ್ಯ ಸೃಷ್ಟಿಯೊಂದೇ ಬಂಡಾಯ ಸಾಹಿತ್ಯ ಚಳುವಳಿಯ ಮುಖ್ಯ ಗುರಿ ಅಲ್ಲ. ಬದುಕು ಹಸನಾಗಬೇಕು. ಅಸಮಾನತೆ, ಅನಕ್ಷರತೆಗಳಿಂದ ಮುಕ್ತವಾದ ಬದುಕೇ ಸ್ವತಃ ಸೃಜನಶೀಲ ಗುಣಗಳನ್ನು ಹೊಂದಿರಬೇಕು – ಇದಕ್ಕೆ ಮೊದಲ ಪ್ರಾಶಸ್ತ್ಯ. ಈ ಮೂಲಕ ಮೊದಲು ನಾವು ಮನುಷ್ಯರಾಗಬೇಕು: ನಮ್ಮೊಳಗಿನ ನಾಯಿ. ನರಿ. ಹುಲಿ. ಸಿಂಹಗಳನ್ನು ಓಡಿಸಿ. ಪುರೋಹಿತ ಶಾಹಿ – ಬಂಡವಾಳಶಾಹಿ ಮೃಗೀಯತೆಯನ್ನು ಮೂಲೆ ಗುಂಪು ಮಾಡಿ ನಿಜ

ಮನುಷ್ಯರಾಗಬೇಕು; ಈ ಮನುಷ್ಯನಾಗುವುದೆಂದರೆ ಕಲಾಕಾರನಾಗುವುದು, ಕವಿಯಾಗುವುದು ಎಂದೇ ಅರ್ಥ"[೩] - ಎಂಬ ಬರಗೂರು ರಾಮಚಂದ್ರಪ್ಪನವರ ಅಭಿಪ್ರಾಯ ಈ ಪಂಥದ ಆಶಯವಾಯಿತು. ಇವರ ಸಮಾನತೆಯ ಧೋರಣೆಗೆ ಅನ್ವಯಿಸುವ ಅಂಬೇಡ್ಕರ್, ಲೋಹಿಯಾರವರ ತತ್ವಗಳೊಂದಿಗೆ ಮಾರ್ಕ್ಸನ ಆರ್ಥಿಕ ಚಿಂತನೆ ನೆಲೆಗಟ್ಟು ಒದಗಿಸಿದವು.

"ಮನುಷ್ಯನ ಸ್ವಭಾವವು ಅವನ ಸಾಮಾಜಿಕ ಪರಿಸರದಿಂದ ರೂಪಿತವಾಗಿರುತ್ತದೆ ಎಂದಾದರೆ ಅವನ ಸಾಮಾಜಿಕ ಪರಿಸರವೂ ಹೆಚ್ಚು ಮಾನವೀಯವಾಗಬೇಕಾದದ್ದು ಅನಿವಾರ್ಯ. ಅದಕ್ಕೆ ವ್ಯಕ್ತಿಯ ಮನಸ್ಸು ಉನ್ನತಿಯತ್ತ ಹರಿಯಬೇಕು. ವ್ಯಕ್ತಿಯ ಮನಸ್ಸು ಉನ್ನತಿಯತ್ತ ಸಾಗಲು ಆ ದಿಕ್ಕಿನಲ್ಲಿ ರಾಜಕೀಯವೆಂಬ ಶಕ್ತಿಯ ಬೇರುಗಳು ಪೂರಕವಾಗಿ ಹರಿಯಬೇಕು. ಹೀಗಾಗುವುದರಿಂದ ಮಾತ್ರ ಜನತೆಯ ಭವಿಷ್ಯ ರೂಪುಗೊಳ್ಳಲು ಸಾಧ್ಯ. ಅದಕ್ಕಾಗಿ ಈ ಪಂಥದಲ್ಲಿ ವ್ಯಕ್ತಿಗಿಂತ ಸಮಾಜ ಮುಖ್ಯವೆಂಬ ತಾತ್ವಿಕ ಧೋರಣೆ ವ್ಯಕ್ತವಾಗಿದೆ".[೪] ಈ ಧೋರಣೆ ದಲಿತ-ಬಂಡಾಯದ ತಾತ್ವಿಕ ಚಳುವಳಿಗೆ ನೆರವಾದವು. ಜೊತೆಗೆ ಇವರಲ್ಲಿ ಕಾಣುವ ಸಮುದಾಯ ಪ್ರಜ್ಞೆ, ಕೌಟುಂಬಿಕ ಪ್ರಜ್ಞೆಗೆ ಪೂರಕವಾಯಿತು.

"ಮಾತೃ ಮೂಲ ಸಂವೇದನೆ: ದಲಿತ ಸಮುದಾಯಗಳ ಪರಂಪರೆಯಲ್ಲಿ ಮಹಿಳೆ ವಿಶೇಷ ಸ್ಥಾನ ಪಡೆದಿದ್ದು ಆಕೆಯ ಪ್ರಭಾವ, ಸ್ವಭಾವ, ಗ್ರಹಿಕೆ ಹಾಗೂ ಅರಿವು ದಾಖಲಾಗಿರುತ್ತವೆ. ಅದರಿಂದಾಗಿಯೆ ಕೆಳಜಾತಿಗಳ ಸಂವೇದನೆಯಲ್ಲಿ ತಾಯ್ತನದ ಹಂಬಲ ಸಲಹುವ, ಕರುಣಿಸುವ ಭಾವುಕ ಸಂವೇದನೆ ದಟ್ಟವಾಗಿದೆ. ಮಮಕಾರದ ಕಥನ ರೂಪಗಳು, ಮಾತೃ ಪ್ರಧಾನ ಸಂಸ್ಕೃತಿಯ ಬೇರಿನಿಂದ ಬಂದಂಥವಾಗಿದ್ದು ಇವತ್ತಿಗೂ ದಲಿತ ಸಂವೇದನೆಯಲ್ಲಿ ಅದು ಮುಖ್ಯ ಸ್ಥಾಯಿಯಾಗಿದೆ. ಪುರುಷ ಮತ್ತು ಸ್ತ್ರೀ ಎರಡೂ ಸಂವೇದನೆಯ ಗ್ರಹಿಕೆಗಳು ಇವತ್ತಿನ ದಲಿತರ ಹೋರಾಟ ಮತ್ತು ಜೀವನ ಶೈಲಿಯಲ್ಲಿ ಬೆರೆತಿರುವುದರಿಂದ ಪುರುಷ ರೂಪಿ ಅಹಂ ನಿಷ್ಠತೆ ಕಂಡುಬರುವುದಿಲ್ಲ".[೫] ನಿಜವಾದ ಮಾತೃಮೂಲ ಸಂವೇದನೆಯೆಂಬುದು ಅಸಹಾಯಕ ಸ್ಥಿತಿಯಲ್ಲಿದ್ದು, ಬದುಕನ್ನು ಸವಾಲಿನಂತೆ ಸ್ವೀಕರಿಸಿ, ಜೀವನಮೌಲ್ಯಗಳಿಗೆ ಆದ್ಯತೆ ನೀಡಿದ ಕೆಳವರ್ಗದ ಸ್ತ್ರೀಯರಲ್ಲಿ ಇದು ದಟ್ಟವಾಗಿ ಕಂಡುಬರುತ್ತದೆ. ಹಾಗಾಗಿ ಅಂತಹವರ ತಾಯಿ ಆದರ್ಶದ ತಾಯಿಯಾಗುತ್ತಾಳೆ.

ಕಾಲಘಟ್ಟದಲ್ಲಾದ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಔದ್ಯೋಗಿಕ ಬದಲಾವಣೆ ಹಾಗೂ ಧೋರಣೆಯಿಂದ ಬರಹಗಾರರ ಮೇಲೂ ನಿಚ್ಚಳವಾಗಿ ತಟ್ಟಿರುವುದುಂಟು. ಉದಾಹರಣೆಗೆ ಸ್ವಾತಂತ್ರ್ಯ ಪೂರ್ವದ ತಲೆಮಾರಿನಲ್ಲಿ ದೇಶವನ್ನು ತಾಯಿಯೆಂದು ಗ್ರಹಿಸಿರುವ ರೀತಿಗೂ ಈಚಿನ ತಲೆಮಾರಿನವರು ಗ್ರಹಿಸಿರುವ ರೀತಿಗೂ ಇರುವ ಅಂತರ ಸ್ಪಷ್ಟವಾಗಿ ಗೋಚರಿಸುತ್ತದೆ.

ಜೈ ಭಾರತ ಭೂಮಿಗೆ ಮಾತೆಗೆ
ಜೈ ಪಾವನ ಮೂರ್ತಿಗೆ
ಸನ್ಮಂಗಳವಾಗಲಿ ಸತತಂ ।[೬]

ಎಂದು ಹೇಳಿದಂತೆ,

ಕನ್ನಡದ ನೆಲದ ಪುಲ್ಲೆನಗೆ ಪರಮ ಪಾವನ ತುಲಸಿ!
ಕನ್ನಡದ ನೆಲದ ನೀರ್ವೊನಲೆನಗೆ ದೇವನದಿ!
ಕನ್ನಡದ ನೆಲದ ಕಲ್ಲೆನಗೆ ಶಾಲಗ್ರಾಮ ಶಿಲೆ! ಕನ್ನಡಂ ದೈವಮೈ
ಕನ್ನಡ ಶಬ್ದಮೆನಗೋಂಕಾರಮೀಯನ್ನ
ಕನ್ನಡದ ನುಡಿಯೆ ಗಾಯತ್ರಿಯದ್ಭುತ ಮಂತ್ರ –
ಮಿನ್ನಾವುದೈ ಪೆರತು ಕನ್ನಡದ ಸೇವೆಯಿಂದಧಿಕಮೀ ಜಗದೊಳೆನಗೆ? [೭]

ಎಂದು ಸಾಲಿ ರಾಮಚಂದ್ರರಾಯರು ಆಧ್ಯಾತ್ಮಿಕದ ಚೌಕಟ್ಟಿನಲ್ಲಿ ಗ್ರಹಿಸಿದ್ದಾರೆ. ಕುವೆಂಪುರವರು ತಮ್ಮ ಕವಿತೆ 'ಜಯಹೇ ಕರ್ನಾಟಕ ಮಾತೆ' ಕವಿತೆಯಲ್ಲಿ ದೇಶ ಮತ್ತು ನಾಡನ್ನು ಇದೇ ಅರ್ಥದಲ್ಲಿ ಐತಿಹಾಸಿಕ ಹಿನ್ನೆಲೆಯಲ್ಲಿ ಪರಿಭಾವಿಸಿದ್ದಾರೆ. ಆದರೆ ಅದೇ ಎಡ ಪಂಥೀಯ ಧೋರಣೆಯಿಂದ ಬಂದ ಎಚ್.ಜಿ. ಸಣ್ಣಗುಡ್ಡಯ್ಯನವರು ತಮ್ಮದೊಂದು ಕವಿತೆಯಲ್ಲಿ ಪ್ರಸ್ತುತ ಭಾರತವನ್ನು ಈ ರೀತಿ ವಿಡಂಬಿಸಿದ್ದಾರೆ:

ಭಾರತದೊಳಗೇನಿಲ್ಲ!
ಅಪ್ಸರೆಯರ ಮಿಗುವ ಹೆಣ್ಣು
ಗುಡಿ ಗೋಪುರಕ್ಕೆಲ್ಲ ಹೊನ್ನು
ಬಂಗಾರ ಬೆಳೆವ ಮಣ್ಣು
ಭಾರತದೊಳಗೇನಿಲ್ಲ?
ಹಣವಿದ್ದವಗೇ ಎಲ್ಲ! [೮]

ಈ ರೀತಿ ವಿಡಂಬಿಸಿದ್ದಾರೆ. ದಲಿತ ಬಂಡಾಯದವರ ಪ್ರಜ್ಞೆ ಇದಕ್ಕಿಂತ ಭಿನ್ನವಾಗಿದೆ. ಸತೀಶ್ ಕುಲಕರ್ಣಿಯವರು ತಮ್ಮ 'ವಿಷಾದ ಯೋಗ' ಕವಿತೆಯಲ್ಲಿ:

ನಲವತ್ತೇಳರ ನರಕದ ನಾಡು
ಹೇ ರಾಮಾ ಆರ್ತನಾದ ನಾಡು
ಪುಡಿಪುಡಿಗೊಂಡ ಗೋಪುರದ ನಾಡು [೯]

ಎಂದಿದ್ದಾರೆ. ರಾಮ ಮಂದಿರದ ಪ್ರಸಂಗ ರಾಜಕೀಯದ ಸ್ವಾರ್ಥತೆಗೆ ಸಿಕ್ಕಿ ದೇಶದ ಕ್ಷೋಭೆಗೆ ಕಾರಣವಾಗಿರುವುದನ್ನು ಈ ಕವಿತೆಯಲ್ಲಿ ವಿಡಂಬಿಸಿದ್ದಾರೆ.

ಎಲ್. ಹನುಮಂತಯ್ಯನವರು 'ತಾಯಿ ಭಾರತಿ'ಯನ್ನು ಕಂಡಿರುವ ರೀತಿಯೇ ಬೇರೆ,

ಅಮ್ಮ ಎಷ್ಟು ದಿನ ಹೀಗೆ
ಕಾಯುತ್ತ ನಿಲ್ಲೋಣ?
ನೀನು ಕರೆಯುವ ಕನಿಕರ
ತೋರದಿದ್ದರೂ ನಾವೇ
ಮನೆಯ ಬಾಗಿಲು ತಳ್ಳಿ
ಅಂಗಳಕ್ಕೆ ಬಂದಿದ್ದೇವೆ
. . . .

ತಾಯ
ನಮ್ಮ ತಾತ ಮುತ್ತಾತರು
ಮಣ್ಣಿನ ಕಣಕಣವ ಕಣ್ಣೀರಿನಲಿ
ಕಲಸಿ, ಎಂಟೆತೊಂಟೆಗಳ ಬೆರೆಸಿ
ಕಟ್ಟಿರುವ, ...[೧೦]

ಇವರು ಎತ್ತುವ ಪ್ರಶ್ನೆ ಇಡೀ ದಲಿತ ಸಮೂಹವೇ ಎತ್ತುವ ಪ್ರಶ್ನೆಯಾಗಿದೆ. ಹೀಗೆ ಹನುಮಂತಯ್ಯನವರು 'ತಾಯಿ ಭಾರತಿ'ಯನ್ನು ನಿನ್ನ ಮನೆಯಲ್ಲಿ ತನ್ನದೂ ಹಕ್ಕಿದೆ ಎಂದು ತಿಳಿಸಿದ್ದಾರೆ. ಇದೇ ರೀತಿ ಇಂದೂಧರ ಹೊನ್ನಾಪುರ ತಮ್ಮ 'ಇಂಡಿಯವ್ವ ಮತ್ತು ದಲಿತ' ಕವಿತೆಯಲ್ಲಿ,

. . . .
ಇಂಡಿಯಾ
ನಿನ್ನ ಚರಿತ್ರೆಯುದ್ದಕ್ಕೂ ಬರೀ ಹಾದರಾಟ
ಸತ್ಯ ಮರೆಮಾಡಿ ನೀ ಇದುವರೆಗೂ ಕಲಿಸಿದ ಶಿಕ್ಷಣವ
ನಾ ನಿರ್ದಾಕ್ಷಿಣ್ಯವಾಗಿ ಒದೆಯುವೆ.
. . . .
ನಿನಗೆ ಧಿಕ್ಕಾರ, ನಿನ್ನ ವ್ಯವಸ್ಥೆಗೆ ಧಿಕ್ಕಾರ.
ನಿನ್ನ ಪರಂಪರೆ ಪುರಾಣಗಳಿಗೆ ಧಿಕ್ಕಾರ
ಧಿಕ್ಕಾರ. [೧೧]

ಎಂದು ದೇಶದಲ್ಲಿನ ವಿಕೃತ ಮುಖವನ್ನು ಅನಾವರಣಗೊಳಿಸಿ ಧಿಕ್ಕಾರ ಹಾಕಿದ್ದಾರೆ. ಇದೇ ಧೋರಣೆಯನ್ನು ಗಂಗಾರಾಂ ಚಂಡಾಳರ 'ಭಾರತಿ', ಸತ್ಯಾನಂದ ಪಾತ್ರೋಟರ 'ಕಲ್ಲಿಗೂ ಗೊತ್ತಿರುವ ಕಥೆ', ಕೆ. ಬಿ. ಸಿದ್ದಯ್ಯನವರ 'ದಕ್ಲ ಕಥಾ ಕಾವ್ಯ', ಹೊಸೂರು ಮುನಿಶಾಮಪ್ಪನವರ 'ಮಾದಾರ ತಾಯಿ', ಮಳ್ಳೂರು ನಾಗರಾಜುರವರ 'ನೆಲದ ಜೋಗುಳ', ಚಿನ್ನಸ್ವಾಮಿಯವರ 'ನನ್ನ ಪ್ರಾರ್ಥನೆ' ಮುಂತಾದ ಕವಿತೆಗಳು ವಾಸ್ತವಿಕ ಸ್ಥಿತಿಗತಿಯನ್ನು ಬಿಂಬಿಸುತ್ತವೆ. ಹಾಗೆಯೇ ಬದಲಾಗುತ್ತಿರುವ ಕಾವ್ಯದ ದಿಕ್ಕನ್ನು ಸೂಚಿಸುತ್ತವೆ.

ದಲಿತ ಬಂಡಾಯದವರು ಇರುವುದನ್ನು ಮುಚ್ಚಿಟ್ಟು ಇಲ್ಲದ ಕಲ್ಪನಾಲೋಕಕ್ಕೆ ಲಗ್ಗೆ ಹಾಕಲಿಲ್ಲ. ಭಾಷೆ – ಭಾವನೆಗಳೆರಡಕ್ಕು ಶಿಷ್ಟಾಚಾರದ ಬೇಲಿ ಹಾಕಲಿಲ್ಲ. ಕಾಣದ ಆದರ್ಶ, ವೈಭವ, ಹಿರಿಮೆಗಳ ಬೆನ್ನು ಹತ್ತಿ ಓಡಲಿಲ್ಲ. ಹಾಗಾಗಿ ಕನ್ನಡಕಾವ್ಯ ಸದಾ ಬದಲಾವಣೆಯ ಪಾತ್ರವಹಿಸಿರುವುದು ಕಂಡುಬರುತ್ತದೆ. ಆಯಾ ಕಾಲದ ಬದುಕು, ಭಾವನೆಗಳ ಹಿನ್ನೆಲೆಯಲ್ಲಿ ರೂಪುತಾಳಿದೆ.

ಸ್ತ್ರೀವಾದ ಇಂದು ಭಿನ್ನ ನೆಲೆಯಲ್ಲಿ ಬೇರು ಬಿಡುತ್ತಿದೆ. "ಸ್ತ್ರೀವಾದವು ಪುರುಷ ಪ್ರಧಾನ ಮತ್ತು ಸಂರಚನೆಗಳನ್ನು ವಿಮರ್ಶಿಸುತ್ತದೆ – ಪುರುಷ ಪ್ರಧಾನತೆಯು ನಿರ್ದಿಷ್ಟ ಚಾರಿತ್ರಿಕ ಸನ್ನಿವೇಶಗಳ ಫಲವೇ ಹೊರತು ಸಹಜವಾದುದ್ದೇನೂ ಅಲ್ಲ – ಸ್ತ್ರೀವಾದವೆಂದರೆ ನಮ್ಮ ಸಂಸ್ಕೃತಿಯ ವಿಮರ್ಶೆಯಾಗುತ್ತದೆ".[೧೨] ನಮ್ಮ ಸಂಸ್ಕೃತಿಯನ್ನು ಕೆದಕುವುದೆಂದರೆ ಸವಾಲನ್ನು ಆಹ್ವಾನಿಸಿದಂತೆಯೇ ಆಗುತ್ತದೆ. ಸನಾತನ ಸ್ತ್ರೀವಾದಿಗಳು

ಒಂದೆಡೆಯಾದರೆ, ಪ್ರಗತಿಪರ ಸ್ತ್ರೀವಾದಿಗಳು ಮತ್ತೊಂದೆಡೆ. ಇವರದು ಉತ್ತರ - ದಕ್ಷಿಣ ಧ್ರುವದಂತೆ ಎಂದೂ ಸೇರದ ಸ್ಥಿತಿ. ಇಬ್ಬರಿಗೂ ಅವರವರದೇ ಆದ ಆದರ್ಶಗಳಿವೆ. ಸನಾತನರು ಆದರ್ಶದ ಗುಂಗಿನಲ್ಲೆ ತೇಲುತ್ತಿದ್ದರೆ; ಪ್ರಗತಿಪರರು ಸ್ವಾಭಿಮಾನದ ಬದುಕಿಗೆ ಹಂಬಲಿಸುತ್ತಿದ್ದಾರೆ.

ಸನಾತನ ಸ್ತ್ರೀವಾದಿಗಳು: ಈ ಸನಾತನ ಸ್ತ್ರೀವಾದಿಗಳು ಶಿಷ್ಟ ಹಾಗೂ ಉನ್ನತ ವರ್ಗದಿಂದ ಬಂದವರಾಗಿದ್ದಾರೆ. ಇವರಿಗೆ ನಮ್ಮ ಸನಾತನ ಧರ್ಮವೇ ಆದರ್ಶ. ಅದರಲ್ಲಿ ಕಾಣುವ ಸೀತೆ, ಸಾವಿತ್ರಿ, ಮಂಡೋದರಿಯರೇ ಮೊದಲಾದ ಆದರ್ಶ ನಾರೀಮಣಿಗಳೇ ಸರ್ವಶ್ರೇಷ್ಠ. ಪರುಷರ ನೆರಳಿನಲ್ಲಿ ಆಶ್ರಯ ಪಡೆದು ಆತನನ್ನು ಸೇವಿಸುವುದೇ ಧರ್ಮ. ಇವರಿಗೆ ಬದಲಾವಣೆಯ ಬದುಕು ಬೇಕಾಗಿಲ್ಲ. ಪುರುಷರಂತೆ ತಾವೂ ಕೂಡ ಸರಿಸಾಟಿಯಾಗಿ ನಿಲ್ಲಬೇಕೆಂಬ ಹಠವಿಲ್ಲ. ಈ ಸ್ತ್ರೀವಾದಿಗಳು ಸನಾತನ ಹಿಂದೂ ಸಂಸ್ಕೃತಿಯಲ್ಲಿ ನಿರ್ದೇಶಿಸಿರುವ ನಿಯಮಕ್ಕೆ ತಲೆಬಾಗಿ ನಡೆಯಬೇಕೆಂದು ಆಶಿಸುತ್ತಾರೆ.

೨. ಪ್ರಗತಿಪರ ಸ್ತ್ರೀವಾದಿಗಳು: ಇವರು ಪ್ರಜಾಪ್ರಭುತ್ವದ ತತ್ವ ಸಿದ್ಧಾಂತಗಳಿಗೆ ಬದ್ಧರಾದವರು. ಆಧುನಿಕ ಶಿಕ್ಷಣದಿಂದ ಪ್ರೇರಿತರಾಗಿದ್ದಾರೆ. ಪ್ರಗತಿಪರ ನಿಲುವನ್ನು ಹೊಂದಿ, ಭಾರತೀಯ ಪರಂಪರೆಯಲ್ಲಿ ಮಾತ್ರವಲ್ಲ ಇತರ ರಾಷ್ಟ್ರಗಳಲ್ಲಿ, ಅನ್ಯ ಧರ್ಮಗಳಲ್ಲಿ ಸ್ತ್ರೀಯರಿಗಾಗಿರುವ ಅನ್ಯಾಯ, ಅಪಮಾನಗಳನ್ನು ಗ್ರಹಿಸಿರುವವರು. ರಾಜಕೀಯ, ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ನೆಲೆಯಲ್ಲಿ ಪುರುಷ ಸಮುದಾಯದಷ್ಟೇ ಸಮಬಲ ಹೊಂದಲು ಇರುವ ಅಡ್ಡಿ ಆತಂಕಗಳೇನೆಂದು ವಿಶ್ಲೇಷಿಸಿ ವಿಮರ್ಶಿಸುವ ಶೋಧನಾಪ್ರಜ್ಞೆ ಉಳ್ಳವರು. ವೈಯಕ್ತಿಕ ಅನನ್ಯತೆ ಹಾಗೂ ಲೈಂಗಿಕ ಅನನ್ಯತೆಯೂ ಇವರ ಚಿಂತನೆಯಲ್ಲಿ ಪ್ರಮುಖ ಸ್ಥಾನ ಹೊಂದಿದೆ. ಬಂಡವಾಳ ಶಾಹಿಗಳು ಕೇವಲ ಪುರುಷರನಷ್ಟೇ ಕೇಂದ್ರೀಕರಿಸಿಕೊಂಡು ರೂಪಿಸಿರುವ ವ್ಯವಸ್ಥೆಯ ಹಿಂದಿರುವ ಹುನ್ನಾರಗಳನ್ನು ಅರ್ಥ ಮಾಡಿಕೊಂಡವರು. ಅದಕ್ಕಾಗಿ ಸೆಟೆದು ನಿಲ್ಲಬೇಕೆಂಬ ಧೋರಣೆ ಇವರದು.

ಅರವಿಂದ ಮಾಲಗತ್ತಿಯವರ 'ನರ್ತಿಸೆಲೆ ಶಾರದೆ' ಕವಿತೆಯಲ್ಲಿ ಇಂತಹ ಪ್ರತಿಭಟನೆಯ ಧೋರಣೆಯೊಂದಿಗೆ ಪ್ರಗತಿಪರ ಚಿಂತನೆಯನ್ನು ಕಾಣಬಹುದು:

ನರ್ತಿಸು ನರ್ತಿಸೆಲೆ ಶಾರದೆ
ನೀನೆನ್ನ ನಾಲಿಗೆಯ ಮೇಲೆ ನರ್ತಿಸು॥
. . . .
ದೀನ ದಲಿತರ ಕೂಗಿಗೆ
ಶಬ್ದವಿಲ್ಲದ ಹಾಡಿಗೆ
ನಿಟ್ಟುಸಿರ ಖಡ್ಗವನು
ಕಣ್ಣ ಧಾರೆಯಲಿ ಮಸೆವ ಶಬ್ದಕೆ
ನರ್ತಿಸು.[೧೩]

ಎಂ. ಆರ್. ಕಮಲ ತಮ್ಮ 'ಮಗಳಿಗೊಂದು ಕತೆ' ಕವಿತೆಯಲ್ಲಿ, ಆಧುನಿಕ ತಾಯಿ ತನ್ನ ಮಗಳಿಗೆ ಪುರುಷವರ್ಗ ಮಹಿಳೆಯರನ್ನು ಮುಕ್ತವಾಗಿ ಬೆಳೆಯಲು ಬಿಡದ ಪಾಷಾಣ ಹೃದಯದವರೆಂದು ಎಚ್ಚರಿಕೆ ಕೊಟ್ಟಿರುವುದನ್ನು ಕಾಣಬಹುದು.

ಕದವ ತಟ್ಟದಿರು ಮಗಳೆ
ತೆರೆಯಲಾರೆ ನಿನ್ನ ಕರೆಯಲಾರೆ
ನಿನಗೆ ಗೊತ್ತೆ ಮಗಳೆ
ಇದೆಂಥ ಪಾಷಾಣ ಪಾಪಕೂಪವೆಂದು
ಧರೆಯಾಳುವವರೆಲ್ಲಾ ದೈತ್ಯರೆಂದು
ನಿನಗೆ ಗೊತ್ತೇ ಮಗಳೆ . . . . .[೧೪]

ಎಂ.ಆರ್. ಕಮಲ ಆಳುವ ಪುರುಷವರ್ಗ ದೈತ್ಯರೆಂಬ ಎಚ್ಚರಿಕೆ ನೀಡಿದರೆ; ಮಲ್ಲಿಕಾ ಘಂಟಿಯವರು ತನ್ನ ಮಗುವಿಗೆ ಪ್ರತೀಕಾರದ ಧೋರಣೆಯನ್ನು ತಾಳುವ ನಂಜುಂಡನಾಗಬೇಕೆಂದು ಕರೆ ಕೊಟ್ಟಿದ್ದಾರೆ.

ನನ್ನೆದೆಯ ಮೊಲೆಯಿಂದ ಹರಿದು ಬಂದಿಹ ಹಾಲು
ಹಾಲಲ್ಲ ಮಗುವೆ ಅದು ನನ್ನೆದೆಯ ನಂಜು
ಅದನುಂಡು ಬೆಳೆಯಬೇಕೆಂದು ನೀ ನಂಜುಂಡನಾಗಿ
ನನ್ನೆದೆಯ ಬೆಂಕಿಗೆ ತಂಪೆರೆಯಲು.
. . . .[೧೫]

ಸಂಪ್ರದಾಯವಾದಿಗಳು ಒಂದೆಡೆ ಸದ್ದು ಗದ್ದಲವಿಲ್ಲದೆ ಸನಾತನ ಪ್ರಜ್ಞೆಗೆ ಒತ್ತು ಕೊಟ್ಟರೆ; ದಲಿತ ಬಂಡಾಯದ ಕವಿಗಳು ತಮ್ಮನ್ನು ತಾವು ಕಾಣುವ, ತಮ್ಮ ನೆಲೆಗಳನ್ನು ಗಟ್ಟಿಗೊಳಿಸಿಕೊಳ್ಳುವ ಹಾದಿಯಲ್ಲಿ ಸಾಗಿದ್ದಾರೆ.

'ಎಲ್ಲ ಕಾಲದ ಎಲ್ಲ ಸ್ತ್ರೀಯರಿಗೆ ಅನ್ವಯಿಸುವಂತೆ ಏಕ ಸೂತ್ರದಲ್ಲಿ ವಿವರಿಸಬಲ್ಲ 'ಸ್ತ್ರೀವಾದಿ ಚಿಂತನೆ' ಎಂಬುದೊಂದಿಲ್ಲ. ಇದನ್ನು ಕಾಲ ದೇಶಗಳ ಅಗತ್ಯಗಳಿಗೆ ಅನುಗುಣವಾಗಿ ನಿರ್ವಚಿಸಿಕೊಳ್ಳುವ ಅಗತ್ಯವಿದೆ.

ಕುಟುಂಬದ ಒಳಗಾಗಲೀ, ಹೊರಗಾಗಲೀ ಸಮಾಜವು ಸ್ತ್ರೀಯರ ಮೇಲೆ ನಡೆಸುವ ದಬ್ಬಾಳಿಕೆ ಹಾಗೂ ಶೋಷಣೆಯ ಸ್ವರೂಪವನ್ನು ಅರ್ಥ ಮಾಡಿಕೊಂಡು ಅಂತಹ ಪರಿಸ್ಥಿತಿಯ ನಿವಾರಣೆಗಾಗಿ ಪ್ರಜ್ಞಾಪೂರ್ವಕವಾಗಿ ನಡೆಸುವ ಚಿಂತನೆ ಹಾಗೂ ಚಟುವಟಿಕೆಗಳನ್ನು ಸ್ತ್ರೀವಾದಿಗಳು ರೂಪಿಸಿಕೊಳ್ಳಬೇಕು'[೩೧] ಇಂತಹ ಆಲೋಚನೆಗಳು ಇತ್ತೀಚೆಗೆ ಚಾಲ್ತಿಗೊಂಡಿವೆ. ಎಡಪಂಥೀಯ ಧೋರಣೆ ಪ್ರಜಾತಂತ್ರದ ಆಶಯಗಳೊಂದಿಗೆ ಮಹಿಳೆಯರು ತಮ್ಮ ಸ್ವಾಭಿಮಾನದ ಬದುಕಿಗೆ ಹಂಬಲಿಸುತ್ತಿದ್ದಾರೆ.

ದೇಶ ವಿದೇಶಗಳಲ್ಲಿ ಸ್ತ್ರೀ ಸಮುದಾಯದಲ್ಲಿ ಆಗಿರುವ ತಳಮಳ, ಜಾಗೃತಿ, ಚಿಂತನೆಗಳು ಇವರ ಚಿಂತನೆಗಳೂ ಆಗಿವೆ. ಸಂಸ್ಕೃತಿಯಲ್ಲಿ ಆಮೂಲಾಗ್ರ ಬದಲಾವಣೆಯಾದಾಗ ಮಾತ್ರ ಸ್ತ್ರೀಯರ ವಿಮೋಚನೆ ಸಾಧ್ಯವೆಂಬ ಪರಿಕಲ್ಪನೆ ಇವರದು. ಈ ಪಂಥದವರಿಗೆ ಮಾರ್ಕ್ಸವಾದಿ ದೃಷ್ಟಿಕೋನ ಪ್ರಭಾವ ಬೀರಿರುವುದು

ಕಂಡು ಬರುತ್ತದೆ. ಮಹಿಳೆಯರು ಸಾಕ್ಷರರಾಗಬೇಕು, ವಿಚಾರಶೀಲರಾಗಬೇಕು, ಸ್ವಾಭಿಮಾನಿಗಳಾಗಬೇಕು. ಸಮಾನತೆ ಎಂಬುದು ಕೇವಲ ವೇದಿಕೆಯ ಸರಕಾಗಬಾರದು. ಬದುಕಿನ ಆದರ್ಶವಾಗಬೇಕು. ಹೆಣ್ಣನ್ನು ಹಿಂದಿನಂತೆ ನಡೆಸಿಕೊಳ್ಳುವ ಲೈಂಗಿಕವಾಗಿ, ಆರ್ಥಿಕವಾಗಿ ಶೋಷಣೆಗೈಯ್ಯುವ ಪುರುಷ ಸಮಾಜವನ್ನು ಹತ್ತಿಕ್ಕುವ ಪ್ರತಿರೋಧ ಬೆಳೆಸಿಕೊಳ್ಳಬೇಕು. ಹೆಣ್ಣು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸಬಲಳಾಗಬೇಕು. "ಮಹಿಳಾ ಸ್ವಾತಂತ್ರ್ಯ, ಮಹಿಳಾ ವೈಚಾರಿಕತೆ, ಮಹಿಳಾ ಸಾಮಾಜಿಕ ಜವಾಬ್ದಾರಿ ಇಂಥ ವಸ್ತುವೇ ಲೇಖಕನಿಗೆ ಕ್ಲೀಷೆಯಾಗತೊಡಗಿದೆ. ಗಂಡು - ಹೆಣ್ಣುಗಳ ನಡುವಣ ಅತಿಯಾದ ದ್ವೇಷ ಅಥವ ಭಕ್ತಿ, ಒಪ್ಪಿಗೆ ಈ ಎರಡೂ ತುದಿಯನ್ನು ಬಿಟ್ಟು ವಸ್ತುನಿಷ್ಠವಾಗಿ ನಾವು ನೋಡಬೇಕಿದೆ. ಹೆಂಗಸು ಎಂದ ಮೇಲೆ ಆಕೆಗಿರುವ ಕೆಲವು ಮಿತಿಗಳನ್ನು ಒಪ್ಪಿಕೊಳ್ಳದೆ ವಿಚಿತ್ರ ಸಮಾನತೆಗಾಗಿ ಬಡಿದಾಡುವುದರಲ್ಲಿ ಅರ್ಥವಿಲ್ಲ"[೧೬] ಎಂದು ವಿಶ್ಲೇಷಿಸುವ ದಿಕ್ಕಿನಲ್ಲಿ ತಮ್ಮ ಇತಿ - ಮಿತಿಗಳ ನಡುವೆಯೂ ಪ್ರಗತಿ ಕಾಣಬೇಕೆಂಬ ಹಂಬಲ ಇವರದು.

ಹೆಣ್ಣು ಶಿಷ್ಟ ಪರಂಪರೆಯಲ್ಲಿ ನಿರ್ಬಂಧಗಳ ಅಡಕತ್ತರಿಗೆ ಸಿಲುಕಿರುವುದು ಕಂಡುಬಂದ ಕಾಲದಲ್ಲೇ ತನ್ನ ಸ್ವಂತಿಕೆಯನ್ನು ಮೆರೆದಿರುವುದು ನಮ್ಮಲ್ಲಿ ಕಂಡುಬರುತ್ತದೆ. ಅಧಿಕೃತ ಸಾಹಿತ್ಯ ಪರಂಪರೆಯಲ್ಲಿ ಕಂಡುಬರುವ ಶೋಷಿತ ಹೆಣ್ಣಿನ ಧ್ವನಿ ಅಡಗಿರುವುದು ಒಂದೆಡೆಯಾದರೆ; ಜನಪದ ಸಾಹಿತ್ಯದ ಕಥೆ ಒಗಟುಗಳು, ಗಾದೆಗಳಲ್ಲಿ ಸ್ವಾಭಿಮಾನದ ಮಿಂಚು ಹರಿಸಿರುವುದು ಕಂಡುಬರುತ್ತದೆ. ಅಕ್ಕಮಹಾದೇವಿಯಾದಿಯಾಗಿ ಅನೇಕ ಶರಣೆಯರು ದಿಟ್ಟತನದಿಂದ ಪುರುಷ ಸಮಾಜಕ್ಕೆ ಸೆಡ್ಡೊಡೆದು ನಿಂತು ಯಶಸ್ವಿಯಾಗಿರುವುದುಂಟು. ಸಂಚಿಯ ಹೊನ್ನಮ್ಮನ 'ಹದಿಬದೆಯ ಧರ್ಮ'ದ ಕೆಲವು ಪದ್ಯಗಳಲ್ಲಿ ಇದನ್ನು ಕಾಣಬಹುದು. ಆದರೆ ಇದು ಹೇಳಿಕೊಳ್ಳುವಷ್ಟು ಪ್ರಮಾಣದಲ್ಲಿ ನಮಗೆ ತೋರುವುದಿಲ್ಲ. ಆದರೆ ಈಗಿನ ಪ್ರಗತಿಪರ ಧೋರಣೆಯ ಸ್ತ್ರೀವಾದಿಗಳಿಗೆ ಒಂದು ಕಿರು ಪರಂಪರೆಯಾದರೂ ಇತ್ತೆಂಬುದನ್ನು ಒಪ್ಪಿಕೊಳ್ಳಬಹುದು.

ಈ ಹಿನ್ನೆಲೆಯಲ್ಲಿ "ಕುಟುಂಬ ಒಳಗೆ ಹಾಗೂ ಹೊರಗೆ ಧಾರ್ಮಿಕ ಮೌಲ್ಯದ ವ್ಯವಸ್ಥೆಯಲ್ಲಿ, ಉದ್ಯೋಗ ಕ್ಷೇತ್ರದಲ್ಲಿ, ಮೂಲಭೂತವಾದದಲ್ಲಿ, ಸಮೂಹ ಮಾಧ್ಯಮಗಳಲ್ಲಿ, ಒಟ್ಟಾರೆ ಸಾಂಸ್ಕೃತಿಕ ಮೌಲ್ಯ ವ್ಯವಸ್ಥೆಯಲ್ಲಿ ಪರಂಪರಾಗತವಾಗಿ ಒಳಹೊಕ್ಕು ಅಂತರ್ಗತವಾಗಿಸಿಕೊಂಡು ಬಂದಿರುವ ಸ್ತ್ರೀ ವಿರೋಧಿ ಪ್ರವೃತ್ತಿಗಳನ್ನು, ಪುರುಷ ಪ್ರಧಾನ ವ್ಯವಸ್ಥೆಯನ್ನು ಎದುರಿಸುವುದು ಇಂದಿನ ಸ್ತ್ರೀವಾದದ ಪ್ರಮುಖ ಗುರಿಯಾಗಿದೆ" [೧೭] - ಎಂದು ವಿಶ್ಲೇಷಿಸಲು ಹಿಂದಿನ ಪರಂಪರೆ ಅವರಿಗೆ ಒತ್ತಾಸೆ ನೀಡಿರುವುದನ್ನು ಮರೆಯುವಂತಿಲ್ಲ.

ಕಲಾತ್ಮಕತೆಯ ಪ್ರಶ್ನೆ

ಮಾತೃತ್ವದ ಪರಿಕಲ್ಪನೆಯಲ್ಲಿ ಕವಿಗಳಲ್ಲಿ ಕಾಣುವ ಬದ್ಧತೆ ಹಾಗೂ ಕಲಾತ್ಮಕತೆ ಏಕರೂಪದಲ್ಲಿ ಕಾಣುವುದಿಲ್ಲ. ಕವಿ ಅಥವಾ ಕಲಾವಿದನಿಗೆ ಚಿಂತನಾಕೇಂದ್ರ ಸಮಾಜ. ಸಮಾಜಕ್ಕಾಗಿ, ಸಮಾಜದಿಂದ, ಸಮಾಜಕೋಸ್ಕರವೇ ಸಾಹಿತ್ಯ ಕಲೆಗಳು ರೂಪುತಾಳುವುದು. 'ನಾನು ಸಮಾಜವನ್ನು ಕೇಂದ್ರವಾಗಿಟ್ಟುಕೊಂಡು ಏನನ್ನೂ

ರಚಿಸುತ್ತಿಲ್ಲ. ಅದು ನನ್ನ ಆತ್ಮ ತೃಪ್ತಿಗೋಸ್ಕರ, ನನ್ನ ಮನಸ್ಸಿನ ಸಮಾಧಾನಕೋಸ್ಕರ' ಎಂಬ ವಾದದಲ್ಲಿ ಹುರುಳಿರುವುದಿಲ್ಲ. ಒಂದು ವೇಳೆ ಆ ಭಾವನೆ ನಿಜವಿದ್ದರೆ ಅದನ್ನು ಪ್ರಕಟಿಸುವ, ಪ್ರಸಾರ ಮಾಡುವ ಹುಚ್ಚು ಏಕೆ ಬೇಕೆಂಬ ಪ್ರಶ್ನೆ ಎದುರಾಗುತ್ತದೆ. ನನಗೆ ತೃಪ್ತಿಯಾದಂತೆ ಅನ್ಯರಿಗೂ ಆಗಲಿ ಎಂದು ಕೊನೆಗೆ ನುಣುಚಿಕೊಳ್ಳುವ ಪಲಾಯನವಾದದಲ್ಲಿ ತತ್ಯವಿರುವುದಿಲ್ಲ. "ಕವಿ ಅಥವ ಕಲಾವಿದನಿಗೆ ಮೂಲ ಸೆಲೆ ಸಮಾಜವೇ. ಸಮಾಜದ ಸಂಬಂಧವಿಲ್ಲದೆ ಕವಿಪ್ರಜ್ಞೆ ಶೂನ್ಯದಿಂದ ಬಂದದ್ದಲ್ಲ. ಪ್ರಜ್ಞೆಗೆ ಮೂಲವಾದ ಸಹಜ ಸ್ವರೂಪವೇ ಅದನ್ನು ಗ್ರಹಿಸಿದ ಕವಿ ಮನಸ್ಸಿನಲ್ಲಿ ವಿಶ್ಲೇಷಿತ ಸ್ವರೂಪದಲ್ಲಿ ಅಭಿವ್ಯಕ್ತಿಗೊಂಡಿರುತ್ತದೆನ್ನುವುದು ವಾಸ್ತವ ಸಂಗತಿ. ಇಂತಹ ಅಭಿವ್ಯಕ್ತಿಯಲ್ಲಿನ ವಸ್ತು ಕಾಲಾತೀತವಾದದ್ದೋ, ಲೋಕಾತೀತವಾದದ್ದೋ ಆಗಿದ್ದಿರುವುದಕ್ಕೆ ಬದಲಾಗಿ ಆಯಾ ಕಾಲದ ಸಾಂಸ್ಕೃತಿಕ ಸ್ವರೂಪದಲ್ಲಿನ ವಿವಿಧ ವಲಯಗಳಿಂದ ಮೂಡಿ ಬಂದದ್ದಾಗಿರುತ್ತವೆ".[೧೮] ಅಂದರೆ ಸಮಾಜದ ಬದುಕಿನೊಂದಿಗೆ ಸಾಹಿತ್ಯ ಕಲೆಗಳು ಮೇಳವಿಸಿಕೊಂಡಿರುವುದು ಸಹಜವಾದ ಸಂಗತಿ.

ನವೋದಯದಲ್ಲಿ ಶಿಷ್ಟರೂಪದ ಬರವಣಿಗೆಗೆ ಆದ್ಯತೆ ನೀಡಿದ್ದು ಕಂಡುಬರುತ್ತದೆ. ಸಂಸ್ಕೃತ ಮಿಶ್ರಿತ ಭಾವಪೂರ್ಣವಾದ ಶೈಲಿ, ಸಂಪ್ರದಾಯದ ಬಂಧ, ಶಿಷ್ಟ ಭಾಷೆಗಳಿಂದ ಕೂಡಿರುವುದು ವಿಶೇಷ. ಎಲ್ಲಿಯೂ ಕೂಡ ದೇಶೀ ಮೂಲದ ಶೈಲಿಯಾಗಲೀ, ಶ್ರೀಸಾಮಾನ್ಯರ ಬದುಕಿನಾಳದ ನೋವನ್ನಾಗಲೀ, ವ್ಯಕ್ತಿಗತ ಸಮಸ್ಯೆಯನ್ನಾಗಲೀ ಬಿಂಬಿಸಲು ಯತ್ನಿಸಿಲ್ಲ. ಕಲಾತ್ಮಕತೆಗೆ, ಉತ್ಸಾಹಕ್ಕೆ, ಪಾರಂಪರಿಕ ಪ್ರಜ್ಞೆಗೆ ಆದ್ಯತೆ ಕೊಟ್ಟಿದ್ದು ಅವರ ಬರವಣಿಗೆಯ ವಿಶೇಷ. ಅವರ ತಾಯಿಯಾಗಲಿ, ದೇಶವಾಗಲೀ, ಭಾಷೆಯಾಗಲೀ, ಶುಭ್ರವೂ, ನಿರ್ಮಲವೂ, ಅನನ್ಯವೂ, ಗೌರವಯುಕ್ತವೂ ಆಗಿದೆ. ಅದರಲ್ಲಿ ನಾಡಿನ, ದೇಶದ ಭವ್ಯ ಪರಂಪರೆಯ ಹಿರಿಮೆ, ಪುರಾಣೇತಿಹಾಸಗಳ ವಿಜೃಂಭಣೆ, ಪಾಪ ಪುಣ್ಯಗಳ ಪ್ರತಿಪಾದನೆಯನ್ನು ಲಯಬದ್ಧವಾಗಿ ಭಾವಪೂರ್ಣವಾಗಿ ಚಿತ್ರಿಸಿದ್ದಾರೆ. ಅವರಿಗೆ ಇಲ್ಲಿಯ ಬಡತನ ಕೆರಳಿಸಿಲ್ಲ, ಜಾತೀಯತೆ ಅಸಹ್ಯ ಉಂಟುಮಾಡಿಲ್ಲ. ಮೋಸ ವಂಚನೆ ಸಿಟ್ಟು ಬರಿಸಿಲ್ಲ. ಸಾತ್ವಿಕ ರೀತಿಯ ಪ್ರತಿಭಟನೆ ಅವರ ಕವಿತೆಗಳಲ್ಲಿ ಮೆಲುಗಾಳಿಯಂತೆ ಹಾದು ಹೋಗುತ್ತದೆ.

ಆರಂಭದ ನವೋದಯದವರಲ್ಲಿ ಗೇಯತೆ, ರಮ್ಯತೆ, ಪ್ರಾಸ, ಲಯ, ವಿನ್ಯಾಸಗಳು ತುಂಬಾ ಪ್ರಮುಖವಾಗಿ ಕಂಡುಬರುತ್ತವೆ. ಅಂದಿನ ತುರ್ತು – ದೇಶಭಕ್ತಿ ಹಾಗೂ ರಾಷ್ಟ್ರೀಯತೆಯ ಭಾವನೆಗಳನ್ನು ನೇರವಾಗಿ ಜನಮನದಲ್ಲಿ ಬಿತ್ತುವ ಕೆಲಸವಾಗಿತ್ತು. ಕಾವ್ಯದಲ್ಲಿ ಭಾರತೀಯತ್ವವು ಅದರ ಹಿರಿಮೆ ಗರಿಮೆಗಳನ್ನು, ಅದರ ಐತಿಹಾಸಿಕ ಮಹತ್ವವನ್ನು, ಪ್ರಾಕೃತಿಕ ಸೊಗಸನ್ನು ಸಾಂಪ್ರದಾಯಕ ದೃಷ್ಟಿಯಲ್ಲಿ ಕಂಡು ಉನ್ನತ್ತ ರೀತಿಯಲ್ಲಿ ಕೊಂಡಾಡಿ ಜನಮನದಲ್ಲಿ ದೇಶಾಭಿಮಾನದ ಮಿಂಚಿನ ಸಂಚಾರ ಉಂಟುಮಾಡಿದ್ದು ಕಂಡುಬರುತ್ತದೆ. ಭಾವಕ್ಕೆ, ರಾಗ ಮಾಧುರ್ಯಕ್ಕೆ, ವರ್ಣನೆಗೆ, ಅದರ ವೈಶಿಷ್ಟ್ಯತೆಗೆ ಆದ್ಯತೆ ಕೊಟ್ಟರು. ಪಾಶ್ಚಾತ್ಯ ರೊಮ್ಯಾಂಟಿಕ್ ಸಂಪ್ರದಾಯದ ಪ್ರೇರಣೆಗೊಳಗಾಗಿದ್ದ ಕವಿಗಳು ಭಾವಾವೇಶದಿಂದ ಕವಿತೆ ರಚಿಸಿದ್ದು ಕಂಡುಬರುತ್ತದೆ. ಬಿ.ಎಂ.ಶ್ರೀ, ಬೇಂದ್ರೆ, ಕುವೆಂಪು, ಡಿ.ವಿ.ಜಿ., ಕೆ.ಎಸ್. ನರಸಿಂಹ ಸ್ವಾಮಿ, ಗೋಪಾಲಕೃಷ್ಣ ಅಡಿಗ, ರಂಶ್ರೀ ಮುಗಳಿ, ವಿ.ಕೃ ಗೋಕಾಕ, ದಿನಕರ ದೇಸಾಯಿ, ಡಿ.ಎಸ್. ಕರ್ಕಿ, ಚೆನ್ನವೀರ ಕಣವಿ, ಆಲೂರು ವೆಂಕಟರಾಯರೇ ಮೊದಲಾದ ಹಿರಿಯ ತಲೆಮಾರಿನ

ಕವಿಗಳಲ್ಲಿ ರಾಷ್ಟ್ರೀಯ ಪ್ರಜ್ಞೆಯ ಪ್ರತಿಮೆಯಾಗಿ ಗಾಂಧಿ, ನೆಹರು ಮೊದಲಾದ ರಾಷ್ಟ್ರನಾಯಕರ ಕುರಿತ ಕವಿತೆಗಳು ರೂಪುತಾಳಿದವು. ಸ್ವಾತಂತ್ರ್ಯಸಂಗ್ರಾಮ ಹಾಗೂ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಭಾವ ನಿರ್ಭರವಾದ ಕವನಗಳು ಹೊಮ್ಮಿದವು. ನವೋದಯದವರಲ್ಲಿ ಕನ್ನಡ ಭಾಷೆಯಲ್ಲಿ ಪ್ರಬುದ್ಧರಾದವರು, ಕನ್ನಡ ಅಧ್ಯಾಪಕರು ಹೆಚ್ಚು ಮಂದಿ ಕಾಣಬರುತ್ತಾರೆ.

ಸ್ವಾತಂತ್ರ್ಯ ನಂತರದಲ್ಲಿ ನವ್ಯ ಕವಿಗಳು ತಮ್ಮ ಅಭಿವ್ಯಕ್ತಿಯನ್ನು ನವೋದಯದವರಿಗಿಂತ ಭಿನ್ನ ದಾರಿಯಲ್ಲಿ ಕಂಡುಕೊಂಡರು. ಸಮಕಾಲೀನತೆಯನ್ನು ಸಾಧಿಸುವ, ಭ್ರಮನಿರಸನದ ವಿಚಾರಗಳಿಗೆ ಮೂರ್ತರೂಪ ನೀಡುವ, ತಲೆದೂಗುವಂತಹ ನಾದಮಾಧುರ್ಯಕ್ಕೆ ವಿರುದ್ಧವಾದ, ಪ್ರತಿಮೆ ಪ್ರತೀಕಗಳ ಮೂಲಕವೇ ಎಲ್ಲ ಭಾವನೆಗಳನ್ನು ಮೂರ್ತಗೊಳಿಸಬೇಕೆಂಬ ಹಟಕ್ಕೆ ಒಳಗಾದಂತೆ ವರ್ತಿಸಿದರು. ಇಲ್ಲಿನ ಬಡತನ, ಜಾತಿ, ಕುಲ, ಮತಗಳ ಬಡಿದಾಟ, ಮೂಢನಂಬಿಕೆ, ಜನ ಪ್ರತಿನಿಧಿಗಳ ಗೋಸುಂಬೆ ತನಗಳನ್ನು ತಮ್ಮದೇ ಆದ ಸಂಕೇತಗಳ ಮೂಲಕ, ಪ್ರತಿಮೆ ರೂಪಕಗಳ ಮೂಲಕ ಅನಾವರಣಗೊಳಿಸಲು ಯತ್ನಿಸಿದರು.

ನವ್ಯರಿಗೆ ವೈಚಾರಿಕ ಮನಸ್ಸು ಮೂಡಿದ್ದು ಲೋಹಿಯಾ ಸಿದ್ಧಾಂತದಿಂದ. ಯಾವುದು ಶ್ರೇಷ್ಠ, ಪವಿತ್ರ, ಅನನ್ಯ ಎಂಬ ಸಾಂಪ್ರದಾಯಕ ಬದ್ಧತೆಯ ಬುಡಕ್ಕೆ ಸಿಡಿಲಿಟ್ಟಂತೆ ಲೋಹಿಯಾ ಸಿದ್ಧಾಂತ ಶಕ್ತಿಯುತವಾಗಿತ್ತು. ಸಾಂಪ್ರದಾಯಕ ಮೂರ್ತಿ ಭಂಜಕತ್ವದ ಗುಣವನ್ನು ಮೈಗೂಡಿಸಿಕೊಂಡಿದ್ದ ಲೋಹಿಯಾರ ಚಿಂತನೆಗಳು ನಮ್ಮ ಕವಿಗಳನ್ನು ಆಕರ್ಷಿಸಿದವು. ಈ ಹಿನ್ನೆಲೆಯಲ್ಲಿ ಗೋಪಾಲಕೃಷ್ಣ ಅಡಿಗ, ಯು.ಆರ್. ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಶ್ರೀಕೃಷ್ಣ ಆಲನಹಳ್ಳಿ, ದೇವನೂರು ಮಹಾದೇವ, ಪಿ. ಲಂಕೇಶ್, ಚಂದ್ರಶೇಖರ ಪಾಟೀಲರೇ ಮೊದಲಾದವರು ಲೋಹಿಯಾ ವಿಚಾರ ಧಾರೆಗಳಿಂದ ಪ್ರೇರಿತರಾದರು. ನವ್ಯರಲ್ಲಿ ಹೆಚ್ಚು ಇಂಗ್ಲಿಷ್ ಶಿಕ್ಷಕರು. ಆದರೂ ಅವರೆಲ್ಲ ಕನ್ನಡದಲ್ಲಿ ಬರವಣಿಗೆ ಕಂಡುಕೊಂಡು ಯಶಸ್ವಿಯಾದರು. ಇವರಿಗೆ ವಸ್ತುನಿಷ್ಠತೆ ಇತ್ತೇ ಹೊರತು, ಕಲಾತ್ಮಕತೆ ಮುಖ್ಯವಾಗಿರಲಿಲ್ಲ. ಇವರ ವಿಚಾರಗಳು, ಬರಹಗಳು ಕೇವಲ ಸುಶಿಕ್ಷಿತರನ್ನು ತಲುಪಲು, ತಣಿಸಲು ಸಾಧ್ಯವಾಯಿತೇ ಹೊರತು ಶ್ರೀಸಾಮಾನ್ಯರನ್ನು ಮುಟ್ಟಲು ಸಾಧ್ಯವಾಗಲಿಲ್ಲ. ನೆನಪಿಗೆ ಉಳಿಯುವ, ಕಿವಿಗೆ ಮುಟ್ಟುವ, ತಲೆದೂಗುವ, ಮೈನವಿರೇಳಿಸುವ ವಿಧಾನದಿಂದ ಜನಮನ ಗೆದ್ದಿದ್ದ ನವೋದಯದವರಂತೆ ಇವರು ಜನಸಾಮಾನ್ಯರಿಗೆ ಹತ್ತಿರವಾಗಲಿಲ್ಲ.

ನವೋದಯ, ನವ್ಯ ಕವಿಗಳ ಸೃಷ್ಟಿ – ಪ್ರತಿಸೃಷ್ಟಿಗಳು ಪೂರ್ಣ ಪ್ರಮಾಣದಲ್ಲಿ ನಡೆಯಲಿಲ್ಲ. ನವೋದಯದವರಲ್ಲಿ ಬಲ ಪಂಥೀಯರ ಹೆಚ್ಚಳವಿದ್ದರೆ; ನವ್ಯರಲ್ಲಿ ಎಡ ಪಂಥೀಯರ ಹೆಚ್ಚಳ ಕಂಡಿತು. ಇವೆರಡು ಪಂಥಗಳು ಕಟ್ಟಿಕೊಡಲಾರದ ಅನುಭವವನ್ನು ದಲಿತ – ಬಂಡಾಯ ಕೊಡಲು ಮುಂದಾಯಿತು. ದಲಿತ ಬಂಡಾಯಕ್ಕೆ ಅಂಬೇಡ್ಕರ್, ಮಾರ್ಕ್ಸ್‌ವಾದಿ ಚಿಂತನೆಗಳು ಪ್ರಭಾವ ಬೀರಿದವು. ದಲಿತರು, ಅಲ್ಪ ಸಂಖ್ಯಾತರು, ಹಿಂದುಳಿದವರು ಈ ಪಂಥದಲ್ಲಿ ಬೆರೆತರು. ಸ್ತ್ರೀ ಸಂವೇದನೆಗೆ ಈ ಪಂಥ ಹೆಚ್ಚು ಅವಕಾಶ ಮಾಡಿಕೊಟ್ಟಿತು. ವ್ಯವಸ್ಥೆಯ ವಿರುದ್ಧವಾಗಿ, ಜಾತಿ ಮತದ ನಿರ್ಮೂಲನೆಗಾಗಿ, ಶೋಷಣೆ , ವಂಚನೆಯ ಬಗ್ಗು ಬಡಿಯಲು ಜನಪರ ಆಶಯ ಧೋರಣೆಯೊಂದಿಗೆ

ಜನಪದ ಧಾಟಿಯನ್ನು ಬಳಸಿಕೊಂಡು ಹಾಡಿದರು. ಜನಪದ ಲಯ, ಗೇಯತೆ, ಪಡೆನುಡಿ ಗಾದೆಮಾತುಗಳ ಪ್ರಭಾವದಿಂದ ಜನಮನ ತಟ್ಟಿದರು. ಜನರ ಭಾಷೆಯನ್ನು, ಹಾಡು ಕುಣಿತವನ್ನು ಈ ಪಂಥ ತನ್ನ ಅನುಭವದ ಮೂರ್ತರೂಪಕ್ಕೆ ಬಳಸಿಕೊಂಡಿತು. ಬರಗೂರು ರಾಮಚಂದ್ರಪ್ಪ, ರಹಮತ್ ತರೀಕೆರೆ, ಸಿದ್ಧಲಿಂಗಯ್ಯ, ಚಂದ್ರಶೇಖರ ಪಾಟೀಲ, ಆರ್.ಕೆ. ಮಣೀಪಾಲ, ಕೆ.ಬಿ. ಸಿದ್ದಯ್ಯ, ಸತ್ಯಾನಂದ ಪಾತ್ರೋಟ, ಎಲ್.ಹನುಮಂತಯ್ಯ, ಲಕ್ಷ್ಮೀಪತಿ ಕೋಲಾರ, ಬಂಜೆಗೆರೆ ಜಯಪ್ರಕಾಶ್, ಶಂಕರ ಕಟಕಿ, ಅರವಿಂದ ಮಾಲಗತ್ತಿ, ವಡ್ಡಗೆರೆ ನಾಗರಾಜಯ್ಯ, ಎಸ್.ಜಿ. ಸಿದ್ಧರಾಮಯ್ಯ, ಹೊಸೂರ ಮುನಿಶಾಮಪ್ಪ, ಲೋಕೇಶ ಅಗಸನ ಕಟ್ಟೆ, ಎ.ಕೆ.ಹಂಪಣ್ಣ, ಮಳ್ಳೂರು ನಾಗರಾಜ ಮೊದಲಾದವರು ತಮ್ಮ ಲೇಖನಗಳು ಹಾಗೂ ಕವಿತೆಗಳಿಂದ ದಲಿತ ಬಂಡಾಯ ಪಂಥವನ್ನು ಸಮೃದ್ಧಗೊಳಿಸಿದರು. ಇವರುಗಳು ವಸ್ತುವಿಗೆ ಕೊಟ್ಟಷ್ಟೇ ಮಹತ್ವವನ್ನು ಕೃತಿಯ ಆಕೃತಿಗೂ, ಕಲಾತ್ಮಕತೆಗೂ ಕೊಡಲು ಶ್ರಮಿಸಿದರು. ನವ್ಯರು ನಿರಾಕರಿಸಿದ್ದ ಲಯ, ಪ್ರಾಸ, ನಾದ, ಗೇಯತೆಗಳನ್ನು ಇವರು ಬಳಸಿಕೊಂಡು ಹಾಡಲು ಯೋಗ್ಯವಾದ ಕವಿತೆಗಳನ್ನು ಬರೆದರು. ಈ ಜಾಡಿನಲ್ಲಿ ನಡೆದದ್ದರಿಂದಲೇ ಸಮುದಾಯವನ್ನು ಜಾಗೃತಿಗೊಳಿಸಲು ಸಾಧ್ಯವಾಯಿತು.

ದಲಿತ ಸಂಘರ್ಷ ಸಮಿತಿ, ಸಮುದಾಯ, ರೈತ ಸಂಘ ಮುಂತಾದ ಸಂಘಟನೆಗಳು ಹಾಡುಗಳ ಮೂಲಕ ಜನಮನಕ್ಕೆ ಹತ್ತಿರವಾದವು. 'ಕವಿ ಬೀದಿಗೆ ಪ್ರತಿಭಟಿಸಲು ಹೋಗಬೇಕು ಆದರೆ ಯಾವಾಗಲೂ ಬೀದಿಯಲ್ಲಿರಬಾರದು' ಎಂದು ಬರಗೂರರು ಕೊಟ್ಟ ಕರೆ ಈ ಪಂಥ ಎಷ್ಟೊಂದು ಜನ ಸಾಮಾನ್ಯರಲ್ಲಿ ಬೆರೆತಿತ್ತು ಎಂಬುದನ್ನು ತೋರಿಸಿಕೊಡುತ್ತದೆ.

ಭಾಷಾ ಪ್ರಯೋಗದ ವಿವಿಧ ಸಾಮಾಜಿಕ ನೆಲೆಗಳು

ದೇಶವನ್ನಾಗಲಿ, ನಾಡು – ನುಡಿ, ನಿಸರ್ಗವನ್ನಾಗಲಿ, ಹಡೆದ – ಪಡೆದ ತಾಯಿಯನ್ನಾಗಲಿ ಚಿತ್ರಿಸುವಲ್ಲಿ ಎಲ್ಲ ವರ್ಗದ, ಎಲ್ಲ ಪಂಥದ ಕವಿಗಳೂ ಕಾಣ ಸಿಗುತ್ತಾರೆ. ಆದರೆ ಅವರವರ ಭಾಷೆ ಹಾಗೂ ಶೈಲಿ ಅವರವರ ಆರ್ಥಿಕ ಸ್ಥಿತಿಗತಿ, ಶೈಕ್ಷಣಿಕ ಸ್ಥಿತಿಗತಿ, ಸಾಮಾಜಿಕ ಸ್ಥಿತಿಗತಿ, ಪ್ರಾಂತೀಯ ಸ್ಥಿತಿಗತಿ ಹಿನ್ನೆಲೆಯಲ್ಲಿ ವೈವಿಧ್ಯತೆಯಿಂದ ಕೂಡಿದೆ. ಈ ಜಗತ್ತನ್ನು ಪೋಣಿಸಿರುವುದು ಭಾಷೆ. ಇದೇ ಭಾಷೆ ಹೃದಯಗಳನ್ನು ಬೆಸೆಯುವ, ಛಿದ್ರಗೊಳಿಸುವ ಶಕ್ತಿ ಪಡೆದಿದೆ. ಒಂದು ವರ್ಗದ ಭಾಷೆಗೆ ತನ್ನದೇ ಆದ ಜೀವನ ಕೌಶಲ್ಯ, ಸಂಪ್ರದಾಯ, ಪರಂಪರೆ, ಜೀವನದೃಷ್ಟಿಯ ಪ್ರಭಾವವಿರುವುದರಿಂದ ಒಂದೇ ಗ್ರಾಮದಲ್ಲಿರುವ ಸ್ಪೃಶ್ಯರ ಭಾಷೆಗೂ ಅಸ್ಪೃಶ್ಯರ ಭಾಷೆಗೂ ಸ್ಪಷ್ಟ ವ್ಯತ್ಯಾಸ ಕಾಣಬಹುದು. ಬ್ರಾಹ್ಮಣ, ಶೂದ್ರ ಹಾಗೂ ಅಸ್ಪೃಶ್ಯರ ಭಾಷೆಯಲ್ಲಿ ಇಂತಹ ವೈರುಧ್ಯಗಳಿಗೆ ಅವರ ಸ್ಥಿತಿಗತಿಯೂ ಕಾರಣ. ಹಾಗಾಗಿ ಅವರ ಭಾಷೆಯ ಉಚ್ಚಾರಣೆಯಲ್ಲಿ, ವ್ಯಾಕರಣ ರೂಪದಲ್ಲಿ, ಗ್ರಾಂಥಿಕ ಹಾಗೂ ಆಡು ಮಾತುಗಳಲ್ಲಿ ಮಿಶ್ರಣ ಗುಣವಿರುತ್ತದೆ.

ಶಿಷ್ಟರದು ವ್ಯಾಕರಣ ಬದ್ಧವೂ, ಕಲಾತ್ಮಕವೂ, ಸಾತ್ವಿಕವೂ ಆಗಿದ್ದು ಸಂಸ್ಕೃತ ಭೂಯಿಷ್ಠತೆಯಿಂದ ಭಾವಪೂರ್ಣವಾಗಿರುತ್ತದೆ. ಪ್ರತಿಯೊಬ್ಬ ಕವಿಯಲ್ಲು ತನಗೆ ತಿಳಿದೊ

ತಿಳಿಯದೋ ಅಂತೂ ಅವರಲ್ಲಿ ಒರಟುತನವನ್ನಾಗಲೀ, ಆಕ್ರೋಶವನ್ನಾಗಲೀ, ಪರಂಪರೆಯನ್ನು ಹೀಯಾಳಿಸುವುದನ್ನಾಗಲೀ, ಸಂಪ್ರದಾಯವನ್ನು ಖಂಡಿಸುವುದನ್ನಾಗಲೀ ಕಾಣಲು ಸಾಧ್ಯವಿಲ್ಲ. ಅವರ ಬದುಕೇ ಈ ಅಂಶಗಳಿಂದ ಪೋಷಿತವಾಗಿರುವುದರಿಂದ, ಅದು ಅವರ ಬದುಕಿನ ಅಂಗವಾಗಿರುವುದರಿಂದ, ಅದರಿಂದ ಅವರಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ, ಲಾಭವಾಗಿರುವುದರಿಂದ ಅವರು ಎಲ್ಲದರಲ್ಲೂ ಒಳ್ಳೆಯದನ್ನೇ, ದೈವತ್ವವನ್ನೇ ಕಾಣುತ್ತಾರೆ. ಅಪ್ಪಿ ತಪ್ಪಿಯೂ ಅವರಿಗೆ ಆಕ್ರಮಣಕಾರಿ ರೋಷವಾಗಲಿ, ದ್ವೇಷವಾಗಲಿ, ಪ್ರತಿಭಟನೆಯಾಗಲಿ ಕಾಣುವುದಿಲ್ಲ. ಬದಲಿಗೆ ಸಾತ್ವಿಕ ಕೋಪ, ಅಂತರಾಳದ ವೇದನೆ, ಮೌನ ಪ್ರತಿಭಟನೆ ಕಂಡುಬರುತ್ತದೆ.

ಅಸ್ಪೃಶ್ಯರ ಭಾಷೆ ದೇಶೀ ಸೊಗಡಿನಿಂದ ತುಂಬಿರುತ್ತದೆ. ತಮ್ಮ ಒಡಲಾಳದ ಅತೃಪ್ತಿ, ಆಕ್ರೋಶಗಳು ಚಂಡೆಯ ಬಡಿತದಂತೆ, ಸ್ವಚ್ಚಂದವಾಗಿ ನುಗ್ಗಿ ಬರುತ್ತವೆ. ವ್ಯಾಕರಣ ಬದ್ಧತೆಗಿಂತ, ಸಾತ್ವಿಕತೆಗಿಂತ ಭಿನ್ನವಾಗಿದ್ದು ವಾಸ್ತವಿಕತೆಯನ್ನು ಹೊಂದಿರುತ್ತದೆ. ಶತಶತಮಾನಗಳ ನೋವುಂಡಿರುವ, ಈಗಲೂ ಸಾಮಾಜಿಕ ಅನ್ಯಾಯಕ್ಕೆ ಒಳಗಾಗಿರುವ; ಜೀವನದುದ್ದಕ್ಕೂ ಹೋರಾಟವನ್ನೇ ಬದುಕಿನ ಅಸ್ತ್ರವನ್ನಾಗಿಸಿಕೊಂಡಿರುವ ಅಸ್ಪೃಶ್ಯರಿಗೆ ಸಿಡಲಿನಂತಹ ನುಡಿ, ಕೆಂಡದಂತಹ ಭಾವ ಓತಪ್ರೋತವಾಗಿ ಹರಿದು ಬರುವುದು ಸಹಜ. ಅವರಲ್ಲಿ ಸಾತ್ವಿಕತೆಯನ್ನಾಗಲೀ, ಮಂದರ ನುಡಿಯನ್ನಾಗಲೀ, ಸಂಸ್ಕೃತದ ಕೋಮಲತೆಯನ್ನಾಗಲೀ ನಿರೀಕ್ಷಿಸಲು ಸಾಧ್ಯವಿಲ್ಲ. ಹಿಂದಿನಿಂದ ನಡೆಸಿಕೊಂಡು ಬಂದಿರುವ ಕಾವ್ಯ ಮಾರ್ಗವನ್ನು ಕೈಬಿಟ್ಟು ತಮ್ಮದೇ ಆದ ಪ್ರತಿಭಟನೆಯ ಹೊಸ ಮಾರ್ಗವನ್ನು ಕಂಡುಕೊಂಡಿರುವುದುಂಟು. ಜಾನಪದೀಯವಾದ ಸ್ಥಳೀಯ ಆಡುನುಡಿಗಳನ್ನು ತಮ್ಮ ಕಾವ್ಯ ಭಾಷೆಯನ್ನಾಗಿ ಮಾಡಿಕೊಂಡಿದ್ದಾರೆ. ಹೊಸ ಧೋರಣೆ, ಹೊಸ ಚಿಂತನೆಗೆ ತೆರೆದುಕೊಂಡಿದ್ದಾರೆ. ಜಾಗತಿಕ ಗುಣ ಧರ್ಮಕ್ಕೆ ಸ್ಪಂದಿಸಿದ್ದಾರೆ. ಸಮಾನತೆ, ಸೌಹಾರ್ದತೆಗೆ ಆದ್ಯತೆ ನೀಡಿದ್ದಾರೆ. ಮಾನವೀಯತೆಯನ್ನು ಎತ್ತಿ ಹಿಡಿಯಲು ಶ್ರಮಿಸಿದ್ದಾರೆ. ಏಕ ಮುಖ ಸಂಸ್ಕೃತಿಯನ್ನು ಧಿಕ್ಕರಿಸಿ ಬಹುಮುಖೀ ಸಂಸ್ಕೃತಿಯನ್ನು ಕಾವ್ಯದಲ್ಲಿ ಕಾಣಲು ಯತ್ನಿಸಿದ್ದಾರೆ.

ಮಾತೃತ್ವದ ರಚನೆ : ಅಂಗನೆಲೆಯಲ್ಲಿ ಭಾಷಾ ಬಳಕೆ

ಮಹಿಳೆಯ ಭಾಷೆಗೆ ಒಂದು ಚೌಕಟ್ಟಿರುತ್ತದೆ. ಆಕೆ ತನ್ನ ಪರಿಸರದಲ್ಲಿ ಕಂಡುಂಡ ಭಾಷೆಯನ್ನು ತನ್ನ ಭಾವನೆಗಳಿಗೆ ಮೂರ್ತರೂಪ ಕೊಡಲು ಬಳಸುತ್ತಾಳೆ. ಅವಳಿಗೆ ಪುರುಷನಿಗಿರುವಷ್ಟು ಸ್ವಾತಂತ್ರ್ಯವಾಗಲೀ, ಜಗತ್ತನ್ನು ಮುಕ್ತವಾಗಿ ಕಾಣುವ ಅವಕಾಶವಾಗಲೀ, ಪುರುಷನು ರೂಪಿಸಿಕೊಳ್ಳುವ ಬರವಣಿಗೆಯ ಆಯಾಮ, ಆವರಣಗಳನ್ನಾಗಲೀ ಆಕೆ ರೂಪಿಸಿಕೊಳ್ಳಲು ಸಾಧ್ಯವಿಲ್ಲ. ತಾನು ದುಡಿದರೂ ಪುರುಷನ ಅಧೀನಕ್ಕೆ ಒಳಪಟ್ಟು ಬಳಸಬೇಕಾಗಿದೆ. ಅವಳ ಹೆಣ್ತನವೂ ಕೂಡ ತನ್ನ ಬರವಣಿಗೆಯಲ್ಲಿ ನಿಯಂತ್ರಣಕ್ಕೊಳಪಡಿಸುತ್ತದೆ. "ಕಲೆ ಮತ್ತು ಅಕ್ಷರಗಳೊಂದಿಗೆ ಆಟವಾಡ ಬಯಸುವ ಮಹಿಳೆಯರ ಮಹಾ ಸಮೂಹದಲ್ಲಿ ಪರಿಶ್ರಮ ತೋರುವವರು ಕೆಲವೇ ಮಂದಿ. ಆದ್ಯತೆಯ ಈ ಮೊದಲ ತೊಂದರೆಯಿಂದ ಪಾರಾದ ಇವರೂ ಕೂಡ ಅನೇಕ ವೇಳೆ ಆತ್ಮರತಿ ಮತ್ತು ಕೀಳರಿಮೆಗಳ ನಡುವೆ ತೊಯ್ದಾಡುತ್ತಾರೆ".[೧೯] – ಎಂಬ ಮಾತು ಮಹಿಳಾ ಸಾಹಿತ್ಯದ ಭಾಷೆಗೆ ಅನ್ವಯಿಸುವ ಮಾತಾಗಿದೆ.

ಹೆಣ್ಣಿನ ಧ್ವನಿ ಕೋಮಲ. ಮನಸ್ಸು ಸೂಕ್ಷ್ಮ. ನೋಟ ಸರಳ. ಹಾಗಾಗಿ ಯಾವುದೇ ವಿಷಯಕ್ಕೆ ಬರವಣಿಗೆಯ ರೂಪ ನೀಡುವಾಗ ಆಕೆಯ ಧ್ವನಿಯಲ್ಲಿ ಏರಿಳಿತಗಳಿರುತ್ತವೆ. ಲಯ ಮಾಧುರ್ಯವಿರುತ್ತದೆ. ಭಾವ ಬಂಧುರತೆ ತುಂಬಿರುತ್ತದೆ. ಕಿರಿದಾದ ವಾಕ್ಯಗಳು, ಜನಪದ ಗೇಯತೆಯ ನಾದ ಮಾಧುರ್ಯತೆ, ಸರಳ ಭಾಷೆಯಿಂದ ಸ್ತ್ರೀಯ ಬರವಣಿಗೆ ತುಂಬಿರುತ್ತದೆ. ಆಕೆಯದು ಭಾವನಾತ್ಮಕವಾದದ್ದು, ಮಂಜುಳ ನಾದದಂತೆ, ಜುಳು ಜುಳು ಹರಿಯುವ ತಿಳಿನೀರ ಹೊಳೆಯಂತೆ, ಹಕ್ಕಿಗಳ ಕಲರವದಂತೆ ಕಂಡುಬರುತ್ತದೆ. ಆಕೆಯ ಸಿಡುಕಿನಲ್ಲೂ ಕಾವಿರುವುದಿಲ್ಲ. ಕ್ರೋಧದಲ್ಲೂ ಕೆಂಡವಿರುವುದಿಲ್ಲ. ಅಂತಹ ಹೆಣ್ತನದ ಭಾಷೆಯನ್ನು ಹೆಣ್ಣಿನಲ್ಲೇ ಕಾಣಲು ಸಾಧ್ಯ.

ಪುರುಷರ ಭಾಷೆ ಇದಕ್ಕೆ ಪೂರಾ ವ್ಯತಿರಿಕ್ತವಾದದ್ದು. ಈತನ ಭಾಷೆಯಲ್ಲಿ ಒರಟುತನ, ಖಚಿತತೆ, ನಿರ್ಧಿಷ್ಟತೆ ಕಠೋರತೆ ತುಂಬಿರುತ್ತದೆ. ಅವನ ಧ್ವನಿಯಲ್ಲಿ ಬರೀ ಏರುವಿಕೆಯೇ ಹೆಚ್ಚು. ದೀರ್ಘವಾದ ಸಾಲುಗಳು, ವ್ಯಾಕರಣಬದ್ಧತೆ, ಗ್ರಾಂಥಿಕತೆಯ ವ್ಯಾಪಕತೆ, ಭಾಷಾ ಪ್ರಭುದ್ಧತೆ ತುಂಬಿರುತ್ತದೆ. ಮಹಿಳೆಯರ ಭಾಷೆಗೊಂದು ನಿರ್ಮಿತ ಆವರಣವಿದ್ದರೆ, ಪುರುಷರ ಭಾಷೆಗೆ ಎಲ್ಲೆ ಮೀರುವ ತೀವ್ರತೆ ಇರುತ್ತದೆ. ದುಮ್ಮಿಕ್ಕಿ ಹರಿಯುವ ಜಲಧಾರೆಯಂತೆ, ಚಂಡೆ ನಗಾರಿಯ ಹೊಡೆತದಂತೆ ಇವರ ರೋಷ ಭೀಷಣಗಳಿರುತ್ತವೆ. ಮೌನದಲ್ಲಿ ಮಾತುಗಳು ಕೇಳಿಸುತ್ತವೆ, ಶೃಂಗಾರದಲ್ಲಿ ಲೋಲುಪ್ತತೆ ಕಾಣುತ್ತದೆ, ವಿಷಯ ಪ್ರತಿಪಾದನೆಯಲ್ಲಿ ತೀಕ್ಷ್ಣತೆ ಗೋಚರಿಸುತ್ತದೆ. ಹಾಗಾಗಿ ಶಿಷ್ಟ ವರ್ಗದವರಾಗಿರಲಿ, ಪರಿಶಿಷ್ಟ ವರ್ಗದವರಾಗಿರಲಿ, ಪುರುಷರ ಭಾಷೆಯಲ್ಲಿ ಪೌರುಷತನವಿರುತ್ತದೆ. ವಸ್ತುವಿನಲ್ಲಿ ವೈವಿಧ್ಯತೆ ಇರುವಂತೆ ಶೈಲಿಯಲ್ಲೂ ವೈವಿಧ್ಯತೆ ಕಂಡುಬರುತ್ತದೆ. ಈತನ ಬರವಣಿಗೆಯಲ್ಲಿ ವೈಯ್ಯಕ್ತಿಕತೆಯಾಗಲೀ, ಸನ್ನಿವೇಶದ ನಿಯಂತ್ರಣವಾಗಲೀ ಕಾಣುವುದಿಲ್ಲ. ಮೀರುವ, ಗೆಲ್ಲುವ, ತನ್ನದನ್ನು ಪ್ರತಿಷ್ಠಾಪಿಸುವ ಹಟಮಾರಿತನ ಮನೆ ಮಾಡಿಕೊಂಡಿರುತ್ತದೆ.

ಕೊನೆ ಟಿಪ್ಪಣಿಗಳು:

೧. ಅಭಿಮುಖ, ಜಿ.ಆರ್.ತಿಪ್ಪೇಸ್ವಾಮಿ, ಪುಟ: ೮೪.
೨. ಶತಮಾನದ ಕಾವ್ಯ, ಸಂ.ಎಚ್.ಎಸ್.ವೆಂಕಟೇಶ್ ಮೂರ್ತಿ, ಪುಟ: ೪೩.
೩. ಬಂಡಾಯ ಮತ್ತು ಸಾಹಿತ್ಯ ಚಳುವಳಿಯ ತಾತ್ವಿಕ ನೆಲೆಗಳು - ಬರಗೂರು ರಾಮಚಂದ್ರಪ್ಪ, ಕನ್ನಡ ಸಾಹಿತ್ಯ ಸಂದರ್ಭ, ಸಂ.ಜಿ.ಎಸ್.ಶಿವರುದ್ರಪ್ಪ, ಪುಟ: ೧೦೨.
೪. ಕಾರ್ಲ್‌ಮಾರ್ಕ್ಸ್: ಬದುಕು ಬರಹ, ಅನು: ಬಿ.ವಿ.ಕಕ್ಕಿಲಾಯ, ಪುಟ: ೧.
೫. ದಲಿತ ಚಿಂತನೆ, ಸಂ.ಮೊಗಳ್ಳಿ ಗಣೇಶ್, ಪುಟ: ೨೩೨.
೬. ಕನ್ನಡ ತಾಯಿಗೆ ನುಡಿನಮನ, ಸಂ.ಪ್ರೊ.ಎಲ್.ಎಸ್.ಶೇಷಗಿರಿರಾವ್, ಕುವೆಂಪು, ಪುಟ: ೬೫.
೭. ಮೇಲಿನಂತೆ, ಪುಟ: ೪೯.
೮. ವಸಂತದ ಕವನಗಳು, ಎಚ್.ಜಿ.ಸಣ್ಣಗುಡ್ಡಯ್ಯ, ಪುಟ: ೩೮.
೯. ವಿಷಾದ ಯೋಗ, ಸತೀಶ ಕುಲಕರ್ಣಿ, ಪುಟ: ೮೯.

೧೦. ಅವ್ವ, ಡಾ.ಎಲ್.ಹನುಮಂತಯ್ಯ, ಪುಟ: ೧೨.
೧೧. ಬಂಡಾಯ ಕಾವ್ಯ, ಸಂ.ಬರಗೂರು ರಾಮಚಂದ್ರಪ್ಪ, ಪುಟ: ೩೬.
೧೨. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಸಂ.ತೇಜಸ್ವಿನಿ ನಿರಂಜನ, ಪುಟ: ೧೭.
೧೩. ದಲಿತ ಯುಗ ಮತ್ತು ಕನ್ನಡ ಸಾಹಿತ್ಯ, ಡಾ.ಅರವಿಂದ ಮಾಲಗತ್ತಿ, ಪುಟ: ೨೦೭.
೧೪. ಜಾಣೆ ಮತ್ತು ಕವಿತೆಗಳು, ಎಂ.ಆರ್.ಕಮಲ, ಪುಟ: ೪೨.
೧೫. ರೊಟ್ಟಿ ಮತ್ತು ಹುಡುಗಿ, ಮಲ್ಲಿಕಾ ಘಂಟಿ, ಪುಟ: ೨೮.
೧೬. ಸಂಕುಲ, ವಿಜಯಾ, ಪುಟ: ೧೨೧.
೧೭. ಸ್ತ್ರೀವಾದದ ದಿಕ್ಸೂಚಿ, ಶ್ರೀಮತಿ ಆರ್.ಇಂದಿರಾ, ಪುಟ: ೧.
೧೮. ಕನ್ನಡ ಪ್ರತಿಭಟನಾ ಕಾವ್ಯ, ಸಿ.ವೀರಣ್ಣ, ಪುಟ: ೧.
೧೯. ವಿಜಯ, ಡಾ.ಬಿ.ಎನ್.ಸುಮಿತ್ರಾಬಾಯಿ, ಪುಟ: ೩.

ಪರಾಮರ್ಶನ ಸಾಹಿತ್ಯ:

ಅಕಬರ ಅಲಿ. ಎಂ. — ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯ ತತ್ವ – ೧೯೮೩, ಕ.ಸಾ.ಪ., ಬೆಂಗಳೂರು.

ಅನಂತನಾರಾಯಣ. ಎಸ್. — ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ–೧೯೭೬, ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು.

ಅನ್ನಪೂರ್ಣ ವೆಂಕಟನಂಜಪ್ಪ — ಸಂ. ನೆನೆವುದೆನ್ನ ಮನಂ – ೨೦೦೪, ಜಿಲ್ಲಾ ಲೇಖಿಕೀಯರ ಸಂಘ, ತುಮಕೂರು.

ಅಮೂರ. ಜಿ. ಎಸ್. — ಮಹಿಳಾ ಕಾವ್ಯ, ಸಾಧನೆ, ಸಮಸ್ಯೆಗಳು : ಸುಧಾ ಯುಗಾದಿ ವಿಶೇಷಾಂಕ – ೧೯೯೯.

ಅರವಿಂದ ಮಾಲಗತ್ತಿ — ಸಂ. ಡಾ.ಅಂಬೇಡ್ಕರ್ ವಿಚಾರ ಧಾರೆ – ೧೯೯೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

ಸಂ. ದಲಿತ ಮಾರ್ಗ – ೨೦೦೨, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಸಂ. ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ – ೧೯೯೧, ಹೊಸದಿಕ್ಕು ಪ್ರಕಾಶನ, ಬೆಂಗಳೂರು.

ದಲಿತ ಯುಗ ಮತ್ತು ಕನ್ನಡ ಸಾಹಿತ್ಯ – ೧೯೯೯, ಚೇತನ ಬುಕ್ ಹೌಸ್, ಮೈಸೂರು.

ಕಪ್ಪು ಕಾವ್ಯ – ೧೯೮೫, ಶೈಲ ಪ್ರಕಾಶನ, ಮುದ್ದೆಬಿಹಾಳ.

ಅವಧಾನಿ. ಜಿ. ಎಸ್. — ಸಂ. ಕಾವ್ಯ ಸೃಷ್ಟಿಯ ಸ್ವರೂಪ – ೧೯೯೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಆರ್.ಟಿ.ಜಿ. — ರಾಷ್ಟ್ರ ಕವಿ ಕುವೆಂಪು – ೨೦೦೪, ಸಪ್ನ ಬುಕ್ ಹೌಸ್, ಬೆಂಗಳೂರು.

ಆರ್.ಜಿ.ಹಳ್ಳಿ ನಾಗರಾಜ್ — ಕುವೆಂಪು ಶತಮಾನದ ಶಿಖರ – ೨೦೦೪, ಚಿಂತನಕೂಟ, ವಿಜಯ ನಗರ, ಬೆಂಗಳೂರು.

ಆರ್ಕೆ ಮಣಿಪಾಲ — ಲೋಕ ಗ್ರಹಿಕೆ ಮತ್ತು ಅಭಿವ್ಯಕ್ತಿ – ೧೯೯೫, ಸಂಕ್ರಮಣ ಪ್ರಕಾಶನ, ಧಾರವಾಡ.

ಸಾಹಿತ್ಯ: ಆಶಯ ಮತ್ತು ವಿನ್ಯಾಸ – ೧೯೮೮, ಸಂಕ್ರಮಣ ಪ್ರಕಾಶನ, ಧಾರವಾಡ.

ಸಾಮಾಜಿಕ ಚಳುವಳಿಗಳು – ನವಕರ್ನಾಟಕ ಪಬ್ಲಿಕೇಶನ್ಸ್ ಬೆಂಗಳೂರು.

ಸಾಹಿತ್ಯ ಸಿದ್ಧಾಂತ ಮತ್ತು ಹೋರಾಟ – ೧೯೮೨, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

ಅಲ್ಲಮ ಪ್ರಭು ಬೆಟ್ಟದೂರ — ಇದು ನನ್ನ ಭಾರತ – ೧೯೭೭, ಸಂಕ್ರಮಣ ಪ್ರಕಾಶನ, ಧಾರವಾಡ.

ಇಂದಿರಾ. ಆರ್. — ಸ್ತ್ರೀವಾದದ ದಿಕ್ಸೂಚಿ – ೧೯೯೫, ಸಮತಾ ಅಧ್ಯಯನ ಕೇಂದ್ರ, ಮೈಸೂರು.

ಇದಿನಬ್ಬ. ಬಿ. ಎಂ. — ಸಂ. ಕನ್ನಡ ಕನ್ನಡ ಹಾ! ಸವಿಗನ್ನಡ, ೨೦೦೪, ಕನ್ನಡ ಅಭಿವೃದ್ಧಿ ಪ್ರಾಧಿಕಾರ. ಬೆಂಗಳೂರು.

ಉಷಾ. ಸ. — ತೊಗಲು ಬೊಂಬೆಯ ಆತ್ಮ ಕಥೆ – ೧೯೮೧, ಪುಸ್ತಕ ಚಿಲುಮೆ, ಮೈಸೂರು.

ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ – ೨೦೦೧, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.

ಎನ್ಕೆ — ದ.ರಾ.ಬೇಂದ್ರೆ – ೧೯೯೧, ಕ.ಸಾ.ಪ., ಬೆಂಗಳೂರು.

ಸಾವಿರದ ವರಕವಿ ಬೇಂದ್ರೆ – ೨೦೦೨, ಸಪ್ನ ಬುಕ್ ಹೌಸ್, ಬೆಂಗಳೂರು.

ಎಲ್ಲೇಗೌಡ ಬೆಸಗರಹಳ್ಳಿ — ಸಂ. ಬೆಳ್ಳಿ ಬೆಳಕು – ೧೯೯೭, ಜಿಲ್ಲಾ ಕ.ಸಾ.ಪ., ಬೆಂಗಳೂರು ಗ್ರಾಮಾಂತರ.

ಕಕ್ಕಿಲ್ಲಾಯ. ಬಿ. ವಿ. — ಅನು: ಕಾರ್ಲ್ ಮಾರ್ಕ್ಸ್ – ಬದುಕು ಬರಹ – ೧೯೮೫, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು.

ಕಮಲ. ಎಂ. ಆರ್. — ಜಾಣೆ ಮತ್ತು ಕವಿತೆಗಳು – ೧೯೯೩, ಕಲ್ಯಾಣ ಪ್ರಕಾಶನ, ಬೆಂಗಳೂರು.

ಕಲಬುರ್ಗಿ. ಎಂ. ಎಂ. — ಮಾರ್ಗ – ಸಂ. ೧ – ೧೯೮೮, ನರೇಶ್ ಅಂಡ್ ಕಂಪನಿ, ಬೆಂಗಳುರು.

ಕವಿತಾ ಕೃಷ್ಣ — ಕಾವ್ಯಾಂಜಲಿ – ೨೦೦೦, ಕವಿತಾ ಪ್ರಕಾಶನ ಕ್ಯಾತ್ಸಂದ್ರ, ತುಮಕೂರು.

ಕಾಪಸೆ. ಜಿ. ಎಸ್. — ಮಧುರ ಚೆನ್ನ: ಜೀವನ ಹಾಗೂ ಕೃತಿಗಳ ಸಮೀಕ್ಷೆ – ೧೯೭೬, ಪ್ರಸಾರಾಂಗ, ಕರ್ನಾಟಕ ವಿ.ವಿ., ಧಾರವಾಡ.

ಕಿಟ್ಟೆಲ್. ರೆ. ಎಫ್. — ಕನ್ನಡ ಇಂಗ್ಲೀಷ್ ಡಿಕ್ಷನರಿ – ೨೦೦೧, ಏಷಿಯನ್ ಎಜುಕೇಶನಲ್ ಸರ್ವೀಸ್ ನ್ಯು ಡೆಲ್ಲಿ.

ಕೀರ್ತಿನಾಥ ಕುರ್ತಕೋಟಿ — ಬಾರೋ ಸಾಧನ ಕೇರಿಗೆ – ೧೯೯೩, ಮನೋಹರ ಗ್ರಂಥ ಮಾಲೆ, ಧಾರವಾಡ.

ದ.ರಾ.ಬೇಂದ್ರೆ – ೧೯೮೨, ಪ್ರಸಾರಾಂಗ, ಬೆಂಗಳೂರು ವಿ.ವಿ., ಬೆಂಗಳೂರು.

ನವ್ಯ ಕಾವ್ಯ ಪ್ರಯೋಗ – ೧೯೭೫, ಮನೋಹರ ಗ್ರಂಥಮಾಲೆ, ಧಾರವಾಡ.

ಯುಗಧರ್ಮ ಮತ್ತು ಸಾಹಿತ್ಯ ದರ್ಶನ – ೧೯೬೨, ಮನೋಹರ ಗ್ರಂಥಮಾಲೆ, ಧಾರವಾಡ.

ಕುವೆಂಪು — ನೆನಪಿನ ದೋಣಿಯಲ್ಲಿ – ೧೯೮೦, ಉದಯರವಿ ಪ್ರಕಾಶನ, ಮೈಸೂರು.

ಮರಿ ವಿಜ್ಞಾನಿ – ೧೯೯೭, ಉದಯರವಿ ಪ್ರಕಾಶನ, ಮೈಸೂರು.

ಕದರಡಕೆ – ೧೯೯೫, ಉದಯರವಿ ಪ್ರಕಾಶನ, ಮೈಸೂರು.

ಮಂತ್ರಾಕ್ಷತೆ – ೧೯೯೮, ಉದಯರವಿ ಪ್ರಕಾಶನ, ಮೈಸೂರು.

ಅನಿಕೇತನ – ೧೯೯೫, ಉದಯರವಿ ಪ್ರಕಾಶನ, ಮೈಸೂರು.

ಅನುತ್ತರ – ೧೯೯೫, ಉದಯರವಿ ಪ್ರಕಾಶನ, ಮೈಸೂರು.

ಕೃತ್ತಿಕೆ – ೧೯೯೫, ಉದಯರವಿ ಪ್ರಕಾಶನ, ಮೈಸೂರು.

ಪಕ್ಷಿಕಾಶಿ – ೨೦೦೩, ಉದಯರವಿ ಪ್ರಕಾಶನ, ಮೈಸೂರು.

ಕಿಂಕಿಣಿ – ೧೯೯೬, ಉದಯರವಿ ಪ್ರಕಾಶನ, ಮೈಸೂರು.

ವಾಲ್ಮೀಕಿಯ ಭಾಗ್ಯ – ೧೯೯೬, ಉದಯರವಿ ಪ್ರಕಾಶನ, ಮೈಸೂರು.

ಷೋಡಶಿ – ೧೯೮೮, ಉದಯರವಿ ಪ್ರಕಾಶನ, ಮೈಸೂರು.

ಅಗ್ನಿಹಂಸ – ೧೯೯೭, ಉದಯರವಿ ಪ್ರಕಾಶನ, ಮೈಸೂರು.

ಕಲಾಸುಂದರಿ – ೨೦೦೩, ಉದಯರವಿ ಪ್ರಕಾಶನ, ಮೈಸೂರು.

ಪ್ರೇಮ ಕಶ್ಮೀರ – ೧೯೯೬, ಉದಯರವಿ ಪ್ರಕಾಶನ, ಮೈಸೂರು.

ಪ್ರೇತಕ್ಯೂ – ೧೯೯೫, ಉದಯರವಿ ಪ್ರಕಾಶನ, ಮೈಸೂರು.

ನನ್ನ ಮನೆ – ೧೯೯೯, ಉದಯರವಿ ಪ್ರಕಾಶನ, ಮೈಸೂರು.

ಕೊನೆಯ ತೆನೆ ಮತ್ತು ವಿಶ್ವಮಾನವ ಸಂದೇಶ – ೧೯೯೮, ಉದಯರವಿ ಪ್ರಕಾಶನ, ಮೈಸೂರು.

ಷೋಡಶಿ – ೧೯೯೮, ಉದಯರವಿ ಪ್ರಕಾಶನ, ಮೈಸೂರು.

ಹೊನ್ನ ಹೊತ್ತಾರೆ – ೧೯೯೬, ಉದಯರವಿ ಪ್ರಕಾಶನ, ಮೈಸೂರು.

ಕುಲಕರ್ಣಿ. ಜಿ. ವಿ. — ನಾಕಂಡ ಬೇಂದ್ರೆ: ಜೀವನ ಮತ್ತು ಸಾಹಿತ್ಯ – ೧೯೯೭, ಹರ್ಷವರ್ಧನ ಪ್ರಕಾಶನ, ಬೆಂಗಳೂರು.

ಕೃಷ್ಣಪ್ಪ. ಜಿ. — ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ – ೨೦೦೧, ಶ್ರೀ ರಂಗ ಪ್ರಕಾಶನ, ಮೈಸೂರು.

ಕೇಶವಶರ್ಮ. ಕೆ. — ಸ್ತ್ರೀ ಮತ್ತು ರಾಜಕಾರಣ – ೨೦೦೦, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.

ಕ್ರಿಯೆ – ಪ್ರತಿಕ್ರಿಯೆ – ೧೯೯೨, ಅನ್ವೇಷಣಾ ಪ್ರಕಾಶನ, ಬೆಂಗಳೂರು.

ಶಬ್ದ ರೇಖೆ – ೨೦೦೦, ಅಭಿನವ ಪ್ರಕಾಶನ, ಬೆಂಗಳೂರು.

ರಚನೆ ವಿರಚನೆ – ೨೦೦೦, ಅಭಿನವ ಪ್ರಕಾಶನ, ಬೆಂಗಳೂರು.

ಕೋಳಾಲ ಸಿದ್ಧಬಸವಯ್ಯ ವಿಶ್ವರೂಪಾಚಾರ್ .ಎನ್.	ಸಂ. ಮೇಳ – ೧೯೮೯ ಸೃಜನ ಸಹಕಾರಿ ಪ್ರಕಾಶನ, ರಾಜಾಜಿ ನಗರ, ಬೆಂಗಳೂರು.
ಗಂಗಾಧರ ಚಿತ್ತಾಲ	೭೨ ಕವಿತೆಗಳು – ೨೦೦೨, ಪ್ರಿಸಂ ಬುಕ್ಸ್ ಪ್ರೈ ಲಿಮಿಟೆಡ್, ಬೆಂಗಳೂರು.
ಗಂಗಾರಾಂ ಚಂಡಾಳ	ಕರ್ನಾಟಕ ದಲಿತ ಚಳುವಳಿ ಮತ್ತು ಅಂಬೇಡ್ಕರ್ – ೧೯೯೨, ಚೈತ್ರ ಪ್ರಕಾಶನ, ಕೋಲಾರ.
ಗಣಪತಿ ಹೆಗಡೆ	ಶಿಶಿರ ಬಾಲೆ – ೨೦೦೦, ಮಂಜು ಮುದ್ರಣ, ತುಮಕೂರು.
ಗಣೇಶನ್.ಎಸ್.	ದಲಿತ ಸಾಹಿತ್ಯ ಚಳುವಳಿ – ೧೯೮೨, ಪಂಚಮ ಪ್ರಕಾಶನ, ಬೆಂಗಳೂರು.
ಗಾಯತ್ರಿ ನಾವಡ	ವಿರಚನೆ – ೧೯೯೭, ಎನ್.ಆರ್.ಎ.ಎಂ.ಎಚ್., ಪ್ರಕಾಶನ, ಕೋಟೇಶ್ವರ, ದ.ಕನ್ನಡ.
	ಭಾರತೀಯ ಸ್ತ್ರೀವಾದ: ಒಂದು ಸಂಕಥನ – ೨೦೦೦, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.
ಗಿರಡ್ಡಿ ಗೋವಿಂದರಾಜ	ಸಮಗ್ರ ಸೃಜನ – ೨೦೦೧, ಸಪ್ನ ಬುಕ್ ಹೌಸ್, ಗಾಂಧಿ ನಗರ, ಬೆಂಗಳೂರು.
	ನವ್ಯ ವಿಮರ್ಶೆ – ೧೯೭೫, ಅಕ್ಷರ ಪ್ರಕಾಶನ, ಸಾಗರ.
	ಸಂ. ಶತಮಾನದ ಕಾವ್ಯ – ೨೦೦೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
	ಸಂ. ಕುಂಕುಮ ಭೂಮಿ – ೨೦೦೦, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
	ಸಾತತ್ಯ – ೧೯೯೨, ಸ್ನೇಹ ಪ್ರಕಾಶನ, ಬೆಂಗಳೂರು.
	ಆಧುನಿಕ ಕನ್ನಡ ಕಾವ್ಯಕ್ಕೆ ಉತ್ತರ ಕರ್ನಾಟಕದ ಕೊಡುಗೆ – ೧೯೮೯, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ಗುಂಡಣ್ಣ ಕಲಬುರ್ಗಿ	ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ – ೨೦೦೦, ಸೌಜನ್ಯ ಪ್ರಕಾಶನ, ಮೂಡಲಗಿ, ಬೆಳಗಾವಿ ಜಿಲ್ಲೆ.
ಗುಂಡ್ಮಿ ಚಂದ್ರಶೇಖರ ಐತಾಳ	ಮಾತೃಸಂಹಿತೆ – ೧೯೮೩, ವಿಶ್ವ ಕನ್ನಡ ಸಮ್ಮೇಳನ, ನೃಪತುಂಗ ರಸ್ತೆ, ಬೆಂಗಳೂರು.
	ಸಂ. ಕೈಲಿಯ ಕರೆದ ನೊರೆಹಾಲು – ೧೯೭೦, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಮೈಸೂರು.
ಗುರುಪಾದ ಮರಿಗುದ್ದಿ	ಕಣವಿ ಸಾಹಿತ್ಯ ಸಂಪದ – ೧೯೯೪, ನಿಜಲಿಂಗೇಶ್ವರ ಪ್ರಕಾಶನ, ನಿಡಸೋಸಿ.
ಗುರುಲಿಂಗ ಕಾಪಸೆ	ಮಧುರ ಚೆನ್ನ – ೧೯೯೯, ಸಾಹಿತ್ಯ ಅಕಾಡೆಮಿ, ನವದೆಹಲಿ.

	ಸಂ. ಚೆಂಬೆಳಕು (ಚೆನ್ನವೀರ ಕಣವಿ ಅಭಿನಂದನಾ ಗ್ರಂಥ) – ೧೯೮೦, ಚೆನ್ನವೀರ ಕಣವಿ ಅಭಿನಂದನಾ ಗ್ರಂಥ ಸಮಿತಿ, ಧಾರವಾಡ.
ಗೋಕಾಕ್. ವಿ. ಕೃ	ನವೋದಯ ಕಾವ್ಯ (ಭಾಗ – ೨.) – ೧೯೮೭, ಐಬಿಎಚ್ ಪ್ರಕಾಶನ, ಬೆಂಗಳೂರು.
	ಬೇಂದ್ರೆಯವರ ಕಾವ್ಯಗುಣ ಹಾಗೂ ಪ್ರಯೋಗಶೀಲತೆ – ೧೯೮೪, ಪ್ರಸಾರಾಂಗ, ಕರ್ನಾಟಕ ವಿ.ವಿ., ಧಾರವಾಡ.
ಗೋಪಾಲಕೃಷ್ಣ ಅಡಿಗ	ಬೇಂದ್ರೆಯವರ ಕಾವ್ಯ – ೧೯೯೧, ಕನ್ನಡ ಸಂಘ ಕ್ರೈಸ್ಟ್ ಕಾಲೇಜು, ಬೆಂಗಳೂರು.
ಗೋಪಾಲ ರಾವ್. ಎಚ್.ಎಸ್.	ನಮ್ಮ ನಾಡು ಕರ್ನಾಟಕ – ೨೦೦೫, ನವಕರ್ನಾಟಕ ಪ್ರಕಾಶನ, ಬೆಂಗಳೂರು.
ಗೌಡನಕಟ್ಟೆ ತಿಮ್ಮಯ್ಯ	ಆಕ್ರಂದನ – ೧೯೯೧, ಬನಶಂಕರಿ ಪ್ರಕಾಶನ, ತುಮಕೂರು.
ಗೌರೀಶ ಕಾಯ್ಕಿಣಿ	ಚೆನ್ನವೀರ ಕಣವಿ ಅವರ ಕಾವ್ಯದೃಷ್ಟಿ – ೧೯೭೭, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ.
ಚಂದ್ರಶೇಖರ ಕಂಬಾರ	ಈವರೆಗಿನ ಹೇಳತೇನ ಕೇಳ (ಸಮಗ್ರ ಕಾವ್ಯ) –. ೧೯೯೪, ಅಕ್ಷರ ಪ್ರಕಾಶನ
ಚಂದ್ರಶೇಖರ. ಎಸ್.	ಗಾಂಧಿ ಮತ್ತು ಅಂಬೇಡ್ಕರ್ – ೧೯೯೨, ಅಕ್ಷರ ಪ್ರಕಾಶನ, ಸಾಗರ.
ಚಂದ್ರಶೇಖರ. ರಾ. ನಂ.	ಕನ್ನಡ ಹೋರಾಟಗಳು: ಒಂದು ನೋಟ – ೧೯೯೯, ಕನ್ನಡ ಗೆಳೆಯರ ಬಳಗ, ಸಿ.ಕೆ.ಸಿ. ಗಾರ್ಡನ್, ಬೆಂಗಳೂರು.
ಚಕ್ಕೆರೆ ಶಿವಶಂಕರ್	ಸಂ. ಸಹ್ಯಾದ್ರಿಯ ಸೂರ್ಯ – ೨೦೦೪, ಕ.ಸಾ.ಪ., ಬೆಂಗಳೂರು.
ಚೆನ್ನಸ್ವಾಮಿ. ಬಿ.	ಗೋಧೂಳಿ – ಶುಭದ ಪ್ರಕಾಶನ, ಬೆಂಗಳೂರು.
ಚೆನ್ನವೀರ ಕಣವಿ	ಆಕಾಶ ಬುಟ್ಟಿ – ೧೯೫೩,
	ಮಧುರ ಚೆನ್ನ – ೧೯೮೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
	ಕಾವ್ಯಾನು ಸಂಧಾನ – ೧೯೭೩, ತಾ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು.
ಜಂಬಣ್ಣ ಅಮರಚಿಂತ	ಅಮರಚಿಂತ ಕಾವ್ಯ – ೧೯೯೩, ವಿಕಾಸ ವೇದಿಕೆ ಪ್ರಕಟಣೆ, ರಾಯಚೂರು.
ಜಯಪ್ರಕಾಶ ಮಾವಿನಕುಳಿ	ಸಂ. ಚೂಡಾಮಣಿ – ೧೯೮೮, ಸ್ವಾಗತ ಸಮಿತಿ, ದ. ಕ. ಜಿಲ್ಲಾ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ , ಮೂಡಬಿದಿರೆ.
ಜಯದೇವ. ಹು. ಕ.	ಅರುಣೋದಯ ನವೋದಯ ನಂತರ – ೧೯೯೯, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ಜವರಯ್ಯ. ಮ. ನ.	ಪರಂಪರೆ ಹಾಗೂ ಬಂಡಾಯ ಸಾಹಿತ್ಯ ಸಮಗ್ರ ಅಧ್ಯಯನ – ೧೯೯೪, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು.

	ಗಾಂಧಿ ಮತ್ತು ಅಂಬೇಡ್ಕರ್, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.
ಜೀಶಂಪ	ಜನಪದ ಖಂಡ ಕಾವ್ಯಗಳು – ೧೯೬೮, ಶಾರದಾ ಮಂದಿರ, ಮೈಸೂರು
ಜೋಶಿ . ಜಿ. ಬಿ. ಕುರ್ತಕೋಟಿ	ಸಂ. ನಡೆದು ಬಂದ ದಾರಿ – ೧೯೫೫, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ.
ತಿಪ್ಪೇರುದ್ರಸ್ವಾಮಿ. ಎಚ್.	ತೌಲನಿಕ ಕಾವ್ಯಮೀಮಾಂಸೆ – ೧೯೯೮, ಡಿ.ವಿ.ಕೆ. ಮೂರ್ತಿ, ಮೈಸೂರು.
ತಿಪ್ಪೇಸ್ವಾಮಿ. ಜಿ. ಆರ್.	ಅಭಿಮುಖ – ೨೦೦೦, ಚೇತನ ಬುಕ್ ಹೌಸ್, ಮೈಸೂರು.
ತಿರುಮಲೇಶ್. ಕೆ. ವಿ.	ಸಮ್ಮುಖ – ೧೯೮೯, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
ತೆಕ್ಕುಂಜ ಗೋಪಾಲಕೃಷ್ಣ ಭಟ್ಟ	ಗದ್ಯಾನುವಾದ : ಜನ್ನ ಕವಿಯ ಯಶೋಧರ ಚರಿತೆ – ೧೯೯೯, ಕ. ಸಾ. ಪ. ಬೆಂಗಳೂರು.
ತೇಜಸ್ವಿನಿ ನಿರಂಜನ	ಸಂ. ಸ್ತ್ರೀವಾದಿ ಸಾಹಿತ್ಯ – ೧೯೯೬, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.
ದ. ರಾ. ಬೇಂದ್ರೆ	ವಿನಯ – ೧೯೭೨, ಗೀತ ಬುಕ್ ಹೌಸ್, ಮೈಸೂರು.
	ಮರಿಯಾದೆ – ಸಮಾಜ ಪುಸ್ತಕಾಲಯ, ಧಾರವಾಡ.
	ನಮನ – ಮನೋಹರ ಗ್ರಂಥ ಮಾಲೆ, ಧಾರವಾಡ.
	ಸಖೀಗೀತ – ಮನೋಹರ ಗ್ರಂಥ ಮಾಲೆ, ಧಾರವಾಡ.
	ಅರಳು ಮರಳು – ಮನೋಹರ ಗ್ರಂಥ ಮಾಲೆ, ಧಾರವಾಡ.
	ಮುಗಿಲ ಮಲ್ಲಿಗೆ – ಮನೋಹರ ಗ್ರಂಥ ಮಾಲೆ, ಧಾರವಾಡ.
	ಸಾಹಿತ್ಯದ ವಿರಾಟ್ ಸ್ವರೂಪ – ೧೯೭೪, ಸಮಾಜ ಪುಸ್ತಕಾಲಯ, ಧಾರವಾಡ.
ದಿನಕರ ದೇಸಾಯಿ	ದಿನಕರನ ಚೌಪದಿ – ೧೯೮೩, ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಮಾಲೆ, ಬೆಂಗಳೂರು.
ದೇವಂಗಿ ಟಿ. ಚಂದ್ರಶೇಖರ	ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ – ೧೯೭೧, ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು.
ದೇವಯ್ಯ ಹರವೆ	ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು – ೧೯೯೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
ದೊಡ್ಡ ರಂಗೇಗೌಡ	ಕಾವ್ಯ ಕಲ್ಯಾಣಿ – ೧೯೯೩, ಗುರು ರಾಘವೇಂದ್ರ ಪ್ರೆಸ್, ಮನವಾರ್ತೆ ಪೇಟೆ, ಬೆಂಗಳೂರು.
ನಜೀರ್ ಅಹಮದ್. ಎಂ.	ಬಿ.ಎಂ.ಶ್ರೀ. – ೧೯೯೭, ಜಿಲ್ಲಾ ಕ.ಸಾ.ಪ., ತುಮಕೂರು.
ನಟರಾಜ್ ಬೂದಾಳ್	ಸೂಜಿಗಲ್ಲು ಹುಡುಗಿ – ೨೦೦೧, ವೀಚಿ ಸಾಹಿತ್ಯ ಪ್ರತಿಷ್ಠಾನ, ತುಮಕೂರು.

ನರಸಿಂಹಮೂರ್ತಿ. ಎಂ. ಎಲ್.	ಚಿಂತನ ಚತುರ್ಮುಖಿ – ೨೦೦೪, ತಳಗವಾದಿ ಪ್ರಕಾಶನ, ಕುವೆಂಪು ನಗರ, ಮೈಸೂರು.
	ಜಾನಪದ ಪರಾಗ – ೨೦೦೩, ತಳಗವಾದಿ ಪ್ರಕಾಶನ, ಕುವೆಂಪು ನಗರ, ಮೈಸೂರು.
	ಮದುಗಿರಿಯ ದಂಡಿನ ಮಾರಮ್ಮ – ೧೯೯೫, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು.
	ಕನ್ನಡದ ಮೇರು ಶಿಖರಗಳು – ೨೦೦೪, ತಳಗವಾದಿ ಪ್ರಕಾಶನ, ಕುವೆಂಪು ನಗರ, ಮೈಸೂರು.
ನರಸಿಂಹಸ್ವಾಮಿ. ಕೆ. ಎಸ್.	ಮಲ್ಲಿಗೆಯ ಮಾಲೆ – ೧೯೯೪, ಲಿಪಿ ಪ್ರಕಾಶನ, ಬೆಂಗಳೂರು.
ನರಸಿಂಹಾಚಾರ್ಯ. ಆರ್	ಕರ್ನಾಟಕ ಕವಿ ಚರಿತೆ – ೧೯೭೨, (ಪ್ರ. ಸಂ. ದ್ವಿತೀಯ ಮುದ್ರಣ)ಕ. ಸಾ. ಪ. ಬೆಂಗಳೂರು.
ನರಹಳ್ಳಿ ಬಾಲಸುಬ್ರಮಣ್ಯಂ	ಇಹದ ಪರಿಮಳದ ಹಾದಿ – ೧೯೯೫, ಲಿಪಿ ಪ್ರಕಾಶನ, ಬೆಂಗಳೂರು.
	ನುಡಿ ಮಲ್ಲಿಗೆ – ೧೯೬೯, ಕೃತಿ ಪ್ರಕಾಶನ, ಮೈಸೂರು.
ನರುಗನಹಳ್ಳಿ ಗಂಗಣ್ಣ	ಸಾಧನಾ ಸ್ವರಗಳು – ೧೯೯೩, ನವ್ಯ ಪ್ರಕಾಶನ, ನಾಗವಲ್ಲಿ, ತುಮಕೂರು ತಾ॥.
ನಲ್ಲೂರು ಪ್ರಸಾದ್	ಸಂ. ಹೆಜ್ಜೆ ಗುರುತು (ದೊಡ್ಡರಂಗೇಗೌಡರ ಆಯ್ದ ಕವಿತೆಗಳು) – ೨೦೦೧, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ನಾಗಪ್ಪ. ಎನ್.	ಸಾಕವ್ವ – ೨೦೦೩, ಶ್ರಮಸಂಸ್ಕೃತಿ ಪ್ರಕಾಶನ, ತುಮಕೂರು.
	ಸಂ. ಆವಹ (ಆಯ್ದ ಕವನಗಳು) – ೨೦೦೧, ಶೃಂಗಾರ ಪ್ರಕಾಶನ, ಚಿಕ್ಕನಾಯಕನ ಹಳ್ಳಿ
ನಾಗಭೂಷಣ ಸ್ವಾಮಿ. ಓ. ಎಲ್.	ಸಂ. ನಮ್ಮ ಕನ್ನಡ ಕಾವ್ಯ – ೧೯೯೭, ಪ್ರಸಾರಾಂಗ ಕನ್ನಡ ವಿ. ವಿ. ಹಂಪಿ.
ನಾಗಭೂಷಣ. ಡಿ. ಎಸ್.	ಗಮನ – ೧೯೯೦, ಸಂವಾದ ಪ್ರಕಾಶನ, ಮಲ್ಲಾಡಿ ಹಳ್ಳಿ, ಚಿತ್ರದುರ್ಗ.
ನಾಗಭೂಷಣ. ಡಿ. ಎಸ್. ಸವಿತಾ ನಾಗಭೂಷಣ ನಟರಾಜ ಬೂದಾಳು	ಸಂ. ಹಣತೆ – ಜಿ.ಎಸ್.ಎಸ್. ಅಭಿನಂದನಾ ಗ್ರಂಥ, ೨೦೦೧, ಲೋಹಿಯಾ ಪ್ರಕಾಶನ, ಬಳ್ಳಾರಿ.
ನಾಗರಾಜ. ಡಿ. ಆರ್.	ಅಮೃತ ಮತ್ತು ಗರುಡ – ೧೯೮೩, ಪುಸ್ತಕ ಚಂದನ, ಬೆಂಗಳೂರು.
	ಸ್ತ್ರೀವಾದಿ ಸಾಹಿತ್ಯ ಮಿಮಾಂಸೆಯ ಸ್ವರೂಪ ಸಮಸ್ಯೆಗಳು – ಸಾಧ್ಯತೆಗಳು, ಭಾರತೀಯ ಸ್ತ್ರೀವಾದ – ೧೯೯೩, ಅಕ್ಷರ ಪ್ರಕಾಶನ, ಹೆಗ್ಗೋಡು.
	ಸಾಹಿತ್ಯ ಕಥನ – ೧೯೯೫, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

	ಶಕ್ತಿ – ಶಾರದೆಯ ಮೇಳ – ೧೯೯೩, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
ನಾಗರಾಜಪ್ಪ. ಕೆ. ಜಿ.	ಮರುಚಿಂತನೆ – ೧೯೮೩, ಪಣತಿ ಪ್ರಕಾಶನ, ತುಮಕೂರು.
	ಸಂ. ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು – ೧೯೮೯, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
	ಇಕಟ್ಟು – ಬಿಕಟ್ಟು – ೧೯೯೮, ಅನಿಕೇತನ ಸಾಹಿತ್ಯ ಸಾಂಸ್ಕೃತಿಕ ಸಂಶೋಧನಾ ಕೇಂದ್ರ, ತುಮಕೂರು.
ನಾಗರಾಜು. ಬಿ. ಪಿ.	ನನ್ನ ದೇವತೆ – ೨೦೦೪, ನುಡಿಬಳಗ, ಬಸವನ ಗುಡಿ, ಬೆಂಗಳೂರು.
ನಾಗೇಶ ರಾಂಪೂರ	ವಸಂತ – ೧೯೯೩, ನೆಲೆ ಪ್ರಕಾಶನ, ಸಿಂದಗಿ.
ನಾಯಕ. ಜಿ. ಎಚ್.	ವಿನಯ ವಿಮರ್ಶೆ – ೧೯೯೦, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
	ಶತಮಾನದ ಕನ್ನಡ ಸಾಹಿತ್ಯ – ೨೦೦೦, ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲ.
	ಸಮಕಾಲೀನ – ೧೯೭೩, ಅಕ್ಷರ ಪ್ರಕಾಶನ, ಸಾಗರ.
ನಾರಾಯಣ. ಕೆ. ವಿ.	ಬೇಂದ್ರೆ ದೃಷ್ಟಿ – ೧೯೮೪, ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು.
ನಾರಾಯಣ. ಕೆ. ವಿ. ಶ್ರೀನಿವಾಸ ರಾಜು. ಓ. ರಾಘವೇಂದ್ರರಾವ್. ಎಚ್. ಎಸ್.	ಸಂ. ಜಿ.ಎಸ್.ಎಸ್. ೭೫ ಗೌರವ – ೨೦೦೧, ಅಂಕಣ, ಮಲ್ಲೇಶ್ವರ, ಬೆಂಗಳೂರು.
ನಾವಲಗಿ. ಸಿ. ಕೆ.	ಬೇಂದ್ರೆಯವರ ಕಾವ್ಯದ ಮೇಲೆ ಜಾನಪದ ಪ್ರಭಾವ – ೧೯೯೩, ಪ್ರಸಾರಾಂಗ, ಕರ್ನಾಟಕ ವಿ.ವಿ., ಧಾರವಾಡ.
ನಿಂಗಪ್ಪ ಮುದೇನೂರು	ತಾಯಿ ನೆಲದಲ್ಲಿ – ೧೯೯೭, ಸಮತಾ ಪ್ರಕಾಶನ ಬಳ್ಳಾರಿ.
ನಿಸ್ಸಾರ್ ಅಹಮದ್. ಕೆ. ಎಸ್.	ಕೆ.ಎಸ್.ನಿಸ್ಸಾರ್ ಅಹಮದ್ ರವರ ಪ್ರಾತಿನಿಧಿಕ ಕವನಗಳು – ೨೦೦೧, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ಪಾಂಡುರಂಗ ಪುರಾಣಿಕ್. ಡಿ. ಆರ್.	ಅಂತರ್ಮುಖಿ – ೨೦೦೪, ಎಸ್.ಎಸ್.ಪ್ರಕಾಶನ, ರಾಮಾನುಜ ರಸ್ತೆ, ಮೈಸೂರು.
ಪರಮೇಶ್ವರ ಭಟ್ಟ. ಎಸ್. ವಿ.	ಸೀಳು ನೋಟ – ೧೯೮೩, ಗೀತ ಬುಕ್ ಹೌಸ್, ಮೈಸೂರು.
ಪು.ತಿ.ನ.	ಹಳೆಯ ಬೇರು ಹೊಸ ಚಿಗುರು – ೧೯೮೧, ಕ.ಸಾ.ಪ., ಬೆಂಗಳೂರು.
ಪುರುಷೋತ್ತಮ ಬಿಳಿಮಲೆ	ಬಂಡಾಯ ದಲಿತ ಸಾಹಿತ್ಯ – ೧೯೯೯, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
	ಶಿಷ್ಟ ಪರಿಶಿಷ್ಟ – ೧೯೭೨, ಮೆದಿಪು ಪ್ರಕಾಶನ, ಮಂಗಳೂರು.

ಪುಷ್ಪ. ಎಚ್. ಎಲ್.	ಅಮೃತಮತಿ ಸೊಗತ – ೧೯೯೨, ಅನ್ವೇಷಣಾ ಪ್ರಕಾಶನ, ಬೆಂಗಳೂರು.
ಪ್ರಭಾವತಿ. ಎಸ್. ವಿ.	ಭೂಮಿ ಕವಿತೆಗಳು – ೨೦೦೩, ನಾಗಶ್ರೀ ಪ್ರಕಾಶನ, ಬೆಂಗಳೂರು.
ಪ್ರಭುಶಂಕರ	ಕನ್ನಡದಲ್ಲಿ ಭಾವಗೀತೆಗಳು – ೧೯೮೧, ನಿವೇದಿತ ಪ್ರಕಾಶನ, ಮೈಸೂರು.
ಪ್ರಸನ್ನ ಕುಮಾರ್. ಆರ್.	ಸಂ. ಚೆನ್ನಶ್ರೀ – ೨೦೦೦, ಕನ್ನಡ ಸಾಹಿತ್ಯ ಪರಿಷತ್ತು, ಗುಬ್ಬಿ.
ಪ್ರಹ್ಲಾದ ಅಗಸನಕಟ್ಟೆ	ಎದುರು ಬದುರು – ೧೯೯೬, ಅಲ್ಲಮ್ಮ ಪ್ರಕಾಶನ, ಬೆಂಗಳುರು.
	ದಲಿತ ಬಂಡಾಯ ಕಾವ್ಯ ಮತ್ತು ವಿಚಾರವಾದಗಳು – ೨೦೦೪, ಹರ್ಷ ಪ್ರಕಾಶನ, ಹುಬ್ಬಳ್ಳಿ
ಬರಗೂರು ರಾಮಚಂದ್ರಪ್ಪ	ಸಂ. ಬಂಡಾಯ ಕಾವ್ಯ – ೧೯೯೦, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳುರು.
	ಸಂ. ಶಿಷ್ಟ ಸಾಹಿತ್ಯದಲ್ಲಿ ಜಾನಪದ – ೧೯೯೩, ಕನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
	ಸಂ. ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ, ಸಂಸ್ಕೃತಿ ವಿವಿಧ ಲೇಖಕರು – ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
	ಸಾಹಿತ್ಯ ಮತ್ತು ರಾಜಕಾರಣ – ೧೯೮೧, ಸಮತಾ ಪ್ರಕಾಶನ, ಹುಬ್ಬಳ್ಳಿ
	ಕಾಂಟೇಸಾದಲ್ಲಿ ಕಾವ್ಯ – ೨೦೦೧, ಅಂಕಿತ ಪುಸ್ತಕ, ಬೆಂಗಳೂರು.
	ಸಂಸ್ಕೃತಿ ಮತ್ತು ಸೃಜನಶೀಲತೆ – ೧೯೮೯, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ಬಸವರಾಜ ಸಬರದ	ನನ್ನವರ ಹಾಡು – ೧೯೭೬, ಪಲ್ಲವಿ ಪ್ರಕಾಶನ, ಬೀದರ.
ಬಸವರಾಜು. ತು. ಮ.	ವಸಂತ ಕುಸುಮಾಂಜಲಿ – ೨೦೦೦, ಆದರ್ಶ ಪ್ರಕಾಶನ, ತುಮಕೂರು.
	ಅರಮನೆಯ ಸಿರಿಯಲ್ಲಿ – ೧೯೯೨, ಆದರ್ಶ ಪ್ರಕಾಶನ, ತುಮಕೂರು.
ಬಿ.ಎಂ.ಶ್ರೀ.	ಇಂಗ್ಲಿಷ್ ಗೀತೆಗಳು – ೧೯೮೩, ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಮಾಲೆ, ಬೆಂಗಳೂರು.
ಬುದ್ದಣ್ಣ ಹಿಂಗಮಿರೆ	ಸಂ. ಇಳಿದು ಬಾ ತಾಯಿ (ಶ್ರೀ ಬೇಂದ್ರೆ ಅಭಿನಂದನ ಗ್ರಂಥ) – ೧೯೭೭, ಸಮಾಜ ಪುಸ್ತಕಾಲಯ, ಧಾರವಾಡ.
ಬೆಟಗೇರಿ ಕೃಷ್ಣಶರ್ಮ	ಕನ್ನಡ ಜಾನಪದ ಸಾಹಿತ್ಯ – ೧೯೭೬, ಕರ್ನಾಟಕ ವಿ.ವಿ., ಧಾರವಾಡ.
ಭಂಡಾರಿ. ಆರ್. ವಿ.	ಸಮಾಜವಾದ ವಾಸ್ತವ – ೧೯೮೯, ರಾಘವೇಂದ್ರ ಪ್ರಕಾಶನ, ಅಂಕೋಲ.

ಭೋಗರಾಜು. ಪಿ.	ಸೂರಿನೊಳಗೆ – ೨೦೦೦, ಶ್ರಮಸಂಸ್ಕೃತಿ ಪ್ರಕಾಶನ, ತುಮಕೂರು.
ಮಧುರ ಚೆನ್ನ	ದೇವತಾ ಪೃಥವಿ – ೧೯೮೩, ಪ್ರಥಮ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ, ಬೆಂಗಳೂರು.
	ನನ್ನ ನಲ್ಲ – ೧೯೭೩, ಚೆನ್ನ ಬಸವ ಪ್ರಕಾಶನ, ಹಲಸಂಗಿ.
ಮನೋಹರ್. ಹೊ. ಗ.	ಹೊಸ ಚಿಗುರು – ೧೯೯೪, ಭಾಸ್ಕರ ಪ್ರಕಾಶನ, ತುರುವೇಕೆರೆ.
ಮರಿದೇವರು. ಸಿ. ಎಚ್.	ಶಬ್ದ ಪಾಕ – ೨೦೦೧, ಉದಯಬಾನು ಪ್ರಕಾಶನ, ತುಮಕೂರು.
	ಕವಿತೆಗಳು ಹುಟ್ಟಬೇಕು – ೨೦೦೦, ಜಿಲ್ಲಾ ಕ.ಸಾ.ಪ., ತುಮಕೂರು.
ಮರುಳಯ್ಯ. ಸಾ. ಶಿ.	ನನ್ನ ಕವನಗಳು – ೧೯೮೫, ಸಾವಚಿತ್ರಿ ಪ್ರಕಾಶನ, ಚೆನ್ನರಾಯ ಪಟ್ಟಣ.
ಮಲ್ಲಿಕಾ ಘಂಟಿ	ರೊಟ್ಟಿ ಮತ್ತು ಹುಡುಗಿ – ೨೦೦೦, ಗೌತಮ ಪ್ರಕಾಶನ, ಬಳ್ಳಾರಿ.
ಮುನಿವೆಂಕಟಪ್ಪ. ವಿ.	ದಲಿತ ಚಳುವಳಿ – ೧೯೯೮, ವಿಚಾರವಾದಿ ಪ್ರಕಾಶನ, ಮೈಸೂರು.
	ಸಂ. ಬಹುಜನ ಕಾವ್ಯ – ೨೦೦೧, ವಿಚಾರವಾದಿ ಪ್ರಕಾಶನ, ಮೈಸೂರು.
ಮೃತುಂಜಯ ಹೊರಕೇರಿ	ಸಂ. ಕವಿತೆ ೧೯೯೪ – ೧೯೯೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ಮೈಸೂರು ಶಿವಾನಂದ್	ಗಿಳಿಯ ಸಾವಿನ ಸುತ್ತ – ೨೦೦೫, ಭೂಮು ಬಳಗ, ತುಮಕೂರು.
ಮೊಗಳ್ಳಿ ಗಣೇಶ	ದಲಿತರು ಮತ್ತು ಜಾಗತೀಕರಣ, ೧೯೯೪, ಕನ್ನಡ ವಿಶ್ವವಿದ್ಯಾಲಯ, ಹಂಪಿ.
	ಸಂ. ದಲಿತ ಚಿಂತನೆ – ೨೦೦೨, ಪ್ರಸಾರಾಂಗ ಕನ್ನಡ ವಿ.ವಿ., ಹಂಪಿ.
ಮೋಕ್ಷಗುಂಡಂ ನಾಗಭೂಷಣಶರ್ಮ	ಅಮ್ಮನ ಋಣ – ೨೦೦೨, ರಘು ಪ್ರಕಾಶನ, ಅಗ್ರಹಾರ, ಪಾವಗಡ.
ರಂ. ಶ್ರೀ. ಮುಗಳಿ	ಬೇಂದ್ರೆಯವರ ಕಾವ್ಯದಲ್ಲಿ ವಿರಾಟ್ ದರ್ಶನ – ೧೯೮೮, ಪ್ರಸಾರಂಗ ಕರ್ನಾಟಕ ವಿ.ವಿ., ಧಾರವಾಡ.
ರಂಜಾನ್ ದರ್ಗಾ	ಹೊಕ್ಕುಳಲ್ಲಿ ಹೂವಿದೆ – ೧೯೯೬, ನವಕರ್ನಾಟಕ ಪ್ರಕಾಶನ, ಬೆಂಗಳುರು.
ರಂಜನ ನಾಯಕ	ಕೈದಿಗಳು – ೧೯೮೬, ಸುಂದರ ಪುಸ್ತಕ ಪ್ರಕಾಶನ, ಧಾರವಾಡ.
ರತ್ನಮ್ಮ. ಕೆ.	ಮಂಥನ – ೨೦೦೦, ಕಾವ್ಯಶ್ರೀ ಪ್ರಕಶನ, ಮೈಸೂರು.
ರಮಾಕುಮಾರಿ. ಬಾ. ಹ.	ಅನಾವರಣ – ೧೯೮೦, ಮೇಘ ಪ್ರಕಾಶನ, ತುಮಕೂರು
	ಕಳೆದುಹೋಗಿದ್ದಾನೆ –೧೯೮೬, ಮೇಘ ಪ್ರಕಾಶನ ತುಮಕೂರು.

ರಮೇಶ್ ಕುಮಾರ್ ಮುದಿಗೆರೆ	ಎದೆಯ ಪುಟಗಳು – ೧೯೯೮, ಸ್ಮೃತಿ ಪ್ರಕಾಶನ ಮುದಿಗೆರೆ, ಗುಬ್ಬಿ ತಾ॥
	ಸೂರ್ಯನ ರಾತ್ರಿಗಳು – ೧೯೯೨, ಸ್ಮೃತಿ ಪ್ರಕಾಶನ ಮುದಿಗೆರೆ, ಗುಬ್ಬಿ ತಾ॥
ರಾಮೇಗೌಡ	ಕೆ.ಎಸ್.ನರಸಿಂಹಸ್ವಾಮಿ – ೨೦೦೨, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.
ರಹಮತ್ ತರೀಕೆರೆ	ಅನ್ವೇಷಣೆ – ೧೯೮೯, ಸಂ.೩೪, ಸೆಪ್ಟಂಬರ್, ಅಕ್ಟೋಬರ್.
	ಪ್ರತಿ – ಸಂಸ್ಕೃತಿ – ೧೯೯೩, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.
ರಾ.ಗೌ.	ಸಂ. ಸರ್ವಜ್ಞನ ವಚನಗಳು – ೨೦೦೩, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ರಾಘವೇಂದ್ರರಾವ್. ಎಚ್. ಎಸ್.	ಸಂ. ಶತಮಾನದ ವಿಮರ್ಶೆ – ೨೦೦೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
	ಹಾಡೆ ಹಾದಿಯ ತೋರಿತು – ೧೯೯೫, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.
	ವಿಶ್ಲೇಷಣೆ – ೧೯೮೧, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.
	ನಿಲುವು – ೧೯೮೯, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.
	ಪ್ರಗತಿಶೀಲತೆ – ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ರಾಜಪ್ಪ ದಳವಾಯಿ	ಸಂ. ಒಗರು – ೨೦೦೧, ಕರ್ನಾಟಕ ಸಂಘ, ಸ್ನಾತಕೋತ್ತರ ಕೇಂದ್ರ, ತುಮಕೂರು.
	ಸಂ. ಉಪಸಂಸ್ಕೃತಿಯ ಚಿಂತಕ – ೧೯೯೭, ಬರಗೂರ ಸ್ನೇಹ ಬಳಗ, ತುಮಕೂರು.
ರಾಮಚಂದ್ರರಾವ್. ಎಸ್. ಕೆ.	ಪುರಂದರ ಸಾಹಿತ್ಯ – ೧೯೬೪, ಶ್ರೀ ಪುರಂದರ ದಾಸರ ೪ನೆಯ ಶತಮಾನೋತ್ಸವ ಸಮಿತಿ, ಬೆಂಗಳೂರು.
ರಾಮಚಂದ್ರ, ಸಿ. ಎನ್.	ಸಾಹಿತ್ಯ ವಿಮರ್ಶೆ – ೨೦೦೦, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ರಾಮಚಂದ್ರಶರ್ಮ. ಬಿ. ಸಿ.	ಆಯ್ದ ಕವನಗಳು – ೧೯೮೫, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
ರಾಮಣ್ಣ. ಎಚ್. ಎಸ್.	ಸಂ. ನೂರುಸ್ವರ – ನೂರುತೆರ – ೧೯೮೦, ಸುಜನ ಪ್ರಕಶನ, ಕೇರಾಫ್ ಜನಮಿತ್ರ, ಚಿಕ್ಕಮಗಳೂರು.
ರಾಮಪ್ರಸಾದ್. ಜಿ. ಪಿ.	ಕುರ್ಚಿಗಳು – ೧೯೮೮, ಸಮಕ್ಷಮ ಪಬ್ಲಿಕೇಷನ್ಸ್, ತುಮಕೂರು.
ರಾಮಾನುಜಯ್ಯಂಗಾರ್. ಎಂ. ಎ. ನರಸಿಂಹಾಚಾರ್. ಎಸ್. ಜಿ.	ಸಂ. ಗದಾಯುದ್ಧ – ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ರುಕ್ಮಿಣಿ ಪರ್ವತಿ	ಅಂಬಿಕಾತನಯ ದತ್ತರ ಭಾವಗೀತೆಗಳು – ೧೯೮೨, ಉಷಾ ಸಾಹಿತ್ಯ ಮಾಲೆ, ಧಾರವಾಡ.

ಲಕ್ಷ್ಮೀನಾರಾಯಣ ಭಟ್ಟ. ಎನ್. ಎಸ್. — ಸಂ. ಅನನ್ಯ – ೧೯೯೭, ಕ್ಷಮಾ ಪ್ರಕಾಶನ, ಬೆಂಗಳೂರು.

ನಡೆದಿದೆ ಪೂಜಾರತಿ – ೧೯೯೨, ಕ್ಷಮಾ ಪ್ರಕಾಶನ, ಬೆಂಗಳೂರು

ಲಕ್ಷ್ಮೀನಾರಾಯಣ. ರಾ. — ಜ್ಞಾನಪೀಠ ಪ್ರಶಸ್ತಿ ವಿಜೇತರು ಮಾಸ್ತಿ – ೧೯೯೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಲಲಿತ. ಎಂ. ಸಿ. — ಸಂ. ಗೋಗ್ರಹಣ – ೨೦೦೦, ಮುಕ್ತಿಶ್ರೀ ಪ್ರಕಾಶನ, ಕಾಕಿ ಬ್ಯಾಡಿಗೆರೆ, ಮಡಕಶಿರಾ ತಾ॥ (ಎ.ಪಿ.)

ಲಲಿತ ಸಿದ್ದಬಸವಯ್ಯ — ಇಹದ ಸ್ವರ – ೨೦೦೨, ಚಿನ್ಮಯ ಪ್ರಕಾಶನ, ತುಮಕೂರು.

ಲೋಕೇಶ ಅಗಸನ ಕಟ್ಟೆ — ಅಭಿಮುಖ – ೧೯೯೮, ಅಲೋಕ ಪ್ರಕಾಶನ, ಚಿತ್ರದುರ್ಗ.

ವರದರಾಜರಾವ್. ಜಿ. — ಸಂ. ಇಂಗಡಲು – ಗೋವಿಂದಪೈ ರವರ ಆಯ್ದ ಕವನಗಳು.

ವರದಾಚಾರ್ಯ. ಕೆ. — ಸಂ. ರಾಮಚಂದ್ರ ಚರಿತ ಪುರಾಣ – ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ವಾಮನ ಬೇಂದ್ರೆ — ಬೇಂದ್ರೆ ಸಾಂಖ್ಯ ವಿಜ್ಞಾನ ಸಿದ್ಧಾಂತ – ೧೯೯೫, ಪ್ರಸಾರಾಂಗ, ಕರ್ನಾಟಕ ವಿ.ವಿ., ಧಾರವಾಡ.

ಸಂ. ಔದುಂಬರ ಗಾಥೆ – ೨೦೦೩, ಶರ್ಮ ಆಫ್‌ಸೆಟ್ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್, ಹುಬ್ಬಳ್ಳಿ.

ಒಲವೇ ನಮ್ಮ ಬದುಕು – ೧೯೮೬, ಗೀತ ಬುಕ್ ಹೌಸ್, ಮೈಸೂರು.

ವೇದಾ. ಎಂ. ಎಸ್. — ಬಿಳಿಲುಗಳು – ೧೯೮೯, ದೇವಿ ಪ್ರಕಾಶನ, ಮೈಸೂರು.

ವಿ. ಸೀ. — ಸ್ನೇಹ – ವಿಶ್ವಾಸ ಸಮಗ್ರ ಕಾವ್ಯ ಸಂಪುಟ – ೧೯೯೦, ವಿ.ಸೀ. ಸಂಪದ, ಅಶೋಕ ನಗರ, ಬೆಂಗಳೂರು.

ಕದಂಬ – ೧೯೭೮, ಗೀತ ಬುಕ್ ಹೌಸ್, ಮೈಸೂರು.

ಕವಿ ಕಾವ್ಯ ಪರಂಪರೆ – ೨೦೦೩, ವಿ.ಸೀ. ಸಂಪದ, ಬೆಂಗಳೂರು.

ವಿಜಯ ಸುಬ್ಬರಾಜ್ — ಹಾಡೇನ – ಪಾಡೇನ – ೧೯೬೬, ಮಾ ಪ್ರಿಂಟ್ ಪಬ್ಲಿಷರ್ಸ್, ಬೆಂಗಳೂರು.

ವಿಜಯಾ — ಸಂಕುಲ – ೧೯೯೮, ಇಳಾ ಪ್ರಕಾಶನ, ಬೆಂಗಳೂರು.

ವಿದ್ಯಾಶಂಕರ. ಎಸ್. — ಸಂ. ಸಂಕೀರ್ಣ ವಚನ ಸಂಪುಟ: ೨ – ೧೯೯೩, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ವೀರಣ್ಣ. ಸಿ. — ಕನ್ನಡ ಪ್ರತಿಭಟನಾ ಕಾವ್ಯ – ೧೯೮೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

	ಅನು: ತಾಯಿ(ನಾಟಕ), ಬರ್ಟೋಲ್ಡ್ ಬ್ರೆಕ್ಟ್ – ೨೦೦೩, ಅರಿವು ಪ್ರಕಾಶನ, ರಾಜಾಜಿ ನಗರ, ಬೆಂಗಳೂರು.
ವೀರಣ್ಣ. ಸಿ. ಎಂ. (ವೀರೇಶ)	ಕೋಲ್ಮಿಂಚು – ೧೯೯೮, ವೀರೇಶ ಪ್ರಕಾಶನ, ವಿಜಯಪುರ.
ವೀಚಿ. (ವೀ. ಚಿಕ್ಕವೀರಯ್ಯ)	ವೀಚಿ ಸಮಗ್ರ ಕಾವ್ಯ – ೨೦೦೨, ವೀಚಿ ಸಾಹಿತ್ಯ ಪ್ರತಿಷ್ಠಾನ, ತುಮಕೂರು.
	ಸಂಕರತಳಿ – ೧೯೮೧, ಅಕ್ಷಯ ಪ್ರಕಾಶನ, ತುಮಕೂರು.
	ವಿಶಾದ ನಕ್ಷೆ – ೧೯೬೩, ಸಿರಿಗನ್ನಡ ಪ್ರಕಾಶನ, ತುಮಕೂರು.
ವೆಂಕಟಾಚಲ ಶಾಸ್ತ್ರಿ . ಟಿ. ವಿ.	ಸಂ. ಎಸ್.ಜಿ.ನರಸಿಂಹಾಚಾರ್ಯರ ಕವಿತೆಗಳು – ೧೯೮೬, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು.
ವೆಂಕಟೇಶಮೂರ್ತಿ. ಎಚ್. ಎಸ್.	ಸಂ. ಶತಮಾನದ ಕಾವ್ಯ – ೨೦೦೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ಶಂಕರ ಕಟಗಿ	ಮುಸ್ಸಂಜೆ ನೆರಳಲ್ಲಿ – ೧೯೮೮, ವಿಪ್ಲವ ಪ್ರಕಾಶನ, ಹುಬ್ಬಳ್ಳಿ
ಶಂಕರಮೊಕಾಶಿ ಪುಣೇಕರ್	ಸಾಹಿತ್ಯ ಮತ್ತು ಅಭಿರುಚಿ – ೧೯೮೧, ಮಿತ್ರ ಪ್ರಕಾಶನ, ಮೈಸೂರು.
	ಬೇಂದ್ರೆ ಕಾವ್ಯ ಮೀಮಾಂಸೆ – ೧೯೮೯, ಸಾಹಿತ್ಯ ಭಂಡಾರ, ಬೆಂಗಳೂರು.
ಶಶಿಕಲಾ ವಸ್ತ್ರದ	ಗುಬ್ಬಿಮನಿ – ೧೯೭೯, ನೆಲಮನೆ ಪ್ರಕಾಶನ,
ಶಕುಂತಲ ಶಾಸ್ತ್ರಿರಾವ್	ಉಮೆನ್ ಇನ್ದ ವೇದಿಕ್ ಏಜ್ – ೧೯೫೪, ಭಾರತೀಯ ವಿದ್ಯಾ ಭವನ, ಬಾಂಬೆ.
ಶಾಂತಿನಾಥ ದೇಸಾಯಿ	ಸಂ. ಗಂಗಾಧರ ಚಿತ್ತಾಲರ ಕಾವ್ಯ ದೃಷ್ಟಿ – ೧೯೮೭, ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲ, ಉ.ಕ.
	ನವ್ಯಕಾವ್ಯ ದರ್ಶನ – ೧೯೯೦, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ.
ಶಿರಾ ವೆಂಕಟೇಶ್	ಸಂ. ಸಿರಿ – ೨೦೦೨, ಪ್ರಗತಿ ಪ್ರಕಾಶನ, ಶಿರಾ, ತುಮಕೂರು ಜಿಲ್ಲೆ.
ಶಿವಪ್ರಕಾಶ್. ಎಚ್. ಎಸ್.	ಶಿವಪ್ರಕಾಶರ ಕವಿತೆಗಳು – ೨೦೦೦, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ಶಿವರಾಮ ಕಾರಂತ. ಕೆ.	ಪಂಜೆ ಮಂಗೇಶರಾಯರು – ೧೯೭೨, ಐ.ಬಿ.ಎಚ್., ಪ್ರಕಾಶನ, ಬೆಂಗಳೂರು.
ಶಿವರುದ್ರಪ್ಪ. ಜಿ. ಎಸ್.	ಸಮಗ್ರ ಕಾವ್ಯ – ೧೯೮೭, ಸ್ನೇಹ ಪ್ರಕಾಶನ, ಬೆಂಗಳೂರು.
	ಸಂ. ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ – ೧೯೮೦, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
	ಪರಿಶೀಲನ – ೧೯೬೭, ಭಾಷಾ ಸಾಹಿತ್ಯ ಮಾಲೆ, ಮೈಸೂರು.

ಸಂ. ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ – ೧೯೯೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಸೌಂದರ್ಯ ಸಮೀಕ್ಷೆ – ೧೯೭೦, ತಳುಕಿನ ವೆಂಕಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

ಸಂ. ಕವಿ ಬೇಂದ್ರೆ – ೧೯೯೨, ಪ್ರಸಾರಾಂಗ, ಬೆಂಗಳೂರು ವಿ.ವಿ., ಬೆಂಗಳೂರು.

ಸಂ. ಚಂದನ – ೧೯೭೨, ಕೆ.ಎಸ್.ನ. ಅಭಿನಂದನಾ ಸಮಿತಿ, ಬೆಂಗಳೂರು.

ಸಂ. ಬಂಡಾಯ ಮತ್ತು ಸಾಹಿತ್ಯ ಚಳುವಳಿಯ ತಾತ್ವಿಕ ನೆಲೆಗಳು – ೧೯೯೦,

ಸಂ. ಕನ್ನಡ ವಿಮರ್ಶೆಯ ನೆಲೆ – ಬೆಲೆ – ೧೯೭೫, ಬೆಂಗಳೂರು ವಿ.ವಿ., ಬೆಂಗಳೂರು.

ಶ್ರೀ ಕುವೆಂಪು – ೧೯೯೧, ಪ್ರಸಾರಾಂಗ ಬೆಂಗಳೂರು ವಿ.ವಿ., ಬೆಂಗಳೂರು.

ಶಿವಸ್ವಾಮಿ. ಎಸ್. ಹೊಸ್ಕೆರೆ.
ಇದುವರೆಗಿನ ಕವಿತೆಗಳು – ೧೯೯೩, ಶ್ರೀ ಪ್ರಕಾಶನ, ಉಡುಪಿ.

ಕನಸಿನ ನಲಿವಿನ ಕವನಗಳು – ೧೯೯೮, ಶ್ರೀ ಪ್ರಕಾಶನ, ಉಡುಪಿ.

ಶುಭಾವತಿ
ಸ್ನೇಹಗೀತ – ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು.

ಶೇಷಗಿರಿ. ಕೆ. ಆರ್.
ಕಮಲಾ ಹಂಪನ
ಸಂ. ಚಾವುಂಡರಾಯ ಪುರಾಣಂ – ೧೯೮೩, ಕ.ಸಾ.ಪ., ಬೆಂಗಳೂರು.

ಶೇಷಗಿರಿರಾವ್. ಎಲ್. ಎಸ್.
ಸಾಹಿತ್ಯ – ಬದುಕು, ಐ.ಬಿ.ಎಚ್., ಪ್ರಕಾಶನ, ಬೆಂಗಳೂರು.

ಹೊಸಗನ್ನಡ ಸಾಹಿತ್ಯ ಚರಿತೆ – ೨೦೦೦, ಅಂಕಿತ ಪ್ರಕಾಶನ, ಬೆಂಗಳೂರು.

ಸ್ವಾತಂತ್ರೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ – ೧೯೯೨, ಉದಯಭಾನು ಕಲಾ ಸಂಘ, ಬೆಂಗಳುರು.

ಸಂ. ಕನ್ನಡ ಭಾರತಿ – ೧೯೮೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಸಂ. ಕನ್ನಡ ತಾಯಿಗೆ ನುಡಿನಮನ – ೧೯೯೩, ಪ್ರಸಾರಾಂಗ ಕನ್ನಡ ವಿ.ವಿ., ಹಂಪಿ.

ಆಚಾರ್ಯ ಬಿ.ಎಂ.ಶ್ರೀ. – ೧೯೮೪, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

ಶೇಷನವರತ್ನ
ಬೇಂದ್ರೆ ಕಾವ್ಯದಲ್ಲಿ ಸ್ತ್ರೀ – ೨೦೦೧, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

ಶ್ರೀಕಂಠ ಕೂಡಿಗೆ
ಧ್ಯಾನ – ೧೯೯೬, ಚೇತನ ಬುಕ್ ಹೌಸ್, ಮೈಸೂರು.

ಶ್ರೀಪಾದ ಶೆಟ್ಟಿ
ದಿನಕರ ದೇಸಾಯಿ ಬದುಕು ಬರಹ – ೧೯೯೫, ಪ್ರಸಾರಾಂಗ, ಕರ್ನಾಟಕ ವಿ.ವಿ., ಧಾರವಾಡ.

	ಚೌಪದಿ ಸಂಗ್ರಹ – ೧೯೮೩, ಪ್ರಥಮ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಮಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
ಶ್ರೀಮತಿ. ಎಚ್. ಎಸ್.	ಚಹರೆ, ಇಳಾ ಪ್ರಕಾಶನ, ಬೆಂಗಳೂರು.
	ಸಂ. ಮಹಿಳಾ ಅಧ್ಯಯನ – ೨೦೦೩, ಪ್ರಸಾರಾಂಗ, ಕನ್ನಡ ವಿ. ವಿ. ಹಂಪಿ.
	ಸಂ. ಮಹಿಳಾ ಅಧ್ಯಯನ – ೧೯೯೯, (ದಕ್ಷಿಣಾಯನ ಸಂಚಿಕೆ) ಪ್ರಸಾರಾಂಗ, ಕನ್ನಡ ವಿ. ವಿ. ಹಂಪಿ.
	ಸಂ. ಮಹಿಳಾ ಅಧ್ಯಯನ – ೨೦೦೦, (ದಕ್ಷಿಣಾಯನ ಸಂಚಿಕೆ) ಪ್ರಸಾರಾಂಗ, ಕನ್ನಡ ವಿ. ವಿ. ಹಂಪಿ.
ಷರೀಪಾ. ಕೆ.	ನೂರೆಂಟ್ಳ ಅಂತರಂಗ – ೧೯೯೭, ನಿಶಾಂತ್ ಪ್ರಕಾಶನ, ಹರಿಹರ.
	ಪಾಂಚಾಲಿ – ೨೦೦೧, ನಿಶಾಂತ್ ಪ್ರಕಶನ, ಹರಿಹರ.
ಸಂತೋಷ ಚೊಕ್ಕಾಡಿ	ದಕ್ಷಿಣ ಕನ್ನಡ ಕಾವ್ಯದ ವಿಭಿನ್ನ ನೆಲೆಗಳು – ೨೦೦೨, ಕರ್ನಾಟಕ ಸಂಘ, ಪುತ್ತೂರು, ದ.ಕನ್ನಡ.
ಸಣ್ಣಗುಡ್ಡಯ್ಯ. ಎಚ್. ಜಿ.	ವಸಂತದ ಕನಸುಗಳು – ೨೦೦೪, ಅಕ್ಷಯ ಪ್ರಕಾಶನ, ತುಮಕೂರು.
	ಭಿನ್ನ – ೨೦೦೪, ಅಕ್ಷಯ ಪ್ರಕಾಶನ, ತುಮಕೂರು.
	ಸಂ. ಪಾರಿಜಾತ – ೧೯೮೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ಸಣ್ಣಯ್ಯ. ಬಿ. ಎಸ್.	ಸಂ. ಬಂಧುವರ್ಮ ವಿರಚಿತ ಹರಿವಂಶಾಭ್ಯುದಯಂ – ೧೯೭೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಮೈಸೂರು.
ಸಣ್ಣಹೊನ್ನಯ್ಯ ಕಂಟಲಗೆರೆ. ಕೆ.	ಅಕ್ಕನ ದುಕ್ಕ – ೧೯೯೮, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಘಟಕ, ಬೆಂಗಳೂರು ವಿ.ವಿ., ಬೆಂಗಳೂರು.
ಸತೀಶ ಕುಲಕರ್ಣಿ	ವಿಷಾದಯೋಗ – ೧೯೯೪, ವೈಶಾಖ ಪ್ರಕಾಶನ, ಬೆಂಗಳೂರು.
ಸತ್ಯಾನಂದ ಪಾತ್ರೋಟ	ಕರಿನೆಲದ ಕಲೆಗಳು, ಸಮತಾ ಪ್ರಕಾಶನ, ಬಾಗಲಕೋಟೆ.
ಸದಾಶಿವ. ಬಿ.	ಗೋವಿಂದ ಪೈ – ೨೦೦೩, ಪ್ರಸಾರಾಂಗ ಕನ್ನಡ ವಿ.ವಿ., ಹಂಪಿ.
ಸನದಿ. ಬಿ. ಎ.	ಜನಕಾವ್ಯ ದೃಷ್ಟಿ – ೧೯೮೨, ಕಾಲಗತಿ ಪ್ರಕಾಶನ, ರಾಯಭಾಗ, ಬೆಳಗಾವ್ ಜಿಲ್ಲೆ.
ಸರಜೂ ಕಾಟ್ಕರ್	ಅವ್ವ – ೧೯೭೬, ಲೋಹಿಯಾ ಪ್ರಕಾಶನ, ಬಳ್ಳಾರಿ.
ಸರ್ವಮಂಗಳ. ಚ.	ಅಮ್ಮನ ಗುಡ್ಡ – ೧೯೮೮, ಋಜುವಾತು ಪ್ರಕಾಶನ, ಮೈಸೂರು.

ಸಿದ್ದಯ್ಯ ಕೆ. ಬಿ.	ಸಂ. ದಲಿತ ಕಾವ್ಯ – ೧೯೯೬, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
	ದಕ್ಲ ಕಥಾದೇವಿ ಕಾವ್ಯ – ೧೯೯೯, ಚಲನ ಪ್ರಕಾಶನ ಸಹಕಾರಿ, ತುಮಕೂರು.
ಸಿದ್ಧಲಿಂಗಯ್ಯ ಜಿ. ಎಸ್.	ಸಂ. ಹೊಸಧ್ವನಿ – ೧೯೯೧, ಕ.ಸಾ.ಪ., ಬೆಂಗಳೂರು.
ಸಿದ್ದರಾಮಯ್ಯ ಎಸ್. ಜಿ.	ಮರುಜೇವಣಿ – ೨೦೦೦, ಶುಭದ ಪ್ರಕಾಶನ, ಬೆಂಗಳೂರು.
ಸಿದ್ದಲಿಂಗಯ್ಯ	ಮೆರವಣಿಗೆ – ೨೦೦೦, ಅಂಕಿತ ಪ್ರಕಶನ, ಬೆಂಗಳೂರು.
	ಹೊಸ ಕವಿತೆಗಳು – ೨೦೦೧, ಅಂಕಿತ ಪುಸ್ತಕ, ಬೆಂಗಳೂರು.
ಸಿದ್ದಗಂಗಯ್ಯ ಎಚ್. ಆರ್.	ಸಂ. ಕಾಂಕ್ರೀಟ್ ಕಾಡಿನ ದಿನಚರಿ – ೧೯೯೫, ಕಲ್ಪತರು ಸಾಹಿತ್ಯ ವೇದಿಕೆ, ತಿಪಟೂರು.
ಸಿದ್ಧಾಶ್ರಮ. ಸಿ. ಪಿ.	ಸಂ. ಅಂಬಿಗರ ಚೌಡಯ್ಯನ ವಚನಗಳು –
ಸಿಪಿಕೆ	ಸಂ. ಶ್ರೀಕಂಠಿಕೆ – ೧೯೮೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
	(ಭಾಷಾಂತರ:) ಸಾಹಿತ್ಯ ತತ್ವ, ಮೂಲ: ರೆನೆ ವಿಲಕ್, ಆಸ್ಟಿನ್ ವಾರೆನ್ – ೧೯೯೪, ಜಿ.ಕಲ್ಲಯ್ಯ ಅಂಡ್ ಸನ್ಸ್, ಬೆಂಗಳೂರು.
ಸೀತಾರಾಮಯ್ಯ ಎಂ. ವಿ.	ಕವಿರಾಜಮಾರ್ಗ ವಿವಕ್ಷೆ – ೧೯೯೫, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು
ಸುಮತೀಂದ್ರ ನಾಡಿಗ	ಬೇಂದ್ರೆ ಕಾವ್ಯದ ವಿಭಿನ್ನ ನೆಲೆಗಳು – ೧೯೮೯, ಸುವಿದ್ಯಾ ಪ್ರಕಶನ, ಬೆಂಗಳೂರು.
ಸುಮಾ ಆನಂದರಾವ್	ಪುಷ್ಪ ಗುಚ್ಚ – ೨೦೦೩, ಚೆನ್ನಕೇಶವ ಪ್ರಕಾಶನ, ಸಿ.ಕೆ.ಪುರ ಪಾವಗಡ ತಾ॥.
ಸುಮಿತ್ರಾಬಾಯಿ. ಬಿ. ಎನ್.	ವಿಚಯ – ೧೯೯೬, ಇಳಾ ಪ್ರಕಾಶನ, ಬೆಂಗಳೂರು.
	ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು – ೨೦೦೦, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.
ಸುರೇಶ್ ಬಾಬು. ಮ.	ಮಾನಸ ಚಂದ್ರಿಕೆ – ೨೦೦೦, ಶಿವಶಕ್ತಿ ಪ್ರಕಾಶನ, ವಿಜಯಪುರ, ಬೆಂಗಳೂರು ಜಿಲ್ಲೆ.
ಸೂರ್ಯನಾಥ ಕಾಮತ್	ಸಂ. ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು – ೧೯೯೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳುರು.
ಸೋ. ಮು. ಭಾಸ್ಕರಾಚಾರ್	ಗಾಂಧಿ ತಾ ತಾ – ೨೦೦೪, ಕಿರಣ್ ಪ್ರಕಾಶನ, ತುಮಕೂರು.
ಹನುಮಂತರಾಯಪ್ಪ. ಜಿ. ಎನ್.	ಹರ್ಷಾಂಬುಧಿ – ೧೯೯೧, ರಾಘವೇಂದ್ರ ಪ್ರಿಂಟರ್ಸ್, ಕುವೆಂಪು ರಸ್ತೆ, ಪಾವಗಡ.
ಹಂಪಣ್ಣ. ಎ. ಕೆ.	ಆದಿಮ ಕನ್ಯೆ – ೨೦೦೪, ಶಾಂತಮ್ಮ ಪ್ರಕಾಶನ, ಮಾಡನಾಯಕನ ಹಳ್ಳಿ, ಚಿತ್ರದುರ್ಗ ತಾಲ್ಲೂಕು.

	ದನಿಗಳು – ೧೯೮೩, ಶಾಂತಾ ಪ್ರಕಾಶನ, ಮಾಡನಾಯಕನ ಹಳ್ಳಿ, ಚಿತ್ರದುರ್ಗ ಜಿಲ್ಲೆ.
ಹಂ.ಪ. ನಾಗರಾಜಯ್ಯ	ಸಂ. ಕನ್ನಡ ಪ್ರತಿಭಟನೆ ಕಾವ್ಯ – ೧೯೮೧, ಕ.ಸಾ.ಪ., ಬೆಂಗಳೂರು.
	ಸಂ. ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ – ೧೯೮೨, ಕ.ಸಾ.ಪ., ಬೆಂಗಳೂರು.
ಹನುಮಂತಯ್ಯ ಎಲ್.	ಅವ್ವನ ಕವಿತೆ – ೧೯೯೯, ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು.
ಹಲಸಂಗಿ ಚೆನ್ನಮಲ್ಲಪ್ಪ	ಗರತಿಯ ಹಾಡು – ೧೯೯೦, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
ಹಾ. ಮಾ. ನಾಯಕ	(ಸಂ). ಬಿಡುಗಡೆ ಬೆಳ್ಳಿ – ೧೯೭೫ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಮೈಸೂರು.
ಹೇಮಂತ ಕುಲಕರ್ಣಿ	ಕಾವ್ಯದಲ್ಲಿ ನವ್ಯತೆ – ೧೯೮೬, ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು.
ಹೇಮಾ ಪಟ್ಟಣಶೆಟ್ಟಿ	ಮರಿಯಾದೆಯ ಮುಸುಕಿನಲಿ – ೧೯೯೨, ಅನನ್ಯ ಪ್ರಕಾಶನ, ಧಾರವಾಡ.
	ಹೊಸ ಹಾಡು – ೧೯೯೮, ಅನನ್ಯ ಪ್ರಕಾಶನ, ಧಾರವಾಡ.
ಹೊಸೂರು ಮುನಿಶಾಮಪ್ಪ	ದಲಿತ ಜನರ ಕಿರಣ – ೧೯೯೧, ವಾಹಿನಿ ಪ್ರಕಾಶನ, ಬೆಂಗಳೂರು.
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು	ಶ್ರೀಕಂಠಿಕೆ – ೧೯೮೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಮೈಸೂರು.
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.	ಕನ್ನಡದ ಬಾವುಟ – ೧೯೮೪, ಚಾಮರಾಜ ಪೇಟೆ, ಬೆಂಗಳೂರು.